ವರ್ಗಣಿಯ ದರ.
[illegible]
ವರ್ಗಣಿಯ ಹಣವನ್ನು ಮುಂಗಡ ಕೊಡತಕ್ಕದ್ದು.

Reg. No. B. 1270. Monday, 2-1-1950.

ಕಾನಡಾವೃತ್ತ.

ವರ್ಷ ೩೨.] THE KANARA NEWS. [ಸಂಚಿಕೆ ೨೭.

ಕುಮಟಾ - ಸೋಮವಾರ, ತಾ ೨—೧—೧೯೫೦



ಸ್ಥಳಿಕ ವಿಷಯ.

ಲೇಖಕ.- ಸ್ಥಳವಂತಿಕ

ಸರಕಾರಿ ಕಾಮಗಾರಿಗಳ ಖಾತೆಯ ಮಂತ್ರಿ ಡಾ| ಜೀವರಾಜ ಮೇಥಾರವರು ಆಚೆಯ ವಾರ ಗೇರಸಪ್ಪೆಯ ಕಡಕಲನ್ನು ನೋಡಿಕೊಂಡು ಕರಾವಳಿಗಿಳಿದು, ಭಟಕಳ, ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ, ಯಲ್ಲಾಪೂರ ಊರುಗಳನ್ನು ಸಂದರ್ಶಿಸಿ, ಮುಂಬಯಿಗೆ ಮರಳಿದರು. ಕಾರವಾರದಲ್ಲಿ ನಗರ ಸಭೆಯವರ ಮಾನಪತ್ರಕ್ಕೆ ಉತ್ತರವೆಂದು ಅವರದೊಂದು ಭಾಷಣವಾಯಿತ. ಕರ್ನಾಟಕದ ಕಡೆ ಕೊಂಗ್ರೆಸ ಸರಕಾರವು ಅಲಕ್ಷ ಮಾಡಿಲ್ಲವಾಗಿ ಅವರು ಒತ್ತೊತ್ತಿ ಹೇಳಿದರು, ಬೆಳಗಾಂವ, ಧಾರವಾಡ, ವಿಜಾಪುರ ಮತ್ತು ಕಾನಡಾ ಜಿಲ್ಹೆಗಳನ್ನು ಒಂದೇ ರಾಶಿಯಲ್ಲಿ ಹಾಕಿ ಡಾ|| ಮೇಥಾರವರು ಮೇಲಿನಂತೆ ಉದ್ಗರಿಸಿದರು. ಆದರೆ ಕರ್ನಾಟಕದಲ್ಲಿ ಸೇರ್ಪಡೆಯಾಗುವ ಜಿಲ್ಹೆಗಳಿಗಾಗಿ ಸರಕಾರವು ಕೊಡುವ ದ್ರವ್ಯಸಹಾಯದ ಯೋಗ್ಯ ಪಾಲು ನಮ್ಮ ಕಾನಡಾ ಜಿಲ್ಹೆಗೆ ಸರಿಯಾಗಿ ಸಿಗುತ್ತದೆಂದು ಡಾ|| ಮೇಥಾರವರು ಭಾವಿಸುತ್ತಿದ್ದರೆ ಅದೊಂದು ಭ್ರಮೆಯೇ ಸರಿ. ಪ್ರಾಂತಿಕ ಸರಕಾರದಿಂದ ಹಣ ಸೇರಕೊಳ್ಳುವಾಗ ಕಾನಡಾ ಜಿಲ್ಹೆಯನ್ನೂ ಲೆಕ್ಕಕ್ಕೆ ಹಿಡಿದು, ಹಂಚಿ ಹಾಕುವಾಗ ಕಾನಡಾ ಜಿಲ್ಹೆಯನ್ನು ಸಂಪೂರ್ಣ ಕತ್ತಲೆಯಲ್ಲಿ ಬಿಟ್ಟು, ಬೆಳಗಾಂವ, ಧಾರವಾಡದವರು ಸ್ವಾರ್ಥ ಸಾಧಿಸುತ್ತಿರುವ ಪ್ರಕಾರಗಳನ್ನು ಡಾ|| ಮೇಥಾರವರು ಅರಿತಿರಲಿಕ್ಕಿಲ್ಲ. ಕರಾವಳಿಯ ಸಂಚಾರದಲ್ಲಿ ಕೆಲ ಹೊತ್ತು, ಜಿಲ್ಹೆಯ ಪ್ರಮುಖರ ಹೇಳಿಕೆಗಳನ್ನು ಕೇಳಿಕೊಳ್ಳಲು ಕಾದಿಟ್ಟು, ಅವರಿಗೆ ಅರಿಕೆ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದರೆ ಕೊಂಗ್ರೆಸ ಸರಕಾರದ ಉದಾರ ಅಶಳತೆಯಿಂದ ನಮ್ಮ ಜಿಲ್ಹೆಗೆ ಏನೊಂದೂ ಪ್ರಯೋಜನ ದೊರೆತಿಲ್ಲೆಂದು ಮಂತ್ರಿಗಳಿಗೆ ತಿಳಿದುಬರುತ್ತಿತ್ತು. ನಮ್ಮ ಜಿಲ್ಹೆಯ ಕರಾವಳಿ ಪ್ರದೇಶದಲ್ಲಿ ಇರುವ ನದಿಗಳಿಗೆ ಸಂಕ ಹಾಕುವ ಅಭಿವಚನವನ್ನು ಸರಕಾರವು ೧೯೪೮ನೇ ಇಸವಿಯ ಮಾರ್ಚ ತಿಂಗಳಲ್ಲಿ ಕೊಟ್ಟಿತ್ತು. ಅಂದಿನಿಂದ ಈ ವರೆಗೆ ಈ ಸಂಕಗಳ ಬಗ್ಗೆ ಸರಕಾರಿ ಕಾಮಗಾರಿಗಳ ಖಾತೆಯವರು ಏನು ಮಾಡಿದರೆಂದು ಪ್ರಮುಖರು ಡಾ|| ಮೇಥಾರವರಿಗೆ ಕೇಳಿ ಖುಲಾಸೆ ಮಾಡಿಕೊಳ್ಳುತ್ತಿದ್ದರು. ಸರಕಾರದ ಮಾತಿನಂತೆ ಕೆಲಸವಾಗುತ್ತಿದ್ದರೆ ಈ ಸಂಕಗಳು ಕಳೆದ ಮಾರ್ಚ ತಿಂಗಳಲ್ಲೇ ಪೂರ್ಣವಾಗಿ ಸದ್ಯದ ಸಂಚಾರದಲ್ಲಿ ಡಾ|| ಮೇಥಾರವರು ಆ ಸಂಕಗಳ ಮೇಲಿಂದ ಹೊಳೆ ದಾಟಬಹುದಾಗಿತ್ತೆಂದು ನೆನಪು ಮಾಡಿಕೊಡುತ್ತಿದ್ದರು. ಭಟಕಳದಿಂದ ಕಾಸರಕೋಡ ವರೆಗಿನ ರಾಜಮಾರ್ಗ ತೀರ ದುಸ್ಥಿತಿಯಲ್ಲಿದ್ದರೂ ದೀರ್ಘ ಕಾಲದಿಂದ ಅದರ ದುರುಸ್ತಿಯಾಗದ ಕಾರಣಗಳನ್ನು ಕೇಳಿಕೊಳ್ಳುತ್ತಿದ್ದರು. ಕರ್ನಾಟಕದಲ್ಲಿ ಮಾರ್ಗ-ಸೌಕರ್ಯ ಗುಜರಾಥದಲ್ಲಿದ್ದಕ್ಕಿಂತ ಹೆಚ್ಚಿಗುಂಟೆಂದು ಉದ್ಗರಿಸಿ ಮಂತ್ರಿಗಳು ನಮ್ಮ ಜಿಲ್ಹೆಗೆ ಸಮಾಧಾನ ಮಾಡಬಯಸುತ್ತಾರೆ. ಗುಜರಾಥದಲ್ಲಿ ನಮ್ಮ ಜಿಲ್ಹೆಯಷ್ಟು ದುರವಸ್ಥೆ ಇರುವದೆಂದು ನಮ್ಮ ಜಿಲ್ಹೆಯವರು ನಂಬುವಂತಿಲ್ಲ. ಗುಜರಾಥದಲ್ಲಿ ಸೃಷ್ಟಿಕ್ರಮದ ಅನಾನುಕೂಲತೆಗಳಿರಬಹುದು, ರಾಜ್ಯಕರ್ತರಿಂದ ಸುಧಾರಿಸಲಾಗದ ಪ್ರತಿಕೂಲತೆಗಳಿರಬಹುದು. ಆದರೆ ಗುಜರಾಥದ ಏಳಿಗೆಯನ್ನು ಸಾಧಿಸುವದಕ್ಕಾಗಿ ಪ್ರಾಂತಿಕ ಸರಕಾರವು ಲಕ್ಷಾವಧಿ ರೂಪಾಯಿಗಳನ್ನು ಖರ್ಚ ಮಾಡುತ್ತದೆಂದು ಧಾರಾಳವಾಗಿ ಹೇಳಬಹುದು. ಗುಜರಾಥಿಗಳು ಸ್ಪರ್ಧಾ ಪರಾಯಣರಾಗಿ ಕಾನೂನ ಮಂಡಳದಲ್ಲೂ ಸರಕಾರದಲ್ಲೂ ನಿಸ್ಸಂಕೋಚ ಪ್ರಭುತ್ವ ನಡಿಸಲಾರಂಭಿಸಿದಂದಿನಿಂದಲೇ ನಮ್ಮ ಪ್ರಾಂತಿಕ ಕಾನೂನ ಮಂಡಳಗಳ ಅಧಿವೇಶನದಲ್ಲಿ ಅನೇಕ ವಿತುಷ್ಟಿಯುಂಟಾಗಿ ಅವರು "ಬಹುಜನ ಸಮಾಜ ಪಕ್ಷ"ವೆಂಬ ಹೊಸ ಪಕ್ಷ ಕಟ್ಟಿದ ಸಂಗತಿ ಸರ್ವಶ್ರುತವಿದೆ. ಮುಖ್ಯ ಮಂತ್ರಿ ನಾ| ಬಾಳಾಸಾಹೇಬ ಖೇರರಿಗಿಂತ ಗೃಹಮಂತ್ರಿ ನಾ| ಮೊರಾರಜಿ ದೇಸಾಯಿಯವರ ಪ್ರತಿಷ್ಠೆ ಕೊಂಗ್ರೆಸ ಸರಕಾರದಲ್ಲಿ ಹೆಚ್ಚಾಗಿರಲು ಗುಜರಾಥಿಗಳ ವಿಶಿಷ್ಟ ವರ್ಚಸ್ಸೇ ಕಾರಣವಾಗಿದೆ. ಗುಜರಾಥದ ಉಲ್ಲೇಖವನ್ನು ಡಾ|| ಮೇಥಾರವರು ಮಾಡುವಾಗ, ಗುಜರಾಥದೊಳಗೆ ಪ್ರಾಂತಿಕ ಸರಕಾರವು ನಡಿಸಿದ ಸುಧಾರಣೆಗಳನ್ನೂ ಆ ಸುಧಾರಣೆಗಳಿಗಾಗಿ ವಿನಿಯೋಗಿಸಿದ ಹಣವನ್ನೂ ಗಣನೆಗೆ ತಂದು, ಅಂಥ ಸುಧಾರಣೆಗಳು ನಮ್ಮ ಜಿಲ್ಹೆಯೊಳಗೆ ಎಷ್ಟರ ಮಟ್ಟಿಗೆ ಆಗಿವೆಂದು ಆಲೋಚಿಸಿದ್ದರೆ ಗುಜರಾಥಕ್ಕೂ ನಮ್ಮ ಜಿಲ್ಹೆಗೂ ಅಜಗಜಾಂತರ ಉಂಟೆಂದು ಅವರಿಗೆ ಸ್ವಾಭಾವಿಕವಾಗಿ ತಿಳಿದುಬರುತ್ತಿತ್ತು. ಸರಕಾರವು ಗುಜರಾಥಕ್ಕೆ ನೆರವಾದ ಬಗ್ಗೆ ನಮ್ಮ ಜಿಲ್ಹೆಯವರಿಗೆ ಬೇಸರವಿಲ್ಲ, ಹೊಟ್ಟೆಶೂಲಿಯೂ ಇಲ್ಲ. ಗುಜರಾಥದ ಉಲ್ಲೇಖವನ್ನು ಮಂತ್ರಿಗಳು ಮಾಡಿದ್ದರಿಂದ ಮಾತ್ರ ಗುಜರಾಥದ ಬಗ್ಗೆ ಸರಕಾರವು ತೋರಿಸುತ್ತಿರುವ ಪಕ್ಷಪಾತವನ್ನು ಉಲ್ಲೇಖಿಸಬೇಕಾಯಿತಷ್ಟೇ.

* * *

ಡಾ| ಮೇಥಾರವರು ಕಾರವಾರದಿಂದ ದಾಂಡೇಲಿಗೆ ಹೋಗುವಾಗ- (೧) ಮೂಲೆಮನೆ ಹೆಬ್ಬಾರ, (೨) ಕೊಡ್ಲಗದ್ದೆ, (೩) ಚಿಕ್ಕಮನೆ ಮತ್ತು (೪) ಅರಬೈಲ ಈ ನಾಲ್ಕು ಸಂಕಗಳನ್ನು ಕಟ್ಟಿಸುತ್ತಿರುವ ಕ್ರಮವನ್ನು ನೋಡಿರಬೇಕು. ಮಂತ್ರಿಗಳು ಈ ಕೆಲಸ ನಡಿಯುತ್ತಿರುವಲ್ಲಿ ಇಳಿದು, ನಡೆದ ಕೆಲಸದ ಪ್ರಗತಿ ಪರಿಗತಿಗಳನ್ನು ಸೂಕ್ಷ್ಮವಾಗಿ ತಿಳಕೊಂಡಿದ್ದರೆ ಅವರಿಗೆ ಮನೋರಂಜಕ ಮಾಹಿತಿ ಸಿಗುತ್ತಿತ್ತು. ಈ ೪ ಸಂಕಗಳಲ್ಲಿ, ಮೂಲೆಮನೆ ಹೆಬ್ಬಾರ, ಕೊಡ್ಲಗದ್ದೆ ಮತ್ತು ಚಿಕ್ಕಮನೆ ಸಂಕಗಳನ್ನು ಬರುವ ಮಾರ್ಚ ಅಂತ್ಯದೊಳಗೆ ರಹದಾರಿಗೆ ಸಿದ್ಧಮಾಡಿಕೊಡತಕ್ಕದ್ದಿದೆ. ಅಲ್ಲಿಯ ವರೆಗೆ ಹಳೆಯ ಸಂಕಗಳ ಮೇಲಿಂದಲೇ ರಹದಾರಿಯು ನಿರ್ವಾಹವಾಗಬೇಕು. ಮೂಲೆಮನೆ ಹೆಬ್ಬಾರದ ಹಳೆಯ ಸಂಕ ತೀರ ಜೀರ್ಣವಾಗಿರುತ್ತಿದ್ದು, ಬರುವ ಮಳೆಗಾಲದಲ್ಲಿ ಅದು ಕುಸಿದು ಬೀಳುವ ಸಂಭವವಿದೆ. ಹೊಸ ಸಂಕ ಅಷ್ಟರೊಳಗೆ ತಯಾರಾಗುವ ಲಕ್ಷಣಗಳಿಲ್ಲ. ಈ ಸಂಕದ ಕಂಚಾಂಗ ಸಹ ಇನ್ನೂ ಪೂರ್ಣ ತಯಾರೆ ಆಗಿಲ್ಲ. ಅಲ್ಲಿ ಕೆಲಸ ನಡೆದ ರೀತಿ ನೋಡಿದರೆ ಸಂಕ ತಯಾರಾಗಲು ಇನ್ನೂ ಒಂದು ವರ್ಷ ಬೇಕು. ಕೊಡ್ಲಗದ್ದೆಯ ಸಂಕ ಕರಾರಿನಂತೆ ಇನ್ನು ೩ ತಿಂಗಳಲ್ಲಿ ತಯಾರಾಗಬಹುದು. ಚಿಕ್ಕಮನೆ ಸಂಕ ಕರಾರಿನ ಅವಧಿಯೊಳಗೆ ತಯಾರಾಗಲಿಕ್ಕಿಲ್ಲೆಂದು ಗುತ್ತಿಗೆದಾರರು ಈಗಲೇ ತಿಳಿಸಿ ಅವಧಿಯನ್ನು ೨ ತಿಂಗಳಿಂದ ಬೆಳೆಸಿಕೊಂಡಿದ್ದಾರೆ. ಅರಬೈಲ ಸಂಕದ ಪ್ರಕರಣ ತೀರ ರಹಸ್ಯಮಯವಿದೆ. ಇಲ್ಲಿ ಹಳೆಯ ಸಂಕ ಕೆಡವಿ ಅದರ ಸ್ಥಳದಲ್ಲೇ ಹೊಸ ಸಂಕ ಕಟ್ಟಿಸುತ್ತಾರೆ. ಪ್ರಾರಂಭದಲ್ಲಿ ಮೇಲ್ಕಾಣಿಸಿದ ಮೂರೂ ಸಂಕಗಳಂತೆ ಇದನ್ನೂ ಸಹ ಬರುವ ಮಾರ್ಚ ತಿಂಗಳೊಳಗಾಗಿ ತಯಾರಿಸಿಕೊಡಬೇಕೆಂಬ ಕರಾರಿತ್ತು. ಆದರೆ ಹಳೆಯ ಸಂಕ ತೆಗೆದು ಹೊಸ ಸಂಕ ಕಟ್ಟಬೇಕಾದ್ದರಿಂದ ಅದು ತಯಾರಾಗುವ ವರೆಗೆ ವಾಹನಗಳ ಓಡಾಟಕ್ಕೆ ಕಷ್ಟವಾಗುವದೆಂಬ ದೂರು ಬಂತು. ಆಗ ಈ ಸಂಕವನ್ನು ೧೦ ತಿಂಗಳ ಮುಂಚೆಯೇ ಅಂದರೆ ೧೯೪೯ರ ಮೇ ತಿಂಗಳ ಕೊನೆಯೊಳಗಾಗಿ ತಯಾರಿಸಿ ಕೊಡಬೇಕೆಂದೂ, ಆ ಬಗ್ಗೆ ವಿಶೇಷ ಪ್ರತಿಫಲವೆಂದು ೧೫ ಸಾವಿರ ರೂಪಾಯಿ ಮೇಲ್ಕಾಣಿಕೆ ಕೊಡಲಾಗುವದೆಂದೂ, ಮೇ ತಿಂಗಳ ಕೊನೆಯೊಳಗೆ ಸಂಕದ ಕೆಲಸವನ್ನು ಪೂರ್ಣಗೊಳಿಸಿಕೊಡದಿದ್ದಲ್ಲಿ ದಿನಕ್ಕೆ ರೂ. [illegible]ರಂತೆ ಸರಕಾರಕ್ಕೆ ದಂಡ ತೆರಬೇಕೆಂದೂ ಸರಕಾರವು ಗುತ್ತಿಗೆದಾರರಿಂದ ಹೊಸ ಕರಾರು ಬರೆಕೊಂಡಿತು. ಮೂಲೆಮನೆ ಹೆಬ್ಬಾರ, ಚಿಕ್ಕಮನೆ ಮತ್ತು ಅರಬೈಲ ಈ ೩ ಸಂಕಗಳನ್ನು ಕಟ್ಟಿಕೊಡುವ ಗುತ್ತಿಗೆಯನ್ನು ಮುಂಬಯಿಯ ರಾ|| ದಹಾಣೂಕರ ಎಂಬವರ "ನ್ಯೂ ಯುನೈಟೆಡ್ ಕನ್ಸ್ಟ್ರಕ್ಶನ್ ಇಂಜಿನಿಯರಿಂಗ ಕಂಪನಿ"ಯವರು ಪಡೆಕೊಂಡರು. ಕೊಡ್ಲಗದ್ದೆಯ ಸಂಕದ

Nayakvadi Associated Industries, Limited.,

Nayakvadi, GANGULI. (S. K)

The Directors of Nayakvadi Associated Industries, Limited, Ganguli, (S K) feel much pleasure to wish a Happy New Year to all their Share-holders.

Nayakvadi, Ganguli, 1st January, 1950.

G. Balakrishna S. Nayak, MANAGING DIRECTOR

ಗುತ್ತಿಗೆ[illegible]ನ್ನು [illegible] ರಾ। ಪಟವರ್ಧನ ಎಂಬ ವರು [illegible] ನ್ಯೂ ಯುನೈಟೆಡ್‌ದ ವರ ಪ್ರಪಂಚ[illegible]ದ್ದರು. ಅವರು ಎಲ್ಲೆಲ್ಲೂ ದೊ[illegible] ಗಾರರಿಗಳನ್ನು ಗುತ್ತಿಗೆಗೆ ಹಿಡಿದು ಸರಕಾರದ [illegible] ಇಲಾಖೆಯ ಮೇಲಧಿಕಾರಿಗಳೊಡನೆ ದಟ್ಟ ಪರಿಚಯ ಬೆಳಸಿದಾರೆ. ಕರಾರಿನಂತೆ ಇವರಿಂದ ಕೆಲಸವಾಗುವದಾಗ ಆ ಅಧಿಕಾರಿಗಳು ನಂಬಿ, ೩ ಸಂಕಗಳ ಕೆಲಸ ಆ ಕಂಪನಿಯವರಿಗೆ ಕೊಟ್ಟಿದ್ದರು ಆದರೆ ಕರಾರಿನಂತೆ ಮೂರೂ ಸಂಕಗಳ ಕೆಲಸ ಆಗುವದಿಲ್ಲೆಂಬು ಹೇಳಿ ಕಂಪನಿಯವರು ಅವಧಿಯನ್ನು ಬೆಳಸಿಕೊಂಡಿದ್ದಾರಲ್ಲದೆ. ಅಂಬೈಲ ಸಂಕವನ್ನು ಇನ್ನೂ ಪೂರ್ಣ ಕಟ್ಟಿಕೊಟ್ಟಿರುವದಿಲ್ಲ. ಆದರೂ ಸರಕಾರವು ಅವರಿಗೆ ಕರಾರಿನಂತೆ ದಂಡ ವಿಧಿಸದೆ, ಮೇಲ್ಬಾಣಿಕೆಯ ಲಂಚವಾದ್ಯ ಕೊಟ್ಟುಬಿಟ್ಟಿದೆಯಂತೆ! ಮೇಲ್ಬಾಣಿಕೆ ಇಲ್ಲವೆ ಇನಾಮಿಲ್ಲದೆ ಕೆಲಸ ಮುಗಿಸಿಕೊಡುವ ಅವಧಿ ೧೯೪೦ನೇ ಇಸವಿಯ ಮಾರ್ಚ ತಿಂಗಳ ಕೊನೆಯಾಗಿತ್ತು. ಅದನ್ನು ಈಗ ಬೆಳಸಿ ಮೇ ತಿಂಗಳ ಕೊನೆಯೊಳಗಾಗಿ ಸಂಕ ಪೂರ್ಣಪಡಿಸಿ ಕೊಡಬೇಕೆಂದು ಗೊತ್ತಾಗಿದೆ! ಮಂತ್ರಿಗಳು ಇದನ್ನು ಪರಿಶೋಧಿಸಬಹುದಾಗಿತ್ತು. ಕೆಲಸ ಪೂರ್ಣವಾಗುವ ಮುಂಚೆಯೇ ಗುತ್ತಿಗೆದಾರರಿಗೆ ಅಧಿಕಾರಿಗಳು ಇನಾಮು ಕೊಟ್ಟ ಬಗೆ ಹೇಗೆ? ಅದನ್ನು ಕೊಡುವಂತೆ ಶಿಫಾರಸು ಮಾಡಿದ ಅಧಿಕಾರಿಗಳ್ಯಾರು, ಮನ್ನಿಸಿದ ಅಧಿಕಾರಿಗಳ್ಯಾರು ಎಂಬುದು ಬೆಳಕಿಗೆ ಬಂದರೆ ಒಳಿತಾಗುವದು. ಗುಜರಾತಿಗಳ ವ್ಯವಹಾರ-ಚತುರತೆ ದು[illegible]ಷ್ಟತೆ[illegible] ಈಗ ನಮ್ಮ ದಕ್ಷಿಣ ವಲಯದ ಸುಪರಿಂಟೆಂಡಿಂಗ್ ಇಂಜನಿಯರು ಓರ್ವ ಗುಜರಾಥಿಗಳೇ ಇರುತ್ತಾರಂತೆ. ಡಾ|| ಮೇಧಾರವರು ಜಿಲ್ಲೆಯ ಜನರೊಡನೆ ಜಿಲ್ಲೆಯ ಯೋಗಕ್ಷೇಮದ ಬಗ್ಗೆ ಮಾತುಕತೆಯಾಡುತ್ತಿದ್ದರೆ ಅವರಿಗೆ ಕೆಲಸ ಪೂರ್ತಿಯಾಗದಿದ್ದರೂ ಮೇಲ್ಬಾಣಿಕೆಯ ಹಣ ಕೊಟ್ಟುಹೋದ ಅಲೌಕಿಕ ಘಟನೆ ತಿಳಿದು ಬರುತ್ತಿತ್ತು. ಯಲ್ಲಾಪುರದೊಳಗೆ ಡಾ|| ಮೇಧಾರವರು ಊಟ-ವಿಶ್ರಾಂತಿಗಳಿಗಾಗಿ ಸುಮಾರು ೨|| ತಾಸು ಇಳಕೊಂಡಿದ್ದರು. ಊಟ ಮುಗಿದ ಮೇಲೆ ಅವರು ಸಹಜ ಮಾತು-ಕಥೆಯಾಡಲು ಸ್ಥಳಿಕ ಪ್ರಮುಖರಿಗೆ ಕರೆಯುತ್ತಿದ್ದರೆ ಸಂಕಗಳ ಕಟ್ಟೋಣದ ಸಾದ್ಯಂತ ವೃತ್ತಾಂತ ಅವರಿಗೆ ತಿಳಿಯುವಂತಿತ್ತು. ಆದರೆ ಡಾ|| ಮೇಧಾರವರು ಯಾರನ್ನೂ ಕಾಣಲಿಲ್ಲ ಅಥವಾ ಮಾತಾಡಿಸಲಿಲ್ಲ! ಸ್ಥಳಿಕ ಲೋಕ-ಪ್ರಮುಖರೊಡನೆ ಸಂಪರ್ಕವಾಗದಂತೆ ಅವರ ಸಂಚಾರದ ಕಾರ್ಯಕ್ರಮ ನಿರ್ಧರಿಸಿದ ಮಹಾನುಭಾವರನ್ನು ಹೊಗಳಬೇಕು ಕಡಿಸಿ.ಯೇ! ಇಂತಹ ಕಾರ್ಯಕ್ರಮಗಳಿಂದಲೇ ಮಂತ್ರಿಗಳ ಸಂಚಾರಗಳು ನಿರರ್ಥಕವಾಗುತ್ತಿವೆ. ಅಂಬೈಲ ಸಂಕದ ಪ್ರಕರಣವನ್ನು ಸರಕಾರದವರು ಲಂಚನಿರ್ಮೂಲನ ಖಾತೆಗೆ ಒಪ್ಪಿಸಿ ಆದರಲ್ಲಿ ಏನಾದರೂ ಭ್ರಷ್ಟಾಚಾರವಾಗಿದೆಯೋ ಹೇಗೆಂಬುದರ ಒಕ್ಕಿ ಹಚ್ಚಿಸಬೇಕಾಗಿ ಜನರ ಅಪೇಕ್ಷೆಯುಂಟು.

* * *

ನಮ್ಮ ಜಿಲ್ಲೆಗೆ ಆಗುವ ಅನ್ಯಾಯವನ್ನು ಇನ್ನೊಂದು ಉದಾಹರಣೆ ಕೊಟ್ಟು ವಿವರಿಸಬಹುದು ಕರ್ನಾಟಕ ಭಾಗದಲ್ಲಿ ಬೆಳಗಾವಿ, ಧಾರವಾಡ ಜಿಲ್ಲೆಗಳೊಡನೆ ಈ ನಮ್ಮ ಜಿಲ್ಲೆಯನ್ನು ಒಟ್ಟುಗೂಡಿಸುತ್ತಿರುವದರಿಂದ ನಮ್ಮ ಜಿಲ್ಲೆಗೆ ಅನ್ಯಾಯವಾಗುತ್ತಿದೆ ನಿನ್ನ ಸಂಬಳ ಎಷ್ಟೋ ಎಂದು ಓರ್ವ ಪೇದೆಗೆ ಕೇಳಿದಾಗ, ಸಾಹೇಬರಿಗೂ ನನಗೂ ಕೂಡಿ ರೂ ೨೦೨೫ ಎಂದು ಆ ಪೇದೆಯು ಹೇಳಿ, ತಾನು ದೊಡ್ಡ ಸಂಬಳ ಪಡೆಯುವ ಮಹಾಪುರುಷನೆಂದು ಬಡಿವಾರ ಬಡಿಯುತ್ತಿದ್ದನಾಗಿ ಹಳಬರು ಒಂದು ಕಥೆ ಹೇಳುತ್ತಿದ್ದರು ಆದರೆ ಆ ಪೇದೆಗೆ ಸಿಗುತ್ತಿದ್ದ ಸಂಬಳ ರೂ ೨೫ ಮಾತ್ರ! ನಮ್ಮ ಜಿಲ್ಲೆಯ ಸ್ಥಿತಿ ಸಾಮಾನ್ಯವಾಗಿ ಇದೇ ಬಗೆಯದಾಗಿದೆ ನಮ್ಮ ಜಿಲ್ಲೆಯೊಳಗೆ ದಟ್ಟಡವಿಯುಂಟು. ಅದರೊಳಗಿನ ಕಾಡು ಪಶುಗಳು ನಮ್ಮ ಜನರು ಬೆಳಸಿದ ಪೈರನ್ನು ತಿಂದು ಹಾಳು ಮಾಡುತ್ತಿವೆ ಅದರಿಂದ ಹೊಲಗಳ ಸುತ್ತಲೂ ಕಬ್ಬಿಣದ ತಂತಿಯಿಂದ ನೇಯ್ದ ಬೇಲಿ ಹಾಕಬೇಕಾಗಿ ಬೇಸಾಯ ಇಲಾಖೆಯವರೂ ಗ್ರಾಮೋದ್ಧಾರ ಮಂಡಳದವರೂ ಒಂದು ಯೋಜನೆ ಮಾಡಿ, ಅದನ್ನು ಹಿಂದುಸ್ಥಾನ ಸರಕಾರದ ಕಡೆ ಕಳಿಸಿ, ನಮ್ಮ ಜಿಲ್ಲೆಗಾಗಿ ೧೦೦ ಮೈಲು ಉದ್ದ ಬೇಲಿಯ ಸಲಕರಣೆಗಳನ್ನು ಪಡೆಕೊಂಡರು ಆದರೆ ಪ್ರಾಂತಿಕ ಸರಕಾರವು ನಮ್ಮ ಜಿಲ್ಲೆಯ ನಾಮನಿರ್ದೇಶ ಮಾಡದೆ ಕರ್ನಾಟಕಕ್ಕೆ ಈ ಬೇಲಿ ಬೇಕಾಗಿದೆಂದು ಉಲ್ಲೇಖ ಮಾಡಿದ್ದರು ಕರ್ನಾಟಕದ ಅಧಿಕಾರಿಗಳು ಅದನ್ನು ಮುಂದೆ ಕಾನಡಾ ಜಿಲ್ಲೆಗೆ ಕಳುಹಿಸಲೆಂದು ಸರಕಾರದವರು ಎಣಿಸಿರಬಹುದು. ಯಾಕೆಂದರೆ ಕರ್ನಾಟಕದ ಇತರ ಜಿಲ್ಲೆಗಳವರು ನೇಯ್ದ ಬೇಲಿ ಬೇಕೆಂದು ಸರಕಾರದ ಕಡೆ ಬೇಡಿದ್ದಿಲ್ಲ ಆದರೂ ಈ ಬೇಲಿಯ ಸಾಹಿತ್ಯ ಎಂಜಿನಿಯರಿಂಗ್ [illegible] ೬೦ ಮೈಲುದ್ದ ಬೇಲಿಯ ಸಾಹಿತ್ಯ ಬೆಳಗಾಂವ, ಧಾರವಾಡ ಜಿಲ್ಲೆಗಳಲ್ಲಿ ಹಂಚಲ್ಪಟ್ಟಿತು! ಮತ್ತು ಉಳಿದ ೪೦ ಮೈಲುದ್ದ ಬೇಲಿಯ ಸಾಹಿತ್ಯ ಮಾತ್ರ ನಮ್ಮ ಜಿಲ್ಲೆಯ ಪಾಲಿಗೆ ಬಂತು! ಅದೂ ಪೂರ್ಣ ಜಿಲ್ಲೆಯ ಜನರಿಗೆ ಸಿಕ್ಕಿಲ್ಲ! ೬ ಮೈಲು ಬೇಲಿ ಇಂದೂರ ಯೋಜನೆಗಾಗಿ ಉಪಯೋಗಿಸಿದಾರೆ ಬಾಕಿ ಉಳಿದ ೩೪ ಮೈಲು ಬೇಲಿ ಈ ವರುಷ ದೊರೆಯಲಿಕ್ಕಿಲ್ಲವಾಗಿ ಹೇಳಹತ್ತಿದ್ದಾರಂತೆ. ಮುಂಡಗೋಡದ ಸಹಕಾರಿ ಸಂಘದವರು ೨ ಮೈಲು ತಂತಿಯ ಬೇಲಿ ಬೇಡಿ ರೂ ೨೦೦೦ ಸರಕಾರದಲ್ಲಿ ಮುಂಗಡವಾಗಿ ಕಟ್ಟಿದ್ದಾರು ಆದರೆ ಅವರಿಗೆ ಈವರೆಗೆ ಬೇಲಿ ಸಿಕ್ಕಿಲ್ಲ! ಆಹಾರ-ಧಾನ್ಯ ಹೆಚ್ಚು ಬೆಳಸಬೇಕೆಂದು ಪ್ರೋತ್ಸಾಹ ಕೊಡಲು ಶಿರಸಿಯಲ್ಲಿ ನೆರೆದ ಸಭೆಯಲ್ಲಿ, ೧೦೦ ಮೈಲು ಉದ್ದ ನೇಯ್ದ ಬೇಲಿ ನಮ್ಮ ಜಿಲ್ಲೆಗೆ ದೊರೆಯುವದೆಂದೂ, ಆ ಬೇಲಿಯ ಸಹಾಯದಿಂದ ಅಡವಿಯ ಬಳಿಯಿರುವ ಹೊಲಗಳ ಬೆಳೆಯನು ರಕ್ಷಿಸಿಕೊಳ್ಳಬಹುದೆಂದೂ, ಈ ಬೇಲಿಯ ಬಗ್ಗೆ ಸರಕಾರವು ಘೋಷಣೆ ಮಾಡಿ ಆಣೆಯಂತೆ ನಷ್ಟ ಸಹಿಸಿರುವದರಿಂದ ದೂ ಬೇಸಾಯ ಮಂತ್ರಿ ಮಾನ್ಯ ಮಲ್ಲನಗೌಡರು ಘಂಟಾಘೋಷವಾಗಿ ಕೊಟ್ಟ ಆಶ್ವಾಸನ ಕೇಳಿಯೋ ಕಾಡು ಪಶುಗಳು ಹೆದರಿ ಹೊಲಗಳನ್ನು ಸೇರದೆ ಓಡಿಹೋಗುವವೆಂದು ಒಕ್ಕಲಿಗರು ಸಮಾಧಾನ ಮಾಡಿಕೊಳ್ಳಬೇಕೋ ಏನೋ! ಬೆಳಗಾಂವ ಧಾರವಾಡ ಜಿಲ್ಲೆಗಳ ಜೊತೆಗಾರವಾಗುವದರಿಂದ ನಮ್ಮ ಜಿಲ್ಲೆಗೆ ಲಾಭವಿಲ್ಲ, ನಷ್ಟವೇ ಉಂಟು.

* * *

ಲಂಚ-ನಿರ್ಮೂಲನ ಖಾತೆಗೊಪ್ಪಿಸಬಹುದಾದ ಇನ್ನೊಂದು ಪ್ರಕರಣವಿದೆ ಕಳೆದ ಮಳೆಗಾಲದಲ್ಲಿ ಪ್ರಾಂತಿಕ ಅಧಿಕಾರಿಗಳು ಮುಂಬಯಿಗೆ ಕಳಿಸುವದಕ್ಕಾಗಿ ಒಮ್ಮೆ ೮೦೦ ಗಂಟುಗಳನ್ನು, ಇನ್ನೊಮ್ಮೆ ೨೦೦ ಗಂಟುಗಳನ್ನು ಹೀಗೆ ೨ ಬಾರಿಗಳಿಂದ ೧೦೦೦ ಗಂಟುಗಳನ್ನು ಅಣ್ಣಾವರ ಮಾರ್ಗವಾಗಿ ಮುರಗಾಂವಿಗೆ ಸ್ವತಃ ಒಯ್ದ ಪ್ರಕರಣ ಸ್ಮರಣೀಯವಿದೆ. ೮೦೦ ಗಂಟುಗಳು ಮುರಗಾಂವಿಯಲ್ಲಿ ೭-೮ ದಿನ ಬಿಸಿಲು-ಗಾಳಿ ತಿಂದು, ಕೊನೆಗೆ ಲಕ್ಷ್ಮೀ[illegible]

ಆಜ್ಞೆ.

ಕಾನಡಾ ಜಿಲ್ಲಾ ಮ್ಯಾಜಿಸ್ಟ್ರೇಟರ ಕಚೇರಿ, ಕಾರವಾರ,
ತಾ. ೨೮-೧೨ ೧೯೪೯.

ನಂ. ೫೮ — ೧೯೪೬ನೇ ಇಸವಿಯ ಆವಶ್ಯಕ ವಸ್ತುಗಳ ಪೂರೈಕೆಯ (ತಾತ್ಪೂರ್ತಿಕ ಅಧಿಕಾರಗಳ) ಕಾನೂನಿನ (೧೯೪೬ರ ೨೪ನೇ ಕಾನೂನು) ಕಲಮು ೩ರ ೨ನೇ ಉಪ-ಕಲಮು ಹಾಗೂ ಭಾರತ ಸರಕಾರದ ಆಜ್ಞಾಪನೆಗಳು, ಗವರ್ನರು ಜನರಲ್ಲ ಕಚೇರಿ ಅವರ ಖಾತೆಯವರು ತಾ. ೩—೩—೧೯೪೭ ನೇಯ ಹೊರಡಿಸಿದ ಪಿ ೧೦೦ ನೇ ಕ್ರಮಾಂಕದ ಸರಕಾರಿ ಪ್ರಕಟನೆ ಇವುಗಳನ್ನೂ ಕಾನಡಾ ಜಿಲ್ಲಾ ಮ್ಯಾಜಿಸ್ಟ್ರೇಟರು ತಮ್ಮ ಕಚೇರಿಯ ತಾ ೧೮—೧೦—೧೯೪೯ ನೇ [illegible] ಕ್ರಮಾಂಕದ (ಆಹಾರ ಎಣ್ಣೆಗೆ ಸಂಬಂಧಿಸಿದ್ದು) ಆಜ್ಞೆಯಲ್ಲಿ, ತಾ ೩—೧೨—೧೯೪೯ ನೇ ಆಜ್ಞೆಯಿಂದ ಮಾಡಲ್ಪಟ್ಟ ತಿದ್ದುಪಡಿಗಳ ಪಠಣ, ಈ ಕೆಳಗಿನಂತೆ (ಹೊಸ) ತಿದ್ದುಪಡಿಗಳನ್ನು ಮಾಡಿರುತ್ತಾರೆ.

(೧) ಸದರಿ ಆಜ್ಞೆಯ ೧ನೇ ಪರಿಶಿಷ್ಟದ ೧ನೇ ಸ್ತಂಭದಲ್ಲಿ ೩ನೇ ಬಾಬಿನೊಳಗೆ ತೋರುವ "ಕುಸುಬೆ ಎಣ್ಣೆ" ಎಂಬ ಶಬ್ದಗಳನ್ನು ಅಳಿಸಿಬಿಟ್ಟು "ವಂಟಿಉಮ್ಮ" "ಶೇಂಗಾ" ಶಬ್ದಗಳ ಹಿಂದಿನ "ಮತ್ತು" ಎಂಬ ಶಬ್ದವನ್ನು ತೆಗೆದುಬಿಡಬೇಕು.

(೨) ಸದರಿ ಆಜ್ಞೆಯ ೧ನೇ ಪರಿಶಿಷ್ಟದ ೧ನೇ ಸ್ತಂಭದಲ್ಲಿರುವ "ಭಸಿಕಣ" ಎಂಬ ೩ನೇ ಬಾಬಿನ ಮುಂದುಗಡೆ ಇರುವ "೬-೯-೬" ಎಂಬ ಅಂಕಿಗಳಿಗೆ ಬದಲಾಗಿ ಅವುಗಳ ಬದಲು "೬-೧೦-೨" ಎಂಬ ಅಂಕಿಗಳನ್ನು ಬರೆಯಬೇಕು.

M. K. JADHAV
ಜಿಲ್ಲಾ ಮ್ಯಾಜಿಸ್ಟ್ರೇಟ, ಕಾನಡಾ

The Agricultural & Industrial Bank, Ltd.

(Established 1934)

Head Office COONDAPOOR.

We Wish All Our Shareholders, Depositors and Patrons a Happy and More Prosperous New Year.

Coondapoor, 25—12—49

A MADHAVA PAI, B.A., B.L.,
GENERAL MANAGER

ಹಡಗಿನಿಂದ ಮುಂಬಯಿಗೆ ಪಯಣ ಮಾಡಿದವು. ಉಳಿದ ೨೦೦ ಜವಳಿ-ಗಂಟೆಗಳನ್ನು ಒಯ್ಯಲಿಕ್ಕೆ ಲಕ್ಷ್ಮೀ ಹಡಗವೇ ಬರಬೇಕಾಯಿತು! ಆ ಹಡಗ ಬರಲು ವಿಳಂಬವಾದ್ದರಿಂದ ಹಡಗದ ದಾರಿ ನೋಡುತ್ತ ಬಿದ್ದುಕೊಂಡ ಆ ೨೦೦ ಗಂಟೆಗಳನ್ನು ಕಾಯಲು ಒಂದು ಶಿಬಂದಿಯನ್ನೂ ನೇಮಿಸಬೇಕಾಯಿತು. ಲಕ್ಷ್ಮೀ ಹಡಗ [illegible] ೨೦೦ ಗಂಟುಗಳು ಅದರಲ್ಲಿ ಸಹಜ ಹೋಗುತ್ತವೆ. ಇಂತಹ ಹಡಗದಲ್ಲಿ ಎಂಟು ನೂರೇ ಗಂಟುಗಳನ್ನು ಕಳಿಸಿ, ೨೦೦ ಗಂಟುಗಳನ್ನು ಇಟ್ಟುಕೊಂಡದ್ದೇಕೆಂಬುದೊಂದು ಪ್ರಶ್ನೆ. ಕರಾವಳಿಯಲ್ಲಿ ಓಡಾಡುತ್ತಿದ್ದ ಇತರ ಹಡಗಗಳಲ್ಲಿ ಈ ೨೦೦ ಗಂಟುಗಳನ್ನು ಕಳಿಸಿಕೊಡದೆ ಲಕ್ಷ್ಮೀ ಹಡಗದ ಹಾದಿಯನ್ನೇ ನೋಡಿದ್ದೇಕೆ ಎಂಬುದೊಂದು ಎರಡನೇ ಪ್ರಶ್ನೆ! ಈ ಹಡಗಗಳಲ್ಲಿ ಸ್ಥಾನಿಕ ಏಜಂಟರಿಂದ ಏನು ತೆಗೆಸಿ ಆ ಗಂಟುಗಳನ್ನು ಕಳಿಸಬರುತ್ತಿದ್ದಿಲ್ಲವೇ? ಅದನ್ನು ಬಿಟ್ಟು ಮುಂಬಯಿ ಏಜಂಟರಿಂದಲೇ ಏನು ಇಳಿಸಿ ಜವಳಿಯ ಗಂಟುಗಳನ್ನು ಕಳಿಸುವ ವ್ಯವಸ್ಥೆ ಯಾತಕ್ಕಾಯಿತೆಂಬುದೂ ಒಂದು ನಿಗೂಢ ಸಮಸ್ಯೆಯಾಗಿದೆ. ಸರಕಾರದವರ ಏನು ಇಳಿಸುವ ವಿಶಿಷ್ಟ ಕಂಪನಿಯ ಪ್ರತಿನಿಧಿಗಳು ನಮ್ಮ ಜಿಲ್ಲೆಯಲ್ಲಿ ಇರುವಾಗ ಮುಂಬಯಿಯ ಪ್ರತಿನಿಧಿಗಳ ಕಡೆಯಿಂದಲೇ ಏನು ಇಳಿಸಬೇಕಾಗಿ ಆಗ್ರಹ ಹಿಡಿಯುವದರಲ್ಲಿ ರಹಸ್ಯವೇನಾದರೂ ಇರಬೇಕಲ್ಲವೇ? ಏನು ಇಳಿಸುವ ಪ್ರತಿನಿಧಿಗಳು ಮುಂಬಯಿಯವರ ಬಿಟ್ಟು ಬೇರೆಯವರು ಆದ ಮಾತ್ರಕ್ಕೆ ಕಂಪನಿಯು ಹೊರುವ ಹೊಣೆ ಕಡಿಮೆಯಾಗುತ್ತದೇನು? ಇಲ್ಲಿ [illegible] ಪೂರೈಕೆ ಇಲಾಖೆಯವರು ವಿಶಿಷ್ಟ ಕಂಪನಿಯ ವಿಶಿಷ್ಟ ಪ್ರತಿನಿಧಿಗಳ ಕಡೆಯಿಂದ ಏನು ಇಳಿಸಬೇಕೆಂದು ದಬಾಯಿಸಿ ಅವರಿಗೆ ಪ್ರೋತ್ಸಾಹ ಕೊಡುತ್ತಿರುವ ಕಾರಣಗಳನ್ನು ಲಂಚ-ನಿರ್ಮೂಲನ ಖಾತೆಯವರು ಪರಿಶೋಧಿಸಬೇಕು. ಅಧಿಕಾರಿಗಳ ಈ ನಡಾವಳಿಯಿಂದ ಸರಕಾರಕ್ಕೆ ಆದ ನಷ್ಟವೆಷ್ಟೆಂದು ಕಂಡುಹಿಡಿದು ಅದನ್ನು ಸಂಬಂಧಪಟ್ಟವರಿಂದ ವಸೂಲ ಮಾಡುವ ಏರ್ಪಾಟೂ ಆಗಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

[illegible]

[illegible]

ಚಂದಾದಾರರ [illegible]

[illegible]

—ವ್ಯವಸ್ಥಾಪಕ.

[illegible]

[illegible]

ತಮ್ಮಲ್ಲಿ

ಕನನ್ ವೇವನ್ ಮತ್ತು ಇತರ ಕಂಪನಿಗಳ

"ಚಹಾ"

ಯೋಗ್ಯ ದರದಲ್ಲಿ ಸಿಗುತ್ತದೆ

ವ್ಯಾಪಾರ ಮಾಹಿತಿ ಬಗ್ಗೆ ಬರೆಯಿರಿ

L. G MAHALE,

Merchant & Agent, ANKOLA N-K

THE REGIONAL TRANSPORT AUTHORITY,

K. R., BELGAUM.

NOTICE.

Applications in the prescribed form, which can be had from this office, are invited for Permits to operate stage carriage services on the following routes, or from the Joint Stock Companies of all or majority of the existing operators operating in or around the area or route for which application is made, or others including local bodies in the Karnatak Region.

S. No	Name of route.
1.	Bandi—Gajendragad.
2.	Ilkal—Kvadigumpa,
3.	Bailhongal—Dharwar via, Anagol, Vakkund,
4.	Doddavad and Uppin Betgeri.

All applications should be submitted so as to be received in this office on or before 19—1—1950. Those received after this date will not be entertained.

Applications should clearly state the time-table proposed to be maintained. They should be complete in all respects and if incomplete they will be treated as invalid.

Permits will be granted on temporary basis in accordance with the existing instructions from Government and issued as and when the petrol quota allotted to this Region permits.

No 10519 /4-B/KR of 1949,
Regional Transport Office, K. R.,
Belgaum, 29th December, 1949

D. K. SUKTHANKAR, CAPT
Secretary,
Regional Transport Authority,
Karnatak Region, Belgaum

[illegible]

ಹಳಿಯಾಳ—

[illegible]

ಕಾರವಾರ—

(ತಾ. ೩—೧—೧೯೫೦) ಇಲ್ಲಿ ಅಪಾರ ಧಾನ್ಯಗಳನ್ನು ಹೇರಿಕೊಂಡು ಬಂದ ಲಾಂಚು ಘಟದಲ್ಲಿ ಓರೆ–ಮೋರೆಯಾಗಿ ಬಿದ್ದು ೯೦ ಚೀಲ ಸಕ್ಕರೆ, ೫೦ ಚೀಲ ಗೋದಿ, ೫೦ ಚೀಲ ಜೋಳ ಸಮುದ್ರ ಪಾಲಾಯಿತೆಂಬಾಗಿ ತಿಳಿಯುತ್ತದೆ.

[illegible]

ಪತ್ರಿಕಾ–ಪ್ರಕಟಣೆ.

[illegible]

(ಜಿಲ್ಲಾಧಿಪರ ಅಪೇಕ್ಷೆಯಂತೆ ಪ್ರಕಟಿಸಿದ್ದು).

ಪತ್ರಿಕಾ–ಪ್ರಕಟಣೆ

[illegible] (valid) [illegible] (processors) [illegible] (free sale quota) [illegible]

(ಜಿಲ್ಲಾಧಿಪರ ಅಪೇಕ್ಷೆಯಂತೆ ಪ್ರಕಟಿಸಿದ್ದು).

THE BANK OF RURAL INDIA LTD.

(Incorporated in Indian Union, Liability of Members Limited.)

HEAD OFFICE — "Satyabhama Bhuvanam", KARWAR. N. K.

Wishes Peace, Prosperity and Plenty in the

NEW YEAR

1950

to all its share-holders, clients and well-wishers.

Karwar,
1st Jan., 1950

P. X. GRACIOUS.
MANAGING DIRECTOR

ಜಿಲ್ಲಾ ಸಮಾಚಾರ.

[illegible]

[illegible]

ಮೊಲಕೋಡ ಫೆಸ್ತು

ನಿಶ್ಚಿತವಾಗಿಯೂ ಜರಗುವದು.

[illegible]

ಮೊಲಕೋಡದ [illegible] ಮಹಾಜನರು.

ನಮ್ಮಲ್ಲಿ ಕತ್ತ್ರದಿಂದ ತಯಾರಿಸಿದಂಥ ಚಕಾರ್ ಹುರಿ, ಬಾವಿ ಹಗ್ಗ, ಬ್ರಶ ಮೆಟ, ಮೆಟಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ.

[illegible] ಸೊಸೈಟಿ ಲಿಮಿಟೆಡ್, ಹೊನ್ನಾವರ. ([illegible])

ಜಾಹೀರ ಲಿಲಾಂವು.

[illegible]

[illegible]

[illegible] ಯಿಂದ ಸ್ಥಾಪಿತವಾಗಿದ್ದು, ಮುಕ್ತ [illegible] ಈ ಸಂಸ್ಥೆಯ ಕಾರ್ಯ [illegible] ಸುದ್ದಿಗಾರರಿಗೆ ಸೂಚನೆ ಕೊಡು [illegible] ಅವರ ಗಮನಕ್ಕೆ ತರುತ್ತೇವೆ. [illegible] ಮುಕ್ತಳ ಕಟಾಕ್ಷ ಎಂದು ಹೆಸರು ಬರೆಯದೆ [illegible] ಸುದ್ದಿಬಂದಿರುವ [illegible] ಕಾರಣವಾಗಿದೆ ! — ಸಂಪಾದಕ]

ಸಿದ್ದಾಪುರ— (೨೦ ೧೨-೪೯) ಇಲ್ಲಿ [illegible] ರಾವ್ ಎಸ್ ಎಸ್ [illegible] ಸ್ಥಳದಲ್ಲಿ ಬಂದಿರುತ್ತಾರೆ.

[illegible]

(ತಾ. ೨೭-೧೨-೪೯) ಸಿದ್ದಾಪುರದಿಂದ [illegible] ಬರುತ್ತಿದ್ದ Mys 2410ನೇ ಮೋಟಾರು ಬಂದಿ [illegible] ಉತ್ತರಕೊಡುವವರು ಯಾರಾದರೂ ಇದ್ದಾರೆಯೆ ? [illegible]

[illegible] ಅಸಭ್ಯ ಮಾತುಗಳನ್ನು ಆಡುತ್ತಿದ್ದನು ! [illegible] ಎಂದು ಹೇಳಿದರೆ [illegible] ಅಂಥ ಜನರನ್ನು ರಥೋಕ್ತವಾಗಿ ಶಿಕ್ಷಿಸಬೇಕು [illegible]

ಭಟಕಳ— ತಾ ೧೯-೧೨-೪೯ರ "ವೃತ್ತ" ದಲ್ಲಿ [illegible] ಮುಸಲ್ಮಾನ ಸಮಾಜದ [illegible]

[illegible] ಮಕ್ಕಳನ್ನು [illegible] — ಸಂಪಾದಕ]

ಶಿರಾಲಿ— [illegible] — ಸಂಪಾದಕ]

ಹೊನ್ನಾವರ— (ತಾ ೧೯-೧೨-೪೯) [illegible]

[illegible]

(ಮುಂದೆ ಇನ್ನೂ ಇದೆ ನೋಡಿರಿ)

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೆ)

ನೋಟರ-ಸ್ಟ್ಯಾಂಡ, ಹುಬ್ಬಳ್ಳಿ.

ವಿ. ಸೂಚನೆ — ಕೆನರಾದಿಂದ (ಯು ಕೇ ಟಿ, ಡಿ ಕೆ, ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸಿನಿಂದ) [illegible] ಬರುವ ಯಾವತ್ತು ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ ಬೆಂಗಳೂರ ಮೊದಲಾದ ಊರುಗಳ [illegible] ಟಿಕೇಟುಗಳ ವಿಚಾರವು ಮಾಡಲಾಗುವದು ಇದಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ [illegible] ಊಟದ ವ್ಯವಸ್ಥೆ ಇದೆ.

ಮಾಲಕ: — ವ್ಯಾಳೆಪ್ಪಾ ಪ್ರೈ.

ಇದನ್ನು ವಾಮನ ರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್‌"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270 Monday, 9-1-1950.

ಕಾನಡಾವೃತ್ತ

THE KANARA NEWS

ಸ್ಥಳಿಕ ವಿಷಯಗಳು.

ಲೇಖಕ್- ಸ್ಥಳವಂತಿಕ.

[illegible]

ಚಂದಾದಾರರಲ್ಲಿ ಅರಿಕೆ.

[illegible]

—ವ್ಯವಸ್ಥಾಪಕ.

[illegible]

ಇಲ್ಲವೆ [illegible] ದ್ದೇವು ಒಪ್ಪುವರೂ, ಮುಂದೆ ಕಟ್ಟೆಗೆಯ [illegible] ತಿಂಗಳ ಅವಧಿ ಗು ಗದಾರರಿಗೆ [illegible] ಹುಳ್ಳಿ ನಮ್ಮ [illegible] ವಳಿಯಲ್ಲಿ ಎಪ್ರಿಲ ತಾ ೧ ರ ನಂತರ [illegible] ಸದರ ಸಾಗಿಸುವವ ಸ ಮಯದ ಕೆಲಸ [illegible] ಮಾತ ಈಗ ವ ತ್ತು ಏಪ್ರಿಲ ತಾ ೧ ರಲ್ಲಿ ಆರ್ಧ ತಿಂಗಳು ಹೀಗೆ ೧॥ ತಿಂಗಳ ಅವಧಿಯಲ್ಲೇ ಕಟ್ಟಿಗೆಯ ಲಿಲಾಂಗ ಗುತ್ತಿಗೆದಾರರಿಗೆ ಸಿಗುವ ಈ ೧॥ ತಿಂಗಳ ಪುಟ ಎಲ್ಲ ಟಿಯ ವ್ಯಾಪಾರ ಮತ್ತು ಸಾಗ ಟದ ಏರ್ಪಾಟು ಮಾಡಿ ಆ ಕಟ್ಟಿಗೆಯ ನಿರ್ಯಾ ತವನ್ನು ೩ ಅವಧಿಯಲ್ಲೇ [illegible] ಮಾಡ ಗಳ ಸಿಗುವದು ಕಷ್ಟವಾಗಿ [illegible] ವೆಚ್ಚವೂ ಇಷ್ಟು ಬೀಳುವದು ಮಾತ್ರವಲ್ಲ [illegible] ಕಟ್ಟಿ ಗೆಯ ರಫ್ತಾಗದೆ ಬಿದ್ದುಕೊಂಡರೆ ಅದರೊಳ ನ ವೆ ತನ್ನ ಬಡಿಯ ಕಟ್ಟಿಗೆಯು ಒಡೆದು ಹಾಳಾಗು ವ ಪರಿಸ್ಥಿತಿ ಬರುವದರಿಂದ ಎಸೆ ಬ ಜನವರಿ ತಿಂಗಳಲ್ಲೇ ಕಟ್ಟಿಗೆಯ ನಿರ್ಯಾತಕ್ಕೆ ಅಪ್ಪಣೆ ಸಿಗಬೇಕೆಂದು ನ್ಯಾಯ್ಯ ಈ [illegible] ಕಟ್ಟಿಗೆ ಯನ್ನು ನಿರ್ಯಾತ ಮಾಡಲು ಗುತ್ತಿಗೆದಾರ ರು ಸರಕಾರಕ್ಕೆ ಕೊಡತಕ್ಕ ಹಣ ಮುಂದಾಗಿ ವಸೂಲ ಕೊಡಲಿಕ್ಕೆ ಗುತ್ತಿಗೆದಾ ರರಿಗೆ ಅನುಕೂಲವಾಗುವದು ನಿರ್ಯಾತ ವೆಚ್ಚವೂ ಕಡಿಮೆ ಬರುವದು, ಸರಕಾರದ ಕೊಸರಿಯ [illegible] ಈ ವರ್ಷ ಜಂಗಲು ಗುತ್ತಿಗೆಗಳ ಸವಾಲುಗಳು ಅಪೇ ಕ್ಷಿಸಿದಷ್ಟು ಏರದೆ [illegible] ಬಂದಿವೆ ದ [illegible] ಯುತ್ತಿದೆ ಹಳೆಯ [illegible] ಉಳಿತವಿಟ್ಟ ದ್ದರೆ [illegible] ಕಲವೊಂದ [illegible] ಸಕಾಲದಲ್ಲಿ ಬಿಟ್ಟು [illegible] ಕೆಲಸವನ್ನು ಸರಕಾರದಂತೆ [illegible] ದು ಜಂಗಲ ಇಲಾಖೆಯವರ ತಪ್ಪು [illegible] ದ್ದರೆ [illegible] ಕೆಲಸವನ್ನು [illegible] ಯೋಗ್ಯ ಕಾಲದಲ್ಲಿ ಮಾ ಡುವ ವ್ಯವಸ್ಥೆಯನ್ನು ಅವರು ಯಾಕೆ ಮಾಡಬಾ ರದು? ಬಿಟ್ಟು [illegible] ಜಂಗಲು [illegible] ಯನ್ನು ಅವರು ನೋಡಿಕೊಳ್ಳುವ ಮಾತ್ರ [illegible] ಆ ಕೆಲಸ ಮಾಡಿಸುವ ಪ್ರಘಾತವನ್ನು [illegible] ದರೆ ಗುತ್ತಿಗೆದಾರರನ್ನು [illegible] ಕಟ್ಟಿಗೆ ಯ ನಿರ್ಯಾತವನ್ನು ಅನವಶ್ಯಕವಾಗಿ ನಿರ್ಬಂಧಿಸ ದುವ ಮತ್ತು ಸರಕಾರದ ಉತ್ಪನ್ನ ಕಡಿಮೆ ಮಾಡಿ ಕೊಳ್ಳುವ ಪ್ರಸಂಗ ತಪ್ಪುವದಿಲ್ಲವೇ?

ನಮ್ಮ ಜಿಲ್ಲೆಯ ಬೇಡಿಕೆಗಳಿಗೆ

ರಾ॥ ಮೊಹಸಿನರವರ ಉತ್ತರಗಳು.

[illegible] ತಾ ೧೫ನೇ ದಿವಸ [illegible] ನಗರ ಸಭೆಯವರು [illegible] [illegible] ಅವರಿಗೆ ಮಾನಪತ್ರವನ್ನು ಕೊಟ್ಟಿದ್ದರು. ಆ ಮಾನಪತ್ರಕ್ಕೆ ಉತ್ತರ ಕೊಡುವಾಗ ಮಂತ್ರಿಗಳು ನಗರಸಭೆಯ [illegible] ಬೇಡಿಕೆಗಳಿಗಷ್ಟೇ ಅಲ್ಲ, ಕಡ್ಡು [illegible] ಜಿಲ್ಲೆಯ ಜನರು ಇಲ್ಲಿಗೆ ಬಂದಾಗ ಭೆಟ್ಟಿಯಾಗಿ, [illegible] ಕೊಂಡಿಟ್ಟ ಎಲ್ಲ ಬೇಡಿಕೆಗಳಿಗೂ ಉತ್ತರಗಳನ್ನು ಕೊಟ್ಟಿ ರುತ್ತಾರೆ. ಅವರ ಆ ಭಾಷಣದ [illegible] ಅವ ಶ್ಯಕಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

ರಾ॥ ಮೊಹಸಿನರವರ ಭಾಷಣ

[illegible] ಇದು ನನ್ನ ಪ್ರಥಮ ಭೆಟ್ಟಿಯಲ್ಲ [illegible]

[illegible] ನಮ್ಮ [illegible] ನಾನು [illegible] ಬಗ್ಗೆ [illegible]

[illegible] ಕಾರವಾರ [illegible] ನಾನು [illegible] ಪ್ರವೇಶ [illegible] ಜಿಲ್ಲೆಯ [illegible] ಸಂಸ್ಕೃತ, ಕಂಡೀಲ [illegible] ಕಾರವಾರ [illegible] — [illegible] — [illegible] — [illegible]

[illegible]

[illegible] ಗ್ರಾಮಗಳು [illegible] ವಿಶ್ವವಿದ್ಯಾಲಯ [illegible]

[illegible] ವಿದ್ಯಾಲಯ [illegible] ಭಾಗದಲ್ಲಿ (ಧಾರವಾಡದಲ್ಲಿ) [illegible] ವಿದ್ಯಾಲಯ [illegible] ವಿಶ್ವವಿದ್ಯಾಲಯ [illegible]

[illegible] 'ಕರ್ನಾಟಕ' ವಿಶ್ವವಿದ್ಯಾ [illegible] ವಿದ್ಯಾರ್ಥಿ [illegible]

[illegible] ವಿದ್ಯಾರ್ಥಿಗಳನ್ನು [illegible] ವಿದ್ಯಾಲಯ [illegible] ವಿದ್ಯಾರ್ಥಿ [illegible]

[illegible] ವಿದ್ಯಾರ್ಥಿಯ [illegible]

[illegible]

[illegible]

[illegible]

ಶ್ರೀ ವಿಜಯಾ ಸಂಗೀತ ನಾಟ್ಯ
ಸಂಘ, ಮುರುಡೇಶ್ವರ
ಇವರು ಮುರುಡೇಶ್ವರದಲ್ಲಿ ತಮ್ಮ
ಪ್ರಥಮ ಪ್ರಯೋಗ

ರಾಜಾ ಹರಿಶ್ಚಂದ್ರ

ಎಂಬ ಪೌರಾಣಿಕ ನಾಟಕವನ್ನು
ಅಭಿನಯಿಸುವರು
[illegible]

ಆರ್. ಕೆ. [illegible], ವ್ಯವಸ್ಥಾಪಕ

ವಿಶೇಷ ವಿಷಯಗಳು.

ಇದೇ ಜನವರಿ ೨೬ಕ್ಕೆ ನಮ್ಮ ರಾಷ್ಟ್ರದ ಹೊಸ ಪ್ರಜಾರಾಜ್ಯ ಕಾರ್ಯಕಲಿಸುವದಷ್ಟೇ ಅಂದು ಮುಂಜನೆ ದಿಲ್ಲಿಯ ದರಬಾರ ಭವನದಲ್ಲಿ ಕೇಂದ್ರ ಕಾನೂನ ಮಂಡಲದ ಸಭಾಸದರ ಮುಂದೆ ಅಧಿಕಾರದಲ್ಲಿಯ ಕೊನೆಗಳಿಗೆಯಲ್ಲಿರುವ ಗವ್ಹರ್ನರ ಜನರಲ್ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮ್ಮ ನಿವಾಸದಿಂದ ದರಬಾರ ಭವನಕ್ಕೆ ಜಯ್ಯೆಭವದಿಂದ ಬಂದು, ಹೊಸ ಲೋಕನಿಯುಕ್ತ ಅಧ್ಯಕ್ಷರಿಗೆ ಸಿಂಹಾಸನದ ಮೇಲೆ ಕೂಡಿಸಿ ಎಲ್ಲ ಅಧಿಕಾರವನ್ನು ಅವರಿಗೆ ಒಪ್ಪಿಸುವರೆಂದು ಪ್ರಕಟವಾಗಿದೆ. ರಾಜಾಜಿಯವರು ಮರುದಿನವೇ ಮದ್ರಾಸಿಗೆ ಹೊರಟು ಹೋಗಲಿರುವರೆಂದ ದಿಲ್ಲಿಯಿಂದ ಬಂದ ವಾರ್ತೆ ಹೇಳುತ್ತದೆ. ಇದರ ಮೇಲಿಂದ ರಾಜಾಜಿಯವರು ಅಧ್ಯಕ್ಷರಾಗಲಿಕ್ಕಿಲ್ಲೆಂದು ಕಂಡುಬರುತ್ತದೆ. ಅಧ್ಯಕ್ಷಸ್ಥಾನಕ್ಕೆ ಡಾ॥ ರಾಜೇಂದ್ರಪ್ರಸಾದರನ್ನು ಆರಿಸುವ ನಿಶ್ಚಯವಾಗಿದೆಂದ ಹಬ್ಬಿದ ಸುದ್ದಿಗೆ ಇದರಿಂದ ಪುಷ್ಟಿ ಸಿಗುತ್ತದೆ. ಸರ್ವಾಧಿಕಾರ ಪದದಿಂದ ನಿವೃತ್ತರಾದ ರಾಜಾಜಿಯವರು ಮುಂದೆ ಯಾವದೇ ಅಧಿಕಾರಸ್ಥಾನವನ್ನು ಸ್ವೀಕರಿಸಲಿಕ್ಕಿಲ್ಲೆಂದು ಹೇಳಲಾಗುತ್ತದೆ. ಹೊಸ ಪ್ರಜಾರಾಜ್ಯ ಉದಯ ಹೊಂದುವ ದಿನ ಎಲ್ಲೆಲ್ಲೂ ಸಮಾರಂಭಗಳು ಜರಗಲಿರುವವು. ಆದರೆ ಈ ಸಮಾರಂಭಗಳಲ್ಲಿ ವಿಶೇಷ ವೆಚ್ಚದ ಆತುಷಬಾಜಿಗಳಿರಬಾರದೆಂದು ಭಾರತ ಸರಕಾರವು ಆಜ್ಞಾಪಿಸಿದೆ. ಅದಕ್ಕನುಸಾರವಾಗಿ, ೨೬ರ ಅನ್ನಸಮಾರಾಧನೆಗಳ ಮೇಲಿನ ಸಂಖ್ಯೆಯ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಬಂದ ಸೂಚನೆಯನ್ನು ಮುಂಬಯಿ ಸರಕಾರವು ತಿರಸ್ಕರಿಸಿಬಿಟ್ಟಿದೆ. ಅಂತು ನಮ್ಮ ಹೊಸ ಪ್ರಜಾರಾಜ್ಯದ ಉದಯ ನಮ್ಮ ಬಡತನಕ್ಕನುಗುಣವಾಗಿಯೇ ಆಗುವದೆಂದು ನಂಬಲಡ್ಡಿಯಿಲ್ಲ.

•.•

ತಾ ೧೫-೧೨-೪೯ರ "ವೃತ್ತ" ದಲ್ಲಿ ತಮ್ಮ ಸಂಬಂಧದಲ್ಲಿ ಪ್ರಕಟವಾದ ಟೀಕೆಯನ್ನು ಅನುಲಕ್ಷಿಸಿ ಈಗ ಮುಂಬಯಿ ಸರಕಾರದ ಲೋಕೋಪಯೋಗಿ ಕಾಮಗಾರಿಗಳ ಖಾತೆಯ ಮಂತ್ರಿಗಳ ಕಾರ್ಯದರ್ಶಿಗಳಾಗಿರುವ ಶ್ರೀ॥ ರಾಮಚಂದ್ರ ಮುಕುಂದ ಪ್ರಭುರವರು ತಾವು "ವೃತ್ತ"ದ ವಿಚಾರಸರಣಿಯವರೇ ಇರುತ್ತೇವೆಂದೂ "ವೃತ್ತ" ದಲ್ಲಿ ಬಂದ ಟೀಕೆ ಅನುಚಿತವಿರುತ್ತದೆಂದೂ ತಿಳಿಸುತ್ತಾರೆ. ತಾವು 'ನವಯುಗ" ಪತ್ರಿಕೆಯ ಪ್ರತಿನಿಧಿಗೆ ಕೊಟ್ಟ ಸಂದರ್ಶನದ ಕಾಲಕ್ಕೆ ನಡೆದ ಎಲ್ಲ ಪ್ರಶ್ನೋತ್ತರಗಳನ್ನು ಸದರಿ ಪ್ರತಿನಿಧಿಯು ಪ್ರಕಟಗೊಳಿಸದೆ ತಾವಾಡಿದ ಕೊನೆಯ ಮಾತುಗಳನ್ನಷ್ಟೇ ಪ್ರಕಟಿಸಿ ತಮಗೆ ಅನ್ಯಾಯ ಮಾಡಿರುತ್ತಾನೆಂದು ಅವರು ದೂರಿರುತ್ತಾರೆ. "ನವಯುಗ"ದ ಪ್ರತಿನಿಧಿಗೂ ಶ್ರೀ॥ ಪ್ರಭುರವರಿಗೂ ನಡೆದ ಮಾತು-ಕಥೆಗಳು ಹೀಗಿವೆ — ತಾವು ರಾಜೀನಾಮೆ ಕೊಟ್ಟಿರುವಿರಾ ಎಂದು ಪ್ರತಿನಿಧಿಯು ಕೇಳಲಾಗಿ, ಕೂಡಲೆ ಕರ್ನಾಟಕ ಪ್ರಾಂತದ ರಚನೆಯಾಗಬೇಕೆಂದು ಇನ್ನಿತರ ಕರ್ನಾಟಕ ಸದಸ್ಯರು ಹೇಳುವ ಮಾತು ತಮಗೆ ಸರ್ವಥಾ ಒಪ್ಪಿಗೆಯಿಲ್ಲೆಂದು ರಾ॥ ಪ್ರಭುರವರು ಉತ್ತರ ಕೊಟ್ಟು ಇನ್ನೂ ಮುಂದುವರಿದು ಹೀಗೆ ಹೇಳಿದರಂತೆ — "ಸ್ವಾತಂತ್ರ್ಯ ನಮ್ಮ ನಿಜವಾದ ಸಂಸ್ಕೃತಿಯ ಬೆಳವಣಿಗೆಗೆ ಮಾರ್ಗ ಸ್ವಚ್ಛಗೊಳಿಸಿದೆ. ನಾವು ನಮ್ಮ ವೃತ್ತಿಯನ್ನುಂಟು ಮಾಡಿ, ಇಡೀ ದೇಶದ ಸರಕಾರ-ದರಬಾರದ ವ್ಯವಹಾರವೆಲ್ಲ ಒಂದೇ ಭಾಷೆಯಿಂದ ನಡೆಯುವಂತೆ ಮಾಡಬೇಕೆಂಬ ತತ್ವದವನಿರುತ್ತೇನೆ. ಆದರೆ ಈ ತತ್ವದ ಪ್ರಚಾರಕ್ಕೆ ಈಗ ಎಡೆಯಿಲ್ಲ. ಕಾಂಗ್ರೆಸ್ಸು ಹಿಂದಿನಿಂದಲೇ ಭಾಷಾನುಗುಣ ಪ್ರಾಂತ-ರಚನೆಯ ತತ್ವವನ್ನು ಒಪ್ಪಿಕೊಂಡಿರುವದರಿಂದ ನನ್ನ ತತ್ವವನ್ನು ಬಹಿರಂಗಪಡಿಸುವದಕ್ಕೆ ಈಗ ಸ್ವಾತಂತ್ರ್ಯವಿಲ್ಲ. ಆದ್ದರಿಂದ ನಾನು ಪ್ರತ್ಯೇಕ ಕರ್ನಾಟಕ ಪ್ರಾಂತದ ರಚನೆಯನ್ನು ವಿರೋಧಿಸಬಾರದು. ಆದರೂ ಆಂಧ್ರ ಪ್ರಾಂತದ ರಚನೆಯ ಬೆನ್ನಿಗೇ ಕರ್ನಾಟಕ ಪ್ರಾಂತವಾಗಬೇಕೆಂಬ ಬೇಡಿಕೆಗೆ ನಾನು ಸಮ್ಮತಿ ಕೊಡಲಾರೆನು. ಕರ್ನಾಟಕ ಪ್ರಾಂತ-ರಚನೆಯ ಪ್ರಶ್ನೆಯನ್ನು ಮುಂದೊತ್ತಿ ಕೇಂದ್ರ ಸರಕಾರವನ್ನು ಸಂಕಟದಲ್ಲಿ ಸಿಕ್ಕಿಸಬಾರದೆಂದೂ, ತನ್ನ ಅನುಕೂಲತೆಯಂತೆ ಪ್ರಾಂತರಚನೆ ಮಾಡಲು ಕೇಂದ್ರ ಸರಕಾರಕ್ಕೆ ಬಿಟ್ಟುಕೊಡಬೇಕೆಂದೂ ನಾನು ೩ ವರ್ಷಗಳ ಹಿಂದೆಯೇ ಶ್ರೀಮಾನ್ ದಿವಾಕರರಿಗೆ ಒಂದು ಪತ್ರ ಬರೆದು ತಿಳಿಸಿದ್ದೆನು. ಆದಿನಿಂದಂತೂ ನಾಡಿನಲ್ಲಿ ಬಹಳ ಘಟನೆಗಳು ಜರಗಿವೆ. ದೇಶದ ಸಾಂಪತ್ತಿಕ ಸ್ಥಿತಿ ಗಂಭೀರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಪ್ರಾಂತ-ರಚನೆಯ ಬಗ್ಗೆ ನಾವು ಹಟಹಿಡಿದು ಚಳವಳಿ ಮಾಡುವದು ಎಂದೆಂದೂ ಸರಿಯಾಗುವಂತಿಲ್ಲ. ಇನ್ನೊಂದು ಗಮನಾರ್ಹ ಮಾತೂ ಉಂಟು. ನನ್ನ ಜಿಲ್ಲೆಯ ಬಹುಜನ ಜನರು ಕೂಡಲೆ ಕರ್ನಾಟಕ ಪ್ರಾಂತವಾಗಬೇಕೆಂದು ಬಯಸುವದಿಲ್ಲ." ಹಾಗಾದರೆ "ರಾ॥ ಜಿನರಾಜ ಹೆಗ್ಡೆ, ರಾ॥ ಗೋಪಿಗ ಇವರಾದ, ಶಾಸ್ತ್ರಿ ಇವರು ನಿಮ್ಮ ಜಿಲ್ಲೆಯ ಪ್ರತಿನಿಧಿಗಳಲ್ಲವೇ?" ಎಂದು ಆ ಮಾತಿಗೆ 'ನವಯುಗ'ದ ಪ್ರತಿನಿಧಿಯು ಪ್ರಶ್ನೆ ಮಾಡಿದನು. "ಜಿಲ್ಲೆಯ ಜನಮನೋಗತ ತಿಳಿಕೊಳ್ಳುವ ಅವರ ಕ್ರಮ ನನ್ನ ಕ್ರಮದಿಂದ ಭಿನ್ನವಿರಬಹುದು. ನನಗಂತೂ ರಾಜೀನಾಮೆ ಕೊಡಬೇಡಿರೆಂದು ಬಹಳ ಜನರು ತಿಳಿಸಿರುತ್ತಾರೆ" ಎಂದು ರಾ॥ ಪ್ರಭುರವರು ಉತ್ತರ ಕೊಟ್ಟು, ಕೊನೆಗೆ "ನಾನು ಭಾಷಾನುಗುಣ ಪ್ರಾಂತ ರಚನೆಯನ್ನು ವಿರೋಧಿಸುವದಿಲ್ಲ. ಆದರ ಊಹಾಪೋಹ ಮಾಡಲು ನನಗೆ ಇನ್ನೂ ಅವಧಿ ಬೇಕು. ಶ್ರೀಮಾನ್ ದಿವಾಕರರು ಏನು ಮಾಡುವರೆಂಬುದನ್ನೂ ಪ್ರತ್ಯಕ್ಷದೊಳಗೆ ಮುಂದೆ ಎಂತೆಂತಹ ಸ್ಥಿತ್ಯಂತರಗಳು ಆಗುತ್ತವೆಂಬುದನ್ನೂ ಕೂಡ ನಾನು ನಿರೀಕ್ಷಿಸಬೇಕಾಗಿದೆ" ಎಂದು ಹೇಳಿ ಮಾತುಕತೆಯನ್ನು ಮುಗಿಸಿದರು. "ನವಯುಗ" ದ ಪ್ರತಿನಿಧಿಯು ರಾ॥ ಪ್ರಭುರವರ ಸಂಪೂರ್ಣ ಭೂಮಿಕೆಯನ್ನು ಜನತೆಯ ಮುಂದಿಡದೆ ಕೊನೆಯ ಮಾತನ್ನಷ್ಟೇ ಪ್ರಕಟಗೊಳಿಸಿದುದು ಅನುಚಿತವೆಂದು ನಮ್ಮ ಅಭಿಮತವಿದೆ.

•.•

ಗೋಕರ್ಣದೊಳಗಿನ ನರಮೇಧದ ಖಟ್ಲೆಯ ಸಾಧಕಬಾಧಕ ವಿಚಾರ ಕಾರವಾರದಲ್ಲಿ ರೆಸಿಡೆಂಟ ಮೆಜಿಸ್ಟ್ರೇಟರ ಮುಂದೆ ನಡೆದಿದೆಯಷ್ಟೇ. ಈಗಾಗ ಈ ಖಟ್ಲೆಯೊಳಗೆ ಕೆಲವು ಪ್ರತ್ಯಕ್ಷದರ್ಶಿ ಸಾಕ್ಷಿಗಳ ಜಬಾಬಿಯಾಗಿರುತ್ತಿದ್ದು, ಆವರೆಗಾದ ಸಾಕ್ಷಿಗಳ ಹೇಳಿಕೆಯ ಮೇಲಿಂದ ಫಿರ್ಯಾದಿ ಪಕ್ಷದ ಕಥೆಯು ಇದಿನಂತೆ ಇರುತ್ತದೆಂದು ಊಹಿಸಬೇಕಾಗುತ್ತದೆ — ತಾ ೧೬-೩-೧೯೪೯ನೇಗೆ ಯಾವಗಲ್ಲ ಗ್ರಾಮದ ಯಲ್ಲಪ್ಪಾ ಬಸಪ್ಪಾ ಎಂಬವನು ಲಿಂಗಾಯತ ಜಾತಿಯ ೧ ಗಂಡಸು, ೫ ಮಂದಿ ಹೆಣ್ಣುಮಕ್ಕಳು ಮತ್ತು ೪ ಮಕ್ಕಳು ಹೀಗೆ ಅಂತು ೧೦ ಜನರನ್ನು ಗೋಕರ್ಣಕ್ಕೆ ಕರೆತಂದನು. ಮರುದಿನ ಪೆಡ್ಡಿನಾರದ ಸ್ವಾಮಿಯು ಬಂದು ಮುಟ್ಟಿದನು. ಈ ಸ್ವಾಮಿಯ ಮೇಲೆ ಮುನ್ನಾಣದಿನ ಬಂದ ಲಿಂಗಾಯತ ಜನರು ಪೂಜ್ಯ ಭಾವನೆಯಿತ್ತಂಬಂತೆ ತೋರುತ್ತದೆ. ವಿಶೇಷವಾಗಿ ಹೆಂಗಸರು ಆ ಸ್ವಾಮಿಯ ಮೇಲೆ ಮರುಳಾದವರಂತೆ ಕಾಣುತ್ತಿದ್ದರು. ಸ್ವಾಮಿಯು ಬಂದ ಮೇಲೆ ಎಲ್ಲರೂ ಜಟಾಯು ತೀರ್ಥಕ್ಕೆ ಹತ್ತಿರವಿರುವ ಸಣ್ಣ ಗುಡಿಯಲ್ಲಿ ಇಳಕೊಂಡರು. ಯಲ್ಲಪ್ಪನೂ ಅವರ ಜೊತೆಗೆ ಜಟಾಯು ತೀರ್ಥಕ್ಕೆ ಹೋಗಿದ್ದನು.

ತಾ ೧೮—೩—೪೯ನೇ ದಿನ ಸಂಜೆ ಆರೋಪಿಗಳಾಗಿರುವ ಶಂಕರ ಸುಬ್ಬಾ ಭಟ್ಟ ಗೋಪಿ ಮತ್ತು ಲಕ್ಷ್ಮೀನಾರಾಯಣ ಸುಬ್ರಾಯ ಭಟ್ಟ ಧರೇಶ್ವರ ಇವರಿಬ್ಬರೂ ಅಂಬೀರ ಜಟ್ಟಿ ಇವನನ್ನು ಭೆಟ್ಟಿಯಾಗಿ, ಆ ರಾತ್ರಿ ಜಟಾಯು ತೀರ್ಥದ ಬಳಿಯಲ್ಲಿ ಒಂದು ದೋಣಿಯನ್ನು ತಂದು ತಯಾರಿಡಬೇಕೆಂತಲೂ, ಬೇರೆ ಕೆಲವು ಅಂಬಿಗರನ್ನು ಕರೆತರಬೇಕೆಂದೂ ಅಕ್ಕಾಗಿದ್ದ ಮತ್ತು ಮಹತ್ವದ ಒಂದು ಕೆಲಸ

(ಮುಂದೆ ೬ನೇ ಪುಟ ನೋಡಿರಿ)

ಪ್ರಯಾಣಿಕರ ಇಂದಿನ ಅವಶ್ಯಕತೆ.?

ಸ್ವಚ್ಛತೆ! ವೇಳೆ!! ಸೌಕರ್ಯ!!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲಾಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೆ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಸೂಚನೆ— ಕೆನರಾದಿಂದ (ಯು ಕೇ ಟಿ, ಡಿ ಟೆ, ಕಲಬುಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ಸದರಿ ಲಾಜಿನ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ರಿಜರ್ವದು ಮಾಡಲಾಗುವದು. ಅಲ್ಲದೆ ಪುಣೆ, ಬೆಂಗಳೂರ ಮುಂ ಬಾರಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ.

ಮಾಲಿಕ:— ಮ್ಯಾನೇಜರ್ ಶೈ.

ಸಾಪ್ತಾಹಿಕ ವೃತ್ತಾಂತ.

ಕುಮಟಾ— [illegible]

[illegible]

ಹೊನ್ನಾವರ— [illegible]

ಯನ್ನು ಮಾಡಿದರು ರಾ|| ಮಾಧವ ಎಲ್ಸೂರ ಐ ಎಂ ಎ ಗಿ ಯವರು ಅ[illegible]ಗಿದ್ದ ರಾ|| ನಾರಾಯಣ ಪಾಲೇಕರ ಇವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರು ಸಭೆಯು ಶ್ರೀ ೩ ಮಂದಿ [illegible] ಯಾವದೇ ಲಕದಲ್ಲಿ ಭಗ ವಹಿಸದೆ ತಟಸ್ಥ[illegible]ದ್ದರೆಂದು ತಿಳಿಯುತ್ತದೆ ಸಭೆ ಯ ಪ್ರಾಥಮಿಕ ಕೆಲಸವನ್ನು (ಅಂದಿನ ಸಭಾಸದರು ಆರಿಸಲ್ಪಡುವ ವರೆಗಿನ ಕೆಲಸವನ್ನು) ನಡಿಸಲು ಜಿಲ್ಹಾಧಿಕಾರಿಂದ ನೇಮಿಸಲ್ಪಟ್ಟ ರಾ|| ಹಳದೀಪುರಕರು ಕಾರ್ಯ ಕೆಯ್ದು ಸಭೆಯನ್ನು ವಿಸರ್ಜಿಸಿ ಹೊರಟು ಹೋದ ಮೇಲೆ ನಡೆದ ಸಭೆಯು ಕೇವಲ ಎಷ್ಟರ ಮಟ್ಟಿಗೆ ಉಚಿತ ಮತ್ತು ಕಾಯದೆಶೀರ ಮಾನ್ಯವಿರುತ್ತದೆಂಬುದನ್ನು ಜಿಲ್ಹಾಧಿಕಾರಿ ನಿರ್ಣಯಿಸಬೇಕಾದ ಪ್ರಸಂಗ ಪ್ರಾಪ್ತವಾಗಿದೆ

(ತಾ ೨೪—೧೨—೪೯) ಬೆಳಗಾಂವಿಯ ಲಿಂಗರಾಜ ಕಾಲೇಜಿನ ಪ್ರಾಧ್ಯಾಪಕರಾಗಿರುವ ಶ್ರೀ ರಂಗನಾಥನವರು ಇಂದು ಮುಂಜಾನೆ ನಮ್ಮ ಇಂಗ್ಲಿಶ ಶಾಲೆಯನ್ನು ಸಂದರ್ಶಿಸಿ, ಮುಖ್ಯಾಧ್ಯಾಪಕರ ಬಿನ್ನಹದಂತೆ, ವಿದ್ಯಾರ್ಥಿಗಳಿಗೆ ಉಪದೇಶದ ನಾಲ್ಕು ಮಾತುಗಳನ್ನು ಹೇಳಿದರು ಪರೀಕ್ಷೆಯಲ್ಲಿ ಉತ್ತೀರ್ಣರಾಗ ಬಹುದಷ್ಟೇ ವಿದ್ಯಾರ್ಥಿಗಳು ಗುರಿಯಾಗಿರಕೂಡದೆಂದೂ, ತಮ್ಮ ವ್ಯಕ್ತಿತ್ವದ ವಿಕಾಸ ಮಾಡಿಕೊಳ್ಳುವದರ ಕಡೆ ವಿಶೇಷ ಲಕ್ಷ ಕೊಡಬೇಕೆಂದೂ ಅವರು ಬೋಧಿಸಿದರು ಅವರ ಜೊತೆಗೆ ಬಂದ ಕೆನರಾ ಕಾಲೇಜಿನ ಆಚಾರ್ಯ ಗೋರೆಯವರೂ ಎರಡು ಮಾತುಗಳನ್ನು ಹೇಳಿ, ಜ್ಞಾನಸಂಪಾದನೆಯೇ ವಿದ್ಯಾರ್ಥಿಗಳ ಧ್ಯೇಯವಾಗಿರಬೇಕೆಂದೂ, ಕೇವಲ ಅಭ್ಯಾಸದಲ್ಲೇ ತಲ್ಲೀನರಾಗುವ ವಿದ್ಯಾರ್ಥಿಗಳು ವ್ಯವಹಾರ ಜ್ಞಾನವನ್ನು ಸಂಪಾದಿಸಬೇಕೆಂದೂ ಉಪದೇಶಿಸಿದರು

ಸಂಜೆಯಲ್ಲಿ ಪ್ರೊ|| ರಂಗನಾಥನವರು ಸಂಸ್ಕೃತ ವರ್ಧಕ ಸಂಘದ ಆಶ್ರಯದಲ್ಲಿ ಈಶ್ವರ ಸಭಾಮಂದಿರದೊಳಗೆ ಸೇರಿದ ಸಭೆಯಲ್ಲಿ "ಸಾಮಾಜಿಕ ಪುನರ್ಘಟನೆಯ ಸೂತ್ರಗಳು" ಎಂಬ ವಿಷಯದ ಮೇಲೆ ಬೋಧಪ್ರದ ಭಾಷಣ ಮಾಡಿದರು ರಾಮರಾಜ್ಯವು ಆಕಾಶದಿಂದ ಇಳಿದು ಬರಲಿಕ್ಕಿಲ್ಲೆಂದೂ, ಸಮಾಜದ ಸಂಘಟನೆಯಾದರೆ ಮಾತ್ರ ಅದು ಬರುವದೆಂದೂ, ಬರೇ ಕಾಯದೆಗಳಿಂದ ಸಮಾಜ ಸುಧಾರಣೆಯಾಗದೆಂದೂ, ಅಧಿಕಾರಲಾಲಸೆ ಬಿಟ್ಟು ಸಮಾಜದ ಉದ್ಧಾರಕ್ಕಾಗಿ, ಸಂಸ್ಕೃತಿಯ ವಿಕಾಸಕ್ಕಾಗಿ ನಿರಪೇಕ್ಷ ಬುದ್ಧಿಯಿಂದ ದುಡಿಯುವವರೇ ಸಮಾಜದಲ್ಲಿ ಯೋಗ್ಯ ಸುಧಾರಣೆ ಮಾಡಿ ಇಂದು ರಾಮರಾಜ್ಯ ಕಟ್ಟಬಲ್ಲರೆಂದೂ ಅವರು ಸುಂದರವಾಗಿ ಪ್ರತಿಪಾದಿಸಿದರು.

ಪ್ರೊ|| ರಂಗನಾಥನವರನ್ನು ಗೌರವಿಸುವದಕ್ಕಾಗಿ ಅವರ ಹಳೆಯ ವಿದ್ಯಾರ್ಥಿಗಳು ಇಂದ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಊರ ಪ್ರತಿಷ್ಠಿತರನೇಕರು ಆ ಸಮಾರಂಭಕ್ಕೆ ಉಪಸ್ಥಿತರಿದ್ದರು ಶ್ರೀ ರಂಗನಾಥನ ವ ಆಗ ಹೊಸ ರಾಜ್ಯಘಟನೆಯೊಳಗಿನ ಕೆಲವು ಮೂಲ ತತ್ವ ಗಳನ್ನು ತೋರಿಸಿಕೊಟ್ಟರು "ಮೂಲಭೂತ ಹಕ್ಕುಗಳು" ಎಂಬ ಘಟನೆಯಲ್ಲಿ ಕೊಟ್ಟ ಹಕ್ಕುಗಳು ಅಭಾಸಪೂರ್ಣ ವಾದುವೆಂದ ಅವರ ಅಂಬೋಣ. ಅನೇಕ ವೇಳೆಗೆ ಸರಕಾರ ಅಧ್ಯಕ್ಷರಿಗೆ ಕೊಟ್ಟ ಅಧಿಕಾರಗಳು ಮಿತಿ ಮೀರಿವೆಂದು ಅವರ ಅಭಿಪ್ರಾಯವಿರುತ್ತದೆ

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ ಚಕರ್ಾ ಹುರಿ, ಬಾವಿ ಹಗ್ಗ, ಬ್ರಶ ಮೆಟ್, ಮೆಟಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಹಿಂದುಸ್ತಾನ್ ಕೊಯರ್ ಸೊಸೈಟಿ ಲಿಮಿಟೆಡ್

ಹೊನ್ನಾವರ (ಉ ಕ)

ವಿವಿಧ ವಿಷಯಗಳು (೪ನೇ ಪುಟದಿಂದ ಮುಂದೆ)

ಪುಂಟೇದೂ ಹೇಳಿದ್ದರಂತೆ ಅದರಂತೆ ಅಂಬೀರ ಜಟ್ಟಿಯು ರಾತ್ರಿಯಲ್ಲಿ ದೋಣಿಯನ್ನೂ ಜನರನ್ನೂ ತಕ್ಕೊಂಡು ಜಟಾಯು ತೀರ್ಥಕ್ಕೆ ಹೋದನು ಆ ದೋಣಿ ಮತ್ತು ಜನರನ್ನು ಕೆಳಗೆ ಬೇಲೆಯ ಮೇಲೆ ಬಿಟ್ಟು ಜಟ್ಟಿಯು ಮೇಲೆ ಬಂದಾಗ ಗುಡಿಯಲ್ಲಿ ಮೇಲೆ ಹೇಳಿದ ಲಿಂಗಾಯತ ಜನರ ಜೊತೆಯಲ್ಲಿ (೧) ಶಂಕರ ಭಟ್ಟ ಗೋಪಿ (೨) ಮಹಾದೇವ ಅನಂತ ಅಡಿ ಮುಳೀ, (೩) ಪರಮೇಶ್ವರ ಶ್ರೀನಿವಾಸ ಭಟ್ಟ ಧಾರೇಶ್ವರ (೪) ಗಣಪತಿ ಸುಬ್ರಾಯ ಭಟ್ಟ ಧಾರೇಶ್ವರ ಮತ್ತು (೫) ಲಕ್ಷ್ಮೀನಾರಾಯಣ ಸುಬ್ರಾಯ ಭಟ್ಟ ಧಾರೇಶ್ವರ ಇವರಿದ್ದರಂತೆ ಆರೋಪಿತರು ಆ ಲಿಂಗಾಯತರಿಗೆ ಲಾಡುಗಳನ್ನು ಹಂಚಿದರಂತೆ ಅಂಬೀರ ಜಟ್ಟಿಗೂ ಕೂಡ ಒಂದು ಲಾಡು ಕೊಟ್ಟಿದ್ದರು ಆದರೆ ಆ ಲಾಡು ತಿನ್ನಬೇಡೆಂದು ಗೋಪಿ ಶಂಕರಭಟ್ಟನು ಮೊದಲೇ ಜಟ್ಟಿಗೆ ಮುಂಜಾಗ್ರತೆ ಹೇಳಿಟ್ಟಿದ್ದರಿಂದ ಜಟ್ಟಿಯು ಅದನ್ನು ತಿನ್ನಲಿಲ್ಲ ಲಾಡುಗಳ ಬೆನ್ನಿಗೆ ಚಹಾ ಬಂತು ಈ ಚಹಾಪಾನ ಮುಗಿದ ಒಂದು ಅರ್ಧ ಘಂಟೆಯಲ್ಲಿ ಲಿಂಗಾಯತರೆಲ್ಲ ತೂರಾಡಲಾರಂಭಿಸಿದರು ಮತ್ತು ನಿಶ್ಚೇಷ್ಟರಾಗಿ ಬೀಳಹತ್ತಿದರು. ಇದನ್ನು ನೋಡಿ ಸುಮಾರು ೧೨ ವರ್ಷ ಪ್ರಾಯದ ಹುಡುಗಿಯು — ಈ ಹುಡುಗಿಯು ಅದೇಕೋ ಲಾಡುಗಳನ್ನು ತಿಂದಿದ್ದಿಲ್ಲ — ಕೂಗಲಾರಂಭಿಸಿದಳು ಗೋಪಿ ಶಂಕರ ಭಟ್ಟನು ಆಗ ಆ ಹುಡುಗಿಯ ಕುತ್ತಿಗೆಯನ್ನು ಹಿಚುಕಿದನಂತೆ ಹುಡುಗಿಯ ಕೂಗು ಕೇಳಿ ಬೇರೊಂದು ಗುಡಿಸಲಿನಲ್ಲಿದ್ದ ಸ್ವಾಮಿಯು ಓಡಿಬಂದಿದ್ದನು ಮೇಲೆ ಹೇಳಿದ ಐದೂ ಮಂದಿ ಆರೋಪಿತರು ಅವನ ಮೇಲೆ ಬಿದ್ದು ಅವನನ್ನು ಗಟ್ಟಿಯಾಗಿ ಹಿಡಿದರು. ಆಗ ಶಂಕರ ಭಟ್ಟನು ಕೂಡಲೆ ದೋಣಿಯನ್ನು ತಾ ಎಂದು ಹೇಳಿ ಜಟ್ಟಿಗೆ ಬೇಲೆಗೆ ಕಳಿಸಿದನು ಜಟ್ಟಿಯು ಅದರಂತೆ ಬೇಗ ಓಡಿಹೋಗಿ ದೋಣಿಯನ್ನೂ ೨ ಮಂದಿ ಅಂಬಿಗರನ್ನೂ ಜಟಾಯು ತೀರ್ಥದ ಅಡಿಗೆ ಕಳಿಸಿಕೊಟ್ಟು, ತಾನು ಬೇರೆ ೩ ಮಂದಿ ಅಂಬಿಗರೊಂದಿಗೆ ಗುಡ್ಡ ಹತ್ತಿ ಕಾಲುದಾರಿಯಿಂದ ಜಟಾಯು ತೀರ್ಥಕ್ಕೆ ಬಂದನು ಅಷ್ಟರಲ್ಲಿ ಆರೋಪಿತರು ೧೦ ಶವಗಳನ್ನು ಕೆಳಗೆ ತಂದು ಬಂಡೆಯ ಮೇಲೆ ಇಟ್ಟಿದ್ದರು ಅಂಬಿಗರು ಆ ಶವಗಳಿದ್ದಲ್ಲಿ ಮುಟ್ಟಿದಾಗ, ಶವಗಳ ಹತ್ತಿರ ಗೋಪಿ ಶಂಕರ ಭಟ್ಟ, ಧಾರೇಶ್ವರ ಲಕ್ಷ್ಮೀನಾರಾಯಣ ಭಟ್ಟ, ಧಾರೇಶ್ವರ ಪರಮೇಶ್ವರ ಭಟ್ಟ ಮತ್ತು ೬ನೇ ಆರೋಪಿ ಮುಳೀ ಶೇಷ ಭಟ್ಟರ ಮಗ ಸುಬ್ರಾಯ ಈವಿಷ್ಟು ಮಂದಿ ಇದ್ದರು ಶವಗಳ ಸೊಂಟಕ್ಕೆ ಕಲ್ಲುಗಳನ್ನು ಕಟ್ಟಿ ತಯಾರ ಮಾಡಿಟ್ಟಿದ್ದರು, ಮತ್ತು ಅವನ್ನು ೩ ಕಟ್ಟುಗಳನ್ನಾಗಿ ಕಟ್ಟಿಟ್ಟಿದ್ದರು ಈ ಕಟ್ಟುಗಳನ್ನು ದೋಣಿಗೆ ಕಟ್ಟಿಕೊಂಡು ಹೋಗಿ ಸಮುದ್ರದೊಳಗೆ ಬಿಟ್ಟು ಬರಬೇಕೆಂಬ ಅಂಬಿಗರಿಗೆ ಅಪ್ಪಣೆಯಾಯಿತಂತೆ ಅಂಬಿಗರು ಅದರಂತೆ ಆ ಹೆಣಗಳನ್ನು ಸಮುದ್ರದಲ್ಲಿ ಬಿಟ್ಟುಬಂದಿದ್ದರು ಅಂಬಿಗರು ಹೋಗುವಾಗ [illegible] ಆ ರಾತ್ರಿ ನಡೆದ ವರ್ತಮಾನವನ್ನು ಗುಪ್ತವಿಡಬೇಕೆಂದೂ ಗೌಪ್ಯಸ್ಫೋಟ ಮಾಡಿದರೆ ಅಂಬಿಗರು ದುರ್ಗತಿಯನ್ನು [illegible] ರೆಂದೂ ಆರೋಪಿತರು ಬೆದರಿಕೆ ಹಾಕಿದ್ದರೆಂದೂ ಸಾಕ್ಷಿ ಹೇಳಿದ ಅಂಬಿಗರು ಹೇಳಿರುತ್ತಾರೆ

* *

ಈ ಪರಿಶೋಧದ ಉಪ್ಪೇಕ್ಷವೇನೆಂಬುದು ತಿಳಿದು ಬಂದಿಲ್ಲ ಮೊದ್ಲೆ ಸ್ವಾಮಿಯನ್ನು ಅವನ ಮೇಲ್ಪಾಣಿಪದ ಶಿಷ್ಯಪರಿವಾರವನ್ನೂ ನಿರ್ನಾಮ ಮಾಡಿಬಿಡಬೇಕೆಂದು ಯಾರೋ ಹೊಂಚು ಹಾಕಿರಬೇಕೆಂದೂ ಯುಲ್ಲಪ್ಪನು ಆ ಹೊಂಚುಗಾರರ ಕೈಗೊಂಬೆಯಾಗಿ ವರ್ತಿಸಿರಬೇಕೆಂದೂ ಅನುಮಾನಿಸಬೇಕಾಗುತ್ತದೆ ಪರಿಶೋಧ ನಡೆದ ರಾತ್ರಿಯ ಮರುದಿನದ ಮುಂಜಾನೆಯಲ್ಲಿ ಯುಲ್ಲಪ್ಪನನ್ನು ಗೋಕರ್ಣದಲ್ಲಿ ಕಂಡವರಿದ್ದಾರಂತೆ ಆದರೆ ಅನಂತರ ಅವನು ಫರಾರಿಯಾಗಿದ್ದಾನೆ ಪೋಲೀಸರು ಅವನನ್ನು ಆರೋಪಿ-ಸ್ಥಾನದಲ್ಲಿ ಸೇರಿಸಿದ್ದಾರೆ

ಶವಗಳು ಸಮುದ್ರ ದಂಡೆಯ ಮೇಲೆ ತೇಲಿ ಬಂದಾಗ ಬಹಳ ಕೊಳೆತಿದ್ದವು ಆದರಿಂದ ಅವುಗಳನ್ನು ನೋಡಿ ಹೊಡೆತ ಬಡೆತದ ಗಾಯಗಳೇನೂ ಕಂಡು ಬರಲಿಲ್ಲವೆಂದು ಹೇಳುತ್ತಾರೆ ಶವಗಳ ಕರಳುಗಳನ್ನು ಮುಂಬಯಿಯ ರಾಸಾಯನಿಕ ಪರೀಕ್ಷಕರಿಗೆ ಕಳಿಸಿದ್ದರು ಅವರು ಆ ಕರಳುಗಳಲ್ಲಿ ವಿಷಪ್ರಯೋಗವಾದ ಚಿನ್ಹಗಳೇನೂ ತೋರಿಬಂದಿಲ್ಲೆಂದು ವರದಿ ಮಾಡಿದ್ದಾರೆ

ಅಂತು ಈ ಖಟ್ಲೆಯಲ್ಲಿ (ಯುಲ್ಲಪ್ಪನನ್ನು ಬಿಟ್ಟು) ೬ ಮಂದಿ ಆರೋಪಿತರಿದ್ದಾರೆ ಅವರ ಮೇಲೆ ಕೊಲೆ ಮಾಡಿದ ಮತ್ತು ಕೊಲೆಗೆ ಸಹಾಯ ಮಾಡಿದ ಆರೋಪಗಳಿವೆ ರಾ|| ಬ|| ಚಂದಾವರಕರ, ಶ್ರೀ ಕೃಷ್ಣರಾವ ಹಳದೀಪುರಕರ ಮತ್ತು ಶ್ರೀ ಸಾಧಿ ಇವರು ಆರೋಪಿತರ ವಕಾಲತು ಮಾಡುತ್ತಿದ್ದಾರೆ

— [illegible] ಮತ್ತು ಬ್ರಿಟಿಶ [illegible] ಗಳು [illegible] ತ್ತದೆ ಬ್ರಿಟಿಶ [illegible] ರಗಳ ಬೇರೆ ಈ [illegible] ಹೇಳಲಿಕ್ಕಾಗಲಿಲ್ಲ

ಪತ್ರಿಕಾ—ಪ್ರಕಟನೆ.

ಮುಂಬಯಿ ಸರಕಾರವು ೧೯೪೯ನೇ ಇಸವಿಯ ಬಟ್ಟೆಯ ವ್ಯಾಪಾರಿಗಳಿಗೆ ಪರವಾನೆ ಕೊಡುವ ಅಜ್ಞೆಯಲ್ಲಿ ಒಂದು ತಿದ್ದುಪಡಿ ಮಾಡಿ, [illegible] (Processor)ರ ಪರವಾನೆ ಪಡೆಯಬೇಕೆಂಬ [illegible] ೧೦೦೦ರ [illegible] ಕೆಂದು [illegible] ಅದರಂತೆ ಸರಕಾರದ ಪರವಾನೆ ಬಟ್ಟೆಯನ್ನು ಕೊಂಡುಕೊಳ್ಳುವ [illegible] ಬೇಕಾಗುವದು ಮತ್ತು ಅಲ್ಲದೆ ಸರಕಾರದೊಡನೆ [illegible] ಮಾಡಿಕೊಳ್ಳಬೇಕಾಗುವದು ಅದಲ್ಲದೆ [illegible] ಬಟ್ಟೆಯ ಮೇಲೆ [illegible] ಗುರುತು-ಬೆಲೆಯನ್ನು ಮುದ್ರಿಸುವದರ ಜೊತೆಗೆ, ಬಟ್ಟೆಯ [illegible] ಬೆಲೆಯನ್ನು ಮುದ್ರಿಸುವದಕ್ಕೆ [illegible] ರೆಂದು [illegible] ಮುಂಬಯಿಯ ಟೆಕ್ಸ್ಟೈಲ [illegible] ನ ಪರವಾನೆ ಬಟ್ಟೆಯನ್ನು ಕೊಂಡುಕೊಳ್ಳಬಹುದೆಂದು ಸಹ ಸ್ವಾತಂತ್ರ್ಯ ಕೊಡಲಾಗಿದೆ

(ಜಿಲ್ಹಾಧಿಕಾರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ನಮ್ಮಲ್ಲಿ

ಕನಸ್ ದೇವ್ ಮತ್ತು ಇತರ ಕಂಪನಿಗಳ

"ಚಹಾ"

ಯೋಗ್ಯ ದರದಲ್ಲಿ ಸಿಗುತ್ತದೆ

ವ್ಯಾಪಾರಿ ಮಹಿತಿ ಬರೆಯಿರಿ

L G MAHALE.

Merchant & Agent, ANKOLA N K

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಪಿರಿಟ್ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಒ ಮುಂಚಿತವಾಗಿ ಕೊಟ್ಟರೆ ರೂ ೩
ಅಂಚೆಯಿಂದ ಕಳುಹಿಸಲು ೧ ೦
೬ ತಿಂಗಳಿಗೆ ೨ ೪-೦
ಬಿಡಿ ಸಂಚಿಕೆಗೆ ೦ ೧ ೬
೬ ತಿಂಗಳ ಕಡಿಮೆ ಅವಧಿಗೆ ಚಂದಾ ತೆಗೆದುಕೊಳ್ಳಲಾಗುವದಿಲ್ಲ.
ವರ್ಗಣಿಯ ಹಣವನ್ನು ಮುಂಗಡ ಕಳುಹಿಸಬೇಕು.

Reg. No. B. 1270

Monday, 16-1-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೨೯

ಕುಮಟಾ ಸೋಮವಾರ, ತಾ ೧೬—೧—೧೯೫೦

ಜಾಹೀರಾತುಗಳ ದರ:
೧ ಇಂಚು ಅಗಲ ಸ್ಥಂಭದ ... ರೂ ... ಹೆಚ್ಚಿನ ... ವಿಚಾರಿಸಿ ... ಬಗ್ಗೆ ... ವ್ಯವಸ್ಥಾಪಕರಿಗೆ ಬರೆಯಬೇಕು.



ಕೆನರಾ ಕೊಲೇಜಿಗೆ ಮುಂಬಯಿಯ ಮಹಾಮಂತ್ರಿಗಳ ಆಶೀರ್ವಾದ.

ಕೊಲೇಜಿನ ಆಧಾರಸ್ತಂಭ ಡಾ|| ಎ. ವಿ. ಬಾಳಿಗಾರವರು

ಈ ಹಿಂದೆ ತಿಳಿಸಿದಂತೆ ಕೆನರಾ ಕೊಲೇಜಿನ ಪ್ರಥಮ ಸಮ್ಮೇಲನದ ಪ್ರಧಾನ ಅತಿಥಿಗಳಾಗಿ ಮುಂಬಯಿಯ ಮುಖ್ಯಮಂತ್ರಿ ಶ್ರೀಮಾನ್ ಬಾಳಾಸಾಹೇಬ ಖೇರರವರು ಮಂಗಳವಾರ ಮಧ್ಯಾಹ್ನ ೧|| ಯ ಸುಮಾರಿಗೆ ಗೋಕರ್ಣದಿಂದ ಕುಮಟೆಗೆ ಬಂದು ತಲ್ಪಿದರು. ಅವರ ವಾಸ್ತವ್ಯದ ವ್ಯವಸ್ಥೆಯು ಮುಸಾಫರಿ ಬಂಗಲೆಯ ಮೇಲೆ ಮಾಡಲಾಗಿತ್ತು. ಅಲ್ಲಿ ತಮ್ಮ ಊಟ-ವಿಶ್ರಾಂತಿಗಳನ್ನು ಮುಗಿಸಿ ಮಂತ್ರಿಗಳು ಸಂಜೆಯ ೪ಕ್ಕೆ ಕೆನರಾ ಕೊಲೇಜಿಗೆ ಹೋದರು. ಕೊಲೇಜ ಸಮಿತಿಯವರೂ ಸಮಿತಿಯ ಅಧ್ಯಕ್ಷ ಡಾ|| ಬಾಳಿಗಾರವರೂ ಕೊಲೇಜಿನ ಆಚಾರ್ಯ-ಪ್ರಾಧ್ಯಾಪಕರೂ ಅವರನ್ನು ಮಹಾದ್ವಾರದಲ್ಲಿ ಸ್ವಾಗತಿಸಿ, ಅವರನ್ನು ಹೊಸದಾಗಿ ತಯಾರಾದ ವಿದ್ಯಾರ್ಥಿಗಳ ವಸತಿಗೃಹಕ್ಕೆ ಕರೆದೊಯ್ದರು. ಈ ವಸತಿಗೃಹದಲ್ಲಿ ೬೦ ವಿದ್ಯಾರ್ಥಿಗಳಿಗೆ ಉಳಿಯಲು ಸಾಕಷ್ಟು ಸ್ಥಳವನ್ನೂ, ಅವರಿಗಾಗಿ ಅಡಿಗೆ-ಮನೆ, ಬಚ್ಚಲ ಮನೆ ಮೊದಲಾದವುಗಳನ್ನೂ, ಪ್ರಾಧ್ಯಾಪಕರಿಗಾಗಿ ಬಿಡಾರಗಳನ್ನೂ ನಿರ್ಮಿಸಿದ್ದಾರೆ. ವಸತಿಗೃಹವು ಗುಡ್ಡೆಯ ಅಂಚಿಗೆ ಎತ್ತರವಾದ ಹವಶೀರ ಸ್ಥಳದಲ್ಲಿದ್ದು, ಅಲ್ಲಿಂದ ಒಂದು ಬದಿಗೆ ಕುಮಟೆಯ ಶಹರವೂ ಇನ್ನೊಂದು ಬದಿಗೆ ಅಘನಾಶಿನಿ ಹೊಳೆಯ ದಂಡೆಗುಂಟ ಇರುವ ಪ್ರದೇಶದ ಸುಂದರ ದೃಶ್ಯವೂ ಕಣ್ಣಿಗೆ ಬೀಳುತ್ತಿವೆ. ಮಾನ್ಯ ಬಾಳಾಸಾಹೇಬರು ತಮ್ಮ ಅಮೃತ ಹಸ್ತದಿಂದ ಈ ವಸತಿಗೃಹದ ಉದ್ಘಾಟನೆ ಮಾಡಿ ಅಲ್ಲಿಯ ಸನ್ನಿವೇಶವನ್ನು ಕಣ್ತುಂಬ ನೋಡಿಕೊಂಡು, ಹಾಗೆಯೇ ಕೊಲೇಜ ಮಂದಿರದ ಒಳಗಿನ ಅಂಗಳದಲ್ಲಿ ಕೂಡಿದ ಸಮ್ಮೇಲನ ಸಭೆಗೆ ಬಂದರು. ಈ ಸಮ್ಮೇಲನಕ್ಕಾಗಿ ಮುಂಬಯಿಯಿಂದಲೂ ಹಲವಾರು ಮಂದಿ ಕೊಲೇಜಿನ ಹಿತಚಿಂತಕರು ಬಂದಿದ್ದರು. ಅದಲ್ಲದೆ ಕಾರವಾರ, ಅಂಕೋಲಾ, ಹೊನ್ನಾವರ, ಶಿರಸಿ ಮತ್ತಿತರ ನಗರಗಳಿಂದಲೂ ಅನೇಕ ಪ್ರಮುಖರೂ ಜಿಲ್ಲಾಧಿಕಾರಿ ರಾ|| ಜಾಧವ, ಜಿಲ್ಲಾ ನ್ಯಾಯಾಧೀಶ ರಾ|| ಶ್ರೀಖಂಡೇ, ಜಿಲ್ಲಾ ಪೋಲೀಸ ಸಾಹೇಬರು ಪ್ರಭೃತಿ ಜಿಲ್ಲಾಧಿಕಾರಿಗಳೂ ಸ್ಥಳಿಕ ಪ್ರಮುಖರೂ ಸಮ್ಮೇಲನಕ್ಕೆ ಬಂದಿದ್ದರು. ಇಡೀ ಅಂಗಳವು ಜನರಿಂದಲೂ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಿಂದಲೂ ಕಿಕ್ಕಿರಿದು ತುಂಬಿತ್ತು. ಅಂಗಳದ ಒಂದು ಮೂಲೆಯಲ್ಲಿ ಸಮ್ಮೇಲನದ ವ್ಯವಸ್ಥಾಪಕರು ತಮ್ಮ ನಾಟಕಂದಿರ ಬಗ್ಗೆ, ಸಮ್ಮೇಲನದ ಅಧ್ಯಕ್ಷರನ್ನು ಕೂಡ್ರಿಸುವ ಬಗ್ಗೆ ವೇದಿಕೆಯನ್ನು ನಿರ್ಮಿಸಿದ್ದರು. ಮಂತ್ರಿಗಳು ಸಪತ್ನೀಕರಾಗಿ ಸಭೆಯಲ್ಲಿ ಪ್ರವೇಶ ಮಾಡುತ್ತಲೇ ಸಭಿಕರು ಎದ್ದು ನಿಂತು ಅವರ ಪ್ರಣಾಮಗಳನ್ನು ಸ್ವೀಕರಿಸಿ ಜಯಜಯಕಾರ ಮಾಡಿದರು. ಮಂತ್ರಿಗಳು ಕೆಲ ಹೊತ್ತು ವೇದಿಕೆಯ ಮುಂದುಗಡೆ ಹಾಕಿಸಿಟ್ಟ ಆಸನದಲ್ಲಿ ಕೂತುಕೊಂಡಿದ್ದರು. ಅವರನ್ನು ಮುಂದೆ ಡಾ|| ಬಾಳಿಗಾರವರೂ ಆಚಾರ್ಯ ಗೋರೆಯವರೂ ವೇದಿಕೆಗೆ ಕರಕೊಂಡು ಹೋದರು.

ಡಾ|| ಬಾಳಿಗಾರವರ ಸ್ವಾಗತ-ಭಾಷಣ

ಆ ಮೇಲೆ ಸಮಾರಂಭದ ಮುಖ್ಯ ಅತಿಥಿಗಳಾದ ಬಾಳಾಸಾಹೇಬ ಖೇರರನ್ನೂ ಇತರ ಅಭ್ಯಾಗತರನ್ನೂ ಕೊಲೇಜ ಸಮಿತಿಯ ಪರವಾಗಿ ಸ್ವಾಗತಿಸುತ್ತ ಡಾ || ಬಾಳಿಗಾರವರು — ತಮಗೆ ಕನ್ನಡ ಬರುತ್ತಿದ್ದರೂ ಇತ್ತ ೩೦ ವರ್ಷಗಳಿಂದ ಕನ್ನಡದಲ್ಲಿ ಮಾತಾಡುವ ರೂಢಿಯಿಲ್ಲದ್ದರಿಂದ — ಇಂಗ್ಲಿಷದಲ್ಲಿ ಭಾಷಣ ಮಾಡಿದರು. ಅವರು ಹೇಳಿದ್ದೇನೆಂದರೆ —

ನಮ್ಮ ಈ ಕೊಲೇಜನ್ನು ಸಂದರ್ಶಿಸಲು ನಾನು ಕಳೆದ ನವಂಬರದಲ್ಲಿ ಮುಖ್ಯ ಮಂತ್ರಿಗಳನ್ನು ಬೇಡಿಕೊಳ್ಳಲಾಗಿ ಅವರು ಆನಂದದಿಂದ ಒಪ್ಪಿಕೊಂಡರು. ಇನ್ನಿತರ ಮಹತ್ವದ ಕಾರ್ಯಗಳ ದಾಗ್ಯೂ ತಮ್ಮ ಕಾಲು ಬಹು ಬಿಗಿದಿರುತ್ತಿದ್ದಾಗ್ಯೂ ಇಂದು ಅವರು ಇಲ್ಲಿಗೆ ಬಂದು ನಮ್ಮಲ್ಲಿನ್ನು ಉಪಕೃತ ಮಾಡಿದ್ದಾರೆ.

ಕೆನರಾ ಕೊಲೇಜು ಎಲ್ಲಿ ತೆರೆಯಬೇಕೆಂಬುದು ಎಂಬ ಪ್ರಶ್ನೆ ಹಿಂದೆ ಉದ್ಭವಿಸಿತ್ತು. ಜಿಲ್ಲೆಯೊಳಗೆ ಯಾವ ಭಾಗದವರು ಹೆಚ್ಚಿಗೆ ಹಣ ಕೂಡಿಸಿಕೊಡುತ್ತಾರೋ ಅಲ್ಲಿ ಕೊಲೇಜು ತೆರೆಯತಕ್ಕದ್ದು ಎಂದು ನಾನು ಹೇಳಿದೆ. ಅದರಂತೆ ಕುಮಟೆಯವರು ಮುಂದಾಗಿ ಈ ಕಾಲೇಜು ಸ್ಥಾಪಿಸಿದ್ದಾರೆ. ಈತನಕ ಕೊಲೇಜ ನಿಧಿಗೆ ೩|| ಲಕ್ಷ ರೂಗಳಷ್ಟು ನಿಧಿ ಕೂಡಿದೆ. ಜಿಲ್ಲೆಯ ಇನ್ನಿತರ ಭಾಗಗಳ ಜನರು ಕ್ಷಿಪ್ರದಲ್ಲೇ ಕೈಕುಂಬ ... ಈ ನಮ್ಮ ಕೊಲೇಜು ಜಿಲ್ಲೆಯ ... ವಿಷಯವಾಗುವಂತೆ ಮಾಡುವರೆಂದು ನಾನು ನಂಬಿದ್ದೇನೆ.

ಈ ಜಿಲ್ಲೆಯಲ್ಲಿ ಸರಕಾರದವರು ಒಂದು ಕಲಶಾಲೆ (ಟೆಕ್ನಿಕಲ್ ಇನ್ಸ್‌ಟಿಟ್ಯೂಟ) ಸ್ಥಾಪಿಸುವ ನಿರ್ಧಾರ ಮಾಡಿದ್ದಾರೆಂದು ಕೇಳಿದ್ದೇನೆ. ನಮ್ಮ ಸಮಿತಿಯವರಾದರೂ ಕಲಾಶಾಲೆ, ಸಾಹಿತ್ಯ-ವಿದ್ಯಾಲಯ, ಬೇಸಾಯ ಮಹಾವಿದ್ಯಾಲಯ, ವನವಿದ್ಯಾಲಯ, ವಿಮಾನುಗಾರಿಕೆಯ ವಿದ್ಯಾಲಯ ಮುಂತಾದವನ್ನು ತೆರೆಯುವ ಗುರಿಯನ್ನಿಟ್ಟುಕೊಂಡಿರುವರು. ಕಳೆದ ಜೂನ ತಿಂಗಳಲ್ಲಿ ಸಾಹಿತ್ಯ ಮತ್ತು ಶಾಸ್ತ್ರೀಯ ಶಿಕ್ಷಣಗಳನ್ನು ಕೊಡುವ ಮಹಾವಿದ್ಯಾಲಯ ತೆರೆದಂತೆ ಇದೇ ಬರುವ ಜೂನ ತಿಂಗಳಲ್ಲಿ ಕೆಲವೊಂದು ಉದ್ದಿಮೆಗಳನ್ನು ಕಲಿಸುವ ಕಲಾಶಾಲೆಯನ್ನು ತೆರೆಯಬೇಕೆಂದು ನಿರ್ಧರಿಸಿದ್ದೇವೆ. ಶ್ರೀಮಾನ್ ಮಂಗೇಶರಾವ ಕುಲಕರ್ಣಿಯವರು ಈ ಬಗ್ಗೆ ಅರ್ಧ ಲಕ್ಷ ರೂಗಳ ದತ್ತಿ ಕೊಡಲು ಒಪ್ಪಿರುತ್ತಾರೆ.

ಕೊಲೇಜಿಗೆ ಆಶೀರ್ವಾದವಿತ್ತ ಮಾನ್ಯ ಬಿ. ಜಿ. ಖೇರರವರು.

ಕುಮಟೆಯು ಈ ಜಿಲ್ಲೆಯ ಕೇಂದ್ರದಂತಿದೆ. ಈಗಾಗಲೇ ಇಲ್ಲಿ ಈ ಕೊಲೇಜು ತೆರೆಯಲ್ಪಟ್ಟಿದೆ. ಸರಕಾರದವರ ಕಲಾಶಾಲೆಯೂ ಇಲ್ಲೇ ತೆರೆಯಲ್ಪಟ್ಟರೆ ಉತ್ತಮವಾಗುವದೆಂದು ನನ್ನದೊಂದು ಸೂಚನೆ.

ಈ ಜಿಲ್ಲೆ ವನ್ಯ ಸಂಪತ್ತಿನ ಬೀಡಾಗಿದೆ. ವನವಿದ್ಯಾ ಕೊಲೇಜು ತೆರೆಯಲಿಕ್ಕೆ ಈ ಜಿಲ್ಲೆಯೇ ಪ್ರಶಸ್ತವಿರುತ್ತದೆಂದು ಹೇಳಿದರೆ ತಪ್ಪಾಗುವಂತಿಲ್ಲ.

ಬರೇ ಮಾಟ್ರಿಕ್ ಇಲ್ಲವೆ ಎಸ್ ಎಸ್ ಸಿ ಪರೀಕ್ಷೆ ಕೊಟ್ಟವರಿಗಿಂತ ಇಂದು ತಾಂತ್ರಿಕ ಇಲ್ಲವೆ ಔದ್ಯೋಗಿಕ ಶಿಕ್ಷಣ ಪಡೆದವರ ದರ್ಜೆ ಮೇಲ್ಪಟ್ಟಿದ್ದಿರುತ್ತದೆ. ಇಂತಹ ಶಿಕ್ಷಣಕ್ಕೆ ನಾವು ಪ್ರೋತ್ಸಾಹ ಕೊಡಬೇಕು. ನಮ್ಮ ಈ ಕೊಲೇಜಿನ ಹತ್ತಿರವೇ ಇಂತಹ ಶಾಲೆಗಳ ಸ್ಥಾಪನೆಯಾದರೆ ಈ ಸಂಸ್ಥೆಗಳು ಪರಸ್ಪರ ಪೋಷಕವಾಗಿ ಶಾಲೆ-ಕಾಲೇಜುಗಳ ದರ್ಜೆಯೂ ಉನ್ನತವಾಗುವದೆಂದು ನನ್ನ ಮತವಿದೆ. ಎಂದು ಮುಂತಾಗಿ ಕೊಲೇಜ ಸಮಿತಿಯ ಗೊತ್ತುಗುರಿಗಳನ್ನು ಡಾ|| ಬಾಳಿಗಾರವರು ವಿವರಿಸಿ, ತಾವು

ಈ ಜಿಲ್ಹೆಯ ಏಳಿಗೆ ಸಾಧಿಸಲು ತಾವು ತಮ್ಮ ಕೈಲಾದಷ್ಟನ್ನು [illegible]ವ ನಿಶ್ಚಯ ಮಾಡಿರುತ್ತೇವೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು

ಅವರ ಹಿಂದಿನಿಂದ [illegible] ಆಚಾರ್ಯ ಗೋರೆಯವರು ಕೊಲೇಜಿನ ಕಾರ್ಯ[illegible]-ಆಗಿರುವ ಪ್ರಗತಿಯನ್ನು ವಿವರಿಸಿ ಕೊಲೇಜಿನ ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ಸಹಕಾರದಿಂದ ಸಮಾಜ-ಸೇವೆ ಮಾಡುವ ಕ್ರಮವನ್ನಿಟ್ಟುಕೊಂಡಿರುವರೆಂದೂ ಜನತೆಯೊಳಗೆ ವಿದ್ಯಾಪ್ರಸಾರ ಮಾಡುವದಕ್ಕಾಗಿ ಕೊಲೇಜಿನವರು ಉಪನ್ಯಾಸ-ಮಾಲಿಕೆಯೊಂದನ್ನು ನಡಿಸಿರುವರೆಂದೂ, ಈಗ ಕೊಲೇಜಿನಲ್ಲಿ ೧೩೦ ಮಂದಿ ವಿದ್ಯಾರ್ಥಿಗಳು ಕಲಿಯುತ್ತಿದ್ದರೂ ಬರುವ ವರ್ಷ ಈ ಸಂಖ್ಯೆ ಇಮ್ಮಡಿಗೂ ಹೆಚ್ಚಾಗುವದೆಂದು ತಮ್ಮ ನಿರೀಕ್ಷೆಯುಂಟೆಂದೂ, ಕೊಲೇಜಿನ ಬಾಲ್ಯಾವಸ್ಥೆಯಲ್ಲಿನ ಈ ಪ್ರಗತಿ ಆಶಾಜನಕವಿರುತ್ತದೆಂದೂ ಉಚ್ಚ ಶಿಕ್ಷಣ ಪಡೆಯುವ ಆಶೆಯನ್ನು ತೊರೆಯಬೇಕಾಗಿದ್ದ ಅನೇಕ ಬಡ ವಿದ್ಯಾರ್ಥಿಗಳಿಗೆ ಈ ಕೊಲೇಜು ಉನ್ನತಿಯ ದಾರಿಯನ್ನು ತೆರೆದುಕೊಟ್ಟಿದೆಯೆಂದೂ ಹೇಳಿದರು. ಸರಕಾರೇತರ ಕೊಲೇಜುಗಳ ಪ್ರಾಧ್ಯಾಪಕರ ಸ್ಥಿತಿಯನ್ನು ಸುಧಾರಿಸುವದರ ಕಡೆಗೆ ಮುಖ್ಯಮಂತ್ರಿಗಳು ಲಕ್ಷ್ಯ ಕೊಡಬೇಕೆಂದು ಅವರು ಪ್ರಾರ್ಥನೆಯನ್ನೂ ಮಾಡಿಕೊಂಡರು

ಯಶಸ್ಸಿಂಚಿತನಪರ ಸಂದೇಶಗಳು

ಸಮ್ಮೇಲನ ಮತ್ತು ವಸತಿಗೃಹದ ಉದ್ಘಾಟನೆಯ ಸಮಾರಂಭಗಳಿಗೆ ಬಂದು ಆಶೀರ್ವದಿಸಲು ಕೊಲೇಜ-ಸಮಿತಿಯವರೂ ಸಮ್ಮೇಲನ ಸಮಿತಿಯವರೂ ನಿಮಂತ್ರಿಸಿದ ನೂರಾರು ಮಂದಿ ಮಹಾಶಯರ ಕಡೆಯಿಂದ ಶುಭ ಸಂದೇಶಗಳು ಬಂದಿದ್ದವು. ಸರ್ವಾಧಿಪತಿ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯ, ಸರದಾರ ವಲ್ಲಭಭಾಯಿ, ಮುಂಬಯಿ ವಿಶ್ವವಿದ್ಯಾಲಯದ ಹಿಂದಿನ ಉಪ-ಕುಲಪತಿಗಳಾದ ಸರ್ ರುಸ್ತುಮ ಮಸಾನಿ, ತಾಂತ್ರಿಕ ಶಿಕ್ಷಣದ ಜೊತೆ-ಡಾಯರೆಕ್ಟರರಾಗಿರುವ ಶ್ರೀ|| ತಾರಾಪೋರ, ಮುಂಬಯಿ ಪೋಲೀಸ ಇಲಾಖೆಯ ಕುಮಾರ ಶ್ರೀ|| ಪ್ರವೀಣಸಿಂಗಜಿ ಮತ್ತು ಶ್ರೀ|| ಮಾಧವ ಶಿರೂರ ಹಲವಾರು ಅಧಿಕಾರಸ್ಥರೂ, ಮುಂಬಯಿ, ಅಹಮದಾಬಾದ, ಕೊಲ್ಹಾಪುರ, ಉಡುಪಿ ಮುಂತಾದ ನಗರಗಳಲ್ಲಿರುವ ಹಲವಾರು ಮಹಾ ವಿದ್ಯಾಲಯಗಳ ಆಚಾರ್ಯರೂ, ಶ್ರೀ|| ಕೊಟ್ಟಿಕಾರ ಪದ್ಮನಾಭ ಪೈ, ಡಾ|| ಟಿ ಮಾಧವ ಪೈ, ಶ್ರೀ|| ಟಿ ಆರ್ ಪೈ, ಭಟಕಳದ ದಾಮುದಾ ಸಾಹೇಬ ಮೊದಲಾದವರೂ ಕೊಲೇಜಿಗೂ, ಕೊಲೇಜಿನ ಸಮಾರಂಭಗಳಿಗೂ ಯಶಸ್ಸು ದೊರೆಯಲೆಂದು ಹಾರೈಸಿ ಸಂದೇಶ ಕಳಿಸಿದ್ದರು " ನಿಮ್ಮ ಸಮಾರಂಭಗಳಿಗೆ ಉಪಸ್ಥಿತರಿರಲು ನನಗೆ ಸಾಧ್ಯವಿಲ್ಲದಿದ್ದರೂ ನನ್ನ ಮನಸ್ಸು ನಿಮ್ಮ ಜೊತೆಯಲ್ಲಿರುವದೆಂದು ನಂಬಿಕೊಂಡಿರಿ. ಮಾನ್ಯ ಬಾಳಾಸಾಹೇಬ ಖೇರರ ಅಧ್ಯಕ್ಷತೆಯಲ್ಲಿ ನಿಮ್ಮ ಕಾರ್ಯಕ್ರಮಗಳು ಬಲು ಉತ್ಸಾಹದಿಂದಲೂ ಸಡಗರದಿಂದಲೂ ನೆರವೇರುವವೆಂದು ನನಗೆ ನಂಬಿಗೆಯುಂಟು. ಕೆನರಾ ಕೊಲೇಜಿನಿಂದ ಜಿಲ್ಹೆಯು ಒಳ್ಳೇ ಘನತೆಗೇರುವದೆಂದು ನನಗೆ ಪೂರ್ಣ ವಿಶ್ವಾಸವಿರುವದರಿಂದ ನಾನು ಈ ಕೊಲೇಜಿಗಾಗಿ ನನಗೆ ಸಾಧ್ಯವಿದ್ದ ಸಹಾಯ ಮಾಡುವೆನೆಂದು ನೀವು ವಿಶ್ವಾಸದಿಂದ ಇರಲಡ್ಡಿಯಿಲ್ಲ." ಎಂದು "ಮುಂಬಯಿ ಕ್ರೊನಿಕಲ್" ಪತ್ರಿಕೆಯ ಸೇವಾ-ನಿವೃತ್ತ ಉಪಸಂಪಾದಕ ಶ್ರೀ|| ಪಡಬಿದ್ರಿ ರಾಮರಾಯರು ತಮ್ಮ ಸಂದೇಶದಲ್ಲಿ ಹೇಳಿರುತ್ತಾರೆ " ಕಾರವಾರ ಜಿಲ್ಹೆಯಲ್ಲಿ ಕೊಲೇಜ ಇದ್ದಿಲ್ಲವಾದ್ದರಿಂದ ಬಹಳಷ್ಟು ಯುವಕರು ಕೊಲೇಜ ಶಿಕ್ಷಣದ ಆಸೆಯನ್ನು ತೊರೆಯಬೇಕಾಗುತ್ತಿತ್ತು. ಆ ಶಿಕ್ಷಣಕ್ಕಾಗಿ ಹೊರಗೆ ಹೋದ ಕೆಲವರು ಯೋಗ್ಯ ಶಿಕ್ಷಣ ದೊರೆತರೆ ತಮ್ಮ ದುರ್ದೈವಿ ಜಿಲ್ಹಾ ಬಾಂಧವರೂ ಕೂಡ ಯಾವ ಬೇಕಾದ ಕ್ಷೇತ್ರದಲ್ಲಿ ಬೆಳಗಬಲ್ಲರೆಂಬುದನ್ನು ತೋರಿಸಿಕೊಟ್ಟಿರುತ್ತಾರೆ. ಈಗಲಾದರೂ ನಮ್ಮ ಮುಖ್ಯ ಪ್ರಧಾನರು ಈ ನೂತನ ಸಂಸ್ಥೆಗೆ ಅವಶ್ಯವುಳ್ಳ ಎಲ್ಲ ಸಹಾಯವನ್ನಿತ್ತು, ಅದು ಆರೋಗ್ಯದಿಂದ ಬೆಳೆಯುವಂತೆಯೂ ಸ್ವತಂತ್ರ ಭಾರತದ ಒಂದು ಮಹತ್ತ್ವದ ವಿದ್ಯಾದಾನ-ಕೇಂದ್ರವಾಗುವಂತೆಯೂ ನೋಡಿಕೊಳ್ಳುವರೆಂದು ಹಿಂದೆ ಕುಮಟೆಯಲ್ಲಿಯ ಕೇ ಟಿ ಕಂಪನಿಯ ಮೆನೇಜರರಾಗಿದ್ದ ಮತ್ತು ಈಗ ಸಿ ಪಿ ಸಿ ಕಂಪನಿಯ ಮೆನೇಜರರಾಗಿರುವ ಶ್ರೀ|| ಕೇ ಶ್ರೀನಿವಾಸ ಭಂಡಾರಕರರು ಬರೆದಿರುತ್ತಾರೆ. ಸಾರ್ವಜನಿಕರಂತೆ ಸರಕಾರವೂ ಕೆನರಾ ಕೊಲೇಜಿಗೆ ಸಹಾಯ ಮಾಡಲು ಬಾಧ್ಯರಿರುತ್ತಾರೆಂದೂ ಡಾ|| ಟಿ ಮಾಧವ ಪೈರು ಹೇಳಿ, ಈ ಕೊಲೇಜಿನಿಂದ ವರ್ಷಾನುವರ್ಷ ಮಾತೃಭೂಮಿಯ ಸೇವೆಗಾಗಿ ನೂರಾರು ಪ್ರಬುದ್ಧ ತರುಣರು ಹೊರಬೀಳಲೆಂಬ ಹಾರೈಕೆಯನ್ನು ವ್ಯಕ್ತಗೊಳಿಸಿರುತ್ತಾರೆ. ಆಚಾರ್ಯ ಗೋರೆಯವರು ಬಂದ ಸಂದೇಶಗಳಲ್ಲಿ ಮಾದರಿಗಾಗಿ ೩-೪ ಸಂದೇಶಗಳನ್ನಷ್ಟೇ ಓದಿ ಹೇಳಿದರು

ಕೊಲೇಜ ಸಮಿತಿಯ ವರದಿ

ಆ ಮೇಲೆ ಕೊಲೇಜ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ|| ಲಕ್ಷ್ಮಣ ಕಾಮತರು ಸಮಿತಿಯ ವರದಿಯನ್ನು ಓದಿ ಹೇಳಿದರು. ವರದಿಯನ್ನು ಓದಿ ಹೇಳುವಾಗ, ವಡುವೆ ಡಾ|| ಬಾಳಿಗಾರವರ ಔದಾರ್ಯದ ಬಣ್ಣನೆ ಮಾಡುವಾಗ ಶ್ರೀ|| ಕಾಮತರ ಕಂಠ ಬಿಗಿದು ಬಂತು, ಕಣ್ಣುಗಳೂ ನೀರು ಬಂತು. ಡಾ|| ಬಾಳಿಗಾರವರು ಕೆನರಾ ಕೊಲೇಜಿನ ಬಗ್ಗೆ ತೋರಿಸುತ್ತಿರುವ ಪಿತೃತುಲ್ಯ ವಾತ್ಸಲ್ಯದ ನೆನಪು ಆದಾಗಲೆಲ್ಲ ತಮ್ಮ ಕಣ್ಣಲ್ಲಿ ನೀರು ಬರುತ್ತದೆಂದು ಹೇಳಿ, ಹೇಗಾದರೂ ಸಮಾಧಾನ ಮಾಡಿಕೊಂಡು ತಮ್ಮ ವರದಿಯನ್ನು ಓದಿ ಮುಗಿಸಿದರು. ಅವರ ವರದಿಯ ಸಾರವಿಂತಿದೆ —

ಈಗ ನಮ್ಮ ಕೊಲೇಜಿನಲ್ಲಿ ಇಂಟರ-ಆರ್ಟ್ಸ ಮತ್ತು ಇಂಟರ-ಸಾಯನ್ಸ ವರೆಗಷ್ಟೇ ಕಲಿಸಲು ಅಪ್ಪಣೆ ದೊರೆತಿದೆ. ಈ ವರ್ಷ ೧೩೨ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಕೊಲೇಜಿನಲ್ಲಿ ಈಗ ಒಳ್ಳೇ ಪುಸ್ತಕಗಳ ಸಂಗ್ರಹವಿರುವ ಗ್ರಂಥಾಲಯವಿದೆ, ಉತ್ತಮ ಸಲಕರಣೆಗಳುಳ್ಳ ಪ್ರಯೋಗಶಾಲೆಗಳಿವೆ, ೧೦ ಅಶ್ವಶಕ್ತಿಯ ಎಣ್ಣೆಯ ಇಂಜಿನ್ನುಂಟು, ೩೩೦ ವ್ಹೊಲ್ಟ ವಿದ್ಯುಚ್ಛಕ್ತಿಯನ್ನು ಪೂರೈಸಬಲ್ಲ ವಿದ್ಯುದುತ್ಪಾದನ ಯಂತ್ರವಿದೆ, ೧೨೦ ದೀಪಗಳನ್ನು ಉರಿಸಬಲ್ಲ ಗ್ಯಾಸ-ಉತ್ಪಾದಕ ಯಂತ್ರವೂ ಇದೆ. ಕೊಲೇಜಿನ ಸ್ಥಳ-ಸನ್ನಿವೇಶಗಳನ್ನಂತೂ [illegible]ಸುವದಕ್ಕೆ ಸಾಧ್ಯವಿಲ್ಲ. ಬಂದ ಬಂದವರು ಇದನ್ನು ಹೊಗಳುತ್ತಿದ್ದರೆ.

ಈಗ ನಾವು ೩। ಲಕ್ಷ ರೂ ಖರ್ಚು ಮಾಡಿ ಬರೇ ೨ ಇಮಾರತುಗಳನ್ನು ಕಟ್ಟಿಸಿದ್ದೇವೆ. ೧ ಕೊಲೇಜ ಮಂದಿರ, ಇನ್ನೊಂದು ವಿದ್ಯಾರ್ಥಿಗಳ ನಿಲಯ. ಕೊಲೇಜ-ಮಂದಿರದಲ್ಲಿ ಬೇರೆ ಬೇರೆ ವರ್ಗಗಳ ಕೋಣೆಗಳಿವೆ, ಪ್ರಯೋಗ ಶಾಲೆಗಳಿವೆ, ವಾಚನಾಲಯವಿದೆ, ಗ್ರಂಥಾಲಯವಿದೆ. ಸದ್ಯಕ್ಕೆ ಕೊಲೇಜಿನಲ್ಲಿ ಕಲಿಯುತ್ತಿರುವ ೧೩೨ ವಿದ್ಯಾರ್ಥಿಗಳಿಗೇ ಈ ಮಂದಿರ ಸಾಕಾಗಿಲ್ಲ. ಮುಂದೆ ವಿದ್ಯಾರ್ಥಿಗಳ ಈ ಸಂಖ್ಯೆ ಬೆಳೆಯುವದು ಖಂಡಿತ. ಆದ್ದರಿಂದ ನಾವು ಕೂಡಲೆ ಕೊಲೇಜಿನ ಮುಖ್ಯ ಮಂದಿರದ ಕಟ್ಟೋಣವನ್ನು ಪ್ರಾರಂಭ ಮಾಡಿ, ಅದರ ಒಂದು ಭಾಗವನ್ನಾದರೂ ಮುಗಿಸಬೇಕಾಗಿದೆ.

ಕೊಲೇಜಿನ ಗ್ರಂಥಾಲಯ, ಪ್ರಯೋಗ ಶಾಲೆಗಳ ಸಲಕರಣೆಗಳು ಮುಂತಾದವನ್ನು ಸಂಗ್ರಹಿಸಲಿಕ್ಕೂ ೩ ಬಾವಿಗಳನ್ನು ತೋಡಿಸಲಿಕ್ಕೂ ೧ ಲಕ್ಷ ರೂಪಾಯಿಗಳಿಗೂ ಹೆಚ್ಚು ವೆಚ್ಚ ಮಾಡಿರುತ್ತೇವೆ. ವಿಶ್ವವಿದ್ಯಾಲಯದ ಕಡೆ ರೂ ೫೫೦೦೦ದಷ್ಟು ಭದ್ರತೆಯ ಇಡಗಂಟನ್ನಿಟ್ಟಿದ್ದೇವೆ. ಇದೆಲ್ಲ ಕಾರ್ಯ ಡಾ|| ಬಾಳಿಗಾರವರ ಪುಣ್ಯದಿಂದ ನಡೆದಿದೆ. ಅವರು ನಮ್ಮ ಕೊಲೇಜಿಗಾಗಿ "ಭಿಕ್ಷಾಂ ದೇಹಿ" ಎಂದು ಹೇಳುತ್ತ ಹಣ ಸಂಗ್ರಹಿಸಿಕೊಟ್ಟಿದ್ದಾರೆ, ಸಾಲವನ್ನೂ ತೆಗೆದು ಹಣ ಪೂರೈಸಿದ್ದಾರೆ, ತಮ್ಮ ಸ್ವಂತ ಬೊಕ್ಕಸದೊಳಗಿಂದಲೂ ಹೇರಳ ಹಣ ಕೊಟ್ಟಿರುತ್ತಾರೆ ಸುಮಾರು ೧। ಲಕ್ಷ ರೂ ಅವರಿಗೆ ನಮ್ಮಿಂದ ಸಲ್ಲಬೇಕು. ಡಾ|| ಬಾಳಿಗಾರವರು ಅನುಪಮ ಔದಾರ್ಯದಿಂದ ನಮಗೆ ನೆರವನ್ನು ಇತ್ತಿದ್ದಿಲ್ಲವಾದರೆ ನಮ್ಮ ಕೊಲೇಜಿನ ಕನಸು ನನಸಾಗಲು ಇನ್ನೂ ಎಷ್ಟೋ ಕಾಲ ಉರುಳಬೇಕಾಗುತ್ತಿತ್ತು.

ಮುಂಬಯಿ ಸರಕಾರದ ಕಡೆ ಅಂದರೆ ಇಂದಿನ ನಮ್ಮ ಅಧ್ಯಕ್ಷರ ಕಡೆ ನಾವು ೩ ಬೇಡಿಕೆಗಳನ್ನು ಇಟ್ಟಿದ್ದೆವು. ಕೊಲೇಜು ತಲೆ ಎತ್ತಿರುವ ಈ ವಿಸ್ತೀರ್ಣ (೩೦ ಎಕರೆ) ಸ್ಥಳದ ದಾನ, (೨) ಕೊಲೇಜ ಇಮಾರತುಗಳಿಗಾಗಿ ಬೇಕಾಗುವ ಇಮಾರತ ಕಟ್ಟಿಗೆಯ ದಾನ ಮತ್ತು (೩) ಧನ-ಸಹಾಯ. ಅವುಗಳಲ್ಲಿ ನಮ್ಮ ಮಾನ್ಯ ಅತಿಥಿಗಳು ಮೊದಲಿನ ೨ ಬೇಡಿಕೆಗಳನ್ನು ಕೂಡಲೇ ಮಾನ್ಯ ಮಾಡಿ ಪೂರೈಸಿದರು. ೩ನೆಯ ಬೇಡಿಕೆಯನ್ನು ಪೂರೈಸಿರುವದಿಲ್ಲ. ಇಂದು ನಮಗೆ ಕನಿಷ್ಠ ೬ ಲಕ್ಷ ರೂಪಾಯಿಗಳಾದರೂ ಬೇಕು. ಮಾನ್ಯ ಮಂತ್ರಿಗಳು [illegible] ಸಂಧಿಯಲ್ಲವಾದರೂ ನಮಗೆ ತಕ್ಕಷ್ಟು ಧನಸಹಾಯವಿತ್ತು ಕಾಯಬೇಕಾಗಿ ವಿನಂತಿ ಎಂದು ಹೇಳಿ ಕೊಲೇಜ ನಿಧಿಗೆ ದೊಡ್ಡ ದೊಡ್ಡ ಮೊತ್ತದ ಆಂಶಿಕ ವಂತಿಗೆಗಳನ್ನಿತ್ತ ಕೆಲವರ ಹೆಸರುಗಳನ್ನೂ ಓದಿ ಹೇಳಿದರು. ಮುಂಬಯಿಯ ನಿರ್ಣಯ ಸಾಗರ ಮುದ್ರಣಾಲಯದ ಒಡೆಯರು ತಮ್ಮಲ್ಲಿ ಅಚ್ಚಾದ ಪ್ರತಿಯೊಂದು ಪುಸ್ತಕದ ಒಂದೊಂದು ಪ್ರತಿಯನ್ನು ಕೊಲೇಜಿಗೆ ಅರ್ಪಿಸಿದ್ದಾರೆಂದೂ, ಡಾ|| ಬಾಳಿಗಾರವರು ರೂ ೨೦೦೦೦, ಮುಂಬಯಿ ಸೇಂಟ ಜೇವಿಯರ ಕೊಲೇಜದ ಮಾಜಿ ಪ್ರಿನ್ಸಿಪಾಲರು ರೂ ೧೫೦೦೦, ರಾ|| ನಾರಾಯಣ ತಿಮ್ಮಣ್ಣ ಹೆಗಡೆಯವರು ರೂ ೧೦೦೦೦ ಕುಮಟೆಯ ರಾ|| ದಾಮೋದರ ವಿಠೋಬ ಶ ನಾಯಕ ಇವರು ರೂ ೧೦೦೦೦ ಕುಮಟೆಯ ಮ್ಯುನಿಸಿಪಾಲಿಟಿ ರಾ| ಮಹಾಬಳೇಶ್ವರ ಭಟ್ಟ ಗೋಪಿ, ರಾ|| ರಾಮಕೃಷ್ಣ ಎಸ್. ಕಲಬಾಗ, ರಾ| ಮಂಗೇಶರಾವ ಎಸ್ ಕುಲಕರ್ಣಿ ಮತ್ತು ಶ್ರೀಮತಿ ಸರಸ್ವತೀಬಾಯಿ ಹಾಗೂ ರಮಾಬಾಯಿ ಹೊನ್ನಾವರ (ಕೂಡಿ) ಪ್ರತಿಯೊಬ್ಬರು ರೂ ೫೦೦೦ ವಂತಿಗೆಗಳನ್ನಿತ್ತಿರುವರೆಂದೂ ಹೇಳಿ ತಮ್ಮ ವರದಿಯನ್ನು ಮುಗಿಸಿದ

ಜಿಲ್ಲೆಯ ಜನರು ಕೊಲೇಜಿಗೆ ಯಥಾಶಕ್ತಿ ಕಾಣಿಕೆಗಳನ್ನು ಮೊದಲು ಸಲ್ಲಿಸಲಿ !

...ರು ಬಹುಮಾನಗಳನ್ನು ಹಂಚಿದರು ಕಾರ್ಯದರ್ಶಿಗಳ ವರದಿಯ ವಾಚನವಾದ ಮೇಲೆ ಕೊಲೇಜಿನ ಆಟ-ಸ್ಪರ್ಧೆಗಳಲ್ಲೂ ಭಾಷಣ ಸ್ಪರ್ಧೆಗಳಲ್ಲೂ ಗೆದ್ದವರಿಗೆ ಮುಖ್ಯಮಂತ್ರಿಗಳ ಸೌಭಾಗ್ಯವತಿಯವರ ಕಡೆಯಿಂದ ಬಹುಮಾನಗಳನ್ನು ಕೊಡಿಸಲಾಯಿತು. ರಾ|| ಸಿ ಆರ್ ನಾಯ್ಕ ಬವರಿಗೆ ೭ ಬಹುಮಾನಗಳು ಸಿಕ್ಕಿದ್ದನ್ನು ನೋಡಿ ಸಕಲರೂ ಆದ ಕ್ಷಣ ಚಕಿತರಾದರು ಮತ್ತು ಅವರನ್ನು ಚಪ್ಪಾಳೆಗಳಿಂದ ಅಭಿನಂದಿಸಿದರು

ಮುಂತ್ರಿಗಳ ಅಧ್ಯಕ್ಷೀಯ ಭಾಷಣ

ಮುಖ್ಯ ಮಂತ್ರಿಗಳು ಹಿಂದಿಯಲ್ಲಿ ಮಾತಾಡಲಾರಂಭಿಸಿ, ಇಂಗ್ಲೀಷದ ಬದಲು ಹಿಂದಿಯೇ ಸರಕಾರ ದರಬಾರದ ಭಾಷೆಯಾಗಬೇಕೆಂದು ನಿರ್ಣಯವಾಗಿರುವದರಿಂದ ಇಂಗ್ಲೀಶ ಭಾಷೆಯ ಪ್ರಭುತ್ವ ಸಂಪಾದಿಸಲು ಮಾಡಬೇಕಾಗುತ್ತಿದ್ದ ಶ್ರಮದ ಒಂದಂಶವನ್ನಾದರೂ ಶ್ರಮ ಮಾಡಿ ನಾವು ಈಗ ಹಿಂದಿ ಕಲಿಯಬೇಕೆಂದು ಹೇಳಿದರು ಮತ್ತು ಕೊಲೇಜ ಸಮಿತಿಯ ಕಾರ್ಯದರ್ಶಿಗಳ ಸೂಚನೆಯಂತೆ ಮರಾಠಿಯಲ್ಲಿ ಮಾತಾಡಿದರು ಅವರು ಹೇಳಿದ್ದೇನಂದರೆ -

ನಿಮ್ಮ ಈ ಕೊಲೇಜು ಒಳ್ಳೇ ಪ್ರಶಸ್ತ ಸ್ಥಳದಲ್ಲಿದೆ ಒಂದು ಬದಿಗೆ ವಿಶಾಲ ಮಹಾಸಾಗರವಿದೆ, ಇನ್ನೊಂದು ಬದಿಯಲ್ಲಿ ಸದಾ ಹಚ್ಚಹಸರಾಗಿರುವ ಅರಣ್ಯವಿದೆ, ಈ ಸನ್ನಿವೇಶ ಕಂಡರೆ ಪೂರ್ವಕಾಲದ ಗುರುಕುಲಗಳ ನೆನಪಾಗುತ್ತಿದೆ ವಿದ್ಯೆ ಕಲಿಯಲು ದೊಡ್ಡ ದೊಡ್ಡ ಇಮಾರತುಗಳು ಬೇಕಾಗಿಲ್ಲ ವಿದ್ಯೆ ಕಲಿಸಬೇಕೆಂಬ ಉತ್ಕಂಠೆಯುಳ್ಳ ಗುರುಗಳೂ ವಿದ್ಯೆ ಕಲಿಯಬೇಕೆಂಬ ಹಂಬಲವುಳ್ಳ ವಿದ್ಯಾರ್ಥಿಗಳೂ ಕೂಡಿದಲ್ಲೇ ನಿಜವಾದ ವಿದ್ಯಾಲಯಗಳು ಉಂಟಾಗುತ್ತಿವೆ ನಿಮ್ಮ ಜಿಲ್ಲೆಯಲ್ಲಿ ಬುದ್ಧಿವಂತಿಕೆಗೆ ನ್ಯೂನತೆಯಿಲ್ಲ ಮುಂಬಯಿಯಲ್ಲಿ ಯಾವದೇ ಬೇಂಕು ನೋಡಿರಿ, ಕಚೇರಿ ನೋಡಿರಿ, ಪೇಢಿ ನೋಡಿರಿ, ನಿಮ್ಮ ಜಿಲ್ಲೆಯ ಇಲ್ಲವೆ ದಕ್ಷಿಣ ಕಾನಡಾ ಜಿಲ್ಲೆಯ ನಾಲ್ಕಾರು ಮಂದಿಯಾದರೂ ಅಲ್ಲಿ ಪ್ರಮುಖ ಸ್ಥಾನಗಳನ್ನು ವ್ಯಾಪಿಸಿದ್ದು ಕಂಡುಬರುವದು ಆದರಿಂದ ನಿಮ್ಮ ಈ ಕೊಲೇಜಿನ ಭವಿಷ್ಯತ್ಕಾಲ ಉಜ್ವಲವಾಗುವದೆಂಬುದಕ್ಕೆ ನನಗೆ ಸಂದೇಹವಿಲ್ಲ ಡಾ॥ ಬಾಳಿಗಾರವರಂತಹ ಉದಾರ ಹೃದಯಿಗಳ ಸಹಾಯದಿಂದ ನಿಮ್ಮ ಬಯಕೆ ಕೈಗೂಡುವದು.

ಇನ್ನು ನೀವು ಸರಕಾರದಿಂದ ಧನಸಹಾಯ ಕೊಡಿಸಬೇಕೆಂದು ಬೇಡಿದ್ದೀರಿ, ಮುಂಬಯಿ ಇಲಾಖೆಯಲ್ಲಿ ಮುಂಬಯಿ, ಗುಜರಾಥ, ಬಡೋದಾ, ಮಹಾರಾಷ್ಟ್ರ, ಕರ್ನಾಟಕ ಮತ್ತು ಮಹಿಳೆಯರದು ಹೀಗೆ ೬ ವಿಶ್ವವಿದ್ಯಾಲಯಗಳಿವೆ ಹಿಂದೆ ಮುಂಬಯಿ ಸರಕಾರವು ಎಲ್ಲ ಬಗೆಯ ಶಿಕ್ಷಣಕ್ಕಾಗಿ ೩ ಕೋಟಿ ರೂ ಖರ್ಚು ಮಾಡುತ್ತಿತ್ತು. ಈಗ ಶಾಲಾ-ಶಿಕ್ಷಣದ ಖರ್ಚೇ ೬ ಕೋಟಿ ರೂ.ಗಳಿಗೆ ಮುಟ್ಟಿದೆ ನಮ್ಮ ಹೊಸ ಪ್ರಜಾರಾಜ್ಯದ ಘಟನೆಯಂತೆ ದೇಶದೊಳಗಿನ ಎಲ್ಲ ಪ್ರೌಢವಯಸ್ಕರಿಗೆ ಮತಾಧಿಕಾರ ಕೊಡಲಾಗಿದೆ ಆ ಮತಾಧಿಕಾರದ ಸರಿಯಾದ ಉಪಯೋಗ ಮಾಡಲು ಜನರಿಗೆ ಯೋಗ್ಯ ಶಿಕ್ಷಣ ಕೊಡಬೇಕಾಗಿದೆ ಆದರಿಂದ ಪ್ರಾಥಮಿಕ ಶಿಕ್ಷಣದ ಕಡೆಗೇ ನಾವು ಹೆಚ್ಚಿಗೆ ಲಕ್ಷ್ಯ ಪುರೈಸಬೇಕಾಗಿದೆ ವಿಶ್ವವಿದ್ಯಾಲಯೀನ ಶಿಕ್ಷಣಕ್ಕಾಗಿ ಹೆಚ್ಚಿಗೆ ಖರ್ಚ ಮಾಡಲು ನಮಗೆ ಸಾಧ್ಯವಾಗುವಂತಿಲ್ಲ ನಿಮ್ಮ ಈ ಕೊಲೇಜಿಗೆ ನಾವು ವಿಶೇಷ ಧನಸಹಾಯ ಮಾಡಿದರೆ ಬೇರೆ ಕೊಲೇಜುಗಳು ದೂರುವವು ಆದರಿಂದ ರಾ॥ ಕಾಮತರು ಹೇಳಿದಂತೆ ೩ ವರ್ಷಗಳ ಹಿಂದೆ ನಾನು ತಿರಸ್ಕರಿಸಿದ ಅವರ ಹಿಂದಿನ ಬೇಡಿಕೆಯನ್ನು ಇಂದೂ ನಾನು ತಿರಸ್ಕರಿಸಬೇಕಾಗಿದೆ ನಾನು ಟೆಕ್ ವಿದ್ಯಾಪೀಠದ ಕುಲಪತಿಯಿರುತ್ತೇನೆ ನಾನು ಮಹಾಮಂತ್ರಿಯೂ ಶಿಕ್ಷಣ ಮಂತ್ರಿಯೂ ಆದ ಮೇಲೆ ಈ ವಿದ್ಯಾಪೀಠದವರು ಆಶಾಭರಿತರಾಗಿ ಹಲವಾರು ಯೋಜನೆಗಳನ್ನು ಮಾಡಿದರು, ಮತ್ತು ಸರಕಾರದಿಂದ ಹಣ ಕೊಡಿಸಬೇಕಾಗಿ ನನ್ನ ಕಡೆ ಹೇಳಿಕೊಂಡರು ನಾನು ಒಪ್ಪಲಿಲ್ಲ ಅವರಿಗೆ ಬೇಕಾದ ಹಣವನ್ನು ನಾನು ಜನರ ಕಡೆ ಯಾಚನೆ ಮಾಡಿ ಕೂಡಿಸಿಕೊಟ್ಟೆ ಹೊರತು ಸರಕಾರದಿಂದ ಕೊಡಿಸಲಿಲ್ಲ ಸರಕಾರದ ಹಣದ ವಿಶ್ವಸ್ತರು ನಾವು ಪಕ್ಷಪಾತವಿಲ್ಲದೆ ನಾವು ಅವನ್ನು ವಿನಿಯೋಗಿಸಲು ಬದ್ಧರಿದ್ದೇವೆ ಆದರೂ ಕ್ರಮದಂತೆ ನಿಮ್ಮ ಕೊಲೇಜು ವ್ಯವಸ್ಥಿತ ಮಟ್ಟಕ್ಕೆ ಬಂದ ಮೇಲೆ ನಿಮಗೆ ಧನಸಹಾಯ ಸಿಗುವದು ಅಶಕ್ತ ಮಕ್ಕಳಿಗೆ ಶಿಷ್ಯವೃತ್ತಿಗಳು ಹೆಚ್ಚಿಗೆ ಹಾಲು ಮತ್ತು ವಿಶೇಷ ಪೋಷಕ ಅನ್ನ ಕೊಡುವಂತೆ ನಿಮ್ಮ ಕೊಲೇಜಿಗೆ ಬೇಕಾದರೆ ಹೆಚ್ಚಿನ ಧನಸಹಾಯ ಕೊಡಬಹುದು. ಆದರೆ ಆರಂಭದಲ್ಲಿ ಜಿಲ್ಲೆಯ ಪ್ರತಿಯೊಬ್ಬನು ತಾನು ತನ್ನ ಜಿಲ್ಲೆಯ ಈ ಅಭಿಮಾನಾಸ್ಪದ ಸಂಸ್ಥೆಗೆ ಯಥಾಶಕ್ತಿ ಸಹಾಯ ಮಾಡಬೇಕು ಕೊಲೇಜಿನ ಸಮಿತಿಗೆ ೬ ಲಕ್ಷ ರೂ ಬೇಕಂತೆ ಅದರಲ್ಲಿ ೩ ಲಕ್ಷ ಕೂಡಿದೆ ಉಳಿದ ೩ ಲಕ್ಷ ಜಿಲ್ಲೆಯ ಜನರಿಂದ ಕೂಡಿಸುವದು ಕಠಿಣವೆಂದು ನನಗನಿಸುವದಿಲ್ಲ

ನಮ್ಮ ಶಿಕ್ಷಣ ಪದ್ಧತಿಯಲ್ಲಿ ದೋಷವಿದೆ ಶಾಸ್ತ್ರೀಯ ಶಿಕ್ಷಣದ ಉಪಯೋಗವನ್ನು ನಾವು ವ್ಯವಹಾರದಲ್ಲಿ ತಂದಿಲ್ಲ ಅದನ್ನು ಒಳಿಕೆಯಲ್ಲಿ ತರಬೇಕು ಅಂದರೆ ಮಾತ್ರ ಶಾಸ್ತ್ರೀಯ ಶಿಕ್ಷಣದ ಸಾರ್ಥಕ್ಯವಾಗುವದು ಕೊನೆಯಲ್ಲಿ ನಿಮ್ಮ ಕೊಲೇಜು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದೂ, ಈ ಕೊಲೇಜಿನೊಳಗಿಂದ ದೇಶಸೇವೆಗಾಗಿ ಉತ್ತಮೋತ್ತಮ ನಾಗರಿಕರು ಸಿದ್ಧರಾಗಿ ಹೊರಬೀಳಲೆಂದೂ ಹಾರೈಸುತ್ತೇನೆ

ಅಧ್ಯಕ್ಷರ ಭಾಷಣದ ನಂತರ ರಾ|| ಗೋಪಾಳ ಎಮ್ ಶೈ ಇವರು ಅಧ್ಯಕ್ಷರ ಮುಂಬಯಿಯಿಂದ ಬಂದವರ ಮತ್ತು ಕೊಲೇಜ ಕಾರ್ಯ ಯಶಸ್ವಿಯಾಗಲು ನೆರವಾದವರ ಆಭಾರಮನ್ನಣೆ ಮಾಡಿದರು ಇದಾದ ತರುವಾಯ ವಿದ್ಯಾರ್ಥಿಗಳ ಕೆಲವು ವಿನೋದಾವಳಿಗಳಾದವು ಕೊನೆಯಲ್ಲಿ ಶಿರಸಿಯ ಹನುಮಾನ್ ವ್ಯಾಯಾಮ ಶಾಲೆಯ ರಾ॥ ಎನ್ ಡಿ ಮುರಾರಿಯವರು ಕೆಲವು ಶಕ್ತಿ-ಪ್ರಯೋಗಗಳನ್ನು ಮಾಡಿತೋರಿಸಿದರು ಕಬ್ಬಿಣದ ತುಣುಕುಗಳ ಹಾಸಿಗೆಯ ಮೇಲೆ ಬೆನ್ನಿನಿಂದ ಮಲಗಿ ಅವರು ಎದೆಯ ಮೇಲೆ ಭಾರ ಹೊತ್ತಿದ್ದು, ಕಬ್ಬಿಣದ ಪಟ್ಟಿಯನ್ನು ಎಡಮೊಣಕೈಗೆ ಸುತ್ತಿ ಅದಕ್ಕೆ ಸ್ಪ್ರಿಂಗಿನ ರೂಪ ಕೊಟ್ಟಿದ್ದು ನೋಡಿ ಪ್ರೇಕ್ಷಕರು ಮುಗ್ಧರಾದರು ರಾಷ್ಟ್ರಗೀತೆಯೊಡನೆ ಈ ಸಮಾರಂಭದ ಮುಕ್ತಾಯವಾಯಿತು

ರಾತ್ರೆ ಪಂಚಿಯಿಂದ ಮುಂದೆ ಅದೇ ಸ್ಥಳದಲ್ಲಿ ಯಕ್ಷಗಾನದ ನಾಟ್ಯಗಳಾದವು ಮಂತ್ರಿಗಳೂ ಆ ನಾಟ್ಯಗಳನ್ನು ನೋಡಲು ಕೆಲ ಹೊತ್ತು ಕೂತಿದ್ದರು

[ವಿ ಸೂ • ಮಹಾಮಂತ್ರಿಗಳು ಹರಿಜನ-ವಸತಿಗೃಹದ ಅಡಿಗಲ್ಲು ಕೂಡ್ರಿಸಿದ ಸಮಾರಂಭದ ವರದಿಯನ್ನೂ ಡಾ|| ಬಾಳಿಗಾರವರು ಕಟ್ಟಿಸ ಹುಡುಗರ ಹೋಸ್ಟೆಲ ಕಟ್ಟಡ ಇದರ ನಗರಸಭೆಯ ಆಸ್ಪತ್ರೆಯ ಹೆರಿಗೆ-ಗೃಹದ ಕಟ್ಟಡವನ್ನು ತೆರೆದ ಸಮಾರಂಭದ ವರದಿಯನ್ನೂ ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು ಸ್ಥಳಾಭಾವದ್ದರಿಂದ ಅವನ್ನು ಈ ಸಂಚಿಕೆಯಲ್ಲಿ ಕೊಡಲಾಗಲಿಲ್ಲ]

ಪತ್ರಿಕಾ—ಪ್ರಕಟನೆ.

೧೯೪೯ನೇ ಇಸವಿಯ ಮುಂಬಯಿಯ ಅರಳೆ ಬಟ್ಟೆಯ ವ್ಯಾಪಾರಿಗಳಿಗೆ ಪರವಾನೆ ಕೊಡುವ ಸಂಬಂಧದ ಆಜ್ಞೆಯ ೧೬ನೇ ಕಲಮಿನನ್ವಯ ವ್ಯಾಪಾರಿಗಳು ಒಪ್ಪಿಸಬೇಕಾದ ಸಂಗ್ರಹದ ಮಾಹಿತಿ-ಪತ್ರಿಕೆಗಳನ್ನು ಕುರಿತು ಮುಂಬಯಿ ಸರಕಾರವು ಹೊರಡಿಸಿದ ಪತ್ರಿಕಾ-ಪ್ರಕಟನೆಗನುಸಾರವಾಗಿ, ಕಿರಕೋಳ ಮಾರಾಟಗಾರರೂ ವಿಶೇಷ ಕಿರಕೋಳ ಮಾರಾಟಗಾರರೂ ಇನ್ನು ಮುಂದೆ ತಮ್ಮ ಕಡೆ ಇರಬಹುದಾದ ಸುಟ್ಟು ಸ್ಥಿತಿಯೊಳಗಿನ (in loose condition) ಬಟ್ಟೆಯ ಸಂಗ್ರಹಗಳ ಮಾಹಿತಿ-ಪತ್ರಿಕೆಗಳನ್ನು ಒಪ್ಪಿಸಬೇಕಾದ ಅವಶ್ಯಕತೆಯಿಲ್ಲೆಂದು ಸೂಚಿಸಲಾಗಿದೆ

(ಜಿಲ್ಹಾಧಿಕಾರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ನಮ್ಮಲ್ಲಿ

ಕನವ್ ಪೇಪರ್ ಮತ್ತು ಇತರ ಕಂಪನಿಗಳ

“ಚಹಾ”

ಯೋಗ್ಯ ದರದಲ್ಲಿ ಸಿಗುತ್ತವೆ

ವ್ಯಾಪಾರಿ ಮಾಹಿತಿ ಬಗ್ಗೆ ಬರೆಯಿರಿ

L G MAHALE,
Merchant & Agent, ANKOLA. N K

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ ಚಕಾರ ಹುರಿ, ಬಾವಿ ಹಗ್ಗ, ಬ್ರಶ ಮೆಟ, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಚೆಅರಮನ್, ಕೊಯರ್ ಸೊಸೈಟಿ ಲಿಮಿಟೆಡ್, ಹೊನ್ನಾವರ (ಉ ಕ)

ಕಬ್ಬಿನ ಗಾಣಗಳಿಗೆ | ಕೊಂಕಣ ಸ್ಟೀಲ್ | ನೀರಾವರಿ ಯಂತ್ರಗಳಿಗೆ

ಡಬೀರ ಎಂಡ್ ಸನ್ಸ, ಡಿಸ್ಟ್ರಿಬ್ಯೂಟರ್ಸ--ಕಿರ್ಲೋಸ್ಕರ ಕಾರಖಾನೆ,

ಹುಬ್ಬಳ್ಳಿ:— ಪತ್ರವ್ಯವಹಾರ ಮಾಡಿರಿ.

UNIVERSITY RUFFIANS.

A correspondent sends a news item from the Mail (Madras) of 7th December 1949, from which the following is condensed

"The students of the Mrs A V N. College celebrated their College anniversary by holding an Andhra Day and a College Girls Day' with various engagements and functions

"On the College Girls" Day the boys were refused entrance They protested that it was an insult to them not to be admitted to the girls function while theirs was open to all, and boycotted the function Attempt was made on behalf of the management of the college to pacify the students promising that they would be allowed on the Women s Day As the students wanted the principal to apologize, no settlement was reached

"Two dramas were staged At the close of the function the boys, who were till then peaceful became unruly and indulged in stone-throwing With great difficulty the police conducted the visitors outside the college Anticipating further trouble the Principal cancelled all other functions

It is difficult to understand from the report why attempt was made on behalf of the management to pacify the students by promising that they would be allowed on the Women s Day It appears to me that the demand to be allowed to participate in the function as well as of apology from the Principal was impudent and ought to have been resisted

But unfortunately such occurrences have become but too frequent and wide-spread The intimate spiritual and respectful relation between teacher and student has altogether disappeared in the present-day schools and colleges, and educational institutions have become training centres of goondas and bad characters Decent peace-loving, studious students are finding it increasingly difficult to feel happy in the college atmosphere Student life instead of being felt as the happiest period of one s life has become to the serious student a waste of time money and energy

I must also remark that junior, youthful teachers as well as the lowd type of reading matter, which is often prescribed in studies, in the name of literary studies, along with the flood of sex literature, novels, detective stories, cinemas, etc are also responsible for this loss of moral balance of the youth

But over and above these causes is the fundamental defect in the character of what we provide in the name of education "Youth is the time for practising austerity and residence in forests" said Swami Ramadasa the great Guru of Maharashtra, meaning that youth should be a period of discipline with hard physical and mental labour and should not be one of comfortable pleasure-seeking life Cities cinemas fashionable dresses and modern luxuries will not create those leaders, who will make the people a great nation

Nor will military training provide the proper type of hard life and discipline because modern military training is a mixture of one part of hard work and discipline, and one part of wine woman and licentiousness, It is not creative What is needed is the hard life of productive worker and the simplicity and regularity of a student of yoga

The country will not lose much if all colleges are closed for a period of ten years as preparatory to their removal to fields and forests for new type of education But this realization is not likely to come until mercantile and communist civilizations have played themselves out

K G MASHRUWALA
(in Harijan of 1-1-1950)

ವಾರ್ತೆಗಳು.

— [illegible]

— [illegible]

— [illegible]

Subject — Permission to carry excess passengers in stage carriages

CIRCULAR

In continuation of this office circular No 7695/4-B/KR dated 6-10-49 all the stage carriage operators in the Karnatak Region are hereby informed that Government of Bombay have extended the concession of carrying 25% overload in buses for a further period of 3 months from 1st January 1950 to 31st March 1950 subject to all the conditions mentioned under this office No 5034/4-B/KR dated 21-7-49

No 2?7 /4-B/KR of 1950
Regional Transport Office, K R,
Belgaum, 3-1-1950

D K SUKHTANKAR, Capt
Secretary,
Regional Transport Authority,
Karnatak Region Belgaum

THE KANARA DISTRICT CENTRAL CO-OPERATIVE BANK LTD, SIRSI (N Kanara)

WANTED

APPLICATIONS are invited from young and energetic matriculates to work as Branch agents, clerks and cashiers on a basic salary of Rs 40/- and a Dearness Allowance of Rs 35/- Candidates may have to furnish security and must be prepared to work anywhere in the District Applications in candidates own handwriting with particulars of age qualifications and past experience, should reach the Secretary by 31st January 1950

ಜಿಲ್ಲಾ ಸಮಾಚಾರ.

ಕಾರವಾರ— [illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

ಚಾಳ ಮಾರುವದಿದೆ.

ಸಿರ್ಸಿ [illegible] (ಎಂಟು) ಸ್ವತಂತ್ರ ಮನೆಗಳು [illegible] ಮಾರುವದಿದೆ [illegible] ಸಮಕ್ಷಭೆಟ್ಟಿಯಾಗಿರಿ

ರಂಗಪ್ಪಾ ಕೃಷ್ಣಪ್ಪಾ ಮಹಾಲಿಂಗಣ್ಣಾನವರ
ಸಿರ್ಸಿ, ಉ [illegible]

ಪ್ರಯಾಣಿಕರ ಇಂದಿನ ಆವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೋಂಬೆ)
ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — [illegible]

ಮಾಲಕ: — [illegible]

ಮಾಂಡಳಿಗೆ ಹೇಳಿದರು. ಇಂದು ಮುಂಜಾನೆ ಕೆಲವು ಗೊತ್ತುವಳಿಗಳಾದವು. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾಗಿರುತ್ತವೆ.— (೧) ಎಲ್ಲರಿಗಿಂತ ಮೊದಲು ಭಾಷಾನುಗುಣ ಪ್ರಾಂತರಚನೆಯನ್ನು ಬೇಡಿದ ಕರ್ನಾಟಕದ ಅಭಿನಂದನೆ ಮತ್ತು ಅದರ ಪ್ರಾಂತಕ್ಕೆ ಉತ್ತೇಜನ (೨) ಕಾರವಾರ ಜಿಲ್ಲೆಯ ಕಾರವಾರ ಮತ್ತು ಹಳಿಯಾಳ ತಾಲೂಕುಗಳು, ಸುಪಾ ಪೇಟೆ, ಸಾವಂತವಾಡಿ ಸಂಸ್ಥಾನ ಮತ್ತು ಬೆಳಗಾಂವ ಜಿಲ್ಲೆಯ ಮರಾಠಿ ಭಾಗಗಳು ಇವನ್ನು ಒಟ್ಟುಗೂಡಿಸಿ ಪ್ರತ್ಯೇಕ ಜಿಲ್ಲೆ ಮಾಡಬೇಕಾಗಿ ಬೇಡಿಕೆ (೩) ಹೈದರಾಬಾದ ಸಂಸ್ಥಾನವನ್ನು ಒಡೆದು ಅದರ ಮರಾಠಿ, ಕನ್ನಡ ಮತ್ತು ತೆಲುಗು ಭಾಷೆಯ ವಿಭಾಗಗಳನ್ನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಕ್ಕೆ ಸೇರಿಸಬೇಕಾಗಿ ಸೂಚನೆ (೪) ಸಂಯುಕ್ತ ಮಹಾರಾಷ್ಟ್ರ ಪ್ರಾಂತದ ರಚನೆಯಾಗದಿದ್ದರೆ ಜನರಲ್ಲಿ ಅಸಂತೋಷವುಂಟಾಗುವದೆಂದು ಸರಕಾರಕ್ಕೂ ಕೊಂಗ್ರೆಸ ವರಿಷ್ಠರಿಗೂ ಎಚ್ಚರಿಕೆ ಮತ್ತು (೫) ಸಾವಂತವಾಡಿಯಿಂದ ಈಗ ಬೆಳಗಾಂವಿಗೆ ಸ್ಥಳಾಂತರಿಸಿದ ರಾಣಿ ಪಾರ್ವತೀದೇವಿ ಕೊಲೇಜನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸೇರಿಸಲು ಅನುಮತಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ.

ಅಂಕೋಲಾ— (ತಾ ೮-೧-೫೦) ತಾ ೧೯-೧೨-೪೯ರ "ವೃತ್ತ"ದಲ್ಲಿ ಹಳವಳ್ಳಿ ಶಾಲೆಯ ಶಿಕ್ಷಕರ ವಿರುದ್ಧ ಪ್ರಕಟವಾದ ಟೀಕೆ ಸಾಧಾರಣವಿರುವದಿಲ್ಲವೆಂದು "ಹಳವಳ್ಳಿ ನಿವಾಸಿ"ಗಳೊಬ್ಬರು ಬರೆಯುತ್ತಾರೆ. ಈ ಶಿಕ್ಷಕರ ವಾಸ್ತವ್ಯ ಶಾಲೆಯಿಂದ ೧ ಫರ್ಲಾಂಗಿನ ಮೇಲಿದ್ದು ದಂತೆ ಶಿಕ್ಷಕರು ನಡತೆ ಸರಿಯಾಗಿಲ್ಲದಿದ್ದರೆ ಪಾಲಕರು ಸುಮ್ಮಗಿರುತ್ತಿದ್ದರೇನೆಂದು ಪ್ರಶ್ನಿಸುವರು. ಕೇಳುತ್ತಾರೆ. ಶಿಕ್ಷಕನು ಮುಂಜಾನೆ ಸೂರ್ಯೋದಯದಿಂದ ಸಂಜೆ ಸೂರ್ಯಾಸ್ತವಾಗುವ ವರೆಗೆ ದುಡಿಯಬೇಕೆಂದು ಹೇಳುವ ಒಬ್ಬಿಬ್ಬರು ಶಾಲೆಯ ಪಂಚ ಮಂಡಳದಲ್ಲಿ ಇದ್ದಾರೆಂದೂ ಇವರೇ ಶಿಕ್ಷಕನ ವಿರುದ್ಧ ಇಲ್ಲದ-ಸಲ್ಲದ ದೂರುಗಳನ್ನು ಎಬ್ಬಿಸುತ್ತಿರುವರೆಂದೂ ಅವರ ದೂರುಂಟು.

ಹಳವಳ್ಳಿಯಿಂದ ರಾಮನಗುಳಿಯ ವರೆಗೆ ೬ ೭ ಮೈಲುದ್ದ ಹಳ್ಳಿ ರಸ್ತೆಯನ್ನು ಹಳವಳ್ಳಿ ಊರವರು ಮಾಡಿಕೊಂಡಿರುತ್ತಾರೆಂದೂ ಆ ಬಗ್ಗೆ ಸರಕಾರದಿಂದ ಸಿಗಬೇಕಾದ ಸಹಾಯವನ್ನು ತನಗೆ ಸಿಕ್ಕಿಲ್ಲೆಂದೂ ರಾ॥ ತಮ್ಮಣ್ಣ ಗೋವಿಂದ ಭಟ್ಟರೂ ಶಿವೇಶ್ವರ ಗಣಪತಿ ಭಟ್ಟರೂ ದೂರುತ್ತಾರೆ. ಈ ರಸ್ತೆಯನ್ನು ಲೋಕಲ್ ಬೋರ್ಡಿನವರು ಒಪ್ಪಿಸಿಕೊಳ್ಳಬೇಕೆಂದೂ ಅವರ ವಿನಂತಿಯುಂಟು.

ಪುರವಳ್ಳಿಯ ಶ್ರೀ ವಿನಾಯಕ ದೇವರ ಗುಡಿಯಲ್ಲಿ ದೇವರನ್ನು ಕಾಣಬೇಕಾದರೆ ದರ್ಶನಕ್ಕೆ ಹೋಗುವ ಭಕ್ತರು ಓರೆಯಾಗಿ ತಲೆಯನ್ನಾಗಲಿ ಬಾಗಿಸಬೇಕಾದ ಪ್ರಸಂಗ ಬಂದಿರುವದೆಂದು ಓರ್ವ ಭಕ್ತರು ದೂರುತ್ತಾರೆ. ದೇವರ ನಂದಾದೀಪಕ್ಕೆ ಎಣ್ಣೆ ಕೊಡುವದಿಲ್ಲವೇನೆಂದೂ ಅವರು ಪ್ರಶ್ನಿಸುತ್ತಾರೆ. ಮೊಕ್ತೇಸರರಂತೂ ಗುಡಿಯ ಕಡೆಗೆ ಕಣ್ಣೆತ್ತಿ ನೋಡುವದಿಲ್ಲವಂತೆ. ದೇವರು ಉತ್ಸವದ ವಿಷಯವೇನಾಯಿತೆಂದು ಯಾರಾದರೂ ಕೇಳಿದರೆ ಮೊಕ್ತೇಸರರು "ಎಲ್ಲ ತೋರಿಸುತ್ತೇನೆ"ಂದು ಹೇಳುತ್ತಾರೆ. "ದೇವರು ಹೇಳಿದ ಹಾಗೆ ನಡೆ" ಎಂದು ಬರುವದೆಂದು ಹೇಳುವರಂತೆ!

ಅಗಸೂರ ಗ್ರಾಮದ ಪಾಠಶಾಲೆಯ ವ್ಯವಸ್ಥೆ ಕಳೆದ ತಾ ೩ರಿಂದ ಅಲ್ಲಿಯ ಶಾಲೆಯ ವಿದ್ಯಾರ್ಥಿಗಳು ಆರೋಗ್ಯ ಸಪ್ತಾಹ ಆಚರಿಸಿದರು. ಪ್ರತಿ ದಿನ ಬೆಳಿಗ್ಗೆ ಪ್ರಭಾತಫೇರಿ ಮಾಡಿ ಊರಿನ ಕೆಲಸಗಳನ್ನು ಮಾಡಿದರು. ದಿನಾಲೂ ಶಾಲೆಯಂತೆ ವಿದ್ಯಾರ್ಥಿಗಳು ನಡೆಯುವ ರೀತಿಯನ್ನು ಜನರು ಮೆಚ್ಚಿದರೆಂದೂ ತಿಳಿದುಬಂದಿದೆ.

ಹಳಿಯಾಳ— (ತಾ. ೩-೧-೫೦) ಈ ಜಿಲ್ಲೆಯ ಉತ್ತರ ಭಾಗದಲ್ಲಿ ಇತ್ತಲಾಗಿ ಬಹಳಷ್ಟು ವನರಕ್ಷಕರಿಗೂ ವನಾಧಿಕಾರಿ (ಫೋರೆಸ್ಟರ)ಗಳಿಗೂ ವರ್ಗಗಳಾಗಿವೆ! ಇಲಾಖೆಯ ಕಾರ್ಯಭಾರದ ದೃಷ್ಟಿಯಿಂದಲೇ ಈ ವರ್ಗಾವರ್ಗಿಗಳಾಗಿವೆಯೆಂದು ಹೇಳಬರುವಂತಿಲ್ಲ. ೫-೫, ೬-೭ ವರ್ಷ ವರ್ಗವಾಗದೆ ಇದ್ದ ಪುಣ್ಯಾತ್ಮರೂ ಕೆಲವರಿದ್ದಾರೆ! ವಿಭಾಗದ ವನಾಧಿಕಾರಿಗಳ (ಡಿ ಎಫ್ ಓ) ಕಚೇರಿಯವರಿಗೆ ಪ್ರಸನ್ನಗೊಳಿಸಿದವರಿಗೆ ವರ್ಗಾವರ್ಗಿಯ ಭಯವಿಲ್ಲವಂತೆ! ವನರಕ್ಷಕರು ಇತ್ತೀಚೆಗೆ ಸ್ಥಾಪಿಸಿದ ಸಂಘವನ್ನು ಮೇಲಧಿಕಾರಿಗಳು ಸಂಶಯಾತ್ಮಕ ದೃಷ್ಟಿಯಿಂದ ನೋಡುತ್ತಿರುವರೆಂದೂ ಸದ್ಯದ ವರ್ಗಾವರ್ಗಿಗಳಿಗೆ ಅಧಿಕಾರಿಗಳ ಆ ಅಪ್ರೀತಿಯೇ ಸಹ ಕಾರಣವಿರಬಹುದೆಂದೂ ಕೆಲವರು ತರ್ಕಿಸುತ್ತಾರೆ. ಅದೇನಿದ್ದರೂ ಜಂಗಲ ಇಲಾಖೆಯ ಕೆಳ-ನೌಕರರ ವರ್ಗದಲ್ಲಿ ಈ ವರ್ಗಾವರ್ಗಿಗಳು ತೀವ್ರ ಅಸಮಾಧಾನವನ್ನೂ ಅಸಂತೋಷವನ್ನೂ ಉಂಟುಮಾಡಿವೆ. ಇದು ಸರಕಾರಕ್ಕೆ ಇಷ್ಟ ತೋರುತ್ತದೇನು?

ಶಿರಸಿ— (ತಾ ೩೦-೧೨-೪೯) ನಗರ ಸಭೆಯ ಸಾರ್ವತ್ರಿಕ ಚುನಾವಣೆಯು ಮೊನ್ನೆ ನಡೆಯಿತು. "ಭವಿಷ್ಯ" ರೀತಿಯಲ್ಲಿ ಆರಂಭವಾದ ಸಹಿತ ಮೋಟಾರ ಬಂಡಿಗಳ ಓಡಾಟ, ಧ್ವನಿಕ್ಷೇಪಕಗಳ ಕೂಗಾಟ, ಸ್ವಾಗತ ಸ್ವರದ ಹಾರಾಟ, ಒಳ್ಳೆ ವಿದ್ಯುದ್ದೀಪಗಳ ಝಗಝಗಾಟ ಮೊದಲಾದವುಗಳನ್ನು ನಿನ್ನೆ ಈಗಲೂ ವೈವಾಹಿಕ ಸಮಾರಂಭದ ಗದ್ದಲದಲ್ಲಿ ಯಾರಿಗೂ ಮನಸ್ಸಮಾಧಾನವಾಗಲಿಲ್ಲವೆಂದು ಒಂದು ಸಮಾಧಾನದ ಸಂಗತಿ! ಈ ಚುನಾವಣೆಯ ಸಂಭ್ರಮದ ಬಗ್ಗೆ ಹೇಗೆ ಹೇಳಿದರೂ ೨೫ ೩೦ ಸಾವಿರ ರೂಪಾಯಿ ಖರ್ಚಾಗಿರಬೇಕೆಂದು ಗಣಿತಜ್ಞರು ಲೆಕ್ಕ ಹಾಕಿದ್ದಾರೆ. ಹಣದ ಈ ಅಪವ್ಯಯವನ್ನೂ, ಚುನಾವಣೆಗೆ ನಿಂತ ಹುರಿಯಾಳುಗಳು ಮತದಾರರನ್ನು ಭೀತಿ ಮತ್ತು ಆಶೆ ತೋರಿಸಿ ಒಲಿಸಿಕೊಳ್ಳುತ್ತಿದ್ದ ಕ್ರಮವನ್ನೂ, ಚುನಾವಣೆಯ ಮೂಲಕ ಸ್ಪರ್ಧಿಗಳಲ್ಲಿ ಉಂಟಾಗುತ್ತಿರುವ ದ್ವೇಷ, ಮತ್ಸರ, ಪಕ್ಷಪಾತಗಳ ದುರಭಿಮಾನಗಳನ್ನೂ ಕಂಡು ಕೆಲವರು ವ್ಯಸನಪಟ್ಟರು. ಈ ಚುನಾವಣೆಗಳು ಹೀಗೆ ನಡೆಯಬೇಕೆ? ಈ ಚುನಾವಣೆ ನಗರ ಸಭೆಯ ಚುನಾವಣೆ ಎಂದು ಸರಳ ವಿಚಾರದ ಹಿರಿಯರು ಒಪ್ಪಿಕೊಂಡು ಉದ್ಗಾರಗಳನ್ನು ತೆಗೆಯುತ್ತಾರೆ.

ಮತಗಳ ಎಣಿಕೆ ನಿನ್ನೆ ನಡೆಯಿತು. ಈ ಎಣಿಕೆಯ ಕಾರ್ಯವು ಸಂಪೂರ್ಣಗೊಂಡಿತು! ೧ನೇ ವಾರ್ಡಿನಲ್ಲಿ ಸ್ಪರ್ಧಿಸಿದ್ದ ರಾ॥ ಗಣಪತಿ ಭಟ್ಟರು ಶ್ರೀಮಂತ ಘನಶ್ಯಾಮರಿಂದ ಅವರ ಪರಾಭವಗೊಂಡು, ರಾ॥ ಕೃಷ್ಣಾಜಿ ಗೋವಿಂದರಾಯರ ಅವರು ಸೋತರು. ರಾ॥ ಶ್ರೀಪಾದ ಹೆಗಡೆಯವರು ಮತ್ತು ರಾ॥ ನಾರಾಯಣ ಹೆಗಡೆಯವರು ಈ ವಾರ್ಡಿನ ಕಡೆಗೆ ಸ್ಪರ್ಧೆ ನಡೆಸಿದ್ದು ಸಂಶಯಾತ್ಮಕ ಮತಪತ್ರಿಕೆಗಳ ಬದಲಿಗೆ ಬೇರೆ ಮತಪತ್ರಿಕೆಗಳನ್ನು ತಂದುದರಿಂದ ಚುನಾವಣಾಧಿಕಾರಿಯವರು ಅವುಗಳನ್ನು ತಳ್ಳಿಹಾಕಿದರು. ಈ ಕಾರಣ ರಾ॥ ಕೆರೆಮನೆಯವರಿಗೆ ೧೪೧ ಮತಗಳು ಬಿದ್ದರೆ ಗೋಪಾಲ-ಮಾಸ್ತರರಿಗೆ ೧೧೭ ಮತಗಳು ಬಿದ್ದವು. ಕೆರೆಮನೆಯವರ ಅಂತರ ಕೇವಲ ಇಪ್ಪತ್ತು ಇದ್ದುದರಿಂದ ಸಂಶಯಾತ್ಮಕ ಮತ-ಪತ್ರಿಕೆಗಳ ಪಟ್ಟಿ ಕಾರ್ಯಕರ್ತೆಯರಿಗೆ ಆಗ ರಾ॥ ಕೆರೆಮನೆಯವರಿಗೆ ೨ ಮತಗಳು ಹೆಚ್ಚು ದೊರೆತವು. ಪುನಃ ಮಾಡಿದ ತಪಾಸಣೆಯಲ್ಲಿ ಇನ್ನೂ ದಾಮೋದರ ಸೆಟ್ಟರಿಂದ ಕೆರೆಮನೆಯವರಿಗೆ ಕಿರಿ ಮತಗಳು ದೊರೆತವು. ಆದ್ದರಿಂದ ನಿರ್ದಿಷ್ಟ ಮತಗಳೂ ಸಾಲಾಗದಷ್ಟು ಆದುದರಿಂದ ನೋಡಿ ತೆಗೆಯಬೇಕಾಯಿತು. ನೋಡಿದ್ದರಲ್ಲಿ ಕೆರೆಮನೆಯವರು ಗೆದ್ದರು.

ಮೇಲೆ ಹೇಳಿದ ಚುನಾವಣೆಯಲ್ಲಿ ಈ ಕೆಳಗಿನವರು ಆರಿಸಿ ಬಂದಿರುತ್ತಾರೆ — ೧ನೇ ವಾರ್ಡಿನಲ್ಲಿ — ೧ ರಾ॥ ಮಹಾಬಲೇಶ್ವರ ಕರಿಕೇರಿ, ೨ ಶ್ರೀಮಂತ ಘನಶ್ಯಾಮ, ೨ನೇ ವಾರ್ಡಿನಲ್ಲಿ — ೩ ರಾ॥ ಗುರುನಾಥ ಧಾಕಪ್ಪ, ೪ ರಾ॥ ಅಬ್ದುಲ್ಲಾ ಖಾನ, ೫ ರಾ॥ ಕೋಟೆಮನೆಯರ ವಿಶ್ವೇಶ್ವರ ಹೆಗಡೆ, ೩ನೇ ವಾರ್ಡಿನಲ್ಲಿ — ೬ ರಾ॥ ಶ್ರೀನಿವಾಸ ಕಾಮತ, ೭ ರಾ॥ ಕರಿಯಾ ಲಂಗಾ (ಹರಿಜನ-ದಲಿತ), ೮ ರಾ॥ ಕೆಂಚಾ ಫಕೀರಾ (ಗೌಳಿ) ೪ನೇ ವಾರ್ಡಿನಲ್ಲಿ — ೯ ರಾ॥ ಮಹಾದೇವ ಶೆಟ್ಟಿ (ನೋಟರಿ-ರಫಿಕ), ೧೦ ರಾ॥ ಬಸಪ್ಪ ಸಜ್ಜನ, ೧೧ ರಾ॥ ಶಿವಬಸಪ್ಪ ಬೆಳ್ಳದ, ೧೨ ರಾ॥ ಅಬ್ದುಲ ಕರೀಮ (ಗ್ರಾಮ ಬೀಡಿ ಅಂಗಡಿ), ೫ನೇ ವಾರ್ಡಿನಲ್ಲಿ — ೧೩ ರಾ॥ ಬಸಪ್ಪ ಕಾಶ್ಯಪ, ೧೪ ರಾ॥ ಅಕ್ಬರ ಟಿಕಾರ, ೧೫ ರಾ॥ ಜೋಗಳೇಕರ (ಹರಿಜನ) ೧೬ ರಾ॥ ಮಾತ್ಯೂಸ್ಸಾ ೬ನೇ ವಾರ್ಡಿನಲ್ಲಿ — ೧೭ ರಾ॥ ಹಾದಿಮನಿ, ೧೮ ರಾ॥ ಪಾಪ (ಕ್ರಿಶ್ಚನ್)

ಈ ಚುನಾವಣೆಗಳ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲವೆಂದು ತಿಳಿಯುತ್ತದೆ. ೧ನೇ ವಾರ್ಡಿನ-ಸಂಶಯಾತ್ಮಕ ಮತಪತ್ರಿಕೆಗಳ ಸಂಬಂಧದ ನಿರ್ಣಯ ತಿರಸ್ಕರಿಸಿದ್ದರಿಂದ ರಾ॥ ಗೋಪಾಲ ಮಾಸ್ತರರು ಆಕ್ಷೇಪವನ್ನೆತ್ತಿ ಕಾರವಾರದ ಜಿಲ್ಲಾ ನ್ಯಾಯಾಧೀಶರ ಮುಂದೆ ಚುನಾವಣೆಯ ತಕ್ರಾರ ಅರ್ಜಿಯನ್ನು ದಾಖಲಿಸಿರುವರಂತೆ. ೩ನೇ ವಾರ್ಡಿನಲ್ಲಿ ಮುಸಲ್ಮಾನರಿಗೆ ಕಾದಿಟ್ಟ ಆಸನದ ಬಗ್ಗೆ ಓರ್ವ ಮುಸಲ್ಮಾನರೇ ಅರ್ಜಿ ಹಾಕಿದ್ದರು. ಇನ್ನೊಬ್ಬರು ಸಾಮಾನ್ಯ ಸ್ಥಳಕ್ಕಾಗಿ ಎಂದು ಅರ್ಜಿ ಹಾಕಿದ್ದರು. ಹೀಗೆ ಇಬ್ಬರು ಮುಸಲ್ಮಾನರು ಹುರಿಯಾಳುಗಳಾಗಿ ಬಂದದ್ದರಿಂದ ಮುಸಲ್ಮಾನರಿಗಾಗಿ ಕಾದಿಟ್ಟ ಆಸನದ ಬಗ್ಗೆ ಅಧಿಕಾರಿಗಳು ಚುನಾವಣೆ ನಡೆಸದೇ ಹೀಗೆ ಮಾಡಿದ್ದು ತಪ್ಪೆಂದೂ ಕಾದಿಟ್ಟ ಆಸನದ ಬಗ್ಗೆಯೇ ಅರ್ಜಿ ಕೊಟ್ಟ ಕಾಶ್ಯಪ ಅವರಿಗೇ ಆರಿಸಿ ಬಂದಿರುತ್ತಾರೆಂದೂ ಚುನಾವಣೆಯಲ್ಲಿ ಸೋತ ಮುಸಲ್ಮಾನ ಗೃಹಸ್ಥರೊಬ್ಬರು ಒಂದು ತಕ್ರಾರ ಅರ್ಜಿ ದಾಖಲಿಸಿರುವರಂತೆ. ೪-೫ನೇ ವಾರ್ಡುಗಳಲ್ಲಿ ಹೆಚ್ಚು ಮತದಾರರು ೨ ೨ ಮತ ಮತಗಳನ್ನು ಕೊಟ್ಟಿದ್ದುಂಟು. ಇಂತಹ ಮತದಾರರ ಮತಗಳನ್ನು ತಿರಸ್ಕರಿಸಿದರೆ ತಪ್ಪು ಆರಿಸಿ ಬರುವೆನೆಂಬ ಆಶೆ ಹೊಂದಿರುವ ೭ ಮತಗಳು ಕಡಿಮೆ ಬಿದ್ದ ಸೋತ ರಾ॥ ದು... ಹೋರಿಯವರು ಒಂದು ಅರ್ಜಿ ಕೊಡುವರಂತೆ. ಅಂತು ಈ ಚುನಾವಣೆ-ಪ್ರಾರಂಭವು ತಕ್ರಾರ ಅರ್ಜಿಗಳ ಮಾಲಿಕೆಯನ್ನು ಜೋಡಿಸಿಕೊಂಡಿದೆ. ಸ್ಥಾನಿಕ ಸ್ವರಾಜ್ಯದಲ್ಲಿ

THE BANK OF RURAL INDIA LTD.

(Incorporated in Indian Union, Liability of Members Limited)

HEAD OFFICE — "Satyabhama Bhuvanam", KARWAR, N. K.

Wishes Peace, Prosperity and Plenty in the

NEW YEAR

1950

to all its share-holders, customers and well-wishers.

Karwar, 1st Jan. 1950

P. X. GRACIOUS
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270 Monday. 23-1-1950.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೩೦

ಕುಮಟಾ - ಸೋಮವಾರ, ತಾ ೨೩-೧-೧೯೫೦

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩।
ಅಂಚೆಯಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ,, ೦-೧-೬
ವ್ಹಿ. ಪಿ. ಯಿಂದ ಕಳಿಸುವರಿ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

ಜಾಹೀರಾತುಗಳ ದರ:
೧೫ ಪದಗಳ ಒಂದು ಪಂಕ್ತಿಯ
ಪ್ರತಿ ಸಾರಿಗೆ ೮ ಆಣೆಯಂತೆ.
ವಿಶೇಷ ಜಾಹೀರಾತುಗಳ ಬಗ್ಗೆ ವ್ಯವಸ್ಥಾ
ಪಕರಲ್ಲಿ ಪತ್ರವ್ಯವಹಾರ
ಮಾಡಬೇಕು.

ಕುಮಟಾ ನಗರಸಭೆಯ

ಪ್ರಸೂತಿ-ಗೃಹ

ಡಾ॥ ಬಾಳಿಗಾರವರಿಂದ ಶಂಕು ಸ್ಥಾಪನೆ

ಕುಮಟಾ ನಗರ ಸಭೆಯವರು ತಮ್ಮ ರುಗ್ಣಾಲಯಕ್ಕೆ ಹೊಂದಿಯೇ ಒಂದು ಪ್ರಸೂತಿ-ಗೃಹವನ್ನು ಕಟ್ಟಿಸುವ ಯೋಜನೆಯನ್ನು ಮಾಡಿ, ೨೫೦ ರೂಪಾಯಿಗಳ ಖರ್ಚಿನ ಪಟ್ಟಿಯನ್ನು ಸಹ ತಯಾರಿಸಿಕೊಂಡಿದ್ದಾರೆ ಸದರಿ ಪ್ರಸೂತಿಕಾ-ಗೃಹದ ಶಂಕುಸ್ಥಾಪನೆ ಮಾಡಿಕೊಡುವ ಸಮಾರಂಭವು ಇದೇ ಕಳೆದ ಮಂಗಳವಾರ ತಾ ೧೭ನೇ ಮುಂಜಾನೆ ೮-೩೦ಕ್ಕೆ ಮಕರ ಲಗ್ನದ ಸುಮುಹೂರ್ತದಲ್ಲಿ ಮುಂಬಯಿಯ ವಿಖ್ಯಾತ ವೈದ್ಯರೂ ಶಸ್ತ್ರಕ್ರಿಯಾ ವಿಶಾರದರೂ ಆದ ಡಾ|| ಬಾಳಿಗಾರವರ ಅಮೃತ ಹಸ್ತದಿಂದ ನೆರವೇರಿತು.

ಈ ಸಮಾರಂಭಕ್ಕಾಗಿ ರುಗ್ಣಾಲಯದ ಹಿಂಭಾಗದಲ್ಲಿ ಸಣ್ಣದೊಂದು ಹಂದರ ಹಾಕಲ್ಪಟ್ಟಿತ್ತು ಸಮಾರಂಭಕ್ಕೆ ಊರೊಳಗಿನ ಬಹುತೇಕ ಎಲ್ಲ ಡಾಕ್ಟರರೂ, ಊರೊಳಗಿನ ಪ್ರತಿಷ್ಠಿತರೂ, ನಗರ ಸಭೆಯ ಸದಸ್ಯರೂ ಕೂಡಿದ್ದರು ಡಾ॥ ಬಾಳಿಗಾರವರ ಸಂಗಡ ಬಂದ ಮುಂಬಯಿಯ ಮಹನೀಯರೂ ಉಪಸ್ಥಿತರಿದ್ದರು ೮|| ಘಂಟೆಗೆ ಸರಿಯಾಗಿ ಡಾ|| ಬಾಳಿಗಾರವರು ಸಪತ್ನೀಕರಾಗಿ ಬಂದು ತಲ್ಪಿದ ಕೂಡಲೇ ಸಭಿಕರೆಲ್ಲ ಅವರಿಗೆ ಸುಸ್ವಾಗತವನ್ನು ಇತ್ತರು. ಡಾ|| ಬಾಳಿಗಾರವರು ಸಭಿಕರ ವಂದನೆಗಳನ್ನು ಸ್ವೀಕರಿಸಿ ವೇದಿಕೆಯ ಮೇಲೆ ಆಸನಸ್ಥರಾದ ಬಳಿಕ ನಗರ ಸಭೆಯ ಅಧ್ಯಕ್ಷ ಡಾ || ಬಾಬಾ ಮ್ಹಾಳಪ್ಪೈ ಇವರು ನಾಗರಿಕರ ಪರಿಯಿಂದಲೂ ನಗರಸಭೆಯ ಪರಿಯಿಂದಲೂ ಅವರಿಗೆ ಮಾನಪತ್ರವನ್ನು ಅರ್ಪಿಸಿದರು ಡಾ॥ ಬಾಳಿಗಾರವರು ತಮ್ಮ ಔದಾರ್ಯದಿಂದ ಮೂಲೆಯಲ್ಲಿ ಬಿದ್ದಿರುವ ನಮ್ಮ ಜಿಲ್ಲೆಗೆ ಕೆನರಾ ಕಾಲೇಜಿನಂತಹ ಜ್ಞಾನದಾನದ ಸುಂದರ ಸಂಸ್ಥೆಯನ್ನು ಒದಗಿಸಿಕೊಟ್ಟ ಬಗ್ಗೆ ಕೃತಜ್ಞತೆಗಳನ್ನು ಸಲ್ಲಿಸಿ, ಸರಕಾರದವರ ಸಹಾಯ-ಪ್ರೋತ್ಸಾಹಗಳಿಂದ ನಗರ ಸಭೆಯವರು ಕಟ್ಟಿಸಲಣಿಯಾಗಿರುವ ಪ್ರಸೂತಿ ಗೃಹದ ಅಡಿಗಲ್ಲನ್ನು ಇಟ್ಟುಕೊಡಲು ಅವರನ್ನು ಬಿನ್ನವಿಸಿದರು.

ಡಾ|| ಪೈರ ವಿನಂತಿಗನುಸಾರವಾಗಿ ಡಾ|| ಬಾಳಿಗಾರವರು ಅಡಿಗಲ್ಲನ್ನಿಟ್ಟು ತಿರುಗಿ ವೇದಿಕೆಯನ್ನೇರಿ ತಮ್ಮ ಭಾಷಣವನ್ನು ಮಾಡಿದರು. ಕನ್ನಡದಲ್ಲಿ ಮಾತಾಡುವ ಅಭ್ಯಾಸವಿಲ್ಲದ್ದರಿಂದ ಅವರು ಇಂಗ್ಲಿಷದಲ್ಲಿ ಮಾತಾಡಿದರು ಅವರ ಮಾತುಗಳನ್ನು ವಕೀಲರಾ॥ ನರಸಿಂಹ ಶಾನಭಾಗರು ಕನ್ನಡದೊಳಗೆ ಪರಿವರ್ತಿಸಿ ಹೇಳಿದರು. ಡಾ॥ ಬಾಳಿಗಾರವರು ಅಂದದ್ದೇನೆಂದರೆ —

ನಿಮ್ಮ ಮಾನಪತ್ರದಲ್ಲಿ ನನ್ನನ್ನು ಬಹಳವಾಗಿ ಕೊಂಡಾಡಿದ್ದೀರಿ ಆ ಹೊಗಳಿಕೆ ಈ ಪ್ರಸಂಗಕ್ಕನುಗುಣವಾಗಿರುವದಾಗಿಯೂ ಶತ ಶಃ ನನಗೆ ಅನಿಸುವದಿಲ್ಲೆಂದು ಹೇಳಬಯಸುತ್ತೇನೆ ನನಗೆ ಪ್ರಿಯವಾದ ಸಂಗತಿಗಳೆರಡು. ಒಂದು ವಿದ್ಯಾಪ್ರಸಾರ, ಮ ಕೊ. ದು ರು ಗ್ಣ ಶು ಶ್ರೂ ಷ. ಈ ಎರಡೂ ಕಾರ್ಯಗಳಿಗೆ ನನ್ನಂತೆ ನೀವೆಲ್ಲರೂ ಯಥಾಶಕ್ತಿ ಸಹಾಯ ಮಾಡಬೇಕಾಗಿ ಆರಿಕೆಯು. ನಾಡಿನೊಳಗೆ ಸಕಾಲದಲ್ಲಿ ಔಷಧೋಪಚಾರ ಸಿಗದೆ ಇಂದು ಎಷ್ಟೋ ಜನರು ಸಾಯುತ್ತಿದ್ದಾರೆ ಪ್ರಸವಕಾಲದಲ್ಲಿ ಯೋಗ್ಯ ಸೌಕರ್ಯ, ಶುಶ್ರೂಷೆ ಮತ್ತು ಉಪಚಾರ ಸಿಗದ್ದರಿಂದ ಪ್ರತಿ ವರ್ಷ ಸಾವಿರಗಟ್ಟಲೆ ಸ್ತ್ರೀಯರು ಕಷ್ಟಪಡುತ್ತಾರೆ ಕಲವರು ಮೃತ್ಯು-ಮುಖದಲ್ಲಿ ಬೀಳುತ್ತಿದ್ದಾರೆ. ಲಕ್ಷಾವಧಿ ಶಿಶುಗಳು ಹುಟ್ಟಿದಾಕ್ಷಣ ಈ ಲೋಕವನ್ನು ಬಿಟ್ಟು ಪರಲೋಕವನ್ನು ಸೇರುತ್ತಿವೆ ಈ ಸ್ಥಿತಿ ನಮ್ಮ ನಾಡಿಗೆ ಭೂಷಣಾಸ್ಪದವಲ್ಲ. ಈ ಸ್ಥಿತಿಯನ್ನು ಸುಧಾರಿಸಲು ಮತ್ತು ಪ್ರಸವೋನ್ಮುಖ ಮಾತೆಯರಿಗೆ ಸರಿಯಾದ ಯೋಗ್ಯ ಸೌಕರ್ಯಗಳನ್ನು ಒದಗಿಸಿಕೊಡಲು ಸರಕಾರವೂ ಸಾರ್ವಜನಿಕರೂ ಪ್ರಯತ್ನ ಮಾಡಬೇಕು ಎಲ್ಲೆಲ್ಲೂ ಹೆರಿಗೆ ಮನೆಗಳು ಮತ್ತು ಶಿಶು ಸಂಗೋಪನ ಕೇಂದ್ರಗಳು ತಲೆಯೆತ್ತಬೇಕು ಕುಮಟಾ ನಗರ ಸಭೆಯವರು ಕೈಕೊಂಡ ಈ ಹೆರಿಗೆಮನೆಯ ಸ್ಥಾಪನೆಯ ಕಾರ್ಯ ನಿಜವಾಗಿಯೂ ಸ್ತುತ್ಯವಿದೆ ಇಲ್ಲಿ ಬರುವ ಪ್ರಸವೋನ್ಮುಖ ಹೆಂಗಸರಿಗೆ ತಕ್ಕ ಶುಶ್ರೂಷೆ ಮತ್ತು ಉಪಚಾರ ಮಾಡುವದಲ್ಲದೆ, ಹೆರಿಗೆ-ಮನೆಯ ಸಿಬ್ಬಂದಿಯು ಸುತ್ತ-ಮುತ್ತಲಿನ ಹಳ್ಳಿಗಳಿಗೂ ಹೋಗಿ ಉಪಚಾರದ ಅವಶ್ಯಕತೆಯುಳ್ಳವರಿಗೆ ಯೋಗ್ಯ ಉಪಚಾರ ಮಾಡಿ ನೆರವನ್ನೀಯುವದೆಂದು ಆಶಿಸುತ್ತೇನೆ ಮತ್ತು ತಮ್ಮ ಪ್ರಾರಬ್ಧ ಸಂಸ್ಥೆಯು ಉತ್ತರೋತ್ತರ ಪ್ರಗತಿ ಮತ್ತು ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇನೆ

ನಗರ-ಸಭೆಯವರು ದೂರಧ್ವನಿಕ್ಷೇಪಕದ ವ್ಯವಸ್ಥೆ ಮಾಡಿದ್ದರಿಂದ ಭಾಷಣಗಳು ದೂರದಲ್ಲಿ ನಿಂತ ಇಲ್ಲವೆ ಕೂತ ಸ್ತ್ರೀ-ಪುರುಷ-ಮಕ್ಕಳಿಗೆ ಸಹ ಕೇಳಬರುತ್ತಿದ್ದವು. ಕೊನೆಗೆ ಆಭಾರಮನ್ನಣೆ, ರಾಷ್ಟ್ರಗೀತ ಮತ್ತು ಪಂಚಕಜ್ಜಾಯದ ಹಂಚುವಿಕೆಯಾಗಿ ಸಮಾರಂಭದ ಸಮಾಪ್ತಿಯಾಯಿತು

ಮಾನ್ಯ ಬಾಳಾಸಾಹೇಬ ಖೇರರವರಿಂದ

ಮ। ಗಾಂಧಿ ಹರಿಜನ-ವಸತಿಯ

ಶಂಕು-ಸ್ಥಾಪನೆ

ಈ ಹಿಂದೆ ತಿಳಿಸಿದಂತೆ ಕುಮಟಾ ನಗರ ಸಭೆಯವರು, ತಮ್ಮ ಹರಿಜನ-ನೌಕರರ ಬಗ್ಗಾಗಿ ಮಾನಸ್ಪೇಟೆಯ ಸಮೀಪವಿರುವ ಉನ್ನತ ಪ್ರದೇಶದಲ್ಲಿ ಕಟ್ಟಿಸಲುಯೋಜಿಸಿರುವ ಮಹಾತ್ಮ ಗಾಂಧಿ ಹರಿಜನ ವಸತಿಯ ಶಂಕುಸ್ಥಾಪನೆ ಮಾಡುವ ಸಮಾರಂಭ ಕಳೆದ ತಾ ೧೮ನೇ ಬುಧವಾರ ಬೆಳಿಗ್ಗೆ ೮| ಘಂಟೆಗೆ ಮುಂಬಯಿಯ ಮುಖ್ಯಮಂತ್ರಿ ಮಾನ್ಯ ಬಾಳ ಗಂಗಾಧರ ಖೇರ ಇವರ ವರದ ಹಸ್ತದಿಂದ ನೆರವೇರಿತು. ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಡಾ॥ ಕೇಶವೈನ್ಸ್ ಕೌನ್ಸಿಲ ಸದಸ್ಯ ರಾ॥ ಗೋಪಿ. ಎಸೆಂಬ್ಲಿ ಸದಸ್ಯ ರಾ|| ಸಣ್ಣಪ್ಪ ಗಾಂವಕಾರ, ಜಿಲ್ಹಾಧಿಕಾರಿಯಾದ ರಾ|| ಜಾಧವ, ಜಿಲ್ಲಾ ನ್ಯಾಯಾಧೀಶ ರಾ|| ಶ್ರೀಖಂಡೆ, ಕಾರವಾರದ ವಕೀಲ ರಾ|| ಕೃಷ್ಣರಾವ ಹಳದೀಪುರ ವಗೈರೆ ಪ್ರಮುಖರು ಈ ಸಮಾರಂಭದಲ್ಲಿ ಪ್ರಾಮುಖ್ಯದಿಂದ ಕಾಣುತ್ತಿದ್ದರು. ಊರೊಳಗಿನ ಅಧಿಕಾರಿ ಹಾಗೂ ಅಧಿಕಾರೇತರ ಪ್ರತಿಷ್ಠಿತರೂ ನಗರಸಭೆಯ ಸಕಲ ಸದಸ್ಯರೂ ಸಮಾರಂಭಕ್ಕಾಗಿ ನೆರೆದಿದ್ದರು ಅದರಂತೆ ಬಹಳಷ್ಟು ಸ್ತ್ರೀ ಪುರುಷರೂ ಕೂಡಿದ್ದರು. ವೇದಿಕೆಯ ಮೇಲೆ ದೂರಧ್ವನಿವಾಹಕ ಯಂತ್ರದ ವ್ಯವಸ್ಥೆ ಮಾಡಿದ್ದರಿಂದ ಸಭೆಯಲ್ಲಾದ ಭಾಷಣಗಳು ದೂರದಲ್ಲಿ ನಿಂತ ಜನರಿಗೂ ಕೂಡ ಸ್ಪಷ್ಟವಾಗಿ ಕೇಳಬರುತ್ತಿದ್ದವು.

ನಗರಸಭೆಯ ಅಧ್ಯಕ್ಷರು ಮೊದಲು ಮಂತ್ರಿಗಳಿಗೆ ಸ್ವಾಗತಬಯಸಿ, ಸಂಕಲ್ಪಿತ ಹರಿಜನ-ವಸತಿಯ ಕೋನಶಿಲೆಯನ್ನು ಕೂಡ್ರಿಸಿಕೊಡಲು ಮಂತ್ರಿಗಳಿಗೆ ಬಿನ್ನವಿಸಿದರು. ಈ ಜಿಲ್ಹೆಯಲ್ಲಿ ಹರಿಜನ ನೌಕರರಿಗಾಗಿ ವಸತಿಗೃಹಗಳನ್ನು ಕಟ್ಟಿಸಿಕೊಡುವ ಉಪಕ್ರಮವು ಮಾಡಿದ ೧ನೇ ನಗರ ಸಭೆ ಕುಮಟೆಯದೇ ಎಂದವರು ಅಭಿಮಾನಪೂರ್ವಕವಾಗಿ ತಿಳಿಸಿದರು. ಅಧ್ಯಕ್ಷರ ವಿನಂತಿಯ ಮೇರೆಗೆ ಮಂತ್ರಿಗಳು ಸಂಕಲ್ಪಿತ ಇಮಾರತಿನ ಅಡಿಗಲ್ಲನ್ನಿಟ್ಟು, ತಿರುಗಿ ವೇದಿಕೆಗೆ ಬಂದು, ಹರಿಜನೋದ್ಧಾರದ ಮಹತ್ವವನ್ನು ಕುರಿತು ಸುದೀರ್ಘ ಭಾಷಣ ಮಾಡಿದರು. ಹರಿಜನರನ್ನು ನಾವು ಪರಕೀಯರೆಂದು ಇಲ್ಲವೆ ಕಡಿಮೆಯವರೆಂದು ತಿಳಿಯಬಾರದಾಗಿಯೂ, ಸ್ವತಂತ್ರ ಭಾರತದಲ್ಲಿ ಹರಿಜನರಿಗೆ ಇತರರಿಗಿರುವಷ್ಟೇ ಸೌಕರ್ಯ-ಸೌಲಭ್ಯಗಳು ಮತ್ತು ಹಕ್ಕು-ಬಾಧ್ಯತೆಗಳು ಪ್ರಾಪ್ತವಾಗಬೇಕೆಂದೂ ಪ್ರಾಪ್ತವಾಗಿವೆಂದೂ, ಇಷ್ಟು ಕಾಲ ಹಿಂದುಗಳು ಹರಿಜನರನ್ನು ಅಪಮಾನಕರಂತೆ ನಡಿಸಿದ್ದು ಲಾಂಛನಾಸ್ಪದವಿರುತ್ತದೆಂತಲೂ, ದೇವರಾಗಲಿ ನಿಸರ್ಗವಾಗಲಿ ಹರಿಜನರೊಳಗೂ ಇತರರೊಳಗೂ ಏನೇನೂ ಭೇದಭಾವ ಮಾಡದಿರುವಾಗ ನಾವು ಮಾನವರು ಅಂಥ ಭೇದಭಾವವನ್ನು ಮಾಡುವದು ದೇವರ ಹಾಗೂ ನಿಸರ್ಗದ ದ್ರೋಹ ಒಗೆದಂತಾಗುವದೆಂದೂ, ಮಹಾತ್ಮಾಜಿಯವರು ಅಸ್ಪೃಶ್ಯತೆಯ ಕಲಂಕ ಹೋಗದ ಹೊರತು ಹಿಂದು ಧರ್ಮ ಬಾಳುಳಿಯುವಂತಿಲ್ಲೆಂದು ಸಿದ್ಧಾಂತ ಮಾಡಿ ಅಸ್ಪೃಶ್ಯತೆಯ ಉಚ್ಚಾಟನೆಗಾಗಿ ಅವಿಶ್ರಾಂತ ದುಡಿದು ಸಿಂಹಕಾರ್ಯ ಮಾಡಿರುವರೆಂದೂ, ಭಾರತೀಯ ಪ್ರಜಾರಾಜ್ಯದ ಹೊಸ ಘಟನೆಯು ಅಸ್ಪೃಶ್ಯತೆಯ ಲವಲೇಶವನ್ನು ಸಹ ಮನ್ನಿಸುವದಿಲ್ಲೆಂದೂ. ಓರ್ವ ಹರಿಜನನಿಂದು ಭಾರತದ ಪ್ರಜಾರಾಜ್ಯದ ಅಧ್ಯಕ್ಷನಾಗಲಿ ಮುಖ್ಯಮಂತ್ರಿಯಾಗಲಿ ಆಗಬಲ್ಲನೆಂದೂ, ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ಮಾಡಿ ನಮ್ಮಂತೆ ದೇವರ ಸೇವೆ ಮಾಡಲು ಅನುಕೂಲತೆ ಮಾಡಿಕೊಡದಿರುವದು ಪಾಪವೆಂದೂ ಬಹಳ ಚಿತ್ತಾಕರ್ಷಕವಾಗಿ ಬೋಧಿಸಿದರು ಮಂತ್ರಿಗಳು ಕುಮಟೆಗೆ ಬರುವ ಮುನ್ನಾ ದಿನ

(ಅಂದರೆ ೩೧ ನೇ ಸೋಮವಾರ) ಮುಂಜಾನೆ ಇಲ್ಲಿಯ ಚಮಗಾರ ಬಾಂಧವರೂ ಭಗಿನಿಗಳೂ ಮೆರವಣಿಗೆಯಿಂದ ಹೊರಟು ಇಲ್ಲಿಯ ಎಲ್ಲ ದೇವಸ್ಥಾನಗಳಲ್ಲಿ ಪ್ರವೇಶ ಮಾಡಿ ದೇವರಿಗೆ ಸೇವೆ ಸಲ್ಲಿಸಲು ಪ್ರಯತ್ನ ಮಾಡಿದ್ದು ಆಗ ಕೆಲವು ದೇವಸ್ಥಾನಗಳ ಮುಖ್ಯಸ್ಥರು ತಮ್ಮ ಗುಡಿಗಳು ಸಾರ್ವಜನಿಕ ಗುಡಿಗಳಲ್ಲೆಂದೂ, ವಿಶಿಷ್ಟ ಮನೆತನಗಳಿಗೊಪ್ಪಿದ ಖಾಸಗಿ ಗುಡಿಗಳಾಗಿರುತ್ತವೆಂದೂ ಹೇಳಿ, ಆ ಬಂಧು-ಭಗಿನಿಗಳಿಗೆ ಪ್ರವೇಶ ಕೊಡಲಿಲ್ಲವಂತೆ ಈ ಸಂಗತಿಯನ್ನು ಚಮಗಾರ ಬಾಂಧವರ ಗೆಳೆಯರು ಮಂತ್ರಿಗಳ ಕಿವಿಯ ಮೇಲೆ ಹಾಕಿರಬೇಕು ಮಂತ್ರಿಗಳು ತಮ್ಮ ಭಾಷಣದಲ್ಲಿ ಆ ವಿಷಯವನ್ನೂ ಎತ್ತಿ, "ಹರಿಜನರು ಗುಡಿ-ಪ್ರವೇಶದ ಬಗ್ಗೆ ಬಲಾತ್ಕಾರ ಮಾಡಕೂಡದು. ಗುಡಿಗಳ ಮುಖ್ಯಸ್ಥರು ತಮ್ಮ ಗುಡಿಗಳು ಸಾರ್ವಜನಿಕವಲ್ಲೆಂದು ವಾದಿಸಿದರೆ, ಆ ವಾದದ ಸತ್ಯಾಸತ್ಯತೆಯನ್ನಾಗಲಿ ಯುಕ್ತಾಯುಕ್ತತೆಗಳನ್ನಾಗಲಿ ನಿರ್ಣಯಿಸುವರು ದಿವಾಣಿ ನ್ಯಾಯಾಲಯಗಳ ಅಧಿಕಾರವಿರುತ್ತದೆ ನಾವು-ನೀವು ಆ ನಿರ್ಣಯ ಕೊಡಲಾರೆವು ಗುಡಿಗಳ ಚಾಲಕರನ್ನು ಒಲಿಸಿಕೊಂಡು ಹರಿಜನರು ಗುಡಿಗಳಲ್ಲಿ ಪ್ರವೇಶ ದೊರಕಿಸಿಕೊಳ್ಳುವದುಚಿತ" ಎಂದು ಮಾರ್ಗದರ್ಶನ ಮಾಡಿದರು

ಮಂತ್ರಿಗಳ ಈ ಭಾಷಣ ಕನ್ನಡದಲ್ಲಾಯಿತು ನಡುನಡುವ ಕನ್ನಡ ಶಬ್ದಗಳು ಸೂಚಿಸದಿದ್ದರೆ ಮಂತ್ರಿಗಳು ಸಮಾನಾರ್ಥಕ ಸಂಸ್ಕೃತ, ಮರಾಠಿ ಇಲ್ಲವೆ ಇಂಗ್ಲಿಷ ಶಬ್ದಗಳನ್ನು ಉಪಯೋಗಿಸಿ ತಮ್ಮ ವಾಕ್ಪ್ರವಾಹವನ್ನು ಅಸ್ಖಲಿತವಾಗಿ ಹರಿಸುತ್ತಿದ್ದರು ಆದರಿಂದ ಅವರ ಭಾಷಣದ ರಸದಲ್ಲಾಗಲಿ, ವಿಚಾರ-ಪ್ರತಿಪಾದನೆಯ ಶೈಲಿಯಲ್ಲಾಗಲಿ ಏನೇನೂ ನ್ಯೂನತೆಯಾಗುತ್ತಿದ್ದಿಲ್ಲ ಸಭೆಯ ಪ್ರಾರಂಭಕ್ಕೆ ದೂರದಲ್ಲಿ ನಿಂತಿದ್ದ ಹೆಣ್ಣು ಮಕ್ಕಳನ್ನು ಸಚಿವೋತ್ತಮರು ಮುಂದಕ್ಕೆ ಕರೆಯಿಸಿ ಹತ್ತಿರದಲ್ಲೇ ಕೂಡ್ರಿಸಿಕೊಂಡಿದ್ದರು ಆ ಅಶಿಕ್ಷಿತ ಹೆಣ್ಣುಮಕ್ಕಳಿಗೂ ಮಂತ್ರಿಗಳ ಭಾಷಣ ತಿಳಿಯುವಂತಾಯಿತು ಕೊನೆಗೆ ಆಭಾರ-ಮನ್ನಣೆ, ರಾಷ್ಟ್ರಗೀತ ಮುಂತಾದವಾಗಿ ಈ ರಮ್ಯ ಸಮಾರಂಭವು ಮುಕ್ತಾಯಗೊಂಡಿತು.

ಜಾಹೀರ ನೋಟೀಸು.

ಹೋದ ತಿಂಗಳು ಬೀರ ಗೌಡಾ ಗೋಳಿಕಟ್ಟೆ ಹಾಲಿ ಸಾಕಿನ ಧಾರವಾಡಿ ...ಇವರಿಗೆ —

ಈ ಮೂಲಕ ತಿಳಿಸುವದೇನೆಂದರೆ ... ನೀನು ನನ್ನನ್ನು ಲಗ್ನವಾಗಿ ... ವರ್ಷಗಳಾದವು. ಆದರೆ ಈಗ ... ವರ್ಷಗಳಿಂದ ನೀನು ನನ್ನನ್ನು ನನ್ನ ಮನೆಯನ್ನು ಬಿಟ್ಟು ಧಾರವಾಡದಲ್ಲಿ ನಿನ್ನ ತವರುಮನೆಯೊಳಗೇ ಇರುತ್ತೀ! ಕರೆದರೂ ನನ್ನ ಮನೆಗೆ ಬರುವದಿಲ್ಲ, ಗೃಹಕೃತ್ಯ ಮಾಡುವದಿಲ್ಲ. ಆದ್ದರಿಂದ ನಾನು ನಿನ್ನ ಆಶೆ ಬಿಟ್ಟಿದ್ದೇನೆ. ಇನ್ನು ನೀನು ನನ್ನ ಹೆಂಡತಿಯಲ್ಲ, ನಾನು ನಿನ್ನ ಗಂಡನಲ್ಲ. ... ನನ್ನ ಸಂಸಾರಕ್ಕಾಗಿ ಇನ್ನೊಂದು ಮದುವೆಯಾಗಲು ನಾನು ಸ್ವತಂತ್ರನಿದ್ದೇನೆ. ಹಾಗೂ ನೀನು ನನ್ನ ಮೇಲೆ ಯಾ ನನ್ನ ಆಸ್ತಿಯ ಮೇಲೆ ಏನೂ ಹಕ್ಕು ಹೇಳಕೂಡದು ತಿಳಿದಿರಲಿ.

ತಾ ೨೦-೧-೧೯೫೧ ● ಇದು ಬೀರಾ ತಿಮ್ಮಗೌಡಾ ಸಾ|| ಗೋಳಿಕಟ್ಟೆ ಇವನ ಎ. ಹ ಗುರುತು

ಹೆಗಡೆಯಲ್ಲಿ ರೈತರ ಸಭೆ.

ಒಡೆಯರ ಒಡೆತನ ಕ್ರಮೇಣ ನಷ್ಟವಾಗುವದೆಂದು ಮುಖ್ಯ ಪ್ರಧಾನರ ಭವಿಷ್ಯ

ಕುಮಟೆಯೊಳಗಿನ ಹರಿಜನ ವಸತಿಯ ಶಂಕುಸ್ಥಾಪನೆಯ ಕೆಲಸವಾಗುತ್ತಲೆ ಮುಖ್ಯ ಮಂತ್ರಿಗಳು ಬೇಸಾಯ-ಪ್ರಯೋಗದ ಹೊಲಕ್ಕೆ ಹೋಗಿ, ಅಲ್ಲಿಯ ಕಾರ್ಯವನ್ನು ನಿರೀಕ್ಷಿಸಿ, ಹಾಗೆಯೇ ಹೆಗಡೆಯಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ರಾ|| ಜಾಲಿಸತಗಿಯವರು ಮುದ್ದಾಮ ಏರ್ಪಡಿಸಿದ ರೈತರ ಸಭೆಗೆ ಹಾಜರಿರಲು ಹೆಗಡೆಗೆ ಹೊರಟರು ಒಡೆಯ-ಒಕ್ಕಲಿಗರ ಸಭೆಯನ್ನು ಏರ್ಪಡಿಸಲಾಗಿದೆಂದು ರಾ|| ಜಾಲಿಸತಗಿಯವರು ಮಂತ್ರಿಗಳಿಗೆ ತಿಳುವಳಿಕೆ ಕೊಟ್ಟಿದ್ದರೆಂದು ತಿಳಿಯುತ್ತದೆ ಆದರೆ ರಾ|| ಜಾಲಿಸತಗಿಯವರಾಗಲಿ ಅವರ ಪ್ರಭಾವಳಿಯೊಳಗಿನ ಜನರಾಗಲಿ ಒಡೆಯರಿಗಂತೂ ಸಭೆಗೆ ಕರೆದಿದ್ದಿಲ್ಲ, ಎಲ್ಲ ರೈತರಿಗೂ ಸಹ ನಿಮಂತ್ರಿಸಿದ್ದಿಲ್ಲ. ಆದರಿಂದ ಅವರ ಸಭೆಗೆ ಬರೇ ೨೦೦--೩೫೦ ಒಕ್ಕಲಿಗರು ಕೂಡಿದ್ದರು ರೈತ-ಕೂಟಕ್ಕೊಪ್ಪಿದ ಒಕ್ಕಲಿಗರು ಈ ಸಭೆಗೆ ಬಹಿಷ್ಕಾರ ಹಾಕಿದ್ದರೆಂಬಂತೆ ತೋರುತ್ತಿದೆ. ಅವರ ಮುಖಂಡರಾರೂ ಈ ಸಭೆಯಲ್ಲಿ ಕಂಡುಬರಲಿಲ್ಲ

ಮಂತ್ರಿಗಳು ಸಭಾಸ್ಥಾನಕ್ಕೆ ಬಂದು ವೇದಿಕೆಯ ಮೇಲೆ ತಮಗಾಗಿ ಮಾಂಡಿಸಿಟ್ಟ ಆಸನವನ್ನು ಮಂಡಿಸಿದ ತರುವಾಯ ರಾ|| ಜಾಲಿಸತಗಿಯವರು ಪ್ರಾರಂಭಿಕ ಭಾಷಣಮಾಡಿದರು ಹೋದ ವರ್ಷ ಹೊನ್ನಾವರದ ವಕೀಲ ಮಂಡಳವು ಮಂತ್ರಿಗಳ ಸಂಚಾರವನ್ನು ಕಟುತರವಾಗಿ ಟೀಕಿಸಿ ಮಾಡಿದ ಗೊತ್ತುವಳಿಯ ಉಲ್ಲೇಖ ಮಾಡಿ ರಾ|| ಜಾಲಿಸತಗಿಯವರು ಆ ಗೊತ್ತುವಳಿಯನ್ನು ತಾವು ನಿಷೇಧಿಸುತ್ತೇವೆಂದೂ, ವಕೀಲ ಮಂಡಳವು ಅಂತಹ ಠರಾವು ಮಾಡಿದ್ದು ನೆನೆದು ತಮಗೆ ಈಗಲೂ ವೇದನೆಗಳಾಗುತ್ತವೆಂದೂ ಮಂತ್ರಿಗಳಿಗೆ ತಿಳಿಸಿ ಮುಂದೆ ಟೆನನ್ಸಿ ಕಾಯದೆಯಿಂದ ರೈತ ಜನರಿಗೆ ಅಪೇಕ್ಷಿಸಿದಷ್ಟು ಹಿತವಾಗಿಲ್ಲೆಂದೂ, ದಾವೆ-ವ್ಯವಹರಣೆಗಳಿಂದ ರೈತರು ನುಗ್ಗುನುಗ್ಗಾಗುತ್ತಿರುವರೆಂದೂ, ಒಡೆಯರು ಸಾವಿರಾರು ಕಟಲೆ ದಾವೆಗಳನ್ನು ಮಾಡಿ ಒಕ್ಕಲಿಗರನ್ನು ದಣಿಸುತ್ತಿದ್ದಾರೆಂದೂ ವಿಸ್ತಾರವಾಗಿ ಬಣ್ಣಿಸಿದರು ರಾ|| ಜಾಲಿಸತಗಿಯವರು ರೈತರದೊಂದೇ ಪಕ್ಷ ಹಿಡಿದು ಹೀಗೆ ಬಹಳ ಹೊತ್ತು ಮಾತಾಡುತ್ತ ಹೋದಲ್ಲಿ ಈ ಸಭೆಗಾಗಿ ಮಂತ್ರಿಗಳು ಗೊತ್ತುಪಡಿಸಿದ ಒಂದು ತಾಸಿನಲ್ಲಿ ವಿರೋಧಿ ಪಕ್ಷದ ಹೇಳಿಕೆ ಕೇಳಿಕೊಳ್ಳಲು ಮಂತ್ರಿಗಳಿಗೆ ಅವಕಾಶ ಸಿಗುವಂತಿಲ್ಲೆಂದು ಕುಮಟೆಯ ಶಾಸ್ತ್ರಿ ರಾ|| ಶಂಕರ ರಾವ ವಿಜ್ಞಾನಕರರು ರು ಮಾತಲಾಗಿ ಪ್ರಧಾನಾಮಾತ್ಯರು ರಾ|| ಜಾಲಿಸತಗಿಯವರಿಗೆ ತಮ್ಮ ಭಾಷಣ ಸ್ವಲ್ಪದರಲ್ಲೇ ಮುಗಿಸಲು ಆಜ್ಞಾಪಿಸಿದರು ರಾ|| ವಿಜ್ಞಾನಕರರಿಗೂ ಎರಡು ಮಾತು ಹೇಳಬೇಕೆಂದು ಇಚ್ಛೆಯಿತ್ತು ಆದರೆ ಹೊತ್ತು ಇಲ್ಲೆಂಬ ಕಾರಣ ಹೇಳಿ ಮುಖ್ಯ ಪ್ರಧಾನರೇ ಜಾಲಿಸತಗಿಯವರ ಹಿಂದಿನಿಂದ ತಮ್ಮ ಭಾಷಣ ಮಾಡಲೆದ್ದರು ರಾ|| ಜಾಲಿಸತಗಿಯವರು ಈ ಸಭೆಗಾಗಿ ಕುಮಟೆಯಿಂದ ದೂರಧ್ವನಿ ವಾಹಕ ಯಂತ್ರ ತರಿಸಿದ್ದರು. ಆದರೆ ಅದರ ಆವಶ್ಯಕತೆಯೇನೂ ತೋರಲಿಲ್ಲ ಆದರಿಂದ ಮಂತ್ರಿಗಳು ಆ ಯಂತ್ರದ ಮುಂದೆ ಮಾತಾಡುವ ಗೋಜಿಗೆ ಹೋಗಲಿಲ್ಲ ಅವರ ಭಾಷಣ ಕನ್ನಡದಲ್ಲಿ ಆಯಿತು ಅವರು ಹೇಳಿದ್ದೇನೆಂದರೆ —

ಒಕ್ಕಲಿಗರಿಗೆ ಮಂತ್ರಿಗಳ ಉಪದೇಶ

"ನಿಮ್ಮ ಹಳ್ಳಿಗೆ ನಾನು ಮುದ್ದಾಮ ಬಂದಿದ್ದೇನೆ ಇಲೆಕ್ಷನ್-ಪ್ರಚಾರ ಮಾಡಲು ನಾನಿಲ್ಲಿ ಬಂದಿಲ್ಲ ಮುಂದಿನ ಚುನಾವಣೆಯಲ್ಲಿ ನಿಮಗಿಷ್ಟವಿದ್ದವರಿಗೆ ನೀವು ಮತ ಕೊಡಿರಿ ನನಗೆ ಮಂತ್ರಿಯಾಗಬೇಕೆಂಬ ಹವ್ಯಾಸವಿಲ್ಲ, ಮಂತ್ರಿಯಾಗಿ ಜೀವನ ನಡಿಸಬೇಕಾದ ಪ್ರಸಂಗವೂ ನನಗೆ ಬಂದಿಲ್ಲ ನಾನು ಮಹಾತ್ಮರ ಶಿಷ್ಯನಿದ್ದೇನೆ ಅವರ ತತ್ವಗಳಂತೆ ನಾನು ನಡೆಯುವೆನು.

ಹೊನ್ನಾವರದ ವಕೀಲರ ಗೊತ್ತುವಳಿಯಿಂದ ನನಗೇನೂ ಬೇಸರವಾಗಿಲ್ಲ ವಕೀಲರೆಂದರೆ ಜನರನ್ನು ಸುಲಿಯುವವರು, ಬಿಳಿಯರ ಆಡಳಿತವು ಆಯುಷ್ಯ ಪುಕ್ಕಟೆ ಕಳೆಯುವ ಮಂದಿ ಎಂಬದನ್ನು ನಾನು ಬಲ್ಲೆ ಅವರು ಏನೇ ಹೇಳಿದರೂ ನಾವು ನಮ್ಮ ಮಾರ್ಗ ಬಿಟ್ಟು ನಡೆಯುವಂತಿಲ್ಲ ಮಹಾತ್ಮರು ಹಾಕಿಕೊಟ್ಟ ಮಾರ್ಗದಿಂದಲೇ ನಾವು ನಡೆಯುವೆವು ನಾನು ಸ್ವತಃ ನನ್ನ ಹೊ...

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸಾಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೆ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ. ಸೂಚನೆ—ಕೆನರಾದಿಂದ (ಯು ಕೆ ಟಿ, ಬಿ ಕೆ, ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮಲ್ಲಿ ಬರುವ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ಏರ್ಪಾಟು ಮಾಡಲಾಗುವದು ಇದಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇರುವದು

ಮಾಲಕ:— ಮ್ಯಾಳಪ್ಪಾ ಪೈ.

ಭೂಮಿಗಳನ್ನು ರೈತರಿಗೆ ಬಿಟ್ಟು ಕೊಟ್ಟಿದ್ದೇನೆ, ನನ್ನ ಮನೆಯನ್ನೂ ಹರಿಜನರ ವಿದ್ಯಾಮಂದಿರಕ್ಕೆ ದತ್ತಿ ಮಾಡಿಕೊಟ್ಟಿರುತ್ತೇನೆ ಹೊನ್ನಾವರಕ್ಕೆ ನಾವು ಬಂದೊಡನೆ ಅಲ್ಲಿಯ ವಕೀಲರ ಸಂಘಟನೆ ಬಿದ್ದರೆ ಅದಕ್ಕೆ ನಮ್ಮ ಆಕ್ಷೇಪವಿಲ್ಲ ನಮಗೆ ಬೇರೆ ಕುಂಟಕೆಲಸವುಂಟು ಅದನ್ನು ನಿರ್ವಹಿಸುವದೇ ನಮಗೆ ಭಾರವಾಗಿದೆ

ನಮ್ಮ ನಾಡಿನ ರೈತರು ಶೀರ ಹೀನ ಅವಸ್ಥೆಯಲ್ಲಿದ್ದಾರೆ ಅವರ ಜೀವನದ ಮಟ್ಟವನ್ನು ನಾವು ಎತ್ತರಿಸಬೇಕಾಗಿದೆ ಅವರಿಗೆ ಹೊಟ್ಟೆಗೆ ಸಾಕಷ್ಟು ಅನ್ನ, ಇರಲಿಕ್ಕೆ ಯೋಗ್ಯ ಮನೆ ಶರೀರ ರಕ್ಷಣೆಗೆ ಬೇಕಷ್ಟು ಬಟ್ಟೆ ಮತ್ತು ಪ್ರಪಂಚದ ಪರಿಚಯ ಮಾಡಿಕೊಳ್ಳಲು ಸಾಕಷ್ಟು ವಿದ್ಯೆ ದೊರಕಿಸಲು ಅನುಕೂಲವಾಗುವಂತೆ ಮಾಡಲು ನಾವು ಯತ್ನಿಸುತ್ತಿದ್ದೇನೆ ಮಹಾತ್ಮರು ಹೇಳಿದಂತೆ ನನಗೆ ಮೋಕ್ಷ ಬೇಡ, ರಾಜ್ಯ ಬೇಡ, ಬಡವರ ಸೇವೆ ಮಾಡುವದೇ ನನ್ನ ಗುರಿ. ಬಡವರ ಸೇವೆ ಮಾಡಲು ಅನುಕೂಲವಾಗುವಂತೆಯೇ ನನಗೆ ಪುನಃ ಪುನಃ ಜನ್ಮ ಕೊಡು ಎಂದು ನಾನು ದೇವರ ಬಳಿ ಬೇಡುತ್ತಿದ್ದೇನೆ.

ನಿಮ್ಮ ಸ್ಥಿತಿ ಸುಧಾರಿಸಲು ನಮ್ಮ ಸರಕಾರ ಪ್ರಯತ್ನ ಮಾಡುತ್ತಿದೆ ಆದರೆ ಗಾಂಧಿಜಿಯವರ ಸತ್ಯ ಮತ್ತು ಅಹಿಂಸೆಯ ಮಾರ್ಗಗಳಿಂದಲೇ ನಾವು ಮುಂದರಿಯಬೇಕಾಗಿದೆ. ಒಡೆಯರು ತೋಳಗಳಂತಿದ್ದಾರೆ ಒಕ್ಕಲಿಗರು ಕುರಿಗಳಂತಿದ್ದಾರೆ ಈ ತೋಳಗಳ ಬಾಯಿಂದ ಕುರಿಗಳನ್ನು ತಪ್ಪಿಸಬೇಕಾಗಿದೆ ಆದರೆ ಮಹಾತ್ಮರು ಹೇಳಿದಂತೆ ನಾವು ಒಡೆಯರನ್ನು ಅಹಿಂಸೆಯ ಅಸ್ತ್ರದಿಂದಲೇ ಗೆಲ್ಲಬೇಕು ಮಹಾತ್ಮರು ಬಲಾಢ್ಯ ಬ್ರಿಟಿಶರನ್ನು ಅಹಿಂಸೆಯ ಮಾರ್ಗದಿಂದಲೇ ಗೆದ್ದಿರುವಾಗ ಒಡೆಯರನ್ನು ಅದೇ ಮಾರ್ಗದಿಂದ ಗೆಲ್ಲುವದು ನಮಗೆ ಅಸಾಧ್ಯವಾದೀತೇನು ? ಒಡೆಯರ ಸೊತ್ತನ್ನು ನೀವು ಬಲಾತ್ಕಾರದಿಂದ, ಹಿಂಸಾಚಾರದಿಂದ ಕಸಕೊಂಡರೆ, ಹೆರವರು ನಿಮ್ಮ ಕೈಯಿಂದ ಅದನ್ನು ಕಸಕೊಳ್ಳುವರೆಂಬುದನ್ನು ಲಕ್ಷದಲ್ಲಿಡಿರಿ. ಬೇರೆ ಪಕ್ಷದವರ ಮಾತುಗಳಿಗೆ ಮರುಳಾಗಬೇಡಿರಿ ಕೊಂಗ್ರೆಸ್ಸೊಂದೇ ನಿಮ್ಮ ಕಲ್ಯಾಣ ಸಾಧಿಸಬಲ್ಲದು. ನಿಮಗಿಂತ ನಿಕೃಷ್ಟ ಸ್ಥಿತಿಯಲ್ಲಿರುವ ಆದಿವಾಸಿ ಜನರೊಳಗೆ ನಾನು ಕೆಲಸ ಮಾಡಿದ್ದೇನೆ ನನ್ನ ಹಿಂದೆ ಕಮ್ಯುನಿಸ್ಟರು ಹೋಗಿ ಆ ಜನರಿಗೆ ಹಿಂಸಾಚಾರದ ಮಾರ್ಗ ಅನುಸರಿಸಲು ಬೋಧಿಸಿದರು. ಆದಿವಾಸಿಗಳು ಈ ಮಾತಿಗೆ ಕಿವಿಗೊಡಲಿಲ್ಲ ನಿಮಗೂ ನಾನು ಖಂಡಿತ ಹೇಳುತ್ತೇನೆ, ಹಿಂಸೆಯ ಮಾರ್ಗ ಎಂದೆಂದೂ ಒಳಿತಲ್ಲ

ನಿಮಗೆ ಈಗ ಬೆಳೆಯಲ್ಲಿ ೨/೩ ಪಾಲು ಸಿಗುತ್ತದೆ ಅದನ್ನು ನೀವು ಪಡೆದು ಸಮಾಧಾನ ಪಡೆಯಬೇಕು ಮುಂದೆ ನಿಮ್ಮ ಪಾಲನ್ನು ಕ್ರಮೇಣ ೩/೪, ೪/೫, ೫/೬ ಮಾಡುತ್ತ ಒಡೆಯರ ಒಡೆತನದ ಹಕ್ಕನ್ನು ಸಂಪೂರ್ಣದಲ್ಲಿ ತರಬೇಕೆಂದು ನಮ್ಮ ಧ್ಯೇಯವುಂಟು ಆದರೆ ಸತ್ಯ, ಅಹಿಂಸೆಗಳ ಮಾರ್ಗದಿಂದ ಈ ಧ್ಯೇಯ ನಾವು ಸಾಧಿಸಬೇಕಾಗಿದೆ

ಈ ರೀತಿ ಮಂತ್ರಿಗಳ ಭಾಷಣವಾದ ಮೇಲೆ ರಾ॥ ಸಣ್ಣಪ್ಪ ಗಾಂವಕಾರರು ಆಭಾರ ಮನ್ನಿಸಲಿದ್ದರು ಮೊಸ್ಯ ಬೇರರು ಅವರಿಗೆ ಹೆಚ್ಚಿಗೆ ಮಾತಾಡಲು ಬಿಡಲಿಲ್ಲ ಕೊನೆಗೆ ರಾಷ್ಟ್ರಗೀತವಾಗಿ ಸಭೆಯ ವಿಸರ್ಜನೆಯಾಯಿತು

ಈ ಸಭೆಯಲ್ಲಿ ಮಾತಾಡಲು ತಮಗೆ ೫ ನಿಮಿಷ ಅವಕಾಶ ಕೊಡಬೇಕೆಂದು ಕೇಳಿದ ರಾ॥ ಮಿರ್ಜಾನಕರರಿಗೆ 'ನೀವು ಹೇಗಾದರೂ ಇಲ್ಲಿಯವರೇ ಇರುತ್ತೀರಿ ಬೇಕಾದಾಗ ಇಲ್ಲಿ ಬಂದು ಸಭೆ ಸೇರಿಸಿ ಮಾತಾಡಲು ನಿಮಗೆ ಸಾಧ್ಯವಿದೆ' ಎಂದು ಹೇಳಿ ಮಂತ್ರಿಗಳು ಅವರಿಗೆ ಸಮಾಧಾನ ಮಾಡಿ ಕೂಡ್ರಿಸಿದರು

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಕಡಿಮೆಯಾಗಿದೆ ಮ್ಯುನಿಸಿಪಾಲಿಟಿಯವರು ತಾ. ೧೦ರಿಂದ ಮಾರ್ಗಗಳ ಮೇಲೆ ನೀರು ಹಾಕಿಸಲಾರಂಭಿಸಿದ್ದರಿಂದ ಧೂಳಿನ ಉಪದ್ರವ ಕಡಿಮೆಯಾಗಿದೆ

ಅದೇ ಬರುವ ಗುರುವಾರ ಪ್ರಜಾಸತ್ತಾಕದ ಉದಯದ ನಿಮಿತ್ತವಾಗಿ ಎಲ್ಲೆಲ್ಲೂ ಉತ್ಸವವಾಗುವಂತೆ ಅಧಿಕಾರಿಗಳೂ ಅಧಿಕಾರೇತರರೂ ಕೂಡಿ ಇಲ್ಲಿ ಉತ್ಸವ ಮಾಡುವವರಿದ್ದಾರೆ ಅಂದು ಮುಂಜಾನೆ ಮೆರವಣಿಗೆ — ಧ್ವಜವಂದನೆಗಳೂ ಸಾಯಂಕಾಲ ಸಭೆಯೂ ಆಗುವವು ಸದರಿ ಹಬ್ಬದ ಕಾಲಕ್ಕೆ ಪ್ರತಿಯೊಂದು ಶಾಲೆಯ ಪ್ರತಿಯೊಬ್ಬ ಸಣ್ಣ—ದೊಡ್ಡ ವಿದ್ಯಾರ್ಥಿಗೆ ([illegible]) ೨—೩ ಆಣೆಯಂತೆ ದಕ್ಷಿಣೆ ಹಂಚಬೇಕಾಗಿ ಎಲ್ಲ ಶಾಲಾ—ಮಾಲಕರಿಗೆ ತಿಳಿಸಿದ್ದಾರೆ ದಕ್ಷಿಣೆಯು ಮಿಠಾಯಿ ಸರಕಾರದಿಂದ ಸಿಗುವದು

ಸೀಧಾ—ಅಂಗಡಿಗಳಲ್ಲಿ ಇನ್ನೂ ಸಕ್ಕರೆ ಬಂದಿಲ್ಲ ಸಕ್ಕರೆ ಎಂದು ಬರುವದೋ ಎಂದು ಜನರು, ಯೋಗಿಗಳು ಪರಮಾತ್ಮನ ದರುಶನದ ಹಾದಿ ನೋಡುತ್ತ ಸಮಾಧಿಸ್ಥರಾಗಿ ಕುಳಿತುಕೊಳ್ಳುವ ಹಾಗೆ ಸಕ್ಕರೆಯ ದರುಶನಕ್ಕಾಗಿ ಕಾದುಕೊಂಡಿದ್ದಾರೆ !

ಇಲ್ಲಿಯ ಹೊಸ ನಗರಸಭೆಯ ಉದ್ಘಾಟನೆಯ ಸಮಾರಂಭವನ್ನು ಇದೇ ಬರುವ ತಾ ೧೯ಕ್ಕೆ ಜರುಗಿಸಬೇಕೆಂದು ನಿಶ್ಚಯವಾಗಿತ್ತು. ಆದರೆ ಕೆಲವೊಂದು ಅನಿವಾರ್ಯ ಅಡಚಣಿಗಳು ಉತ್ಪನ್ನವಾದ ಮೂಲಕ ಸ್ಥಾನಿಕ ಕ್ರಿಸ್ತೀ ಬಾಂಧವರು ಈ ಸಮಾರಂಭವನ್ನು ಮುಂದೂಡಿ ಅದನ್ನು ಫೆಬ್ರುವರಿ ತಾ. ೧೪ನೇ ಮಂಗಳವಾರ ಜರುಗಿಸಬೇಕೆಂದೂ, ಮರುದಿನ ತಾ ೧೫ಕ್ಕೆ [illegible] ಜಾತ್ರೆ ಮಾಡಬೇಕೆಂದೂ ನಿಶ್ಚಯಿಸಿರುತ್ತಾರೆ ನಗರಸಭೆಯ ಉದ್ಘಾಟನೆಯನ್ನು ಗೋವೆಯ ಆರ್ಚಬಿಶಪರ ಪವಿತ್ರ ಕರಕಮಲಗಳಿಂದ ಮಾಡಿಸಬೇಕೆಂಬ ಯೋಜನೆಯಾಗಿದೆ ಅಲ್ಲಿಯ ಸಕಲ ಕ್ರಿಸ್ತಿ ಬಂಧು—ಭಗಿನಿಗಳು ಈ ಉತ್ಸವಗಳಿಗೆ ಅವಶ್ಯ ಬಂದು ಕ್ರಿಯಾಭಾಗಿಗಳಾಗಬೇಕೆಂದು ಅಲ್ಲಿಯ ಕ್ರಿಸ್ತೀ ಸಮಾಜದ ಪ್ರಮುಖರು ಬಿನ್ನವಿಸುತ್ತಾರೆ

ಕಾರವಾರ— ಇಲ್ಲಿಯ ವಕೀಲ ರಾ॥ ಮಾಧವ ಮಂಜುನಾಥ ಶಾನಭಾಗ ಅವರು ಕಳೆದ ಮಂಗಳವಾರ ತಾ. ೧೭ನೇ ಸಂಜೆ ಅಕಸ್ಮಾತವಾಗಿ ವೈಕುಂಠವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ ರಾ॥ ಶಾನಭಾಗರು ಈಗೊಂದು ವರುಷದಿಂದ [illegible] ಕಾಯಿಲೆಯಿಂದ ಅಶಕ್ತರಾಗಿ ಮನೆಯಲ್ಲೇ ಇರುತ್ತಿದ್ದರು ವಕೀಲಿಯ ವ್ಯವಸಾಯ ಮಾಡಲಿಕ್ಕಾಗಲಿ ಮನೆಯ ಹೊರಗೆ ಹೋಗಲಿಕ್ಕಾಗಲಿ ಅವರಿಂದ ಆಗುತ್ತಿದ್ದಿಲ್ಲ ಈ ಅಶಕ್ತತೆಯೇ ಕೊನೆಗೆ ಅವರ ಇಹಲೋಕದ ಯಾತ್ರೆಯನ್ನು ಮುಗಿಸಿತು ರಾ॥ ಶಾನಭಾಗರು ಮೂಲತಃ [illegible] ಚಿಕ್ಕಂದಿನಲ್ಲೇ ಅವರು ತಂದೆಯವರನ್ನು ಕಳಕೊಂಡರು ಮುಂದೆ ಅವರ ಸಂಗೋಪನ [illegible] ಸೋದರಮಾವನ [illegible] ರಾ॥ ಶಾನಭಾಗರ ಸೋದರಮಾವ [illegible] ಆಗ [illegible]. ಆದರೂ ರಾ॥ ಶಾನಭಾಗರು ಹೇಗಾದರೂ ಕುಮಟೆಯಲ್ಲಿ ಹಾಯಸ್ಕೂಲ ಶಿಕ್ಷಣವನ್ನು ಮುಗಿಸಿ, ಮುಂದೆ ವಿದ್ಯಾಭ್ಯಾಸಕ್ಕಾಗಿ ಪುಣೆಯ ಫರ್ಗ್ಯುಸನ ಕಾಲೇಜನ್ನು ಸೇರಿದರು [illegible] ಕಾಲದಲ್ಲಿ ಶಿಕ್ಷಣದ ಖರ್ಚು ಈಗಿನಷ್ಟು [illegible]ಲ್ಲ. ಆದರೂ ಆ ಖರ್ಚನ್ನು ಕೊಡುವಷ್ಟು ಐಸಿರಿ ಅವರ ಸೋದರಮಾವಂದಿರಿಗೆ ಇದ್ದಿಲ್ಲ ಹೀಗಾಗಿ ರಾ॥ ಶಾನಭಾಗರು ಅವರಿವರ ಸಹಾಯದಿಂದ ತಮ್ಮ ಶಿಕ್ಷಣ ಸಾಗಿಸಬೇಕಾಯಿತು. ಸುದೈವದಿಂದ ರಾ॥ ಶಾನಭಾಗರಿಗೆ ಪುಣೆಯ ವಿದ್ವದ್ವರ್ಯ ಡಾ॥ ಭಂಡಾರಕರರಲ್ಲಿ ಆಶ್ರಯ ಸಿಕ್ಕಿತು ಡಾ॥ ಭಂಡಾರಕರರು ಆಗ ವಯೋವೃದ್ಧರಾಗಿದ್ದರು ಅವರ ದೃಷ್ಟಿ ಬಹಳ ಮಂದವಾಗಿತ್ತು ಆದರೂ ಅವರ ವಾಚನಾಭಿರುಚಿ ಕಡಿಮೆಯಾಗಿದ್ದಿಲ್ಲ ರಾ॥ ಶಾನಭಾಗರು ಕೆಲಕಾಲ ಅವರ "ರೀಡರ" (ಅಂದರೆ ಬೇಕಾದ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಓದಿ ಹೇಳುವ ಶಿಷ್ಯ) ರಾಗಿ ಅವರಲ್ಲಿ ಇರುತ್ತಿದ್ದರು ; ಮತ್ತು ಅದೇ ಸಹಾಯದಿಂದ ಕಾಲೇಜ ವಿದ್ಯಾಭ್ಯಾಸವನ್ನು ಮುಗಿಸಿ ೧೯೧೨ರಲ್ಲಿ ಬಿ. ಎ ಆದರು ಪುಣೆಯ ಫರ್ಗ್ಯುಸನ ಕಾಲೇಜು ಆಗ ಸ್ವಾರ್ಥತ್ಯಾಗಿ ಪ್ರಾಧ್ಯಾಪಕರ ಆಶ್ರಮವಾಗಿತ್ತು. ಅಲ್ಲಿಯ ಆ ಸ್ವಾರ್ಥತ್ಯಾಗದ ವಾತಾವರಣವು ರಾ॥ ಶಾನಭಾಗರ ಮೇಲೆ ತನ್ನ ಮುದ್ರೆಯನ್ನು ಒತ್ತದೆ ಬಿಡಲಿಲ್ಲ ಬಿ ಎ ಆದ ಮೇಲೆ ಪುಣೆಯ ಆ ಪ್ರಾಧ್ಯಾಪಕರಂತೆ ತಾವೂ ಸಹ ಪ್ರಪಂಚಕ್ಕೆ ಸಾಲುವಷ್ಟು ವೇತನ ಸ್ವೀಕರಿಸಿ ಅಧ್ಯಾಪಕರಾಗಿ ವಿದ್ಯಾಸೇವೆ ಮಾಡಬೇಕೆಂಬ ಹುಮ್ಮಸ್ಸಿನಿಂದ ಆಗ ಬಾಲಾವಸ್ಥೆಯಲ್ಲಿದ್ದ ಕುಮಟೆಯ ಗಿಬ್ಸಹಾಯಸ್ಕೂಲನ್ನು ಸೇರಿದರು ಮುಂದೆ ೧೯೧೭ರಲ್ಲಿ ಕಾಯ್ದೆಜ್ಞಾನದ ವಿಷಯ ಕಲಿತು ಎಲ್ ಎಲ್. ಬಿ ಆದರು ಆನಂತರ ಗಿಬ್ಸಹಾಯಸ್ಕೂಲಿನ ಆರ್ಥಿಕ ಸಂಬಂಧದಲ್ಲಿ ಕೆಲವೊಂದು ಮತಭೇದವುಂಟಾಗಿ ಅವರು ಶಾಲೆಯನ್ನು ಬಿಟ್ಟು ವಕೀಲಿಯ ಅಭ್ಯಾಸ ಮಾಡಿ ೧೯೨೧ರಲ್ಲಿ ಇಲ್ಲಿ ವಕೀಲರಾಗಿ ಬಂದರು. ಅವರು ಸಾಧುಸ್ವಭಾವಿಗಳೂ, ಸೀದಾ ವಿಚಾರದವರೂ ಇದ್ದುದರಿಂದ ವಕೀಲಿಯ ವೃತ್ತಿಯಲ್ಲಿ ಹೇಳುವಷ್ಟು ಯಶಸ್ಸನ್ನು ಸಂಪಾದಿಸಲಿಲ್ಲ ಅಪ್ರಮಾಣಿಕ ಪಕ್ಷವನು ಅವರು ಹೆಚ್ಚಾಗಿ ಸ್ವೀಕರಿಸುತ್ತಿದ್ದಿಲ್ಲ. ರಾ॥ ಶಾನಭಾಗರಿಗೆ ಗಾಂಧೀ ಪಂಥದ ಭಕ್ತಿ ಬಹಳವಿತ್ತು ಕೆಲ ಕಾಲ ಅವರು ಅಹಮದಾಬಾದಿಗೆ ಹೋಗಿ ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲೂ ಇದ್ದು ಅಲ್ಲಿಯ ಆಚಾರ—ವಿಚಾರಗಳನ್ನು ಕಲಿತು ಬಂದಿದ್ದರು ೨೦ ವರ್ಷಗಳ ಹಿಂದೆ ಕಾರವಾರದಲ್ಲಿ ಖಾದಿಯ ವ್ಯಾಪಾರ ಪ್ರಾರಂಭಿಸಿದ ಶ್ರೇಯ ರಾ॥ ಶಾನಭಾಗರಿಗೆ ಸಲ್ಲಬೇಕು ಈ ಎಲ್ಲ ಸೇವೆಗಳಿಗಿಂತ ಮಹತ್ವದ ಇತ್ತ ೧೦—೧೧ ವರ್ಷಗಳಿಂದ ಕೊಂಕಣಿ ಭಾಷೆಯ ಉದ್ಧಾರಕ್ಕಾಗಿ ನಡಿಸಿದ ಉದ್ಯೋಗವೂ ಕೊಂಕಣಿ ಭಾಷೆಯ ಬಗ್ಗೆ ಕಳಕಳಿಯಿಂದ ಮುಂಬಯಿಯ ವರೆಗೆ ಜಾಗ್ರತಗೊಳಿಸಿದ ಅಭಿಮಾನವೂ ಅವರ ಹೆಸರನ್ನು ಚಿರ—ಸ್ಮರಣೀಯವನ್ನಾಗಿ ಮಾಡುವದೆಂಬುದರಲ್ಲಿ ಸಂದೇಹವಿಲ್ಲ ಸಾಯುವ ಕಾಲಕ್ಕೆ ರಾ॥ ಶಾನಭಾಗರ ವಯಸ್ಸು ೬೨ ವರ್ಷ ಅವರ ನಿಷ್ಕಾಮ ಸೇವೆ ಮತ್ತು ನಿರ್ಮಲ ಆಚಾರ—ವಿಚಾರಗಳನ್ನೂ [illegible] ನೆನೆದರೆ ಅವರ ನಿಧನ ಅಕಾಲಿಕವೆಂದೇ ಹೇಳಬೇಕು. ರಾ॥ ಶಾನಭಾಗರ ಈ ಅಕಾಲಿಕ ನಿಧನದಿಂದ ಕೊಂಕಣಿ ಸರಸ್ವತಿಯು ಅನನ್ಯಭಕ್ತನು ಅದೃಶ್ಯನಾದನೆಂದು ನಿಶ್ಚಯವಾಗಿ ಹೇಳಬಹುದು. ಪರಮಾತ್ಮನು ಮೃತಾತ್ಮರಿಗೆ ಸದ್ಗತಿಯನ್ನಿತ್ತು ಅವರ ಕುಟುಂಬವನ್ನು ಪೊರೆಯಲೆಂದು ಪ್ರಾರ್ಥಿಸುತ್ತೇವೆ.

ಶಿರಸಿ— (ತಾ ೧೨-೧-೫೦) ಈಗ ೬ ತಿಂಗಳಿಂದ ಇಲ್ಲಿ ನಡೆಯುತ್ತಿದ್ದ ಪ್ರಾ|| ಶಾ|| ಶಿಕ್ಷಕರ ತರಬೇತಿ ಶಿಕ್ಷಣ ಶಿಬಿರದ ಪೂರೈಯು ಸಮಾರಂಭದಿಂದ ರಾ|| ಸಾಂ ರ [illegible] ಪಾಟೀಲರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೊದಲು ಶಿಕ್ಷಕ-ವಿದ್ಯಾರ್ಥಿಗಳು ಬಗೆಬಗೆಯ ಕವಾಯತುಗಳ ಪ್ರದರ್ಶನ ಮಾಡಿ ತೋರಿಸಿದರು. ಆ ಮೇಲೆ ರಾ|| ಶಬ್ಬೀರವರು ಶಿಬಿರದ ವರದಿಯನ್ನು ಓದಿ ಹೇಳಿದರು. ಅನಂತರ ಅಧ್ಯಕ್ಷರು ಸಮಾರೋಪ ಮಾಡುತ್ತ, ಜಗತ್ತಿನೊಳಗಿನ ಸಧ್ಯದ ಪರಿಸ್ಥಿತಿಯನ್ನು ವಿವರಿಸಿ, ಈ ಪರಿಸ್ಥಿತಿಯಲ್ಲಿ ಶಾರೀರಿಕವಾಗಿ ಧೃಢತ್ವ ಕಲಿಯುತ್ತ, ಶಿಸ್ತಿನೊಂದಿಗೆ ಮುಂದೆ ಮುಂದಿನ ಜನಾಂಗದ ಗುರು ಇಂದಿನ ಮಕ್ಕಳನ್ನು ಕಲಿಸತಕ್ಕಂಥ ಶಿಕ್ಷಕರು ತಮ್ಮ ಹೊಣೆಯನ್ನು ಸರಿಯಾಗಿ ನಿರ್ವಹಿಸಬೇಕೆಂದು ಬೋಧಿಸಿದರು.

ಸದರಿ ಶಿಬಿರದವರು ತಾ ೮ನೇಗೆ ಬನವಾಸಿಗೆ ಹೋಗಿದ್ದರು. ಅಲ್ಲಿ ಆಗ ರಾ|| ಪಡೆಯರ ಇವರ ಅಧ್ಯಕ್ಷತೆಯಲ್ಲಿ ಕವಾಯತು, ಶಿಬಿರಾಗ್ನಿ ವಗೈರೆ ಕಾರ್ಯಕ್ರಮಗಳು ನಡೆದುವೆಂದು ತಿಳಿಯುತ್ತದೆ.

ಕಳೆದ ರವಿವಾರ ತಾ ೮ಕ್ಕೆ ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ವಿದ್ಯಾರ್ಥಿಗಳೂ ಬಂಕಿಕೊಡ್ಲದ ಶ್ರೀ ಮುದಾನಂದಾಶ್ರಮ ಹಾಯಸ್ಕೂಲಿನ ವಿದ್ಯಾರ್ಥಿಗಳೂ ಇವರೊಳಗೆ ಇಲ್ಲಿ "ವ್ಹಾಲಿ ಬಾಲ್" ಚೆಂಡಾಟದ ಒಂದು ಸ್ಪರ್ಧೆಯ ಪಂದ್ಯಾಟ ನಡೆಯಿತು. ಅದರಲ್ಲಿ ಮೊದಲನವರು ಗೆದ್ದರು.

(ತಾ ೧೬-೧-೫೦) ಶಿರಸಿಯ ಸುತ್ತುಮುತ್ತು ಈಗ "ಪೆಂಢಾರಿ"ಗಳ ಹಾವಳಿ ಹೆಚ್ಚಾಗಿದೆ. ಶಿರಸಿಯಿಂದ ಹಳ್ಳಿಗಳಿಗೆ ಹೋಗಲು ಹೊರಟ ಪ್ರಯಾಣಿಕರನ್ನು ಹಳ್ಳಿಗಳವರನ್ನು ಈ ಪೆಂಢಾರಿಗಳು ನಡುವೆಯೇ ನಿಲ್ಲಿಸಿ, ಪ್ರಾಣಾಪಾಯದ ಬೆದರಿಕೆ ಹಾಕಿ, ಕೈಗೆ ಸಿಕ್ಕಿದ್ದನ್ನು ಸುಲಿದುಕೊಂಡು ಹೋಗುತ್ತಾರೆ! ಮೊನ್ನೆ ಶಿರಸಿ-ದೇವನಳ್ಳಿ ರಸ್ತೆಯಲ್ಲಿ ಇಂತಹದೇ ಒಂದು ಭಯಾನಕ ಅತ್ಯಾಚಾರ ನಡೆದ ಸುದ್ದಿ ಬಂದಿದೆ. ಅಂದು ರಾತ್ರಿ ೮ ಘಂಟೆಯ ಸುಮಾರಿಗೆ ಹೆಗಡೆಕಟ್ಟೆಯ ರಾ|| ಸುಬ್ರಾಯ ತಿಮ್ಮಪ್ಪ ಹೆಗಡೆಯವರು ತಮ್ಮ ಚಕ್ಕಡಿ ಬಿಟ್ಟುಕೊಂಡು ಊರಿಗೆ ಹೋಗುತ್ತಿದ್ದರು. ಹೀಪನಳ್ಳಿ ಗ್ರಾಮದ ಸಮೀಪ ಗಾಡಿ ಹುಟ್ಟಿದಾಗ, ಇಬ್ಬರು ಹಾದಿ ಮಧ್ಯದಲ್ಲಿ ಬಂದು ಹುಲ್ಲುಕಾಯುವವರೆಂದು, ಗಾಡಿಯನ್ನು ನಿಲ್ಲಿಸಿ ತಮ್ಮನ್ನು ಹತ್ತಿಸಿಕೊಳ್ಳಬೇಕೆಂದು ಕೇಳಿದರು. ಹೆಗಡೆಯವರು ಹತ್ತಿಸಿಕೊಳ್ಳದ ಕಾರಣ ಅವರು ಕಲ್ಲುಗಳಿಂದ ಹೊಡೆದರು. ಗಾಡಿಯು ಮಕ್ಕಳಾದ್ದರಿಂದ ರಾ|| ಹೆಗಡೆಯವರು ಬೇಗನೆ ಗಾಡಿಯ ಹಿಂಗಡೆ ಹೊರಟರು. ಕೆಲವು ಅಂತರ ಹೋದ ಮೇಲೆ ಕಾಲು ನೋವೆಂದು ಹೇಳಿ ಅವರೂ ಗಾಡಿಯನ್ನು ಹತ್ತಿದರು! ಗಾಡಿಯು ದೇವನಳ್ಳಿ ರಸ್ತೆಯ ಮೇಲೆ ಹುಟ್ಟಿದಾಗ ಗಾಡಿ ಹತ್ತಿದ ಈ ಅಪರಿಚಿತ ವ್ಯಕ್ತಿಗಳು ರಾ|| ಹೆಗಡೆಯವರ ಕಿವಿಗಳಲ್ಲಿ ಹಾಕಿದ್ದ ಒಡವೆ ಕಿತ್ತುಕೊಂಡರು! ರಾ|| ಹೆಗಡೆಯವರು ಅದೇನೆಂದು ಪ್ರತಿಭಟಿಸಲಾಗಿ ಆ ಕಿಡಿಗೇಡಿಗಳು ಒಂದು ಬಟ್ಟೆಯನ್ನು ತೋರಿಸಿ, ನಮಗೆ ಕೊಂದರೆ ಕೊಟ್ಟರೆ ಯಾವುದನ್ನು ಕಾಯಬೇಕಾದೀತೆಂದು ಬೆದರಿಕೆ ಹಾಕಿದರು! ರಾ|| ಹೆಗಡೆಯವರು ವೃದ್ಧರಾಗಿದ್ದರು, ಅವರು ಬಟ್ಟೆಯನ್ನು ಹಿಡಿದ ಕೈಯನ್ನು ಗಟ್ಟಿಯಾಗಿ ಹಿಡಿದು ಬಟ್ಟೆಯನ್ನು ಕಸಿದುಕೊಂಡು ದೂರಕ್ಕೆ ಬೀಸಾಡಿದರು. ಪುಂಡರಿಗೂ ಹೆಗಡೆಯವರಿಗೂ ಆ ಗಡಬಡೆಯಲ್ಲಿ ಹೊಡೆದಾಟ ಪ್ರಾರಂಭವಾಯಿತು. ರಾ|| ಹೆಗಡೆಯವರು ಒಬ್ಬ ಪುಂಡನನ್ನು ಗಾಡಿಯಿಂದ ಕೆಳಗೆ ಉರುಳಿಸಿದರು. ಇನ್ನೊಬ್ಬ ಪುಂಡನ ಸಹಾಯಕ್ಕೆ ಓಡಿ ಬಂದಾಗ, ಕೆಳಗೆ ಬಿದ್ದ ಕಳ್ಳನನ್ನು ಗಾಡಿಯನ್ನು ಬಿಟ್ಟುಬಿಟ್ಟು ಗಾಡಿಯೊಳಕ್ಕೆ ಬಂದು ರಾ|| ಹೆಗಡೆಯವರನ್ನು ಕೆಡವಿ, ಅವರ ಎದೆಯ ಮೇಲೆ ಕುಳಿತು ಕುತ್ತಿಗೆ ಹಿಸುಕಲು ಕೈ ಹಾಕಿದನು. ಆವರೆ ರಾ|| ಹೆಗಡೆಯವರ ಸಾಮರ್ಥ್ಯದಿಂದ ಆಗಲೇ ಹೆಗಡೆಕಟ್ಟೆಯಿಂದ ಶಿರಸಿಗೆ ಮರಳಿ ಬರುತ್ತಿದ್ದ ಇಲ್ಲಿಯ ಪಂಡಿತ ಚಿಕಿತ್ಸಾಲಯದ ಡಾಕ್ಟರರು ಮೋಟಾರ ಸಹಿತ ಅಲ್ಲಿ ಬಂದು ಬಿಟ್ಟದರು. ಆ ಮೋಟಾರು ದೃಷ್ಟಿಗೆ ಬಿದ್ದೊಡನೆಯೇ ಪೆಂಢಾರಿಗಳು ರಾ|| ಹೆಗಡೆಯವರ ಬೆನ್ನು ಬಿಟ್ಟು ಕೊಂಡು ಪಲಾಯನ ಮಾಡಿದರು! ಡಾಕ್ಟರರು ಬಂದು ಮುಟ್ಟದಿದ್ದರೆ ತಮ್ಮ ಗತಿಯೇನಾಗುತ್ತಿತ್ತೊ ಏನೋ ಎಂದು ರಾ|| ಹೆಗಡೆಯವರು ಉದ್ಗರಿಸುತ್ತಾರೆ. ಜಿಲ್ಲಾ ಪೋಲೀಸ ಸೂಪರಿಂಟೆಂಡೆಂಟರೂ ಜಿಲ್ಲಾಧಿಪರೂ ಈ ಪೆಂಢಾರಿಗಳ ನಿರ್ಮೂಲನ ಮಾಡುವ ವ್ಯವಸ್ಥೆಯನ್ನು ಕೂಡಲೆ ಮಾಡಬೇಕಾಗಿ ಅಂಬೋಣ.

ಜಿಲ್ಲೆಯ ಶಾನಭೋಗರ ಸಂಘದ ವಾರ್ಷಿಕ ಅಧಿವೇಶನ.

ಗ್ರಾಮಾಧಿಕಾರಿಗಳಿಗೆ ಜಿಲ್ಲಾಧಿಪರ ಮಾನನೀಯ ಉಪದೇಶ

ಕಾರವಾರ, ತಾ ೧೫-೧-೧೯೫೦

ಪಹಿಲೆ ಆದಂತೆ ನಮ್ಮ ಜಿಲ್ಲೆಯ ಶಾನಭೋಗರ ಸಂಘದ ವಾರ್ಷಿಕ ಮಹಾಧಿವೇಶನ ಇಂದು ಸಂಜೆ ಇಲ್ಲಿ ಜಿ|| ಲೋಕಲ್ ಬೋರ್ಡಿನ ಕಚೇರಿಯ ಆಟ್ಟದ ಮೇಲೆ ಅಂಕೋಲೆಯ ರಾ|| ದಾಮೋದರ ಮಹಾಲೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಅಧಿವೇಶನಕ್ಕೆ ಜಿಲ್ಲೆಯ ಎಲ್ಲ ಭಾಗಗಳಿಂದ ಸುಮಾರು ೨೦೦ರಷ್ಟು ಶಾನಭೋಗರು ಬಂದಿದ್ದರು. ಜಿಲ್ಲಾಧಿಪತಿ ರಾ|| ತ್ರಿವೇದಿಯವರು, ಕಾರವಾರ ವಿಭಾಗದ ಪ್ರಾಂತ ಸಾಹೇಬ ರಾ|| ಘನಶ್ಯಾಮರಾಯರು, ಶಾನಭೋಗರ ಪ್ರಾಂತಿಕ ಸಂಘದ ರಾ|| ರಾ|| ಸೌಂದತ್ತೀಕರ ಮತ್ತು ದೇಸಾಯಿಯವರೂ ಉಪಸ್ಥಿತರಿದ್ದರು.

ಸ್ವಾಗತಾಧ್ಯಕ್ಷ ರಾ|| ಸಾಬ್ರಾಯ ಸಂಕೊಳ್ಳಿಯವರು ಸಕಲರಿಗೂ ಸ್ವಾಗತ ಬಯಸಿ, ಅಧಿವೇಶನದ ಉದ್ಘಾಟನೆ ಮಾಡಲು ಜಿಲ್ಲಾಧಿಪರನ್ನು ವಿನಂತಿಸಿದರು.

ಜಿಲ್ಲಾಧಿಪರು ಅಧಿವೇಶನದ ಉದ್ಘಾಟನೆ ಮಾಡುತ್ತ, ಶಾನಭೋಗರಿಗೆ ಸಲ್ಲುವ ಉಪದೇಶದ ಮಾತುಗಳನ್ನು ಹೇಳಿದರು. "ಗ್ರಾಮಸ್ಥರು ರಾಜ್ಯದಾಡಳಿತೆಯ ಸಂಬಂಧದಲ್ಲಿ ಗರಂತಿದ್ದಾರೆ. ತೀವ್ರ ಪ್ರಾಮಾಣಿಕರಾಗಿ ತತ್ಪರತೆಯಿಂದ ದುಡಿದರೆ ಮಾತ್ರ ದೇಶಕಲ್ಯಾಣವಾಗಬಲ್ಲದು. ನಮ್ಮ ರಾಷ್ಟ್ರವೀಗ ಸ್ವತಂತ್ರವಾಗಿದೆ. ಈ ಸ್ವಾತಂತ್ರ್ಯವನ್ನು ದೃಢಪಡಿಸಿಕೊಳ್ಳುವಲ್ಲಿಯೂ ರೂಪಿಸುವಲ್ಲಿಯೂ ಗ್ರಾಮಸ್ಥರು ಮನಮುಟ್ಟಿ ದುಡಿದು ನೆರವಾಗಬೇಕು. ನಿರ್ಪಕ್ಷಪಾತದಿಂದ ನಿಮ್ಮ ಕರ್ತವ್ಯ ಮಾಡುತ್ತಲಿದ್ದರೆ ಆಗ ಗ್ರಾಮದ ಜನರಿಗೆ ನ್ಯಾಯದ ಸರಿಯಾದ ಮಾಹಿತಿ ದೊರೆತು, ಲಂಚಗುಳಿಗಳಾಗದೇ ಇದ್ದರೆ ಅಧಿಕಾರಿಗಳು ಶೀಲಭ್ರಷ್ಟರಾದರೆ ರಾಜ್ಯವು ಉಪ್ಪಾರಿಸಿ ಬೀಳುವದು. ಮುಂದಿನ ನಿಮ್ಮ ಗೆ ಯೋಗ್ಯ ವೇತನವನ್ನು ಸಿಗಬೇಕೆಂದು ನನ್ನ ಕೂಡ ಮುಕ್ತವಿದೆ. ನಿಮ್ಮ ಎಲ್ಲ ಅಡಚಣೆಗಳನ್ನು ಸರಕಾರಕ್ಕೆ ಅರುಹಿ ಯೋಗ್ಯ ಪರಿಹಾರ ದೊರಕಿಸಿಕೊಡಲು ನಾನು ಶಕ್ಯ ಯತ್ನಿಸುವೆ. ಅದರ ಸರಕಾರದ ಸಾಂಪತ್ತಿಕ ಸ್ಥಿತಿಯನ್ನು ನೆನೆದು ನಿಮ್ಮ ಬೇಡಿಕೆಗಳನ್ನು ನಿರ್ಧರಿಸಬೇಕೆಂದು ನಾನು ನಿಮಗೆ ಸೂಚಿಸಲಿಚ್ಛಿಸುತ್ತೇನೆ" ಎಂದು ಮುಂತಾಗಿ ಬೋಧಿಸಿ ಜಿಲ್ಲಾಧಿಪರು ಅಧಿವೇಶನವನ್ನು ಉದ್ಘಾಟಿಸಿದರು.

ನಂತರ ಅಧ್ಯಕ್ಷರ ಭಾಷಣವಾಯಿತು. ಅವರು ತಾವು ಶಾನಭೋಗರ ಬಗ್ಗೆ ಸಂಘದ ಪರವಾಗಿ ಮಾಡಿದ ಕಾರ್ಯವನ್ನು ವಿಸ್ತಾರವಾಗಿ ತಿಳಿಸಿದರು. ತಾವು ಮಹಾ ಮಂತ್ರಿಗಳನ್ನು ಭೆಟ್ಟಿಯಾಗಿ ಅವರ ಮುಂದೆ ಸಂಘದ ಎಲ್ಲ ಬೇಡಿಕೆಗಳನ್ನು ಮಂಡಿಸುತ್ತಿದ್ದೇವೆಂತಲೂ ಅವರು ಅವುಗಳನ್ನು ಸಹಾನುಭೂತಿಯಿಂದ ವಿಚಾರಿಸುತ್ತೇವೆಂದು ಆಶ್ವಾಸನ ಕೊಟ್ಟಿರುವರೆಂತಲೂ ತಿಳಿಸಿದರು.

ಅಧ್ಯಕ್ಷರ ಭಾಷಣವಾದ ಮೇಲೆ ಜಿಲ್ಲಾಧಿಪರಿಗೂ ಪ್ರಾಂತ ಸಾಹೇಬರಿಗೂ ಸ್ವಾಗತ ಸಮಿತಿಯವರು ಹಾರಗಳನ್ನು ಹಾಕಿ ಸತ್ಕರಿಸಿದರು. ಅತಿಥಿಗಳು ಹೊರಟುಹೋದ ಮೇಲೆ ಸಭೆಯ ಕೆಲಸ ಮುಂದರಿಯಿತು. ಪ್ರಾಂತಿಕ ಸಂಘದ ರಾ|| ಸೌಂದತ್ತೀಕರರೂ ದೇಸಾಯಿಯವರೂ ಭಾಷಣ ಮಾಡಿ ಸಂಘಟನೆಯ ಮಹತ್ವ ತಿಳಿಸಿ ಹೇಳಿದರು. ಪ್ರಾಂತದ ೬-೮ ಸಾವಿರ ಶಾನಭೋಗರು ಸುಸಂಘಟಿತರಾಗಿ ಏಕಮುಖದಿಂದ ಸರಕಾರದ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿದರೆ ಪರಿಹಾರ ಸಿಕ್ಕೇ ಸಿಗುವದೆಂದು, ಪ್ರಾಂತಿಕ ಸಂಘದ ಪರವಾಗಿ ಹೊರಡುತ್ತಿರುವ "ಕುಲ ಕರ್ಣಿ" ಎಂಬ ಮರಾಠಿ ಮಾಸಪತ್ರಿಕೆಗೆ ಕಾಲಕಾಲಕ್ಕೆ ಯೋಗ್ಯ ಮಾಹಿತಿ ಪೂರೈಸುವದಲ್ಲದೆ, ಅದಕ್ಕೆ ಆಶ್ರಯ ಕೊಡಬೇಕೆಂದೂ ಅವರು ಬೋಧಿಸಿದರು. ಅವರ ಹಿಂದಿನಿಂದ ಅಧ್ಯಕ್ಷ ರಾ|| ಪಟ್ಟನಾಥ ಶಾನಭೋಗ ಮತ್ತು ಕುಮಟೆಯ ಪಟೇಲ ರಾ|| ನಿರಸಿಂಹ ಶಾನಭೋಗರ ಭಾಷಣಗಳಾದವು. ಗ್ರಾಮಸ್ಥರು ಗ್ರಾಮ ರಕ್ಷಣೆಯನ್ನು ಪ್ರಾಮಾಣಿಕತೆಯಿಂದ ಜನಸೇವೆ ಮಾಡಬೇಕೆಂದು ರಾ|| ಕಾಮತರು ಬೋಧಿಸಿದರು. ರಾ|| ಶಾನಭೋಗರು ತಮ್ಮ ಭಾಷಣದಲ್ಲಿ ಲಂಚಗೋರ ಬೇಡಿರಿ, ಪವಿತ್ರರಾಗುವಿರಿ ಎಂದು ಹೇಳುವದು ಸುಲಭವೆಂದೂ, ನೌಕರರು ಲಂಚಬಾಜಿ ಬಿಟ್ಟು ಪವಿತ್ರರಾಗುವದು ಬೇಕಾದರೆ ಸರಕಾರವು ಆ ನೌಕರರಿಗೆ ಜೀವನಕ್ಕೆ ಸಾಕಷ್ಟು ವೇತನ ಕೊಡಬೇಕೆಂದೂ ಪ್ರತಿಪಾದಿಸಿದರು. ಆ ಮೇಲೆ ಕೆಲವು ಶಾನಭೋಗರು ಮಾತಾಡಿ ತಮ್ಮ ಕೆಲಸವೇ ಎಷ್ಟು ಬೆಳೆದಿದೆಂದು ಅರುಹಿದರು. ನಂತರ ಹಿಂದಿನ ಅಧಿವೇಶನದಲ್ಲಾದ ಗೊತ್ತುವಳಿಗಳೇ ಪುನಃ ಮುಕ್ಕಿಸಲ್ಪಟ್ಟವು. ಕೊನೆಗೆ ಅಧ್ಯಕ್ಷ-ಮನ್ನಣೆ, ರಾಷ್ಟ್ರಗೀತ ಮೊದಲಾದವಾಗಿ ರಾತ್ರಿ ೮ಕ್ಕೆ ಸಭೆಯು ಮುಕ್ತಾಯವಾಯಿತು.

ಜಾಹೀರ ಪ್ರಕಟನೆ.

ಶ್ರೀ ಕ್ಷೇತ್ರ ಗೋಕರ್ಣ ಮಹಾಬಲೇಶ್ವರ ದೇವರ ವ್ಯವಾಟ ವಹಿವಾಟುದಾರರಾದ ಮಹಾಬಲೇಶ್ವರ ಅಣ್ಣಪ್ಪ ಭಟ್ಟ ಹಿರೇ ಇವರು ಈ ಮೂಲಕ ಶ್ರೀ ದೇವರ ಭಕ್ತರಿಗೆ ಹಾಗು ಭಾವಿಕರಿಗೆ ತಿಳಿಸುವದೇನೆಂದರೆ –

ಈ ಹಿಂದೆ ದೇವರ ವ್ಯವಾಟ ನಡಿಸುತ್ತ ಬಂದ ಪಶುಪತ್ಯೆ ನಾಗಪ್ಪ ಭಟ್ಟ ಗೋಟೆ ಇವರು ಕಳೆದ ತಾ. ೬-೧೧-೪೯ನೇ ದಿವಸ ಲೇಖಿ ಮೂಲಕ ಅನ್ನ ಮಂಡೆ ಕಸ್ಸಿಂದ ಶ್ರೀ ದೇವರ ವ್ಯವಾಟು ನಡಿಸಲು ಸಾಧ್ಯವಿಲ್ಲೆಂದು ಶ್ರೀ ದೇವರ ವ್ಯವಾಟನ್ನು ಬಿಟ್ಟುಕೊಟ್ಟಿದ್ದರಿಂದ ಅಂದಿನಿಂದ ಅವರ ವ್ಯವಾಟು ಅಂತ್ಯವಾಗಿರುತ್ತದೆ. ಕಾರಣ ಇನ್ನುಮುಂದೆ ಶ್ರೀ ದೇವರಿಗೆ ಕೊಡತಕ್ಕ ಗೇಣಿಯನ್ನು, ಆ ಮಾಸಿಕದಾರರಿಂದ ಬರತಕ್ಕ ಕಾಣಿಕೆಗಳನ್ನು, ಶ್ರೀ ದೇವರ ನಿಸ್ಪೃಹ ವ್ಯವಾಟ ವಹಿವಾಟುದಾರ ಮಹಾಬಲೇಶ್ವರ ಅಣ್ಣಪ್ಪ ಭಟ್ಟ ಹಿರೇ ಇವರ ವಶಕ್ಕೆ ಕೊಡತಕ್ಕದ್ದು. ಇದಕ್ಕೆ ವಿರುದ್ಧವಾಗಿ ನಡೆದಲ್ಲಿ ಆ ಸಂಬಂಧಾನುಭವ ಶ್ರೀ ದೇವರ ಭಂಡಾರಕ್ಕೆ ಜಮಾ ಆಗಲಿಕ್ಕಿಲ್ಲ ತಿಳಿದಿರಲಿ.

ಗೋಕರ್ಣ, ತಾ ೨೦-೧-೧೯೫೦.

ಮಹಾಬಲೇಶ್ವರ ಅಣ್ಣಪ್ಪ ಭಟ್ಟ, ಹಿರೇ

ಜಿಲ್ಲಾ ಸಮಾಚಾರ

ಕುಮಟಾ— [illegible]

[illegible]

ಉತ್ಕೃಷ್ಟ ಭತ್ತ ಖಂಡಿಗೆ	ರೂ	[illegible]	
ಮಧ್ಯಮ ಭತ್ತ	„	„	[illegible]
ಕನಿಷ್ಠ ಜಾತಿಯ ಭತ್ತ	„	„	[illegible]

[illegible]

ಉತ್ಕೃಷ್ಟ ಅಕ್ಕಿ (ಸಣ್ಣಕ್ಕಿ)	ರೂ	[illegible]	
ಮಧ್ಯಮ ಅಕ್ಕಿ	„	„	[illegible]
ಕನಿಷ್ಠ ಜಾತಿಯ ಅಕ್ಕಿ	„	„	[illegible]
[illegible]	„	„	[illegible]
[illegible]		„	[illegible]

[illegible]

THE KANARA DISTRICT CENTRAL CO OPERATIVE BANK LTD, SIRSI (N Kanara)

WANTED

APPLICATIONS are invited from young and energetic matriculates to work as Branch agents clerks and cashiers on a basic salary of Rs 46/- and a Dearness Allowance of Rs 30/ Candidates may have to furnish security and must be prepared to work anywhere in the District Applications in candidates own handwriting with particulars of age, qualifications and past experience, should reach the Secretary by 31st January 1959

ಕ್ವಾಟಾ ಕಲ್ಲುಗಳು

ರೇಷನ್ ಮನೆಗಳಿಗೆ ಮತ್ತು ವ್ಯಾಪಾರಸ್ಥರಿಗೆ ಬೇಕಾಗುವ ತೂಕ-ಅಳತೆಗಳನ್ನು ಪೂರೈಸುತ್ತೇವೆ.

ಬಂಗಾಲೀ ಕಲ್ಲಿನ ಸಟ್ಟುಗಳೂ ಸಿಗುತ್ತವೆ

ಹೆಗಡೆ ಬಂಧುಗಳು, ನೆಲ್ಲೀಕೇರಿ, ಕುಮಟಾ.

ಕೆನರಾ ಕಾಲೇಜಿನ ಸಮ್ಮೇಲನದ ದಿನ ರಾತ್ರಿ ಸಮ್ಮೇಲನದ ಅಂಗವಾಗಿ ಯಕ್ಷಗಾನದ ಕೆಲವು ಕಾರ್ಯಕ್ರಮಗಳಾಗಿದ್ದವು. ಅವುಗಳಲ್ಲಿ ಬಭ್ರುವಾಹನನ ಪಾತ್ರ ವಹಿಸಿದ ಕರ್ಕಿ ಮಂಡಳಿಯ ಯುವಕನಿಗೆ ಮ್ಯಾ॥ ಶವರ್ ಇವರು ತಮ್ಮ ಸ್ವಂತ [illegible] ಮತ್ತು ವೆಚ್ಚದಿಂದ ಒಂದು ಬೆಳ್ಳಿಯ ಕರಂಡಕವನ್ನು ಬಹುಮಾನವಾಗಿ ಕೊಟ್ಟಿದ್ದರು. ಪರಿಸ್ಥಿತಿ ಹೀಗಿದ್ದರೂ ಸದರಿ ಮಂಡಳಿಯವರ ಛಾಪಿದ ಒಂದು ಹಸ್ತಪತ್ರಿಕೆಯಲ್ಲಿ "ಮುಖ್ಯ ಮಂತ್ರಿ ಮಾನ್ಯ ಖೇರರಿಂದ ರಜತ ಪದಕ ಪಡೆದ" ಎಂದು ಮುಂತಾಗಿ ಸುಳ್ಳು ಪ್ರಚಾರ ನಡೆದದ್ದು ಕಂಡು ಮ್ಯಾ॥ ಶವರ್ ಇವರಿಗೆ ಕೆಟ್ಟದ್ದೆನಿಸಿ, ಈ ಅಪಪ್ರಚಾರ ನಿಲ್ಲಿಸುವಂತೆ ಅವರು ಮಂಡಳಿಯವರಿಗೆ ತಿಳಿಸಿದ್ದಾರೆ, ಮತ್ತು ನಡೆದ ಸಮಾಚಾರ ಪ್ರಕಟಿಸಲು "ವೃತ್ತ"ಕ್ಕೆ ಬಿನ್ನವಿಸಿದ್ದಾರೆ.

ಬಾವಿಗಳನ್ನು ತೋಡಲು ಇಲ್ಲವೆ ದುರುಸ್ತಗೊಳಿಸಲು ಬೇಕಾಗಿದ್ದರೂ ರೂ. ೨೦೦೦ಕ್ಕಿಂತ ಕಡಿಮೆ ತಗಾವಿ ಸಾಲ ಕೊಡುವಾಗ ಅದರಿಂದ ಭದ್ರತೆ ಬರೆಕೊಳ್ಳುವ ಭೂಮಿಯ ಬೆಲೆ ಸಾಲದ ಮೊಬಲಗಿನ ಇಮ್ಮಡಿಯಷ್ಟಿರಬೇಕೆಂದು ಮುಂಬಯಿ ಸರಕಾರವು ಠರಾವ ಮಾಡಿದೆ.

ಕುಮಟಾ-ಸಾಂತಗಲ್ಲ-ಮರಾಕಲ್ಲ ರಸ್ತೆಯ ಕಡೆ ಜಿ. ಲೋ. ಬೋರ್ಡಿನವರು ವಿಶೇಷ ಲಕ್ಷ್ಯ ಪುರೈಸುವದಿಲ್ಲ. ಅದರ ಮೇಲೆ ಮೋಟಾರ-ಸರದಾರಿ ವಿಶೇಷವಿಲ್ಲದ್ದರಿಂದ ಆ ಕಡೆ ಅಷ್ಟೇನು ಲಕ್ಷ್ಯ ಕೊಡುವ ಆವಶ್ಯಕತೆಯಿಲ್ಲೆಂದು ಅವರು ಹೇಳುತ್ತಿರುವದು ಸುದ್ದಿಯುಂಟು. ಆದರೆ ನಾಟುಗಳನ್ನು ಉರುವಲ ಕಟ್ಟಿಗೆಯನ್ನು ತುಂಬಿಕೊಂಡು ದಿನಾಲೂ ೭-೮ ಭಾರವಾದ ಮೋಟಾರ ಬಂಡಿಗಳು ಈ ರಸ್ತೆಯಿಂದ ತಿರುಗುತ್ತವೆ! ಈ ಬಂಡಿಗಳ ಓಡಾಟದಿಂದ ರಸ್ತೆಯಲ್ಲಿ ಕೆಡುತ್ತದೆ. ಬೋರ್ಡಿನವರು ಮೋಟಾರ ಬಂಡಿಗಳ ಈ ಓಡಾಟವನ್ನಾದರೂ ನಿಲ್ಲಿಸುವ ವ್ಯವಸ್ಥೆ ಮಾಡಬೇಕಾಗಿ ಆ ಸೀಮೆಯವರೊಬ್ಬರು ಬಿನ್ನವಿಸುತ್ತಾರೆ.

ಹೊನ್ನಾವರ— ಕಳೆದ ವರ್ಷದ (೧೯೪೮-೪೯) ಸುಗ್ಗಿ ಬೆಳೆಯ ಮತ್ತು ತೆಂಗು, ಅಡಿಕೆ, ಕಬ್ಬುಗಳ ಬೆಳೆಯ ಪ್ರಕಟನೆ ಈಗ ಪ್ರಕಟವಾಗಿದೆ. ಹಿಂಗಾರು ಭತ್ತ ಬೆಳೆಯುವ ಹೊಲಗಳಲ್ಲಿ ಬರೇ ಹಿಂಗಾರಿ ಬೆಳೆಯುವ ಹೊಲಗಳು ಮತ್ತು ಮುಂಗಾರು ಹಾಗೂ ಹಿಂಗಾರ ಬೆಳೆಯುವ ಹೊಲಗಳು ಎಂಬ ೨ ವರ್ಗಗಳನ್ನು ಮಾಡಿದ್ದಾರೆ. ಬರೇ ಹಿಂಗಾರಿ ಬೆಳೆಯುವ ೩೦ ಭೂಮಿಗಳಲ್ಲಿ ಮುಂಗಾರಿಯಂತೆ ಹಿಂಗಾರಿಯನ್ನು ಬೆಳೆಯುವ ಭೂಮಿಗಳ ಬೆಳೆಯ ಸರಾಸರಿ ಇಪ್ಪತ್ತು ಬೆಳೆ ಬಂದಿರುತ್ತದೆಂದು ಸದರಿ ಪ್ರಕಟನೆಯಲ್ಲಿ ಕಾಣಿಸಲಾಗಿದೆ. ೩೦ ಭೂಮಿಗಳಲ್ಲಿ ಭತ್ತ ಕೀರ್ವೆಯ ಮಾನದಂತೆ ವರ್ಗವಾರಿ ಮಾಡಲಾಗಿದೆ. ೧-೨-೩ನೇ ಸರ್ವೇ ಗ್ರೂಪುಗಳಲ್ಲಿ ಎಕರೆ ೧ಕ್ಕೆ ರೂ. ೬ ರ ಪಟ್ಟಿಗೆ ಕೀರ್ವೆಯುಳ್ಳ ೩ರಗಳು ೧ನೇ ವರ್ಗದವು, ರೂ. ೪ರಿಂದ ೬ರ ವರೆಗೆ ಕೀರ್ವೆಯುಳ್ಳವು ೨ನೇ ವರ್ಗದವು, ಉಳಿದವು ೩ನೇ ವರ್ಗದವು ಎಂದು ೩ ವರ್ಗ ಮಾಡಿದ್ದಾರೆ. ೪ನೇ ಸರ್ವೇ ಗ್ರೂಪಿನಲ್ಲಿ ರೂ. ೩ ರ ಪಟ್ಟಿಗೆ ಕೀರ್ವೆ ಮಾನವುಳ್ಳವು ೧ನೇ ವರ್ಗದಲ್ಲಿ ಹಾಕಲ್ಪಟ್ಟಿವೆ, ಉಳಿದ ಭೂಮಿಗಳು ೨ನೇ ವರ್ಗದವೆಂದು ಎಣಿಸಲ್ಪಟ್ಟಿವೆ. ೫-೬ನೇ ಸರ್ವೇ ಗ್ರೂಪುಗಳಲ್ಲಿಯೂ ಎರಡೇ ವರ್ಗಗಳುಂಟು. ರೂ. ೨ ರ ಪಟ್ಟಿಗೆ ಕೀರ್ವೆ ಮಾನವುಳ್ಳವು ೧ನೇ ವರ್ಗ; ಉಳಿದವು ೨ನೇ ವರ್ಗ. ಆಯಾ ಗ್ರೂಪುಗಳೊಳಗಿನ ಬೇರೆ ಬೇರೆ ವರ್ಗದ ಭೂಮಿಗಳಲ್ಲಿ ಹುಟ್ಟಿದ ಸರಾಸರಿ ಬೆಳೆಯ ಮಾನ ಈ ಕೆಳಗೆ ಕೊಡಲ್ಪಟ್ಟಿದೆ. (ಕಂಸಗಳಲ್ಲಿ ಕೊಟ್ಟಿದ್ದು ಮುಂಗಾರಿ ಬೆಳೆಯುವ ಗದ್ದೆಗಳೊಳಗಿನ ಹಿಂಗಾರಿ ಬೆಳೆಯೆಂದು ತಿಳಿಯತಕ್ಕದ್ದು. ಅಂಕಿಗಳು ಭತ್ತದ [illegible] ಮಾನಗಳಾಗಿರುತ್ತವೆ) ಸರ್ವೇ ಗ್ರೂಪ ೧ — ೨೩ (೧೪), ೨೦ (೧೦), ೧೫ (೮), ಸರ್ವೇ ಗ್ರೂಪ ೨ — ೨೧ (೧೨), ೧೬ (೯), ೧೫ (೭). ಸರ್ವೇ ಗ್ರೂಪ ೩ — ೨೦ (೧೦), ೧೬ (೯), ೧೫ (೭), ಸರ್ವೇ ಗ್ರೂಪ ೪ — ೨೦ (೧೦), ೧೫ (೭). ಸರ್ವೇ ಗ್ರೂಪ ೫-೬ — ೧೮ (೧೦), ೧೫ (೭).

ಎಲ್ಲ ಗ್ರೂಪುಗಳಲ್ಲಿ ಕಬ್ಬು ಬೆಳೆದ ಕ್ಷೇತ್ರಗಳೊಳಗೆ ಎಕರೆಯೊಂದಕ್ಕೆ ಸರಾಸರಿ ೧೪೦ ಕ್ವಿಂಟಲ್-ಮಣ ಬೆಲ್ಲ ಆಗಿದೆಯಂತೆ. ಘಟ್ಟದ ಮೇಲಿನ ಸೀಮೆಯ ೫ ಪಟ್ಟಿಗಳಲ್ಲಿ ಅಡಿಕೆ ಮರಗಳಿಗೆ ೩ ರತ್ತಲ ಅಡಿಕೆ ಮತ್ತು ತಾಲೂಕಿನ ಇನ್ನುಳಿದ ಗ್ರಾಮಗಳಲ್ಲಿ ಫಲಕ್ಕೆ ಬಂದ ಪ್ರತಿ ಮರಕ್ಕೆ ಸರಾಸರಿ ೨ ರತ್ತಲ ಅಡಿಕೆ ಆಗಿದೆಯಂತೆ. ತೆಂಗಿನ ಬೆಳೆಯ ಸಂಬಂಧದಲ್ಲಿ ಸಮುದ್ರದ ಇಲ್ಲವೆ ಹೊಳೆಯ ದಂಡೆಗಳ ಮೇಲಿನ ಪ್ರದೇಶ, ಘಟ್ಟದ ಬದಿಯ ಪ್ರದೇಶ ಮತ್ತು ನಡುವಿನ ಪ್ರದೇಶ ಹೀಗೆ ೩ ಭಾಗ ಮಾಡಿ, ಈ ಭಾಗಗಳೊಳಗಿನ ಫಲಕ್ಕೆ ಬಂದ ಪ್ರತಿ ಮರಕ್ಕೆ ಅನುಕ್ರಮವಾಗಿ ಸರಾಸರಿ ೩೦, ೨೦, ೨೫ ಕಾಯಿಗಳಂತೆ ಬೆಳೆ ಬಂದಿರುವದಾಗಿ ಮಾಮಲೇದಾರರು ಜಾಹೀರ ಮಾಡಿರುತ್ತಾರೆ. ಅಡಿಕೆ ಮತ್ತು ತೆಂಗಿನ ಬಾಗಾಯತುಗಳು ನೀರಾವರಿಯೆಂದು ಎಣಿಸಲ್ಪಟ್ಟಿವೆ.

ಇಲ್ಲಿಯ ಮ್ಯುನಿಸಿಪಾಲಿಟಿಯವರ ಕಾರಭಾರದ ಬಗ್ಗೆ ನೋಡಿದಷ್ಟು ಕಡಿಮೆಯೇ ಸರಿ. ರಾಮತೀರ್ಥದ ಮೇಲಿನ ನೀರಿನ ಹರಣಿ ಒಡೆದು ಬೀಳಲಿಕ್ಕೆ ತಯಾರಾಗಿದ್ದರೂ ಅದರ ದುರುಸ್ತಿಯ ವ್ಯವಸ್ಥೆಯಾಗುವದಿಲ್ಲ! ಧರ್ಮಶಾಲೆಯ ಬಾಗಿಲು ಹಾಳಾಗಿ ಬಹು ಕಾಲವಾಯಿತು. ದನಗಳು ಸಹ ಒಳಗೆ ಹೋಗುತ್ತವೆ. ಅವುಗಳ ದುರುಸ್ತಿಗಾಗಿ ಓವರ್ಸಿಯರ [illegible] ತಯಾರು ಮ್ಯು॥ಯ ಕಡೆ ಕೊಟ್ಟಿದ್ದುಂಟು. ಆದರೂ ಅವುಗಳ ದುರುಸ್ತಿಯಾಗುವದಿಲ್ಲ! ರಸ್ತೆಯ ಮೇಲಂತೂ ಇನ್ನೂ ನೀರು ಬೀಳಲೊಲ್ಲದು! ಬಂದರ ನಾಲೆಯ ದುರುಸ್ತಿಯ ಬಗ್ಗೆ ಪ್ಲಾನ-ಎಸ್ಟಿಮೇಟ ಮಾಡಿಸಿ ಆ ಬಗ್ಗೆ ರೂ. ೧೦೦೦ದಷ್ಟು ಹಣ ಸಹ ಖರ್ಚ ಹಾಕಿದ್ದಾರಂತೆ, ಆದರೂ ಆ ನಾಲೆಯ ದುರುಸ್ತಿ ಇನ್ನೂ ಆಗಲೊಲ್ಲದು! ಮ್ಯು॥ಯ ಸದಸ್ಯರು ಯಾಕೆ ಸದಸ್ಯರಾಗುತ್ತಾರೆಂಬುದು ದೇವರಿಗೇ ಗೊತ್ತು!

ನಗರ ಸಭೆಯು ಕೇಂದ್ರದೊಳಗಿನ ಮಕ್ಕಳಿಗೆ ಒತ್ತಾಯದಿಂದ ಮ್ಯಾ॥ ಕಲಿಸುತ್ತಾರೆ. ಆದರೆ ಮ್ಯಾ॥ ಮುಗಿಸಿದ ಮಕ್ಕಳಿಗೆ ಮಿಡಲ್ ಸ್ಕೂಲ [illegible] ಅವರ ಅನುಭವದ ವ್ಯವಸ್ಥೆ ಹೇಳುವದಿಲ್ಲ. ಇದು ಯಾತಕ್ಕೇನೆಂಬುದರ ವಿಚಾರವಾಗಬೇಕು.

ಈ ಹಿಂದೆ ತಿಳಿಸಿದಂತೆ ಕಳೆದ ತಾ. ೧ನೇಗೆ ಇಲ್ಲಿನ ಕಾಮಗಾರರ [illegible] ಶಾಲೆಯಲ್ಲಿ ಸಭೆ ಸೇರಿ ಕಾಮದಾರರ ಸಂಘ ಸ್ಥಾಪಿಸಿದ್ದಾರೆ. ಸೇವಾನಿಷ್ಠ ರಾ॥ ಕುಮಟಾಕರರು ಈ ಸಂಘದ ಅಧ್ಯಕ್ಷರಾಗಿಯೂ ಸೇವಾನಿಷ್ಠ ಮಾಮಲೇದಾರ ರಾ॥ [illegible] ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ.

ಶ್ರೀ॥ ಶಾಸ್ತ್ರಿ ವೆಂಕಟೇಶ ಅಯ್ಯಂಗಾರರು ಕಳೆದ ತಾ ೮ನೇಗೆ ಇಲ್ಲಿಗೆ ಬಂದಿದ್ದರು. ಸಂಸ್ಕೃತ ಪ್ರಚಾರ ಸಂಘದ ಆಶ್ರಯದಲ್ಲಿ ಬಾಲ-ವಿದ್ಯಾರ್ಥಿಗಳಿಗಾಗಿ ೧ ಮತ್ತು ಸಾರ್ವಜನಿಕರಿಗಾಗಿ ೧ ಹೀಗೆ ಅವರು ೨ ಉಪನ್ಯಾಸಗಳನ್ನಿತ್ತರು. ಕಳೆದ ತಾ. ೧೧ಕ್ಕೆ ಅದೇ ಸಂಘದ ಆಶ್ರಯದಲ್ಲಿ "ಸಂಸ್ಕೃತಿಯ ಸೂತ್ರ" ಎಂಬ ವಿಷಯದ ಮೇಲೆ ರಾ॥ [illegible] ಇವರ ಭಾಷಣವಾಯಿತು.

ಕಳೆದ ತಾ ೧೫ನೇಗೆ ಇಲ್ಲಿಯ ರಾ॥ ಸ್ವಾ॥ ಸಂಘದವರ ಮಕರ-ಸಂಕ್ರಮಣೋತ್ಸವ ನಡೆಯಿತು. ರಾ॥ ಲಕ್ಷ್ಮಣ ಪ್ರಭು [illegible] ಅಧ್ಯಕ್ಷಸ್ಥಾನ ಸ್ವೀಕರಿಸಿದ್ದರು. ಸಂಘದವರು ತ್ಯಾಗ, ಶಿಸ್ತು ಮೊದಲಾದ ಒಳ್ಳೆ ಗುಣಗಳನ್ನು ಬೆಳೆಸಿಕೊಳ್ಳ[illegible] ಹಾಗೆ ಮಾಡಿದರೆ ಮಾತ್ರ ಜನರ ಹೊಗಳಿಕೆಗೆ ಅವರು ಪಾತ್ರರಾಗುವರೆಂದೂ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೋಧಿಸಿದರು.

ಹೊನ್ನಾವರದಿಂದ [illegible], ಉಪ್ಪಿನಗದ್ದೆ, ಕೋಡಿಗದ್ದೆ, ಮಾರ್ಗವಾಗಿ [illegible] ವರೆಗೆ ರಸ್ತೆ ಮಾಡಬೇಕೆಂಬುದಾಗಿ ಸದ್ಯಕ್ಕೆ [illegible] ಕಾಮಗಾರಿಗಳ ಮಂತ್ರಿಗಳ ಮುಂದೆ ಸಾದರಪಡಿಸಿದೆ. ಈ ಬೇಡಿಕೆಯು ಸರಕಾರದ ಅಧಿಕಾರಿಗಳ ಲಕ್ಷ್ಯ ಈಗಾಗಲೇ ಸೆಳೆಯಲ್ಪಟ್ಟಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ. ಎಕ್ಸಿಕ್ಯುಟಿವ್ ಇಂಜನಿಯರರೂ ಅವರ ಕೈಕೆಳಗಿನ ಅಧಿಕಾರಿಗಳೂ ಕಳೆದ ತಾ. ೩೧ನೇಗೆ ಸದರಿ ಮಾರ್ಗವಾಗಿ ದೀರ್ಘವಾದ ಪ್ರದೇಶದಲ್ಲೆಲ್ಲ ಸಂಚಾರ ಮಾಡಿ, ಸ್ಥಳ ನಿರೀಕ್ಷಣೆ ಮಾಡಿ ಬಂದಿರುತ್ತಾರೆ. ಸದರಿ ಮಾರ್ಗವಾದಲ್ಲಿ ಕೋಡಿಗದ್ದೆ ಸೀಮೆಯ ಊರುಗಳೆಲ್ಲ ಮುಖ್ಯವಾಗಿ, ಈಗ ಬಂಜರ ಬಿದ್ದಿರುವ ಸಾವಿರಾರು ಎಕರೆ ಭೂಮಿಯು ಸಾಗುವಳಿಯಲ್ಲಿ ಬರುವಂತಾಗುವದು. ತಾಲೂಕಿನ ವ್ಯಾಪಾರ-ಉದ್ಯೋಗಗಳೂ ಬೆಳೆಯುವಂತಿವೆ.

ಬೆಸ್ತರು ಮತ್ತು ಮಂಗಲ ನಾಲೆಯ [illegible] ಬಗ್ಗೆ ತಾ. ೩೧-೧೦-೪೯ರ "ವೃತ್ತ"ದಲ್ಲಿ ಪ್ರಕಟವಾದ ಟೀಕೆಯನ್ನು ಅನುಲಕ್ಷಿಸಿ ಪಶ್ಚಿಮ ಭಾಗದ ಮಂಗಲ ಇಲಾಖೆಯ ಅಧಿಕಾರಿಗಳು ನಡೆಸಿದ ಚೌಕಶಿಯೊಳಗೆ ಸದರಿ [illegible] ಕೆಲವು ಹೆಂಗಸರು [illegible] ಎಚ್ಚರಿಕೆ ಕೊಟ್ಟಿದೆಯೆಂದು ತಿಳಿದು ಬಂದಿದೆಯೆಂತಲೂ ಈ ಎಚ್ಚರಿಕೆಯು [illegible] ನಿರಾಧಾರ ದೂರು ಎಬ್ಬಿಸಿರುತ್ತಾರೆಂತಲೂ ಜಿಲ್ಹಾಧಿಪರು ತಿಳಿಸುತ್ತಾರೆ.

(ತಾ. ೨೦-೧-೫೦) ಗುರುವಾರ [illegible] ಕರೆಯ ಜಾತ್ರೆ ಜರಗುವದು. ಈ ಜಾತ್ರೆಯ ಕಾಲಕ್ಕೆ ಗಡಗಡೆ, ಕೋಳಿ-ಅಂಕ, ಜೂಜು ಮೊದಲಾದ ಅನಿಷ್ಟ ಪ್ರವೃತ್ತಿಗಳು ಬಹಳ ನಡೆಯುತ್ತವೆ. ಪೋಲೀಸರು ಈ ಕಡೆ ಲಕ್ಷ್ಯ ಕೊಡಬೇಕೆಂದು ರಾ॥ ಮಹಾಬಲೇಶ್ವರ ನಾರಾಯಣ ಹೆಗಡೆ ಇವರು ಆಗ್ರಹದಿಂದ ಬಿನ್ನವಿಸುತ್ತಾರೆ.

ಪತ್ರಿಕಾ-ಪ್ರಕಟನೆ.

೧೯೪೯ನೇ ಇಸವಿಯ ಮುಂಬಯಿ ಅರಿವೆ ಬಟ್ಟೆಯ ವ್ಯಾಪಾರಿಗಳಿಗೆ ಪರವಾನೆ ಕೊಡುವ ಆಜ್ಞೆಯನ್ವಯ ಪರವಾನೆ ಪಡೆಯದೆ ಎಲ್ಲ ವ್ಯಾಪಾರಿಗಳನ್ನು, ಅಂದರೆ ೧೯೪೮ನೇ ಇಸವಿಯ ಅರಿವೆ ಬಟ್ಟೆಯ (ನಿಯಮನ-ನಿಯಂತ್ರಣದ) ಆಜ್ಞೆಯನ್ವಯ ನಿಯಮಿತಗಾರರಾಗಿರುವ [illegible] ಜನರಿಗೆ ಮಾರಾಟ ಮಾಡಬಹುದಾದ ಹಿಂದೀ [illegible]-ಬಟ್ಟೆಯ ಸಂಬಂಧದಲ್ಲಿ, ಸದರಿ ಪರವಾನೆ ಕೊಡುವ ಆಜ್ಞೆಯ ಎಲ್ಲ ನಿರ್ಬಂಧಗಳೊಳಗಿಂದ ಮುಕ್ತ ಮಾಡಲು ಮುಂಬಯಿ ಸರಕಾರವು ನಿರ್ಧರಿಸಿದೆ. ಈ ಮುಕ್ತತೆಯು (exemption) ಕೇವಲ ತಾತ್ಪೂರ್ತಿಕವಿರುತ್ತದ್ದು ಇದನ್ನು ಸರಕಾರವು ಯಾವದೇ ಕಾಲಕ್ಕೆ ರದ್ದುಗೊಳಿಸಬಹುದಾಗಿದೆ.

(ಜಿಲ್ಹಾಧಿಪರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ ಚಕಾರ್ ಹುರಿ, ಬಾವಿ ಹಗ್ಗ, ಬ್ರಶಿ, ಮೆಟ್, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ.
ಚೆಅರಮನ್, ಕೊಯರ್ ಸೊಸೈಟಿ ಲಿಮಿಟೆಡ್.
ಹೊನ್ನಾವರ (ಉ. ಕ)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "

ಭಾರತೀಯ ಪ್ರಜಾರಾಜ್ಯ-ಉದಯ ಸಂಚಿಕೆ

Reg. No. B. 1270. Monday, 30-1-1950.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೩೧.

ಕುಮಟಾ:- ಸೋಮವಾರ, ತಾ ೩೦—೧—೧೯೫೦.

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ.೩|
ಅಂಚೆಯಿಂದ ವರ್ಷಕ್ಕೆ ೪-೧೦
,, ೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ೦-೧-೬
ವ್ಹಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವವು.
ವರ್ಗಣಿಯ ಹಣವನ್ನು
ಮುಂಗಡ ಕಳ್ಸಿಕಳ್ಸಿದ್ದು.

ಜಾಹೀರಾತುಗಳ ದರ:
೧ಇ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ಹೆಚ್ಚು ಅಳತೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಹೆಚ್ಚು
ಅಳತೆ ಪತ್ರವ್ಯವಹಾರ
ತಿಳಿಸಲಾಗುವುದು

ಡಾ॥ ರಾಜೇಂದ್ರ ಪ್ರಸಾದರು ಭಾರತ ಪ್ರಜಾರಾಜ್ಯದ ಪ್ರಥಮ ರಾಷ್ಟ್ರಾಧ್ಯಕ್ಷರು.

ರಾಷ್ಟ್ರಾಧ್ಯಕ್ಷ ರಾಜೇಂದ್ರರ ಅಲ್ಪ ಪರಿಚಯ.

ಡಾ॥ ರಾಜೇಂದ್ರ ಪ್ರಸಾದರು ಉತ್ತರ ಬಿಹಾರದ ಸರಣ ಜಿಲ್ಲೆಯ ಒಂದು ಹಳ್ಳಿಯವರಿರುತ್ತಾರೆ. ಅವರ ತಂದೆಯವರ ಹೆಸರು ಮುನಶಿ ಮಹಾದೇವ ಸಹಾಯ ಎಂದು. ಮಹಾದೇವ ಸಹಾಯರು ಒಂದು ಸಣ್ಣ ಜಮೀನದಾರರಾಗಿದ್ದರು. ರಾಜೇಂದ್ರರು ಅವರ ೬ನೇ ಪುತ್ರರತ್ನ. ರಾಜೇಂದ್ರರು ಚಪ್ರಾದಲ್ಲಿ ತಮ್ಮ ಶಾಲಾ-ಶಿಕ್ಷಣ ಮುಗಿಸಿ ೧೯೦೨ರಲ್ಲಿ ಕಲಕತ್ತಾ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಗೆ ಕೂತು, ಆ ಪರೀಕ್ಷೆಯೊಳಗೆ ಯಶಸ್ವಿಯಾದ ತರುಣರಲ್ಲಿ ಪ್ರಥಮ ಸ್ಥಾನವನ್ನು ಪಡೆದರು. (ಬಿಹಾರದಲ್ಲಿ ಆ ಕಾಲಕ್ಕೆ ವಿಶ್ವವಿದ್ಯಾಲಯವಿದ್ದಿಲ್ಲ) ಮೆಟ್ರಿಕ್ ಪರೀಕ್ಷೆಯಲ್ಲಿ ಆ ಸ್ಥಾನ ಪಡೆದ ಬಿಹಾರಿಗಳಲ್ಲಿ ರಾಜೇಂದ್ರರೇ ಮೊದಲಿಗರು. ರಾಜೇಂದ್ರರ ಈ ಯಶಸ್ಸನ್ನು ಮನದಣಿ ಕೊಂಡಾಡಿ " ಈ ತರುಣನು ಶ್ರೀಮಾನ್ ಚಂದಾವರಕರ ನಾರಾಯಣರಾಯರಂತೆ ಮುಂದೆ ಹಿಂದೀ ರಾಷ್ಟ್ರೀಯ ಸಭೆಯ ಅಧ್ಯಕ್ಷನಾಗಿ ಹಾಯಕೋರ್ಟಿನ ನ್ಯಾಯಮೂರ್ತಿಯೂ ಆಗುವನು " ಎಂದು ಶ್ರೀ॥ ಸಚ್ಚಿದಾನಂದ ಸಿಂಹರು ತಮ್ಮ " ಹಿಂದುಸ್ಥಾನ ರಿವ್ಯೂ " ಎಂಬ ಮಾಸಪತ್ರಿಕೆಯಲ್ಲಿ ಭವಿಷ್ಯ ಬರೆದಿದ್ದರು. (ಆ ಕಾಲದಲ್ಲಿ ಸ್ವರಾಜ್ಯ-ಸ್ವಾತಂತ್ರ್ಯಗಳ ಪ್ರಾಪ್ತಿಯ ಕಲ್ಪನೆ ಜನಸಾಮಾನ್ಯರಿಗಾಗಲಿ ಬಹು-ಸಂಖ್ಯಾಕ ರಾಜಕಾರಣಿಗಳಿಗಾಗಲಿ ಬಂದಿದ್ದಿಲ್ಲ. ಆದರಿಂದ ಹಾಯಕೋರ್ಟಿನ ನ್ಯಾಯಮೂರ್ತಿ ಪದಕ್ಕಿಂತ ಹೆಚ್ಚಿನ ಅಧಿಕಾರ-ಸ್ಥಾನ ಭಾರತೀಯರಿಗೆ ಸಿಗುವದೆಂಬ ವಿಚಾರ ಡಾ॥ ಸಚ್ಚಿದಾನಂದ ಸಿಂಹರಿಗೆ ಆಗ ಹೊಳೆಯಲಿಲ್ಲ. ೧೯೦೨ರಲ್ಲಿ ಭಾರತೀಯನಿಗೆ ಸಿಗಬಹುದಾಗಿದ್ದ ಅತ್ಯುಚ್ಚ ಮಾನದ ಸ್ಥಾನಗಳೆಂದರೆ ಒಂದು ರಾಷ್ಟ್ರಪತಿತ್ವ ಮತ್ತು ಇನ್ನೊಂದು ಹಾಯಕೋರ್ಟಿನ ನ್ಯಾಯಮೂರ್ತಿತ್ವ ಇವೇ ಆಗಿದ್ದವು ಆದರಿಂದಲೇ ಸಿಂಹರು ಈ ಎರಡು ಗೌರವ-ಸ್ಥಾನಗಳ ಉಲ್ಲೇಖ ಮಾಡಿದ್ದರು. ಡಾ॥ ಸಿಂಹರು ಆಗ ಪ್ರಾಂತಾಭಿಮಾನದಿಂದ ಮಾಡಿದ ಭವಿಷ್ಯ ಮಾತ್ರ

ಅಜಾತಶತ್ರು ಬಿಹಾರ-ರತ್ನ ಡಾ॥ ರಾಜೇಂದ್ರರು.



ಜನ್ಮ ತಾ ೩-೧೨-೧೮೮೪

ಅವರ ಅಪೇಕ್ಷೆಯ ಹೊರಗೆ ದಿಟವಾಯಿತು ರಾಜೇಂದ್ರರು ಮೂದಾವರ್ತಿ ರಾಷ್ಟ್ರಪತಿಗಳಾದರು. ಸರಕಾರ ದರಬಾರದಲ್ಲೂ ಇಂದು ಅವರು ಅತ್ಯುನ್ನತವಾದ ರಾಷ್ಟ್ರಾಧ್ಯಕ್ಷಪದವನ್ನು ಪಡೆದಿರುತ್ತಾರೆ. ತಮ್ಮ ಭವಿಷ್ಯವು ಈ ರೀತಿ ದಿಟವಾದುದನ್ನು ನೋಡಲು ವಯೋವೃದ್ಧ ಡಾ॥ ಸಿಂಹರು ಇನ್ನೂ ನಮ್ಮಲ್ಲಿದ್ದಾರೆಂಬುದು ನಮಗೊಂದು ಆನಂದದ ಮಾತಾಗಿದೆ. ಇರಲಿ) ತರುಣ ರಾಜೇಂದ್ರರು ಮುಂದೆ ಕಲಕತ್ತೆಯ ಪ್ರಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಇಂಟರ ಆರ್ಟ್ಸ ಪರೀಕ್ಷೆಯಲ್ಲೂ ಪುನಃ ಪ್ರಥಮ ಸ್ಥಾನ ದೊರಕಿಸಿದರು ಬಿ ಏ ಪರೀಕ್ಷೆಯಲ್ಲೂ ಅವರಿಗೆ ಪ್ರಥಮ ಸ್ಥಾನವೇ ಸಿಕ್ಕಿತು. ಎಮ್ ಏ ಪರೀಕ್ಷೆಯಲ್ಲಿ ಮಾತ್ರ ಅವರು ಆ ಸ್ಥಾನ ಕಳಕೊಂಡರು. ಅವರು ಎಮ್.ಏ ಕಲಿಯುತ್ತಿದ್ದಾಗ ಬಂಗಾಲದಲ್ಲಿ ವಂಗ-ಭಂಗ ವಿರೋಧಿ ಆಂದೋಲನವು ಬಹಳ ಜೋರಿನಿಂದ ನಡೆಯುತ್ತಿತ್ತು. ಕ್ರಾಂತಿಕಾರಿ ತರುಣರು ಹಿಂಸಾಮಾರ್ಗವನ್ನು ಹಿಡಿದಿದ್ದರು! ದೇಶಿ ಬಾಂಬುಗಳು ಹಾರಹತ್ತಿದ್ದವು! ಈ ಆಂದೋಲನದ ನಿನಾದಗಳು ರಾಜೇಂದ್ರರ ಅಧ್ಯಯನಕ್ಕೆ ವಿಘ್ನಗಳನ್ನುಂಟು ಮಾಡಿದವಂತೆ. ಆದರಿಂದ ಅವರ ಪ್ರಥಮ ಸ್ಥಾನ ಅವರಿಗೆ ಸಿಗಲಿಲ್ಲ. ಮುಂದೆ ರಾಜೇಂದ್ರರು ಕಾಯದೆಯ ಅಭ್ಯಾಸ ಮಾಡಿ ೧೯೧೦ರಲ್ಲಿ ಪ್ರಥಮ ಶ್ರೇಣಿಯೊಳಗೆ ಎಲ್. ಎಲ್ ಬಿ. ಆದರು

ರಾಜೇಂದ್ರರ ಸಂಘಟನಾ-ಚಾತುರ್ಯ ಮತ್ತು ಮುಂದಾಳ್ತನದ ಗುಣಗಳು ಅವರ ವಿದ್ಯಾರ್ಥಿದಶೆಯಲ್ಲೇ ಪ್ರಕಟವಾಗಿದ್ದವು ಬಿ ಏ. ವರ್ಗದಲ್ಲಿರುವಾಗಲೇ ಅವರು ಪಾಟಣಾದೊಳಗೆ ಬಿಹಾರ ಪ್ರಾಂತಿಕ ವಿದ್ಯಾರ್ಥಿಗಳ ಪರಿಷತ್ತೊಂದನ್ನು ಸೇರಿಸಿ ಅದನ್ನು ಯಶಸ್ವಿಯಾಗಿ ನಡಿಸಿಕೊಂಡು ಹೋಗಿದ್ದರು. ರಾಜೇಂದ್ರರ ಈ ಸಂಘಟನಾ ಚಾತುರ್ಯವನ್ನೂ ಪ್ರತಿಭಾಶಾಲಿ ವಿದ್ವತ್ತೆಯನ್ನೂ ಕಂಡು ದಿವಂಗತ ಗೋಖಲೆಯವರು ಮುಗ್ಧರಾಗಿ ತರುಣ ರಾಜೇಂದ್ರರಿಗೆ ತಮ್ಮ ಭಾರತ-ಸೇವಕ ಸಮಾಜದಲ್ಲಿ ಸೇರಲು ನಿಮಂತ್ರಣ ಕೊಟ್ಟರು. ರಾಜೇಂದ್ರರಿಗಾದರೂ ಆ ಸಮಾಜದ ಸದಸ್ಯರಾಗಿ ಲೋಕಸೇವೆ, ರಾಷ್ಟ್ರಸೇವೆ ಮಾಡಬೇಕೆಂಬ ಉತ್ಕಂಠೆಯಾಗಿತ್ತು ಆದರೆ ರಾಜೇಂದ್ರರ ಅಣ್ಣಂದಿರಿಗೆ ಈ ಮಾರ್ಗ ಸರಿದೋರಲಿಲ್ಲ ರಾಜೇಂದ್ರರು ವಕೀಲಿ ಮಾಡಿ, ಹಣ ಸಂಪಾದಿಸಿ, ಕುಟುಂಬದವರ ಸುಖಜೀವನಕ್ಕೆ ನೆರವಾಗಬೇಕೆಂದು ಅಣ್ಣಂದಿರ ನಿರ್ಣಯವಾಯಿತು ರಾಜೇಂದ್ರರಿಗೆ ಅಣ್ಣನ ಮಾತು ಮುರಿಯಲು ಧೈರ್ಯವಾಗಲಿಲ್ಲ. ಆದರೂ ಅವರು ಅಣ್ಣನಿಗೆ ಒಂದು ಪತ್ರ ಬರೆದು, ತಮ್ಮ ಹೃದ್ಗತವನ್ನೂ ದೇಶಸೇವೆಗಾಗಿ ತ್ಯಾಗಿ ಜೀವನಕ್ರಮ ಸ್ವೀಕರಿಸುವ ತಮ್ಮ ಸಿದ್ಧತೆಯನ್ನೂ ಅದರಲ್ಲಿ ಸ್ಫುಟಗೊಳಿಸಿದ್ದರು. ಅವರ ಆ ಪತ್ರದಲ್ಲಿ ರಾಜೇಂದ್ರರ ಮನೋರಚನೆಯನ್ನು ನಾವು ನಿಚ್ಚಳವಾಗಿ ಕಾಣಬಹುದು. ಓದುಗರ ಅವಗಾಹನೆಗಾಗಿ ಆ ಪತ್ರದ ಸಾರಾಂಶವನ್ನು ಇದರಡಿ ಕೊಡಲಾಗಿದೆ.

ರಾಜೇಂದ್ರರು ಅಣ್ಣನಿಗೆ ಬರೆದ ಪತ್ರ

" ಅಣ್ಣಾ,

ಉನ್ನತ ಗುರಿಯ ಕಾರ್ಯಕ್ಕಾಗಿ ನನಗೆ ಕರೆ ಬಂದಿದೆ. ನನಗೂ ಅಲ್ಲಿ ಹೋಗುವ ಮನಸ್ಸಾಗಿದೆ. ಆದರೆ ತಮ್ಮನ್ನು ಕಷ್ಟದಲ್ಲಿ ಬಿಟ್ಟು, ತಮ್ಮ ಸಮ್ಮತಿಯಿಲ್ಲದೆ ನಾನು ಹೋಗುವದು ಕೃತಘ್ನತೆಯಾಗುವದು. ಆದರಿಂದ ೩೦ ಕೋಟಿ ಜನರ ಸಲುವಾಗಿ ಸ್ವಾರ್ಥತ್ಯಾಗ ಮಾಡಲು ತಮಗೆ ನಾನು ಬಿನ್ನವಿಸುತ್ತೇನೆ. ಗೋಖಲೆಯವರ ಸಮಾಜದಲ್ಲಿ ಸೇರುವದರಿಂದ ನಾನು ವ್ಯಕ್ತಿಶಃ ತ್ಯಾಗ ಮಾಡಬೇಕಾಗಿಲ್ಲ. ಯಾವದೇ ಪರಿಸ್ಥಿತಿಯಲ್ಲಿ ಸಮಾಧಾನ ಪಡೆಯುವ ಶಿಕ್ಷಣ ನನಗೆ ದೊರೆತಿದೆ. ನನ್ನ ಜೀವನಕ್ರಮ ಸಹ ಸಾದಾ-ತರದ್ದಿದೆ. ನನಗೆ ವಿಶೇಷ ಸೌಕರ್ಯಗಳು ಬೇಕಾಗಿಲ್ಲ. ಸಮಾಜವು ಕೊಡುವ ವೇತನದಿಂದ ನಾನು ಸುಖವಾಗಿ ಜೀವಿಸಬಲ್ಲೆ ಆದರೆ ತಾವು ಮಾತ್ರ ತ್ಯಾಗ ಮಾಡಬೇಕಾಗುವದು. ತಾವು ನನ್ನ ಮೇಲೆ ಬಹಳ ಆಸೆಯಿಟ್ಟಿರುವಿರಿ. ಆ ಆಸೆಯನ್ನು ತಾವು ತೊರೆಯಬೇಕಾಗುವದು. ಈ ಕ್ಷಣಭಂಗುರ ಜಗತ್ತಿನಲ್ಲಿ ಯಾವದೂ ಸ್ಥಿರವಲ್ಲ ಮನುಷ್ಯನ ಎಲ್ಲ ಹಾದಂತೆ ಅವನ ಬಯಕೆಗಳೂ ಹೆಚ್ಚುತ್ತ ಹೋಗುತ್ತಿವೆ. ಅವನು ಸುಖಿಯಾಗಲಾರನು [illegible]

ಕಾರವಾರ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ

ಕಿರ್ಲೋಸ್ಕರ

ಕಂಪನಿಯಲ್ಲಿ ತಯಾರಾದ ಮ್ಹಾಲನ್ನು ಮಾರಾಟ ಇಚ್ಛಿಸುವವರು ತಮ್ಮ ಬ್ಯಾಂಕಿನ ಹೆಸರಿನೊಂದಿಗೆ ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಡಬೀರ & ಸನ್ಸ,

ಕಿರ್ಲೋಸ್ಕರ ಡಿಸ್ಟ್ರಿಬ್ಯೂಟರರು,

ಮರಾಠಗಲ್ಲಿ, ಹುಬ್ಬಳ್ಳಿ.

ಈ ಪ್ರಪಂಚದಲ್ಲಿ ನಿಜವಾದ ಸುಖವು ಇದ್ದರಿಂದ ಬಡತನಕ್ಕೆ ಬೆದರಬೇಡಿರಿ ಜಗತ್ತಿನಲ್ಲಿ ಈ ಹಿಂದೆ ಆಗಿಹೋದ ಎಷ್ಟೋ ವಿಭೂತಿಗಳು ಬಡತನದಲ್ಲೇ ಹುಟ್ಟಿ ಬೆಳೆದಿದ್ದರೆಂಬುದನ್ನು ಮರೆಯಬೇಡಿರಿ ಅವರ ಮಾರ್ಗದಲ್ಲಿ ...ದ ಕಷ್ಟಗಳು, ತೊಂದರೆಗಳು, ತಿರಸ್ಕಾರಗಳು ಅಷ್ಟಿಷ್ಟಲ್ಲ! ಆದರೆ ಅವರು ಲೋಕದಲ್ಲಿ ಚಿರಸ್ಮರಣೀಯರಾಗುಳಿದರು ಅವರಿಗೆ ಕಷ್ಟ ಕೊಟ್ಟವರು ಮಾತ್ರ ಹೇಳಹೆಸರಿಲ್ಲದೆ ಮಣ್ಣುಗೂಡಿದರು! ನನ್ನ ಹಿರಿಯಾಸೆ ಒಂದೇ ಇದೆ ಒಂದಿಲ್ಲೊಂದು ರೀತಿಯಿಂದ ರಾಷ್ಟ್ರಸೇವೆ ಮಾಡಬೇಕೆಂಬುದೇ ಆ ಆಸೆ ಭಾರತಮಾತೆಯ ಸೇವೆ ಮಾಡಬೇಕೆಂಬುದರ ಹೊರತು ಬೇರೆ ಯಾವ ಅಭಿಲಾಷೆಯೂ ನನಗಿಲ್ಲ ನಾ॥ ಗೋಖಲೆಯವರನ್ನೇ ತಾವು ನೋಡಿರಿ ಅವರು ಕಡು ಬಡವರಿದ್ದಾರೆ. ಆದರೆ ಇಂದು ಅವರ ಕೀರ್ತಿವೈಭವವನ್ನು ಇಡಿ ಮಾನವಮಾನ್ಯತೆಯನ್ನು ಸರಿಗಟ್ಟುವವರಾರಿದ್ದಾರೇ?"

ರಾಜೇಂದ್ರರ ರಾಷ್ಟ್ರಸೇವೆಯು ಈ ಲಾಲಸೆಯು ಮೊದಲಾದಲು ಕೈಗೂಡದಿದ್ದರೂ ಮುಂದೆ ಕೆಲವೇ ವರ್ಷಗಳಲ್ಲಿ ಕೈಗೂಡಿತು. ೧೯೧೧ರಿಂದ ಅವರು ಕಲಕತ್ತೆಯ ಹಾಯಕೋರ್ಟಿನಲ್ಲೂ ೧೯೧೬ರಲ್ಲಿ ಪಾಟ್ನಾ ಹಾಯಕೋರ್ಟಿನ ಸ್ಥಾಪನೆಯಾದ ಮೇಲೆ ಅಲ್ಲಿಯ ಹಾಯಕೋರ್ಟಿನಲ್ಲೂ ವಕೀಲಿಯನ್ನು ಮಾಡಿ ಯಶಸ್ವಿ ವಕೀಲರೆಂದು ಹೆಸರು ಗಳಿಸಿದರ. ದಿವಾಣಿ ಮೊಕದ್ದಮೆಗಳಲ್ಲಿ ತಮ್ಮ ಪಕ್ಷವನ್ನು ನ್ಯಾಯಾಧೀಶರೆದುರು ಮಂಡಿಸುವ ಶೈಲಿಯೂ ಪ್ರತಿಪಾದನೆ ಮಾಡುವ ವಾಕ್ಚಟುತ್ವವೂ ಒಂದನೇ ಪ್ರತಿಯವಾಗಿದ್ದವೆಂದು ಹೇಳುತ್ತಾರೆ. ರಾಜೇಂದ್ರರು ಗಾಂಧಿಜಿಯವರ ರಾಜಕಾರಣದಲ್ಲಿ ಧುಮುಕುತ್ತಿದ್ದಿಲ್ಲವಾದರೆ ಡಾ॥ ಸಚ್ಚಿದಾನಂದ ಸಿಂಹರು ಹೇಳಿದಂತೆ ಅವರು ೨೫ ವರ್ಷಗಳ ಹಿಂದೆಯೇ ಪಾಟ್ನಾ ಹಾಯಕೋರ್ಟಿನ ನ್ಯಾಯಮೂರ್ತಿಗಳಾಗುತ್ತಿದ್ದರೆಂಬುದಕ್ಕೆ ಸಂದೇಹವಿಲ್ಲ ಆದರೆ ಬ್ರಹ್ಮಸಂಕಲ್ಪ ಬೇರೆಯಿತ್ತು ರಾಜೇಂದ್ರರಿಗೆ ಪ್ರಿಯವಾದ ತ್ಯಾಗ-ಜೀವನದ ಮತ್ತು ಅಖಂಡ ರಾಷ್ಟ್ರಸೇವಾ ವ್ರತದ ಅವರ ಬಯಕೆಯನ್ನು ಪೂರ್ತಿಗೊಳಿಸುವದು ವಿಧಿಯ ಸಂಕಲ್ಪವಿತ್ತು. ೧೯೧೭ರಲ್ಲಿ ಬಿಹಾರ-ಪ್ರಾಂತದ ಚಂಪಾರಣ್ಯದೊಳಗಿನ ನೀಲಿಯ ತೋಟಗಳಲ್ಲಿ ಹಿಂದೀ ಮಜೂರರ ಕಷ್ಟ ಜೀವನದ ಕಥೆ ಬಯಲಿಗೆ ಬಂತು. ಮಹಾತ್ಮರು ಆ ಮಜೂರರ ಸಂರಕ್ಷಣೆಗಾಗಿ ಚಂಪಾರಣ್ಯಕ್ಕೆ ಓಡಿಹೋದರು ಅಲ್ಲಿ ಮಹಾತ್ಮರ ಸತ್ಯಾಗ್ರಹದ ಪ್ರಥಮ ಪ್ರಯೋಗ ನಡೆಯಿತು ಸರಕಾರವು ಕೆಲವೇ ದಿನಗಳಲ್ಲಿ ಮಹಾತ್ಮರೊಡನೆ ಸಂಧಾನ ಮಾಡಿಕೊಂಡು ಆ ಪ್ರಕರಣವನ್ನು ಸುಧಾರಿಸಿತು ಈ ಚಂಪಾರಣ್ಯ ಪ್ರಕರಣದಲ್ಲಿ ಬಿಳೇ ಬಣ್ಣದ ತೋಟಗಾರರು ಮಜೂರರಿಗೆ ಕೊಡುತ್ತಿರುವ ಕಷ್ಟ-ಪೀಡೆಗಳ ವಿಚಾರಣೆ ನಡೆಯಿತು ರಾಜೇಂದ್ರರು ಆಗ ವಿಚಾರಣೆಯಲ್ಲಿ ಅವಿಶ್ರಾಂತ ದುಡಿದು ಮಹಾತ್ಮಾಜಿಯವರ ಶಿಷ್ಯರಾದರು ಮುಂದೆ ೧೯೨೦ರಲ್ಲಿ ಮಹಾತ್ಮರು ಅಸಹಕಾರದ ಶಂಖವನ್ನೂದಿ ವಕೀಲರು ವಕೀಲಿ ಬಿಡಬೇಕೆಂದು ಕರೆಕೊಟ್ಟೊಡನೆ ರಾಜೇಂದ್ರರು ತಮ್ಮ ವಕೀಲಿಯನ್ನು ಬಿಟ್ಟು ಕೊಂಗ್ರೆಸ್ಸಿನ ಏಕನಿಷ್ಠ ಕಾರ್ಯಕರ್ತರಾದರು ೧೯೨೧ರಿಂದ ಅವರು ಕೊಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯರಾಗಿ, ಬಿಹಾರ ಪ್ರಾಂತದಲ್ಲಿ ಮಹಾತ್ಮಾಜಿಯವರ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪ್ರಚುರಗೊಳಿಸಿದರು ಅಸಹಕಾರದ ಆಂದೋಲನದಲ್ಲೂ ೧೯೩೦—೩೨ರ ಸತ್ಯಾಗ್ರಹ ಸಂಗ್ರಾಮಗಳಲ್ಲೂ ಅವರು ಕಾರಾವಾಸವನ್ನು ಅನುಭವಿಸಿದ್ದುಂಟು ೧೯೩೪ರಲ್ಲಿ ಬಿಹಾರ ಪ್ರಾಂತದೊಳಗೆ ಭೂಕಂಪದ ಅನರ್ಥವೆಸಗಿದಾಗ ರಾಜೇಂದ್ರರು ಸೆರೆಮನೆಯಲ್ಲಿದ್ದರು. ಭೂಕಂಪವಾದ ಕೆಲವೇ ದಿನಗಳಲ್ಲಿ ಅವರ ಬಿಡುಗಡೆಯಾಯಿತು ಸೆರೆಮನೆಯಿಂದ ಹೊರಗೆ ಬಂದ ರಾಜೇಂದ್ರರು ಒಂದು ಒಪ್ಪೊತ್ತಿನ ವಿಶ್ರಾಂತಿಯನ್ನು ಸಹ ಅಪೇಕ್ಷಿಸದೆ ಆಪದ್ಗ್ರಸ್ತರ ಸಂಕಟ-ನಿವಾರಣೆಗಾಗಿ ದುಡಿಯಲಾರಂಭಿಸಿದರು, ಸಾವಿರಾರು ಕಾರ್ಯಕರ್ತರನ್ನು ಅಣಿಗೊಳಿಸಿ ಕೆಲಸಕ್ಕೆ ಹಚ್ಚಿದರು, ಲಕ್ಷಾವಧಿ ರೂಪಾಯಿಗಳ ನಿಧಿಯನ್ನು ಕೂಡಿಸಿದರು ರಾಜೇಂದ್ರ ಬಾಬುಗಳ ಈ ಉದ್ಯೋಗ ನೋಡಿ ಸರಕಾರವು ಕೂಡ ಬೆರಳು ಕಚ್ಚಿತು ಮತ್ತು ತಾವು ಕೂಡಿಸಿದ ನಿಧಿಯನ್ನೂ ಕೂಡ ರಾಜೇಂದ್ರರ ವಶಕ್ಕೆ ಒಪ್ಪಿಸಿತು ಶತ್ರುಪಕ್ಷದಲ್ಲಿದ್ದ ಸರಕಾರವನ್ನು ಹೀಗೆ ತಮ್ಮ ತ್ಯಾಗ, ಪ್ರಾಮಾಣಿಕತೆ, ಔದಾರ್ಯ ಮತ್ತು ವಿಶಾಲ ದೃಷ್ಟಿಗಳಿಂದ ಒಲಿಸಿದ್ದರಿಂದಲೇ ನಮ್ಮ ರಾಜೇಂದ್ರರು "ಅಜಾತಶತ್ರು"ಗಳೆಂದು ಪ್ರಖ್ಯಾತಿಪಟ್ಟಿರುತ್ತಾರೆ ರಾಜೇಂದ್ರರ ಈ ಸೇವೆಯನ್ನು ಮನ್ನಿಸಿ, ರಾಷ್ಟ್ರವು ೧೯೩೪ರ ನವಂಬರದೊಳಗೆ ಮುಂಬಯಿಯಲ್ಲಿ ಸೇರಿದ ರಾಷ್ಟ್ರೀಯ ಸಭೆಯ ಅಧ್ಯಕ್ಷತನವನ್ನು ಅವರಿಗೆ ಅರ್ಪಿಸಿ ಅವರನ್ನು ಗೌರವಿಸಿತು ರಾಜೇಂದ್ರರು ೧೯೩೫ರಲ್ಲಿ ದೇಶದಾದ್ಯಂತ ಸಂಚಾರ ಮಾಡಿ ರಾಷ್ಟ್ರೀಯ ಸಭೆಯ ಮೇಲ್ಲಿ ನವಚೈತನ್ಯವನ್ನುಂಟು ಮಾಡಿದ ಕಥೆ ಸಂಸ್ಮರಣೀಯವಿದೆ ಈ ಸಂಚಾರದ ಕಾಲಕ್ಕೆ ಅವರು ನಮ್ಮ ಜಿಲ್ಹೆಗೂ ಬಂದಿದ್ದರು ೧೯೩೯ರಲ್ಲಿ ನೇತಾಜಿ ಸುಭಾಷ ಚಂದ್ರರು ರಾಷ್ಟ್ರಪತಿತ್ವಕ್ಕೆ ರಾಜೀನಾಮೆ ಕೊಟ್ಟಾಗ ಹಾಗೂ ೧೯೪೭ರಲ್ಲಿ ಆಚಾರ್ಯ ಕೃಪಾಲಾನಿಯವರು ರಾಜೀನಾಮೆ ಕೊಟ್ಟಾಗ ಕೊಂಗ್ರೆಸ ಅಧ್ಯಕ್ಷತನದ ಹೊಣೆ ಹೊರಲಿಕ್ಕೆ ರಾಜೇಂದ್ರರೇ ಮುಂದಾಗಿದ್ದರೆಂಬುದನ್ನು ನಾವು ನೆನಪಿನಲ್ಲಿಡಬೇಕು. ೧೯೪೬ರಲ್ಲಿ ರಾಷ್ಟ್ರೀಯ ಸರಕಾರದ ಸ್ಥಾಪನೆಯಾದ ಮೇಲೆ ಪಂ॥ ಜವಾಹರಲಾಲರು ಅವರಿಗೆ ತಮ್ಮ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡು ಆಹಾರ ಇಲಾಖೆಯನ್ನು ಅವರಿಗೆ ಒಪ್ಪಿಸಿದ್ದರು. ಆದರೆ ಮುಂದೆ ಅದೇ ಡಿಸೆಂಬರ ತಿಂಗಳಲ್ಲಿ ಘಟನಾ ಸಮಿತಿಯು ಒಮ್ಮತದಿಂದ ರಾಜೇಂದ್ರರನ್ನು ಅಧ್ಯಕ್ಷರನ್ನಾಗಿ ಆರಿಸಿತು ಈ ಅಧ್ಯಕ್ಷತನವನ್ನೂ ಮಂತ್ರಿಪದವನ್ನೂ ಸಾಗಿಸಿಕೊಂಡು ಹೋಗುವದು ಕಠಿಣವಾದ್ದರಿಂದ ರಾಜೇಂದ್ರರು ಆ ಮಂತ್ರಿಪದಕ್ಕೆ ತ್ಯಾಗ-ಪತ್ರ ಕೊಡಬೇಕಾಯಿತು. ರಾಜೇಂದ್ರ ಬಾಬುಗಳು ಘಟನಾ ಸಮಿತಿಯ ಅಧ್ಯಕ್ಷತನವನ್ನು ಜಾಣಾಕ್ಷ-ಚಾತುರ್ಯದಿಂದ ನಡಿಸಿಕೊಂಡು ಹೋದುದರಿಂದಲೇ ನಮ್ಮ ಘಟನೆಯ ಕಾರ್ಯ ಇಷ್ಟು ಬೇಗ ಮುಗಿದು, ಇಷ್ಟು ಬೇಗ ನಾವು ಪ್ರಜಾರಾಜ್ಯವನ್ನು ಸ್ಥಾಪಿಸಿಕೊಳ್ಳಲು ಶಕ್ತರಾದೆವೆಂದು ಹೇಳಿದರೆ ತಪ್ಪಾಗುವದಿಲ್ಲ

ಡಾ॥ ರಾಜೇಂದ್ರ ಪ್ರಸಾದರು ಮಹಾತ್ಮಾಜಿಯವರ ಪಟ್ಟಶಿಷ್ಯರಾಗಿದ್ದಾರೆ. ಗಾಂಧಿಜಿಯವರ ತತ್ವಜ್ಞಾನವೆಲ್ಲ ಅವರ ಮೈಯಲ್ಲಿದೆ ಅಂತೆಯೇ ಎರಡು ತಿಂಗಳ ಹಿಂದೆ ಶಾಂತಿನಿಕೇತನದಲ್ಲಿ ವಿಶ್ವಶಾಂತಿ ಸಾಧನೆಯ ಮಾರ್ಗ ಕಂಡುಹಿಡಿಯಲು ಕೂಡಿದ ಪ್ರಪಂಚದ ಶಾಂತಿದೂತರು ಡಾ॥ ರಾಜೇಂದ್ರರನ್ನೇ ತಮ್ಮ ಸಮ್ಮೇಲನದ ಅಧ್ಯಕ್ಷರನ್ನಾಗಿ ಆರಿಸಿದ್ದರು. ತಮ್ಮ ಸಾದಾ ಸಾತ್ವಿಕ ಜೀವನ, ಅತ್ಯುದಾರ ವಿಚಾರ-ಸರಣಿ, ನಿರ್ಮಲ ಚಾರಿತ್ರ್ಯ ಮತ್ತು ಸನ್ಯಸ್ತವೃತ್ತಿ ಇವುಗಳಿಂದ ರಾಜೇಂದ್ರರು ಆದರ್ಶ ಹಿಂದು ಸಂಸ್ಕೃತಿಯ ಪ್ರತೀಕವಾಗಿದ್ದಾರೆ ಸರದಾರ ಪಟೇಲ ಮತ್ತು ಪಂಡಿತ ನೆಹರು ಇವರಿಗೆ ನಾವು ಭೀಮಾರ್ಜುನರ ಉಪಮೆಯನ್ನು ಕೊಟ್ಟರೆ ಡಾ॥ ರಾಜೇಂದ್ರರಿಗೆ ಧರ್ಮರಾಜನನ್ನಾಗಿ ಮಾಡಬೇಕು ಈ ಧರ್ಮರಾಯನೇ ಇಂದು ನಮ್ಮ ರಾಷ್ಟ್ರದ ಅಧ್ವರ್ಯರಾಗಿದ್ದಾನೆಂಬುದು ನಮಗೊಂದು ಹೆಮ್ಮೆಯ ವಿಷಯ. ರಾಜೇಂದ್ರರ ಪ್ರಕೃತಿ ನೆಟ್ಟಗಿಲ್ಲ ಎಷ್ಟೋ ವರ್ಷಗಳಿಂದ ಅವರಿಗೆ ದಮ್ಮಿನ ಉಪಹತಿ ಬಾಧಿಸುತ್ತಿದೆ. ಆದರೆ ರಾಜೇಂದ್ರರ ಆಧ್ಯಾತ್ಮಿಕ ಬಲವು ಇಷ್ಟು ದಿನ ಆ ಆಧಿಭೌತಿಕ ಕೊರತೆಯನ್ನು ಯಶಸ್ವಿಯಾಗಿ ಪ್ರತಿಬಂಧಿಸಿ ಬಂದಂತೆ ಇನ್ನು ಮುಂದೆ ಸಹ ಪ್ರತಿಭಟಿಸುವದೆಂದೂ ರಾಷ್ಟ್ರದ ನೌಕೆಯನ್ನು ಪ್ರಚಲಿತ ಗಂಭೀರ ಪರಿಸ್ಥಿತಿಯಲ್ಲಿ ಗೌರವದಿಂದಲೂ ಸುರಕ್ಷಿತತೆಯಿಂದಲೂ ಸಾಗಿಸಿಕೊಂಡು ಹೋಗುವದಕ್ಕಾಗಿ ಜಗನ್ನಿಯಾಮಕನು ಅವರಿಗೆ ದೀರ್ಘಾಯುರಾರೋಗ್ಯ ದಯಪಾಲಿಸುವನೆಂದೂ ನಮಗೆ ಪೂರ್ಣ ವಿಶ್ವಾಸವುಂಟು.

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೋಂಬೆ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ:— ಕೆನರಾದಿಂದ (ಯು ಕೆ ಟಿ, ಬಿ ಕೆ, ಕಲಬುಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮಲ್ಲಿ ಬರುವ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ವ್ಯವಸ್ಥೆ ಮಾಡಲಾಗುವದು ಇದಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ:— ವ್ಯಾಂಕಪ್ಪಾ ಶೈ.

ಝೇಂಡಾ ಊಂಚಾ ರಹೇ ಹಮಾರಾ ವಿಜಯೀ ವಿಶ್ವ ತ್ರಿರಂಗಾ ಪ್ಯಾರಾ.

ಸ್ವತಂತ್ರ ಭಾರತೀಯ ಪ್ರಜಾರಾಜ್ಯದ ರಾಷ್ಟ್ರ ಧ್ವಜ



ಕಾನಡಾ ವೃತ್ತ.

ಶ್ರೀ ಶಕೆ ೧೮೭೧ ಮಾಘ ಶು|| ೧೨ ಸೋಮವಾರ

ಭಾರತವು ಸರ್ವತಂತ್ರ-ಸ್ವತಂತ್ರವಾಯಿತು.

೨೦ ವರ್ಷಗಳ ಹಿಂದೆ ಪಂ|| ಜವಾಹರಲಾಲರ ಅಧ್ಯಕ್ಷತೆಯಲ್ಲಿ ಲಾಹೋರದೊಳಗೆ ರಾವಿ ನದಿಯ ದಡದ ಮೇಲೆ ಸೇರಿದ ಹಿಂದೀ ರಾಷ್ಟ್ರೀಯ ಸಭೆಯು ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುವದೇ ತನ್ನ ಗುರಿಯೆಂದು ನಿರ್ಣಯಿಸಿ ಜಗತ್ತಿಗೆ ವಿದಿತಗೊಳಿಸಿತ್ತು, ಮತ್ತು ೧೯೩೦ನೇ ಇಸವಿಯ ಜನವರಿ ತಿಂಗಳ ತಾ ೨೬ ಮೊದಲ್ಗೊಂಡು ಪ್ರತಿ ಜನವರಿ ತಾ ೨೬ಕ್ಕೆ ಭಾರತೀಯರು ಆ ಸೇತು-ಹಿಮಾಚಲ ಸ್ವಾತಂತ್ರ್ಯದಿನವನ್ನಾಚರಿಸಿ, ಸಾಮೂಹಿಕವಾಗಿಯೂ ವ್ಯಕ್ತಿಕವಾಗಿಯೂ ಸ್ವಾತಂತ್ರ್ಯ-ಪ್ರತಿಜ್ಞೆಯನ್ನು ಉಚ್ಚರಿಸುತ್ತ ಬಂದಿದ್ದರು. ೧೯೩೦ರಲ್ಲಿ ಉಚ್ಚರಿಸಲಾರಂಭಿಸಿದ ಆ ಪ್ರತಿಜ್ಞೆಯು ಪುಣ್ಯಪುರುಷ ಮಹಾತ್ಮಾಜಿಯವರ ಮಾರ್ಗದರ್ಶನೆಯ ಪ್ರಭಾವದಿಂದಲೂ, ರಾಷ್ಟ್ರೀಯ ಸಭೆಯ ಸಣ್ಣ ದೊಡ್ಡ ಕಾರ್ಯಕರ್ತರು ಮಾಡಿದ ತ್ಯಾಗ ಬಲಿದಾನದಿಂದಲೂ, ರಾಷ್ಟ್ರೀಯ ಸಭೆಯ ಬೆಂಬಲಕ್ಕೆ ನಿಂತು, ಬಂದ ಕಷ್ಟಗಳನ್ನೆಲ್ಲ ಎದುರಿಸಿದ ಸಮಸ್ತ ಭಾರತದ ಸ್ತ್ರೀ ಪುರುಷ-ಬಾಲಕರು ಸಹಿಷ್ಣುತೆಯಿಂದ ವ್ಯಕ್ತಗೊಳಿಸಿದ ಇಚ್ಛಾಶಕ್ತಿಯ ಸಾಮರ್ಥ್ಯದಿಂದಲೂ ಕಳೆದ ಗುರುವಾರ ತಾ ೨೬ಕ್ಕೆ ಫಲಿಸಿತು. ತಾನಾಯಿ ಸ್ವಾತಂತ್ರ್ಯಗೊಂಡ ದಿನ, ಪ್ರಾತಃಕಾಲದಿಂದ ಭಾರತವನ್ನು ಸರ್ವತಂತ್ರ-ಸ್ವತಂತ್ರವನ್ನಾಗಿ ಮಾಡಿದಂದು ನಮಗೆ ವಿಶೇಷವಾಗಿ ಹರ್ಷವೆನಿಸುತ್ತಿದೆ. ೧೯೪೭

ಆಗೋಸ್ತ ತಿಂಗಳಲ್ಲಿ ನಮ್ಮ ದೇಶ ಸ್ವತಂತ್ರವಾಗಿತ್ತು ನಿಜ. ಆದರೆ ಆ ಸ್ವಾತಂತ್ರ್ಯ ನಮಗೆ ಬ್ರಿಟಿಶ ಸಮ್ರಾಟರಿಂದ ಸಿಕ್ಕಿತ್ತು. ತತ್ವತಃ ನಾವು ಆಗ ಸ್ವತಂತ್ರರಾಗಿರುತ್ತಿದ್ದರೂ, ನಮ್ಮ ಸರ್ವಾಧಿಕಾರಿಗಳು ಇಷ್ಟು ದಿನ ಬ್ರಿಟಿಶ ಚಕ್ರವರ್ತಿಗಳ ಪ್ರತಿನಿಧಿಯೆಂದು ವ್ಯವಹರಿಸುತ್ತಿದ್ದರು, ನಮ್ಮ ಧ್ವನಿ ದಿನ ರಾಜ್ಯಾರಂಭ ರವ್ರ ಕೂಡ ೧೯೩೫ರಲ್ಲಿ ಬ್ರಿಟಿಶ ಪಾರ್ಲಿಮೆಂಟು ರಚಿಸಿದ ಘಟನೆಯಂತೆ ನಡೆಯುತ್ತಿತ್ತು. ಸರಕಾರಿ ಇಮಾರತುಗಳಲ್ಲಿ, ಸಭಾ ಭವನಗಳಲ್ಲಿ ಬ್ರಿಟಿಶರ ಪ್ರಭುತ್ವದ ಚಿನ್ಹೆಗಳಾದ ಕಿರೀಟಗಳು ತೂಗಾಡಿಸುತ್ತಿದ್ದವು. ಇದರಿಂದ ನಮ್ಮ ಸ್ವಾತಂತ್ರ್ಯಕ್ಕೆ ಒಂದಿಷ್ಟು ಕೊರತೆಯಿತ್ತು. ಈ ಕೊರತೆಯು ಈಗ ಪೂರ್ಣ ತುಂಬಿ ಬಂದಿದೆ. ಇನ್ನು ಮುಂದೆ ನಮ್ಮ ದೇಶದ ಸಂಪೂರ್ಣ ಕಾರಭಾರವು ಪ್ರಜಾ ರಾಜ್ಯ ನಮ್ಮ ಪ್ರತಿನಿಧಿಗಳೇ ನಡೆಸುವ ಹೊಸ ಪ್ರಜಾರಾಜ್ಯದ ಘಟನೆಯ ಮೇರೆಗೆ, ನಮ್ಮ ಪ್ರತಿನಿಧಿಗಳೇ ಆರಿಸಿದ ಸ್ವತಂತ್ರ ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿ ನಡೆಯುವದು. ಬ್ರಿಟಿಶ ಅರಸರ ಇಲ್ಲವೆ ಬೇರೆ ಯಾರೇ ಪ್ರತಿನಿಧಿಯ ಇನ್ನು ಮುಂದೆ ನಮ್ಮ ರಾಜ್ಯದಲ್ಲಿ ಅಧಿಕಾರ ನಡೆಸುವಂತಿಲ್ಲ. ಬ್ರಿಟಿಶರ ಮೇಲೆ ನಾವು ಸಂಪೂರ್ಣ ಹೊಂದಿಕೊಂಡಿದ್ದೆವು ಎಂಬುದು ಖರೆ. ಆದರೆ ಆ ಸರಪಳಿಯನ್ನು ಈಗ ನಾವಾಗ

ನಮ್ಮ ಇಚ್ಛೆಯಿಂದ ಕಟ್ಟಿಕೊಂಡಿದ್ದೇವೆ. ಹೀಗಾದುದರಿಂದ ಅವನ್ನು ನಮಗೆ ಕಟ್ಟಬೇಕೆನಿಸಿದಾಗ ಕಟ್ಟಿ, ಅವನ್ನು ನಾವು ಎಂದು ಬೇಕಾದಾಗ ಕಡಿದೊಗೆಯಬಲ್ಲೆವು. ಆದ ರಿಂದ ಈ ಪರಲು ನಮ್ಮ ಸ್ವಾತಂತ್ರ್ಯಕ್ಕೆ ಎಳ್ಳಷ್ಟು ನ್ಯೂನತೆಯನ್ನು ತರಲಾರದು. ನಮ್ಮ ರಾಷ್ಟ್ರವೀಗ ಸ್ವತಂತ್ರವಾಗಿದೆ, ಸಂಪೂರ್ಣ, ಪರಿಪೂರ್ಣ ಸ್ವಾತಂತ್ರ್ಯ ನಮಗಿಂದು ದೊರೆತಿದೆ.

ಈ ಪರಿಣತಿಯನ್ನು ಒದಗಿಸಿಕೊಡಲು ಪ್ರಯತ್ನಿಸಿದ ಆ ಬಗ್ಗೆ ಬಗೆಬಗೆಯ ಬಲಿದಾನ ಮಾಡಿದ, ತರತರದ ಕಷ್ಟಗಳನ್ನೂ ಕ್ಲೇಶಗಳನ್ನೂ ಸಹಿಸಿದ ಸಕಲರಿಗೂ ನಾವು ಈ ಸಂದರ್ಭದಲ್ಲಿ ನಮ್ಮ ವಿನಮ್ರ ಪ್ರಣಾಮಗಳನ್ನು ಸಲ್ಲಿಸುವದು ನಮ್ಮ ಪ್ರಥಮ ಕರ್ತವ್ಯವಿದೆ. ಈ ಪರಿಣತಿಯನ್ನು ಸಾಧಿಸಲು ನಾವು ಮಾಡಿದ ಹೋರಾಟ ಇತ್ತೀಚಿನದಲ್ಲ, ಈ ಶತಮಾನದ್ದೂ ಅಲ್ಲ. ೧೮೫೭ನೇ ಇಸವಿಯಲ್ಲಿ ಪ್ರಾರಂಭವಾದ ಹೋರಾಟವಿದು. ಅಂದು ಪ್ರಾರಂಭಗೊಂಡ ಹೋರಾಟವು ಕೆಲವೊಮ್ಮೆ ತೀವ್ರವಾಗುತ್ತ, ಕೆಲವೊಮ್ಮೆ ಮಂದವಾಗುತ್ತ, ಕೆಲವೊಮ್ಮೆ ಕಣ್ಮರೆಯಾಗುತ್ತ, ಕೆಲವೊಮ್ಮೆ ಬಲಗೊಳ್ಳುತ್ತ ೧೯೫೦ರಲ್ಲಿ ಪೂರ್ಣ ಯಶಸ್ವಿಯಾಯಿತು. ಈ ಸುದೀರ್ಘ ಅವಧಿಯ ಹೋರಾಟದಲ್ಲಿ ನಾಯಕರಾಗಿ, ಕಲಿಗಳಾಗಿ, ಸೈನಿಕರಾಗಿ ಭಾಗವಹಿಸಿದ ಅಸಂಖ್ಯಾತ ವೀರರ ನಾಮನಿರ್ದೇಶ ಮಾಡುವದು ಸಾಧ್ಯವಿಲ್ಲ. ಅವರು ಮಾಡಿದ ಬಲಿದಾನಗಳ ತಾರತಮ್ಯ ಮಾಡುವದೂ ಉಚಿತವಲ್ಲ. ಎಲ್ಲರೂ ತಮ್ಮ ಬುದ್ಧಿಶಕ್ತಿಯಂತೆ ದುಡಿದಿದ್ದಾರೆ, ತಮ್ಮ ಶಕ್ತಿಗೆ ಒಪ್ಪುವಂತೆ ದುಡಿದಿದ್ದಾರೆ. ಆದರೂ ಈ ಹೋರಾಟಕ್ಕೆ ವಿಶಾಲ ಸ್ವರೂಪವನ್ನು ಕೊಟ್ಟು, ಅದನ್ನು ಸತ್ಯ ಅಹಿಂಸೆ ಮತ್ತು ವಿಶ್ವಬಂಧುತ್ವದ ಉನ್ನತ ತತ್ವಗಳನುಸಾರವಾಗಿ ನಡೆಸಿದ ಪೂಜ್ಯ ಮಹಾತ್ಮಾ ಗಾಂಧಿಯವರ ಹೆಸರಿನ ಉಲ್ಲೇಖವನ್ನು ಮಾತ್ರ ಮಾಡಲೇಬೇಕು. ಸ್ವಾತಂತ್ರ್ಯವು ಸಂಪೂರ್ಣವಾಗಬೇಕಾದರೆ, ಚಿರಸ್ಥಾಯಿಯಾಗಬೇಕಾದರೆ ಮತ್ತು ಜಗನ್ಮಾನ್ಯವಾಗಬೇಕಾದರೆ ಅದು ಸತ್ಯ, ಅಹಿಂಸೆ ಮತ್ತು ವಿಶ್ವಬಾಂಧವ್ಯದ ಅಡಿಗಲ್ಲುಗಳ ಮೇಲೆ ಅಧಿಷ್ಠಿತವಿರತಕ್ಕದ್ದೆಂಬ ಮಹಾಪಾಠವನ್ನು ಕಲಿಸಿಕೊಟ್ಟವರೂ ಆ ಸ್ವಾತಂತ್ರ್ಯಕ್ಕೆ ನಿರ್ಮಲ ರೂಪ ಕೊಟ್ಟವರೂ ಮಹಾತ್ಮರೇ. ಸಂತ ಎಂದು ಜಗತ್ತು ಗೌರವಿಸುವ ಇಂದು ಇಡೀ ಜಗತ್ತು ಮಹಾತ್ಮರನ್ನು ಸ್ವತಂತ್ರ ಭಾರತದ ಜನಕನೆಂದು ಸಂಬೋಧಿಸುತ್ತಿದೆ. ತಾನು ರೂಪಿಸಿದ ಭಾರತದ ಆ ಸ್ವಾತಂತ್ರ್ಯೋತ್ಸವವನ್ನು ಭೌತಿಕ ಕಣ್ಣುಗಳಿಂದ ನೋಡಿ, ಭೌತಿಕ ಬಾಯಿಯಿಂದ ನಮ್ಮನ್ನು ಆಶೀರ್ವದಿಸ ಹರಸಲು ಇಂದು ಅವರು ಬದುಕಿಉಳಿಯಬೇಕಿತ್ತು. ಅವರು ಬದುಕಿ ಉಳಿಯುತಿದ್ದರೆ, ಇಂದಿನ ನಮ್ಮ ಆನಂದಕ್ಕೆ ಪಾರವಿರುತ್ತಿದ್ದಿಲ್ಲ. ಆದರೆ ಆ ಭಾಗ್ಯ ನಮ್ಮದಿರಲಿಲ್ಲ. ಆದರೂ ಅವರ ಅಮರ ಆತ್ಮವು ನಮ್ಮ ಉತ್ಸವವನ್ನು ಕಂಡು ನಲಿಯುವದೆಂದೂ, ನಮ್ಮನ್ನು ಆಶೀರ್ವದಿಸುವದೆಂದೂ, ಕಾಲಕಾಲಕ್ಕೆ ನಮಗೆ ಮಾರ್ಗದರ್ಶಕವಾಗಿ ನಿಲ್ಲುವದೆಂದೂ ನಾವು ಇಂದು ನಂಬಿರೋಣ ಮತ್ತು ಮಹಾತ್ಮರು ಅವರನ್ನು ಅವರು ಕಲಿಸಿಕೊಟ್ಟ ತತ್ವಗಳನ್ನು ಸ್ಮರಿಸುತ್ತಿರೋಣ.

ಸ್ವತಂತ್ರ ಭಾರತದ ಜನಕ ಮಹಾತ್ಮಾ ಮೋಹನದಾಸ ಗಾಂಧಿ

ಇಂದು ಅವರ ದ್ವಿತೀಯ ಪುಣ್ಯತಿಥಿ. ಎಲ್ಲೆಲ್ಲೂ ಆಚರಿಸಲ್ಪಡುತ್ತಿದೆ.

ಹೊಸ ರಾಷ್ಟ್ರ ಗೀತ

ನಮ್ಮ ಹಳೆಯ "ವಂದೇ ಮಾತರಂ" ರಾಷ್ಟ್ರಗೀತವನ್ನು ಸ್ವಂತರ ಬ್ಯಾಂಡವಾದ್ಯದಲ್ಲಿ ಸರಿಯಾಗಿ ನುಡಿಸಲಿಕ್ಕೆ ಇಲ್ಲವೆ ಸಾಮೂಹಿಕವಾಗಿ ಹಾಡಲಿಕ್ಕೆ ತಕ್ಕುದಾಗುವದಿಲ್ಲವೆಂಬ ಕಾರಣದಿಂದ ಕವಿಶಿರೋಮಣಿ ರವೀಂದ್ರನಾಥ ಠಾಕೂರರ "ಜನ ಗಣ ಮನ" ಪದ್ಯವನ್ನು (ಒಂದೆರಡು ಬದಲಾವಣೆಗಳೊಂದಿಗೆ) ನಮ್ಮ ರಾಷ್ಟ್ರಗೀತವನ್ನಾಗಿ ಆರಿಸಲಾಗಿದೆ. ಆದರೂ ಸ್ವಾತಂತ್ರ್ಯ ಸಮರದಲ್ಲಿ ಜನತೆಯಲ್ಲಿ ಸ್ಫೂರ್ತಿಯನ್ನಿತ್ತ ಮತ್ತು ೩೦–೪೦ ವರ್ಷಗಳ ಅವಿರತ ಪುರಸ್ಕರಣೆಯಿಂದ ಸ್ವಾತಂತ್ರ್ಯದ ಮೂಲ ಮಂತ್ರದಂತಿರುವ 'ವಂದೇ ಮಾತರಂ' ಗೀತಕ್ಕೂ ಹೊಸ ರಾಷ್ಟ್ರ ಗೀತದಷ್ಟೇ ಮನ್ನಣೆ ಮತ್ತು ಗೌರವ ಸಲ್ಲಿಸಬೇಕೆಂದು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಅಪ್ಪಣೆ ಕೊಟ್ಟಿದ್ದಾರೆ. ಹೊಸ ರಾಷ್ಟ್ರಗೀತವನ್ನು ಕೆಳಗೆ ಕೊಡಲಾಗಿದೆ.

ಜನಗಣ-ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯವಿಧಾತಾ ||
ಪಂಜಾಬ-ಸಿಂಧು-ಗುಜರಾತ-ಮರಾಠಾ-
ದ್ರಾವಿಡ ವಂಗ
ಉತ್ಕಲ-ವಿಂಧ್ಯ-ಹಿಮಾಚಲ ಯಮುನಾ ಗಂಗಾ
ಜಲಧಿತರಂಗ |
ತವ ಶುಭ ನಾಮೇ ಜಾಗೇ, ತವ ಶುಭ ಆಶಿಷ
ಮಾಗೇ, ಗಾಹೇ ತವ ಜಯ ಗಾಥಾ ||
ಜನಗಣ-ಮಂಗಲ-ದಾಯಕ ಜಯ ಹೇ
ಭಾರತ ಭಾಗ್ಯವಿಧಾತಾ ||
ಜಯ ಹೇ ಜಯ ಹೇ ಜಯ ಹೇ
ಜಯ ಜಯ ಜಯ ಜಯ ಹೇ ||

ನಮಗಿಂದು ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿತೆಂದು ನಾವು ಹುರುಳಿ ಹೋಗದಿರೋಣ. ಸ್ವಾತಂತ್ರ್ಯದೊಂದಿಗೆ ನಮ್ಮ ಹೊಣೆಗಳೂ ಹೆಚ್ಚಾಗಿವೆ. ಹಿಂದೆ ನಮ್ಮ ಮೇಲೆ ಏನಾದರೂ ಕಷ್ಟ ಬಂದರೆ ನಾವು ಅವುಗಳ ಹೊಣೆಯನ್ನು ಬ್ರಿಟಿಶ ಆಳರಸರ ತಲೆಯ ಮೇಲೆ ಹೊರಿಸಿ ಪಾರಾಗಿ ಬಿಡುತ್ತಿದ್ದೆವು. ಈಗ ನಾವು ಯಾಗೆ ಮಾಡಲಾರೆವು. ನಮ್ಮ ಕಷ್ಟಗಳ ಹೊಣೆಯನ್ನು ಸ್ವತಃ ನಾವೇ ಹೊರಬೇಕು. ಈಗ ಜಗತ್ತಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನಮ್ಮ ರಾಷ್ಟ್ರದ ಸುತ್ತಮುತ್ತಲು ಸಹ ನಮ್ಮ ಹಗೆಗಳು ತಲೆದೋರಿ ಕೂತಿದ್ದಾರೆ. ಉತ್ತರದಲ್ಲೂ ಈಶಾನ್ಯದಲ್ಲೂ ಕಮ್ಯುನಿಝಂದ ಭೂತವು ಆ ಎಂದು ಬಾಯ್ತೆರೆದು ಕೂತಿದೆ. ಎಡ-ಬಲಗಳಲ್ಲಿ ನಮ್ಮ ದಾಯವಾದಿ ಪಾಕಿಸ್ತಾನಿಗಳು ನಮಗೆ ಸುಖದಿಂದ ನಿದ್ರೆ ಮಾಡಲು ಕೊಡಬಾರದೆಂಬ ಪಣವನ್ನೇ ತೊಟ್ಟಿದ್ದಾರೆ. ದೇಶದ ಒಳಗೂ ದಾರಿದ್ರ್ಯ, ಆಹಾರ ಒಸ್ತುಗಳ ಕೊರತೆ, ಕಳ್ಳಸಂತೆ, ಲಂಚಗುಳಿತನ ಇವು ತಮ್ಮ ತಾಂಡವವನ್ನಾಡುತ್ತಿವೆ! ಲಕ್ಷಾವಧಿ ನಿರಾಶ್ರಿತರು ಇನ್ನೂ ನಿರಾಶ್ರಿತರಾಗಿ ಆಶ್ರಯವನ್ನು ಬೇಡುತ್ತಿದ್ದಾರೆ. ಆರ್ಥಿಕ ಪರಿಸ್ಥಿತಿಯಂತೂ ಹಳವು ಹಿಡಿಯುತ್ತಿದೆ! ಈ ಎಲ್ಲ ಸಂಕಟಗಳನ್ನು ನಾವು ಎದುರಿಸಿ, ಕಷ್ಟದಿಂದ ದೊರಕಿಸಿದ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು. ಸ್ವಾತಂತ್ರ್ಯವಷ್ಟೇ ನಮ್ಮ ಸಾಧ್ಯವಲ್ಲ! ಮೋಕ್ಷವಲ್ಲ. ಅದೊಂದು ಬರೇ ಸಾಧನ ಮಾತ್ರ. ಸಕಲ ಪ್ರಜೆಗಳಿಗೆ ಅನ್ನಾಹಾರವನ್ನೂ ಬಟ್ಟೆಬರೆಗಳನ್ನೂ ಪೂರೈಸಿ, ಅವರವರ ಯೋಗ್ಯತೆಯಂತೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟು, ಸ್ವಾತಂತ್ರ್ಯದ ಸವಿಯನ್ನು ಸವಿಯಲು ತಕ್ಕ ವಿದ್ಯೆಯನ್ನು ಕಲಿಸಿ, ಆದರ್ಶಭೂತ ಸುಸಂಸ್ಕೃತ ನಾಗರಿಕತೆಯನ್ನು ಕಟ್ಟಬೇಕು. ಒಂದೇ ಶಬ್ದದಲ್ಲಿ ಹೇಳಬೇಕಾದರೆ, ಗಾಂಧಿಜಿಯವರು ಸದಾ ಕನವರಿಸುತ್ತಿದ್ದ ರಾಮರಾಜ್ಯವನ್ನು ಕಟ್ಟಬೇಕು ಮತ್ತು ಅಖಿಲ ವಿಶ್ವದ ಶಾಂತತಾಮಯ ಪ್ರಗತಿಗೆ ನೆರವಾಗಬೇಕು. ಸ್ವಾತಂತ್ರ್ಯದ ಸಾಧನೆಯನ್ನು ಮಹಾತ್ಮರು ನಮಗೆ ಕಲಿಸಿದರು. ಈಗ ಈ ವಿಶಾಲ ಹೊಣೆಗಳನ್ನು ನಾವು ಇಂದು ಸ್ವಯಾಧೀನವಾಗಿ ಅರಿತುಕೊಂಡು ಅವನ್ನು ಪಾರ ಗಾಣಿಸಲು ಸನ್ನದ್ಧರಾಗೋಣ. ಸ್ವಾತಂತ್ರ್ಯಪ್ರಾಪ್ತಿಯ ಮನ್ವಂತರವು ಮುಗಿದಿದೆ. ಸ್ವಾತಂತ್ರ್ಯೋಪಭೋಗದ ನವ ಮನ್ವಂತರಕ್ಕೆ ಆರಂಭವಾಗಿದೆ. ಈ ನವ ಮನ್ವಂತರಕ್ಕೆ ಸರಿಯಾಗಿ ನಾವು ಸಕಲರೂ ನಮ್ಮ ಆಚಾರ-ವಿಚಾರಗಳನ್ನು ಸರಿಪಡಿಸಿಕೊಂಡು ಹೋಗೋಣ. ಇಂದು ನಾವು ಮಾಡತಕ್ಕ ಪ್ರತಿಜ್ಞೆ ಇದೇ.

ಗಮನಾರ್ಹ ಮಾಹಿತಿ.

— ನಮ್ಮ ಹೊಸ ರಾಜ್ಯಘಟನೆಯನ್ನು ಸಿದ್ಧಗೊಳಿಸುವದಕ್ಕಾಗಿ ಘಟನಾ ಸಮಿತಿಯು ತಾ. ೯ ೧೨–೧೯೪೬ನೇ ದಿನ ಪ್ರಾರಂಭ ಮಾಡಿತು. ತಾ. ೨೬—೧೧—೧೯೪೯ನೇಗೆ ಘಟನೆಯು ಸಿದ್ಧವಾಯಿತು. ಘಟನಾ ಸಮಿತಿಯಲ್ಲಿ ೩೦೦ ಸದಸ್ಯರಿದ್ದರು. ಸಮಿತಿಯು ೧೧ ಅಧಿವೇಶನಗಳಲ್ಲಿ ಕೂಡಿ, ಘಟನೆಯ ಕಲಮುಗಳನ್ನು ಒಂದೊಂದಾಗಿ ಮೊದಲು ಚರ್ಚಿಸಿ ನಿರ್ಣಯಿಸಿ, ಕೊನೆಗೆ ಒಟ್ಟಾರೆ ಚರ್ಚೆ ಮಾಡಿತು. ಘಟನೆಯಲ್ಲಿ ಒಟ್ಟು ೩೦೫ ಕಲಮುಗಳಿವೆ. ಪರಿಶಿಷ್ಟಗಳಿವೆ. ಸಮಿತಿಯ ಒಟ್ಟು ವೆಚ್ಚ ೬೪ ಲಕ್ಷ ರೂಪಾಯಿಗಳಷ್ಟು ಆಯಿತು.

— ಗುರುವಾರ ತಾ. ೨೬ನೇ ದಿನ ಮುಂಜಾನೆ ಮೊದಲು ಸರ್ವಾಧಿಕಾರಿ ರಾಜಾಜಿಯವರು ಹೊಸ ಪ್ರಜಾರಾಜ್ಯದ ಘಟನೆಯು ಅಂದಿನಿಂದ ಅಮಲಿನಲ್ಲಿ ಬಂದಿದೆಯೆಂದು ಘೋಷಿಸಿ, ತಮ್ಮ ರಾಜ್ಯದ ಭಾರವನ್ನು ಬಿಡಿದರು. ಆಮೇಲೆ ನಿಯೋಜಿತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರರು ಘಟನಾನುಸಾರವಾಗಿ ತಾವು ತಮ್ಮ ಕರ್ತವ್ಯಗಳನ್ನು ಪಾಲಿಸುವೆನೆಂದು ಪ್ರತಿಜ್ಞೆ ಮಾಡಿ ಸರಕಾರ ಭವನದೊಳಗಿನ ರಾಜಸಿಂಹಾಸನವನ್ನು ಏರಿದರು.

— ಮೊನ್ನೆಯಿಂದ ಕೇಂದ್ರ ಶಾಸನ-ಸಭೆಯ ಪಾರ್ಲಮೆಂಟಿನ ಅಧಿವೇಶನಕ್ಕೆ ಪ್ರಾರಂಭವಾಗಿದೆ. ಅಂದು ಸರಕಾರದ ಪ್ರತಿನಿಧಿ ಶ್ರೀ ... ಸದಸ್ಯರು ... ಸಭೆಯ ಅಧ್ಯಕ್ಷರು — ಬ್ರಿಟಿಶ ಪಾರ್ಲಮೆಂಟಿನಲ್ಲಿ ಅರಸರು ಮಾಡುವಂತೆ — ತಮ್ಮ ಭಾಷಣವನ್ನು ಮಾಡುವರು, ಮತ್ತು ಸರಕಾರದ ಸರ್ವಸಾಮಾನ್ಯ ರಾಜ್ಯಧೋರಣೆಯ ದಿಗ್ದರ್ಶನ ಮಾಡುವರು.

— ನಮ್ಮ ಪ್ರಜಾರಾಜ್ಯವನ್ನು ಸ್ವಾಗತಿಸಿ ಮತ್ತು ರಾಷ್ಟ್ರಾಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸಿ ಬ್ರಿಟಿಶ ಅರಸರಾದ ೬ನೇ ಜಾರ್ಜರು, ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು, ಬ್ರಿಟಿಶ ಪ್ರಧಾನಮಂತ್ರಿ ಕ್ಲೆಮಂಟ ಅಟ್ಲಿಯವರು ಹಾಗೂ ಅನೇಕ ವಿದೇಶಗಳ ಅರಸರೂ ಮಂತ್ರಿಗಳೂ ಸಂದೇಶಗಳನ್ನು ಕಳಿಸಿದ್ದಾರೆ. ಮತ್ತು ಭಾರತದ ಮಿತ್ರತ್ವವನ್ನು ಕೋರಿದ್ದಾರೆ.

— ಇದೇ ಬರುವ ತಾ. ೨೩ಕ್ಕೆ ವಿಲಾಯತಿಯ ಪಾರ್ಲಮೆಂಟಿನ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ನಾಮಪತ್ರ ಪ್ರಚಾರ ಭರದಿಂದಸಾಗಿದೆ. ಹುರಾಣವಾದ ಪಕ್ಷದ ಅಧ್ಯಯಗಳಾಗಿರುವ ವಿನ್ಸ್‌ಟನ್ ಚರ್ಚಿಲ್ಲರು ಕ್ರ... ಜೀವಿಗಳ ಪಕ್ಷವನ್ನು ಸೋಲಿಸಿ ಪುನಃ ಅಧಿಕಾರಾರೂಢರಾಗಬೇಕೆಂದು ಹವಣಿಸ ಹಿಡಿದಿದ್ದಾರೆ.

ಮುಂಬಯಿ ಸರಕಾರ
ನಾಗರಿಕ ಪೂರೈಕೆ ಖಾತೆ
ಮುಂಬಯಿ ಕೋಟೆ, ತಾ. ೩೦-೧-೧೯೫೦

ನೋಟೀಸ.

ತಾ. ೩೧-೧೨-೧೯೫೦ನೇಗೆ ಮುಗಿಯುವ ತ್ರೈಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ ಪತ್ರಿಕೆ.

೧೯೪೮ನೇ ಇಸವಿಯ ಮುಂಬಯಿಯ ಅರಳೆ ನೂಲಿನ ವ್ಯವಹಾರದ ನಿಯಂತ್ರಣದ ಆಜ್ಞೆ ಹಾಗೂ ೧೯೪೮ನೇ ಇಸವಿಯ ಹಿಂದೀ ಸಂಸ್ಥಾನಗಳ ಅರಳೆ ನೂಲಿನ ವ್ಯವಹಾರದ ನಿಯಂತ್ರಣದ ಆಜ್ಞೆ ಇವುಗಳನ್ವಯ ನೂಲಿನ ವ್ಯಾಪಾರಿಗಳು ತಾ. ೩೧-೧-೧೯೫೦ಕ್ಕೆ ಮುಗಿಯುವ ತ್ರೈಮಾಸಿಕ ಅವಧಿಯ ಮಾಹಿತಿಪತ್ರಿಕೆಗಳನ್ನು ಒಪ್ಪಿಸಬೇಕಾದ ಕೊನೆಯ ದಿನ ತಾ. ೧೦-೨-೧೯೫೦ ಆಗಿರುತ್ತದೆ. ಈ ಮಾಹಿತಿಪತ್ರಿಕೆಗಳನ್ನು ಸದರ ಆಜ್ಞೆಗಳಿಗೆ ಜೋಡಿಸಿರುವ ೪ನೇ ನಮೂದಿನಲ್ಲಿ ಬರೆದು ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರ, ೬-ಅ, ಕೂಪರೇಜ, ಕೋಟೆ, ಮುಂಬಯಿ ಈ ವಿಳಾಸಕ್ಕೆ ಕಳಿಸಿಕೊಡಬೇಕು. ಒಂಟಿ ನೂಲಿನ ಹಾಗೂ ಜೋಡ-ಎಳೆಗಳ (folded) ನೂಲಿನ ಸಂಗ್ರಹಗಳ ಮಾಹಿತಿಯನ್ನು, ಸದರ ನಮೂದುಗಳಲ್ಲಿ ನಿರ್ದೇಶಿಸಿದಂತೆ, ಪ್ರತ್ಯೇಕ ಪತ್ರಿಕೆಗಳಲ್ಲಿ ಕೊಡಬೇಕು. ಏನೂ ವ್ಯವಹಾರ ಮಾಡದಿದ್ದವರು ನದಾರ ಪತ್ರಿಕೆಯನ್ನು ಒಪ್ಪಿಸತಕ್ಕದ್ದು. ಮಾಹಿತಿ-ಪತ್ರಿಕೆಗಳು ಕಾಲದಲ್ಲಿ ಒಪ್ಪಿಸಲ್ಪಡುವಂತೆ ಎಲ್ಲ ಸಂಬಂಧಪಟ್ಟವರು ಜಾಗ್ರತೆ ವಹಿಸಬೇಕಾಗಿ ಬಿನಂತಿ.

G L Sheth
ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರ, ಮುಂಬಯಿ.

ಜಾಳ ಮಾರುವದಿದೆ.

ಸಿರ್ಸಿ ಕಸಬಾದಲ್ಲಿ ಸರಕಾರ ಕಚೇರಿಗಳ ಹತ್ತಿರ ಹನೇಕೇರಿ ಸ್ಥಳದಲ್ಲಿದ್ದ ೮ (ಎಂಟು) ಸ್ವತಂತ್ರ ಮನೆಗಳುಳ್ಳ ಜಾಳ ಪೂರ್ತಿಯಾಗಿ ಇಲ್ಲವೆ ವಿಂಗಡಿಸಿ ಮಾರುವದಿದೆ. ಏವರಿಗಾಗಿ ಸಮಕ್ಷ ಬೆಟ್ಟಿಯಾಗಿರಿ.

ರಂಗಪ್ಪಾ ಕೃಷ್ಣಪ್ಪಾ ಮಹಾಲಿಂಗಣ್ಣನವರ
ಸಿರ್ಸಿ, ಉ. ಕಾನಡಾ

ಜಿಲ್ಲಾ ಸಮಾಚಾರ.

ಶಿರಶಿ— (ತಾ ೨೦-೧-೫೦) [illegible]

[illegible]

ಯಲ್ಲಾಪುರ— (ತಾ [illegible]) [illegible]

[illegible]

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ [illegible] ಹುರಿ, ಬಾವಿ ಹಗ್ಗ, ಬ್ರಿಶಿ ಪಿಟ, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ.

[illegible], ಕೊಯರ್ ಸೊಸೈಟಿ ಲಿಮಿಟೆಡ್, ಹೊನ್ನಾವರ (ಉ ಕ)

THE BANK OF RURAL INDIA LTD.,

(Incorporated in Indian Union Liability of Members Limited)

HEAD OFFICE.—"Satyabhama Bhuvanam", **KARWAR**, N. K

Wishes Peace, Prosperity and Plenty in the NEW YEAR 1950 to all its share-holders, customers and well-wishers.

Karwar, [illegible]st Jan., 1950

P X GRACIOUS
MANAGING DIRECTOR.

ಕರೆಕೊಂಡು ಹೋಗುವದರಿಂದ ಮೇಲೆ ಡಾಕ್ಟರರ ನಡತೆಯ [illegible] ಮಾಡುವವರಾರು !

ದೇಹಳ್ಳಿಯಲ್ಲಿಯೂ ಒಂದು ಚಿಕಿತ್ಸಾಲಯವಿದೆ. ಆದರೆ ಅಲ್ಲಿ ಬಂದ ಬಂದ ಡಾಕ್ಟರರು ಬಿಟ್ಟು ಹೋಗುತ್ತಾರೆ. ಅವರಿಗೆ ಉಳಿಯಲಿಕ್ಕೆ ಮನೆಯೇ ಸಿಗುವದಿಲ್ಲವಂತೆ. ಹೀಗಾಗಿ ದೇಹಳ್ಳಿಯಲ್ಲಿ ಚಿಕಿತ್ಸಾಲಯ ಮಾತ್ರ ಇದೆ! ಮದ್ದು ಕೊಡುವವರು ಆ ರೋಗಿಗಳ ಚಿಕಿತ್ಸೆ ಮಾಡುವವರು ಯಾರೂ ಇಲ್ಲ!!

ಹಳಿಯಾಳ— (ತಾ ೧೦-೧-೫೦) ಉಗ್ರಾಣಗಳಿಗೆ ತರುವ ಭತ್ತವನ್ನು ಹಸನಗೊಳಿಸಿಕೊಳ್ಳುವ ಕ್ರಮವಿಟ್ಟಿರುವದರಿಂದ ಭತ್ತ ತರುವ ಜನರಿಗೆ ಕಷ್ಟವಾಗತೊಡಗಿದೆ. ಈಗಂತೂ ಭತ್ತ ಖರೀದಿಯ ದೊಡ್ಡ ಹಂಗಾಮು. ಇಂಥ ಹಂಗಾಮಿನಲ್ಲಿ ಭತ್ತ ತೂಗಿಕೊಳ್ಳುವ ಅಧಿಕಾರಿಗಳ ಹಾಗೂ ತಕ್ಕಡಿಗಳ ಸಂಖ್ಯೆಯನ್ನಾದರೂ ಹೆಚ್ಚಿಸುವದು ಒಳಿತಾಗುವದೆಂದು ಭತ್ತ ತರುವ ಜನರ ಕಷ್ಟಗಳನ್ನು ಪ್ರತ್ಯಕ್ಷ ಕಂಡವರೊಬ್ಬರು ಸೂಚನೆ ಮಾಡುತ್ತಾರೆ.

ಸಿಂಸಾ— ಉಳವಿ ಜಾತ್ರೆಯ ಕಾಲಕ್ಕೆ ಜಾತ್ರೆಗೆ ಬರುವ ಯಾತ್ರಿಕರಿಂದ ತಲಾ ೪ ಆಣೆಯಂತೆ (೧೬ ವರ್ಷಗಳೊಳಗಿನ ಅಪ್ರಾಯಸ್ಥರಿಂದ ತಲಾ ೨ ಆಣೆಯಂತೆ) ಯಾತ್ರಿಕ-ತೆರಿಗೆ ವಸೂಲ ಮಾಡಿ ಜಾತ್ರೆಯ ಕಾಲದ ಆರೋಗ್ಯ ರಕ್ಷಣೆಯ ಕಾರ್ಯ ನಿರ್ವಹಿಸಲು ಜಿಲ್ಲಾಧಿಕಾರಿ ಉಳವಿ ಮ್ಯುನಿಸಿಪಾಲಿಟಿಗೆ ಅಧಿಕಾರ ಕೊಟ್ಟಿರುತ್ತಾರೆಂದು ತಿಳಿಯುತ್ತದೆ.

ಕಾರವಾರ— (ತಾ ೧೪-೧-೫೦) ಈಗ ೨ ತಿಂಗಳಿಂದ ಇಲ್ಲಿ ನಡೆಯುತ್ತಿದ್ದ ಪ್ರಾ॥ ಶಾ॥ ಶಿಕ್ಷಕರ [illegible] ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ನಿನ್ನೆ ಸಂಜೆ ಜಿಲ್ಲಾ ನ್ಯಾಯಾಧೀಶ ರಾ॥ ಶ್ರೀ [illegible]ಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಿಬಿರದ ವಿದ್ಯಾರ್ಥಿಗಳ ಕವಾಯತು, ಶಿಬಿರಾಗ್ನಿ ವಗೈರೆ ಕಾರ್ಯಕ್ರಮಗಳು ಜರುಗಿ[illegible] ಕರ್ತರಾಗಿದ್ದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆರೋಗ್ಯ ರಕ್ಷಣೆಯ ಮಹತ್ವ ತಿಳಿಸಿ, ನೀರು-ಹವೆಗಳ ಬಗ್ಗೆ ಜಾಗ್ರತೆ ಕೊಳ್ಳುವದು, ಮನಸ್ಸನ್ನು ಯಾವಾಗಲೂ ನಿಶ್ಚಿಂತ ಮತ್ತು ಉಲ್ಲಸಿತ ಇಡುವದು ಮತ್ತು ನೇಮದಿಂದ ವ್ಯಾಯಾಮ ಮಾಡುವದು ಇವೇ ಆರೋಗ್ಯರಕ್ಷಣೆಯ ಪ್ರಧಾನ ಉಪಾಯಗಳೆಂದು ಬೋಧಿಸಿದರು.

ಗೋಟೆಗಾಳಿ-ಬಾಳ್ನಿ ಶಾಲೆಯವರು ಇತ್ತಲಾಗಿ ಒಂದು ಹೊಸ ಅನುಕರಣೀಯ ಉಪಕ್ರಮ ಮಾಡಿದ್ದಾರೆ. ಬಾಳ್ನಿ ಶಾಲೆಯ ಆಟದ ಬೈಲಿನಲ್ಲಿ ಸುತ್ತುಮುತ್ತಲಿನ ೪ ಶಾಲೆಗಳ ವಿದ್ಯಾರ್ಥಿಗಳನ್ನು ಪ್ರತಿ ಶನಿವಾರ ಮುಂಜಾನೆ ಕೂಡಿಸಿ, ಅವರಿಗೆ ಕವಾಯತು ಮುಂತಾದ್ದು ಕಲಿಸುವ ಏರ್ಪಾಡವಿಟ್ಟಿರುತ್ತಾರೆ.

ಅಂಕೋಲಾ— (ತಾ ೮-೮-೫೦) ಕೇಣಿಯಿಂದ ಭಾವಿಕೇರಿವರೆಗಿನ ೧೦-೧೧ ಫರ್ಲಾಂಗುದ್ದ ರಸ್ತೆಯು ಈಗ ೭-೮ ವರ್ಷಗಳಿಂದ ದುರುಸ್ತಿಯಿಲ್ಲದೆ ತೀರ ಹಾಳಾಗಿ ಹೋಗಿದೆ. ಅದರ ಮೇಲೆ ತಿರುಗಾಡುವದೆಂದರೆ ಒಂದು ಬಗೆಯ ಶಿಕ್ಷೆ ಅನುಭವಿಸಿದಂತೆಯೇ ಆಗುತ್ತದೆ. ಅದರ ದುರುಸ್ತಿ ಮಾಡಿರೆಂದು ಜನರು ತಿರುತಿರುಗಿ ಲೋಕಲ್ ಬೋರ್ಡಿಗೆ ಮನವಿ ಮಾಡಿಕೊಂಡರೂ ಬೋರ್ಡಿನವರು ಕಿವಿಗೊಡಲಿಲ್ಲ. ಕೊನೆಗೊಮ್ಮೆ ಆ ಮಾರ್ಗದ ೧॥ ಫರ್ಲಾಂಗ ಉದ್ದ ಭಾಗದಲ್ಲಿ ವಿಶೇಷ ದುರುಸ್ತಿ ಮಾಡಬೇಕೆಂಬ ಯೋಜನೆ ಮಂಜೂರಾಗಿ ಆ ಕೆಲಸವನ್ನು ಗುತ್ತಿಗೆಗೆ ಕೊಡಲಾಯಿತು. ಈ ಮಾತಿಗೆ ಈಗ ಒಂದು ವರ್ಷವಾಯಿತು. ಗುತ್ತಿಗೆದಾರರು ಮಳೆಗಾಲದಲ್ಲಿ ಏನೂ ಕೆಲಸ ಮಾಡದೆ ಕಳೆದ ತಿಂಗಳಲ್ಲಿ ಅದನ್ನು ಆರಂಭಿಸಿದ್ದಾರೆ! ಮತ್ತು ರಸ್ತೆಯನ್ನು ಅಗೆದು ಅದರ ಮೇಲೆ ಗುಂಡುಗಲ್ಲುಗಳನ್ನು ಹರಹಿದ್ದಾರೆ! ಆದರಿಂದ ಆ ಭಾಗದಲ್ಲಿ ಈಗ ಅಡ್ಡಾಡುವದು ಕಷ್ಟವಾಗಿದೆ! ಕತ್ತಲೆಯಲ್ಲಿ ಇಲ್ಲವೆ ನಸುಗತ್ತಲೆಯಲ್ಲಿ ಈ ಗುಂಡುಗಲ್ಲುಗಳ ಹಾಸಿಗೆಯ ಮೇಲಿಂದ ತಿರುಗಾಡಿದರೆ ಕಾಲು ಮುರಿದುಕೊಳ್ಳಲು ತಡವಾಗುವಂತಿಲ್ಲ! ಒಂದು ವೇಳೆ ಕಾಲು ಮುರಿಯದಿದ್ದರೆ ಕಲ್ಲುಗಳ ರಾಶಿಯಲ್ಲಿ ಅವಿತುಕೊಂಡ ಹಾವುಗಳ ಕಡಿತದಿಂದ [illegible]ಯಿಲ್ಲ! ಲೋಕಲ್ ಬೋರ್ಡಿನವರು ಮಾಡುವ ಲೋಕಸೇವೆಯ ಪರಿಯಿದು! ಬೋರ್ಡಿನ ಅಧ್ಯಕ್ಷರು ಒಮ್ಮೆ ಈ ರಸ್ತೆಯನ್ನು ಸ್ವತಃ ನೋಡಿಕೊಂಡು ಹೋಗಬೇಕಾಗಿ ಕೇಣಿ ಊರವರ ಅರಿಕೆಯುಂಟು.

ಕೇಣಿಯಲ್ಲಿ ಕಳ್ಳ ಸರಾಯಿಯ ವ್ಯಾಪಾರ ದೊಡ್ಡ ಪ್ರಮಾಣದಿಂದ ನಡೆದಿದೆ. ಅಲ್ಲಿಯ ಮೀನುಗಾರರು ಬಹಳ ಚಾತುರ್ಯದಿಂದ ಗೋವೆಯ ಸರಾಯಿ ತರುತ್ತಾರೆ. ನಾಲ್ಕು ಕಡೆಗೆ ಕಾವಲಿಟ್ಟು ಅವರು ಈ ಉದ್ಯೋಗ ಮಾಡುತ್ತಿದ್ದಾರೆ. ಅವರ ಈ ಕಾವಲಿನ ನಮೂನೆಯನ್ನು ಆ ಊರವರೊಬ್ಬರು ಈ ರೀತಿ ಬಣ್ಣಿಸಿದ್ದಾರೆ — ಸಂಜೆಯ ಕಡೆ ಹೆಂಗಸರು ಬುಟ್ಟಿಗಳನ್ನು ತಲೆಯ ಮೇಲಿಟ್ಟು ತಿರುಗಾಡುತ್ತಾರೆ. ಗಂಡಸರು ಮೀನು ಹಿಡಿಯುವ ಸೋಗ ಹಾಕಿಕೊಂಡು ದೋಣಿಗಳನ್ನು ಸಮುದ್ರದಲ್ಲಿ ಬಿಡುತ್ತಾರೆ. ಗಂಡಸರಲ್ಲೂ ಎರಡು ಪಂಗಡಗಳು. ಒಂದು ಸರಾಯಿ ತರುವ ಪಂಗಡ, ಇನ್ನೊಂದು ದಂಡೆಗುಂಟ ಕಾವಲಿರುವ ಪಂಗಡ. ಸರಾಯಿ ಹಿಡಿಯುವ ಪೋಲೀಸರಾಗಲಿ [illegible]ಗಲಿ ಬಂದು ಮುಟ್ಟಿದರೆ ಬುಟ್ಟಿ ಹೊತ್ತುಕೊಂಡು ತಿರುಗುವ ಹೆಂಗಸರೂ ಕಾವಲಿಗಿದ್ದ ಗಂಡಸರೂ [illegible] ಬೀಡಿ ಹೊತ್ತಿಸುವದು, ಘಟಾತಿ ಹೊಡೆಯುವದು ಮುಂತಾದ ಸನ್ನೆಯ ಕ್ರಮಗಳಿಂದ ಸರಾಯಿ ತರುವ [illegible]ಕ್ಕೆ ಸೂಚನೆ ಕೊಡುತ್ತಾರೆ. ದಂಡೆಯ ಮೇಲೆ ಸುರಕ್ಷಿತತೆಯುಳ್ಳಂಥ [illegible] ಬಂದರೆ ಸರಾಯಿಗಳ್ಳರು [illegible] ಸರಾಯಿಯನ್ನು ಸಮುದ್ರದಲ್ಲೇ ಒಂದು ಕಡೆ ಮುಳುಗಿಸುತ್ತಾರೆ. ಹಿಂದಿನಿಂದ ಅದರ ವ್ಯವಸ್ಥೆ ಮಾಡುವರು. ನೆಲದ ಮೇಲೂ ಸರಾಯಿ ಸಾಗಿಸುವಾಗ ಈ ಮೀನುಗಾರರು ಹಿಂದೆ-ಮುಂದೆ ಕಾವಲುಗಾರರನ್ನಿಟ್ಟುಕೊಂಡು ಸಾಗಿಸುತ್ತಾರೆ. ೧ ಫರ್ಲಾಂಗ ಮುಂದೆ ಇಬ್ಬರು ಹೋಗುತ್ತಾರೆ. ಸರಾಯಿ-ವಾಹಕರ ಹಿಂಬದಿಗೂ ೧ ಫರ್ಲಾಂಗ ಅಂತರದ ಮೇಲೆ ಒಬ್ಬಿಬ್ಬರು ಇರುತ್ತಾರೆ. ಏನಾದರೂ ಗಂಡಾಂತರ ಬಂದದ್ದು ಕಂಡರೆ ಹಿಂದಿನ-ಮುಂದಿನ ಜನರು ಸಂಜ್ಞೆಯ ಭಾಷೆಯಿಂದ ನಡುವಿನ ಸರಾಯಿಗಳ್ಳರಿಗೆ ಎಚ್ಚರಿಕೆ ಕೊಡುತ್ತಾರೆ. ಊರಲ್ಲಿ ಪೋಲೀಸರು ಇಲ್ಲವೆ ಸರಾಯಿ ಹಿಡಿಯುವವರು ಬಂದರೆ ಒಬ್ಬಿಬ್ಬರು ಅವರ ಜೊತೆಯಲ್ಲೇ ತಿರುಗಾಡುತ್ತಾರೆ ಮತ್ತು ತಮ್ಮ ಮೂಕ ಭಾಷೆಯಿಂದ ಸರಾಯಿಯ ವ್ಯಾಪಾರದಲ್ಲಿ ತೊಡಗಿದವರಿಗೆ ಜಾಗ್ರತೆ ಕೊಡುತ್ತಾರೆ. ಯಾರಾದರೂ ಪೋಲೀಸರಿಗೆ ಸುದ್ದಿ ಕೊಟ್ಟರೆಂದು ತಿಳಿದರೆ ಈ ಮೀನುಗಾರರು ಆ ವ್ಯಕ್ತಿಯ ಎಲುಬುಗಳನ್ನು ಮುರಿಯದೆ ಬಿಡುವದಿಲ್ಲ! ಮೀನುಗಾರರ ಈ ಚಾತುರ್ಯವನ್ನು ಚೆನ್ನಾಗಿ ಅರಿತು ಅವರ ಚಕ್ರವ್ಯೂಹವನ್ನು ಮುರಿಯಬಲ್ಲ ಸಾಹಸಿ ಜನರಿಗೆ ಕಳಿಸಿಕೊಟ್ಟರೆ ಮಾತ್ರ ಕೇಣಿಯ ಈ ಕಳ್ಳ ಸರಾಯಿಯ ವ್ಯಾಪಾರವನ್ನು ನಿಲ್ಲಿಸಲು ಸಾಧ್ಯವಾದೀತು.

ಅವರ್ಸ ಸಹಕಾರಿ ಸಂಘದವರು ಇತ್ತಲಾಗಿ ಒಂದು ಜವಳಿ ಅಂಗಡಿಯನ್ನು ನಡಿಸುತ್ತಿದ್ದಾರೆ. ತಿಂಗಳಿಗೆ ಸರಾಸರಿ ೩೦೦೦ ರೂ.ಗಳ ವ್ಯಾಪಾರವಾಗುತ್ತಿದೆ. ಅದರಲ್ಲಿ ಸಂಘದವರಿಗೆ ಸುಮಾರು ೩೦-೪೦ ರೂ. ದೊರೆಯುತ್ತದಂತೆ. ಆದರೆ ಅಂಗಡಿಯಲ್ಲಿ ಇಬ್ಬ ನೌಕರರಿದ್ದಾರೆ, ಒಬ್ಬ ಕಾವಲುಗಾರನಿದ್ದಾನೆ. ಅವರ ಸಂಬಳ ತಿಂಗಳಿಗೆ ರೂ ೮೬! ಅಂಗಡಿಯ ಭಾಡಿಗೆ ರೂ. ೧೦! ಅಂಗಡಿ ನಡಿಸುವ ಬಗ್ಗೆ ೫ ೬ ಸಾವಿರ ರೂ ಹೊರಗಿಂದ ಸಾಲ ತಂದದ್ದುಂಟು, ಅದರ ಬಗ್ಗೆ ತಿಂಗಳೊಂದಕ್ಕೆ ಸರಾಸರಿ ರೂ ೨೫ರಷ್ಟು ಬಡ್ಡಿ ಕೊಡಬೇಕು! ಇಂಥ [illegible] ಭಾರವಾದ ಅಂಗಡಿಯನ್ನು ಸಂಘದವರು ಯಾರ ಲಾಭಕ್ಕಾಗಿ ನಡಿಸುತ್ತಿರುವರೋ ತಿಳಿಯದು. ತಮ್ಮ ಸಂಬಂಧಿಕರಿಗೆ ಅಂಗಡಿಯಲ್ಲಿ ನೌಕರಿ ಸಿಗಬೇಕೆಂದು ಮತ್ತು ತಮ್ಮ ಇಷ್ಟಮಿತ್ರರ ಹಣಕ್ಕೆ ಬಡ್ಡಿ ಸಿಗಲೆಂದು ಸಂಘದ ಶ್ರೇಷ್ಠರು ಈ ಅಂಗಡಿಯನ್ನು ನಡಿಸುತ್ತಿರಬೇಕೆಂಬ ಸಂಶಯ ಬರುತ್ತದೆ! ಸಂಘದ ಸದಸ್ಯರು ಸಕಾಲದಲ್ಲಿ ಎಚ್ಚತ್ತು ಈ ಅಂಗಡಿಯ ಸಂಬಂಧದ ಹಾನಿಯನ್ನು ಯಾರು ತೆರುವರು ಎಂಬುದರ ಚೌಕಶಿ ಮಾಡಬೇಕಾಗಿ ಓರ್ವ ಸದಸ್ಯರು ಬಿನ್ನವಿಸುತ್ತಾರೆ.

(ತಾ ೨೩-೧-೫೦) ಅವರ್ಸ ಗ್ರಾಮದ ಪ್ರತಿ [illegible] ಕೆಲಬೇಣ ಗ್ರಾಮದ ಸ॥ ನಂ॥ ೪೨ನ್ನು ಬೇಲೇಕೇರಿಯವರೊಬ್ಬರು ಲಾವಣಿಗೆ ಹಿಡಕೊಂಡು ನ.ನಾ ಶೆಟ್ಟಿ ಎಂಬಾತನಿಗೆ ಸಾಗುವಳಿಗೆ ಕೊಟ್ಟಿರುತ್ತಾರಂತೆ. ಅದನ್ನು ಸಾಗುವಳಿ ಮಾಡಿದವನು ನ.ನಾ ಶೆಟ್ಟಿಯು. ಆದರೂ ಗ್ರಾಮಸ್ಥರು ಅವನ ಹೆಸರು ರೆಕಾರ್ಡಿನಲ್ಲಿ ತೋರಿಸಿಲ್ಲ. ಕೃಷಿಕನು ಈ ಬಗ್ಗೆ ಮೇಲಧಿಕಾರಿಗಳ ಕಡೆ ತಕರಾರು ಮಾಡಿದನು. ಆದರೆ ಪ್ರಯೋಜನವೂ ಆಗಲಿಲ್ಲ! ಬೆಳೆ ಬೇಲೇಕೇರಿಯವರೂ ಅದರ ಗೇಣಿದಾರರೂ [illegible] ಹೋಗಿ ನ.ನಾ ಶೆಟ್ಟಿಯ ಹಾಕಿದ ಗೊಬ್ಬರಗಳನ್ನು ಬಲಾತ್ಕಾರದಿಂದ ಬಡಿದು ಎಲ್ಲ ಭತ್ತ ಮತ್ತು ಹುಲ್ಲು ಎತ್ತಿಕೊಂಡು ಬಂದಿರುತ್ತಾರಂತೆ. ಇದೇನು ಪ್ರಕರಣವೆಂಬುದನ್ನು ಜಿಲ್ಲಾಧಿಕಾರಿಗಳು ಚೌಕಶಿ ಮಾಡಬೇಕು.

ಡಿಸ್ಟ್ರಿಕ್ಟ ಕೋ ಒಪರೇಟಿವ್ಹ ಬೋರ್ಡ ಕುಮಟಾ [ಉತ್ತರ ಕನ್ನಡ.]

ಕುಮಟಾ, ೨೮—೧—೧೯೫೦

ಪ್ರಕಟನೆ ನಂಬರು ೯.

ಬರುವ ಫೆಬ್ರುವರಿ ತಿಂಗಳ ೧೫ ತಾರೀಖಿನಿಂದ ಮಾರ್ಚ ತಿಂಗಳ ೩ನೇ ತಾರೀಖಿನ ವರೆಗೆ ಹೊನ್ನಾವರದಲ್ಲಿ ಎಲ್ಲ ಮಾದರಿಯ ಸಹಕಾರಿ ಸಂಘಗಳ ಸೆಕ್ರೆಟರಿಗಳ ಸಲುವಾಗಿ ಒಂದು ಟ್ರೇನಿಂಗ ಕ್ಲಾಸನ್ನು ಏರ್ಪಡಿಸುವದು ಗೊತ್ತಾಗಿದೆ. ಈ ಕ್ಲಾಸಿಗೆ ಬರಲಿಚ್ಛಿಸುವ ಎಲ್ಲ ಸೆಕ್ರೆಟರಿಗಳು ಮತ್ತು ಸಹಕಾರದಲ್ಲಿ ಅಭಿರುಚಿ ಇರುವ ಇನ್ನಿತರರು ಫೆಬ್ರುವರಿ ತಿಂಗಳ ೧೦ನೇ ತಾರೀಖಿನೊಳಗಾಗಿ ಅರ್ಜಿಯನ್ನು ಕಳಿಸಬೇಕು. ಕ್ಲಾಸಿಗೆ ರೂಪಾಯಿ ೩/- ಪ್ರವೇಶ ಫೀ ಇಡಲಾಗಿದೆ. ಸಂಘಗಳ ಪರವಾಗಿ ಬರುವ ಸೆಕ್ರೆಟರಿ ಜನರಿಗೆ [illegible] ವೆಚ್ಚವನ್ನು ಆಯಾ ಸಂಘಗಳು ವಹಿಸಲು ಅಡ್ಡಿ ಇರುವದಿಲ್ಲ.

ಕ್ಲಾಸಿನ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ " ಚೆಅರಮನ್, ಡಿಸ್ಟ್ರಿಕ್ಟ ಕೋ-ಒಪರೇಟಿವ್ಹ ಬೋರ್ಡ, ಕುಮಟಾ ಇವರಿಗೆ ಬರೆಯಬೇಕು.

ಚೆಅರಮನ್,
ಡಿಸ್ಟ್ರಿಕ್ಟ ಕೋ-ಒಪರೇಟಿವ್ಹ ಬೋರ್ಡ,
ಕುಮಟಾ (ಉತ್ತರ ಕನ್ನಡ)

ಕಾಟಾ ಕಲ್ಲುಗಳು

ರೇಶನ್ ದುಕಾನುಗಳಿಗೆ ಮತ್ತು ವ್ಯಾಪಾರಸ್ಥರಿಗೆ ಬೇಕಾಗುವ ತೂಕ-ಅಳತೆಗಳನ್ನು ಪೂರೈಸುತ್ತೇವೆ.

ಬಂಗಾಲೀ ಕಲ್ಲಿನ ಸಟ್ಟುಗಳೂ ಸಿಗುತ್ತವೆ.

ಹೆಗಡೆ ಬಂಧುಗಳು, ನೆಲ್ಲೀಕೇರಿ, ಕುಮಟಾ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270.

Monday, 6-2-1950.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೩೨.

ಕುಮಟಾ:- ಸೋಮವಾರ, ತಾ ೬-೨-೧೯೫೦

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩|
ಅಂಚೆಯಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ,, ೦-೧-೬
ವ್ಹಿ. ಪಿ. ಯಿಂದ ಕಳಿಸಿದರೆ ೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು ಮುಂಗಡ ಕಳಿಸತಕ್ಕದ್ದು

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಬಹುದು

ಭಾರತೀಯ ಪ್ರಜಾರಾಜ್ಯದ ಘಟನೆಯ ರೂಪರೇಷೆಗಳು.

ಕಳೆದ ೨೬ ರಿಂದ ಅಮಲಿನಲ್ಲಿ ಬಂದಿರುವ ನಮ್ಮ ಸರ್ವತಂತ್ರ-ಸ್ವತಂತ್ರ ಪ್ರಜಾಪ್ರಭುತ್ವಾಧಿಷ್ಠಿತ ಪ್ರಜಾರಾಜ್ಯದ ಘಟನೆಯಲ್ಲಿ ೩೯೫ ಕಲಮುಗಳೂ ೮ ಪರಿಶಿಷ್ಟಗಳೂ ಇವೆ. ಈ ಘಟನೆಯ ಸ್ಥೂಲ ರೂಪವನ್ನು "ವೃತ್ತ"ದ ಓದುಗರು ಅರಿತಿರುವದು ಒಳಿತು. ಅದರಿಂದ ಓದುಗರ ಅನುಕೂಲತೆಗಾಗಿ ಘಟನೆಯ ರೂಪರೇಷೆಗಳನ್ನು ಕೆಳಗೆ ಕೊಡಲಾಗಿದೆ;

ಘಟನೆಯ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿರುವಂತೆ ಈಗ ನಮ್ಮ ರಾಷ್ಟ್ರವು ಸರ್ವತಂತ್ರ-ಸ್ವತಂತ್ರವಾಗಿರುವದು. ಬೇರೆ ಯಾವ ರಾಷ್ಟ್ರವೂ ನಮ್ಮ ಮೇಲೆ ಯಾವದೇ ಬಗೆಯ ಅಧಿಕಾರ ಇಲ್ಲವೆ ಸತ್ತೆಯನ್ನು ನಡಿಸಲಾರದು

ಎರಡನೇ ಸಂಗತಿಯೆಂದರೆ ನಮ್ಮದು ಪ್ರಜಾರಾಜ್ಯವಾಗುವದು. ಯಾವನೊಬ್ಬ ವಂಶಪರಂಪರಾಗತ ರಾಜನು ನಮ್ಮನ್ನು ಸ್ವತಂತ್ರವಾಗಿಯಾಗಲಿ ಜನತೆಯ ಪ್ರತಿನಿಧಿಗಳ ನಿಯಂತ್ರಣಕ್ಕೊಳಪಟ್ಟಾಗಲಿ ಆಳುವಂತಿಲ್ಲ. ನಮ್ಮ ಸರಕಾರದ ವರಿಷ್ಠ ಅಧಿಕಾರಿಯು ಪ್ರಜೆಗಳೇ ಆರಿಸಿದ "ಅಧ್ಯಕ್ಷ"ನಾಗಿರುವನು. ಅವನೇ ನಮ್ಮ ರಾಜನು. ಈ ಅಧ್ಯಕ್ಷನು ಕೂಡ ನಮ್ಮಲ್ಲಿಯ ದೇವಾಲಯ ಕಮಿಟಿಯ ಸದಸ್ಯರಂತೆ ಅಮರಣ ಅಧಿಕಾರ ನಡಿಸಲಾರನು ೫ ವರುಷಗಳಿಗೊಮ್ಮೆ ಅಧ್ಯಕ್ಷನ ಆಯ್ಕೆ ನಡೆಯುವದು ಈ ಅಧ್ಯಕ್ಷನಾದರೂ ತನ್ನ ಮನಸ್ಸಿಗೆ ಬಂದಂತೆ ರಾಜ್ಯಕಾರಭಾರ ಮಾಡಲಾರನು. ಪ್ರಜೆಗಳಿಂದ ಆರಿಸಲ್ಪಟ್ಟ ಪ್ರಜಾ-ಪ್ರತಿನಿಧಿ ಸಭೆಯ ನಿಯಂತ್ರಣಕ್ಕೊಳಪಟ್ಟ ಮತ್ತು ಆ ಸಭೆಗೆ ಜೋಡೆಗಾರವಿರುವ ಮಂತ್ರಿಮಂಡಳದ ಸಲಹೆಯಂತೆಯೇ ಅಧ್ಯಕ್ಷನು ವರ್ತಿಸಬೇಕು. ಈ ಅಧ್ಯಕ್ಷನು ಸ್ವೇಚ್ಛೆಯಿಂದ ನಡೆಯಹತ್ತಿದರೆ ಅವನನ್ನು ಬಡತರ್ಫ ಮಾಡಲಿಕ್ಕೆ ಪ್ರಜಾಪ್ರತಿನಿಧಿ ಸಭೆಗೆ ಅಧಿಕಾರವಿದೆ. ಆದರಿಂದ ನಮ್ಮ ಹೊಸ ರಾಜ್ಯದ ಅಂತಿಮ ನಿಯಾಮಕರು ಪ್ರಜೆಗಳೇ ಆಗಿರುವರು ಆದರಿಂದಲೇ ಈ ರಾಜ್ಯವು ಪ್ರಜಾಪ್ರಭುತ್ವಾಧಿಷ್ಠಿತ ಪ್ರಜಾರಾಜ್ಯ ಎಂದೆನಿಸಿಕೊಳ್ಳುತ್ತದೆ. ಬೇರೆ ಶಬ್ದಗಳಲ್ಲಿ ಹೇಳಬೇಕಾದರೆ ನಮ್ಮ ಹೊಸ ಸರಕಾರವು "ಜನತೆಯ ಹಿತಕ್ಕಾಗಿ, ಜನತೆಯೇ ನಡಿಸಿದ ಜನತೆಯ ರಾಜ್ಯ"ವಾಗುವದು. ವಿಶೇಷತಃ ರಾಷ್ಟ್ರದೊಳಗಿನ ಸಮಸ್ತ ಪ್ರಾಯಸ್ಥ ಸ್ತ್ರೀ-ಪುರುಷರಿಗೆ ಮತಾಧಿಕಾರ ಕೊಟ್ಟಿರುವದರಿಂದ ಭಾವೀ ಸರಕಾರವು ಸಂಪೂರ್ಣವಾಗಿ ಜನತೆಯದೇ ಸರಕಾರವಾಗುವದು. ಈ ಬಗ್ಗೆ ಯಾರೂ ಸಂದೇಹವನ್ನು ಪಡೆಯಕೂಡದು.

ಪ್ರಜಾರಾಜ್ಯಗಳಲ್ಲಿ ಪುನಃ ಭಿನ್ನ ಭಿನ್ನ ಪ್ರಕಾರಗಳಿವೆ. ಎಲ್ಲ ಸತ್ತೆಯನ್ನು ಒಂದೇ ಕೇಂದ್ರದಿಂದ ನಡಿಸುವ ಪ್ರಜಾರಾಜ್ಯಗಳಿವೆ; ಬೇರೆ ಬೇರೆ ಪ್ರಾಂತಗಳಿಗೆ ಸ್ವಾಯತ್ತತೆಯನ್ನು ಕೊಟ್ಟು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ಸಾರ್ವಜನಿಕ ವಿಷಯಗಳನ್ನಷ್ಟೇ ಒಂದು ಕೇಂದ್ರ ಸಂಸ್ಥೆಗೆ ಒಪ್ಪಿಸಿರುವ ಪ್ರಜಾರಾಜ್ಯಗಳಿವೆ. ನಮ್ಮ ಭಾರತ-ದೇಶ ವಿಶಾಲವಾದದ್ದು; ಇದರಲ್ಲಿ ಇಂಗ್ಲಂಡ, ಜರ್ಮನಿ, ಫ್ರಾನ್ಸಗಳಷ್ಟು ವಿಶಾಲವಾದ ಮತ್ತು ಜನಸಂಖ್ಯೆಯುಳ್ಳ ಕೆಲವು ಪ್ರಾಂತಗಳೂ ಸಂಸ್ಥಾನಗಳೂ ಇವೆ. ಇಂತಹ ಭೂಖಂಡ-ರೂಪಿ ರಾಷ್ಟ್ರದಲ್ಲಿ ಎಲ್ಲ ರಾಜ್ಯಕಾರಭಾರವನ್ನು ಒಂದೇ ಕೇಂದ್ರದಿಂದ ನಡಿಸುವದು ಇಷ್ಟವಲ್ಲೆಂದು ಅಭಿಪ್ರಾಯಪಟ್ಟು, ನಮ್ಮ ಘಟನಾಕಾರರು ರಾಷ್ಟ್ರದ ಘಟಕಗಳಾದ ಪ್ರಾಂತಗಳಿಗೂ ಸಂಸ್ಥಾನಗಳಿಗೂ ಮರ್ಯಾದಿತ ಸ್ವಾಯತ್ತತೆಯನ್ನು ಕೊಟ್ಟು ಶೇಷಾಧಿಕಾರಗಳನ್ನು ಮಧ್ಯವರ್ತಿ ಸರಕಾರಕ್ಕೆ ಕೊಟ್ಟಿರುತ್ತಾರೆ ಇದರಿಂದ ನಮ್ಮ ಹೊಸ ರಾಜ್ಯವು ಸಂಘ-ರಾಜ್ಯದ (ಫೆಡರಲ್) ರೂಪವನ್ನು ತಾಳುವದು ಆದರೆ ನಮ್ಮ ಸಂಘ-ರಾಜ್ಯಕ್ಕೂ ಬೇರೆ ಸಂಘ-ರಾಜ್ಯಗಳಿಗೂ ಒಂದು ವ್ಯತ್ಯಾಸವಿದೆ ಅಂತಹ ಇಕ್ಕಟ್ಟಿನ ಪರಿಸ್ಥಿತಿಯು ಎದುರಾದರೆ ಇಲ್ಲವೆ ಸಮಗ್ರ ರಾಷ್ಟ್ರದ ಹಿತದ ದೃಷ್ಟಿಯಿಂದ ಹಾಗೆ ಮಾಡುವದು ಅವಶ್ಯವೆಂದು ರಾಷ್ಟ್ರಾಧ್ಯಕ್ಷನಿಗೆ ಅನಿಸಿದರೆ ಘಟಕ-ರಾಜ್ಯಗಳ ಕಾರಭಾರವನ್ನು ಅವನು (ಈಗ ಪ್ರಾಂತಿಕ ಸರಕಾರಗಳು ಕೆಲವೊಮ್ಮೆ ಬೋರ್ಡ-ಮ್ಯುನಿಸಿಪಾಲಿಟಿಗಳ ಕಾರಭಾರವನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವಂತೆ) ಸ್ವಾಧೀನಪಡಿಸಿಕೊಂಡು ನಡಿಸಬಹುದೆಂದು ವಿಧಿಸಿ ನಮ್ಮ ಘಟನಾ-ಪಂಡಿತರು ಘಟಕಗಳ ಸ್ವಾಯತ್ತತೆಗೆ ಒಂದು ಉಪಾಧಿಯನ್ನು ಹಾಕಿರುತ್ತಾರೆ ಈ ವ್ಯವಸ್ಥೆಯ ಮೂಲಕ ಮತ್ತು ಮಧ್ಯವರ್ತಿ ಸರಕಾರವು ಯಾವಾಗಲೂ ಬಲಿಷ್ಠವಾಗಿರುವಂತೆ ಘಟನಾಕಾರರು ಅದಕ್ಕೆ ಹೆಚ್ಚಿನ ಸತ್ತೆ ಮತ್ತು ಅಧಿಕಾರ ಕೊಟ್ಟಿರುವ ಮೂಲಕ ನಮ್ಮ ರಾಜ್ಯಘಟನೆಯು ಸ್ವಾಯತ್ತ ಘಟಕಗಳಿಂದೊಡಗೂಡಿದ ಸಂಘ-ರಾಜ್ಯವಾಗಿರದೆ ಏಕತಂತ್ರಿ ಘಟನೆಯಾಗಿರುತ್ತದೆಂದು ಕೆಲವು ಟೀಕಾಕಾರರು ಅನ್ನುತ್ತಾರೆ

ಅಧ್ಯಕ್ಷ ಅಥವಾ ರಾಷ್ಟ್ರಪತಿ.

ಮೇಲೆ ಹೇಳಿದಂತೆ ಅಧ್ಯಕ್ಷನು (ಅತನಿಗೆ ದೇಶಭಾಷೆಗಳಲ್ಲಿ ರಾಷ್ಟ್ರಪತಿಯೆಂದು ಸಂಬೋಧಿಸುವದು ಒಳಿತಾದೀತು) ನಮ್ಮ ಸರಕಾರದ ಅಧಿನಾಯಕನಿರುತ್ತಾನೆ ಅತನ ಹೆಸರಲ್ಲಿ ಮತ್ತು ಅಂಕಿತದಿಂದ ಎಲ್ಲ ರಾಜ್ಯಕಾರಭಾರ ನಡೆಯುವದು. ಇವನು ೫ ವರ್ಷಗಳಿಗೊಮ್ಮೆ ಆರಿಸಲ್ಪಡುವನು. ಮಧ್ಯವರ್ತಿ ಸರಕಾರದ ಪ್ರಜಾ-ಪ್ರತಿನಿಧಿ ಸಭೆಯ ಸದಸ್ಯರೂ ಘಟಕ-ರಾಜ್ಯಗಳ ಲೋಕ-ಸಭೆಗಳ ಸದಸ್ಯರೂ ಇವನನ್ನು ಆರಿಸುವರು. ಬ್ರಿಟಿಶ ರಾಜ್ಯಘಟನೆಯಲ್ಲಿ ಅರಸನಿಗಿರುವಷ್ಟೇ ಸ್ಥಾನ-ಮಾನಗಳು ಈ ಅಧ್ಯಕ್ಷನಿಗಿರುವವು ಕೇಂದ್ರದ ಮಂತ್ರಿಮಂಡಳವು ಪ್ರಜಾಪ್ರತಿನಿಧಿ ಸಭೆ ಮತ್ತು ದರಬಾರಿಗಳ ಸಭೆ (ಕೌನ್ಸಿಲ ಒಫ್ ಸ್ಟೇಟ) ಗಳಿಗೆ ಜೋಡೆಗಾರವಾಗಿರುವದಾದರೂ ಮಂತ್ರಿಗಳನ್ನು ನೇಮಿಸುವ ಇಲ್ಲವೆ ಅವರನ್ನು ತೆಗೆದುಹಾಕುವ ಅಧಿಕಾರ ಅಧ್ಯಕ್ಷನಿಗಿರುವದು ರಾಷ್ಟ್ರದ ಸೈನ್ಯ ಇಲಾಖೆಯ ವರಿಷ್ಠಾಧಿಕಾರವೂ ಅಧ್ಯಕ್ಷನಿಗೇ ಒಪ್ಪಿದ್ದು. ಈ ಅಧ್ಯಕ್ಷನಿಗೆ ತಿಂಗಳೊಂದರ ೧೦೦೦೦ ರೂ ವೇತನ ಮತ್ತು ಬೇರೆ ಬೇರೆ ಭತ್ತೆಗಳನ್ನು ಕೊಡಬೇಕೆಂದು ಘಟನೆಯಲ್ಲಿ ವಿಧಿಸಲಾಗಿದೆ

ಉಪಾಧ್ಯಕ್ಷನು.

ಅಧ್ಯಕ್ಷನ ಗೈರಹಾಜರಿಯಲ್ಲಿ ಅಥವಾ ನಿಧನ, ಬಡತರ್ಫ ಮೊದಲಾದ ಕಾರಣಗಳಿಂದ ಅಧ್ಯಕ್ಷನ ಸ್ಥಾನ ತೆರವಾದಾಗ ಅವನ ಸ್ಥಾನದ ಅಧಿಕಾರ ನಡಿಸಿಕೊಂಡು ಹೋಗಲಿಕ್ಕೆ ಒರ್ವ ಉಪಾಧ್ಯಕ್ಷನು ಇರುವನು. ಇವನು ಕೇಂದ್ರದ ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಡುವನು ಅಧ್ಯಕ್ಷನು ತನ್ನ ಅವಧಿ ಮುಗಿಯುವ ಮೊದಲೇ ನಿಧನಪಟ್ಟರೆ ಇಲ್ಲವೆ ಅಧಿಕಾರಸನ್ಯಾಸ ಮಾಡಿದರೆ ಅಮೇರಿಕೆಯಲ್ಲಿ ಉಪಾಧ್ಯಕ್ಷನು ತಾನೇ ಅಧ್ಯಕ್ಷತನದ ಅವಶಿಷ್ಟ ಅವಧಿಯ ಬಗ್ಗೆ ಅಧ್ಯಕ್ಷನಾಗುತ್ತಾನೆ ಆದರೆ ನಮ್ಮ ಉಪಾಧ್ಯಕ್ಷನು ಹೊಸ ಅಧ್ಯಕ್ಷನು ಆರಿಸಿ ಬರುವವರೆಗಷ್ಟೇ ಅಧ್ಯಕ್ಷಾಧಿಕಾರ ನಡಿಸುವನು

ಕೇಂದ್ರದಲ್ಲಿ ದ್ವಿದಲ ಕಾನೂನ ಸಭೆ

ಕೇಂದ್ರದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ದರಬಾರಿಗಳ ಸಭೆ ಹೀಗೆ ೨ ಕಾನೂನ-ಮಂಡಳಗಳಿರುವವು ಎರಡೂ ಕೂಡಿ "ಪಾರ್ಲಿಮೆಂಟ" (ಕಾನೂನ ಸಭೆ) ಆಗುವದು. ಪ್ರಜಾ-ಪ್ರತಿನಿಧಿ ಸಭೆಯಲ್ಲಿ ೫೦೦ ಸದಸ್ಯರಿರುವರು ದೇಶದೊಳಗಿನ ಸಮಸ್ತ ಪ್ರಾಯಸ್ಥ ಮತದಾರರು ಇವರನ್ನು ಆರಿಸಿಕೊಡತಕ್ಕದ್ದಿದೆ. ಸರಾಸರಿ ೫ ಲಕ್ಷ ಜನ ಸಂಖ್ಯೆಗೊಬ್ಬ ಪ್ರತಿನಿಧಿಯು ಆರಿಸಲ್ಪಡುವನು.

ದರಬಾರಿಗಳ ಸಭೆಯಲ್ಲಿ ೨೫೦ ಸದಸ್ಯರಿರುವರು ೧೨ ಸದಸ್ಯರನ್ನು ಅಧ್ಯಕ್ಷರು ನೇಮಿಸುವರು ಕಲೆ, ವಾಙ್ಮಯ, ವಿಶಿಷ್ಟ ಉದ್ಯೋಗ, ಸಮಾಜ-ಸೇವೆ ಇವುಗಳ ಬಗ್ಗಾಗಿ ಪ್ರಖ್ಯಾತವಿರುವ ವ್ಯಕ್ತಿಗಳನ್ನು ಅಧ್ಯಕ್ಷರು ನೇಮಿಸತಕ್ಕದ್ದೆಂದು ವಿಧಿಸಲಾಗಿದೆ. ಉಳಿದ ಸದಸ್ಯರನ್ನು ಘಟಕ ಪ್ರಾಂತ-ಸಂಸ್ಥಾನಗಳ ಲೋಕ-ಸಭೆಗಳು ಆರಿಸಿಕೊಡಬೇಕಾಗುವದು. ಯಾವ ಯಾವ ಘಟಕಕ್ಕೆ ಎಷ್ಟೆಷ್ಟು ಪ್ರತಿನಿಧಿಗಳು ಎಂಬುದು ಪರಿಶಿಷ್ಟದಲ್ಲಿ ಕಾಣಿಸಲಾಗಿದೆ. ಲೋಕ-ಸಭೆಗಳಿಲ್ಲದ ಘಟಕಗಳ ಪ್ರತಿನಿಧಿಗಳನ್ನು ಹೇಗೆ ಆರಿಸಬೇಕೆಂಬದನ್ನು ಕೇಂದ್ರ ಕಾನೂನ-ಸಭೆಯು ನಿರ್ಣಯಿಸತಕ್ಕದ್ದಿದೆ ಈ ದರಬಾರಿಗಳ ಸಭೆಯು ವಿಸರ್ಜನೆಯೆಂಬುದು ಇಲ್ಲ. ಪ್ರತಿ ೨ ವರುಷಗಳಿಗೊಮ್ಮೆ ⅓ ಸದಸ್ಯರು ನಿವೃತ್ತರಾಗುವರು ಅವರ ಸ್ಥಳಗಳ ಆಯ್ಕೆಯಷ್ಟೇ ೨ ವರುಷಗಳಿಗೊಮ್ಮೆ ನಡೆಯುವದು.

ಸರಕಾರದ ಹಣ-ಕಾಸಿನ ಮಸೂದೆಗಳು ಪ್ರಜಾ-ಪ್ರತಿನಿಧಿ ಸಭೆಯಲ್ಲೇ ಮೊದಲು ಪ್ರವಿಷ್ಟವಾಗಬೇಕು ಪ್ರಜಾಪ್ರತಿನಿಧಿ ಸಭೆಯು ಅವನ್ನು ಚರ್ಚಿಸಿ ಸ್ವೀಕರಿಸಿ ದರಬಾರಿಗಳ ಸಭೆಗೆ ಕಳಿಸಿಕೊಡುವದು. ಆ ಸಭೆಯು ಅದನ್ನು ಚರ್ಚಿಸಿ, ಅವಶ್ಯಕಂಡರೆ ದುರುಸ್ತಿ

ಗಳನ್ನು ಸೂಚಿಸಿ, ೧೪ ದಿನಗಳಲ್ಲಿ ತಿರುಗಿ ಪ್ರಜಾ-ಪ್ರತಿನಿಧಿ ಸಭೆಗೆ ಕಳಿಸಿಕೊಡಬೇಕು ದರಬಾರಿ ಸಭೆಯ ಸಲಹೆ-ಸೂಚನೆಗಳನ್ನು ಸ್ವೀಕರಿಸುವದು ಯಾ ತಿರಸ್ಕರಿಸುವದು ಕೆಳಸಭೆಯ ಮರ್ಜಿಯ ವಿಷಯು ಈ ಸಲಹೆ-ಸೂಚನೆಗಳ ಆಲೋಚನೆಯಿಂದ ಕೆಳ-ಸಭೆಯು (ಪ್ರಜಾ-ಪ್ರತಿನಿಧಿ ಸಭೆಯು) ೨ನೇ ಬಾರಿ ಮಾನ್ಯ ಮಾಡಿದ ಮಸೂದೆಯೇ ಕೊನೆಗೆ ಕಾನೂನಾಗುವದು.

ಹಣಕಾಸಿನ ಮಸೂದೆಗಳ ಹೊರತು ಇತರ ಮಸೂದೆಗಳನ್ನು ಯಾವ ಬೇಕಾದ ಸಭೆಯಲ್ಲಿ ತರಬಹುದು ಆ ಮಸೂದೆಗಳು ಎರಡೂ ಸಭೆಗಳಲ್ಲಿ ಮನ್ನಣೆ ಹೊಂದಬೇಕು ಯಾವದೊಂದು ಮಸೂದೆಯ ಸಂಬಂಧದಲ್ಲಿ ಆ ಸಭೆಗಳಲ್ಲಿ ಬಿನ್ನಾಭಿಪ್ರಾಯವಾದರೆ, ಅಧ್ಯಕ್ಷರು ಎರಡೂ ಸಭೆಗಳ ಸಂಯುಕ್ತ ಅಧಿವೇಶನವನ್ನು ಸೇರಿಸುವರು ಆ ಸಂಯುಕ್ತ ಸಭೆಯಲ್ಲಿ ಹಾಜರಿರುವ ಮತಗಳನ್ನು ಕೊಡುವ ಸದಸ್ಯರ ಬಹುಮತವೇ ಸದರಿ ಮಸೂದೆಯ ಅದೃಷ್ಟವನ್ನು ನಿರ್ಣಯಿಸುವದು

ಕಾನೂನ-ಸಭೆಗಳನ್ನು ಕರೆಯುವ, ಅವುಗಳ ಅಧಿವೇಶನವನ್ನು ಮುಕ್ತಾಯಗೊಳಿಸುವ ಹಾಗೂ ಕೆಳಸಭೆಯನ್ನು ವಿಸರ್ಜಿಸಿ ಹೊಸ ಆಯ್ಕೆಗಳನ್ನು ನಡೆಸಲು ಅಪ್ಪಣೆ ಮಾಡುವ ಅಧಿಕಾರ ಅಧ್ಯಕ್ಷನಿಗೆ ಕೊಡಲ್ಪಟ್ಟಿದೆ ಕಾನೂನ ಸಭೆಯ ಅಧಿವೇಶನದ ಪ್ರಾರಂಭಕ್ಕೆ, ಬ್ರಿಟಿಶ ಅರಸರು ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಮಾಡುವಂತೆ, ಎರಡೂ ಸಭೆಗಳ ಸಂಯುಕ್ತ ಸಭೆಯನ್ನು ಸೇರಿಸಿ ರಾಷ್ಟ್ರಪತಿಗಳು ತಮ್ಮ ಸರಕಾರದ ರೀತಿ-ನೀತಿಗಳ ದಿಗ್ದರ್ಶನ ಮಾಡುವ ಪರಿಪಾಠವನ್ನು ಅನುಸರಿಸಬೇಕೆಂದು ನಿಶ್ಚಯಿಸಲಾಗಿದೆ ಈ ಭಾಷಣದ ಮೇಲೆ ಕಾನೂನ-ಸಭೆಯ ಚರ್ಚೆಯೂ ನಡೆಯುವದು

ಸ್ವತಂತ್ರ ನ್ಯಾಯಾಲಯಗಳು

ಯಾವದೊಂದು ಘಟನೆಯ ಸಾಫಲ್ಯವು ಅದರ ನ್ಯಾಯಾಲಯಗಳ ಘಟನೆ ಮತ್ತು ಅಧಿಕಾರವನ್ನು ಅವಲಂಬಿಸಿರುತ್ತದೆ ಘಟನಾತ್ಮಕ ವಿವಾದಗಳುಂಟಾದಲ್ಲಿ ಅವನ್ನು ನಿರ್ಣಯಿಸಲು ಗೌರವಾರ್ಹ, ಸ್ವತಂತ್ರ ಮತ್ತು ಅಧಿಕಾರಿ ನ್ಯಾಯಸ್ಥಾನಗಳಿರಬೇಕು ಆದರಿಂದ ನಮ್ಮ ಘಟನಾಕರ್ತರು ನ್ಯಾಯಾಲಯಗಳನ್ನು ಘಟಕರಾಜ್ಯಗಳ ಸ್ವಾಧೀನವಿಡದೆ ಅವುಗಳ ಮಾಲಿಕೆಯನ್ನು ಸ್ವತಂತ್ರವಾಗಿಟ್ಟಿದ್ದಾರೆ ಇಡೀ ದೇಶಕ್ಕಾಗಿ ಕೇಂದ್ರದಲ್ಲಿ ಒಂದು ವರಿಷ್ಠ ನ್ಯಾಯಾಲಯವನ್ನು ಏರ್ಪಡಿಸಿದಾರೆ ಸಂಘ ರಾಜ್ಯ ಮತ್ತು ಘಟಕ ರಾಜ್ಯ ಇವುಗಳೊಳಗಿನ, ಘಟಕ-ಘಟಕಗಳೊಳಗಿನ ಹಾಗೂ ಘಟನಾತ್ಮಕ ಪ್ರಶ್ನೆಗಳನ್ನೊಳಗೊಂಡ ಎಲ್ಲ ವಿವಾದಗಳನ್ನು ಈ ನ್ಯಾಯಾಲಯವು ತೀರ್ಮಾನಿಸುವದು ಇವಲ್ಲದೆ ಎಲ್ಲ ಪ್ರಾಂತಿಕ ಉಚ್ಚ (ಹಾಯಕೋರ್ಟ) ನ್ಯಾಯಾಲಯಗಳ ನಿರ್ಣಯಗಳ ಪುನರ್ವಿಮರ್ಶೆ ಮಾಡುವ ಅಧಿಕಾರವೂ (ಹಿಂದೆ ವಿಲಾಯತಿಯೊಳಗಿನ ಪ್ರಿವ್ಹಿ-ಕೌನ್ಸಿಲಿಗಿದ್ದಂತೆ) ಈ ನ್ಯಾಯಾಲಯಕ್ಕೆ ಉಂಟು ಪ್ರಾಂತಗಳೊಳಗಿನ ಉಚ್ಚ ನ್ಯಾಯಾಲಯಗಳ ಅಧಿಕಾರಕ್ಷೇತ್ರವು ಹೊಸ ಘಟನೆಯಂತೆ ವಿಸ್ತರಿಸಲ್ಪಟ್ಟಿದೆ ತಮ್ಮ ಅಧಿಕಾರಕ್ಷೇತ್ರಗಳೊಳಗಿನ ಎಲ್ಲ ನಿರ್ಣಾಯಕ ಸಭೆಗಳ (ಟ್ರಾಯಬ್ಯುನಲ್ಸ) ಮೇಲೆ ಇವು ತಮ್ಮ ನಿಯಂತ್ರಣವನ್ನು ನಡೆಸುವವು

ಘಟಕ ರಾಜ್ಯಗಳು

ಘಟಕ ರಾಜ್ಯಗಳಲ್ಲಿ ೩ ವಿಧಗಳಿವೆ (೧) ಇಷ್ಟು ದಿನ ಗವ್ಹರ್ನರರಿಂದ ಆಳಲ್ಪಡುತ್ತಿದ್ದ ಪ್ರಾಂತಗಳು ಮತ್ತು (೨) ಸಂಸ್ಥಾನಗಳು ಈ ಘಟಕ ರಾಜ್ಯಗಳ ವರಿಷ್ಠಾಧಿಕಾರಿಯು ರಾಷ್ಟ್ರಪತಿಯಿಂದ ನೇಮಕಪಟ್ಟ ಪ್ರಾಂತಾಧಿಪತಿ (ಗವ್ಹರ್ನರ)ಯು ಇಲ್ಲವೆ (ಸಂಸ್ಥಾನಗಳ ಹಾಗೂ ಸಂಸ್ಥಾನ ಒಕ್ಕೂಟಗಳ ಸಂಬಂಧವಲ್ಲಿ) ಮನ್ನಣೆ ಹೊಂದಿದ ರಾಜ-ಪ್ರಮುಖನಿರುವನು ಪ್ರಾಂತಾಧಿಪತಿಯ ಅಧಿಕಾರಾವಧಿ ಸಾಮಾನ್ಯವಾಗಿ ೫ ವರ್ಷದ್ದಿರುವದು ಕೆಲವು ಘಟಕಗಳಲ್ಲಿ ಎರಡೆರಡು ಕಾನೂನ ಸಭೆಗಳಿರುವವು, ಕೆಲವು ಘಟಕಗಳಲ್ಲಿ ಒಂದೊಂದೇ ಕಾನೂನ ಸಭೆಯಿರುವದು ಕೆಲವೊಂದು ಸಣ್ಣ ಘಟಕಗಳಲ್ಲಿ ಕಾನೂನ ಸಭೆಗಳಿಲ್ಲ ಕಾನೂನ-ಸಭೆಗಳಿದ್ದ ಘಟಕಗಳ ಪ್ರಾಂತಾಧಿಪತಿಗಳೂ ರಾಜಪ್ರಮುಖರೂ ಕಾನೂನ ಸಭೆಗಳಿಗೆ ಹೊಣೆಗಾರರಿರುವ ಮಂತ್ರಿಮಂಡಳವನ್ನು ನೇಮಿಸಿಕೊಂಡು, ಆ ಮಂತ್ರಿಮಂಡಳದ ಸಲಹೆಯಂತೆಯೇ ಕಾರಭಾರ ನಡಿಸಬೇಕು ಕಾನೂನ-ಮಂಡಳಗಳ ಪರಸ್ಪರ ಸಂಬಂಧವೂ ಅಧಿಕಾರವೂ ಕೇಂದ್ರದ ಕಾನೂನ-ಸಭೆಗಳ ಸಂಬಂಧ-ಅಧಿಕಾರಗಳಂತೆಯೇ ಇರುವದು ದ್ವಿದಲ ಕಾನೂನ-ಸಭೆಗಳವಲ್ಲಿ ಎರಡೂ ದಲಗಳೊಳಗೆ ಮತಭೇದವಾದರೆ, ಕೇಂದ್ರದಲ್ಲಿ ಮಾಡುವಂತೆ ಅವುಗಳ ಸಂಯುಕ್ತ ಸಭೆ ಸೇರಿಸುವ ವ್ಯವಸ್ಥೆ ಹೇಳಲಾಗಿಲ್ಲ ವಿಶಿಷ್ಟ ವಿಷಯಗಳಲ್ಲಿ ಹೆಚ್ಚಿನ ಲೋಕ ಪ್ರಾತಿನಿಧ್ಯವುಳ್ಳ ಕೆಳ ಸಭೆಗಳ ನಿರ್ಣಯವೇ ಕೊನೆಯ ನಿರ್ಣಯವೆಂದು ತಿಳಿಯಬೇಕಾಗಿ ವಿಧಿಸಲಾಗಿದೆ

ಜಾಹೀರ ನೋಟೀಸು.

ಕುಮಟಾ ತಾಲೂಕ ಅಂತ್ರವಳ್ಳಿಯಲ್ಲಿರುವ ನಂದಿ ನಾರಾಯಣ ಭಟ್ಟ ಇವನಿಗೆ—

ಕಮಲಾಬಾಯಿ ಕೋಂ ನರಸಿಂಹ ಭಟ ಇವಳು ಸ್ವಂತ ನಾತೆಯಿಂದಲೂ ತನ್ನ ಅಪ್ರಾಯಸ್ಥ ಮಕ್ಕಳ ರಕ್ಷಕ ನಾತೆಯಿಂದಲೂ ಈ ಮೂಲಕ ತಿಳಿಸುವದೇನಂದರೆ – ನೀನು ನನ್ನ ಗಂಡನಿರ ತಮ್ಮನಿದ್ದು, ಇತ್ತ ೧ ವರ್ಷದಿಂದ ಅವರನ್ನು ಬಹಳ ಪೀಡಿ, ಈಗೊಂದು ತಿಂಗಳ ಹಿಂದೆ ಅವರಿಂದ ಒಂದು ವಾಂಟಣಿ-ದಸ್ತು ಮಾಡಿಸಿಕೊಂಡಿರುತ್ತೀ ಸದರಿ ವಾಂಟಣಿಯಲ್ಲಿ ನೀನು ಬರೇ ಟಿಪ್ರಾಚೀನ ಆಸ್ತಿಯಲ್ಲಷ್ಟೇ ಪಾಲು ಪಡೆಯುವ, ನನ್ನ ಪತಿಗಳಿಗೆ ಫೀಟ್‌-ಬಿಡಂತೆಗಳನ್ನು ಹಾಕಿ, ನಮ್ಮ ಸಲುವಾಗಿ ದುಡಿದು ಕೈ! ವಾ! ಸುಬ್ರಾಯ ನಾರಾಯಣ ಭಟ್ಟರು ನನ್ನ ಪತಿಗಳ ಹೆಸರಲ್ಲಿ ಬಕ್ಷೀಸ ಮಾಡಿಕೊಟ್ಟ ಆಸ್ತಿಯಲ್ಲೂ ಕೂಡ ಕೆಲವು ಅಂಶ ಪಡೆಕೊಂಡಿರುತ್ತೀಯೆಂದು ತಿಳಿದು ಬಂದಿದೆ ಬಕ್ಷೀಸಿಗೆಬಿದ್ದ ಮನೆಯನ್ನು ಪೂರ್ಣವಾಗಿ ನಿನ್ನ ಪಾಲಿಗೆ ಹಾಕಿಕೊಂಡಿರುತ್ತೀಯೆಂದೂ ಕೇಳುತ್ತೇನೆ ನಮ್ಮ ಬಗ್ಗೆ ಬಕ್ಷೀಸ ಮಾಡಿಕೊಟ್ಟ ಆಸ್ತಿಯನ್ನು ನಿನಗೆ ಕೊಡಲಿಕ್ಕೆ ನನ್ನ ಗಂಡನಿಗೆ ಕಾಯದೆಯಂತೆ ಅಧಿಕಾರವಿಲ್ಲ ಅವರಿಂದ ಸದರಿ ಆಸ್ತಿಯಲ್ಲಿ ನೀನು ಏನಾದರೂ ಹಕ್ಕು ಮಾಡಿಕೊಂಡಿದ್ದರೆ ಅದು ಅಸಂಬದ್ಧವಿದು ಶುದ್ಧ ಇಂದಿನ ಸದರಿ ಬಕ್ಷೀಸಿಗೆ ಒಟ್ಟಿನ ಆಸ್ತಿಯಲ್ಲಿ ನಮಗಿದ್ದ ಹಕ್ಕು ಅನ್ನು ಊರ್ಜಿತವಿದೆ ನೀನೂ ನಿನ್ನ ಕಡೆ ವ್ಯವಹಾರ ಮಾಡುವವರೂ ಈ ಮಾತನ್ನು ಒಳ್ಳೆಯಾಗಿ ಲಕ್ಷದಲ್ಲಿಟ್ಟುಕೊಳ್ಳಬೇಕು ತಿಳಿದಿರಲಿ.

ಅಂತ್ರವಳ್ಳಿ, ತಾ ೪-೨-೧೯೫೦

● ಇದು ಕಮಲಾಬಾಯಿ ಕೋಂ ನರಸಿಂಹ ಭಟ್ಟ, ಅಂತ್ರವಳ್ಳಿ ಇವಳ ಎ ಈ ಗುರ್ತು.

PUBLIC WORKS DEPARTMENT.

Separate sealed tenders in Schedule 'B" to be issued by this Office are invited from the public for each of the following groups of works

S No	Name of work	Estimated amount	Earnest money	Security Deposit
	Group No I			
1	Improvements to Yellapur Sirsi Road (Part I) miles 2 & 3 (metal collection)	Rs 16474	Rs 165	Rs 824
	Group No II			
2	—do— —do— Miles 21 22, & 23 (metal collection)	18147	181	907
	Group No III			
3	—do— —do— —do— —do— Miles 24, 26, 27 & 29 (metal collection)	16905	169	845
	Group No IV			
4	S R to Karwar-Bellary Road Miles 44 to 53 (metal and murum collection)	73421	734	3671

2 Application for forms will be entertained upto 20—2—1950 and schedule "B" will be issued upto 23—2—50 during office hours The last date for receiving schedules is upto 4 P M of 10—3—1950

3 Schedule for each group of work can be obtained on payment of Rs 3/— each which will not be refunded Other particulars are given in the regular notice issued separately, copy of which can be had free of cost Contract documents can be seen at the office of the undersigned during working hours

No A-31/CB
Office of the
Executive Engineer, Kn Dn
Karwar, 2nd February 1950

G N GODSE
Executive Engineer Kn Dn

ಕೇಂದ್ರ ಮತ್ತು ಘಟಕಗಳೊಳಗೆ ವಿಷಯಗಳ ಪಾಲು-ಪಟ್ಟಿ

ಘಟನಾಕರ್ತರು ಸದ್ಯಕ್ಕೆ ಕಲ್ಪನೆಗೆ ನಿಲುಕುವ ಎಲ್ಲ ವಿಷಯಗಳ ವರ್ಗೀಕರಣ ಮಾಡಿ, (೧) ಕೇವಲ ಸಂಘರಾಜ್ಯಕ್ಕೆ ಅಂದರೆ ಕೇಂದ್ರ ಸರಕಾರಕ್ಕೆ ಒಪ್ಪಿದ ವಿಷಯಗಳು (೨) ಕೇವಲ ಘಟಕ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯಗಳು ಮತ್ತು (೩) ಕೇಂದ್ರ ಘಟಕಗಳ ಸಾಮೂಹಿಕ ಅಧಿಕಾರದ ವಿಷಯಗಳು ಎಂದು ೩ ಪಟ್ಟಿಗಳನ್ನು ಮಾಡಿದ್ದಾರೆ. ೧ನೇ ಪಟ್ಟಿಯ ವಿಷಯಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಮಾಡುವ ಅಧಿಕಾರವು ಮಧ್ಯವರ್ತಿ ಕಾನೂನ-ಸಭೆಗಷ್ಟೇ ಉಂಟು, ಮತ್ತು ಅವುಗಳನ್ನು ನಿಯಂತ್ರಿಸುವ ಅಧಿಕಾರ ಸಂಘ-ರಾಜ್ಯಕ್ಕೆ ಮಾತ್ರ ಇದೆ. ಈ ಪಟ್ಟಿಯಲ್ಲಿ ವಿದೇಶ ನೀತಿ, ತಂತಿ ಟಪಾಲು, ಸಂರಕ್ಷಣ, ರೇಲ್ವೆಗಳು, ನೌಕಾ ವ್ಯವಹಾರ, ಬ್ಯಾಂಕುಗಳು, ವಿಮೆಯ ಸಂಸ್ಥೆಗಳು ಮೊದಲಾದ ೯೭ ವಿಷಯಗಳಿವೆ. ೨ನೇ ಪಟ್ಟಿಯೊಳಗಿನ ವಿಷಯಗಳ ಪೂರ್ಣ ಜವಾಬ್ದಾರಿಯು ಘಟಕ ರಾಜ್ಯಗಳೊಳಪಟ್ಟದ್ದು. ಅದರಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳ ರಕ್ಷಣೆ, ಪೋಲೀಸ, ಶಿಕ್ಷಣ, ಆರೋಗ್ಯರಕ್ಷಣೆ, ಸ್ಥಾನಿಕ ಸ್ವರಾಜ್ಯ, ಬೇಸಾಯ, ಅರಣ್ಯಗಳು ಇತ್ಯಾದಿ ೬೭ ವಿಷಯಗಳುಂಟು. ೩ನೇ ಪಟ್ಟಿಯಲ್ಲಿ ದಿವಾಣಿ ಮತ್ತು ಫೌಜದಾರಿ ಕಾನೂನುಗಳು ಮತ್ತು ವಿಧಾನಗಳು, ಮಜೂರರ ಸಂಸ್ಥೆಗಳು ಮತ್ತು ಅವರ ಕಲ್ಯಾಣದ ವ್ಯವಸ್ಥೆ, ವಿವಾಹ, ವಿವಾಹ ವಿಚ್ಛೇದನ, ದರ-ನಿಯಂತ್ರಣ ವಗೈರೆ ೪೭ ವಿಷಯಗಳಿವೆ. ಇವನ್ನು ಕುರಿತು ಎರಡೂ ಸರಕಾರಗಳು ಕಾನೂನುಗಳನ್ನು ಮಾಡಬಹುದು. ಕಾನೂನ ಮಂಡಳಗಳಿಲ್ಲದ ಘಟಕಗಳಲ್ಲಿ ೨, ೩ನೇ ಪಟ್ಟಿಗಳೊಳಗಿನ ವಿಷಯಗಳ ಬಗ್ಗೆ ಕಾನೂನುಗಳನ್ನು ಮಾಡುವ ಅಧಿಕಾರ ಪ್ರಜಾಪ್ರತಿನಿಧಿ ಸಭೆಯದೇ ಆಗಿರುತ್ತದೆ.

ವಿಶೇಷ ಪ್ರಸಂಗಗಳಲ್ಲಿ ಸಂಘರಾಜ್ಯಕ್ಕೆ ಸರ್ವಾಧಿಕಾರ

ಯುದ್ಧ-ಕಾಲ, ಪರಸ್ಥ ಶತ್ರುಗಳ ದಾಳಿ, ಅಂತರ್ಗತ ಯಾದವೀ ಕಲಹ ಮುಂತಾದ ಕಠಿಣ ಪ್ರಸಂಗಗಳು ಉದ್ಭವಿಸಿದಾಗ ರಾಷ್ಟ್ರಪತಿಯು ಇಡೀ ದೇಶದಲ್ಲಿ ಇಲ್ಲವೆ ಯಾವದೊಂದು ಭಾಗದಲ್ಲಿ ಗಂಭೀರ ಪರಿಸ್ಥಿತಿಯುಂಟಾಗಿದೆಂದು ಜಾಹೀರ ಮಾಡಿದರೆ, ಆ ಪರಿಸ್ಥಿತಿಯು ಹಾಗುಳಿಯುವ ತನಕ ಆ ಭಾಗದ ಎಲ್ಲ ವಿಷಯಗಳ ಬಗ್ಗೆ ಕಾನೂನ-ಕಟ್ಟಳೆಗಳನ್ನು ಪ್ರಜಾ-ಪ್ರತಿನಿಧಿ ಸಭೆಯೇ ಮಾಡುವದು. ಅದೇ ಮೇರೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಭೆಯಲ್ಲುಳಿದು ಮತ ಕೊಡುವ ಸದಸ್ಯರು ೨/೩ದಷ್ಟು ಬಹುಮತದಿಂದ ಯಾವದೊಂದು ಘಟಕದ ಸಂಬಂಧದಲ್ಲಿ ಕೇವಲ ಘಟಕ ರಾಜ್ಯಕ್ಕೆ ಒಳಪಟ್ಟ ವಿಷಯದ ಮೇಲೆ ಕೇಂದ್ರ ಕಾನೂನ ಸಭೆಯು ಕಾನೂನು ಮಾಡುವದು ಅವಶ್ಯ ಮತ್ತು ಉಚಿತವಿರುತ್ತದೆಂದು ನಿರ್ಣಯಿಸಿದಲ್ಲಿ, ಕೇಂದ್ರ ಕಾನೂನ ಸಭೆಯು ಹಾಗೆ ಮಾಡಬಲ್ಲದು. ಘಟಕ ರಾಜ್ಯಗಳಿಗೆ ಸ್ವೈರವೃತ್ತಿಯ ಅಧಿಕಾರ ಕೊಡಬಾರದೆಂಬ ದೂರದೃಷ್ಟಿಯ ವಿಚಾರದಿಂದ ಘಟನಾ-ಪಂಡಿತರು ಈ ನಿಯಂತ್ರಣ-ಯೋಜನೆಯನ್ನು ಮಾಡಿಟ್ಟಿದ್ದಾರೆ.

ನಾಗರಿಕರ ಮೂಲಭೂತ ಹಕ್ಕುಗಳು

ಘಟನೆಯಲ್ಲಿ ನಾಗರಿಕತ್ವಾಧಿಕಾರದ ವ್ಯಾಪ್ತಿಯೂ ನಾಗರಿಕರ ಮೂಲಭೂತ ಹಕ್ಕುಗಳೂ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಸ್ವತಃ ಭಾರತದಲ್ಲಿ ಹುಟ್ಟಿದ ಯಾ ಭಾರತದಲ್ಲಿ ಹುಟ್ಟಿದ ತಂದೆ ಯಾ ತಾಯಿಯ ಮಕ್ಕಳಾದ ಇಲ್ಲವೆ ಘಟನೆಯು ಅಮಲಿನಲ್ಲಿ ಬರುವ ದಿನದಿಂದ ಹಿಂದೆ ಕನಿಷ್ಠ ೫ ವರ್ಷಗಳಷ್ಟು ಕಾಲ ಭಾರತದಲ್ಲಿ ವಾಸ್ತವ್ಯ ಮಾಡಿಕೊಂಡಿರುವ ಮತ್ತು ಭಾರತದಲ್ಲಿ ಶಾಶ್ವತವಾಗಿ ವಾಸ್ತವ್ಯ ಮಾಡಿಕೊಂಡಿದ್ದ ವ್ಯಕ್ತಿಗಳು ಭಾರತದ ನಾಗರಿಕರೆಂದು ಎಣಿಸಲ್ಪಡುವರು. ಪಾಕಿಸ್ತಾನ ನಿರ್ಮಿತಿಯಿಂದ ವಾಸ್ತವ್ಯದೊಳಗೆ ವ್ಯತ್ಯಯವಾಗಿರುವ ಭಾರತೀಯರ ನಾಗರಿಕತ್ವದ ವ್ಯವಸ್ಥೆಯೂ ಘಟನೆಯಲ್ಲಿ ಮಾಡಲ್ಪಟ್ಟಿದೆ. ಇಡೀ ಭಾರತದ ನಾಗರಿಕತ್ವವಷ್ಟೇ ಘಟನೆಯಲ್ಲಿ ಗ್ರಹಿಸಲ್ಪಟ್ಟಿದೆ. ಸಂಘರಾಜ್ಯದ ನಾಗರಿಕತ್ವ ಅಥವಾ ಘಟಕಗಳ ನಾಗರಿಕತ್ವ ಎಂಬ ಭೇದಭಾವ ಮಾಡಲ್ಪಟ್ಟಿಲ್ಲ.

ನಾಗರಿಕತ್ವದ ವ್ಯಾಪ್ತಿಯ ಮುಂದೆಯೇ ನಾಗರಿಕರ ಮೂಲಭೂತ ಹಕ್ಕುಗಳ ವಿವರಣೆಯುಂಟು. ಎಲ್ಲ ಪ್ರಜೆಗಳಿಗೆ ಭಾಷಣ ಮತ್ತು ಲೇಖನಸ್ವಾತಂತ್ರ್ಯ, ಸಭೆ-ಸಂಘಟನೆಗಳ ಸ್ವಾತಂತ್ರ್ಯ, ದೇಶದೊಳಗೆ ಬೇಕಾದಲ್ಲಿ ಸಂಚರಿಸುವ ಮತ್ತು ವಾಸ್ತವ್ಯ ಮಾಡುವ ಸ್ವಾತಂತ್ರ್ಯ, ತನಗಿಷ್ಟವಿದ್ದ ಧರ್ಮದ ಅನುಯಾಯಿಯಾಗಿ ಇಷ್ಟವಿದ್ದಂತೆ ಪೂಜೆ ಮಾಡುವ ಸ್ವಾತಂತ್ರ್ಯ, ಆಸ್ತಿಸಂಪಾದನೆ ಮಾಡಿ ಅದನ್ನು ಇಟ್ಟುಕೊಳ್ಳುವ ಹಾಗೂ ಇಷ್ಟವಿದ್ದಂತೆ ಅದರ ವ್ಯವಸ್ಥೆ ಮಾಡುವ ಸ್ವಾತಂತ್ರ್ಯ, ಯಾವ ಬೇಕಾದ ವ್ಯವಸಾಯ ವ್ಯವಹಾರ ಮಾಡುವ ಸ್ವಾತಂತ್ರ್ಯ ಇವುಗಳ ಶಾಶ್ವತತೆಯನ್ನು ಘಟನೆಯು ಸಮಸ್ತ ನಾಗರಿಕರಿಗೆ ಕೊಟ್ಟಿದೆ. ಯಾರೊಬ್ಬರ ಆಸ್ತಿಯನ್ನು ಕಾಯದೆ-ಕ್ರಮದಿಂದಲ್ಲದೆ ಅನ್ಯಮಾರ್ಗದಿಂದ ಮತ್ತು ಯೋಗ್ಯ ನಷ್ಟ ತುಂಬಿಕೊಡದೆ ಸರಕಾರವು ವಶಪಡಿಸಿಕೊಳ್ಳಕೂಡದೆಂದು ಒಂದು ಕಲಮು ವಿಧಿಸುತ್ತದೆ. ನಾಗರಿಕರ ಈ ಹಕ್ಕುಗಳನ್ನು ಸಂರಕ್ಷಿಸುವ ಹೊಣೆ ಮತ್ತು ಅಧಿಕಾರ ನ್ಯಾಯಾಲಯಗಳಿಗೆ ಕೊಡಲ್ಪಟ್ಟಿದೆ.

ನಾಗರಿಕರ ಈ ಎಲ್ಲ ಹಕ್ಕುಗಳಿಗಿಂತ ಹೆಚ್ಚಿಗೆ ಮಹತ್ವದ ವಿಷಯವೆಂದರೆ ಅಸ್ಪೃಶ್ಯತೆಯ ಸಂಪೂರ್ಣ ಉಚ್ಚಾಟನೆ. ಪ್ರಜಾರಾಜ್ಯ ಸರಕಾರವು ರಾಷ್ಟ್ರದ ಯಾವದೇ ಭಾಗದಲ್ಲಿ ಯಾವದೇ ಬಗೆಯ ಅಸ್ಪೃಶ್ಯತೆಯನ್ನು ಮನ್ನಿಸುವಂತಿಲ್ಲ. ಅಸ್ಪೃಶ್ಯತೆಯನ್ನು ಆಚರಣೆಯಲ್ಲಿ ತರುವದು ಅಪರಾಧವೆಂದೂ ಘಟನೆಯಲ್ಲಿ ವಿಧಿಸಲಾಗಿದೆ.

ರಾಜನೀತಿಯ ದಿಗ್ದರ್ಶನ

ಈ ವಿನಹ ರಾಜ್ಯ-ಭಾರದ ಕೆಲವೊಂದು ರೀತಿನೀತಿಗಳೂ ಘಟನೆಯಲ್ಲಿ ವಿವರಿಸಲ್ಪಟ್ಟಿವೆ. ಪ್ರಜೆಗಳ ಉತ್ತರೋತ್ತರ ಕಲ್ಯಾಣ ಸಾಧಿಸುವದಕ್ಕಾಗಿ ಸರಕಾರವು ಯತ್ನಿಸಬೇಕು, ಸಮಸ್ತ ನಾಗರಿಕರಿಗೆ ಜೀವನದ ಸಾಧನಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ರಾಜ್ಯಭಾರ ನಡಿಸಬೇಕು, ೧೪ ವರ್ಷಗಳೊಳಗಿನ ಮಕ್ಕಳಿಗೆ ಪುಕ್ಕಟೆ ಮತ್ತು ಕಡ್ಡಾಯದ ಶಿಕ್ಷಣ ಕೊಡಬೇಕು, ಮಜದೂರರಿಗೆ ಯೋಗ್ಯ ಸವಲತ್ತುಗಳನ್ನು ದೊರಕಿಸಿಕೊಡಬೇಕು, ನಿರುದ್ಯೋಗಿಗಳು, ಮುದುಕರು, ರುಗ್ಣರು, ಪಂಗರು ಮೊದಲಾದವರಿಗೆ ಸಹಾಯ-ಸಂರಕ್ಷಣೆಗಳನ್ನು ನೀಡಬೇಕು, ಮಾದಕ ವಸ್ತುಗಳ ಮೇಲೂ ಸಾರ್ವಜನಿಕ ಆರೋಗ್ಯವನ್ನು ಕೆಡಿಸುವಂತಹ ವಸ್ತುಗಳ ಮೇಲೂ ಪ್ರತಿಬಂಧ ಹಾಕಬೇಕು, ರಾಷ್ಟ್ರ-ರಾಷ್ಟ್ರಗಳೊಳಗೆ ಶಾಂತಿ, ಸೌಹಾರ್ದ ಮತ್ತು ಸಹಕಾರ ಬೆಳೆಯುವಂತೆ ಪ್ರಯತ್ನ ಮಾಡಬೇಕು, ಇವೇ ಮೊದಲಾದ ರೀತಿ-ನೀತಿಗಳ ದಿಗ್ದರ್ಶನವು ಘಟನೆಯಲ್ಲಿ ಮಾಡಲ್ಪಟ್ಟಿದೆ. ಮಂತ್ರಿಮಂಡಳಗಳಿಗೆ ಈ ಕಲಮುಗಳು ಕಾಲಕಾಲಕ್ಕೆ ಸರಿಯಾದ ಮಾರ್ಗದರ್ಶನ ಮಾಡುವವೆಂದು ಆಶಿಸಲಾಗಿದೆ.

ರಾಷ್ಟ್ರಭಾಷೆ

ದೇವನಾಗರಿ ಲಿಪಿಯ ಹಿಂದೀ ಭಾಷೆ ನಮ್ಮ ಪ್ರಜಾರಾಜ್ಯ ಸರಕಾರದ ಅಧಿಕೃತ ಭಾಷೆಯೆಂದು ಸಂಗ್ರಹಿಸಲ್ಪಟ್ಟಿದೆ. ಆದರೂ ಮೊದಲಿನ ೧೫ ವರ್ಷಗಳ ವರೆಗೆ ಇಂಗ್ಲಿಶ ಭಾಷೆಯಿಂದಲೇ ಸರಕಾರ-ದರಬಾರದ ವ್ಯವಹಾರ ನಡೆಯುವದು. ವರಿಷ್ಠ ಮತ್ತು ಉಚ್ಚ ನ್ಯಾಯಾಲಯಗಳಲ್ಲಿಯೂ, ಕಾಯದೆ-ಕಾನೂನುಗಳನ್ನು ಮಾಡುವಲ್ಲಿಯೂ ತುರ್ತಕ್ಕೆ ಇಂಗ್ಲಿಶ ಭಾಷೆಯನ್ನು ಬಿಟ್ಟರೆ ನಿರ್ವಾಹವಾಗವಂತಿಲ್ಲೆಂದು ನಿರ್ಧರಿಸಿ, ಇಂಗ್ಲಿಶ ಭಾಷೆಗೆ ಘಟನಾಕರ್ತರು ೧೫ ವರುಷಗಳ ಜೀವದಾನ ಮಾಡಿದ್ದಾರೆ.

ಘಟನೆಯಲ್ಲಿ ತಿದ್ದುಪಡಿ ಮಾಡುವ ಕ್ರಮ

ಕೆಲವೊಂದು ದೇಶಗಳ ಘಟನೆಯಲ್ಲಿ ತಿದ್ದುಪಡಿ ಮಾಡುವದು ಕಷ್ಟವಾಗುತ್ತಿದೆ. ತಿದ್ದುಪಡಿ ಮಾಡಬೇಕಾದರೆ ಇಡೀ ದೇಶದ ಪ್ರಜೆಗಳ ಮತ ತಕ್ಕೊಳ್ಳಬೇಕಾಗುತ್ತಿದೆ. ಇದು ಇಷ್ಟವಲ್ಲ. ಘಟನಾಕರ್ತರು ಎಷ್ಟೆಂದರೂ ಮನುಷ್ಯರು. ಭಾವೀ ಸ್ಥಿತ್ಯಂತರಗಳನ್ನು ಮುಂದಾಗಿ ಅರಿತು, ಅವುಗಳಿಗೆ ತಕ್ಕಂತಹ ವ್ಯವಸ್ಥೆಯನ್ನು ಈಗಲೇ ಅವರು ಮಾಡುವದು ಶಕ್ಯವಿಲ್ಲ. ಅದರಿಂದ ಕಾಲಕ್ಕೆ ತಕ್ಕ ತಿದ್ದುಪಡಿಗಳನ್ನು ಮಾಡಲು ಆಸ್ಪದವುಳಿಯಬೇಕು. ಆದರೆ ಸಿಕ್ಕಸಿಕ್ಕವರು ಸಿಕ್ಕಸಿಕ್ಕಂತೆ ತಿದ್ದುಪಡಿಗಳನ್ನು ಮಾಡಬರುವಂತೆ ಇಡುವದು ಯುಕ್ತವಲ್ಲ. ಅದರಿಂದ ನಮ್ಮ ಘಟನಾಕರ್ತರು ತಿದ್ದುಪಡಿ ಮಾಡುವದಕ್ಕೆ ಕೆಲವೊಂದು ಬಂಧನಗಳನ್ನು ಹಾಕಿರುತ್ತಾರೆ. ನ್ಯಾಯಾಲಯಗಳಿಗೆ ಸಂಬಂಧಪಟ್ಟ ಕಲಮುಗಳು, ಕೇಂದ್ರ ಸರಕಾರ ಮತ್ತು ಘಟಕ-ರಾಜ್ಯಗಳೊಳಗಿನ ಅಧಿಕಾರ ವಿಷಯಗಳ ಪಾಲುಪಟ್ಟಿ ಮುಂತಾದವುಗಳಲ್ಲಿ ತಿದ್ದುಪಡಿ ಮಾಡಬೇಕಾದರೆ ಆ ತಿದ್ದುಪಡಿಗೆ ಅರ್ಧಕ್ಕಿಂತಲೂ ಹೆಚ್ಚಿಗೆ ಘಟಕ ರಾಜ್ಯಗಳೊಳಗಿನ ಕಾನೂನ-ಸಭೆಗಳ ಸಮ್ಮತಿ ದೊರೆಯಬೇಕು. ಉಳಿದ ಕಲಮುಗಳಲ್ಲಿ ಸಂಘ ರಾಜ್ಯದ ಕಾನೂನ ಸಭೆಯ ಕೆಳಮನೆ, ಮೇಲ್ಮನೆ ಈ ಎರಡೂ ಮಂಡಳಗಳಲ್ಲಿ ಬಹುಮತದ ಸಮ್ಮತಿ ಸಿಕ್ಕಿದರೆ ತಿದ್ದುಪಡಿ ಮಾಡಬರುತ್ತದೆ. ಆದರೂ ಮತ್ತೊಂದು ಬಂಧನವಿದೆ. ಪ್ರತಿಯೊಂದು ಮಂಡಳದಲ್ಲಿ ಸಭೆಗೆ ಉಪಸ್ಥಿತರಿದ್ದು ಮತ ಕೊಡುವ ಅಂತು ಸದಸ್ಯರ ೨/೩ದಷ್ಟು ಸದಸ್ಯರು ತಿದ್ದುಪಡಿಗೆ ಅನುಕೂಲ ಮತ ಕೊಡಬೇಕು.

ಘಟನೆಯ ಧ್ಯೇಯ

ಅಂತು ಸುಮಾರು ೩ ವರ್ಷ ಪರಿಶ್ರಮಪಟ್ಟು ತಯಾರಿಸಿದ ಈ ಘಟನೆಯು ಸಮಸ್ತ ಭಾರತೀಯರಿಗೆ ನಿರ್ದುಷ್ಟ ನ್ಯಾಯ, ಸಮತೆ, ಸ್ವಾತಂತ್ರ್ಯ ಮತ್ತು ಸೌಭ್ರಾತೃ ಇವನ್ನು ಅಖಂಡವಾಗಿ ಒದಗಿಸಿಕೊಟ್ಟು, ವಿಶ್ವಶಾಂತಿಗೂ ವಿಶ್ವಕಲ್ಯಾಣಕ್ಕೂ ಭಾರತವು ಯಥಾಶಕ್ತಿ ನೆರವನ್ನೀಯಲು ಸಮರ್ಥವಾಗುವದೆಂದು ಎಣಿಸಲಾಗಿದೆ.

ಕೋಲಸಿರ್ಸಿಯಲ್ಲಿ ಅಗ್ನಿಪ್ರಳಯ.

೧೩೦ ಮನೆಗಳಲ್ಲಿ ೧೦೫ ಭಸ್ಮವಾಗಿವೆ

ಕಳೆದ ತಾ ೨೦ನೇ ಶನಿವಾರ ೧ ಘಂಟೆಯ ಸುಮಾರಿಗೆ ಸಿದ್ದಾಪುರದಿಂದ ೩-೪ ಮೈಲು ದೂರದಲ್ಲಿರುವ ಕೋಲಸಿರ್ಸಿ ಹಳ್ಳಿಯಲ್ಲಿ ಒಂದು ಮನೆಗೆ ಆಕಸ್ಮಾತ್ತಾಗಿ ಬೆಂಕಿ ಬಿದ್ದಿತು ಆ ಊರಲ್ಲಿ ಮನೆಗಳು ಒಂದಕ್ಕೊಂದು ತಗಲಿ ಇದ್ದಂತವೆ ಮಧ್ಯಾಹ್ನದ ಉರಿ ಬಿಸಿಲು ಮತ್ತು ಗಾಳಿ ಇವುಗಳ ಪ್ರಭಾವದಿಂದ ಬೆಂಕಿಯು ನಾಲ್ಕು ಕಡೆಗೆ ಹಬ್ಬಿ ಎರಡೇ ತಾಸುಗಳಲ್ಲಿ ಆ ಹಳ್ಳಿಯ ೧೩೦ ಮನೆಗಳಲ್ಲಿ ೧೦೫ ಮನೆಗಳನ್ನು ಸ್ವಾಹಾ ಮಾಡಿಬಿಟ್ಟಿತು ಸುಟ್ಟ ಮನೆಗಳಲ್ಲಿದ್ದ ಕಾಳು-ಕಡಿ, ಅರಿವೆ ಅಂಚಡಿ ಮುಂತಾದ ಜಿನಸ್ತಿಯೂ ಅಗ್ನಿನಾರಾಯಣನಿಗೆ ಆಹುತಿಯಾಗಿವೆ ೩೦ ಜನರಷ್ಟು ನಿರಾಶ್ರಿತರಾಗಿದ್ದಾರೆ ಈ ಅನಾಹುತದಿಂದ ಸುಮಾರು ೩ ಲಕ್ಷ ರೂಗಳಷ್ಟು ಹಾನಿಯಾಗಿರಬೇಕೆಂದು ಅಂದಾಜು ಮಾಡಲಾಗಿದೆ

ಪರಿಹಾರ-ಸಮಿತಿಯ ನೇಮಕ

ಮೊನ್ನೆ ರವಿವಾರದೊಳಗೆ ಜಿಲ್ಲಾಧಿಕಾರು ಕೋಲಸಿರ್ಸಿಯ ಅನಾಹುತದಿಂದ ನಿರಾಶ್ರಿತರಾದವರಿಗೆ ಹಾಗೂ ಈ ಮಾಸದಲ್ಲಿ ಎರಡು ಕಡೆ ಮನೆ ಸುಟ್ಟ ಅನಾಥರಾದವರಿಗೆ ಪರಿಹಾರ ಒದಗಿಸುವ ವ್ಯವಸ್ಥೆ ಮಾಡುವ ಬಗ್ಗೆ ಜಿಲ್ಲೆಯವರ ಪ್ರತಿನಿಧಿಗಳ ಸಭೆಯೊಂದನ್ನು ಕರೆದಿದ್ದರು ಈ ಸಭೆಯಲ್ಲಿ ವಿಚಾರವಿನಿಮಯವಾಗಿ, ಪರಿಹಾರ-ನಿಧಿ ಸಂಗ್ರಹಿಸಲು ಎಲ್ಲ ತಾಲೂಕುಗಳ ಪ್ರತಿನಿಧಿಗಳಿಂದೊಡಗೂಡಿದ ೩೧ ಜನರ ಸಮಿತಿಯೊಂದು ನೇಮಿಸಲ್ಪಟ್ಟಿದೆ ಕಾರವಾರದ ವಕೀಲ ರಾ॥ ಪದ್ಮನಾಭ ಸುಬ್ರಾವ ಕಾಮತರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ ರಾ॥ ಜಿ ಕೇ ಹಳದೀಪುರ ವಕೀಲ ಮತ್ತು ಎನ್. ಜಿ ಶೆಟ್ಟಿ ಇವರು ಕಾರ್ಯದರ್ಶಿಗಳು ಜಿಲ್ಲೆಯವರು ಈ ನಿಧಿಗೆ ಕೊಡುಗೈಯಿಂದ ಸಹಾಯ ನೀಡಬೇಕಾಗಿ ವಿನಂತಿಯಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮುಂಜಾವಿನಲ್ಲಿ ಚಳಿ ಬೀಳುತ್ತಿದೆ ಮಧ್ಯಾಹ್ನದಲ್ಲಿ ಒಳ್ಳೇ ಸೆಕೆಯಾಗುತ್ತಿದೆ

ಆಹಾರ ವಾರದ ಕೊನೆಗೆ, ಪ್ರಜಾರಾಜ್ಯೋದಯದ ಉಲ್ಲಾಸ ಮಾಗಿದ ಮೇಲೆ, ಸೀಧಾ-ಅಂಗಡಿಗಳು ತಲಾ ೪ ಔಂಸುಗಳಂತೆ ಜನರಿಗೆ ಸಕ್ಕರೆಯನ್ನು ಹಂಚಿದವು ತಲಾ ೧೬ ಔಂಸುಗಳಂತೆ ಸಕ್ಕರೆ ಹಂಚಬೇಕೆಂದು ಜಿಲ್ಲಾಧಿಕಾರ ಕಚೇರಿಯಲ್ಲಿ ಆದ ತೀರ್ಮಾನದಲ್ಲಿ ಎಂದು ತಿದ್ದುಪಡಿ ಸ್ಥಾ ಯಿತು ಎಂದು, ಕೊಟ್ಟಿ ಸಕ್ಕರೆಯ ಪ್ರಮಾಣ ನೋಡಿ ಲಕ್ಷ್ಯಕ್ಕೆ ಬಂದಿತು, ಇದರ ಕಾರಣ ಜಿಲ್ಲಾ ಅಧಿಕಾರಿಗಳು ಉತ್ತರ ಕೊಡಬೇಕು

ಅಂಕೋಲಾ— (ತಾ ೩೦-೧-೫೦) ಇಲ್ಲಿಯ ಓವರ್ ಪ್ರದಾನ ನಾಗರಿಕರಾಗಿದ್ದ ರಾ॥ ವೆಂಕಟೇಶ ವಾಮನ ರೇವಣಕರರು ಮೊನ್ನೆ ರಾತ್ರಿ ಸುಮಾರು ೧೧-೧೧॥ ಘಂಟೆಗೆ ಪತ್ತನಿಕರಾಗಿದ್ದರು ತಮ್ಮ ಮನೆಗೆ ಕರೆದ ರಸ್ತೆಗೆ ಬಂದಾಗ, ಅಕಸ್ಮಾತ್ ಹೃದ್ರೋಗ ತಿಂತು, ದೈವಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ ಮೃತರು ಒಳ್ಳೇ ಉದಾರಿಗಳಾಗಿದ್ದರು. ಕಷ್ಟದಲ್ಲಿದ್ದವರಿಗೆ ನೆರವಾಗುತ್ತಿದ್ದರು, ತಮ್ಮ ಸಲಹೆ ಕೇಳಬಂದವರಿಗೆ ಅವರಿಗೆ ಗೊತ್ತಿದ್ದಷ್ಟರ ಮಟ್ಟಿಗೆ ಕಾಯಿದೆಯ ಸಲಹೆ ಮುಂತಾದ್ದು ಕೊಟ್ಟು ಸಹಾಯ ಮಾಡುತ್ತಿದ್ದರು ಪ್ರಾಯದ ದೃಷ್ಟಿಯಿಂದ ಅವರ ಈ ನಿಧನ ಅಕಾಲಿಕವೇ. ಮೃತಾತ್ಮಕ್ಕೆ ದೇವರು ಸದ್ಗತಿಯನ್ನೀಯಲಿ!

ಯಲ್ಲಾಪುರ— (ತಾ ೧-೨-೫೦) ಶಿರಸಿ ಜಿಲ್ಲೆಯ ಹಳ್ಳಿಯಲ್ಲಿಯ ಶೆಟ್ಟಿಗೆಯ ವ್ಯಾಪಾರ ಮಾಡು-

ತ್ತಿದ್ದ ರಾ॥ ತಿಮ್ಮಪ್ಪ ಮಾದು ನಾಯ್ಕ ಇವರು ನಿನ್ನೆ ತಮ್ಮ ಹುಟ್ಟೂರಿನೊಳಗಿನ ಮನೆಯಲ್ಲಿ ಪ್ರಾಯದ ೬೧ನೇ ವರುಷದೊಳಗೆ ವೈಕುಂಠವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ ಮೃತರು ಮೂಲದಲ್ಲಿ ಹೊನ್ನಾವರದವರು ನೌಕರಿ ಬಿಟ್ಟ ಬಳಿಕ ಶಿರಸಿ ಬಳಿಯಲ್ಲಿ ನೆಲೆಸಿ ಬಂದಿದ್ದರು ಕೆಲಕಾಲ ಲೋಕಲ್ ಬೋರ್ಡಿನ ಕಾರ್ಯಾಲಯದಲ್ಲಿ ಅವರು ಮುಖ್ಯ ರೆವಿನ್ಯೂ ಕಾರಕೂನರಾಗಿದ್ದರು, ಮುಂದೆ ಕೆಲವು ವರ್ಷ ಅಂಗಲ ಇಲಾಖೆಯಲ್ಲಿ ಫಾರೆಸ್ಟರರಾಗಿದ್ದರು ೧೯೩೩ರಲ್ಲಿ ಅವರು ಈ ನೌಕರಿಗೆ ರಾಜೀನಾಮೆ ಕೊಟ್ಟು ಶಿರವತ್ತಿಯಲ್ಲಿ ಶೆಟ್ಟಿಗೆಯ ವ್ಯಾಪಾರ ಮಾಡುತ್ತಿದ್ದರು, ಮುಖ್ಯ ಪ್ರಾಮಾಣಿಕತನದಿಂದ ಆ ವ್ಯಾಪಾರ ನಡಿಸಿ ಬೆಳಸಿ ಚಳೋ ಹೆಸರು ಮಾಡಿದ್ದರು ಸತ್ಕಾರ್ಯಗಳಿಗೆ ಅವರು ಯಾವಾಗಲೂ ಸಹಾಯ ಮಾಡುತ್ತಿದ್ದರು ಶಿರಸಿ ಕಾಲೇಜ ನಿಧಿಗೆ ಅವರು ರೂ ೧೦೦೦ ದಾನ ಕೊಟ್ಟಿದ್ದಾರೆ, ಕಾಲೇಜಿನ ಪ್ರಾರಂಭವಾದ ಮೇಲೆ ಇನ್ನಿಷ್ಟು ಹಣ ಕೊಡತಕ್ಕವರಾಗಿ ಅವರು ಆಶ್ವಾಸನೆ ಕೊಟ್ಟಿದ್ದರೆಂದು ತಿಳಿಯುತ್ತದೆ ಪರಮಾತ್ಮನು ಅವರಿಗೆ ಸದ್ಗತಿಯನ್ನೀಯಲಿ !

ಶಿರಸಿ— (ತಾ ೨—೨—೫೦) ಸರಕಾರದವರ ಭತ್ತ ಖರೇದಿಯಲ್ಲಿ ಉತ್ತಮ ಸಹಾಯ ಮಾಡಿದ ಮೊದಲನೇ ಗ್ರಾಮಕ್ಕೆ ರೂ ೧೦೦೦೦ ಮತ್ತು ೨ನೇ ಗ್ರಾಮಕ್ಕೆ ರೂ. ೫೦೦೦ ಇನಾಮು ಕೊಡಲಾಗುವದೆಂದು ಕಳೆದ ವರ್ಷ ಸರಕಾರವು ಜಾಹೀರ ಮಾಡಿತ್ತಷ್ಟೇ, ಸದರಿ ಇನಾಮುಗಳಲ್ಲಿ ಮೊದಲನೇ ಇನಾಮು (ರೂ ೧೦೦೦೦) ಬನವಾಸಿ ಗ್ರಾಮಕ್ಕೆ ಮತ್ತು ೨ನೇ ಇನಾಮು ಕಾರವಾರ ತಾಲೂಕಿನ ಮಲ್ಲಾಪುರ, ವಿರ್ಜೆ ಮತ್ತು ಕುಚೆಗಾರ ಈ ೩ ಹಳ್ಳಿಗಳಿಗೆ ಕೊಡಿ ಕೊಡಲಾಗಿದೆಂದು ಜಿಲ್ಲಾಧಿಕಾರು ತಿಳಿಸುತ್ತಾರೆ, ಇನಾಮಿನ ಈ ಹಣವು ಆಯಾ ಗ್ರಾಮಗಳ ಸಾರ್ವಜನಿಕ ಕಲ್ಯಾಣದ ಕಾರ್ಯಕ್ಕಾಗಿ ವಿನಿಯೋಗವಾಗತಕ್ಕದ್ದಿದೆ

ಇಲ್ಲಿಯ ಮಹಿಳಾ ಸಮಾಜದ ಚಟುವಟಿಕೆಗಳು ಉತ್ಸಾಹದಿಂದ ನಡೆದಿವೆ ಸಮಾಜದ ಕೆಲವು ಸದಸ್ಯೆಯರು ಕಳೆದ ತಿಂಗಳ ಪ್ರಾರಂಭಕ್ಕೆ ಧಾರ್ವಾಡ, ಸಾಗರ ಕಡೆ, ಜೋಗ ಮುಂತಾದ ಸ್ಥಳಗಳಲ್ಲಿ ಸಂಚಾರ ಮಾಡಿಕೊಂಡು ಬಂದರು ತಾ. ೧೯ಕ್ಕೆ ಸಮಾಜದ ಅರಿಶಿನ ಕುಂಕುಮದ ಸಮಾರಂಭ ನಡೆಯಿತು. ಆಗ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಸ್ತ್ರೀಯರಿಗೆ ಪ್ರಮಾಣ ಪತ್ರಗಳು ಹಂಚಲ್ಪಟ್ಟವು ಮೊನ್ನೆಯ ಪ್ರಜಾರಾಜ್ಯೋತ್ಸವದಲ್ಲೂ ಸಮಾಜದವರು ಸಭೆ ಮುಂತಾದ್ದು ಮಾಡಿ ಸ್ವತಂತ್ರವಾಗಿ ಉತ್ಸವ ಮಾಡಿದರು

ತಮ್ಮ ಸಮಿತಿಗೆ ಒಪ್ಪಿಸಿದ ಶಾಲೆಗಳ ಶಿಕ್ಷಕರ ಅಟ್ಟೆ-ಭತ್ತೆಯ ಸಂಬಂಧದಲ್ಲಿ ಇತ್ತು ದಿನ ತಾವು ವಿದ್ಯಾ ಇಲಾಖೆಯವರೊಡನೆ ಪತ್ರವ್ಯವಹಾರ ನಡೆಸಿದ್ದೇವೆಂದೂ, ಈಗ ಭತ್ತೆಯ ಪ್ರಮಾಣ-ಪಟ್ಟಿ ಸಿದ್ಧವಾಗಿದೆಂದೂ, ಆ ಪಟ್ಟಿಯಂತೆ ಕಳೆದ ತಾ ೧೫ ರಿಂದ ಹಿಂದಿನ ಬಾಕಿದ ಭತ್ತೆ ಹಣವನ್ನು (ಸಂಬದ್ಧ ಜಾ. ತೋರಿಸಿ ಬಾಕಿ) ಬಟವಡೆ ಮಾಡುತ್ತೇವೆಂದೂ, ಕೆಲವರಿಗೆ ಈ ಹಣ ಪಾವತಿಸಲು ವಿಳಂಬವಾದರೆ ಉದಾರವಿಲ್ಲೆಂದೂ ಕಾರವಾರ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ

(ತಾ. ೫-೨-೫೦) ಸಜ್ಜನಗಡ (ಮಹಾರಾಷ್ಟ್ರ)ದಿಂದ ಇದೀಗ ಇಲ್ಲಿ ಬಂದಿದ್ದರಿಂದ ಶ್ರೀಸಮರ್ಥ-ಶ್ರೀಧರಸ್ವಾಮಿಗಳು ನಿನ್ನೆ ಶೀಗೆಹಳ್ಳಿಯಿಂದ ಸಜ್ಜನಗಡಕ್ಕೆ ಹೊರಟು ಹೋಗುತ್ತಿದ್ದಾರೆ

ಸಿದ್ದಾಪುರ— (ತಾ ೨೬-೧-೫೦) ತಾ ೫ರಿಂದ ೧೧ರ ವರೆಗೆ ಈ ತಾಲೂಕಿನ ಕ್ಯಾಸ್ಸಿ ಗ್ರಾಮದಲ್ಲಿ ಘಟ್ಟದ ಮೇಲಿನ ಹಾಲಕ್ಕಿ ಕಾರ್ಯಕರ್ತರ ತರಬೇತಿಗಾಗಿ ಜಿಲ್ಲಾ ಗ್ರಾಮೋದ್ಧಾರ ಮಂಡಳದವರು ಒಂದು ವರ್ಗ ನಡಿಸಿದ್ದರು ಮುಂಡಗೋಡ ಶಿರ್ಸಿ ಮತ್ತು ಸಿದ್ದಾಪುರ ತಾಲೂಕುಗಳಿಂದ ಸುಮಾರು ೬೦ ಮಂದಿ ತರುಣರು (ಎಲ್ಲರೂ ರೈತರೇ) ಈ ವರ್ಗದಲ್ಲಿ ಸೇರಿದ್ದರು ವರ್ಗದ ಉದ್ಘಾಟನೆ ಶಿರ್ಸಿಯ ವಕೀಲ ರಾ॥ ಸುಂದರ ಪಂಡಿತರ ಹಸ್ತದಿಂದ ಜರುಗಿದ್ದು ಮುಕ್ತಾಯ ರಾ॥ ಶಾಸ್ತ್ರಿ ಗಜಾನನ ಭಟ್ಟರ ಹಸ್ತದಿಂದ ಆದವು ಬೇರೆ ಬೇರೆ ತಜ್ಞರು ವರ್ಗದಲ್ಲಿ ವ್ಯಾಖ್ಯಾನ, ಪ್ರವಚನ, ಉಪನ್ಯಾಸಗಳನ್ನು ಕೊಟ್ಟು ಹಳ್ಳಿಯ ಕಾರ್ಯಕರ್ತರಿಗೆ ಉಪಯುಕ್ತವಿರುವ ಜ್ಞಾನ ಮಾಡಿಕೊಟ್ಟರು

ಕೆಲ ಕಾಲ ಸಿದ್ದಾಪುರ ತಾಲೂಕಿನ ಪ್ರತಿನಿಧಿಗಳಾಗಿ ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿದ್ದ ರಾ॥ ಸಾ॥ ಚನ್ನಬಸಪ್ಪ ಗೌಡಾ ಹೆಗ್ಗೋಡಮನೆ ಇವರು ಕಳೆದ ತಾ ೨೬ನೇ ದಿನ, ತಮ್ಮ ಪ್ರಾಯದ ೬೭ನೇ ವರುಷದಲ್ಲಿ, ಶಿವಾಧೀನರಾದರೆಂದು ತಿಳಿಸಲು ದುಃಖವಾಗುತ್ತಿದೆ, ಮೃತರು ಸ್ಥಾನಿಕ ಸಾರ್ವಜನಿಕ ಕಾರ್ಯಗಳಲ್ಲಿ ಯಾವಾಗಲೂ ಮುಂದಾಳಾಗಿ ದುಡಿಯುತ್ತಿದ್ದರು ಕೈಲಾಸನಾಥನು ಅವರಿಗೆ ಸದ್ಗತಿಯನ್ನೀಯಲಿ !

೧೯೪೮ನೇ ಇಸವಿಯ ೩೩ನೇ ಕಾನೂನಿನ ಕಲಮ ೬ (೧) ರನ್ವಯ ಹೊರಡಿಸಿದ ಜಾಹೀರನಾಮೆ

ಜಾಹೀರನಾಮೆ.

ನಂ. ೦/೫ ೨೯-೬-೫—೧೯೪೮ನೇ ಇಸವಿಯ ಮುಂಬಯಿಯ ಭೂಮಿ ಕಬಜೆಪಡಿಸಿಕೊಳ್ಳುವ ಕಾನೂನಿನ (೧೯೪೮ರ ೩೩ನೇ ಕಾನೂನಿನ) ೬ನೇ ಕಲಮಿನ (೧)ನೇ ಉಪಕಲಮಿನನ್ವಯ ತನಗಿದ್ದ ಅಧಿಕಾರವನ್ನು ಮುಂಬಯಿ ಸರಕಾರವು ತಾ ೮—೧೧—೧೯೪೮ಕ್ಕೆ ೧ ೧೯೪೮/೧೧೦೩೭೬—೧ (೪) ಕ್ರಮಾಂಕದ ಸರಕಾರಿ ಪ್ರಕಟನೆಯನ್ನು ಹೊರಡಿಸಿ ಕಾನಡಾ ಜಿಲ್ಲೆಯ ಕಲೆಕ್ಟರರಿಗೆ ಒಪ್ಪಿಸಿರುವದರಿಂದ, ಆ ಅಧಿಕಾರವನ್ನು ಪ್ರಯೋಗಿಸಿ ಸದರಿ ಜಿಲ್ಲಾ ಕಲೆಕ್ಟರರು ವಿಧಿಸುತ್ತಾರೇನೆಂದರೆ —

(೧) ಕಾರವಾರ ಮತ್ತು ಶಿರ್ಸಿ ನಗರಸಭೆಗಳ ಅಧಿಕಾರಕ್ಷೇತ್ರಗಳೊಳಗೆ ಬರುವ ಕ್ಷೇತ್ರವು ಸದರಿ ಕಾನೂನಿನ ಕಕ್ಷೆಯಲ್ಲಿ ಬರುತ್ತದೆ, ಮತ್ತು

(೨) ಕಾರವಾರ (ನಗರ) ದಲ್ಲಿರುವ ಹುಜೂರ ಮಾಮಲೇದಾರರಿಗೆ ಸದರಿ (೧)ನೇ ಉಪಕಲಮಿನನ್ವಯ ಕೆಲಸ ನಡೆಸಲು ಅಧಿಕಾರ ಕೊಡಲಾಗಿದೆ

ಕಾರವಾರ, **M. K. Jadhav.**

ತಾ ೨೮-೧-೧೯೫೦ ಕಲೆಕ್ಟರ, ಜಿಲ್ಲಾ ಕಾನಡಾ

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ ಚಕರಾ ಹುರಿ, ಬಾವಿ ಹಗ್ಗ, ಬ್ರಶ ಮೆಟ, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಚೆಅರಮನ್, ಕೊಯರ್ ಸೊಸೈಟಿ ಲಿಮಿಟೆಡ್,

ಹೊನ್ನಾವರ (ಉ ಕ)

Reg. No. B. 1270

Monday, 13-2-1950

ಕಾನಡಾವೃತ್ತ

ವರ್ಷ ೩೨.] THE KANARA NEWS [ಸಂಚಿಕೆ ೩೩.

ಕಾರವಾರ ಸೋಮವಾರ, ತಾ ೧೩—೨—೧೯೫೦

ವರ್ಗಣಿಯ ದರ:
ಟಪಾಲಿನಿಂದ ವರ್ಷಕ್ಕೆ ರೂ ೩|
ಊರಿನಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ೦-೧-೬
ವರ್ಗಣಿದಾರರು ಹಣ ಮುಂಗಡ ಕೊಡಬೇಕು.
ವರ್ಗಣಿಯ ಹಣವನ್ನು ಮುಂಗಡ ಕಳುಹಿಸತಕ್ಕದ್ದು

ಜಾಹೀರಾತುಗಳ ದರ
೧೫ ಶಬ್ದ ಉದ್ದ ... ಪ್ರತಿ ಸಾರಿಗೆ ... ಆಣೆಯಂತೆ
ವಿಶೇಷ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಥವಾ ಪತ್ರದ್ವಾರಾ
ವಿಚಾರಿಸಿರಿ.

ವಿವಿಧ ವಿಷಯಗಳು.

—*—

ನಮ್ಮ ಪ್ರಜಾ-ರಾಜ್ಯದ ರಾಷ್ಟ್ರಪತಿಗಳಿಗೆ ತಿಂಗಳೊಂದರ ರೂ ೧೦೦೦೦ ವೇತನ ಕೊಡಬೇಕೆಂದು ಘಟನೆಯಲ್ಲಿ ಹೇಳಿರುತ್ತದಷ್ಟೇ. ಆದರೆ ಈಗ ನಮ್ಮ ನಾಡಿನಲ್ಲಿ ಎಲ್ಲೆಲ್ಲೂ ರಾಜ್ಯದಂಡಳಿತದ ವೆಚ್ಚವನ್ನು ಕಡಿಮೆ ಮಾಡುತ್ತಿರುವ ದೃಷ್ಟಿಯಿಂದ ಬಹುಷ್ಟು ಪ್ರಾಂತಾಧಿಕಾರಿಗಳೂ ಉಚ್ಚ ಅಧಿಕಾರಿಗಳೂ ತಮ್ಮ ವೇತನದಲ್ಲಿ ನೂರಕ್ಕೆ ೧೦, ೧೫ರಷ್ಟು ಕಡಿತವನ್ನು ಸ್ವಯಂಸ್ಫೂರ್ತಿಯಿಂದಲೂ ಸ್ವೇಚ್ಛೆಯಿಂದಲೂ ಮಾಡಿಕೊಳ್ಳುತ್ತಿರುವಂತೆ ರಾಷ್ಟ್ರ-ಪತಿ ರಾಜೇಂದ್ರ ಪ್ರಸಾದರೂ ಕೂಡ ನೂರಕ್ಕೆ ೧೫ರಂತೆ ತಮ್ಮ ವೇತನದಲ್ಲಿ ಕಡಿತ ಮಾಡಿಕೊಳ್ಳಲು ನಿಶ್ಚಯಿಸಿರುತ್ತಾರೆ. ಆದರಿಂದ ಅವರಿಗೆ ಪ್ರತಿ ತಿಂಗಳು ೮|| ಸಾವಿರ ರೂಗಳಷ್ಟೇ ವೇತನ ಸಿಗುವದು. ಇದರ ಮೇಲೆ ಪುನಃ ಅವರು ಆದಾಯ ತೆರಿಗೆ ಮತ್ತು ಮೇಲ್ತೆರಿಗೆ (ಸೂಪರ-ಟೆಕ್ಸ) ತೆರುವದುಂಟು. ರೂ ೮೫೦೦ರಂತೆ ಅವರ ವಾರ್ಷಿಕ ವೇತನ ರೂ ೧೦೨,೦೦೦ ಆಗುತ್ತಿದೆ. ಇದರ ಮೇಲೆ ಅವರು ರೂ ೩೦೭೮೩ ಆದಾಯ ತೆರಿಗೆ ಮತ್ತು ೧೬|| ಸಾವಿರ ರೂ ಮೇಲ್ತೆರಿಗೆ ತೆರಬೇಕು. ಈ ತೆರಿಗೆಗಳೆಲ್ಲ ವಜಾ ಹೋಗಲಾಗಿ ತಿಂಗಳೊಂದರ ರೂ ೪|| ಸಾವಿರಕ್ಕಿಂತ ತುಸು ಹೆಚ್ಚು ಹಣ ರಾಜೇಂದ್ರರ ಕೈಗೆ ಮುಟ್ಟುವದು.

∴

ಕಾಶ್ಮೀರ ಪ್ರಕರಣದಲ್ಲಿ, ಭದ್ರತಾ ಮಂಡಳದ ಕಾಶ್ಮೀರ ಸಮಿತಿಯು ಕೊನೆಗೆ ತನ್ನಿಂದ ಈ ಪ್ರಕರಣ ಸುಧಾರಿಸಲು ಶಕ್ಯವಿಲ್ಲೆಂದು ಕಳೆದ ವರ್ಷದ ಕೊನೆಗೆ ಭದ್ರತಾ-ಮಂಡಳಕ್ಕೆ ವರದಿಯೊಪ್ಪಿಸಿದ ಮೇಲೆ ಭದ್ರತಾ-ಮಂಡಳದ ಒರ್ವ ಸದಸ್ಯರಾದ ಜನರಲ್ಲ ಮೆಕ್ನೊಟನ್ನರವರು ವ್ಯಕ್ತಿಶಃ ಕೆಲ ಕಾಲ ಭಾರತ-ಪಾಕಿಸ್ತಾನಗಳೊಳಗೆ ಏನಾದರೊಂದು ಮಧ್ಯಸ್ಥಿಕೆ ಮಾಡಿ ತರಲು ಪ್ರಯತ್ನಿಸಿದರು. ಆದರೆ ಕಾಶ್ಮೀರ ಸಮಿತಿಯಂತೆ ಇವರಾದರೂ ಸುಸ್ಪಷ್ಟ ಸಂಗತಿಗಳ ಮೇಲಿಂದ ಹೊರಡುವ ಸಿದ್ಧಾಂತಗಳನ್ನು ಮಾಡಿ ಪಾಕಿಸ್ತಾನವನ್ನು ದೋಷಿಯೆಂದು ನಿರ್ಣಯಿಸಲು ಧೈರ್ಯಗೊಳ್ಳಲಿಲ್ಲ! ಆದರಿಂದ ಅವರ ಪ್ರಯತ್ನವೂ ವಿಫಲವಾಯಿತು. ಈಗ ಭಾರತ-ಪಾಕಿಸ್ತಾನಗಳೊಳಗಿನ ವಿಚಾರವನ್ನು ಸ್ವತಃ ಭದ್ರತಾ ಮಂಡಳವೇ ಕೇಳಿಕೊಳ್ಳಲಾರಂಭಿಸಿದೆ. ಕಳೆದ ವಾರ ಹಿಂದುಸ್ತಾನದ ಪರವಾಗಿ ಸರ್ ಬೆನಗಲ ನರಸಿಂಗರಾಯರು ಕಾಶ್ಮೀರದ ಸಂಬಂಧದಲ್ಲಿ ಪಾಕಿಸ್ತಾನದ ಅಪಕೃತ್ಯಗಳನ್ನೆಲ್ಲ ವಿವರವಾಗಿ ವಿವರಿಸಿ, ಹಿಂದುಸ್ತಾನದ ಭೂಮಿಕೆಯನ್ನು ಮಂಡಳದ ಮುಂದಿಟ್ಟರು. ಅವರ ವಿವೇಚನೆಯೂ ಮಂಡನವೂ ಸಭಾಸದರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿತೆಂದು ಬಲ್ಲವರು ಹೇಳುತ್ತಾರೆ. ನರಸಿಂಗರಾಯರ ಹಿಂದಿನಿಂದ, ಪಾಕಿಸ್ತಾನದ ವಿದೇಶಮಂತ್ರಿಗಳಾದ ಸರ್ ಝಾಫರುಲ್ಲಾ ಖಾನರು ೩ ದಿನಗಳವರೆಗೆ ವಾಗ್ವಾದ ಮಾಡಿದರು. ಕಾಶ್ಮೀರದ ಮೇಲೆ ಪಾಕಿಸ್ತಾನವು ದಾಳಿ ಮಾಡಿದ್ದು ಸುಳ್ಳು ಇರುತ್ತದೆಂದಾಗಲಿ, ಒಂದಿಷ್ಟು ಕಾಶ್ಮೀರ ಪ್ರಕರಣದಲ್ಲಿ ನ್ಯಾಯ-ಹಾನಿ ಪಾಕಿಸ್ತಾನದ ಮೇಲೆ ದ ದೆಶೆ ಬಂತೆಂದಾಗಲಿ ಅವರು ಒಪ್ಪದೆ, ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಬೇಕಾಗಿದೆಯೆಂದೂ ಪಾಕಿಸ್ತಾನದಲ್ಲಿ ಹರಿದು ಬರುವ ಮುಖ್ಯ ಹೊಳೆಗಳು ಕಾಶ್ಮೀರದ ಕಡೆಯಿಂದ ಹರಿದು ಬರುತ್ತವೆಂದೂ ಪಾಕಿಸ್ತಾನದ ಹೆದ್ದಾರಿಗಳು ಕಾಶ್ಮೀರದ ಮೇಲಿಂದ ಹಾದು ಹೋಗುತ್ತವೆಂದೂ ಕಾಶ್ಮೀರದ ಜನತೆಯ ನಿಯಾಮಕ ಸ್ವಭಾವ ಪಾಕಿಸ್ತಾನದೊಡನೆ ಸರಿಯುತ್ತದೆಂದೂ, ಪಾಕಿಸ್ತಾನದ ಭದ್ರತೆಯ ಬಗ್ಗೆ ಕಾಶ್ಮೀರವು ಪಾಕಿಸ್ತಾನಕ್ಕೆ ಬೇಕೆಂದೂ ವಾದಿಸಿದರು. ಕಾಶ್ಮೀರವು ಪಾಕಿಸ್ತಾನದ ದೈವೀಹ ಮಾತ್ರ. ಆದರಿಂದ ಪಾಕಿಸ್ತಾನ ಸರಕಾರವು ತನ್ನ ಸೈನ್ಯವನ್ನು ಅಲ್ಲಿ ಕಳಿಸಿತು. ಇಲ್ಲವೆ ಗುಡ್ಡಗಾಡು ಜನರನ್ನು ಬಂಡಾಯ ಹೂಡಲು ಪ್ರೇರೇಪಿಸಿತು ಎಂದು ಸರ್ ಝಾಫರುಲ್ಲಾರವರ ವಾದವಿಲ್ಲ. ಕಾಶ್ಮೀರ ನಮಗೆ ಬೇಕು, ಅದು ನಮಗೆ ಸಿಗುವಂತೆ ಮಾಡಿರಿ, ಎಂಬಂತೆ ಅವರು ವಾದಿಸಿದರು. ಸರ್ ಬೆನಗಲ ನರಸಿಂಗರಾಯರು ಸರ್ ಝಾಫರುಲ್ಲಾರವರ ವಾದಕ್ಕೆ ತಕ್ಕ ಉತ್ತರ ಕೊಟ್ಟಿರುತ್ತಿದ್ದು ಭದ್ರತಾ ಮಂಡಳವೀಗ ಉಭಯ ಪಕ್ಷಗಳ ಹೇಳಿಕೆಗಳನ್ನು ಅಭ್ಯಸಿಸಹತ್ತಿದೆ. ಭದ್ರತಾ ಮಂಡಳದ ನಿರ್ಣಯವು ಬಹುಶಃ ಮುಂದಿನ ವಾರ ಹೊರಬೀಳುವದು.

∴

ಕಾಶ್ಮೀರಿಗಳು ತಮ್ಮ ಭವಿತವ್ಯವನ್ನು ತಾವೇ ನಿರ್ಣಯಿಸಲಿ, ಅವರು ತಮಗೆ ಇಷ್ಟ ಕಂಡರೆ ಭಾರತವನ್ನು ಸೇರಲಿ, ಇಲ್ಲವಾದರೆ ಪಾಕಿಸ್ತಾನವನ್ನು ಸೇರಲಿ, ಜನಮತ-ಗಣನೆಯಿಂದ ಅವರ ನಿರ್ಣಯ ತಿಳಿಕೊಳ್ಳುವಾ, ಎಂದು ಭಾರತ ಸರಕಾರವು ಮೊದಲಿನಿಂದಲೂ ಹೇಳುತ್ತ ಬಂದಿದೆ. ಈಗಲಾದರೂ ಅದರ ನಿಲುಮೆ ಅದೇ ಉಂಟು. ಪಾಕಿಸ್ತಾನಿ ಸೈನ್ಯವು, ಕಾಶ್ಮೀರದಿಂದ ಮೊದಲು ಹೊರಬೀಳಬೇಕು, ಪಾಕಿಸ್ತಾನವು ಎಬ್ಬಿಸಿಕೊಟ್ಟ ಗುಡ್ಡಗಾಡು ಪುಂಡರೂ ಅಲ್ಲಿಂದ ಹೊರಬೀಳಬೇಕು, ಕಾಶ್ಮೀರಿಗರು ಸ್ವತಂತ್ರ ನಿರ್ಣಯ ಮಾಡಲು ಅನುಕೂಲವಾಗುವಂತಹ ಶಾಂತ ಪರಿಸ್ಥಿತಿ ಮೊದಲು ಉಂಟಾಗಬೇಕು, ಆ ನಂತರ ಜನ-ಮತಗಣನೆಯಾಗಲಿ, ಎಂದು ಮಾತ್ರ ಭಾರತವು ಕರಾರು ಹಾಕಿದೆ, ಪಾಕಿಸ್ತಾನಿಗಳಾದರೂ ಜನಮತಗಣನೆಗೆ ಬಾಹ್ಯತಃ ಒಪ್ಪುತ್ತಾರೆ. ಆದರೆ ಕಾಶ್ಮೀರಿಗಳ ಮೇಲೆ ಭೀತಿ-ಪೆಡಂಭೂತಗಳ ಒತ್ತಾಯ ಬಿಡದಂತೆ ಶಾಂತತೆಯ ಮತ್ತು ಸುರಕ್ಷಿತತೆಯ ಪರಿಸ್ಥಿತಿ ಮೊದಲುಂಟಾಗಬೇಕು ಎಂಬ ಮಾತನ್ನು ಮಾತ್ರ ಅವರು ಒಪ್ಪುತ್ತಿಲ್ಲ, ಇನ್ನೂ ಒಪ್ಪಿದವಿಲ್ಲ. ಕಾಶ್ಮೀರದ ೪/೫ ಪ್ರಜೆಗಳು ಮುಸಲ್ಮಾನರಿರುತ್ತಾರೆ. ಅವರಲ್ಲಿ ಅವರನ್ನು ಧರ್ಮದ ಹೆಸರು ಹೇಳಿ ಕೆಲವರಿಗೆ ಭೀತಿ ಹಾಕಿ ಹಾಗೂ ಪಾಕಿಸ್ತಾನದ ದಾಳಿಗಾರರಿಗೆ ಅಂಜಿ ಊರು ಬಿಟ್ಟು ಹೋದವರು ಮತದಾನ ಮಾಡಲು ನಿರ್ಭಯರಾಗಿ ತಿರುಗಿ ಊರಿಗೆ ಬರದಂತೆ ಮಾಡಿ ಮತ್ತು ಪಾಕಿಸ್ತಾನ ಆಕ್ರಮಿತ ಪ್ರದೇಶದಲ್ಲಿ ಒಂದು ತುಂಬಿದ ಪರಸ್ಥಳದವರೆಲ್ಲ ತಾವು ಕಾಶ್ಮೀರಿಗಳೆಂದು ಹೇಳಿ ಮತದಾನ ಮಾಡುವಂತೆ ಮಾಡಿ ಜನಮತಗಣನೆಯ ಪಂದ್ಯಾಟವನ್ನು ತಾನು ಗೆಲ್ಲಬೇಕೆಂದು ಪಾಕಿಸ್ತಾನದ ಮನಸ್ಸಿನಲ್ಲಿತ್ತು. ಇಷ್ಟೆಲ್ಲ ಮಾಡಿಯೂ ಕಾಶ್ಮೀರಿಗಳ ಬಹುಮತ ಪಾಕಿಸ್ತಾನಕ್ಕೆ ಸಿಗುವಂತಿಲ್ಲೆಂದು ಈಗ ಪಾಕಿಸ್ತಾನ ಸರಕಾರಕ್ಕೆ ಸ್ಪಷ್ಟ ಕಾಣಹತ್ತಿದೆಯೋ ಏನೋ! ಈಗ ಅದು ಜನಮತಗಣನೆಯ ಮಾತನ್ನೇ ಎತ್ತುವದಿಲ್ಲ! ಅಷ್ಟೇ ಅಲ್ಲ, ನೀವು ಜನಮತ-ಗಣನೆ ಮಾಡಿರಿ ಅಥವಾ ಇನ್ನೇನೂ ಮಾಡಿರಿ, ಕಾಶ್ಮೀರ ನಮ್ಮದು, ಅದು ನಮಗೆ ಬೇಕು, ಅದು ಸಿಗುವ ವರೆಗೆ ನಮಗೆ ಶಾಂತಿಯಿಲ್ಲ, ಸಮಾಧಾನವಿಲ್ಲ ಎಂದು ಮುಂತಾಗಿ ಪಾಕಿಸ್ತಾನದ ಮಹಾಮಂತ್ರಿಗಳಾದ ಜನಾಬ ಲಿಯಾಕತ್ ಅಲಿಖಾನರೇ ಮೊದಲುಗೊಂಡು ಯಚ್ಚಯಾವತ್ ಪಾಕಿಸ್ತಾನಿ ವಾಗ್ವೀರರು ಕಂಠ ಊದಹತ್ತಿದ್ದಾರೆ! ಇದರ ಮೇಲಿಂದ ಕಾಶ್ಮೀರವನ್ನು ಹೇಗಾದರೂ ಮಾಡಿ, ನ್ಯಾಯಾನ್ಯಾಯಗಳ ಅಥವಾ ಪಾಪ-ಪುಣ್ಯಗಳ ಪರಿವೆ ಹಿಡಿಯದೆ ಆಕ್ರಮಿಸಬೇಕೆಂಬುದೇ ಪಾಕಿಸ್ತಾನಿಗಳ ಮನೋನಿಶ್ಚಯವಿರುತ್ತದೆಂಬುದು ಸಿದ್ಧವಾಗುತ್ತಿದೆ. ಪಾಕಿಸ್ತಾನಿಗಳ ಈ ನಿಲುಮೆಯನ್ನಾದರೂ ಕಂಡು, ಜಗತ್ತಿನಲ್ಲಿ ನ್ಯಾಯ-ಶಾಂತಿಗಳ

THE BANK OF RURAL NDIA LTD.

(Incorporated in Indian Union Liability of Members Limited)

HEAD OFFICE — "Satvabhama Bhuvanam, KARWAR. N K

Wishes Peace, Prosperity and Plenty in the

NEW YEAR

1950

to all its share-holders, customers and well—wishers.

Karwar,
1st Jan, 1900

P X GRACIOUS
MANAGING DIRECTOR

ಸಾಮ್ರಾಜ್ಯ ಸ್ಥಾಪಿಸಲೆಂದು ಜನ್ಮವೆತ್ತ ಜಾಗತಿಕ ಯುಕ್ತರಾಷ್ಟ್ರಸಂಘದ ಭದ್ರತಾ ಮಂಡಳದ ಸದಸ್ಯರು ಮಾನಸಿನಲ್ಲಿ ಯಾವದೇ ತರದ ಅಡ್ಡಪರದೆಯನ್ನಿಡದೆ ಭಾರತ ಪಾಕಿಸ್ತಾನಗಳ ವಾದದಲ್ಲಿ ಶುದ್ಧ ನ್ಯಾಯ ನಿರ್ಣಯ ಕೊಡುವರೆ?

* *

ಭಾರತ ಪಾಕಿಸ್ತಾನಗಳೊಳಗಿನ ದಾಯಾದ-ಮತ್ಸರವು ದಿನಗಳುರುಳಿದಂತೆ ಕಡಿಮೆಯಾಗುವದರ ಬದಲು ಹೆಚ್ಚುತ್ತ ಹೋಗುತ್ತಿದೆ! ಹಿಂದುಸ್ಥಾನ ಪಾಕಿಸ್ತಾನಗಳು ಹೊಂದಿಕೊಂಡಿರುವದರಿಂದ ಪರಸ್ಪರರೊಳಗೆ ಹಲವಾರು ಬಗೆಯ ವ್ಯವಹಾರಗಳು ನಡೆಯಬೇಕಾದುದು ಸ್ವಾಭಾವಿಕ. ಅದಲ್ಲದೆ ಎರಡೂ ದೇಶಗಳು ಮೊನ್ನೆ ಮೊನ್ನೆಯ ವರೆಗೆ ಒಂದೇ ಇದ್ದುದರಿಂದ ಉಭಯ ದೇಶಗಳಲ್ಲೂ ಶಾಖೆ-ಪ್ರತಿಶಾಖೆಗಳುಳ್ಳ ಹಲವಾರು ಬ್ಯಾಂಕುಗಳು, ವಿಮಾ ಕಂಪನಿಗಳು, ವ್ಯಾಪಾರಿ ಸಂಸ್ಥೆಗಳು ಮುಂತಾದವಿವೆ. ಇವುಗಳ ಆಸ್ತಿ-ಪಾಸ್ತಿಗಳ ವ್ಯವಸ್ಥೆಯ ಸಂಬಂಧದ ಉಭಯ ಸರಕಾರಗಳಲ್ಲಿ ತಂಟೆಗಳುಂಟಾಗುವದು ಸಹಜ. ದೇಶ ವಿಚ್ಛೇದನದ ಪರಿಣಾಮವಾಗಿ ದೇಶತ್ಯಾಗ ಮಾಡಿದ ಲಕ್ಷಾವಧಿ ನಿರಾಶ್ರಿತರ ಆಸ್ತಿ-ಪಾಸ್ತಿಗಳ ವ್ಯವಸ್ಥೆ ಮಾಡುವ ಸಮಸ್ಯೆಯುಂಟು. ಇವೆಲ್ಲ ಸಮಸ್ಯೆಗಳನ್ನು ಪರಸ್ಪರ ವಿಚಾರ-ವಿನಿಮಯದಿಂದ ಬಗೆಹರಿಸಿಕೊಳ್ಳಬೇಕೆಂದು ಇತ್ತಕ್ಕೆಯವರೂ ಒಪ್ಪಿಕೊಂಡು ಆ ಬಗ್ಗೆ ಆಗಾಗ ತಮ್ಮ ಪ್ರತಿನಿಧಿ ಮಂಡಳಗಳನ್ನು ಕಳಿಸಿ, ವಿಚಾರ ವಿನಿಮಯ ಮಾಡಿ, ಹಲವಾರು ಒಮ್ಮತದ ನಿರ್ಣಯಗಳನ್ನೂ ಕರಾರುಗಳನ್ನೂ ಈ ತನಕ ಮಾಡಿಕೊಂಡಿವೆ. ಆದರೆ ಪಾಕಿಸ್ತಾನ ಸರಕಾರವು ಇವೆಲ್ಲ ನಿರ್ಣಯ-ಕರಾರುಗಳಲ್ಲಿ ತನಗೆ ಅನುಕೂಲವಿದ್ದಷ್ಟು ಭಾಗವನ್ನು ಎತ್ತಿಕೊಂಡು, ಪ್ರತಿಕೂಲವಿರುವ ಭಾಗಗಳನ್ನು ಅಲಕ್ಷಿಸುತ್ತ ಬಂದಿದೆ, ಅಥವಾ ಅವುಗಳ ಅಪಾರ್ಥ ಮಾಡಿ ಒಂದಕ್ಕೊಂದು ಮಾಡುತ್ತದೆ! ಆದರಿಂದ ಈಗ ಹಿಂದುಸ್ಥಾನ ಸರಕಾರವು ಈ ವಿಚಾರ-ವಿನಿಮಯದ ಮಾರ್ಗವನ್ನೇ ಸದ್ಯಕ್ಕೆ ಬಿಟ್ಟುಕೊಡಬೇಕಾಗಿದೆ. ಕೆಲವೊಮ್ಮೆ ಅಸಹಕಾರದ ಮಾರ್ಗವನ್ನೂ ಅನುಸರಿಸಿ ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವ ದಾರಿ ಹಿಡಿಯಬೇಕಾಗಿದೆ. ಇಷ್ಟು ಮಾಡಿದರೂ ಪಾಕಿಸ್ತಾನವು ಸರಿ-ದಾರಿಗೆ ಬರುವದಿಲ್ಲ, ತದ್ವಿರುದ್ಧ ಹೊಸ ಹೊಸ ತಂಟೆಗಳನ್ನು ಉಪಸ್ಥಿತ ಮಾಡಿ ಹೊಸ ಹೊಸ ಕಲಹ-ಕಾರಣಗಳನ್ನು ಬಿತ್ತುತ್ತಿದೆ. ಪಾಕಿಸ್ತಾನದಿಂದ ಓಡಿಬಂದ ಹಿಂದು-ಶೀಖರು ತಮ್ಮ ಹಿಂದೆ ಬಿಟ್ಟು ಬಂದ ಆಸ್ತಿಯ ಬೆಲೆ ೧೪೦೦ ಕೋಟಿ ರೂಗಳಷ್ಟಿದ್ದರೆ, ಹಿಂದುಸ್ಥಾನ ಬಿಟ್ಟು ಪಾಕಿಸ್ತಾನಕ್ಕೆ ಹೋದವರ ಆಸ್ತಿಯ ಬೆಲೆ ಬರೇ ೪೦೦ ಕೋಟಿ ರೂ ಆಗುತ್ತಿದೆ. ಈ ಆಸ್ತಿಗಳನ್ನು ಬಿಟ್ಟು ಬಂದು-ಹೋದವರಿಗೆ ಯೋಗ್ಯ ಪರಿಹಾರ ಕೊಡುವ ಮಾತನ್ನಂತೂ ಪಾಕಿಸ್ತಾನವು ಈಗ ಸಂಪೂರ್ಣ ಮರೆತುಬಿಟ್ಟಿದೆ! ಇಷ್ಟರಿಂದಲೇ ಅದರ ಪಾಪಿ ತೃಷ್ಣೆಯು ತೃಪ್ತಿಯಾಗಿಲ್ಲ! ಹಿಂದುಸ್ಥಾನ-ಪಾಕಿಸ್ತಾನಗಳೊಳಗಿನ ದೇವಾಲಯ ಮಸೀದೆಗಳಿಗೆ ಯಾವದೇ ಬಗೆಯ ಉಪಸರ್ಗವಾಗಕೂಡದೆಂಬ ಕರಾರು ಭಾರತ-ಪಾಕಿಸ್ತಾನಗಳ ಸರಕಾರಗಳೊಳಗೆ ಆಗಿತ್ತು. ಆದರೆ ಪಾಕಿಸ್ತಾನವು ಈ ಕರಾರನ್ನು ಉಲ್ಲಂಘಿಸಿ ತನ್ನಲ್ಲಿರುವ ಪವಿತ್ರವಾದ ಎಲ್ಲ ದೇವಾಲಯಗಳನ್ನು ಇಲ್ಲವೆ ಶೀಖರ ಗುರುದ್ವಾರಗಳನ್ನು ಹೊಟೆಲ ಕ್ಲಬಗಳನ್ನು ಇಡಲಿಕ್ಕೂ ರಾಷ್ಟ್ರ-ರಕ್ಷಕ ದಳ ಮುಂತಾದವುಗಳ ಕಚೇರಿಗಳನ್ನಿಡಲಿಕ್ಕೂ ಕೊಟ್ಟಿದೆಂದು ನಂಬಿಗಸ್ತ ಸುದ್ದಿಗಳು ಬಂದಿವೆ! ಕೆಲವೊಂದು ಮಂದಿರಗಳಲ್ಲಿ ಕಟುಕರ ಅಂಗಡಿಗಳನ್ನು ತೆರೆಯಗೊಟ್ಟಿದೆಯಂತೆ!! ಪಾಕಿಸ್ತಾನದಲ್ಲಿ ಇದ್ದ ಅಲ್ಪ-ಸ್ವಲ್ಪ ಹಿಂದುಗಳನ್ನು ಕಾಡಿ-ಪೀಡಿಸಿ ಅವರನ್ನು ಹಿಂದುಸ್ಥಾನಕ್ಕೆ ಓಡಿಸುವ ಉಪಕ್ರಮವೂ ಅವ್ಯಾಹತವಾಗಿ ನಡೆದಿದೆ! ಈಗ ಪೂರ್ವ ಪಾಕಿಸ್ತಾನದಲ್ಲೂ ಹಿಂದುಗಳ ಉಚ್ಚಾಟನೆ ಮಾಡುವ ಉದ್ಯೋಗಕ್ಕೆ ಆರಂಭವಾಗಿದೆ. ಸಾವಿರಗಟ್ಟಲೆ ಹಿಂದುಗಳು ಪೂರ್ವ ಬಂಗಾಲವನ್ನು ಬಿಟ್ಟು ಪಶ್ಚಿಮ ಬಂಗಾಲದಲ್ಲಿ ನುಗ್ಗುತ್ತಿದ್ದಾರೆ! ಹಿಂದುಗಳ ವಿರುದ್ಧ, ಹಿಂದುಸ್ಥಾನದ ವಿರುದ್ಧ ಪಾಕಿಸ್ತಾನ ತುಂಬ ಪ್ರಚಾರ ನಡೆದಿದೆ. ಹಿಂದೀ ರಾಗ-ರಾಗಿಣಿಗಳನ್ನು ಪಾಕಿಸ್ತಾನದಲ್ಲಿ ಹಾಡಕೂಡದೆಂಬ ಪ್ರತಿಬಂಧಕ ಆಜ್ಞೆ ಸಹ ಹೊರಟ ವರ್ತಮಾನವುಂಟು! ಇನ್ನೂ ಮುಂದೆ ಹೋಗಿ ಪಾಕಿಸ್ತಾನವೀಗ ಹಿಂದ-ಹಿತಶತ್ರುಗಳೊಡನೆ ಗೆಳೆತನ ಬೆಳೆಸಲಾರಂಭಿಸಿದೆ. ದಕ್ಷಿಣ ಆಫ್ರಿಕೆಯ ಸರಕಾರವು ವರ್ಣದ್ವೇಷದಿಂದ ಪ್ರೇರಿತವಾಗಿ, ತನ್ನಲ್ಲಿ ನೆಲೆಸಿರುವ ಹಿಂದೀ ಜನರ— ಇವರಲ್ಲಿ ಮುಸಲ್ಮಾನರೂ ಇದ್ದಾರೆ!— ಉಚ್ಚಾಟನೆ ಮಾಡುವ ಕಾನೂನುಗಳನ್ನೂ ಮಾಡಿದಾಗ ೧೯೪೬ರಲ್ಲಿ ಆ ಕಾಲದ ಹಿಂದೀ-ಬ್ರಿಟಿಶ ಸರಕಾರವು ಕೂಡ ಉದ್ರೇಕಗೊಂಡು ದಕ್ಷಿಣ ಆಫ್ರಿಕೆಯ ವಿರುದ್ಧ ವ್ಯಾಪಾರಿ ಬಹಿಷ್ಕಾರ ಹಾಕಿತ್ತು. ದೇಶ-ವಿಚ್ಛೇದನದ ತರುವಾಯ ಭಾರತ-ಪಾಕಿಸ್ತಾನಗಳೆರಡೂ ಈ ಬಹಿಷ್ಕಾರವನ್ನು ಹಾಗೆಯೇ ಇಟ್ಟಿದ್ದವು. ಈಗ ಪಾಕಿಸ್ತಾನ ಸರಕಾರವು ಭಾರತದ ಮೂಗು ಕೊಯ್ಯಲೆಂದು ಆ ಬಹಿಷ್ಕಾರವನ್ನು ಎತ್ತಿಬಿಟ್ಟಿದೆ. ಹಿಂದುಸ್ಥಾನದಂತೆ ಪಾಕಿಸ್ತಾನವು ರೂಪಾಯಿಯ ಮೌಲ್ಯ ವಿಚ್ಛೇದನ ಮಾಡದ್ದರಿಂದ ಹಾಗೂ ಪರಸ್ಪರ ವ್ಯಾಪಾರಿ ಸರಕುಗಳ ಸಾಗಾಟಕ್ಕೆ ಅಡೆ-ತಡೆಗಳನ್ನು ಹಾಕಹತ್ತಿದ್ದರಿಂದ ಹಿಂದುಸ್ಥಾನವು ತನಗೆ ಪೂರೈಸಲೊಲ್ಲದ ಕಲ್ಲಿದ್ದಲಿಯನ್ನು ಆಫ್ರಿಕೆಯಿಂದ ಪೂರೈಸಿಕೊಳ್ಳುವ ಮತ್ತು ಹಿಂದುಸ್ಥಾನವು ಕೊಂಡುಕೊಳ್ಳದೆ ಬಿಟ್ಟಿರುವ ತನ್ನ ನಾರನು ಆಫ್ರಿಕೆಗೆ ಕೊಡುವ ಹೊಸ ಕರಾರನ್ನು ಮಾಡಹೊರಟಿದೆ! ಇದರಿಂದ ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀಯರ ಸಂಬಂಧದಲ್ಲಿ ದಕ್ಷಿಣ ಆಫ್ರಿಕೆಗೆ ಇನ್ನಷ್ಟು ಬಿಗುವು ಹಿಡಿಯಲು ಪ್ರೋತ್ಸಾಹಸಿಕ್ಕಂತಾಗಿದೆ. ಹೀಗೆಲ್ಲ ಪಾಕಿಸ್ತಾನ ತುಂಬ ಭಾರತ-ವಿದ್ವೇಷದ ವಾತಾವರಣವನ್ನುಂಟು ಮಾಡಿ, ಪಾಕಿಸ್ತಾನ ಸರಕಾರವು ಯುದ್ಧದ ಪೂರ್ವ ಪೀಠಿಕೆಯನ್ನು ತಯಾರಿಸಿದೆ. ಈಗಾಗಲೇ ಕರಾಚಿಯಲ್ಲಿ "ನಗುತಲಿ ಪಡೆದೆವು ಪಾಕಿಸ್ತಾನ, ಯುದ್ಧದಿ ಪಡೆವೆವು ಹಿಂದುಸ್ಥಾನ", ಪವಿತ್ರ ಧರ್ಮ ಯುದ್ಧಕ್ಕೆ ಸಿದ್ಧರಾಗಿರಿ!" ಎಂದು ಮುಂತಾಗಿ ದೊಡ್ಡಕ್ಷರಗಳ ಭಿತ್ತಿ-ಪಟಗಳು ಅಲ್ಲಲ್ಲಿ ಕಂಗೊಳಿಸುತ್ತವಂತೆ! ಇದನ್ನೆಲ್ಲ ಕಂಡರೆ ಪಾಕಿಸ್ತಾನದ ಕೌರವರೊಡನೆ ಭಾರತದ ಪಾಂಡವರು ಒಂದಿಲ್ಲೊಂದು ದಿನ ಕುರುಕ್ಷೇತ್ರದಲ್ಲಿ ಸೆಣಸಿ, ನ್ಯಾಯವನ್ನು ಬಗಹರಿಸಿಕೊಳ್ಳುವ ಪ್ರಸಂಗ ಒದಗುವಂತೆ ತೋರುತ್ತಿದೆ. ಭಾರತವು ಆ ಪ್ರಸಂಗಕ್ಕೆ ಎದುರಾಗಲು ಯಾವಾಗಲೂ ಸನ್ನದ್ಧವಾಗಿರುವದು ವಿಹಿತ ಮತ್ತು ಕ್ಷೇಮಕರ.

* *

ಆಂಧ್ರ ಪ್ರಾಂತದ ರಚನೆಯ ಸಂಬಂಧದಲ್ಲಿ ಅವಶ್ಯವುಳ್ಳ ಕೆಲಸವನ್ನು ಮದ್ರಾಸ ಸರಕಾರದವರು ಆಂಧ್ರದ ಧುರೀಣರೂ ಕೂಡಿ ಭರದಿಂದ ಸಾಗಿಸಿದ್ದಾಗ್ಯೂ ಕೊನೆಗೆ ಪ್ರತ್ಯೇಕ ಪ್ರಾಂತ ರಚನೆ ಶ್ರೀಮೂರ್ತಿಗಳು ಹಾಕಿದ ಎಲ್ಲ ಕರಾರುಗಳನ್ನು ಆಂಧ್ರರು ಪೂರೈಸಲು ಸಮರ್ಥರಾಗದ್ದರಿಂದ ಆಂಧ್ರ ಪ್ರಾಂತ ರಚನೆಯು ಈಗ ಮುಂದೆ ಬಿದ್ದಂತಾಗಿದೆ. ಆಂಧ್ರರು ಪ್ರತ್ಯೇಕವಾದಲ್ಲಿ ಅದರ ಆಯ-ವ್ಯಯಗಳೊಳಗೆ ಸುಮಾರು ೩ ಕೋಟಿ ರೂಗಳ ಕೊರತೆ ಬರುವದೆಂದು ಎಣಿಸಲಾಗಿದೆ. ಆ ಕೊರತೆಯನ್ನು ಹೇಗೆ ತುಂಬಿತರುವಿರಿ ಎಂಬ ಪ್ರಶ್ನೆಗೆ ಆಂಧ್ರದ ಸಮರ್ಪಕ ಉತ್ತರವಿಲ್ಲ! ಮದ್ರಾಸ ಸರಕಾರವು ಈಗಾಗಲೇ ಕೈಕೊಂಡಿರುವ ತುಂಗಭದ್ರಾ ಆಣೆಕಟ್ಟಿನ ಯೋಜನೆ ಆಂಧ್ರ ಪ್ರಾಂತದಲ್ಲಿ ಬರುತ್ತದೆ. ಆ ಅವಾಢವ್ಯ ವೆಚ್ಚದ ಯೋಜನೆಯನ್ನು ಯಶಸ್ವಿಯಾಗಿ ಆಂಧ್ರರು ಕೊನೆಗಾಣಿಸುವರೆಂಬ ವಿಶ್ವಾಸ ಕೊಡಲಿಕ್ಕೂ ಆಂಧ್ರರು ಶಕ್ತರಾಗಲಿಲ್ಲ. ಮೇಲಾಗಿ ಈಗ ಆಂಧ್ರದಲ್ಲಿರುವ ಉಚ್ಚ ಅಧಿಕಾರಿಗಳು ತಮಿಳರಿರುತ್ತಾರೆ. ಇವರ ಸಹಾಯದಿಂದ ಆಂಧ್ರರು ತಮ್ಮ ಪ್ರಾಂತದಲ್ಲಿ ಕಾಯದೆ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋದಾರೆಂಬ ಭರವಸೆ ಹಿಡಿಯಬರುವದಿಲ್ಲ. ಇವೆಲ್ಲವುಗಳ ಜೊತೆಗೆ ಬಳ್ಳಾರಿ ಜಿಲ್ಹೆಯ ಬಗ್ಗೆ ಆಂಧ್ರ-ಕರ್ನಾಟಕಗಳೊಳಗೆ ವಿವಾದವುಂಟು. ಈ ಎಲ್ಲ ಅಡಚಣಿಗಳನ್ನೂ ತೊಂದರೆಗಳನ್ನೂ ನಿವಾರಿಸುವ ವರೆಗೆ ಆಂಧ್ರವನ್ನು ಪ್ರತ್ಯೇಕಿಸುವದು ಶಕ್ಯವಿಲ್ಲೆಂದು ಭಾರತ ಸರಕಾರವು ತೀರ್ಮಾನಿಸಿದೆ. ಪ್ರತ್ಯೇಕ ಪ್ರಾಂತ ಬೇಡುವ ಪ್ರಾಂತಗಳು ಆಂಧ್ರಪ್ರಾಂತದ ರಚನೆಯ ಮಾರ್ಗದಲ್ಲಿ ಬಂದ ಈ ಅಡಚಣಿಗಳಿಂದ ಯೋಗ್ಯ ಬೋಧ ಪಡೆಯಬಹುದಾಗಿದೆ.

* *

ಆದರೆ ಕರ್ನಾಟಕದವರು ಅಂಥ ಬೋಧವನ್ನು ಪಡೆಯಲಿಕ್ಕೆ ಆದರ್ಶ ಪಾಠವನ್ನು ಕಲಿಯಲಿಕ್ಕೆ ಸಿದ್ಧರಿಲ್ಲ. ತಮ್ಮ ಕಾಲಡಿಗೆ ಏನು ನಡೆದಿದೆ, ತಾವು ಕರ್ನಾಟಕ, ಕರ್ನಾಟಕ ಎಂದು ಕರೆಯುವ ಎಲ್ಲ ಪ್ರದೇಶಗಳ ಜನರು ಪ್ರತ್ಯೇಕ ಕರ್ನಾಟಕ ಪ್ರಾಂತರಚನೆಗೆ ಎಷ್ಟು ಉತ್ಸುಕರಿದ್ದಾರೆ ಇಲ್ಲವೆ ಬೆಂಬಲ ಕೊಡುತ್ತಿದ್ದಾರೆ ಎಂಬ ಯಾವುದರ ವಿಚಾರವನ್ನೂ ಮಾಡದೆ ಪ್ರತ್ಯೇಕ ಕರ್ನಾಟಕ ಪ್ರಾಂತ ರಚನೆಯಾಗದಿದ್ದಲ್ಲಿ ಕರ್ನಾಟಕದಲ್ಲಿ ಭೀಕರ ಉತ್ಪಾತಗಳಾಗುವವು ಎಂದು ಅವರು ಕೊಂಗ್ರೆಸ ವರಿಷ್ಠರಿಗೂ ಭಾರತ ಸರಕಾರದ ಧುರೀಣರಿಗೂ ಬೆದರಿಕೆಗಳನ್ನು ಹಾಕುತ್ತಿದ್ದಾರೆ! ಭಾರತ ಸರಕಾರವು ಈ ಪೊಳ್ಳು ಬೆದರಿಕೆಗಳಿಂದ ಬೆದರಿ ಹೋಗುವಷ್ಟು ಅಳ್ಳೆದೆಯದಿರುವದೆಂದು ಈ ಕನ್ನಡಿಗರು ತಿಳಿದಿರುವಂತೆ ತೋರುತ್ತದೆ! ಆಂಧ್ರ ಪ್ರಾಂತ ರಚನೆಯ ಮಾರ್ಗದಲ್ಲಿ ಬಂದ ಅಡಚಣಿಗಳಿಗಿಂತ ಘೋರತರ ಅಡಚಣಿಗಳು ಕನ್ನಡ ಪ್ರಾಂತದ ರಚನೆಯ ಮಾರ್ಗದಲ್ಲಿವೆಯೆಂಬುದರ ಕಲ್ಪನೆಯೇ ಈ ಕರ್ನಾಟಕ ಮುಂದಾಳುಗಳ ತಲೆಯಲ್ಲಿ ಹೇಗೆ ಸುಳಿಯುವದಿಲ್ಲವೋ ಆ ಭುವನೇಶ್ವರಿಗೇ ಗೋಚರ! ಮೈಸೂರಿನವರು ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಆತುರರಿಲ್ಲ! ಧಾರವಾಡ-ಹುಬ್ಬಳ್ಳಿಯವರ ಕರ್ನಾಟಕ ಪ್ರಾಂತದಲ್ಲಿ ಅವರು ಸೇರಲು ಒಪ್ಪುವ ಲಕ್ಷಣಗಳು ತೋರುವದಿಲ್ಲ. ಗಡಿನಾಡಿನ ಪ್ರಶ್ನೆಯಂತು ಆಂಧ್ರರ ಗಡಿಯ ಪ್ರಶ್ನೆಗಿಂತ ಅದು ಮುಂದಿ ಕಠಿಣವಿದೆ. ಕಾರವಾರ ಜಿಲ್ಹೆಯ ಉತ್ತರ

ಭಾಗ, ಮತ್ತು ಬೆಳಗಾಂವ ಜಿಲ್ಲೆಗಳು ಮುಂಬಯಿ ಪ್ರಾಂತಕ್ಕೆ ಸೇರಬೇಕೆಂದು ಮಹಾರಾಷ್ಟ್ರೀಯರ ವಾದವಿದೆ. ಆ ಭಾಗಗಳ ಬಹುಸಂಖ್ಯ ಜನರಾದರೂ ಕರ್ನಾಟಕದಿಂದ ಪ್ರತ್ಯೇಕವಾಗಿ ಮಹಾರಾಷ್ಟ್ರಕ್ಕೆ ಸೇರಲು ತಯಾರಾಗಿದ್ದಾರೆ. ನೇರೆ ಹೇಳದ ಬಳ್ಳಾರಿ ಜಿಲ್ಲೆಯ ಸಮಸ್ಯೆಯೂ ಉಂಟು. ಕೆಲವು ಕಾಲದ ಹಿಂದೆ ಮಂಗಳೂರ ಜಿಲ್ಲೆಯ ದಕ್ಷಿಣ ಭಾಗ ಮಲಯಾಳಕ್ಕೆ (ಅಂದರೆ ಕೇರಳಕ್ಕೆ) ಸೇರಬೇಕು ಎಂಬ ವಾದವೊಂದು ಮುಂದೆ ಬಂದಿತ್ತು. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗುವದು ನಿಶ್ಚಿತವಾದಲ್ಲಿ ಆ ವಾದವು ಪುನಃ ತಲೆಯೆತ್ತದೇ ಉಳಿಯಲಿಕ್ಕಿಲ್ಲ. ಕೊಲ್ಲಾಪುರ, ಸಾಂಗಲಿ, ಕೊಲ್ಹಾಪುರ ವಗೈರೆ ಪ್ರದೇಶಗಳಲ್ಲಿಯ ಕನ್ನಡಿಗರು ತಮ್ಮ ಪಾಲು ಬೇಡುತ್ತಾರೆ. ಕನ್ನಡ ಭಾಷೆಯ ಒಂದಕ್ಷರ ಸಹ ತಿಳಿಯದ ಜನರಿಂದ ತುಂಬಿರುವ ಗೋವಾಂತಕವು ಕರ್ನಾಟಕದ ಭಾಗವೆಂದು ಹೇಳುವ ಮತ್ತು ಗೋವೆಯನ್ನು ಕರ್ನಾಟಕದಲ್ಲಿ ಸೇರಿಸಿಕೊಳ್ಳಲೆಳಸುವ ಕನ್ನಡಿಗರು ಗೋವಾಗಳ ಈ ಪ್ರಶ್ನೆಗಳನ್ನು ಸಂಬಂಧಪಟ್ಟವರೊಡನೆ ಪರಸ್ಪರ ವಿಚಾರವಿನಿಮಯದಿಂದ ಮತ್ತು ಸೌಹಾರ್ದದಿಂದ ಬಗೆಹರಿಸಿಕೊಳ್ಳುವರೆಂದು ನಂಬಲರುತ್ತದೆಯೋ? ಕರ್ನಾಟಕ ಪ್ರಾಂತ ಪ್ರತ್ಯೇಕವಾದಲ್ಲಿ ಆದರ ಉತ್ಪನ್ನ ಹೆಚ್ಚಾಗುವದು, ಖರ್ಚು ಎಷ್ಟಾಗುವದು ಮತ್ತು ಕೊರತೆ ಎಷ್ಟು ಬರುವದು ಎಂಬುದರ ಶಾಸ್ತ್ರೀಯ ಮತ್ತು ಕ್ರಮಬದ್ಧ ಲೆಕ್ಕವನ್ನು ಹಾಕಿ ನೋಡುವ ಸಾಹಸವನ್ನು ಈ ವರೆಗೆ ಯಾವ ಕನ್ನಡಿಗನೂ ಮಾಡಿಲ್ಲ! ಆಂಧ್ರದ ರಾಜಧಾನಿ ಎಲ್ಲಾಗಬೇಕೆಂಬದೊಂದು ಬಿಗಿ ಪ್ರಶ್ನೆ ಆಂಧ್ರರ ಮುಂದಿತ್ತು. ಈವರೆಗೂ ಅದನ್ನು ಅವರು ಬಿಡಿಸಿಲ್ಲ. ನಮ್ಮ ಕನ್ನಡಿಗರಿಗೆ ನಿಮ್ಮ ರಾಜಧಾನಿ ಯಾವದೆಂದು ಪ್ರಶ್ನೆಯಿಟ್ಟರೆ ಸಮರ್ಪಕ ಉತ್ತರ ದೊರೆಯುವಂತಿಲ್ಲ! ಉತ್ತರ ಕರ್ನಾಟಕದವರು ಧಾರವಾಡ ಇಲ್ಲವೆ ಹುಬ್ಬಳ್ಳಿ ರಾಜಧಾನಿಯಾಗಬೇಕೆಂದು ಹಟ ಹಿಡಿಯುವರು. ಮೈಸೂರು ಒಂದೊಮ್ಮೆ ಕರ್ನಾಟಕದಲ್ಲಿ ಸೇರಲೊಪ್ಪಿದರೆ ಬೆಂಗಳೂರಿಗೆ ರಾಜಧಾನಿಯ ಮರ್ಯಾದೆ ಸಿಗಬೇಕೆಂದು ಮೈಸೂರಿನವರು ಹಟ್ಟ ಹಿಡಿಯುವರು. ಮೈಸೂರ ಮಹಾರಾಜರು ಕರ್ನಾಟಕದ ಘಟನಾತ್ಮಕ ರಾಜರು ಇಲ್ಲವೆ ಪ್ರಾಂತಾಧಿಪರಾಗಬೇಕೆಂದು ಕರಾರು ಆದರಂತೂ ಮೈಸೂರು ರಾಜಧಾನಿಯಾಗಬೇಕಾದ ಪ್ರಸಂಗ ಬರುವದು ಹೀಗೆಲ್ಲ ಪ್ರಾಂತೀಕರಣದ ಹಾದಿಯಲ್ಲಿ ನಾನಾತರದ ಅಡಚಣೆಗಳು ಇರುತ್ತಿದ್ದರೂ ಕಳೆದ ತಾ ೯ಕ್ಕೆ ಹಾವೇರಿಯಲ್ಲಿ ಕೂಡಿದ ಕರ್ನಾಟಕ ಪ್ರಾಂ| ಕಾಂ| ಕಮಿಟಿಯವರು, ಮುಂಬರುವ ಮಹಾಚುನಾವಣೆಗಳು ಜರಗುವ ಮೊದಲೇ ಪ್ರತ್ಯೇಕ ಕರ್ನಾಟಕ ಪ್ರಾಂತ ರಚನೆಯಾಗದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಪ್ರಭಾವ-ಪ್ರತಿಷ್ಠೆಗಳೆಲ್ಲ ಮಣ್ಣುಗೂಡಿ ಹೋಗುವವೆಂಬ ಘೋರ ಎಚ್ಚರಿಕೆಯನ್ನು ಕೊಡುವ ಗೊತ್ತುವಳಿಯನ್ನು ಮಾಡಿರುತ್ತಾರೆ. ಕರ್ನಾಟಕ ಪ್ರಾಂತದ ರಚನೆಯ ಪ್ರಚಾರ ಮತ್ತು ಕಾರ್ಯ ಯಶಸ್ವಿಯಾಗಿ ನಿರ್ವಹಿಸಲಿಕ್ಕೆ ಒಂದು ಸ್ವತಂತ್ರ ಸಮಿತಿಯನ್ನು ಸಹ ನೇಮಿಸಿರುತ್ತಾರೆ. ಈ ಸಮಿತಿಯಲ್ಲಿ ನಮ್ಮ ಕಾನಡಾ ಜಿಲ್ಲೆಯವರಾರೂ ಇಲ್ಲ! ನಮ್ಮ ಜಿಲ್ಲೆ ಕರ್ನಾಟಕದಲ್ಲಿ ಬರುವದಿಲ್ಲೆಂದು ಮನಗಂಡು ಪ್ರಾಂತಿಕ ಕಾಂಗ್ರೆಸ ಕಮಿಟಿಯು ನಮ್ಮ ಜಿಲ್ಲೆಯ ಪ್ರತಿನಿಧಿಯನ್ನು ಆರಿಸಿಕೊಂಡಿಲ್ಲೆಂದು ನಾವು ಊಹಿಸಬಹುದೇ?

* * *

ನಮ್ಮ ಜಿಲ್ಲೆ ಕರ್ನಾಟಕದಲ್ಲಿ ಬರುವದಿಲ್ಲೆಂದು ಕರ್ನಾಟಕ ಮುಖಂಡರು ಭಾವಿಸುತ್ತಾರೆಂಬುದಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಈಗಿನ ಸಿನೇಟಿನ ರಚನೆಯು ಒಂದು ತಕ್ಕ ನಿದರ್ಶನವಾಗುತ್ತದೆ. ಈ ಸಿನೇಟದಲ್ಲಿ ಅಂತು ೯೪ ಸದಸ್ಯರಿರುತ್ತಾರೆ. ಈ ವಿಶ್ವವಿದ್ಯಾಲಯವು ಸದ್ಯಕ್ಕೆ ಬೆಳಗಾಂವ, ಧಾರವಾಡ, ವಿಜಾಪೂರ ಮತ್ತು ಕಾನಡಾ ಈ ೪ ಜಿಲ್ಲೆಗಳಿಗಷ್ಟೇ ಮರ್ಯಾದಿತವಿದೆ. ಸಿನೇಟಿನ ೯೪ ಸದಸ್ಯಸ್ಥಾನಗಳು ಈ ನಾಲ್ಕು ಜಿಲ್ಲೆಗಳಲ್ಲಿ ಸಮಯಾಗಿ ಹಂಚಲ್ಪಟ್ಟಿದ್ದರೆ ನಮ್ಮ ಜಿಲ್ಲೆಗೆ ೨೩ ಸ್ಥಾನಗಳು ಬರುತ್ತಿದ್ದವು. ಲೋಕಸಂಖ್ಯೆಯ ಮಾನದಿಂದ ಹಂಚಲ್ಪಟ್ಟರೂ, (ಮೇಲ್ಕಾಣಿಸಿದ ನಾಲ್ಕೂ ಜಿಲ್ಲೆಗಳ ಜನಸಂಖ್ಯೆ ೪೦ ಲಕ್ಷ ಮತ್ತು ಸದಸ್ಯರ ಸಂಖ್ಯೆ ೯೪ ಇರುತ್ತಿರುವದರಿಂದ) ೪॥ ಲಕ್ಷ ಜನಸಂಖ್ಯೆಯುಳ್ಳ ನಮ್ಮ ಜಿಲ್ಲೆಗೆ ೯ ಸ್ಥಾನಗಳಾದರೂ ಸಿಗುತ್ತಿದ್ದವು. ಆದರೆ ಮೊನ್ನಿನ ಚುನಾವಣೆಗಳಲ್ಲಿ ಬರೀ ಒಂದು ಸ್ಥಳ ಸಿಕ್ಕಿದೆ! ಅದು ನಮ್ಮ ಜಿಲ್ಲೆಯ ಜಿಲ್ಹಾ ಸ್ಕೂಲ ಬೋರ್ಡಿನ ಪ್ರತಿನಿಧಿಯು. ಉತ್ತರ ಕರ್ನಾಟಕದವರ ಮತಗಳಿಂದ ಈ ಸ್ಥಳದ ಆಯ್ಕೆಯಾಗುತ್ತಿದ್ದರೆ ಅದು ಕೂಡ ವಿಜಾಪುರದವರಿಗಾಗಲಿ ಹುಬ್ಬಳ್ಳಿಯವರಿಗಾಗಲಿ ಹೋಗುತ್ತಿತ್ತು! ಬೇರೆ ಬೇರೆ ಸ್ಥಾನಗಳಿಗಾಗಿ ಸದಸ್ಯರ ಚುನಾವಣೆ ಮಾಡತಕ್ಕ ಮತದಾರರ ಸಂಖ್ಯೆ ಕಾರವಾರೇತರ ಜಿಲ್ಲೆಗಳಲ್ಲಿ ಹೆಚ್ಚಿಗೆಯಿರುವದರಿಂದ ಕಾರವಾರ ಹುರಿಯಾಳುಗಳು ಸೋತರು; ಧಾರವಾಡ ಬೆಳಗಾಂವಿ ಬದಿಯ ಮತದಾರರು ವಿಶಾಲ ದೃಷ್ಟಿಯಿಟ್ಟು ಕಾರವಾರ ಹುರಿಯಾಳುಗಳಿಗೆ ಮತಕೊಡಬಹುದಾಗಿತ್ತು, ಅವರು ಕೊಡಲಿಲ್ಲ, ಇದಕ್ಕೆ ನಮ್ಮ ಉಪಾಯವೇನಿದೆ? ಎಂದು ವಿಶ್ವವಿದ್ಯಾಲಯದ ನಾಯಕರು ಹೇಳಿ ನಮಗೆ ಒಂದೊಮ್ಮೆ ಸಮಾಧಾನ ಮಾಡಬಹುದು. ಆದರೆ ವಿಶ್ವವಿದ್ಯಾಲಯದ ಉಪಕುಲಪತಿಗಳು ಸ್ವಂತ ಅಧಿಕಾರದಿಂದ ಸಿನೇಟಿಗೆ ೧೦ ಸದಸ್ಯರನ್ನು ನೇಮಿಸುವಾಗಲಾದರೂ ಚುನಾವಣೆಗಳಲ್ಲಿ ತಕ್ಕ ಪ್ರಾತಿನಿಧ್ಯ ದೊರೆಯದ ನಮ್ಮ ಜಿಲ್ಲೆಗೆ ಒಂದೆರಡು ಸ್ಥಾನಗಳನ್ನು ಕೊಡಬಹುದಿತ್ತಲ್ಲವೇ? ಉಪಕುಲಪತಿಗಳು ಅದನ್ನು ಹೇಗೆ ಮರೆತರು? ಉಪಕುಲಪತಿಗಳಿಂದ ನೇಮಣೂಕಿ ಹೊಂದುವಷ್ಟು ಪಾತ್ರತೆಯುಳ್ಳ ಒಬ್ಬರು ಸಹ ನಮ್ಮ ಜಿಲ್ಲೆಯಲ್ಲಿ ಸಿಗಲಿಲ್ಲವೇ? ಕರ್ನಾಟಕ ವಿಶ್ವವಿದ್ಯಾಲಯದ ಘಟನೆಯ ಸ್ವರೂಪವನ್ನು ಕುರಿತು ಚೌಕಶಿ ಮಾಡಲು ಸರಕಾರದಿಂದ ನೇಮಕವಾದ ಸಮಿತಿಯಲ್ಲಿದ್ದ ಮತ್ತು ಈ ವಿಶ್ವವಿದ್ಯಾಲಯದ ನಿರ್ಮಾಣದಲ್ಲಿ ಕೆಲಮಟ್ಟಿಗಾದರೂ ಪಾತ್ರ ವಹಿಸಿದ ಶ್ರೀ|| ಬಳದೀಪೂರ ಕೃಷ್ಣರಾಯರಲ್ಲಿ ಕೂಡ ತಮ್ಮಿಂದ ನೇಮಣೂಕಿ ಹೊಂದುವಂತಹ ಪಾತ್ರತೆ, ಯೋಗ್ಯತೆ ಇಲ್ಲವೆ ಕಾರ್ಯಕುಶಲ ಬುದ್ಧಿಮತ್ತೆ ಉಪ-ಕುಲಪತಿ ಶ್ರೀ|| ಜಾಗೀರದಾರ ರಂಗಾಚಾರ್ಯರಿಗೆ ಕಂಡು ಬರಲಿಲ್ಲವೇ? ಶ್ರೀ ರಂಗಾಚಾರ್ಯರ ನಡತೆಯನ್ನು ಸಮರ್ಥಿಸಲಿಕ್ಕೆ ಒಂದೇ ದಾರಿಯಿದೆ, ಒಂದೇ ಯುಕ್ತಿಯಿದೆ ಅದ್ಯಾವದೆಂದರೆ- ಕಾನಡಾ ಜಿಲ್ಲೆಯು ಕರ್ನಾಟಕದಲ್ಲಿ ಬರುತ್ತದೆಂದು ಅವರು ನಂಬುವದಿಲ್ಲ; ಅದ್ದರಿಂದಲೇ ಅವರು ಕಾರವಾರಿಗರನ್ನು ಸಿನೇಟ ಸಭೆಗೆ ನೇಮಿಸಲಿಲ್ಲ; ಎಂದು ಸ್ಪಷ್ಟ ಹೇಳಿ ದೂರುಗಾರರ ಬಾಯಿ ಮುಚ್ಚಿ ಬಿಡಬಹುದು.

* * *

೧೯೫೨-೫೩ನೇ ವರ್ಷದ ತಂತಿ-ಟಪಾಲ ಇಲಾಖೆಯು ಕಾರಭಾರದ್ದೇ ವರದಿಯು ಮೇಲಿಂದ ಆ ವರ್ಷದಲ್ಲಿ ಆ ಇಲಾಖೆಗೆ ೫|| ಕೋಟಿ ರೂ. ನಿಕ್ಕಿ ಉಳಿತಾಯವಾಗಿದೆಂದು ಕಂಡುಬರುತ್ತದೆ. ಈ ಖಾತೆಯನ್ನು ವ್ಯಾಪಾರದ ದೃಷ್ಟಿಯಿಂದ ನಡೆಸದೆ ಒಂದೇ ಸೇವೆಯ ದೃಷ್ಟಿಯಿಂದ ನಡೆಸಬೇಕೆಂಬುದೊಂದು ಬ್ರಿಟಿಶರ ಕಾಲದಿಂದಲೂ ನಡೆದು ಬಂದ ಪಂಡಿತ ನೀತಿಯುಂಟು, ಅದ್ದರಿಂದ ಇಲ್ಲಿ ಉಳಿಯುವದು ಈ ಲಾಭವನ್ನು ಜನರಿಗೆ ತಿರುಗಿ ಕೊಡುವದುಚಿತ. ಟಪಾಲ ಕಾರ್ಡಿನ ಮತ್ತು ಪಾಕೀಟಿನ ಬೆಲೆಗಳನ್ನು ಅನುಕ್ರಮವಾಗಿ ೬ ಪೈಸೆ ಮತ್ತು ೧ ಆಣೆಗೆ ಇಳಿಸುವದೇ ಈ ಲಾಭವನ್ನು ಜನರಿಗೆ ತಿರುಗಿ ಕೊಡುವ ಉಪಾಯ. ಹಿಂದೆ ಬ್ರಿಟಿಶರ ಕಾಲದಲ್ಲಿ ಕಾರ್ಡ-ಕವರುಗಳ ಬೆಲೆ ಅಗ್ಗವಿತ್ತು. ಕರ್ಝನನ ಮೊರೆಗಳ ಕಾಲದಲ್ಲಿ ಅದು ಒಂದೇ ೧ ಬಿಲ್ಲಿ, ೨ ಬಿಲ್ಲಿ ಇತ್ತೆಂದು ಹೇಳಬಹುದು ಹೇಳುತ್ತಾರೆ. ಹೊಸ ಪ್ರಜಾರಾಜ್ಯದಲ್ಲಿ ಕಾರ್ಡ-ಕವರುಗಳ ಬೆಲೆಗಳನ್ನು ಆ ಮಟ್ಟಕ್ಕೆ ಇಳಿಸಿದರೆ ಬಹಳ ಉತ್ತಮವಾಗುವದು. ಅದು ಸಾಧ್ಯವಾಗದಿದ್ದರೆ ಅದನ್ನು ೬ ಬಿಲ್ಲಿ ಮತ್ತು ೧ ಆಣೆಗಾದರೂ ಇಳಿಸಬೇಕು. ಈಗ ರಾಜ್ಯದ ಪ್ರಭುಗಳಾಗಿರುವ ಬಡ ಜನರಿಗೆ ಬಹಳ ಉಪಕಾರ ಮಾಡಿದಂತಾಗುವದು. ಕಾರ್ಡು-ಕವರುಗಳ ಬೆಲೆಯನ್ನು ಇಳಿಸಿದಲ್ಲಿ, ಒಂದೊಮ್ಮೆ ಅವುಗಳ ಮಾರಾಟ ಹೆಚ್ಚಾಗಿ ಬರುವರಿಗೆ ದಾನ ಕೊಟ್ಟ ಹಣವು ತಿರುಗಿ ಸರಕಾರಕ್ಕೇ ಸಿಗುವ ಸಂಭವವೂ ಉಂಟು. ಸರಕಾರದವರು ಈ ಪ್ರಯೋಗ ಮಾಡಿ ನೋಡಿ ಅನುಭವ ಪಡೆಯಬೇಕಾಗಿ ಸೂಚನೆಯಿದೆ.

* * *

ಕಳೆದ ವಾರ ಮುಂಬಯಿ ಸರಕಾರಕ್ಕೆ ಮುಂಬಯಿಯ ನ್ಯಾಯದಾರ ಹಾಯಕೋರ್ಟಿನಲ್ಲಿ ಸೋಲಿನ ಮೇಲೆ ಸೋಲುಗಳುಂಟಾದವು. “ಮಶಾಲ” ಎಂಬ ಕಮ್ಯುನಿಸ್ಟ ಪತ್ರಿಕೆಯ ಕಡೆಯಿಂದ ಮುಂಬಯಿ ಸರಕಾರವು ಜಾಮೀನು ಬೇಡಿತ್ತು. ಈ ಹುಕುಮಿನ ವಿರುದ್ಧ “ಮಶಾಲ” ಕರ್ತರು ಹಾಯಕೋರ್ಟಿಗೆ ಅಪೀಲು ಮಾಡಿದಾಗ ಹಾಯಕೋರ್ಟಿನ ಪಂಚಮಂಡಳ (ಫುಲ್ ಬೆಂಚ)ವು ಸರಕಾರದವರ ಹುಕುಮನ್ನು ರದ್ದುಪಡಿಸಿತು. ಮುಖ್ಯ ನ್ಯಾಯಾಧೀಶ ನ್ಯಾ| ಮೂ| ಛಾಗಲಾ ಇವರು ಹೇಳಿರುತ್ತಾರೇನೆಂದರೆ— ‘ಹೊಸ ರಾಜ್ಯಘಟನೆಯು ಪತ್ರಿಕೆಗಳಿಗೆ ಸ್ವಾತಂತ್ರ್ಯ ಕೊಟ್ಟಿದೆ. ಯಾವ ತರ್ಕಬಂಧದ ಪ್ರಕಾರಕ್ಕೆ ಕಾನೂನಿನ ಪ್ರತಿಬಂಧವಿಲ್ಲವೋ ಅಂಥ ಮತವನ್ನು ಶಾಂತತಾ-ಭಂಗಕ್ಕೆ ಇಲ್ಲವೆ ಹಿಂಸಾಚಾರಕ್ಕೆ ಪ್ರಚೋದನೆ ಕೊಡದಂತಹ ರೀತಿಯಲ್ಲಿ ಪ್ರಚುರಗೊಳಿಸಲಿಕ್ಕೆ ಪತ್ರಿಕೆಗಳಿಗೆ ಪೂರ್ಣ ಸ್ವಾತಂತ್ರ್ಯವಿದೆ.” “ಹೇಬಿಯಸ್ ಕೋರ್ಪಸ್” ಅರ್ಜಿ ಮಾಡಿ, ತಮ್ಮನ್ನು ಕಾನೂನ-ನಿಷಿದ್ಧ ಬಂಧನದೊಳಗಿಂದ ಬಿಡುಗಡೆ ಮಾಡಬೇಕೆಂದು ಬೇಡಿಕೊಂಡ ೨೮ ಕಮ್ಯುನಿಸ್ಟರನ್ನು ನ್ಯಾ| ಮೂ| ಛಾಗಲಾ, ದೀಕ್ಷಿತ, ಗಜೇಂದ್ರಗಡಕರ ಇವರು ಅವರ ಬಿಡುಗಡೆ ಮಾಡಲು ಸರಕಾರಕ್ಕೆ ಅಜ್ಞಾಪಿಸಿದ್ದಾರೆ. ಸಾರ್ವಜನಿಕ ಸುರಕ್ಷಿತತಾ ಕಾಯಿದೆಯನ್ವಯ ಯಾರೊಬ್ಬನನ್ನು ಮುಂಬಯಿ ಪ್ರಾಂತದಿಂದ ಹೊರದೂಡಲು ಮುಂಬಯಿಯ ಪೋಲೀಸ ಅಧಿಕಾರಿಗಳಿಗೆ ಅಧಿಕಾರವಿಲ್ಲೆಂದು, ಸರಕಾರವು ಮಾಡಿದ ಒಂದು ಅಪೀಲಿನಲ್ಲಿ ಹಾಯಕೋರ್ಟ ನ್ಯಾಯಮೂರ್ತಿಗಳು ನಿರ್ಣಯ ಕೊಟ್ಟು, ಸರಕಾರದ ಅಪೀಲನ್ನು ತಿರಸ್ಕರಿಸಿದ್ದಾರೆ. ಹಾಯಕೋರ್ಟಿನ ಈ ನಿರ್ಣಯಗಳಿಂದ ಸರಕಾರದಲ್ಲಿ ವಿವೇಕೋದಯವಾಗುವದೆಂದು ಆಶಿಸಬಹುದೇ?

* * *

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ನಡುವೆ ೩-೪ ದಿನ ಚಳಿಯೇ ಇಲ್ಲ ದಿದ್ದರೂ ಗಾಳಿಯೂ ಬಹಳ ಬೀಸಿತು ನಿನ್ನೆಯಿಂದ ಹವೆಯಲ್ಲಿ ಉಷ್ಣತೆಯು ಅಂತ ಹೆಚ್ಚಾಗಹತ್ತಿದೆ

ಇಲ್ಲಿಯ ಹೊಸ ಇಗರ್ಜೆಯ ಉದ್ಘಾಟನೆಗಾಗಿ ಇಂದು ಗೋವಾ, ದಮಾ ಮತ್ತು ಪೂರ್ವ ದೇಶಗಳ ಆರ್ಚ-ಬಿಶಪ್ಪರು ಇಂದು ಸಂಜೆ ಈ ಊರಿಗೆ ಚಿತ್ತೈಸಲಿದ್ದಾರೆ ನಾಳೆ ಮುಂಜಾನೆ ೯ಕ್ಕೆ ಇಗರ್ಜೆಯ ಉದ್ಘಾಟನೆಯ ಸಮಾರಂಭ ನಡೆಯುವದು ನಾಡದು ಕುಮಟೆಯ "ಫೆಸ್ತ" (ಜಾತ್ರೆ) ಜರಗುವದು ಇಗರ್ಜೆಯ ಉದ್ಘಾಟನೆಯ ಸಮಾರಂಭಕ್ಕೆ ಕ್ರಿಸ್ತೀಕರ ಬಂಧು ಭಗಿನಿಗಳೂ ಬಂದು ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸಲು ನೆರವಾಗಬೇಕಾಗಿ ಸದರಿ ಸಮಾರಂಭದ ಚಾಲಕರ ಬಿನ್ನಹವಿದೆ

ನಿನ್ನೆ ಗೋಕರ್ಣದಲ್ಲಿ ಕೂಡಲಿದ್ದ ಬೊಲಗಳಿಸುವೆಯುವರ ಸಭೆಯ ಅಧ್ಯಕ್ಷರಾಗಲು ಕಾರವಾರದ ವಕೀಲ ರಾ|| ಕೃಷ್ಣರಾವ ಹಳದೀಪುರಕರರು ಒಪ್ಪಿದ್ದರಂತೆ ಆದರೆ ಇತ್ತ ಮೂರು-ನಾಲ್ಕು ದಿನಗಳಿಂದ ರಾ|| ಹಳದೀಪುರಕರರ ಪ್ರಕೃತಿ ಒಮ್ಮೆಲೇ ಕೆಟ್ಟು ವಿಕೋಪಕ್ಕೆ ಹೋದ್ದರಿಂದ, ಸಭೆಯು ಕೊನೆಗೆ ಇಲ್ಲಿಯ ವಕೀಲ ರಾ|| ನರಸಿಂಹ ಕಾನಭಾಗರ ಅಧ್ಯಕ್ಷತೆಯಲ್ಲಿ, ಮಧ್ಯಾಹ್ನ ೪ ಘಂಟೆಗೆ ಶ್ರೀ ಮಹಾಬಲೇಶ್ವರ ದೇವಸ್ಥಾನದ ಪ್ರಾಕಾರದೊಳಗೆ, ನಡೆದು ಈ ಕೆಳಗಿನ ಅರ್ಥದ ಗೊತ್ತುವಳಿಯು ಸ್ವೀಕೃತವಾಯಿತು,

ಮುಂಬಯಿಯ ಹೊಲ ಸಾಗುವಳಿ ಕಾನೂನಿನ ಮೂಲ ತತ್ವಗಳಿಗೂ ಉದ್ದೇಶಗಳಿಗೂ ಈ ಸಭೆಯ ಆಕ್ಷೇಪವಿಲ್ಲ ಆದರೆ ನಮ್ಮ ಜಿಲ್ಹೆಯಲ್ಲಿ ಕಾನೂನು ಸಾಧಿಸಬಯಸುವ ಉತ್ಪತ್ತಿಯ ಹೆಚ್ಚಳವಾಗಲಿ, ಭೂಮಿಯ ಸುಧಾರಣ ಅಭಿವೃದ್ಧಿಯಾಗಲಿ, ಒಕ್ಕಲಿಗರ ಏಳ್ಗೆಯಾಗಲಿ ಸದರಿ ಕಾನೂನಿನ ಆಧಾರದಿಂದ ಕೈಗೂಡಿತ್ತೆಂದು ಈ ಸಭೆಯ ನಿಶ್ಚಿತಾಭಿಪ್ರಾಯವಿದೆ

ನಮ್ಮ ಜಿಲ್ಹೆಯಲ್ಲಿ ಮೂಲಗೇಣಿ, ಚೋಟ-ಮೂಲಗೇಣಿ, ನಗದಿ ಪಗ್ಗಾರೆ ಹಲವಾರು ಒಕ್ಕಲತನದ ಪದ್ಧತಿಗಳುಂಟು ಈ ಪದ್ಧತಿಗಳು ರೈತರಿಗೆ ಒಕ್ಕಲತನದ ಸ್ವಾತಂತ್ರ್ಯವನ್ನು ಕೊಡುತ್ತವಲ್ಲದೆ ಸುಲಿಗೆಯಿಂದಲೂ ಅವರನ್ನು ರಕ್ಷಿಸುತ್ತವೆ ಈ ಒಕ್ಕಲತನಗಳಲ್ಲಿ ಒಡೆಯರೂ ಒಕ್ಕಲಿಗರೂ ಪರಸ್ಪರ ಸಹಕಾರದಿಂದ ದುಡಿಯಬೇಕಾಗುತ್ತದೆ ಸಾಗುವಳಿಯ ಸುಧಾರಣೆಗೆ ಬೇಕಾದ ಹಣವನ್ನು ಒಡೆಯರು ಪೂರೈಸಿ ಸಾಗುವಳಿ ಕೆಲಸದ ಮೇಲ್ವಿಚಾರ ಮಾಡುತ್ತಾರೆ, ಒಕ್ಕಲಿಗರು ಕಾಯ-ಕ್ಲೇಶ ಮಾಡುತ್ತಾರೆ, ಮತ್ತು ಇಬ್ಬರೂ ಆಸಕ್ತಿಯಿಂದ ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಾರೆ

ಹೊಲ ಸಾಗುವಳಿ ಕಾನೂನಿನ ಈಗಿನ ಆಧಾರತೆಯ ನಮೂನೆಯಿಂದ ಪ್ರಮಾಣಿಕ ಸಾಗುವಳಿದಾರರಿಗೆ ಯೋಗ್ಯ ಪರಿಹಾರ ದೊರೆಯುವದಿಲ್ಲ ಆದರಿಂದ ಸ್ವಂತ ಭೂಮಿಗಳನ್ನು ಸ್ವತಃ ಸಾಗುವಳಿ ಮಾಡಿ ಅವುಗಳ ಉತ್ಪತ್ತಿ ಹೆಚ್ಚಿಸಿಕೊಳ್ಳಬಯಸುವ ಭೂಮಾಲಿಕರಿಗೆ ಬಹಳ ಕಷ್ಟವಾಗಹತ್ತಿದೆ.

ಆದ್ದರಿಂದ, ಈ ಜಿಲ್ಹೆಯಲ್ಲಿ ಹೊಲ ಸಾಗುವಳಿಯ ಕಾನೂನಿನ ಆಧಾರತೆಯು ಹೇಗೆ ನಡೆದಿದೆ ಎಂಬುದರ ಪರಿಪೂರ್ಣ ಚೌಕಶಿ ಮಾಡಿ, ಟೆನನ್ಸಿ ಕಾನೂನಿನ ಪವಿತ್ರ ಉದ್ದೇಶಗಳನ್ನು ಕೈಗೂಡಿಸಿಕೊಳ್ಳುವ ಮತ್ತು ಒಡೆಯ ಒಕ್ಕಲಿಗರಿಬ್ಬರಿಗೂ ಹಿತಕರವಾಗುವಂತಹ ಮಾರ್ಗವನ್ನು ಸೂಚಿಸಲಿಕ್ಕೆ ಹಾಯಕೋರ್ಟಿನ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಉಚ್ಚ ನ್ಯಾಯಾಧೀಶರುಗಳ ಒಂದು ಸಮಿತಿಯನ್ನು ನೇಮಿಸಲು ಈ ಸಭೆಯು ಸರಕಾರದ ಕಡೆ ಪ್ರಾರ್ಥನೆ ಮಾಡುತ್ತದೆ

ಕರ್ಕಿಯ ರಾ|| ಗಜಾನನ ನಾರಾಯಣ ಹೆಗಡೆ, ರಾ|| ಗೋಪಾಲ ವೆಂಕಟರಮಣ ಹೆಗಡೆ, ಗೋಕರ್ಣದ ರಾ|| ಮಹಾಬಲೇಶ್ವರ ಗಜಾನನ ಭಟ್ಟ ಗೋಪಿ, ಬಂಕಿಕೊಡ್ಲದ ರಾ|| ಪದ್ಮನಾಭ ಅನಂತ ನಾಡಕರ್ಣಿ ಮತ್ತು ಮಾಂಗೋಡ ವಾಸುದೇವ ನಾಡಕರ್ಣಿ ಇವರು ಈ ಗೊತ್ತುವಳಿಯನ್ನು ಸೂಚಿಸಿ ಸಮರ್ಥಿಸಿ ಸರ್ವಾನುಮತದಿಂದ ಮನ್ನಿಸಿಕೊಂಡರು

ರಾ|| ದಿನಕರ-ದಯಾನಂದರ ಕೈಕೆ-ಕಟಿದ ಮಹಾಸಭೆಯೊಂದು ನಿನ್ನೆ ಸಂಜೆ ಹಿರೇಗುತ್ತಿಯಲ್ಲಿ ನೆರೆತು ವಾಂಢೀರ್ಯಂತ ರಾ|| ದೇಸಾಯಿಯವರೂ ಅವರ ಸಹೋದ್ಯೋಗಿಗಳೂ ಒಡೆಯ-ಸಮಾಜಕ್ಕೂ, ಕೆಲವೊಂದು ಒಡೆಯ-ವ್ಯಕ್ತಿಗಳಿಗೂ ಯಥೇಚ್ಛ ಬೈದರು! ಅದರಿಂದ ಕೆಲವು ಸಭಿಕರೊಳಗೆ ಕ್ಷೋಭವುಂಟಾಯಿತು ರಾ|| ದೇಸಾಯಿಯವರಿಗೆ ಪ್ರತ್ಯುತ್ತರ ಕೊಡಲು ಸಭಿಕರೊಬ್ಬರು ಮುಂದಾದರು ಆದರೆ ದೇಸಾಯಿಯವರು ಅವರಿಗೆ ಮಾತಾಡಲು ಅವಕಾಶ ಕೊಡಲಿಲ್ಲ! ಅಷ್ಟಕ್ಕೆ ಅವರು ಕರೆಯುವೆ, "ಬರುವ ತಾ ೨೫ಕ್ಕೆ ಶ್ರೀ ಮಹಾಬಲೇಶ್ವರ ದೇವರಿಗೆ ಮೂರು ಪ್ರದಕ್ಷಿಣೆಗಳನ್ನು ಹಾಕಿ ಅಶ್ವಮೇಧ ಕುದುರೆಯನ್ನು ಬಿಡುತ್ತೇನೆ, ನಾನು ಬಿಟ್ಟ ಆ ಕುದುರೆಯನ್ನು ಕಟ್ಟಿಹಾಕುವ ಸಾಹಸಿ ಬಭ್ರುವಾಹನನ ರಾಜಾದರೂ ಇದ್ದರೆ ಮುಂದೆ ಬರಲಿ! ಎಂದು ಅವರು ಒಂದು ಆಹ್ವಾನವನ್ನು ಕೊಟ್ಟರು! ಅವರ ಹಿಂದಿನಿಂದ ಮಹಾಬಾಗದ ಸಗಡಗೇರಿಯ ರಾ|| ವೆಂಕಟರಮಣ ನಾಯ್ಕರ ಆವೇಶದ ಭಾಷಣದಿಂದ ಸಭಿಕರೆಲ್ಲರ ಆವೇಶ ತುಂಬಿತು! ಆ ಆವೇಶದೊಳಗಿಂದಲೇ ಬಭ್ರುವಾಹನನೊಬ್ಬನು ಏಕಾಏಕಿ ಹೊಂದಿ, "ಇಗೋ ನೋಡಿ, ನಿಮಗೆ ಬೇಕಾದ ಬಭ್ರುವಾಹನ ಇದ್ದಾನೆ!" ಎಂದ ಹಗದಾರುಹತ್ತಿದನು! ಸಭೆಯೊಳಗೆಲ್ಲ ಗೊಂದಲವುಂಟಾಯಿತು! ಸಭಾಸ್ಥಳವು ರಣರಂಗದೊಳಗೆ ಪರಿವರ್ತನೆ ಹೊಂದಿತು! ಈ ಧುಮಶ್ಚಕ್ರಿಯಲ್ಲಿ ರಾ|| ದೇಸಾಯಿ, ದಯಾನಂದ ಮತ್ತು ವೆಂಕಟರಮಣ ನಾಯ್ಕರು ಗಾಯಾಳುಗಳಾದರು! ರಾ|| ಶಿರಾಲಿ ಮಹಾಶಯರು ಮಾತ್ರ ಜಾಣತನದಿಂದ ತಪ್ಪಿಸಿಕೊಂಡು ಓಡಿಹೋದರು! ಈ ಧುಮಶ್ಚಕ್ರಿಯನ್ನು ಶಾಂತಗೊಳಿಸಿ, ಗಾಯಾಳುಗಳಾದ ಕೂಟದ ಮೂವರು ಮುಖಂಡರನ್ನು ಸುರಕ್ಷಿತ ಸ್ಥಳಕ್ಕೆ ಒಯ್ಯಬೇಕಾದರೆ ಪೋಲೀಸರಿಗೆ ಸಾಕು ಸಾಕಾಯಿತು. ರಾ|| ದೇಸಾಯಿಯವರ ಅಶ್ವಮೇಧದ ಕುದುರೆ ಈ ರಣರಂಗದೊಳಗಿಂದ ಎತ್ತ ಓಡಿಹೋಯಿತೋ ತಿಳಿಯಲಿಲ್ಲ!

ಗೋಕರ್ಣ ನರಮೇಧದ ಖಟ್ಲೆಯ ವಿಚಾರಣೆಗೆ ಕಾರವಾರ ಸೆಶನ್ಸ ಕೋರ್ಟಿನಲ್ಲಿ ಇದೇ ಬರುವ ಮಾರ್ಚ ೫ಕ್ಕೆ ಪ್ರಾರಂಭವಾಗುವದೆಂದು ತಿಳಿಯುತ್ತದೆ

ನಾಡದು ಬುಧವಾರ ತಾ ೧೫ ನೇಗೆ ಮಹಾಶಿವರಾತ್ರಿಯ ನಿಮಿತ್ತ ಟಪಾಲಕಚೇರಿಗಳಿಗೆ ರಜೆ ಕೊಡಲಾಗಿದೆಂದೂ ಅಂದು ಕಚೇರಿಗಳು ತೆರೆಯಲ್ಪಡಲಿಕ್ಕಿಲ್ಲೆಂದೂ ಇಲ್ಲಿಯ ಅಂಚೆಕಚೇರಿಯ ಅಧಿಕಾರಿಗಳು ತಿಳಿಸುತ್ತಾರೆ

ಹೊನ್ನಾವರ— (ತಾ ೧೨-೨-೩೦) ನಿನ್ನೆ ರಾತ್ರಿ ಹಳದೀಪುರ ಸ್ಟೇಶನ ಮಾಲಿಕರಿಯಲ್ಲರ ವ ಶ್ರೀ ದೇವಿಯ ಅಮ್ಮನವರಲ್ಲಿ ಭಾರಿ ಕಳವಾದ ಸುದ್ದಿ ಬಂದಿದೆ ಕಳ್ಳರು ಆಭರಣಗಳ ಪೆಟ್ಟಿಗೆಯನ್ನೇ ಒಡೆದು ಸುಮಾರು ರೂ. ೩೦೦೦ ಬೆಲೆ ಬಾಳುವ ಚಿನ್ನ-ಬೆಳ್ಳಿಯ ಆಭರಣಗಳನ್ನೂ ನಗದಿಯನ್ನೂ ಅಪಹರಿಸಿಕೊಂಡು ಹೋಗಿರುತ್ತಾರೆ ಪೋಲೀಸ ತಪಾಸಣೆಗೆ ಆರಂಭವಾಗಿದೆ

ಇದೇ ಕಳೆದ ತಾ ೨ರಕ್ಕೆ ರಾತ್ರಿ ಹೊತ್ತಿನಲ್ಲಿ ಕರ್ಕಿಯ ಟಪಾಲಕಚೇರಿಯೊಳಗೆ ಕಳವಾದ ಸುದ್ದಿಯೊಂದು ಬಂದಿದೆ ಯಾರೋ ಕಳ್ಳರು ಬಾಗಿಲಿಗೆ ಹಾಕಿದ ಬೀಗವನ್ನು ಮುರಿದು ಒಳಹೊಕ್ಕು, ಒಳಗಿದ್ದ ೨ ಪೆಟ್ಟಿಗೆಗಳ ಬೀಗಗಳನ್ನು ಮುರಿದುತೆಗೆದು ಕೆಲವು ಹಣವನ್ನು, ಸ್ಟ್ಯಾಂಪು-ಕಾರ್ಡು-ಕಾಗದಗಳನ್ನೂ ಒಯ್ದಿರುತ್ತಾರಂತೆ ಈ ಕಳವಾದ ೮ ದಿನಗಳ ಹಿಂದೆಯಷ್ಟೆ ಕಳ್ಳರು ಈ ಟಪಾಲಕಚೇರಿಯ ಕಿಟಕಿಯ ಕಬ್ಬಿಣದ ಸರಳುಗಳನ್ನು ಕಿತ್ತು ಒಳಹೊಕ್ಕಲು ಪ್ರಯತ್ನಿಸಿದ್ದರು. ಅಂದು ಅವರ ಪ್ರಯತ್ನ ಫಲಪ್ರದವಾಗಲಿಲ್ಲ. ಅಂದಿನ ಆ ಘಟನೆಯಿಂದ ಯೋಗ್ಯ ಎಚ್ಚರಿಕೆ ಪಡೆಯದ ಅಂಚೆಕಚೇರಿಯ ಅಧಿಕಾರಿಗಳು ಟಪಾಲಕಚೇರಿಯಲ್ಲಿ ಯೋಗ್ಯ ಕಾವಲಿಲ್ಲದೆ ನಗದು ಹಣ ಮುಂತಾದವನ್ನು ರಾತ್ರಿ ಕಾಲಕ್ಕೆ ಅಲ್ಲಿ ಹಾಗೆ ಬಿಟ್ಟು ಹೋದದರಿಂದ [illegible] ಯಾಗಿದೆ

ಕಾರವಾರ (ತಾ ೧೧-೨-೩೦) ಈ ತಿಂಗಳ ಬಜೆಟಿನ ಬಗ್ಗೆ ನಮ್ಮ ಜಿಲ್ಹೆಗೆ ೨೪೧೭ ಬೇಲು ಸಕ್ಕರೆ ಸಿಕ್ಕಿದೆಯಂತೆ ಅದರಿಂದ ಈ ತಿಂಗಳಲ್ಲಿ ಜಿಲ್ಹೆಯೊಳಗಿನ ಎಲ್ಲ ಹಳ್ಳಿ ಪಟ್ಟಣಗಳೊಳಗಿನ ಜನರಿಗೆ ತಲಾ ೧ ರತ್ತಲದಂತೆ — ಪೂರ್ವಾರ್ಧದಲ್ಲಿ ½ ರತ್ತಲು ಮತ್ತು ಉತ್ತರಾರ್ಧದಲ್ಲಿ ½ ರತ್ತಲು — ಸಕ್ಕರೆ ಕೊಡಬೇಕೆಂದು ನಿರ್ಣಯವಾಗಿದೆ ಜನರಿಗೆ ಬಜೆಟ ಮಾಡಲು ಅವಶ್ಯವುಳ್ಳಷ್ಟು ಸಕ್ಕರೆಯನ್ನು ಇಟ್ಟು ಉಳಿದ ಸಕ್ಕರೆ — ೧೨೭ ಬೇಲ ಉಳಿಯುವದೆಂದು ಲೆಕ್ಕ ಹಾಕಿದ್ದಾರೆ — ವಿಶ್ರಾಂತಿ ಅಂಗಡಿಗಳಿಗೆ ಹಂಚಿ ಕೊಡುವರಂತೆ.

ವಿಮಾಗಾರನ ಸೂಚನೆ

(೩ನೇ ಪುಟದಿಂದ ಮುಂದರಿಸಿದ್ದು)

ಈಗ ನ್ಯಾಯಾಲಯಗಳಲ್ಲಿ ದಾಖಲ ಮಾಡಿದ ಸರಾಯಿಯನ್ನು ಖಟ್ಲೆಗಳ ವಿಚಾರಣೆ ಮುಗಿದ ನಂತರ ನಾಶಪಡಿಸುತ್ತಾರೆ ಹಾಗೆ ಮಾಡುವದರ ಬದಲು ಅದನ್ನು ಸ್ಪಿರಿಟ ತಯಾರಿಸಲಿಕ್ಕೆ ಉಪಯೋಗಿಸಬೇಕೆಂದು ಸೂಚನೆಯಿದೆ

ಈಗ ಮದ್ಯ-ಪ್ರತಿಬಂಧದ ಕೆಲಸವನ್ನು ಪೋಲೀಸ ಖಾತೆಗೆ ಒಪ್ಪಿಸಲಾಗಿದೆ, ಅವರಿಗೆ ಗೃಹ-ರಕ್ಷಕ ದಳಗಳವರು ಸಹಾಯ ಮಾಡುತ್ತಿದ್ದಾರೆ ಇವರಿಗೆಲ್ಲ ಮಾರ್ಗದರ್ಶನ ಮಾಡಲು ಮದ್ಯ-ಪ್ರತಿಬಂಧಕ ಸಮಿತಿಯೊಂದು ಇಷ್ಟೆಲ್ಲ ದೊಡ್ಡ ಪರಿಮಾಣದ ಮದ್ಯನಿರೋಧನ ಕಾರ್ಯ ನಡೆಯುತ್ತಿದ್ದರೂ ಸರಾಯಿಯ ವ್ಯಾಪಾರ ಎಳ್ಳಷ್ಟು ಕುಗ್ಗಿಲ್ಲ ಹಾದು ಶಿಬಂದಿಯ ಸಂಬಳ, ಸಮಿತಿಯ ಸದಸ್ಯರ ಭತ್ಯೆಗಳು ಮುಂತಾದ ವೆಚ್ಚ ಮಾತ್ರ ಬೆಳೆದಿದೆ. ಮದ್ಯ-ನಿರೋಧನ ಸಮಿತಿಯಲ್ಲಿ ಅಂಕೋಲೆಯ ಶಹರದವರೇ ಹೆಚ್ಚಿಗೆ ಮಂದಿ! ಅವರು ಹಳ್ಳಿಗಳಲ್ಲಿ ತಿರುಗಾಡುವದು ಕಡಿಮೆ. ಹಳ್ಳಿಗಳೊಳಗಿನ ಆಗು ಹೋಗುಗಳ ತಿಳಿವು ಅವರಿಗೆ ಕಡಿಮೆ ಈ ಸಮಿತಿಯ ಪುನರ್ಘಟನೆ ಮಾಡಿ ವಿಸ್ತರಣ ಮಾಡಿ, ಅದರಲ್ಲಿ ಕೆಲವೊಂದು ಸುಶಿಕ್ಷಿತ ವಿಮಾಗಾರರನ್ನು ನೇಮಿಸಿಕೊಳ್ಳುವದು ಅವಶ್ಯವುಂಟು ಹಾಗೆ ಮಾಡಿದಲ್ಲಿ ಮತ್ತು ಮದ್ಯನಿರೋಧನ ಕಾರ್ಯದಲ್ಲಿ ವಿಮಾಗಾರ ಸಮಾಜದವರ ಸಹಕಾರ ಸಂಪಾದಿಸಿದಲ್ಲಿ ಮದ್ಯ-ನಿರೋಧನ ಕಾರ್ಯವು ಶೀಘ್ರವಲ್ಲೇ ಫಲಕಾರಿಯೂ ಯಶಸ್ವಿಯೂ ಆಗುವಂತುಂಟು

ಸರಾಯಿಯ ಖಟ್ಲೆಗಳಲ್ಲಿ ಕೆಲವೊಮ್ಮೆ ಮದ್ಯ-ಪ್ರತಿಬಂಧಕ ಸಮಿತಿಯೊಳಗಿನ ಮತ್ತು ಗೃಹರಕ್ಷಕ ದಳಕ್ಕೆ ಸಂಬಂಧಪಟ್ಟ ವಕೀಲರು ಆರೋಪಿತ ಸರಾಯಿಗಾರರ ವಕಾಲತ್ತು ವಹಿಸುತ್ತಿರುವ ವಿಚಿತ್ರ ನೋಟಗಳು ಕಣ್ಣಿಗೆ ಬೀಳುತ್ತವೆ ಹೀಗಾಗುವದು ಮದ್ಯನಿರೋಧನ ಕಾರ್ಯಕ್ಕೆ ಒಂದು ಕಳಂಕವೇ ಸರಿ ಅದ್ದರಿಂದ ಇಂತಹ ವಕೀಲರು ಸರಾಯಿಯ ಖಟ್ಲೆಗಳಲ್ಲಿ ಆರೋಪಿಗಳ ವಕಾಲತು ವಹಿಸದಂತೆ ಕಟ್ಟಳೆ ಮಾಡಬೇಕಾಗಿ ಆಶೆಯುಂಟು

ಜಿಲ್ಲಾ ಸಮಾಚಾರ

ಸಿದ್ದಾಪುರ— (ತಾ ೧-೧-೫೦) [illegible]

[illegible]

ಶಿರ್ಸಿ— [illegible]

ಅಂಕೋಲಾ— [illegible]

ಕಾರವಾರ— [illegible]

ಕುಮಟಾ— [illegible]

ನಮ್ಮಲ್ಲಿ ಕಿತ್ತದಿಂದ ತಯಾರಿಸಿದಂಥ ಚಕಾರ್ ಹುರಿ, ಬಾವಿ ಹಗ್ಗ, ಬ್ರಶ ಮೆಟ್ಟು, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ತ್ರಿವೇಂದ್ರಮ್, ಕೊಯಿರ್ ಸೊಸೈಟಿ ಲಿಮಿಟೆಡ್,

ಹೊನ್ನಾವರ (ಉ ಕನ್ನಡ)

PUBLIC NOTICE

In the Court of the District Judge, at Karwar.

Miscellaneous No 6 of 1950

The Bank of Rural India Limited, Karwar
represented by P X Gracious Managing
Director age 3?, resident of Karwar — Petitioner

Whereas, Mr M G Chandavarkar, pleader for the petitioner Bank has filed a petition under section 12 of the Indian Companies Act VII of 1913 praying for an order under section 13 of the said Act, confirming the alterations (given below) in clause 3(b) sub clause 2, and the deletion of sub clause 6 of the Memorandum of the Association of the said Bank

Now, therefore, all the persons concerned, are hereby requested to take note that this court has fixed 7th day of March 1950 for receipt of objections if any And therefore, all the persons interested in the said Bank are hereby informed that they should file their objections if any in this court on or before the said date, and they are, further informed that in the absence of any objections, this court will hear the petition and pass such orders as are deemed necessary

Alterations sought to be confirmed are "3(b) sub clause (2) Acting as agents for Government or Local Authorities or for any other person or persons, the carrying on of agency business of a Managing agent of a Company **not being a Banking Company** including the power to act as attorneys and to give discharges and receipts" "3(b) (6) Promoting or financing of syndicate or otherwise"

In clause 3(b) sub-clause 2 the words "not being a Banking Company" after the words "of a company" and the whole of sub clause 6 are to be deleted As a necessary consequence the remaining sub-clauses in clause 3 (b) viz, 7 to 17 are to be renumbered as 6 to 16

Given under my hand and the seal of this Court this 6th day of February 1950

Seal of the Court

N. S. Shrikhande,
District Judge, Kanara

...ನ್ಯಾರ ದವೂ ಈ ಸ್ಪರ್ಧೆ ಮಾಡಬೇಕೆಂದೂ ತಾ ೨೧–೧೨–೪೯ರ ವೃತ್ತ"ದಲ್ಲಿ ಬಂದ ಟೀಕೆಯನ್ನು ಅನುಲಕ್ಷಿಸಿ ಧಾರವಾಡದಲ್ಲಿರುವ ಟಪಾಲ ಕಟ್ಟಿಗಳ ಮೇಲ್ವಿಚಾರಕರು ತಿಳಿಸುತ್ತಾರೇನೆಂದರೆ — ಸದರಿ ಪಾರ್ಸಲನ್ನು ಬಹುಶಃ ಹುಬ್ಬಳ್ಳಿಯಲ್ಲಿ ಕಟ್ಟಿಯಲ್ಲಿರುವ ಅಟ್ಟ ಕನ್ನಡಿಗನ್ನಾದವರೂ ಸದ ವ ಕಡೆ ಹಿಡಿದು ಹಿಂದಕ್ಕೆ ಕಳಿಸಿರಬೇಕೆಂದು "ವೃತ್ತ" ವು ಮಾಡಿದ ಊಹ ನಿರಾಧಾರವಾದುದು, ಅದು ಅಂಚೆ ಕಟ್ಟಿಯವರು, ಮುಂಬಯಿಗೆ ಕಳಿಸಲೆಂದು, ಅದನ್ನು ಹುಬ್ಬಳ್ಳಿಗೆ ಕಳಿಸಿದ್ದಿಲ್ಲ, ಹುಬ್ಬಳ್ಳಿಯಿಂದಲೇ ಅದು ತಿರುಗಿ ಬಂದಿರುವದಕ್ಕೆ ಯಾವ ಹೇಳಲಿಕ್ಕೂ ಸಾಕಷ್ಟು ಪುರಾವೆಯಿಲ್ಲ. ಡಾ|| ಭಟ್ಟರು ಪಾರ್ಸಲು ಮುಂಬಯಿಯನ್ನು ಮುಟ್ಟಲಿಲ್ಲೆಂಬುದು ನಿಜ ಆದರೆ ಎಲ್ಲಿ ಮತ್ತು ಯಾರು ಅದನ್ನು ತಡೆಹಿಡಿದು ತಿರುಗಿ ಕಳಿಸಿದರೆಂಬುದು ತಿಳಿಯದು. ಡಾ|| ಭಟ್ಟರು ಕಳಿಸಿದ ಪಾರ್ಸಲ್ಲು ಗ್ರಾಹಕರಿಗೆ ಮುಟ್ಟದೆ ಮತ್ತು ಅದು ಟಪಾಲ ಕಟ್ಟಿಯವರ ಯಾವದೊಂದು ತಪ್ಪು ಇಲ್ಲದೆ ತಿರುಗಿ ಬಂದಿರುವದರಿಂದ ಅದರ ವೆಚ್ಚ (೬ ಆಣೆ) ಡಾ|| ಭಟ್ಟರಿಗೆ ತಿರುಗಿ ಮುಟ್ಟಿಸಲು ಆಜ್ಞಾಪಿಸಲಾಗಿದೆ, ಇತ್ಯಾದಿ

ಕಡವಾಡದೊಳಗಿನ ಗಾಂವಠಿ ಶಾಲೆಯಲ್ಲಿರುವ ಇಬ್ಬ ಶಿಕ್ಷಕರಲ್ಲಿ ಸಹಾಯಕ ಶಿಕ್ಷಕರು ನಿರುಪಯೋಗಿಗಳಾಗಿರುತ್ತಾರೆಂದ. ಶ್ರೀ ರಾಮಾ ನಾರಾಯಣ ನಾಯ್ಕ ಎಂಬವರು ದೂರುತ್ತಾರೆ ಈ ಶಿಕ್ಷಕರು ವಾರದಲ್ಲಿ ೩ ೪ ದಿನ ರಜೆ ತಕ್ಕೊಳ್ಳುತ್ತಾರಂತೆ ಹೊತ್ತಿಗೆ ಸರಿಯಾಗಿ ಶಾಲೆಗೆ ಬರುವದಿಲ್ಲವಂತೆ ಶಾಲೆಯ ಮೇಲ್ವಿಚಾರಕರು ಇದೇನೆಂದು ಚೌಕಶಿ ಮಾಡಬೇಕು

ಹೊನ್ನಾವರ—

(ತಾ. ೧–೨–೫೦ , ಕರ್ಕಿಯಲ್ಲಿರುವ ೨ ಸೀಧಾ ಅಂಗಡಿಗಳ ಪೈಕಿ ಶ್ರೀ ಚೆನ್ನಕೇಶವ ವಿದ್ಯಾ ಸಂಘದವರು ನಡಿಸುತ್ತಿರುವ ಅಂಗಡಿಯವರು ಆಗಾಗ ಸೀಧಾ ಸಾಮಗ್ರಿಯನ್ನು ತರಿಸದಿಲ್ಲೆಂದೂ, ಇದರಿಂದ ಸೀಧ ಪತ್ರಧಾರಿಗಳಿಗೆ ಕಷ್ಟವಾಗುತ್ತಿದೆಂದೂ ಶ್ರೀ|| ದಾಮೋದರ ಜೋಶಿ ಎಂಬವರು ದೂರುತ್ತಾರೆ ಅಧಿಕಾರಿಗಳು ಚೌಕಶಿ ಮಾಡಬೇಕಾಗಿ ಸೂಚನೆಯುಂಟು

ಮುರ್ಡೇಶ್ವರ—

(ತಾ ೮–೨–೫೦) ೧೫–೨೦ ದಿನಗಳಿಂದ ಇಲ್ಲಿ ತನ್ನ ಟೊಪ್ಪಿಯ ನಾಟಕಗಳನ್ನು ಆಡುತ್ತಿರುವ ವಿಜಯಾ ಸಂಗೀತ ನಾಟಕ ಮಂಡಳಿಯವರು ತಮ್ಮ ಒಂದು ಪ್ರಯೋಗದ ಉತ್ಪನ್ನವನ್ನು ಶ್ರೀ ಮುರ್ಡೇಶ್ವರ ದೇವರ ಭಂಡಾರಕ್ಕೂ, ಇನ್ನೊಂದು ಪ್ರಯೋಗದ ಉತ್ಪನ್ನವನ್ನು ಶ್ರೀ ಕಾಮಾಕ್ಷಿ ದೇವರ ಗುಡಿಯ ಭಂಡಾರಕ್ಕೂ ಕೊಟ್ಟಿರುತ್ತಾರೆ

ಭಟಕಳ—

(ತಾ ೨–೨–೫೦) ನಾಡಿನ ಆಹಾರೋತ್ಪತ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಅಲ್ಲಲ್ಲಿ ಸಾಗುವಳಿ ಬಿದ್ದಿರುವ ಪಾಳ್ಕೋ ಹೊಲಗಳನ್ನು ಕೂಡಲೆ ಸಾಗುವಳಿಯಲ್ಲಿ ತರುವಂತೆ ಒಡೆಯರಿಗೆ ಅಧಿಕಾರಿಗಳು ಎಚ್ಚರಿಕೆ ಕೊಡಬೇಕೆಂದೂ, ಅವರು ಅಲಕ್ಷ ಮಾಡಿದರೆ ಆ ಹೊಲಗಳನ್ನು ರೈತರಿಗೆ ಕೊಡಿಸಬೇಕೆಂದೂ ಶ್ರೀ ಜಿ ಎಸ್ ಕಾಮತ (ಎಜೆಂಟ ಇವರು ಒಂದು ಸೂಚನೆ ಮಾಡುತ್ತಾರೆ [ಶ್ರೀ ಕಾಮತರ ಸೂಚನೆ ಕಾಣಲು ವಿಚಾರಾರ್ಹವಿರುತ್ತಿದ್ದರೂ ಅದು ಶುದ್ಧ ದೇಶಪ್ರೇಮದಿಂದ ಕೂಡಿದ್ದೆಂದು ಹೇಳಬರುವಂತಿಲ್ಲ ಒಡೆಯರ ಭೂಮಿಗಳನ್ನು ಹೇಗಾದರೂ ಎತ್ತಿಹಾಕಬೇಕೆಂದು ಹೊಂಚು ಹಾಕುವ ರೈತರ ಪಕ್ಷಿಲಿಯನ್ನು ಶ್ರೀ ಕಾಮತರು ಮಾಡುತ್ತಿರಬೇಕೆಂದು ಕಾಣುತ್ತದೆ ಆಹಾರೋತ್ಪತ್ತಿಯನ್ನು ಬೆಳೆಸಿ ದೇಶಸೇವೆ, ಲೋಕಸೇವೆ ಮಾಡುವದೇ ಶ್ರೀ ಕಾಮತರ ಹಾಗೂ ಅವರ ಪಕ್ಷದ ರೈತ ಸಮಾಜದ ಧ್ಯೇಯವಿರುತ್ತಿದ್ದರೆ ಸರಕಾರಿ ಪಡ ಭೂಮಿಗಳ ಕಡೆ ಅವರು ಪ್ರಥಮ ಲಕ್ಷ ಕೊಡುತ್ತಿದ್ದರು ಶ್ರೀ ಕಾಮತರಿಗೂ ಅವರ ರೈತರಿಗೂ ಸಾಕಾಗಿ ಉಳಿಯುವಷ್ಟು ಸರಕಾರಿ ಪಡ ಭೂಮಿಗಳು ನಮ್ಮ ಜಿಲ್ಲೆಯಲ್ಲಿವೆ. ಅವುಗಳನ್ನು ಸಾಗುವಳಿಯಲ್ಲಿ ತರುವ ಪ್ರಯತ್ನ ಮಾಡದೆ ಖಾಸ್ಗಿ ಭೂಮಿಗಳ ಕಡೆ ಶ್ರೀ ಕಾಮತರು ಹಾಗೂ ಅವರ ಬಳಿ ರೈತರು ತಮ್ಮ ದೃಷ್ಟಿ ತಿರುಗಿಸಿದ್ದು ನ್ಯಾಯ್ಯವಲ್ಲ, ಸ್ತುತ್ಯವಲ್ಲ, ದೇಶಪ್ರೇಮದ ಲಕ್ಷಣವಂತೂ ಅಲ್ಲವೇ ಅಲ್ಲ ಶ್ರೀ ಕಾಮತರೂ ಅವರ ಗೆಳೆಯರೂ ಇಂಥ ಮನೋವೃತ್ತಿಯನ್ನು ಬೇಗನೇ ಬಿಟ್ಟುಕೊಡುವದೊಳಿತು

— ಸಂಪಾದಕ]

ಜಿಲ್ಹಾ ಮದ್ಯ ಪ್ರತಿಬಂಧ ಸಮಿತಿಗೆ ವಿಮಾನಗಾರರೊಬ್ಬರ ಸೂಚನೆಗಳು

(ಶ್ರೀ ಎಚ್ ಆ . ಜೋಶಿ, ಕಾರವಾರ ಇವರು ಸ್ವತಃ ವಿಮಾನಗಾರ ಸಮಾಜದವರಿರುತ್ತಾರೆ ವಿಮಾನಗಾರರ ಸಂಘಟನೆ ಮಾಡಿ ಅವರನ್ನು ಸುಧಾರಣೆಯ ಮೇಲ್ಪಟ್ಟಕ್ಕೆ ತರಬೇಕೆಂದು ಅವರ ಹಂಬಲವಿದೆ ವಿಮಾನಗಾರರಲ್ಲಿ ಮದ್ಯದ ಚಟ ಬಹಳವುಂಟು, ಸಮುದ್ರಯಾನವಾಗಿ ನಡೆಯುವ ಕಳ್ಳ ಸಾರಾಯಿಯ ವ್ಯಾಪಾರ ಈ ವಿಮಾನಗಾರರ ಮುಖಾಂತರವೇ ನಡೆಯುತ್ತದೆ ಇದನ್ನೆಲ್ಲ ಅರಿತ ಶ್ರೀ ಜೋಶಿಯವರು ಮದ್ಯನಿರೋಧನ ಕಾರ್ಯದ ಯಶಸ್ವಿ ನಿರ್ವಹಣಕ್ಕಾಗಿ ಕೆಲವು ಗಮನಾರ್ಹ ಸೂಚನೆಗಳನ್ನು ಮಾಡಿರುತ್ತಾರೆ. ಅವುಗಳ ಸಾರವನ್ನು ಇಲ್ಲಿ ಕೊಡಲಾಗಿದೆ)

ನಮ್ಮ ಜಿಲ್ಹೆಯಲ್ಲಿ ಕನ್ನಡ ಮಾತಿನವರು ಹೆಚ್ಚಿಗೆ ಮಂದಿ ಇದ್ದರೂ ಎಷ್ಟೋ ಭಾಗಗಳಲ್ಲಿ ಕೊಂಕಣ ಮಾಯ್ನುಡಿಯವರ ಹೆಚ್ಚಳವುಂಟು ಕಾರವಾರ, ಹಳಿಯಾಳ ತಾಲೂಕುಗಳಲ್ಲೂ ಸುಪಾ ಪೇಟೆಯಲ್ಲೂ ಕೊಂಕಣಿ–ಮರಾಠಿ ಆಡುವವರ ಪ್ರಾಬಲ್ಯವಿದೆ. ಇವರಿಗೆ ಕನ್ನಡ ತಿಳಿಯುವದಿಲ್ಲ. ತಿಳಿದ ಕೆಲವರಿಗೂ ಅದು ಸರಿಯಾಗಿ ತಿಳಿಯುವದಿಲ್ಲ ಇಂಥ ಜನರೊಳಗೆ ಮದ್ಯ–ಪ್ರತಿಬಂಧದ ಪ್ರಚಾರ ಮಾಡುವವರು ಕೊಂಕಣಿಯಿಂದ ಇಲ್ಲವೆ ಮರಾಠಿಯಿಂದ ಮಾಡುವದುಚಿತ ಇವರಿಗೆ ತೋರಿಸಲ್ಪಡುವ ಚಿತ್ರಪಟಗಳು ಮರಾಠಿ ಭಾಷೆಯ ವಿವರವುಳ್ಳ ವಿಹಿತ

ಕಳ್ಳ ಸಾರಾಯಿಯ ಸಾಗಾಟದಲ್ಲಿ ವಿಮಾನಗಾರರೇ ಹೆಚ್ಚಾಗಿ ತೊಡಗಿರುವದರಿಂದ, ಅವರನ್ನು ಆ ಉದ್ಯೋಗದಿಂದ ಪರಾವರ್ತಿಸುವ ಪ್ರಯತ್ನಕ್ಕೆ ಪ್ರಾಧಾನ್ಯ ಕೊಡಬೇಕು. ಸಾರಾಯಿಯ ವ್ಯಾಪಾರದಲ್ಲಿ ತೊಡಗಿರದ ಇಲ್ಲವೆ ಕುಡಿಯ ಚಟವಿಲ್ಲದ ೧೦ ಜನ ವಿಮಾನಗಾರರನ್ನು ಮುಂದೆ ಮಾಡಿ ಅವರ ಮುಂದೆ ಚಿತ್ರಪಟಗಳನ್ನು ತೋರಿಸಿ ಪ್ರಚಾರ ಮಾಡುವ ಪ್ರಯೋಜನವೇನು ? ಮದ್ಯ-ನಿರೋಧನ ಕಾರ್ಯವು ಕ್ರಮಬದ್ಧವಾಗಿ ನಡಿಸಬೇಕಾಗಿದ್ದರೆ ೭ ಸಂಸ್ಕಾರ-ಕೇಂದ್ರಗಳನ್ನು ತೆರೆಯಲು ನಿಶ್ಚಯಿಸಿ, ಸರಕಾರವು ಅವುಗಳ ಕಮಿಟಿಯು ಆರಿಸಿ ಸೊಸೈಟಿಗೆ ರೂ. ೫೦೦ ಮತ್ತು ಕಿರಿದಾದ ಸೊಸೈಟಿಗಳಿಗೆ ರೂ ೫೦೦ ಕೊಟ್ಟಿದೆ ಈ ಸೊಸೈಟಿಗಳ ಸಂಸ್ಕಾರ-ಕೇಂದ್ರಗಳಿಂದ ಏನು ಪ್ರಯೋಜನವಾಗಬಲ್ಲದು ? ಈ ಸೊಸೈಟಿಗಳಿಗೆ ಕೊಡುವ ದುಡ್ಡನ್ನು ವಿಮಾನಗಾರರ ಸಹಕಾರಿ ಸಂಘಗಳಿಗೆ ಕೊಟ್ಟು, ಅವುಗಳಿಗೆ ಮದ್ಯನಿರೋಧನ ಕಾರ್ಯದ ಹೊಣೆ ಒಪ್ಪಿಸಿದರೆ ಎಷ್ಟೋ ಕಾರ್ಯವಾಗುತ್ತಿತ್ತು ನಮ್ಮ ಜಿಲ್ಹೆಯ ಕರಾವಳಿಯಲ್ಲಿ ಈಗಾಗಲೇ ೧೧ರಷ್ಟು ವಿಮಾನಗಾರರ ಸಹಕಾರಿ ಸಂಘಗಳಿವೆ.

ನಮ್ಮ ಜಿಲ್ಹೆಯ ಕರಾವಳಿಯು ಸುಮಾರು ೮೦ ಮೈಲು ಉದ್ದವಿದೆ ಈ ಇಡೀ ಕರಾವಳಿಯಲ್ಲಿ ಕಳ್ಳ ಸಾರಾಯಿಯು ಆಯಾತ ಮತ್ತು ಬಟವಡೆಯಾಗುತ್ತಿದ್ದರೂ, ಕಾರವಾರದ ಹರಿಕಂತ್ರವಾಡ, ಕುಮಟೆಯ ಅಳ್ವೆ–ಬಾಗಿಲ, ಕಾಸರಕೋಡ, ಶಿಂಗಿನಗುಂಡಿ ಮೊದಲಾದ ಕೆಲವು ಕೇಂದ್ರಗಳಲ್ಲಿ ಈ ಕಳ್ಳ ವ್ಯಾಪಾರ ವಿಶೇಷ ಪ್ರಮಾಣದಿಂದ ನಡೆಯುತ್ತದೆ ಈ ಕೇಂದ್ರಗಳಲ್ಲಿ ಸರಕಾರವು ಹೆಚ್ಚಿನ ದಕ್ಷ ಪೋಲೀಸ ಶಿಬಂದಿಯನ್ನು ಇಡುವದು ಅವಶ್ಯವಿದೆ

ಸಾರಾಯಿ ಹಿಡಿದಾಗ ಸಂಚನಾಮೆ ಮಾಡಲು ಪಂಚರು ಸಿಗುವದಿಲ್ಲೆಂಬುದೊಂದು ಪೋಲೀಸರ ದೂರುಂಟು ಪ್ರತಿಯೊಂದು ವಿಮಾನಗಾರ ಸಂಘದವರು ಮದ್ಯ ನಿರೋಧನ ಉಪಸಮಿತಿಯನ್ನು ನೇಮಿಸುವಂತೆಯೂ, ಈ ಉಪಸಮಿತಿಯವರು ಪೋಲೀಸರಿಗೆ ನೆರವಾಗುವಂತೆಯೂ ಸರಕಾರ ಅಲ್ಲಿಯವರು ವ್ಯವಸ್ಥೆ ಮಾಡಿದರೆ ಪೋಲೀಸರ ಈ ಅಡಚಣೆ ಪರಿಹಾರವಾಗಬಹುದು

ಸಾರಾಯಿ ಹಿಡಿಯುವ ಪೋಲೀಸರೂ ಅವರ ಪಂಚರೂ ಕಳ್ಳ ಸಾರಾಯಿಯೊಳಗಿನ ಕೆಲವು ಅಂಶಕ್ಕೆ ತಮ್ಮ ಉದರಗಳೊಳಗೆ ಆಶ್ರಯ ಕೊಡುತ್ತಾರೆಂಬುದೊಂದು ಪ್ರವಾದ ಕೇಳಬರುತ್ತಿದೆ ಆದ್ದರಿಂದ ಎಲ್ಲಾದರೂ ಸಾರಾಯಿ ಹಿಡಿದರೆ, ಅದರ ಪಂಚನಾಮೆಯು ಕಳೆದ ಮೇಲೆ ಕೂಡಲೆ ಸಾರಾಯಿ ಹಿಡಿಯುವ ಎಲ್ಲ ಜನರು ಹತ್ತಿರವಿದ್ದರುವ ಸರಕಾರಿ ಯಾ ಸರಕಾರ-ಮಾನ್ಯ ದವಾಖಾನೆಗೆ ಹೋಗಿ ತಮ್ಮ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಬೇಕು ಮತ್ತು ತಾವು ಸಾರಾಯಿ ಕುಡಿದಿಲ್ಲೆಂಬರ್ಥದ ಪ್ರಮಾಣ-ಪತ್ರವನ್ನು ಆ ಡಾಕ್ಟರರಿಂದ ಪಡೆಯಬೇಕು, ಎಂಬೊಂದು ನಿಯಮವನ್ನು ಸರಕಾರದ ಕಡೆಯಿಂದ ಮಾಡಿಸಿಕೊಳ್ಳುವದು ಉಚಿತವೆಂದು ತೋರುತ್ತದೆ

(ಮುಂದೆ ೭ನೇ ಪುಟದ ಮೇಲೆ ಮುಂದರಿಸಿದೆ)

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೆ)

ಮೋಟರ–ಸ್ಟೆಂಡ, ಹುಬ್ಬಳ್ಳಿ.

ದಿ. ಸೂಚನೆ:— ನವರಾದಿಂದ (ಯು ಕೇ ಟಿ, ಡಿ ಕೆ, ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮಲ್ಲಿ ಬರುವ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ನಿರ್ವಾಹ ಮಾಡಲಾಗುವದು ಇದಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ:— ಮ್ಯಾನೇಜರ್ಸ್ ಪೈ.

ಇದನ್ನು ಪಾಂಡುರಂಗ ಕೃಷ್ಣ ಪಾನ್ಸಿಕಾರ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩|
ಅಂಚೆಯಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨ ೪-೦
ಬಿಡಿ ಸಂಚಿಕೆಗೆ ..೦-೧ ೬
ವ್ಹಿ. ಪಿ. ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳ್ಳಿಸತಕ್ಕದ್ದು

Reg. No. B. 1270

Monday, 20-2-1950.

ಕಾನಡಾವೃತ್ತ

ವರ್ಷ ೩೨.] **THE KANARA NEWS.** [ಸಂಚಿಕೆ ೩೪.

ಕುಮಟಾ - ಸೋಮವಾರ, ತಾ ೨೦-೨-೧೯೫೦

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ದೀರ್ಘ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರವ್ಯ
ವಹಾರ ಪತ್ರದ್ವಾರಾ
ತಿಳಿಸಲಾಗುವದು.

ಜಗತ್ತು ಯುದ್ಧದತ್ತ ಸಾಗಿದೆ!

(ನಿರೀಕ್ಷಕನು ಬರೆದುದು.)

ಹಿಟ್ಲರನು ಆರಂಭಿಸಿದ ಘನಘೋರ ವಿಶ್ವವ್ಯಾಪಿ ಮಹಾಯುದ್ಧದೊಳಗಿನ ತಾಪತ್ರಯಗಳಿಂದ ಜಗತ್ತು ಇನ್ನೂ ಬಳಲುತ್ತಿರುವಾಗ ಮತ್ತು ಶಾಂತಿಯನ್ನು ಕೋರುತ್ತಿರುವಾಗ ನಾನು ಜಗತ್ತು ಇಂದು ೩ನೇ ಪ್ರಳಯಕಾರಿ ಯುದ್ಧದತ್ತ ಸಾಗಿದೆಂದು ಹೇಳಿದರೆ "ವೃತ್ತ"ದ ಓದುಗರು ಬೆರಗುಗೊಂಡು, ಈ ನಿರೀಕ್ಷಕನಿಗೆ ಪುನಃ ಯುದ್ಧದ ಹುಚ್ಚು ಹಿಡಿಯಿತೇ ಎಂದು ನನ್ನನ್ನು ಬೈದಾರೆಂಬ ಭೀತಿಯುಂಟು ಆದರೆ ಉಪಾಯವಿಲ್ಲ ನನಗೆ ಕಂಡದ್ದನ್ನು ಓದುಗರಿಗೆ ಅರುಹಿ, ಭಾವೀ ಘಟನೆಗಳಿಗೆ ಧೈರ್ಯದಿಂದ ಎದುರಾಗಲು ಸಿದ್ಧರಾಗಿರ್ರಿ ಎಂದು ಎಚ್ಚರಿಕೆ ಕೊಡುವದು ನನ್ನ ಕರ್ತವ್ಯ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿರುವ ಘಟನೆಗಳ ಚಿತ್ರವನ್ನು ಯಥಾವತ್ ಚಿತ್ರಿಸಿ ವಾಚಕರ ಮುಂದಿಡುವದು ನನ್ನ ಕೆಲಸ ಭಾರತವು ಇಂದು ಸರ್ವತಂತ್ರ ಸ್ವತಂತ್ರವಾಗಿದೆ, ಅದು ಯಾವ ಪಕ್ಷಕ್ಕೂ ಸೇರಿಲ್ಲ, ಸೇರುವಂತಿಲ್ಲ, ಭಾರತಕ್ಕೆ ಪರರ ಸುಲಿಗೆಮಾಡುವ ಇಲ್ಲವೆ ಪರಕೀಯರ ಭೂಮಿ ಆಕ್ರಮಣ ಮಾಡುವ ಇಚ್ಛೆಯಿಲ್ಲ; ಯುದ್ಧಕ್ಕಾಗಿ ಹಾತೊರೆಯುವ ರಾಷ್ಟ್ರಗಳು ಒಂದೊಮ್ಮೆ ತಮ್ಮ ತೋಳ್ಬಂಡಿಯನ್ನು ಶಮನಗೊಳಿಸುವದಕ್ಕಾಗಿ ರಣ-ಕಣದೊಳಗಿಳಿದರೂ ಭಾರತವು ಅಲಿಪ್ತವುಳಿದು, ತಾನು ಸ್ವತಃ ಶಾಂತಿಯಿಂದಿರುವದಲ್ಲದೆ ತನ್ನಂತೆ ಇತರ ಚಿಕ್ಕ ಪುಟ್ಟ ರಾಷ್ಟ್ರಗಳಿಗೂ ಶಾಂತಿಯಿಂದುಳಿಯಲು ನೆರವಾಗುವದು, ಎಂದು ಮುಂತಾಗಿ ನಮ್ಮ ಸ್ವತಂತ್ರ ಭಾರತ ಸರಕಾರದ ಪ್ರೇಷ್ಠಿಗಳು ಮೇಲಿಂದ ಮೇಲೆ ಹೇಳುತ್ತ ಬಂದಿರುತ್ತಾರಷ್ಟೇ ಆದರೆ ಪಂಡಿತ ಜವಾಹರಲಾಲ ನೆಹರುರವರು ಹೇಳುವಂತೆ ಭಾರತವು ಇಂದು ಜಗತ್ತಿನಿಂದ ಸಿಡಿದು, ಅಲಿಪ್ತವಾಗಿ ಉಳಿಯುವದು ಸಾಧ್ಯವಿಲ್ಲ. ಇಂದಿನ ವಿಜ್ಞಾನಯುಗದಲ್ಲಿ ಯಾರೂ ಅಲಿಪ್ತವುಳಿಯುವದು ಶಕ್ಯವಿಲ್ಲ ಆದರಿಂದ ನಮ್ಮ ದೈನಂದಿನ ಚರ್ಯೆಯನ್ನು ಕೂಡ ನಾವು ಜಗತ್ತಿನೊಳಗಿನ ಘಟನೆಗಳತ್ತ ಲಕ್ಷವಿಟ್ಟು ನಡಿಸಬೇಕು, ಜಗತ್ತಿನೊಳಗಿನ ಆಗು-ಹೋಗುಗಳನ್ನು ನಿರೀಕ್ಷಿಸುತ್ತುಳಿದು ಕಾಲಕ್ಕೆ ಮತ್ತು ಜಾಗತಿಕ ಪರಿಸ್ಥಿತಿಗೆ ತಕ್ಕಂತೆ ಹೆಜ್ಜೆಗಳನ್ನಿಡುತ್ತ ನಡೆಯಬೇಕು ಆದರಿಂದ "ವೃತ್ತ"ದ ಓದುಗರಾದರೂ ಆಗಾಗ ಜಗತ್ತಿನ ಪರಿಸ್ಥಿತಿಯ ಅರಿವು ಮಾಡಿಕೊಳ್ಳುತ್ತ ಉಳಿಯಬೇಕಾಗಿ ನನ್ನ ಆಪ್ತ-ಸಲಹೆಯುಂಟು

ಕಳೆದ ಮಹಾಯುದ್ಧದ ಕೊನೆಕೊನೆಗೆ 'ಮಿತ್ರ'ರೊಳಗೆ ಪರಸ್ಪರ ಸಂಶಯ ಮತ್ತು ಅಸೂಯೆಗಳುಂಟಾಗಿ ಎರಡು ಕೂಟಗಳಾಗಿದ್ದವೆಂಬುದನ್ನು ವಾಚಕರು ಮರೆತಿರಲಾರರು ಹಿಟ್ಲರನನ್ನು ಮಣ್ಣುಗೂಡಿಸುವದಕ್ಕಾಗಿ ರಶ್ಯರೂ, ಬ್ರಿಟಿಶ-ಅಮೇರಿಕೆಯವರೂ ಮೊದಮೊದಲು ಪರಸ್ಪರ ವಿಶ್ವಾಸ ಮತ್ತು ಗಾಢ ಸ್ನೇಹದಿಂದ ವರ್ತಿಸುತ್ತಿದ್ದರೂ, ಜರ್ಮನರು ಹಿಮ್ಮೆಟ್ಟಿದಂತೆ ಮತ್ತು 'ಮಿತ್ರ'ರಿಗೆ ಗೆಲವು ಆಗುವದು ಖಂಡಿತವಾದಂತೆ ರಶ್ಯರು ತಮ್ಮಷ್ಟಕ್ಕೆ ತಾವು ಮತ್ತು ಬ್ರಿಟಿಶ-ಅಮೇರಿಕೆಯವರು ತಮ್ಮಷ್ಟಕ್ಕೆ ತಾವು ಎಂಬಂತೆ ವರ್ತಿಸಲಾರಂಭಿಸಿದರು ಜರ್ಮನಿಯ ಆಕ್ರಮಣಕ್ಕೆ ಆರಂಭವಾದಾಗ ಇತ್ತಕಡಿನವರಲ್ಲಿಯೂ ಒಂದು ಬಗೆಯ ಈರ್ಷೆ, ಒಂದು ತೆರದ ಅಹಮಹಮಿಕೆ ನಡೆದದ್ದು ಕಂಡು ಬರದಿರಲಿಲ್ಲ ಜರ್ಮನರನ್ನು ಸೋಲಿಸಿದರಾಯಿತು, ಯಾರು ಸೋಲಿಸಿದರೇನು ಎಂಬ ವಿಶಾಲ ದೃಷ್ಟಿಯ ಉದಾರ ವಿಚಾರ ಇತ್ತಕಡಿನವರಲ್ಲಿಯೂ ಕಂಡುಬರಲಿಲ್ಲ ಜರ್ಮನಿಯನ್ನು ತಾವು ಹೆಚ್ಚಿಗೆ ಆಕ್ರಮಿಸಬೇಕು, ತಾವು ಹೆಚ್ಚಿಗೆ ಆಕ್ರಮಿಸಬೇಕು ಎಂಬವೊಂದು ಪಂದ್ಯಾಟವೇ ಆಗ ನಡೆಯಿತು ಇದರಲ್ಲಿ ಏನಾದರೂ ಗೂಢವುಂಟು, ಈ ಗೂಢವೇ ಮುಂದೆ ಮಿತ್ರರಿಗೆ ಮುಳುವಾಗುವದು ಎಂದು ವಿಚಾರವಂತರು ಆಗಲೇ ತರ್ಕ ಮಾಡಿದ್ದರು ಆ ತರ್ಕವಿಂದು ಸತ್ಯವಾಗಿ ಪರಿಣಮಿಸಿದೆ ಯುದ್ಧಾರಂಭದಲ್ಲಿ ಮಿತ್ರರಾಗಿದ್ದ ರಶ್ಯರು ಮತ್ತು ಬ್ರಿಟಿಶ-ಅಮೇರಿಕೆಯವರು ಯುದ್ಧ ಮುಗಿದ ಮೇಲೆ ಮಿತ್ರರಾಗುಳಿಯಲಿಲ್ಲ! ಪರಸ್ಪರ ಶತ್ರುಗಳಾಗಹತ್ತಿದರು! ಹಿಟ್ಲರನನ್ನು ಹೇಗೆ ಸೋಲಿಸಬೇಕೆಂಬ ಆಲೋಚನೆಯಲ್ಲಿ ಮಗ್ನರಾಗಿ ತಮ್ಮ ತಮ್ಮ ಮತ-ಪಂಥ-ತತ್ವಗಳನ್ನು ಮರೆತುಬಿಟ್ಟ ಮಿತ್ರರಿಗೆ ಯುದ್ಧ ಮುಕ್ತಾಯವಾದ ಕೂಡಲೆ ತಮ್ಮ ಮತ-ಪಂಥಗಳ ನೆನಪು ಆಯಿತು! ರಶ್ಯರು ಪುನಃ ಕಟ್ಟಾ ಕಮ್ಯುನಿಸ್ಟರಾದರು ಬ್ರಿಟಿಶ-ಅಮೇರಿಕೆಯವರು ತಿರುಗಿ ಕಮ್ಯುನಿಸ್ಟ ವಿರೋಧಿ 'ಲೋಕ-ಶಾಹಿ' ಸಾಮ್ರಾಜ್ಯವಾದಿಗಳಾದರು! ಅಂದು ಪ್ರಾರಂಭವಾದ ಆ ಮತಾಭಿಮಾನವು, ತಮ್ಮ ಮತವನ್ನೇ ಜಗತ್ತಿನಲ್ಲಿ ಪ್ರಸ್ಥಾಪಿಸಬೇಕೆಂಬ ಅಭಿನಿವೇಶವೂ ಕಾಲಕ್ರಮೇಣ ಬಲವತ್ತರವಾಗುತ್ತ ಹೋಗಿ ಇಂದು ಜಗತ್ತಿನಲ್ಲಿ ಎರಡು ಪಂಗಡಗಳನ್ನು ಮಾಡಿಬಿಟ್ಟಿದೆ! ಪಾಶ್ಚಾತ್ಯ ರಾಜಕಾರಣಿಗಳ ಭಾಷೆಯಲ್ಲಿ ಹೇಳುವದಾದರೆ ಇಂದು 'ಪಾಶ್ಚಾತ್ಯ ಮಿತ್ರರ' ಪಕ್ಷವೊಂದು, ಮತ್ತು ಕಮ್ಯುನಿಸ್ಟ ರಶ್ಯರ ಪಕ್ಷವೊಂದು ಹೀಗೆ ಜಗತ್ತಿನಲ್ಲಿ ಎರಡು ಪಂಗಡಗಳಾಗಿವೆ! "ಪಾಶ್ಚಾತ್ಯ ಮಿತ್ರ"ರಲ್ಲಿ ಅಮೇರಿಕೆಯ ಶ್ರೇಷ್ಠ ಕಿರಿ ಬ್ರಿಟನ್ನು ಒಂದು ಕಾಲದಲ್ಲಿ 'ಕಡಲ-ರಾಣಿ' ಮತ್ತು "ಎಂದೆಂದೂ ಸೂರ್ಯಾಸ್ತವಾಗದ ಸಾಮ್ರಾಜ್ಯ"ವನ್ನಾಳುತ್ತಿದ್ದ ಅಗ್ರಗಣ್ಯ ಬಲಾಢ್ಯ ರಾಷ್ಟ್ರವಾಗಿದ್ದರೂ ಕಳೆದ ಮಹಾಯುದ್ಧದಲ್ಲಿ ಅದು ತನ್ನ ಸರ್ವಶಕ್ತಿಯನ್ನು ಕಳೆದುಕೊಂಡು ಸೊರಗಿಹೋಗಿದೆ! ಅಮೇರಿಕೆಯ ಕೃಪಾಪ್ರಸಾದದಿಂದ ತನ್ನ ಸಂಸಾರ ಮಾಡಬೇಕಾದಂತಹ ಬಿಕ್ಕಟ್ಟಿನ ಸ್ಥಿತಿಗೆ ಮುಟ್ಟಿದೆ! ಜಗತ್ತಿನಲ್ಲಿ ಇಂದು ಸ್ವತಂತ್ರವಾಗಿ, ಪರರ ಹಂಗು ಇಲ್ಲದೆ ಸಂಸಾರ ನಡೆಸುತ್ತಿರುವ ಮಹಾರಾಷ್ಟ್ರಗಳು ಎರಡೇ ಒಂದು ಅಮೇರಿಕಾ ಇನ್ನೊಂದು ಸೋವ್ಹಿಯೆಟ ರಶಿಯಾ ಹಿಟ್ಲರನ ಯುದ್ಧ ನಡೆದಾಗ ನಾವು "ಪಂಚ ಮಹಾರಾಷ್ಟ್ರಗಳೆಂಬ ಅಭಿಧಾನವನ್ನು ಕೇಳುತ್ತಿದ್ದೆವು ನಿಜ ಆ ಪಂಚ ಮಹಾರಾಷ್ಟ್ರಗಳು ಅಮೇರಿಕಾ, ಬ್ರಿಟನ, ಫ್ರಾನ್ಸ, ರಶಿಯಾ ಮತ್ತು ಚೀನ ಇವುಗಳಾಗಿದ್ದವು ಫ್ರಾನ್ಸವು ಆಗ ಹಿಟ್ಲರನ ಕ್ರೀಡಾಂಗಣವಾಗಿತ್ತಾದರೂ, ಸೇನಾಪತಿ ದ ಗೊಲ ಪ್ರಭೃತಿ ಅನೇಕಾನೇಕ ಫ್ರೆಂಚ ವೀರರು ಹೊರಗುಳಿದು ಉತ್ತರ ಆಫ್ರಿಕೆಯಲ್ಲಿದ್ದ ತಮ್ಮ ಸಾಮ್ರಾಜ್ಯದ ಭಾಗಗಳೊಳಗಿಂದ ಜರ್ಮನರನ್ನು ಪ್ರತಿಭಟಿಸಲು ಬೇಕಾದ ಕಷ್ಟ ಬ್ರಿಟಿಶ-ಅಮೇರಿಕೆಯವರಿಗೆ ನೆರವಾದ ಮೂಲಕ ಫ್ರಾನ್ಸಕ್ಕೂ ಮಿತ್ರರು "ಮಹಾರಾಷ್ಟ್ರ"ದ ಮಾನವನ್ನು ಕೊಟ್ಟಿದ್ದರು ಚೀನವಂತೂ ಏಶಿಯಾ ಖಂಡದೊಳಗಿನ ಮಹಾರಾಷ್ಟ್ರವಾಗಿತ್ತು ಆದರೆ ಏಶಿಯಾದೊಳಗಿನ ಶ್ವೇತೇತರ ಚೀನವನ್ನು ಉಳಿದ ಮಹಾರಾಷ್ಟ್ರಗಳು ಅಂತಃಕರಣಪೂರ್ವಕವಾಗಿ ತಮ್ಮಲ್ಲಿ ಸೇರಿಸಿಕೊಂಡಿದ್ದಿಲ್ಲ. ಆದರಿಂದ ಅವರು "ಪಂಚ ಮಹಾರಾಷ್ಟ್ರಗಳ" ಪರಿಷತ್ತನ್ನಷ್ಟೇ ಕರೆಯುತ್ತಿದ್ದರು ಈಗಿಗಂತೂ ಫ್ರಾನ್ಸವು ಹತಪ್ರಭಾವವಾಗಿರುವದರಿಂದ ಮಹಾರಾಷ್ಟ್ರಗಳ ಮಾಲಿಕೆಯಿಂದ ಅದರ ಹೆಸರು ಕಡಿಮೆಯಾಗಿದೆ! ಮೂರು ಮಹಾರಾಷ್ಟ್ರಗಳ ಮಾತಷ್ಟೇ ಕೇಳಬರುತ್ತದೆ! ಫ್ರಾನ್ಸವು ಹತಪ್ರಭವಾದರೆ ಚೀನವು ಅಲ್ಲಿ ನಡೆದಿದ್ದ ಯಾದವೀ ಯುದ್ಧದ ಪರಿಣಾಮವಾಗಿ ನಿರ್ನಾಮವಾಗಿದೆ! ರಶ್ಯರ ಬೆಂಬಲದಿಂದ ಸ್ಥಾನಿಕ ಕಮ್ಯುನಿಸ್ಟರು ಇಡೀ ಚೀನವನ್ನು ಹಸ್ತಗತ ಮಾಡಿಕೊಂಡು ಚಾಂಗ-ಕೈ ಶೇಕರ ಚೀನಿ ರಾಷ್ಟ್ರೀಯ ಸರಕಾರವನ್ನು ದೇಶಾಂತರಕ್ಕೆ ಕಳಿಸಿಕೊಟ್ಟಿದ್ದಾರೆ ಆದರಿಂದ ಅಂತರಾಷ್ಟ್ರೀಯ ರಾಜಕಾರಣದಲ್ಲಿ ಸ್ವಂತ ಸಾಮರ್ಥ್ಯದಿಂದ ತನ್ನ ಪ್ರಭಾವ ಬೀರುವಷ್ಟು ಶಕ್ತಿ ಈಗ ಚೀನದಲ್ಲಿ ಉಳಿದಿಲ್ಲ! ಇನ್ನುಳಿದ ಮೂರು ಮಹಾರಾಷ್ಟ್ರಗಳಲ್ಲಿ ನಾನು ಮೇಲೆಯೇ ಹೇಳಿದಂತೆ ಬ್ರಿಟನ್ನು ಇಂದು ಸೊರಗಿಹೋಗಿದೆ ಅಮೇರಿಕೆಯ ಆಶ್ರಯದಿಂದ ಅದರ ಸಂಸಾರ ಸಾಗಿದೆ. ಆದರಿಂದ ಈಗ ಜಗತ್ತಿನಲ್ಲಿ ಪ್ರಭುತ್ವ ಮೆರೆಯುವ ಎರಡೇ ರಾಷ್ಟ್ರಗಳು ಉಳಿದಿವೆ ಒಂದು ಅಮೇರಿಕೆ (ಅಮೇರಿಕೆಯ

ಬರುವರು! ಬೇಗನೇ ಬರುವರು!!
ಬಹು ದಿನಗಳಿಂದ ಬಹು ಜನರ
ನಿರೀಕ್ಷಣೆಯಲ್ಲಿದ್ದ
"ಕಲಾವೈಭವ ನಾಟ್ಯಸಂಘ"
ಬೆಳಗಾಂವ
ಇವರು ಮಾರ್ಚ ೩ನೇ ವಾರದಲ್ಲಿ ತಮ್ಮ ನಾಮಾಂಕಿತ ನಟ ನಟಿಯರೊಂದಿಗೆ ಕುಮಟೆಯ ಅಧ್ಯಾದ ಟಾಕೀಜಿನಲ್ಲಿ ತಮ್ಮ ನಾಟಕಗಳನ್ನು ಆಡುವರು
ಪ್ರಥಮ ಪ್ರಯೋಗ — ವಧೂ-ವರ
ಬಾಳಪ್ಪ ಏಣಗಿ, ಸಂಘದೊಡೆಯ.

ಸಂಯುಕ್ತ ಸಂಸ್ಥಾನಗಳು) ಮತ್ತು ಇನ್ನೊಂದು ರಶಿಯಾ ಈ ಎರಡೂ ರಾಷ್ಟ್ರಗಳು ಮಹಾಯುದ್ಧದ ಮುಕ್ತಾಯವಾದಂದಿನಿಂದ ಇಡೀ ಜಗತ್ತನ್ನು ತಮ್ಮ ತಮ್ಮ ಮುಷ್ಟಿಯಲ್ಲಿ ಒಡಿದು ಆಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ ಅವರಿಂದ ಇವೆರಡು ರಾಷ್ಟ್ರಗಳ ನಡುವೆ ಈಗ ಒಂದು ವಿಧವಾದ ಸಂಘರ್ಷ ನಡೆದಿದೆ! ಈ ಸಂಘರ್ಷ ಯುರೋಪ ಮತ್ತು ಏಶಿಯಾ ಖಂಡಗಳೊಳಗೆ ಎದ್ದು ಕಾಣುತ್ತಿದೆ. ರುಶ್ಯರು ಇಡೀ ಯುರೋಪ ಖಂಡದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಲು ಹವಣಿಸಿ ಪೂರ್ವ ಯುರೋಪದೊಳಗಿನ ರಾಷ್ಟ್ರಗಳನ್ನು ಒಂದೊಂದಾಗಿ ತಮ್ಮ ಬಲೆಯಲ್ಲಿ ಸಿಲುಕಿಸಿಕೊಂಡರು. ಬ್ರಿಟಿಶ—ಅಮೇರಿಕೆಯರು ಈ ಗಂಡಾಂತರವನ್ನು ಕಂಡು ಪಶ್ಚಿಮ ದಕ್ಷಿಣ ಯುರೋಪದ ರಾಷ್ಟ್ರಗಳನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವ ಉದ್ಯೋಗವನ್ನು ನಡಿಸಿದರು. ಈ ಸ್ಪರ್ಧೆಯು ಬಹಳವಾಗಿ ಇಂದು ಸರ್ವನಾಶ ಧೋರಣೆಗಾಗಿ ಅಥವಾ ಯುರೋಪ ಖಂಡವು ರುಶ್ಯರ ಪಕ್ಷಕ್ಕೆ ಒಳಗಾಗಿದೆ. ರುಶ್ಯರು ಅಷ್ಟರಿಂದಲೇ ಸಮಾಧಾನಪಡದೆ ಇನ್ನಿತರ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ ತತ್ವದ ಪ್ರಸಾರ ಮಾಡಿ ಸ್ಥಾನಿಕ ಕಮ್ಯುನಿಸ್ಟರಿಗೆ ಅಲ್ಲಿಯ ಸರಕಾರಗಳನ್ನು ಉರುಳಿಸಿ ಸರ್ವಸತ್ತೆಯನ್ನು ಕೈವಶಪಡಿಸಿಕೊಳ್ಳಲು ಪಶ್ಚಿಮ ರೀತಿಗಳಿಂದ ಸಹಾಯ ಮಾಡಿ, ಅವನ್ನು ತಮ್ಮ ತೆಕ್ಕೆಯೊಳಗೆ ತರುವ ಪ್ರಯತ್ನವನ್ನು ಅವ್ಯಾಹತವಾಗಿ ನಡಿಸಿದ್ದಾರೆ. ಗ್ರೀಸ ಮತ್ತು ಇಟಲಿಗಳಲ್ಲಿ ರುಶ್ಯರ ಈ ಪ್ರಯತ್ನದ ಜೋರು ಇದೆ. ಅಮೇರಿಕೆಯವರು ಅವರ ಈ ಪ್ರಯತ್ನವನ್ನು ವಿಫಲಗೊಳಿಸಿ ಸದ್ಯಕ್ಕೆ ಅಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದಾರೆ. ದಕ್ಷಿಣ ಏಶಿಯಾದಲ್ಲಿ ಇರಾಣವನ್ನು ಹಸ್ತಗತಮಾಡಿಕೊಂಡು ಹಿಂದೀ ಮಹಾಸಾಗರವನ್ನು ತಮಗೆ ಮುಕ್ತದ್ವಾರ ಮಾಡಿಕೊಳ್ಳುವದಕ್ಕಾಗಿ ರುಶ್ಯರು ಯತ್ನ ನಡಿಸಿದ್ದಾರೆ. ಅಮೇರಿಕೆಯು ಆ ಪ್ರಯತ್ನವನ್ನು ವಿಫಲಗೊಳಿಸಿ ಸದ್ಯಕ್ಕೆ ಇರಾಣವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡಿದ್ದಾರೆ. ಚೀನದಲ್ಲಿ ಮಾತ್ರ ರುಶ್ಯರ ಪ್ರಯತ್ನ ಪೂರ್ಣ ಸಫಲಕಾರಿಯಾಗಿದೆ. ರುಶ್ಯ ಪ್ರಚೋದಿತ ಕಮ್ಯುನಿಸ್ಟರನ್ನು ಬಗ್ಗುಬಡಿಯಲು ಚಾಂಗ ಕೈ ಶೇಕರು ಮಾಡಿದ ಪ್ರಯತ್ನಗಳೆಲ್ಲವು ವಿಫಲವಾಗಿ ಇಂದು ನಾಲ್ಕೈದಾಂಶದಷ್ಟು ಚೀನವು ಕಮ್ಯುನಿಸ್ಟರ-ನಾಯಕರಾದ ಮಾವೋ ತ್ಸೇ-ತುಂಗ ಇವರ ಕೈವಶವಾಗಿದೆ. ಮಾವೋ ಇವರು ಆ ಭಾಗದಲ್ಲಿ ತಮ್ಮ ಸ್ವಯಂಪೂರ್ಣ ಮತ್ತು ಜನಮಾನ್ಯ ಸರಕಾರವನ್ನು ಸ್ಥಾಪಿಸಿ, ಅದಕ್ಕೆ ಜಗತ್ತಿನ ಎಲ್ಲ ರಾಷ್ಟ್ರಗಳ (ಅಮೇರಿಕೆಯೊಂದನ್ನು ಬಿಟ್ಟು) ಮನ್ನಣೆಯನ್ನು ಪಡೆದುಕೊಂಡಿದ್ದಾರೆ. ಇದೀಗ ಚೀನಿ ಕಮ್ಯುನಿಸ್ಟರು ತಿಬೇಟವನ್ನು ಹಸ್ತಗತ ಮಾಡಲು ಹೊರಟಿದ್ದಾರೆ. ತಿಬೇಟವು ಈ ತನಕ ಚೀನದ ಒಂದು ಭಾಗವೆಂದು ಎಣಿಸಲ್ಪಡುತ್ತಿದ್ದರೂ, ಚೀನಿ ಸರಕಾರದ ಅಧಿನಾಯಕತ್ವವನ್ನು ಅದು ಒಪ್ಪುತ್ತಿದ್ದರೂ ತತ್ವತಃ ಅದು ಸ್ವತಂತ್ರವಿತ್ತು. ಮೊನ್ನೆ ನಡೆದ ಯಾದವಿಯಲ್ಲಾದರೂ ಅದು ಅಲಿಪ್ತವಾಗಿ ಉಳಿದಿತ್ತು. ಅದರ ಮೇಲೆ ಈಗ ಮಾವೋ ಇವರ ದೃಷ್ಟಿ ಬಿದ್ದಿದೆ. ರುಶ್ಯರು ಚೀನವನ್ನು ತಮ್ಮ ಬಗಲೊಳಗೆ ಹಾಕಿ ಸುಮ್ಮಗುಳಿಯದೆ, ಚೀನದಿಂದ ದಕ್ಷಿಣಕ್ಕಿರುವ ಇಂಡೋಚೈನಾ, ಸಯಾಮ, ಮಲಾಯಾ ಬ್ರಹ್ಮದೇಶಗಳಲ್ಲೂ ತಮ್ಮ ಕಾಲು ಚಾಚುವ ಪ್ರಯತ್ನ ಮಾಡುವರೆಂಬ ಭೀತಿಯುಂಟು.

ಆತ್ತ ಯುರೋಪದಲ್ಲಿ ಅಮೇರಿಕೆಯವರ ಸಹಾಯದಿಂದ ಬ್ರಿಟಿಶರು ಪಶ್ಚಿಮ ಮತ್ತು ದಕ್ಷಿಣ ರಾಷ್ಟ್ರಗಳ ಸಂಘಟನೆ ಮಾಡಿ ರುಶ್ಯರ ವಿರುದ್ಧ ದೊಡ್ಡ ಗೋಡೆಯನ್ನೇ ಎಬ್ಬಿಸುತ್ತಿದ್ದಾರೆ. ಅಮೇರಿಕೆಯು ಅಲ್ಲಿ ತನ್ನ ಹಣವನ್ನು ಸುರಿದು ಆ ರಾಷ್ಟ್ರಗಳ ಆರ್ಥಿಕ ಪುನಸ್ಸಂಘಟನೆ ಮಾಡತೊಡಗಿದೆ. ಈ ಯೋಜನೆಗೆ 'ಮಾರ್ಶಲ ಪ್ಲೇನ' ಎಂದು ಹೆಸರು ಕೊಡಲಾಗಿದೆ. ೧೯೪೭-೧೯೪೮ರಲ್ಲಿ ಅಮೇರಿಕೆಯ ವಿದೇಶ ಮಂತ್ರಿಗಳಾಗಿದ್ದ ಸೇನಾಪತಿ ಮಾರ್ಶಲ ಇವರು ಯುರೋಪ ರಾಷ್ಟ್ರಗಳಿಗೆ ಸಹಾಯ ಮಾಡಿ ಅವನ್ನು ತಮ್ಮ ಬಗಲೊಳಗೆ ಇಟ್ಟುಕೊಳ್ಳಲು ಮಾಡಿದ ಯೋಜನೆಯಿದು. ಕಳೆದ ವರ್ಷ ಪ್ಯಾರೀಸದಲ್ಲಿ ಈ ಎಲ್ಲ ರಾಷ್ಟ್ರಗಳ [illegible]ನ್ನೊಂದು ಕೂಡಿಸಿ, ರುಶ್ಯರ ಆಕ್ರಮಕ ವೃತ್ತಿಯನ್ನು ಪ್ರತಿಭಟಿಸುವ ಒಂದು ಯೋಜನೆಯನ್ನು "ಪಾಶ್ಚಾತ್ಯ ಮಿತ್ರರು" ತಯಾರಿಸಿಟ್ಟಿದ್ದಾರೆ. ಹೀಗೆ ಅಮೇರಿಕೆ ಮತ್ತು ರಶಿಯಾ ಇವುಗಳೊಳಗೆ ಪರಸ್ಪರರ ಪ್ರತಿಭಟನೆಯ ಸಿದ್ಧತೆಗಳು ಭರದಿಂದ ಸಾಗಿವೆ. ಜಗತ್ತಿನಲ್ಲಿ ಶಾಂತತೆ ಮತ್ತು ನ್ಯಾಯ ನೆಲಿಸಿ ವಿನಾಶಕ ಯುದ್ಧಭಯದಿಂದ ಜಗತ್ತನ್ನು ಮುಕ್ತಗೊಳಿಸಲೆಂದು ಜನ್ಮವೆತ್ತ ಜಾಗತಿಕ ಯುಕ್ತ-ರಾಷ್ಟ್ರ ಸಂಘವು ಈ ಸ್ಪರ್ಧೆ-ಸಿದ್ಧತೆಗಳನ್ನು ತಡೆಯಲು ಅಸಮರ್ಥವಾಗಿದೆ! ರಾಷ್ಟ್ರಸಂಘದಲ್ಲಿ ಅಮೇರಿಕೆ ಮತ್ತು ಬ್ರಿಟನ್ನುಗಳ ಪಕ್ಷಪಾತಿಗಳಾದ ರಾಷ್ಟ್ರಗಳ ಬಹುಮತವಿದ್ದಾಗ್ಯೂ, ರಾಷ್ಟ್ರಸಂಘದ ಸನದಿನಲ್ಲಿ "ಪಂಚ ಮಹಾರಾಷ್ಟ್ರಗಳಿ"ಗಾಗಿ ಕೊಟ್ಟ ಪ್ರತಿಬಂಧಾಧಿಕಾರವನ್ನು (power of veto) ಪ್ರಯೋಗಿಸಿ ರುಶ್ಯರು ತಮಗೆ ಇಷ್ಟವಿಲ್ಲದ ವಿಷಯಗಳನ್ನು ಸಂಘದ ಸಭೆಯಲ್ಲಿ ವಿಚಾರಕ್ಕೆ ಬರಗೊಡುವದಿಲ್ಲ! ಈ ಪ್ರತಿಬಂಧಾಧಿಕಾರವೆಂಬುದು ರಾಷ್ಟ್ರಸಂಘವನ್ನು ನಿರ್ಮಾಲ್ಯ ಮಾಡಿಬಿಟ್ಟಿದೆ! ರುಶ್ಯ – ಅಮೇರಿಕೆಯವರೊಳಗಿನ ವಾದವನ್ನೂ ತಂಟೆಯನ್ನೂ ಬಗೆಹರಿಸಲು ಇಡೀ ಭೂಲೋಕದಲ್ಲಿ ಇಂದು ಪ್ರಭಾವಿ ಸಂಸ್ಥೆಯೊಂದೂ ಇಲ್ಲದಂತಾಗಿದೆ. ರುಶ್ಯ-ಅಮೇರಿಕೆಯವರೇ ಅದನ್ನು ತಮ್ಮತಮ್ಮೊಳಗೆ ಪರಸ್ಪರ ವಿಚಾರವಿನಿಮಯದಿಂದ ಇಲ್ಲವೆ ರಣಭೂಮಿಯ ಕಣದಲ್ಲಿ ಬಗೆಹರಿಸಿಕೊಳ್ಳಬೇಕು. ರುಶ್ಯರಾಗಲಿ ಅಮೇರಿಕೆಯವರಾಗಲಿ ವಿಚಾರವಿನಿಮಯದ ಇಲ್ಲವೆ ಸಂಧಾನದ ಮಾತನ್ನು ಎತ್ತುವದಿಲ್ಲೆಂದಿಲ್ಲ, ಆಗಾಗ ಎತ್ತುತ್ತಾರೆ. ಆದರೆ ಆ ಸಂಧಾನದ ಮಾತುಕತೆಗಳು ಎಲ್ಲಿ ಮತ್ತು ಎಂದು ನಡೆಯಬೇಕೆಂಬುದರ ಬಗ್ಗೆ ಒಮ್ಮತವಾಗುವದಿಲ್ಲ! ರುಶ್ಯ-ಪ್ರಭು ಸ್ಟೆಲಿನರು ಸ್ವತಃ ಅಮೇರಿಕೆಗೆ ಬಂದು ಒಪ್ಪಂದದ ಮಾತುಕತೆಗಳನ್ನಾಡಬೇಕೆಂದು ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರ ಹಟ! ಟ್ರೂಮನ್ನರು ರಶಿಯಾಕ್ಕೆ ಬರಬೇಕೆಂದು ಸ್ಟೆಲಿನ್ನರ ನಿರ್ಧಾರ! ಈ ಹಟವನ್ನು ಇಬ್ಬರೂ ಬಿಟ್ಟು ಲಂಡನಿಗೆ ಬಂದು, ಅಲ್ಲಿ ಬ್ರಿಟಿಶ ಮುಖ್ಯ ಪ್ರಧಾನರ ಸಮಕ್ಷ ಮಾತುಕತೆ ಮಾಡಬಹುದಾಗಿ ಬ್ರಿಟಿಶರು ಕೆಲವು ಕಾಲದ ಹಿಂದೆ ಒಂದು ಸೂಚನೆ ಮಾಡಿದ್ದರು. ಆ ಸೂಚನೆಯ ವಿಚಾರವೇ ನಡೆಯಲಿಲ್ಲ. ಬ್ರಿಟಿಶ ಮುಖ್ಯ ಪ್ರಧಾನರಾಗಿದ್ದ ಚರ್ಚಿಲರು ಹಿಂದೆ ಯುದ್ಧ ನಡೆದಾಗ ಸ್ಟೆಲಿನ್ನರ ಭೆಟ್ಟಿಗಾಗಿ ಮಾಸ್ಕೋಕ್ಕೆ ಹೋದದ್ದುಂಟು. ಅಮೇರಿಕೆಯ ದಿವಂಗತ ಅಧ್ಯಕ್ಷ ರೂಜವೆಲ್ಟರು ಸ್ವದೇಶ ಬಿಟ್ಟು ರುಶ್ಯದ ದಕ್ಷಿಣ ತುದಿಯಲ್ಲಿರುವ ಒಂದು ಸ್ಥಳದಲ್ಲಿ ಸ್ಟೆಲಿನರೊಡನೆ ಮಾತುಕತೆಯಾಡಿದ್ದುಂಟು. ಇದರಂತೆ ಸ್ಟೆಲಿನರು ಯಾಕೆ ತಮ್ಮ ಸ್ವದೇಶ ಬಿಟ್ಟು ಈ ರಾಷ್ಟ್ರಗಳ ಪ್ರತಿನಿಧಿಗಳನ್ನು ಇಲ್ಲವೆ ಮುಖಂಡರನ್ನು ಅವರ ದೇಶದಲ್ಲಿ ಭೆಟ್ಟಿಯಾಗಲೊಪ್ಪುವದಿಲ್ಲವೋ ತಿಳಿಯದು. ಮನೆಬಿಟ್ಟು ಅವರಿದ್ದಲ್ಲಿ ತಾವು ಹೋದರೆ ತಮ್ಮ ಗೌರವಕ್ಕೆ ಕುಂದು ಬರುತ್ತದೆಂದು ತಿಳಿಯುತ್ತಾರೋ ಯಾ ದೇಶ ಬಿಟ್ಟು ಹೋದಲ್ಲಿ ತಮ್ಮ ಜೀವಕ್ಕೇನಾದರೂ ಅಪಾಯವುಂಟಾದೀತೆಂದು ಅವರು ಬೆದರುತ್ತಾರೋ ದೇವರೇ ಬಲ್ಲನು! ಅದೇನಿದ್ದರೂ ಪರಸ್ಪರ ವಿಚಾರವಿನಿಮಯಕ್ಕಾಗಿ ಇತ್ತಿಟ್ಟಿನವರೂ ಒಟ್ಟುಗೂಡುವದಿಲ್ಲ ಎಂಬುದು ಸ್ಪಷ್ಟವಿದೆ. ಆದರಿಂದ ಪರಸ್ಪರರೊಳಗಿನ ವಿವಾದ ತೀವ್ರತರವಾಗುತ್ತ ನಡೆದಿದೆಯೇ ವಿನಹ ಅದು ಸೌಮ್ಯವಾಗಲಿಲ್ಲ.

ಮೊದಮೊದಲು ಅಮೇರಿಕೆಗೆ ತನ್ನ ಕಡೆಗೆ ಅಣುಬಾಂಬಿನ ರುದ್ರಾಸ್ತ್ರವುಂಟೆಂಬ ದರ್ಪವಿತ್ತು. ರುಶ್ಯರು ಕಾಲುಕೆದರಿ ಯುದ್ಧ ಹೂಡಿದರೆ ಇಲ್ಲವೆ ಯುದ್ಧಕ್ಕೆ ಆಹ್ವಾನ ಕೊಟ್ಟರೆ ಈ ಮಹಾ ಅಸ್ತ್ರದ ಪ್ರಯೋಗದಿಂದ ರುಶ್ಯರಿಗೆ ನಾಲ್ಕೇ ದಿನಗಳಲ್ಲಿ ಹಣ್ಣುಗಿಸುವೆನೆಂಬ ಅಪೇಕ್ಷೆ ಅಮೇರಿಕೆಯವರಲ್ಲಿ ಮನೆಮಾಡಿಕೊಂಡಿತ್ತು. ರುಶ್ಯರಾದರೂ ಆ ಅಸ್ತ್ರಕ್ಕೆ ಒಳಗಿಂದೊಳಗೆ ಅಂಜಿ, ಇಷ್ಟು ದಿನ "ಮಿತ್ರರನ್ನು" ಯುದ್ಧಕ್ಕೆ ಕೆಣಕುವ ಸಾಹಸಕ್ಕೆ ಕೈಹಾಕುತ್ತಿದ್ದಿಲ್ಲ. ಆದರೆ ಇಂದು ರುಶ್ಯರಿಗೆ ಆ ಭೀತಿಯಿಲ್ಲ. ಅವರೂ ಒಳಗಿಂದೊಳಗೆ ಸಂಶೋಧನೆ ಪ್ರಯೋಗ ಮಾಡಿ ಅಣುಬಾಂಬನ್ನು ತಯಾರಿಸುವ ವಿದ್ಯೆಯನ್ನು ಕಲಿತಿದ್ದಾರೆ. ರುಶ್ಯರ ಕಾರ್ಯವು ಅತ್ಯಂತ ಗೌಪ್ಯದಿಂದ ನಡೆಯುತ್ತಿದೆ. ಅವರ ಎಂತೆಂತಹ ಶಸ್ತ್ರಾಸ್ತ್ರಗಳ ಶೋಧವಾಗಿದೆ, ಆ ಶಸ್ತ್ರಾಸ್ತ್ರಗಳ ಕಾರಖಾನೆಗಳು ಎಲ್ಲಿವೆ ಎಂಬುದರ ಪತ್ತೆಯೂ ಹತ್ತುವದಿಲ್ಲ! ಅವರು ಪ್ರಯೋಗಾರ್ಥ ಹಾರಿಸಿದ ಅಣುಬಾಂಬಿನ ಸ್ಫೋಟದ ರಹಸ್ಯವನ್ನು ಅಮೇರಿಕೆಯ ವಿಜ್ಞಾನ ಶಾಸ್ತ್ರಿಗಳು ಹೊರಜಗತ್ತಿನ ವಾತಾವರಣದಲ್ಲಾದ ಬದಲಾವಣೆಯಿಂದ ಕಂಡುಹಿಡಿದರೇ ವಿನಹ ರುಶ್ಯರು ತಾವಾಗಿ ಆ ಗೌಪ್ಯ-ಸ್ಫೋಟವನ್ನು ಮಾಡಲಿಲ್ಲ. ರುಶ್ಯರು ತಯಾರಿಸುತ್ತಿರುವ ಅಣುಬಾಂಬಿನ ವಿನಾಶಕ ಶಕ್ತಿ ಎಷ್ಟುಂಟೆಂಬುದು ಸಹ ಇನ್ನೂ ತಿಳಿದುಬಂದಿಲ್ಲ! ಅದೇ ಮೇರೆಗೆ ಎಷ್ಟು ಅಣುಬಾಂಬುಗಳನ್ನು ಅವರು ತಯಾರಿಸಿಟ್ಟಿದ್ದಾರೆ ಅಥವಾ ಯಾವ ಪ್ರಮಾಣದಿಂದ ಅವುಗಳನ್ನು ತಯಾರಿಸುತ್ತಿದ್ದಾರೆ ಎಂಬುದರ ಪತ್ತೆಯೂ ಹತ್ತುವಂತಿಲ್ಲ. ರುಶ್ಯರು ಅಣುಬಾಂಬಿನ ರಹಸ್ಯವನ್ನು ಕಂಡುಹಿಡಿದದ್ದು ಈ ವೇಳೆ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ತಮ್ಮ ಶಾಸ್ತ್ರಜ್ಞರಿಗೆ ಅಣುಬಾಂಬಿಗಿಂತಲೂ ಹೆಚ್ಚಿಗೆ ಪ್ರಲಯಕಾರಿ ಮತ್ತು ವಿಕರಾಳವಾದ "ಹಾಯಡ್ರೋಜನ ಬಾಂಬು" ತಯಾರಿಸಲಿಕ್ಕೆ ಆಜ್ಞಾಪಿಸಿದ್ದಾರೆ. ಬಾಂಬಿನ ರಹಸ್ಯ ಕೂಡ ರುಶ್ಯ ಶಾಸ್ತ್ರಜ್ಞರಿಗೆ ಗೊತ್ತಾಗಿದೆಂಬುದೂ ಅವರು ಅದನ್ನು ತಯಾರಿಸತೊಡಗಿರುತ್ತಾರೆಂದೂ ರುಶ್ಯವ್ಯಾಪ್ತ ಜರ್ಮನಿಯಲ್ಲಿದ್ದ ಓರ್ವ ಜರ್ಮನ್ ಶಾಸ್ತ್ರಜ್ಞರು ಪ್ರಕಟಗೊಳಿಸಿರುತ್ತಾರೆ. ಈ ರೀತಿ ರುಶ್ಯ ಅಮೇರಿಕೆಗಳೊಳಗೆ ಶಸ್ತ್ರಾಸ್ತ್ರಗಳ ತಯಾರಿಯ ಸ್ಪರ್ಧೆ ನಡೆದಿದೆ. ಈ ಸ್ಪರ್ಧೆಯಲ್ಲಿ ಯಾರು ಮುಂದಿದ್ದಾರೆ ಯಾರು ಹಿಂದೆ ಬಿದ್ದಿರುತ್ತಾರೆ ಎಂಬುದು ತಿಳಿಯದು. ರುಶ್ಯ ಅಮೇರಿಕೆಯೊಳಗಿನ ಈ ಸ್ಪರ್ಧೆಯನ್ನು ಕಂಡು ಜಗತ್ತೆಲ್ಲ ತಲ್ಲಣಗೊಳ್ಳುತ್ತಿದೆ! ಭೂಲೋಕದ

...ಯುಕಾಲ ಸಮೀಪಿಸಿ ಬಂದಿದೆಯೋ ಎಂಬ ಸಂಶಯ ಉಂಟಾಗಿದೆ!

ಇಷ್ಟು ದಿನ ರಶ್ಯ ಅಮೇರಿಕೆಯವರನ್ನು ತಡೆದು ಹಿಡಿಯುವ ಕಾರ್ಯವನ್ನು ಬ್ರಿಟಿಶರು ಮಾಡುತ್ತಿದ್ದರು. ಬ್ರಿಟನದಲ್ಲಿ ಅಧಿಕಾರಾರೂಢವಾಗಿದ್ದ ಸಮಾಜವಾದಿ ಅಟ್ಲೀ ಸರಕಾರವು ರಶ್ಯರನ್ನು ಕೆಣಕಲಿಕ್ಕೆ ಅಮೇರಿಕೆಯ ಕುಬೇರರಿಗೆ ಬಿಡುತ್ತಿದ್ದಿಲ್ಲ. ಆದರೆ ಇನ್ನುಮುಂದೆ ಅಟ್ಲೀ ಸರಕಾರವು ಅಧಿಕಾರದಲ್ಲುಳಿಯುವದೋ ಅಧಿಕಾರಭ್ರಷ್ಟವಾಗಿ ರಶ್ಯರ ಬಗ್ಗೆ ಕಿಡಿಕಾರುತ್ತಿದ್ದ ವಿನ್ಸ್‌ಟನ ಚರ್ಚಿಲ್ಲರ ಧನಿಕ ಪಕ್ಷದ ಪುರಾಣಮತವಾದಿಗಳಿಗೆ ರಾಜಸತ್ತೆಯನ್ನು ಒಪ್ಪಿಸುವದೋ ತಿಳಿಯದು. ಇದೇ ಬರುವ ಗುರುವಾರ ಅಟ್ಲೀ ಸರಕಾರದ ಭವಿತವ್ಯದ ನಿರ್ಣಯವಾಗುವದು. ಅಂದು ಬ್ರಿಟನ್ನಿನಲ್ಲಿ ಪಂಚವಾರ್ಷಿಕ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಚುನಾವಣೆಯನ್ನು ಗೆಲ್ಲುವದಕ್ಕಾಗಿ ಚರ್ಚಿಲ್ಲ-ಅಟ್ಲೀಯವರೊಳಗೆ ಪ್ರಚಂಡ ಅಹಮಹಮಿಕೆ ನಡೆದಿದೆ. ಬ್ರಿಟಿಶ ಜನತೆಯು ಜೀವನದ ಪ್ರಶ್ನೆಗಳಾದ ಅನ್ನಾಚ್ಛಾದನಗಳ ಪೂರವಠೆ, ನಿರುದ್ಯೋಗಿತನ ಮತ್ತು ವಾಸಸ್ಥಳಗಳ-ಸೌಕರ್ಯ ಈ ಪ್ರಶ್ನೆಗಳನ್ನು ತಾವು ಸಮಾಧಾನಕರವಾಗಿ ಬಿಡಿಸುವೆವೆಂಬ ಆಮಿಷ ತೋರಿಸಿ ಜನಸಾಮಾನ್ಯರನ್ನು ತಮ್ಮ ಪಕ್ಷದ ಕಡೆಗೆ ಒಲಿಸಿಕೊಳ್ಳಲು ಅಟ್ಲೀಯವರು ವ್ಯಾಕುಲರಾಗಿದ್ದಾರೆ. ಅಟ್ಲೀಯವರ ಪರರಾಷ್ಟ್ರೀಯ ರಾಜಕಾರಣ ಅಷ್ಟೇನು ಯಶಸ್ವಿಯಾಗಿದ್ದಿಲ್ಲ. ರಶ್ಯ-ಅಮೇರಿಕೆಯವರ ಸ್ಪರ್ಧೆಯನ್ನು ನಿಲ್ಲಿಸಲು ಅವರು ಸಮರ್ಥರಾಗಿದ್ದಿಲ್ಲ. ಚರ್ಚಿಲ್ಲರು ಅವರ ಈ ದೋಷವನ್ನು ಹೆಕ್ಕಿ ತೆಗೆದು, ತಮ್ಮ ಕೈಯೊಳಗೆ ಅಧಿಕಾರ ಸೂತ್ರಗಳು ಬಂದರೆ ತಾವು ರಶ್ಯ-ಅಮೇರಿಕೆಯವರಲ್ಲಿ ಸಂಧಾನ ಮಾಡಿ ಮುಗಿಸಬಹುದು, ಹಾಯಡ್ರೋಜನ ಬಾಂಬುಗಳ ಉಪಯೋಗವನ್ನು ಯಾರೂ ಮಾಡದಂತೆ ಒಂದು ಒಪ್ಪಂದ ಮಾಡಲು ಪ್ರಯತ್ನಿಸುವೆನೆಂಬುದಾಗಿ ಚುನಾವಣೆಯ ರಣದಲ್ಲಿ ದೊಡ್ಡದೊಂದು ಬಾಂಬ್ ಹಾರಿಸಿದ್ದಾರೆ! ಮುಂದೆ ಈ ಮಾತನ್ನು ಅವರು ಎಂತು ನೆರವೇರಿಸುವರು ಇಲ್ಲವೆ ಅದನ್ನು ನೆರವೇರಿಸಲು ಎಷ್ಟು ಶಕ್ತರಾದಾರು ಎಂಬುದು ಬೇರೊಂದು ಪ್ರಶ್ನೆ. ಆದರೆ ತುರ್ತಕ್ಕೆ ಅವರ ಈ ಮಾತಿನ ಆಮಿಷವು ಬ್ರಿಟಿಶ ಮತದಾರ ಲೋಕದ ಮನಸ್ಸನ್ನು ಆಕರ್ಷಿಸಿದೆಂಬುದು ನಿಶ್ಚಿತ. ಆದ್ದರಿಂದ ಗುರುವಾರದ ಚುನಾವಣೆಗಳಲ್ಲಿ ಚರ್ಚಿಲ್ಲರ ಪಕ್ಷವು ಬಹುಮತದಿಂದ ಆರಿಸಿ ಬರದಿದ್ದರೂ ದೊಡ್ಡ ಸಂಖ್ಯೆಯಿಂದ ಆರಿಸಿ ಬರುವ ಲಕ್ಷಣಗಳುಂಟೆಂದು ಪುಣೆಯ "ಕೇಸರಿ' ಪತ್ರಿಕೆಯ ಲಂಡನ ಸುದ್ದಿಗಾರರು ಭವಿಷ್ಯ ವರ್ತಿಸಿರುತ್ತಾರೆ. ಚರ್ಚಿಲ್ಲರು ಈ ಚುನಾವಣೆಯಲ್ಲಿ ವಿಜಯಿಯಾದರೆ ಆಂತರರಾಷ್ಟ್ರೀಯ ರಾಜಕಾರಣದಲ್ಲಿ ಬಹಳಷ್ಟು ಸ್ಥಿತ್ಯಂತರಗಳಾಗುವ ಸಂಭವವುಂಟು. ನಮ್ಮ ಹಿಂದುಸ್ಥಾನಕ್ಕಂತೂ ಅದೊಂದು ಧೂಮಕೇತುವಿನ ಉದಯದಷ್ಟು ಬಾಧಕವಾಗುವದು! ಚರ್ಚಿಲ್ಲರ ಹಿಂದ ಹಿತಶತ್ರುತ್ವ ಲೋಕ-ಪ್ರಸಿದ್ಧವಿದೆ. ಚರ್ಚಿಲ್ಲರು ಅಧಿಕಾರಕ್ಕೆ ಬಂದರೆ ಹಿಂದುಸ್ಥಾನದ ವಿರುದ್ಧ ತಾವು ನಡಿಸಿದ ಕಾದಾಟದಲ್ಲಿ ತಮಗೆ ಬ್ರಿಟಿಶರ ಅಮೂಲ್ಯ ಬೆಂಬಲ ಸಿಗಬಹುದೆಂಬ ಆಶೆಯಿಂದ ಪಾಕಿಸ್ತಾನಿಗಳು ಈ ಚುನಾವಣೆಗಳಲ್ಲಿ ಚರ್ಚಿಲ್ಲರ ವಿಜಯವನ್ನು ಹಾರೈಸುತ್ತಿದ್ದಾರಂತೆ! ಚರ್ಚಿಲ್ಲರು ಅಧಿಕಾರಾರೂಢರಾದರೆ ಅವರು ಭಾರತ-ಪಾಕಿಸ್ತಾನಗಳೊಳಗಿನ ಕಲಹದಲ್ಲಿ ಪಾಕಿಸ್ತಾನದ ಪಕ್ಷ ಹಿಡಿಯುವರೆಂಬುದಕ್ಕೆ ಸಂದೇಹವೇನೂ ಇಲ್ಲ. ಚರ್ಚಿಲ್ಲರ ಕಾರಕೀರ್ದಿಯಲ್ಲಿ ಭಾರತವು ಬ್ರಿಟಿಶ ರಾಷ್ಟ್ರಕೂಟದೊಳಗಿಂದ ಹೊರಬೀಳುವ ಪ್ರಸಂಗ ಬಂದರೂ ಬರಬಹುದು. ಹಿಂದ-ಪಾಕಿಸ್ತಾನಗಳೊಳಗಿನ ಸಂಬಂಧಗಳಂತೆ, ಚರ್ಚಿಲ್ಲರು ಅಧಿಕಾರಕ್ಕೆ ಬಂದರೆ ರಶ್ಯ ಅಮೇರಿಕೆಗಳೊಳಗಿನ ಸಂಬಂಧಗಳು ಸಹ ವಿಕೋಪಕ್ಕೆ ಹೋಗುವ ಸಂಭವವುಂಟು. ಚರ್ಚಿಲ್ಲರು ಶಾಂತಿಪ್ರಿಯರಲ್ಲ; ಯುದ್ಧಪ್ರಿಯರು, ಯುದ್ಧತಂತ್ರವಿಶಾರದರು! ಅವರು ತಮ್ಮ ಹಿಂದಿನ ಮನೋವೃತ್ತಿಯನ್ನು ತೋರಿಸಿದರೆ ಮುಂದಿನದರಲ್ಲಿ ಅಡಿಗಡಿಗೆ ಕಲಹ-ಕಾರಣಗಳುಂಟಾಗಿ ಒಂದಿಲ್ಲೊಂದು ದಿನ ಯುದ್ಧದ ಕಿಡಿಗಳು ಹಾರುವವೆಂದು ಖಾತ್ರಿ ನಿರ್ಧಾರವಾಗಿ ಹೇಳಬಲ್ಲೆ.

ಕಲಹ ಕಾರಣಗಳಿಗೆ ಈಗೇನು ಕೊರತೆಯಿಲ್ಲ. ಯುರೋಪದೊಳಗೆ ಜರ್ಮನಿಯ ವ್ಯವಸ್ಥೆಯೇ ಒಂದು ದೊಡ್ಡ ಕಲಹ-ಕಾರಣವಾಗಿದೆ. ತಮ್ಮ ವಶಕ್ಕಿದ್ದ ಪಶ್ಚಿಮ ಜರ್ಮನಿಯನ್ನು ಮಿತ್ರರು ತಮಗೆ ಬೇಕಾದಂತೆ ಸಂಘಟಿಸುತ್ತಿದ್ದಾರೆ. ಅತ್ತ ರಶ್ಯರು ತಮ್ಮ ಕಡೆಗಿದ್ದ ಪೂರ್ವ ಜರ್ಮನಿಯನ್ನು ತಮಗೆ ಬೇಕಾದಂತೆ ಸಂಘಟಿಸಿದ್ದಾರೆ. [illegible] ಜರ್ಮನ ಐಕ್ಯದ ಕಲ್ಪನೆಯನ್ನು ತಮ್ಮ ಕೈಯೊಳಗಿನ ಜರ್ಮನರ ಮುಂದಿಟ್ಟು ಎರಡೂ ಪಕ್ಷದ ಜರ್ಮನಿಯ ಮೇಲೆ [illegible] ಪ್ರಯೋಗಿಸುತ್ತಿದ್ದಾರೆ. [illegible] ಜರ್ಮನಿಯಂತೆ ರಶ್ಯ ಮಿತ್ರರು ಜರ್ಮನ ರಾಜಧಾನಿಯಾದ ಬರ್ಲಿನ್ನ ನಗರವನ್ನು ಎರಡು ಭಾಗಗಳನ್ನಾಗಿ ಮಾಡಿ ಪೂರ್ವ ಭಾಗವನ್ನು ರಶ್ಯರ ಅಂಕಿತಕ್ಕೆ ಬಿಟ್ಟುಕೊಟ್ಟು ಪಶ್ಚಿಮ ಭಾಗವನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡ ಸಂಗತಿಯು ಓದುಗರ ಸ್ಮರಣೆಯಲ್ಲಿರಬಹುದು. ಮಿತ್ರರ ವಶಕ್ಕಿರುವ ಈ ಭಾಗವು ರಶ್ಯವ್ಯಾಪ್ತ ಜರ್ಮನಿಯಿಂದ ಸುತ್ತುವರಿಯಲ್ಪಟ್ಟಿದೆ. ಈ ಭಾಗವನ್ನು ಮಿತ್ರರ ಕೈಯೊಳಗಿಂದ ಕಸಿದುಕೊಳ್ಳಬೇಕೆಂದು ರಶ್ಯರು [illegible] ಸುತ್ತಿದ್ದಾರೆ. ೧೯ ವರ್ಷದ ಹಿಂದೆ ಈ ವಿಭಾಗಕ್ಕೆ ರಶ್ಯರು ಕೆಲವು ದಿನಗಳವರೆಗೆ ದಿಗ್ಬಂಧನ ಹಾಕಿದ್ದ ಸಂಗತಿಯನ್ನು ಓದುಗರು ನೆನಪಿಗೆ ತಂದುಕೊಳ್ಳಬೇಕು. ರಶ್ಯರು ಈಗ ಪುನಃ ಆ ಆಟವನ್ನು ತಿರುಗಿ ಆಡುವ ಯೋಜನೆ ಮಾಡಿದ ವಾರ್ತೆಯಿದೆ. ಆ ಆಟಕ್ಕೆ ಆರಂಭವಾದರೆ ಯುದ್ಧ ಆರಂಭವಾದಂತೆಯೇ ಸರಿ!

ಇತ್ತ ಪೂರ್ವದಲ್ಲಿಯೂ ಕಲಹ-ಕಾರಣಗಳಿಗೆ ಕೊರತೆಯಿಲ್ಲ. ಅಮೇರಿಕೆಯು ಚೀನಿ ಕಮ್ಯುನಿಸ್ಟ ಸರಕಾರಕ್ಕೆ ಮನ್ನಣೆಯನ್ನಿತ್ತಿಲ್ಲ. ಚಾಂಗ-ಕೈ-ಶೇಕರ ಸರಕಾರವು ಪುನಃ ಚೀನವನ್ನು ಆಕ್ರಮಿಸಬೇಕೆಂದೂ ಆಕ್ರಮಿಸುವದೆಂದೂ ಅವರ ಅಪೇಕ್ಷೆಯೂ ನಿರೀಕ್ಷೆಯೂ ಇರಬೇಕು. ಆ ರೀತಿ ಅವರು ಚಾಂಗ ಕೈ ಶೇಕರಿಗೆ ಸಹಾಯ ಮಾಡಿದರೆ ಅದೇ ಮುಂದೆ ಮಹಾಯುದ್ಧಕ್ಕೆ ಕಾರಣವಾಗಬಹುದು. ಇಂಡೋಚೀನದಲ್ಲಿಯೂ ಕಿಡಿಯುಂಟಾಗುವ ಸಂಭವವಿದೆ. ಇಂಡೋಚೀನದಲ್ಲಿ ಫ್ರೆಂಚರ ಆಧಿಪತ್ಯವನ್ನು ಕಿತ್ತೊಗೆಯಲು ಹೋರಾಡುತ್ತಿರುವ ಜನರಲ್ಲಿ ಎರಡು ಪಕ್ಷಗಳಾಗಿವೆ. ಫ್ರೆಂಚರು ಬಾವೋ ದೈ ಇವರ ಪಕ್ಷಕ್ಕೆ ಅಧಿಕಾರ ಬಿಟ್ಟುಕೊಡಲು ಸಿದ್ಧರಾಗಿದ್ದಾರೆ. ರಶ್ಯರು ಅಲ್ಲಿ ಕಮ್ಯುನಿಸ್ಟ ಪಕ್ಷದ ಕೈಯಲ್ಲಿ ಸೂತ್ರಗಳಿರಬೇಕೆಂದು ಪ್ರಯತ್ನಿಸುತ್ತಿದ್ದಾರಲ್ಲದೆ ಆ ಸೂತ್ರಗಳನ್ನು ವಹಿಸಲು [illegible] ಸ್ಥಾಪಿತವಾಗಿರುವ ಕಮ್ಯುನಿಸ್ಟ ಸರಕಾರಕ್ಕೆ ಮನ್ನಣೆಯನ್ನು ಸಹ ಕೊಟ್ಟಿದ್ದಾರೆ! ಇಂಡೋಚೀನದೊಳಗಿನ ಈ ಎರಡು ಜನ ಸರಕಾರಗಳ ತಿಕ್ಕಾಟ ನಡೆಯುವದು ಸಾಹಜಿಕ. ಈ ತಿಕ್ಕಾಟದೊಳಗಿಂದ ಹಾರುವ ಕಿಡಿಗಳೇ ಮಹಾಯುದ್ಧದ ಜ್ವಾಲೆಯನ್ನು ಹೊತ್ತಿಸಬಾರದೇಕೆ?

ಸಾಂಪ್ರತ ಜಾಗತಿಕ ಪರಿಸ್ಥಿತಿ ಇಂದು ಭಯಪ್ರದವಾಗಿದೆ. ರಾಷ್ಟ್ರ-ರಾಷ್ಟ್ರಗಳೊಳಗೆ ಕಲಹಗಳುಂಟು, ಕಿಡಿಗಳುಂಟು. ಮಹಾರಾಷ್ಟ್ರಗಳು ಜಗದೀಶ ಪ್ರಭುವಾಗಲು ಹಾತೊರೆಯುತ್ತಿವೆ. ಬಾಯಿಯಿಂದ ಶಾಂತಿಯ ಜಪ ನಡೆದಿರುತ್ತಿದ್ದರೂ ಶಾಂತಿಗಾಗಿ ಯಾವ ಮಹಾರಾಷ್ಟ್ರವೂ ಮನಸಾ ಹೆಣಗುವದಿಲ್ಲ. ಜಗತ್ತು ಯುದ್ಧದತ್ತ ಸಾಗಿದೆಂದು ನಾನು ಪ್ರಸ್ತಾಪಿಸಿದ್ದು ಇದನ್ನೆಲ್ಲ ನೋಡಿಯೇ.

ವೈ॥ ವಾ॥ ಹಳದೀಪುರ ಕೃಷ್ಣರಾಯರು

ನಮ್ಮ ಜಿಲ್ಲೆಯ ತತ್ತ್ವನಿಷ್ಠ ಸೇವಕರಾದ ಶ್ರೀ ಕೃಷ್ಣರಾವ ರಾಮಚಂದ್ರ ಹಳದೀಪುರಕರ ಇವರು ೬-೭ ದಿನಗಳ ಕಾಹಿಲೆಯಿಂದ ಕಳೆದ ಸೋಮವಾರ ತಾ ೧೩ ನೇ ರಾತ್ರಿ ೧೦ ಘಂಟೆಗೆ ತಮ್ಮ [illegible] ವಯಸ್ಸಿನಲ್ಲಿ [illegible] ದಿವಂಗತರಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತಿದೆ. ಕೃಷ್ಣರಾಯರು [illegible] ಮತ್ತು ಕಳೆದ [illegible] ಜನ ಸಮ್ಮೇಲನದ [illegible] ಬಂದಿದ್ದರು. ಆ ಕಾಲದಲ್ಲಿ ಅವರ [illegible] ಅವರು ಇಷ್ಟು ಬೇಗ ನಮ್ಮನ್ನು ಅಗಲಿ ಹೋಗುವರೆಂದು ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ. ಅವರ ಈ ಅಕಾಲಿಕ ನಿಧನದಿಂದ ಇಡೀ ಜಿಲ್ಲೆಗೆ ಸಿಡಿಲು ಬಡಿದಂತಾಗಿದೆ. ಶ್ರೀ ಕೃಷ್ಣರಾಯರ [illegible] ನಿಷ್ಠೆ, [illegible] ಪ್ರತಿಭಾಪೂರ್ಣ, [illegible] ವಿಷಯಗಳನ್ನು [illegible] ಯಿಂದ ಸೇವನ [illegible] ಗುಣ [illegible] ಗಳು ಅವರನ್ನು ಎಲ್ಲ ಸಮಾಜಗಳಲ್ಲಿ ಲೋಕಪ್ರಿಯರನ್ನಾಗಿ ಮಾಡಿದ್ದವು. ಹಳದೀಪುರಕರ ಮನೆತನ ನಮ್ಮ ಜಿಲ್ಲೆಯಲ್ಲಿ ಹೆಸರಾದ ಮನೆತನ. [illegible] ಇನ್ನೆಷ್ಟು [illegible] ಶ್ರೀ ಕೃಷ್ಣರಾಯರ ನಿಧನದಿಂದ ನಮ್ಮ ಜಿಲ್ಲೆಯು ಒಂದು ದೇದೀಪ್ಯಮಾನ ರತ್ನವನ್ನು ಕಳೆದುಕೊಂಡು ನಿಜವಾಗಿಯೂ ಬಡವಾಗಿದೆ. ಪರಮಾತ್ಮನು ಮೃತಾತ್ಮರಿಗೆ ಸದ್ಗತಿಯನ್ನಿತ್ತು, ಅವರ ಪರಂಪರೆಯನ್ನು ಮುಂದುವರಿಸಲು ಅವರ ಕುಟುಂಬಿಯರಿಗೆ ಬುದ್ಧಿ-ಸಾಮರ್ಥ್ಯಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಪತ್ರಿಕಾ-ಪ್ರಕಟನೆ.

೧೯೪೮ನೇ ಇಸವಿಯ ಫೆಬ್ರುವರಿಯಲ್ಲಿ ಮುಂಬಯಿ ಸರಕಾರವು ಬಟ್ಟೆಯ ವ್ಯಾಪಾರಿಗಳಿಗೆ ಪರವಾನೆ ಕೊಡುವ ಪದ್ಧತಿಯನ್ನು ನಿಲ್ಲಿಸಲು ನಿಶ್ಚಯಿಸಿ, ೧೯೪೮ನೇ ಸಾಲಿನ ಬಗ್ಗೆ, ೧೯೪೫ನೇ ಇಸವಿಯ ಮುಂಬಯಿಯ ಅರಳೆ ಬಟ್ಟೆಯ ವ್ಯಾಪಾರದ ನಿಯಂತ್ರಣದಾಜ್ಞೆ, ೧೯೪೭ನೇ ಇಸವಿಯ ಮುಂಬಯಿಯ ಅರಳೆ ಬಟ್ಟೆ ಮತ್ತು ನೂಲಿನ ದಲಾಲ (broker) ರಿಗೆ ಪರವಾನೆ ಕೊಡುವ ಆಜ್ಞೆ ಮತ್ತು ೧೯೪೪ನೇ ಇಸವಿಯ ಮುಂಬಯಿಯ ಬಟ್ಟೆ [illegible] ಅಜ್ಞೆ [illegible] ಪರವಾನೆ ಕೊಡುವ ಆಜ್ಞೆ, ಇವುಗಳನ್ವಯ ಪರವಾನೆದಾರರಿಂದ ವಸೂಲ ಬಂದ ಪರವಾನೆ ಫೀ (ಫೀ) ದ ರಕಮಿನೊಳಗಿಂದ ೩/೪ ರಕಮನ್ನು ಅರ್ಜದಾರರಿಗೆ ವಾಪಸ ಕೊಡಲು ಆಜ್ಞಾಪಿಸಿತ್ತು. ಅದೇ ವೇಳೆಗೆ ೧೯೪೫ನೇ ಇಸವಿಯ ಮುಂಬಯಿಯ [illegible] ಬಟ್ಟೆಯ ವ್ಯಾಪಾರವನ್ನು ನಿಯಂತ್ರಿಸುವ ಮತ್ತು ಅದರ ವ್ಯಾಪಾರಿಗಳಿಗೆ ಪರವಾನೆ ಕೊಡುವ ಆಜ್ಞೆಯನ್ವಯ ಪರವಾನೆಗಳನ್ನು ಪಡೆಯಲು ಅರ್ಜಿ ಕೊಟ್ಟಿದ್ದ ಆದರೆ ಅರ್ಜಿಯಂತೆ ಪರವಾನೆ ಸಿಗದ ಅರ್ಜದಾರರು ತುಂಬಿದ ಫೀಯನ್ನು ಪೂರ್ತಿಯಾಗಿ ಕೊಡಲು ಸರಕಾರವು ಅಪ್ಪಣೆ ಕೊಟ್ಟಿತ್ತು.

ಮೇಲಿನ ಆಜ್ಞೆಗಳನ್ವಯ ಹಣ ವಾಪಸ ಪಡೆಯಲು ಹಕ್ಕುಳ್ಳ [illegible] ಅವರಿಗೆ [illegible] ಕೊಡಲಾಗುವ [illegible] ಸರಕಾರವು [illegible] ಕೊಡಲಿಕ್ಕೆ [illegible] ಎಂದು ನಿಶ್ಚಯಿಸಿದ್ದು ೩೧-೩-೧೯೫೦ರ ನಂತರ ಹಣ ವಾಪಸ ಸಿಗಲು [illegible] ಬೇಡಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವದಿಲ್ಲವೆಂದು ವಿಧಿಸಲಾಗಿದೆ.

(ಜಿಲ್ಲಾಧಿಕಾರಿ ಅಪೇಕ್ಷೆಯಂತೆ ಪ್ರಕಟಿಸಲ್ಪಟ್ಟಿದೆ)

ಜಿಲ್ಲಾ ಸಮಾಚಾರ

(೬ನೇ ಪುಟದಿಂದ ಮುಂದುವರಿದುದು)

ಜನರಿಗೆ ಜಾಗ್ರತೆ ಕೊಡಲಾಯಿತು ಅದರಂತೆ ಜನರೂ ಅಗ್ನಿಶಾಮಕ ದಳದವರೂ ಓಡಿ ಬಂದು ಒಂದು ಗಳಿಗೆಯೊಳಗೆ ಪ್ರಯತ್ನಪಟ್ಟು ಬೆಂಕಿಯನ್ನು ಆರಿಸಿದರು ಇಲ್ಲದಿದ್ದರೆ ಎಲ್ಲ ಗುಡಿಸಲುಗಳೇ ಅಗ್ನಿನಾರಾಯಣನಿಗೆ ಆಹುತಿಯಾಗುತ್ತಿದ್ದವು

ಈ ಬೆಂಕಿ ಬಿದ್ದ ಬೆಂಕಿ ಅಗಸನವರಲ್ಲಿ ತೋಡಲಾದ ಜನರು ಬೆಂಕಿ ಹಾಕಿದ ಒಂದು ಸರಕಾರ ನವರನ್ನು ಅದರ ಬೆಂಕಿ ವಿಸ್ತಾರ ಹೊಂದಿ ಪಸರಿಸದಂತೆ ಕಡಿದು ತೆಗೆಯಲಾಯಿತು ಇದು ಅಲ್ಲಿ ಹಾಜರಿದ್ದ ಡಿ ಎಫ್ ಓ ಸಾಹೇಬರ ಮನಸ್ಸಿಗೆ ಹೋಗಲಿಲ್ಲವಂತೆ ಮರ ಕಡಿಯುವ ಜನರಿಗೆ ಅವರು ಬಾಯಿಗೆ ಬಂದ ಹಾಗೆ ಬೈದರಂತೆ! ಜನರು ಅವರ ಬೈಗಳ ಕಡೆ ಕಿವಿಗೊಡಲಿಲ್ಲ! ಡಿ ಎಫ್ ಓರವರ ಮಾತು ಉಂಟಾದರೆ ಊರನ್ನು ಬಲಿ ಕೊಡಲಿಕ್ಕೆ ಅವರು ಒಪ್ಪಲಿಲ್ಲ ಅವರು ಇತ್ತಕಡೆ ಬರುತ್ತಿದ್ದಂತೆ ಆ ಮರವನ್ನು ಕಡಿಯಲಾಯಿತು ಸಾಹೇಬರು ಸಿಟ್ಟಿಗೆದ್ದು ಎಲ್ಲರಿಗೂ ಬೈಯುತ್ತಿದ್ದರು! ಇಷ್ಟು ದೊಡ್ಡ ಸಾಹೇಬರಿಗೆ ಎಳ್ಳಷ್ಟು ಕರುಣೆ ಇಲ್ಲ ಎಂದು ಜನರು ಹೇಳಿಕೊಳ್ಳುತ್ತಾರೆ

ಅಂಕೋಲಾ— (ತಾ. ೧೬–೨–೫೦) ಕಳೆದ ತಾ ೯ಕ್ಕೆ ಇಲ್ಲಿ ರಾ॥ ವಿನಾಯಕ ದೇಸಾಯಿಯವರು ಅಸಿಸ್ಟೆಂಟ್ ಮಾಮಲೇದಾರರಾಗಿ ಕೆಲಸ ಸೇರಿ ಮಾಡಿದ ಧರ್ಮದಿಂದಲೂ ಪ್ರಾಮಾಣಿಕತೆಯಿಂದಲೂ ಆ ಸೀಮೆಯ ಒಕ್ಕಲಿಗರ ಸಂಬಂಧಗಳು ಪೂರ್ಣ ಕಡಿದುಹೋಗಿವೆಂದೂ ... ಹಾಗೂ ಊರಿನ ನಾಗರಿಕರು ಹೇಳುತ್ತಾರೆ ರಾ॥ ದಿನಕರ ದೇಸಾಯಿಯವರ ಅನಿಷ್ಟ ಪ್ರಚಾರಕ್ಕೆ ಕಡಿವಾಣ ಬೀಳದಿದ್ದರೆ ಹಳ್ಳಿಗಳೊಳಗೆ ರಾಜಕೀಯ ಸಮಸ್ಯೆಗಳು ಉಳಿಯಲಾರವೆಂದು ಅವರ ಅಭಿಪ್ರಾಯವಾಗಿದೆ

ಬೇಲೇಕೇರಿಯಲ್ಲಿ ಈಗ ಒಂದು ಜಾತಿ ಹೀನ ಪಂಥಾರಿಗಳ ನಡೆದಿದೆ ಇತಿಹಾಸದ ಪಂಥಗಳು ಬಿಟ್ಟದ್ದಲ್ಲ ಇದು ದಾರಿಹೋಕರ ಸುಲಿಗೆಯನ್ನಷ್ಟೇ ನಡೆಸಿದ್ದರು ಈ ಆಧುನಿಕ ಪಂಥಾರಿಗಳು ಊರೊಳಗೆ ಸಭ್ಯರಂತೆ ಜನರ ಮಿತ್ರರಂತೆ ನಟಿಸಿ, ಹಿಂದಿನಿಂದ ಕತ್ತಲೆಯೊಳಗೆ ಆ ಜನರನ್ನು ಸುಲಿಯುತ್ತಾರೆ ನಿಯಂತ್ರಣದ ರಾಜ್ಯದಲ್ಲಿ ಕಳ್ಳಸಂತೆ ನಡೆಯಬೇಕಾದುದು ಸ್ವಾಭಾವಿಕ ಅದರಂತೆ ಬೇಲೇಕೇರಿಯಲ್ಲೂ ಅಕ್ಕಿಯ ಕಳ್ಳಸಂತೆ ನಡೆಯುತ್ತಿದೆ ಬೇಲೇಕೇರಿಯಲ್ಲಿ ಬಂದು ಅಂಗಡಿ ವಹಿವಾಟುಗಳ ಜನರು ಹೆಚ್ಚಾಗಿ ಕಳ್ಳಸಂತೆಯಲ್ಲೇ ಅಕ್ಕಿ ಕೊಂಡು ನಿರ್ವಾಹ ಮಾಡಬೇಕಾಗುತ್ತದೆ ಮೇಲೆ ಹೇಳಿದ ಪಂಥಾರಿಗಳು ಈ ಜನರನ್ನು ಕಂಡು ನಿಮಗೆ ಅಕ್ಕಿ ಕೊಡಿಸುತ್ತೇವೆಂದು ನಂಬಿಸಿ ಅಕ್ಕಿಯ ಕಳ್ಳಪೇಟೆ ಮಾಡುವವರಿಗೂ ಆ ಜನರಿಗೂ ಗಂಟು ಹಾಕಿ ಕೊಡುತ್ತಾರೆ ಅಕ್ಕಿಯನ್ನು ಕಳ್ಳತನದಿಂದ ತಕ್ಕೊಂಡು ಹೋಗುವ ಮಾರ್ಗ ಮತ್ತು ವೇಳೆಯನ್ನೂ ಆ ಜನರಿಗೆ ಹೇಳಿಕೊಡುತ್ತಾರೆ ಈ ಬಗ್ಗೆ ಅಕ್ಕಿ ಕೊಂಡವರೂ ಅಕ್ಕಿ ಕೊಟ್ಟವರೂ ಇವರಿಗೆ ದಲಾಲಿ ಕೊಡುತ್ತಾರೆ ಮುಂದೆ ಇವರು ಹೇಳಿಕೊಟ್ಟಂತೆ ಕಳ್ಳ ಅಕ್ಕಿಯನ್ನು ವಾಹನೆಯವರು ಮಾಹನೆಗೆ ತಕ್ಕೊಂಡು ಹೋಗುವಾಗ ವೇಷಾಂತರ ಮಾಡಿ ಕತ್ತಲೆಯಲ್ಲಿ ಅವರ ಅಕ್ಕಿಯನ್ನು ಸುಲಿಯುತ್ತಾರೆ! ಹೀಗೆ ಈ ಪಂಥಾರಿಗಳು ಅಕ್ಕಿಯ ಕಳ್ಳಸಂತೆಗೆ ಪ್ರೋತ್ಸಾಹ ಕೊಟ್ಟು ದಲಾಲಿ ಪಡೆಯುವುದರ ಜೊತೆಗೆ ಪಂಥಾರಿತನವನ್ನೂ ಮಾಡಿ ಅಕ್ಕಿಯನ್ನು ಎತ್ತುತ್ತಾರೆ! ಸರಕಾರದವರು ಬೇಲೇಕೇರಿಯಲ್ಲಿ ಕೆಲವು ದಿನ ಬಂದೋಬಸ್ತು ಇಟ್ಟು ಈ ಪಂಥಾರಿಗಳ ಬಂದೋಬಸ್ತ ಮಾಡಬೇಕಾಗಿ ಅಪೇಕ್ಷೆಯುಂಟು

ಕಾರವಾರ—(ತಾ ೧೮—೨—೧೯೫೦) ಇಲ್ಲಿಯ ಅಗ್ರಗಣ್ಯ ವಕೀಲರಾದ ರಾ॥ ಕೃಷ್ಣರಾವ ಹಳದೀಪುರಕರರು ಕಳೆದ ಸೋಮವಾರ ರಾತ್ರಿ ೧ ಘಂಟೆಯ ಸುಮಾರಿಗೆ ಹೃದಯವಿಕಾರದಿಂದ ತೀರಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ ಕಳೆದ ವಾರದ ಪ್ರಾರಂಭಕ್ಕೆ ಕೃಷ್ಣರಾಯರು ಒಂದು ಹಳ್ಳಿಗೆ ಹೋದಾಗ ಅಲ್ಲಿಯ ರೈತರು ಪ್ರೀತಿಯಿಂದ ತಂದು ಕೊಟ್ಟ ಕಬ್ಬಿನ ರಸವನ್ನಷ್ಟು ಕುಡಿದಿದ್ದರಂತೆ ಆ ರಸವೇ ಅವರ ಪ್ರಕೃತಿಯನ್ನು ಕೆಡಿಸಿತು ಅವರನ್ನು ಒಂದು ದಿನ ಸ್ಥಿತಿ ಹೃದಯವಿಕಾರವು ಉಲ್ಬಣಾವಸ್ಥೆಗೆ ಹೋಯಿತು ಸ್ಥಾನಿಕ ಡಾಕ್ಟರರೂ ಕುಮಟಾ, ಅಂಕೋಲಾ ಕಡೆಯಿಂದ ಕೆಲವು ಡಾಕ್ಟರರೂ ಕೃಷ್ಣರಾಯರನ್ನು ಉಳಿಸಿಕೊಳ್ಳಲು ಪರಾಕಾಷ್ಠೆಯ ಪ್ರಯತ್ನ ಮಾಡಿದರು ಆದರೆ ಒಗವನ್ ಯಮಧರ್ಮರಾಯನ ವಾರಂಟನ್ನು ಡಾಕ್ಟರರಾಗಲಿ ಯಾರೂ ರದ್ದು ಮಾಡಲು ಮಾನವರಿಂದ ಸಾಧ್ಯವೇ? ಅಂತು ಕೊನೆಗೆ ಕೃಷ್ಣರಾಯರು ಕುಟುಂಬೀಯರನ್ನೂ, ವಿಶಾಲ ಆಪ್ತೇಷ್ಟವರ್ಗವನ್ನೂ, ಸಮಸ್ತ ಕಾರವಾರ ನಗರವನ್ನೂ ಇಡೀ ಜಿಲ್ಲೆಯನ್ನೂ ದುಃಖದ ಕಡಲಿನಲ್ಲಿ ಒಗೆದು ನಡೆದಬಿಟ್ಟರು! ಅವರ ಸ್ಮಶಾನಯಾತ್ರೆಗೆ ಸಾವಿರಾರು ಮಂದಿ ಕೂಡಿದ್ದರು ಅದರಲ್ಲಿ ಎಲ್ಲ ಮತ ಪಂಥಗಳ ಜನರಿದ್ದರು ಕಾರವಾರದಲ್ಲಿ ಇಷ್ಟು ದೊಡ್ಡ ಸ್ಮಶಾನಯಾತ್ರೆ ಹಿಂದೆಂದೂ ಹೊರಟಿದ್ದಿಲ್ಲ ಕೃಷ್ಣರಾಯರ ನಿಧನದ ನಿಮಿತ್ತ ಮಂಗಳವಾರ ಪೇಟೆ ಮುಚ್ಚಲ್ಪಟ್ಟಿತ್ತು, ಶಾಲೆಗಳೂ ಮುಚ್ಚಲ್ಪಟ್ಟಿದ್ದವು

ಈಯೊತ್ತು ಕಾರವಾರ ಅರ್ಬನ ಸಹಕಾರ ಬೇಂಕಿನ ಡಾಯರೆಕ್ಟರರೂ ಬೇಂಕಿನ ಸಿಬ್ಬಂದಿಯವರೂ ಮುನಿಸಿಪಾಲಿಟಿಯ ಕೌನ್ಸಿಲರ ಸದಸ್ಯರೂ ಬೇಂಕಿನ ಕಚೇರಿಯಲ್ಲಿ ಸಭೆಗೂಡಿ ದಿವಂಗತ ಹಳದೀಪುರ ಕೃಷ್ಣರಾಯರ ಅಕಾಲಿಕ ನಿಧನದಿಂದ ತಮಗೆ ಉಂಟಾದ ಸಂತಾಪವನ್ನು ವ್ಯಕ್ತಗೊಳಿಸುವ ಮತ್ತು ದಿವಂಗತರಿಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುವ ಒಂದು ಗೊತ್ತುವಳಿಯನ್ನು ಮಾಡಿದರು

ರೂ ೨೫ ಇನಾಮು ! !

ನಮ್ಮ ಬಬ್ರು ಹರ್ಕ್ಯುಲಸ್ " ಸ್ಯಾಕಲ್ಲ ನಂ I L 4737ನೇದು ತಾ ೧೨–೨ ೫೦ನೇ ಸಂಜೆ ೭ ಘಂಟೆಗೆ ನಮ್ಮ ಚಿತ್ರಿಗೆ ದುಕಾನಿನ ಮುಂದುಗಡೆ ಇಟ್ಟದ್ದು ಕಳೆದುಹೋಗಿರುತ್ತದೆ ಸದರಿ ಸ್ಯಾಕಲ್ಲ ಸ್ವಲ್ಪ ಹಳೇದಾಗಿ ಹಿಂದಿನ ಬಣ್ಣ ಸ್ವಲ್ಪ ಹಾರಿಹೋಗಿದೆ ಈ ಸ್ಯಾಕಲನ್ನು ಪತ್ತೆ ಮಾಡಿಕೊಟ್ಟವರಿಗೆ ರೂ ೨೫ ಇನಾಮು ಕೊಡಲಾಗುವದು ತಾ ೧೭–೨ ೫೦

ಗಜಾನನ ಸೀತಾರಾಮ ಭಟ್ಟ ಚಿತ್ರಿಗಿ,

• ದಿಲ್ಲಿ ರಿಪಿಮೇಡ ಡೀಲರ, ಚಿತ್ರಿಗಿ—ಕುಮಟಾ

ಬೇಕು !

ಜೀವ ವಿಮೆ, ಅಗ್ನಿ ಭಯದ ವಿಮೆ, ಮೋಟಾರ–ಬಂಡಿಗಳ ವಿಮೆ ಮುಂತಾದ ವಿಮೆಗಳನ್ನು (ಸಹಕಾರ ಸಂಸ್ಥೆಗಳಿಗೂ, ರೂ ೨೦೦ಕ್ಕೆ ಮೇಲ್ಪಟ್ಟ ವಿಮಾ ಪತ್ರಗಳಿಗೂ ವಿಶೇಷ ಸವಲತ್ತುಗಳು ಸಿಗುತ್ತವೆ) ಇಳಿಸುವ ಬಿಜಿನೆಸ್ಸಿಗಳ ತಪಾಸಣೆ ಮಾಡಲು ಇನ್ಸ್‌ಪೆಕ್ಟರರೂ ಬ್ಬರು ಬೇಕು ಸಂಘಟನೆಯ ಚಾತುರ್ಯವುಳ್ಳವರು ಮಾತ್ರ ಅರ್ಜಿ ಮಾಡತಕ್ಕದ್ದು ಮತ್ತು ಅರ್ಜಿಯಲ್ಲಿ ತಮ್ಮ ಪೂರ್ವಾನುಭವವನ್ನೂ, ತಾವು ಅಪೇಕ್ಷಿಸುತ್ತಿರುವ ಪಗಾರ ಪ್ರಮಾಣವನ್ನೂ (... ಅದನ್ನು ...) ಕುಲಕರ್ಣಿ ಮತ್ತು ಕಂಪನಿ, ಚೀಫ್ ಏಜಂಟ್ಸ ವಾಂಬೆ ಯುನೈಟೆಡ್ ಇನ್ಶುರನ್ಸ ಸೊಸೈಟಿ, ಲಿ ನವಸಾರಿ ಬಿಲ್ಡಿಂಗ ಹೊರ್ನಬಿ ರೋಡ, ಕೋಟೆ, ಮುಂಬಯಿ ಈ ಪತ್ತೆಗೆ ಕಳಿಸಿಕೊಡತಕ್ಕದ್ದು

ಇಲ್ಲಿ ಮಾರ್ಕೆಟ್ಟಿಗೆ ಇಟ್ಟ ಸಾವಿರಾರು ಉಪ್ಪಿನ ಸೊಸೈಟಿಯ ಮುಡಿಗಳ ಚೀಲಗಳಲ್ಲಿ ಒಮ್ಮೊಮ್ಮೆ ೧೦, ೧೦–೧೨ ರತ್ತಲ ಉಪ್ಪು ಕಡಿಮೆ ಬರುತ್ತದೆಂದೂ ವ್ಯಾಪಾರಿಗಳು ದೂರುತ್ತಾರೆ ಉಪ್ಪಿನ ಚೀಲಗಳನ್ನು ತೂಕ ಮಾಡಿಕೊಡಿರೆಂದು ಹೇಳಿದರೆ ಸೊಸೈಟಿಯ ಪ್ರತಿನಿಧಿಗಳು ಒಪ್ಪುವದಿಲ್ಲವಂತೆ! ನಾವು ತೂಕ ಮಾಡಿಯೇ ಇಟ್ಟಿದ್ದೇವೆ ತಿರುಗಿ ತೂಕ ಮಾಡುವದೇ ಬೇಕಿಲ್ಲ! "ಎಂದು ದರ್ಪದ ಉತ್ತರ ಕೊಡುತ್ತಾರಂತೆ ಸೊಸೈಟಿಯ ಪ್ರಮುಖರು ಇತ್ತ ಗಮನವೀಯಬೇಕಾಗಿ ಅಂಬೋಣ ದೆ

ಎಲ್ಲ ಸಾರ್ವಜನಿಕ ಪ್ರಯಾಣಿಕ ವಾಹಕ ಮೋಟಾರ ವಾಹನಗಳು ಜಿಲ್ಲಾ ಗೃಹರಕ್ಷಕ ದಳದ ಮೇಲಧಿಕಾರಿಯ ಅಧಿಕಾರ–ಪತ್ರ ತಕ್ಕೊಂಡು ಬಂದ ಮತ್ತು ದಳದ ಕಾರ್ಯಕ್ಕಾಗಿ ಪ್ರಯಾಣಬೇಕಾಗುವ ದಳದ ಸೈನಿಕರನ್ನು ' ಚಾರ್ಜು ಪ್ರಯಾಣಿಕರ " ನ್ನಾಗಿ ತೆಗೆದುಕೊಂಡು ಹೋಗಬೇಕಾಗಿಯೂ ಹಾಗೆ ಮಾಡದಿದ್ದ ವಾಹನಗಳ ಯಜಮಾನ ಚಾಲಕರ ಅಪರಾಧಿಗಳೆಂದು ಕರ್ನಾಟಕ ವಿಭಾಗದ ವಾಹನ ನಿಯಂತ್ರಣಾಧಿಕಾರಿಗಳು ಒಂದು ಪರಿಪತ್ರ ಹೊರಡಿಸಿ ಜಾಹೀರ ಮಾಡಿರುತ್ತಾರೆ

ಕುಮಟಾ ತಾಲೂಕಿಗೆ ಸಕ್ಕರೆ ಪೂರೈಸುವ ಪಾತ್ರೆಯನ್ನು ಈಗ ಜಿಲ್ಲಾಧಿಪರು ಹೊನ್ನಾವರ ಅರ್ಬನ ಸಹಕಾರಿ ಬೇಂಕಿಗೆ ಒಪ್ಪಿಸಿರುತ್ತಾರೆ

ಪತ್ರಿಕಾ–ಪ್ರಕಟನೆ.

ಅಚ್ಚು ಪರದೆಯನ್ನಿಟ್ಟು ಬಟ್ಟೆಗೆ ಅಚ್ಚು ಹಾಕುವ ಕೆಲಸಕ್ಕೆ (Screen–Printing) ಅನುಸರಿಸಲಾಗುವ ದರಗಳನ್ನು ಮುಂಬಯಿ ಸರಕಾರವು ಈಗ ನಿಶ್ಚಯಿಸಿದ್ದು, ತಾ ೨೦–೧೦–೧೯೪೯ಕ್ಕೆ ನಾಗರಿಕ ಪೂರೈಕೆ ಖಾತೆಯವರು ಹೊರಡಿಸಿದ ಅಜ್ಞಾಪತ್ರಿಕೆಯಿಂದ ಬಟ್ಟೆಗೆ ಅಚ್ಚು ಹಾಕುವ ಕೆಲಸಕ್ಕಾಗಿ ನಿರ್ದಿಷ್ಟಗೊಳಿಸಿದ ದರಗಳಲ್ಲೂ ಕೆಲವು ತಿದ್ದುಪಡಿಗಳನ್ನು ಮಾಡಿದೆ ಈ ಹೊಸ ದರಗಳು ತಾ ೧೨ ೧೯೫೦ ರಿಂದ ಜಾರಿಯಲ್ಲಿ ಬಂದಿರುತ್ತವೆ, ಮತ್ತು ಈ ದರಗಳನ್ನೊಳಗೊಂಡ ಒಂದು ಹುಕುಮು ಬೇಗನೇ ಸರಕಾರಿ ಗ್ಯಾಝೆಟ್ಟಿನಲ್ಲಿ ಪ್ರಕಟಿಸಲ್ಪಡುವದು ಮೋಟ್ಯನಿಸಿದ ತಾರೀಖ (ತಾ ೧–೨ ೫೦) ಮೊದಲು ಕೈಯಿಂದ ಅಚ್ಚುಹಾಕಿದ ಇಲ್ಲವೆ ಬಣ್ಣ ಕೊಟ್ಟ ಬಟ್ಟೆಗಳಿಗೆ ತಾ ೨೦–೧೦–೧೯೪೯ರ ಆಜ್ಞೆಯಲ್ಲಿ ವಿಧಿಸಲ್ಪಟ್ಟ ಮುದ್ರೆಗಳನ್ನು ಹಾಕಬೇಕು, ಮತ್ತು ಸದರಿ ತಾರೀಖಿನ ನಂತರ ಕೈಯಿಂದ ಅಚ್ಚು ಹಾಕಿದ ಯಾ ಬಣ್ಣ ಕೊಟ್ಟ ಬಟ್ಟೆಗಳಿಗೂ, ಅಚ್ಚು ಪರದೆಯನ್ನಿಟ್ಟು ಅಚ್ಚು ಹಾಕಿದ ಬಟ್ಟೆಗಳಿಗೂ ತಿದ್ದುಪಡಿಯಾದ ಹೊಸ ಆಜ್ಞೆಯಲ್ಲಿ ಹೇಳಿರುವ ಮುದ್ರೆಗಳನ್ನು ಹಾಕಬೇಕು

(ಜಿಲ್ಲಾಧಿಪರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ ಚಕರ್ಾ ಹುರಿ, ಬಾವಿ ಹಗ್ಗ, ಬ್ರಶ ಮೆಟ, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಚೆಅರಮನ್, ಕಾಯರ್ ಸೊಸೈಟಿ ಲಿಮಿಟೆಡ್

ಹೊನ್ನಾವರ (ಉ ಕನ್ನಡ)

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ಸೇಲ–ನೋಟ ಬೂಕುಗಳೂ F B 3 ಸಣ್ಣ–ದೊಡ್ಡ ಲೆಕ್ಕದ ಬೂಕುಗಳೂ, ಗೇಣಿ ರಸೀದಿ ಬೂಕುಗಳೂ ಕೇಶ ಮೆಮೋ ಬೂಕುಗಳೂ, ಸ್ಟಾಕ್ ರಜಿಸ್ಟರ ವಿಕ್ರಿ ರಜಿಸ್ಟರ ಬೂಕ ಗಳೂ ಸಿಗುತ್ತವೆ

ಜಿಲ್ಲಾ ಸಮಾಚಾರ.

ಹೊನ್ನಾವರ— (ತಾ ೧೫-೨ ೫೦) [illegible]

ಶಿರಾಲಿ— (ತಾ ೧೦-೨-೫೦) [illegible]

ಭಟಕಳ— (ತಾ ೧೬-೨ ೫೦) [illegible]

ಕಾಟಾ ಕಲ್ಲುಗಳು

ರೇಶನ್ ಮತ್ತು ನೂಗಳಿಗೆ ಮತ್ತು ವ್ಯಾಪಾರಸ್ಥರಿಗೆ ಬೇಕಾಗುವ ತೂಕ-ಅಳತೆಗಳನ್ನು ಪೂರೈಸುತ್ತೇವೆ

ಬಂಗಾರೀ ಕಲ್ಲಿನ ಸೆಟ್ಟುಗಳೂ ಸಿಗುತ್ತವೆ

ಹೆಗಡೆ ಬಂಧುಗಳು, ನೆಲ್ಲೀಕೇರಿ, ಕುಮಟಾ.

ನೋಟೀಸನ್ನಿತ್ತು ಹಚ್ಚಿಸಿಟ್ಟು ಅದರ ಸುದ್ದಿಗೆ ಆವರ ಸೀಗೆಗೆ ೩. ೧೫ಕ್ಕೆ (ಸನ್ನಿ) ಸೀಧಾ ಒಬ್ಬರಿಗೆ ಎಂಬ್ಬ ಸ್ವತ್ತು ಕೂಕ ಜನರೆಲ್ಲ ಈಗ ಕಷ್ಟ ತೆಗೆಯುವ ಪ್ರಸಂಗ ಬಂದಿದೆ! ಈ ಜನರಿಗೆ ಕಳೆದ ವರ್ಷದ ಸೀಧಾ ಕೊಡುವ ವಿಶೆ ಜಿಲ್ಹಾಧಿಕಾರಿಗಳು ಅಪ್ಪಣೆ ಕೊಡಬೇಕೆಂಗ ಸೂಚನೆಯುಂಟು ಇವರಿಗೆ [illegible] ತಿಂಗಳು ಅವಕಾಶ ಕೊಡದ ಸೀಧಾ ಅಂಗಡಿ [illegible] ಕೊಟ್ಟು ತಮ್ಮ ಕಷ್ಟವನ್ನು ಜಿಲ್ಹಾಧಿಪರು ಸಾಧ್ಯವಿದ್ದಷ್ಟು ಇದೊಂದೇ ದಾರಿಯಾಗಿ [ಭಟ್ಕಳದಂತೆ ಕುಮಟ, ಹೊನ್ನಾವರ ವಗ್ಯರೆ ಇನ್ನೂ ಏವ ಸೀಧಾ ಕ್ಷೇತ್ರಗಳಲ್ಲೂ ಕೊಡತಾ ೧೫ಕ್ಕೆ ಹೀಗೂ ದಿವಸವು [illegible] ಆಗಿಲ್ಲ ಅಂದ ಸೀಧಾ ಸಾಮಾಗ್ರಿ ಒಬ್ಬರಾಯಿತು ಒಂದು ಸ್ವತ್ತು ಕೊಡಬೇಕಾದರು ಕುಟುಂಬಗಳ ಒಂದು ಪಕ್ಷದ ಸೀಧಾ ಮುಳುಗ ಬಹಳ ಕಷ್ಟವಾದ ದೊರೆಗಳೆ ಜಿಲ್ಹಾಧಿಪರು ಅದರಿಗೆ ಯೋಗ್ಯ ಪರಿಹಾರ ಕೊಡಬೇಕೆಂಗ ಆಶೆಯುಂಟು

— ಸಂಪಾದಕ]

ಇಲ್ಲಿಯ ಸೀಧಾ ಕಚೇರಿಯವರ ಕೆಲವು ಲೀಲೆಗಳು ನಮೂದಿಸತಕ್ಕಂತಹವು ಜನರ ತಿಂಗಳ ಸಕ್ಕರೆ ಇಲ್ಲಿಯ ಸೀಧಾ ಅಂಗಡಿ [illegible] ಸಿಗುವದು ಅಗೆರಿಂದ ೩. ತಾರೀಕು ಸರಿ ಒಂದೇ ಅಂಗಡಿಗಳಲ್ಲಿ ಬಂದ ಜನರ [illegible] ಸಕ್ಕರೆ ಪಡೆಯಲು ಬಂದರೂ ಎಲ್ಲ ಜನರಿಗೆ ಸಕ್ಕರೆ ಕೊಡಲು ಅಂಗಡಿಕಾರರಿಂದ ಆಗಲಿಲ್ಲ ಅವರಿಗೆ ಕಷ್ಟವಾದರೂ ಕೊಡದೆ ರಾತ್ರಿ ೮ ಘಂಟೆಯ ವರೆಗೆ ಅಂಗಡಿಗಳನ್ನು ತೆರೆದಿಟ್ಟು ಅವರು ಜನರಿಗೆ ಸಕ್ಕರೆ ಕೊಡಲು ಸಿದ್ಧರಿದ್ದರು ಆದರೆ ನಮ್ಮ ಸೀಧಾ ಕಚೇರಿಯವರಿಗೆ ಅದು ಸರಿಬೀಳಲಿಲ್ಲ! ಸರಿಯಾಗಿ ೬ ಘಂಟೆಗೆ ಅವರು ಅಂಗಡಿಗಳ ಬಾಗಿಲ ಮುಚ್ಚಲು ಹೇಳಿದರು, ಅಂಗಡಿಗಳನ್ನು ಮುಚ್ಚಿಸಿಯೇ ಬಿಟ್ಟರು! ಹೀಗೆ ಕಾದು ಕಾದು ಬಳಲಿದ ಜನರಿಗೆ ಆಗ ಸಕ್ಕರೆ ತೆಗೆದುಕೊಳ್ಳಲು ಬರಲಿಲ್ಲ! ಜನರ ಸಕ್ಕರೆಯು ಸೀಧಾ ಮುಳುಗಿ ಬಿಡಬೇಕೆಂದೇ ಸೀಧಾಧಿಕಾರಿಗಳ ಇಚ್ಛೆಯಿತ್ತೆಂದು ಊಹಿಸಬೇಕಾಗುತ್ತದೆ

ಜನವರಿ ತಿಂಗಳ ಪೂರ್ವಾರ್ಧದ ಸಕ್ಕರೆಯನ್ನು ಫೆಬ್ರುವರಿಯಲ್ಲಿ ಕೊಡಬೇಕೆಂಗ ಸೀಧಾಧಿಕಾರಿಗಳ ಹುಕುಮು ಬಂದಿದೆಯಂತೆ ಈ ಸಕ್ಕರೆಯನ್ನು ಕೊಡುವಾಗ ಜನವರಿಯ ಪೂರ್ವಾರ್ಧದಲ್ಲಿ ಆಯಾ ಸೀಧಾ ಚೀಟಿಧಾರಿಗೆ ಎಷ್ಟು ಸಕ್ಕರೆ ಕೊಡಬೇಕಾಗಿತ್ತೆಂದು ನೋಡಿ, ಅಷ್ಟು ಸಕ್ಕರೆ ಕೊಡುವದು ನ್ಯಾಯ್ಯ ಮತ್ತು ಯೋಗ್ಯವಿರುತ್ತದಷ್ಟೇ! ಆದರೆ ನಮ್ಮ ಸೀಧಾಧಿಕಾರಿಯ ನ್ಯಾಯವೇ ಬೇರೆ! ಏನಾದರೊಂದು ಕಾರಣದಿಂದ ಫೆಬ್ರುವರಿಯಲ್ಲಿ ಸೀಧಾ ಚೀಟಿಯೊಳಗೆ ವರ್ಗ ಆಗಿ ಸೀಧಾ ಚೀಟಿಗೆ ಒಪ್ಪಿದ ಜನರ ಸಂಖ್ಯೆ ಕಡಿಮೆಯಾದದ್ದು ಇದ್ದರೆ ಹಾಗೆ ಕಡಿಮೆಯಾದ ಜನರ ಸಕ್ಕರೆಯನ್ನು ಕೊಡತಕ್ಕದ್ದೆಂದು ಅವರು ಸೀಧಾ-ಅಂಗಡಿಗಳಿಗೆ ಸೂಚನೆ ಕೊಟ್ಟಿದ್ದಾರೆ! ಒಂದಿಲ್ಲೊಂದು ಮಾರ್ಗದಿಂದ ಜನರ ಸಕ್ಕರೆ ಕತ್ತರಿಸಿ ಉಳಿತಾಯ ಮಾಡಬೇಕೆಂಬುದೇ ಅವರ ಉದ್ದೇಶ! ಈ ಉಳಿತಾಯ ಮಾಡಿದ ಸಕ್ಕರೆ ಮಾತ್ರ ಎಲ್ಲಿ ಹೋಗುತ್ತದೆ ನೋಡಬೇಕು!

ಮಂಚಿಕೇರಿ— (ತಾ. ೧೪—೨—೫೦) ನಮ್ಮ

ಯಲ್ಲಾಪುರ ತಾಲೂಕಿನಲ್ಲಿ ಊರ್ಲ್ಲಿಯ ತನಕ ಕಲಿಸುವ ಪೂರ್ಣ ಪ್ರಾಥಮಿಕ ಶಾಲೆ ಯಾಲ್ಲಾಪುರದಲ್ಲಿ ಮಾತ್ರ ಉಂಟು ಅದರಿಂದ ಮುಲ್ಕಿ ವರೆಗೆ ಕಲಿಯಬೇಕೆಂಬ ಅಪೇಕ್ಷೆಯುಳ್ಳ, ಆದರೆ ದೂರದಲ್ಲಿರುವ ಯಲ್ಲಾಪುರಕ್ಕೆ ಹೋಗಿ ಉಳಿದು ಕಲಿಯುವ [illegible] ಈ ಸೀಮೆಯ ಅನೇಕ ಬಡ ವಿದ್ಯಾರ್ಥಿಗಳು ನಡುವೆಯೇ ಶಿಕ್ಷಣ ಮುಗಿಸಿಬಿಡಬೇಕಾಗುತ್ತದೆ ಈ ಅಡಚಣೆಯನ್ನು ಪರಿಹರಿಸುವದಕ್ಕಾಗಿ ಸೀಮೆಯ ಪ್ರಮುಖರು ಈ ಊರ ಶಾಲೆಯನ್ನು ಪೂರ್ಣ ಪ್ರಾಥಮಿಕ ಶಾಲೆಯನ್ನಾಗಿ ಮಾರ್ಪಡಿಸಬೇಕೆಂದು ನಿಶ್ಚಯಿಸಿ, ಅಧಿಕಾರಿಗಳ ಸಮ್ಮತಿಯನ್ನೂ ಪಡೆದು [illegible] ಇಯತ್ತೆಗಳ ಬಗ್ಗೆ [illegible] ಇವರಿಗೆ [illegible] ಕೋಣೆಗಳನ್ನು [illegible] ಉತ್ಸಾಹ ಮಾಡಿದ್ದಾರೆ ಈ ಕೆಲಸಕ್ಕೆ [illegible] ಕಟ್ಟಡ ಸಮಿತಿಯ ಮಾಂ ಜಾರಿಯೂ ದೊರೆತಿದೆ ಈ ಕಟ್ಟಡದ ಖರ್ಚಿಗೆ ಊರ ಜನರು ಕೊಡಬೇಕಾದ ಪಾಲು [illegible] ಈ ಒಂದೆಯೇ ಪ್ರಾರಂಭವಾಗಿದು [illegible] ಭಂಡಿವಾನ [illegible] ಯೆಗಡೆಯವರು ಈ ತನಕ ರೂ [illegible] ಕೊಡಿಸಿಕೊಟ್ಟಿದ್ದಾರೆ ನಿಧಿಗೆ ತಮ್ಮ ಕಾಣಿಕೆಗಳನ್ನು ಸಲ್ಲಿಸಿ ಊರಿನ ವಿದ್ಯಾಭಿಮಾನಿಗಳು ತಮ್ಮ ಶಕ್ತ್ಯನುಸಾರ [illegible] ಕೊಡಲಿ ಕೊಟ್ಟು ನೆರವಾಗಬೇಕೆಂದು ನಿಧಿ ಸಂಗ್ರಹ ಸಮಿತಿಯ ಕಾರ್ಯದರ್ಶಿ [illegible] ಇವರು ವಿನಂತಿಸುತ್ತಾರೆ

(ತಾ ೧೦-೨-೫೦) ಮಂಚಿಕೇರಿಯ ಸೀಧಾ-ಅಂಗಡಿಯವರು ಬಡ ಜನರಿಗೆ ಸರಕಾರ-ನಿರ್ದಿಷ್ಟ ಪ್ರಮಾಣದಿಂದ ಸಕ್ಕರೆಯನ್ನು ಚಿಮಣಿ ಎಣ್ಣೆಯನ್ನೂ ಹಂಚುವದಿಲ್ಲೆಂಬುದೊಂದು ದೂರು ಕೇಳಬರುತ್ತದೆ ಕೆಲವು ಜನರಿಗೆ ಸಕ್ಕರೆಯನ್ನೇ ಕೊಡುವದಿಲ್ಲೆಂಬ ಬೇರೆ ದೂರು ಸಹ ಉಂಟು ಮಂಚಿಕೇರಿಯ ಜನಸಂಖ್ಯೆ [illegible] ಉಂಟು ಆದರೆ ಅಂಗಡಿಯವರು [illegible]

ಪಾಲಕರಲ್ಲಿ ವಿಜ್ಞಾಪನೆ.

ನಮ್ಮ ಶಾಲೆಯು ಮಾರ್ಚ ೧ನೇ ತಾರೀಖಿಗೆ ಪ್ರಾರಂಭವಾಗುತ್ತದೆ ಈ ವರ್ಷದಿಂದ ೬ನೇ ಇಯತ್ತೆಯಿಂದ ೧೧ನೇ ಇಯತ್ತೆ ವರೆಗೆ ಎಲ್ಲ ವರ್ಗಗಳು ೧೧ ಘಂಟೆಗೆ ಪ್ರಾರಂಭವಾಗುವವು ಪ್ರಾಥಮಿಕ ಶಾಲೆಯ ೩ನೇ ಇಯತ್ತೆ ಪಾಸಾದವರಿಗೆ ನಮ್ಮ ಶಾಲೆಯಲ್ಲಿ ೬ನೇ ಇಯತ್ತೆಯಲ್ಲಿ ಸೇರಿಸಿಕೊಳ್ಳಲಾಗುವದು ಈ ವರ್ಗಕ್ಕೆ ಇಂಗ್ಲೀಷ ಕಲಿಸುವ ಏರ್ಪಾಡು ಮಾಡಲಾಗಿದೆ ಹೆಸರು ಹಚ್ಚಿಸಿಕೊಳ್ಳ ಬಯಸುವವರು ಈ ರಜೆಯಲ್ಲಿ ಕೂಡ ಬೆಳಿಗ್ಗೆ ೯ರಿಂದ ೧೧ ಘಂಟೆಯ ವರೆಗೆ ಶಾಲೆಯ ಆಫೀಸಿನಲ್ಲಿ ಬಂದು ಹೆಸರನ್ನು ಹಚ್ಚಿಸಿಕೊಳ್ಳಬಹುದ

ಗಿಬ್ಬ ಹೈಸ್ಕೂಲ,
ಕುಮಟಾ, ೧೭-೨-೧೯೫೦ } ಹೆಡ್‌ಮಾಸ್ತರ

ಜನರಿಗಷ್ಟೇ ಸಕ್ಕರೆ ಕೊಟ್ಟಿರುತ್ತಾರಂತೆ! ಕಳೆದ ೧೫ ಸಕ್ಕರೆ ಕೊಡಲು ಜಿಲ್ಹಾಧಿಪರ ಕಚೇರಿಯಿಂದ ಹುಕುಮು ಹೊರಟಿರುತ್ತದಾಗಿ ಪತ್ರಿಕೆಗಳಲ್ಲಿ ಜಾಹೀರಾಗಿದ್ದರೂ ಅಂಗಡಿಯವರು ಕೆಲಾ ಅರ್ಧ ರತ್ತಲಿನಷ್ಟು ಸಕ್ಕರೆ ಕೊಟ್ಟಿರುತ್ತಾರೆ! ಜಿಮಣಿ ಎಣ್ಣೆಯ ಹಂಚಿಕೆಯು ಮಾನವಮಾನ ನಡೆದಿದೆ! ಯಾರಾದರೂ ದೂರಿದರೆ "ಸರಕಾರದವರು ಎಣ್ಣೆಯ ಪಾಲ (ಕೋಟಾ) ತಗ್ಗಿಸಿಬಿಟ್ಟಿದ್ದಾರೆ ನಾವೇನು ಮಾಡಬೇಕು?" ಎಂದು ಹೇಳುತ್ತಾರಂತೆ ಜಿಲ್ಹಾಧಿಕಾರಿಗಳು ಇದೇನೆಂದು ಚೌಕಶಿ ಮಾಡಿ ಎಲ್ಲ ಜನರಿಗೆ ಸಕ್ಕರೆ, ಎಣ್ಣೆ ಮುಂತಾದ ಸೀಧಾ ಸರಕು ಯಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕಾಗಿ ನಾಗರಿಕರು ಪ್ರಾರ್ಥಿಸುತ್ತಾರೆ

ಹಳಿಯಾಳ— (ತಾ. ೧೭-೨-೫೦)

ಇಂದು ಮಧ್ಯಾಹ್ನದಲ್ಲಿ ದಾಂಡೇಲಿಯ ಕರಗಲ-ನಿರತರು [illegible] ಜನರು ಇರುವ ಗುಡಿಸಲುಗಳಿಗೆ ಅಕಸ್ಮಾತ್ ಬೆಂಕಿ ಬಿದ್ದು ೪ ಗುಡಿಸಲುಗಳು ಬೂದಿಯಾಗಿವೆ ಬೆಂಕಿ ಬಿದ್ದ ದೃಷ್ಟಿಗೆ ಬಿದ್ದ ಕೂಡಲೇ ಗಿರಣಿಯ ಕಾಮಗಾರ [illegible]

(ಮುಂದೆ ೪ನೇ ಪುಟದ ೩ನೇ ಕಾಲಮು ನೋಡಿರಿ)

ಜಾಹೀರ ನೋಟೀಸಿಗೆ ಉತ್ತರ.

ಕುಮಟಾ ತಾಲೂಕ ಅಂತ್ರವಳ್ಳಿಯಲ್ಲಿರುವ ನಂದಿ ನಾರಾಯಣ ಭಟ್ಟ ಇವರು ಶಿವಾನಂದ ಕೋಂ ನರಸಿಂಹ ಭಟ್ಟ, ಸಾ॥ ಅಂತ್ರವಳ್ಳಿ, ಇವರಿಗೆ ತಿಳಿಸುವದೇನಂದರೆ —

ತಾ ೫-೧-೫೦ನೇಯಗೆ ನನಗೂ ನಮ್ಮ ಅಣ್ಣ ನರಸಿಂಹ ನಾರಾಯಣ ಭಟ್ಟ ಇವರಿಗೂ ಆದ ವಾಂಟಣಿ ದಸ್ತು ಇದೆ [illegible] ಗಳಿಂದ ಆಗಿರದೆಂಬ ಸಂಗತಿ [illegible] ಸಾಕ್ಷ್ಯ ಆದೆ ನನಗೆ ವಾಂಟಣಿಯಲ್ಲಿ ಸಿಗಬೇಕಾದ ಪಾಲು ಆಸ್ತಿಗಳನ್ನು ನಾನು ನಿಮ್ಮ ವಶಗಳಿಗೆ ಬಿಟ್ಟಿದ್ದೇನೆ [illegible] ಸ್ವಾಧೀನ ಆಸ್ತಿಯದು [illegible] ಕುಟುಂಬದ ಆಸ್ತಿಯ [illegible] ಸ್ವಾಧೀನದ್ದು ಎಂದು ಎಣಿಸಿದಾಗ್ಯೂ ನಿಮ್ಮ ವಶಗಳು ಮಾಡಿದ ವ್ಯವಹಾರದಿಂದ ಹೀಗೂ ಹುಟ್ಟು ನಿಮ್ಮ ಮಾಗಂದಿರು ಬದರುತ್ತೀರಿ ಅದನ್ನು ಆಕ್ಷೇಪಿಸಲಿಕ್ಕೆ ನಿಮಗೆ ಇಲ್ಲವೆ ನಿಮ್ಮ ಮಕ್ಕಳಿಗೆ ಹಕ್ಕು ಇಲ್ಲ ತಿಳಿಯತಕ್ಕದ್ದು.

ಅಂತ್ರವಳ್ಳಿ, ತಾ ೧೮-೨-೫೦

ನಂದಿ ನಾರಾಯಣ ಭಟ್ಟ, ಅಂತ್ರವಳ್ಳಿ

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಸೂಚನೆ — ನಿರಾಬಿಂದ (ಯು. ಕೆ. ಟಿ, ಡಿ. [illegible] ಗುಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸಿನಿಂದ) [illegible] ಬರುವ ಮೂರನೆಯ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ತಲ್ಲೆ [illegible] ಗಳಿಗೆ ಪ್ರಯಾಣ ಮಾಡಲಾಗುವದು ಎಲ್ಲವೆ ಪುಣೆ, ಬೆಂಗಳೂರ [illegible] ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ: — ಮ್ಯಾನೇಜ್ಮೆಂಟ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg No. B 1270 Monday 27-2-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೩೫

ಕುಮಟಾ - ಸೋಮವಾರ, ತಾ ೨೭—೨—೧೯೫೦

ವರ್ಗಣಿಯ ದರ
[illegible]

ಜಾಹೀರಾತುಗಳ ದರ.
[illegible]

ವಿವಿಧ ವಿಷಯಗಳು.

---*---

[illegible] ಶ್ರೀ॥ ಶರಚ್ಚಂದ್ರ ಬೋಸರು [illegible] ಮಧ್ಯರಾತ್ರಿಯ ಸುಮಾರಿಗೆ [illegible] ತಮ್ಮ [illegible] ಸ್ಥಾನದಲ್ಲಿ ಹೃದಯ [illegible] ಸ್ವರ್ಗಸ್ಥರಾದರೆಂದು [illegible] ಇತ್ತ [illegible] ಬಾಬುಜಿಯವರು ಹೃದಯದ ದೌರ್ಬಲ್ಯ [illegible] ತಮ್ಮ ರಾಜಕೀಯ [illegible] ಅಖಂಡವಾಗಿ ನಡಿಸುತ್ತಿದ್ದರು. [illegible] ರಾತ್ರಿ [illegible] ಸುಮಾರಿಗೆ ಅವರು [illegible] "ನೇಶನ್" ಪತ್ರಿಕೆಗಾಗಿ [illegible] ಪ್ರಕರಣವನ್ನು ಹೇಗೆ [illegible] ಒಂದು ಲೇಖನವನ್ನು [illegible] ಬರೆಯಿಸಿದ್ದರು. ಈ ಲೇಖ [illegible] ಅರ್ಧ ತಾಸಿನೊಳಗೇ ಅವರ [illegible] ಶ್ರೀ॥ ಶರಚ್ಚಂದ್ರರು ಕಲಕತ್ತೆ [illegible] ಕೋರ್ಟಿನಲ್ಲಿ ಅಗ್ರಗಣ್ಯ ವಕೀಲರಾಗಿ [illegible] ೩೦ ವರ್ಷಗಳ ಹಿಂದೆ ಅವರು ರಾಜಕಾರಣ [illegible] ದೇಶಬಂಧು [illegible] ಪಟ್ಟಶಿಷ್ಯರಾಗಿದ್ದರು. [illegible] ಸತ್ಯಾಗ್ರಹ ಸಂಗ್ರಾಮದ [illegible] ಬ್ರಿಟಿಶ ಸರಕಾರವು [illegible] ಶ್ರೀ॥ ಶರಚ್ಚಂದ್ರರು [illegible] ಕೇಂದ್ರ [illegible] ಮಂಡಳದಲ್ಲಿ [illegible] ಪಕ್ಷದ [illegible] ಮೇಲೆ ಅವರು [illegible] ಪ್ರ ಮಂತ್ರಿ ಮಂಡಳದ ಸದಸ್ಯರೂ ಆಗಿದ್ದರು. [illegible] ಇತರ ಶ್ರೇಷ್ಠಿಗಳೊಡನೆ ಮತಭೇದವಾಗಿ [illegible] ಕಾಂಗ್ರೆಸಿನಿಂದ ಹೊರಬಿದ್ದು ಇತ್ತ [illegible] ವರ್ಷಗಳಿಂದ [illegible] ಪ್ರಜಾ [illegible] ಪಕ್ಷವನ್ನು ಕಟ್ಟಲು [illegible] ಅದರೂ ತಮ್ಮ ತಮ್ಮ [illegible] ಶರಚ್ಚಂದ್ರರು ಕಾಂಗ್ರೆಸಿಗಾಗಿ ದೇಶದ [illegible] ಸ್ವಾತಂತ್ರ್ಯಕ್ಕಾಗಿ ಅನುಭವಿಸಿದ ಕಷ್ಟಗಳೂ ಮಾಡಿದ [illegible] ತ್ಯಾಗವೂ ಅವರ ಹೆಸರನ್ನು ರಾಷ್ಟ್ರ [illegible] ಸ್ವಾತಂತ್ರ್ಯದ ಇತಿಹಾಸದಲ್ಲಿ ಚಿರಸ್ಮರಣೀಯವನ್ನಾಗಿ ಮಾಡುವದೆಂಬುದಕ್ಕೆ ಸಂದೇಹವಿಲ್ಲ.

• •

ಈ ಹಿಂದೆ ತಿಳಿಸಿದಂತೆ [illegible] ಲೋಕಸಭೆಯ ಸಾರ್ವತ್ರಿಕ ಚುನಾವಣೆಗಳು [illegible] ಜರುಗಿದವು. ಲೋಕಸಭೆಯೊಳಗಿನ [illegible] ಸ್ಥಾನಗಳಿಗಾಗಿ [illegible] ಹುರಿಯಾಳುಗಳು [illegible] ಸಮಾಜ ಸತ್ತಾವಾದಿ (ಕ್ಯೂರಿ[illegible]) [illegible] ಚರ್ಚಿಲ್ಲರ ಪ್ರಾಣಾ ಮತವಾದಿ ಪಕ್ಷ [illegible] ಮತವಾದಿ ಪಕ್ಷ [illegible] ಕಮ್ಯುನಿಸ್ಟ [illegible] ಪಕ್ಷಗಳ ಪರವಾಗಿ ಅನುಕ್ರಮ [illegible] ಸ್ವತಂತ್ರರೂ [illegible] ಮಂತ್ರಿಯ [illegible] ಮಂತ್ರಿಮಂಡಳದ ಸದಸ್ಯರೆಲ್ಲ [illegible] ಪಕ್ಷದ [illegible] ಮಂದಿ ಸ್ವತಂತ್ರರು ಇದ್ದರು [illegible] ಪ್ರಮಾಣ [illegible] ಕಮ್ಯುನಿಸ್ಟ [illegible] ಮುಂದೆ [illegible] ಸಂಗತಿ ಯೆಂದರೆ — ಹಿಂದಿನ ಲೋಕಸಭೆಯಲ್ಲಿ [illegible] ಸಮಾಜಸತ್ತಾವಾದಿ ಪಕ್ಷವ [illegible] ಲೋಕಮತದ ಬೆಂಬ[illegible] ಕಳೆದುಕೊಂಡು ಕೇವಲ [illegible] ಲೋಕಸಭೆಯ [illegible] ಕಷ್ಟವಾಗುವದರಿಂದ [illegible] ಲೋಕಸಭೆಯ [illegible] ಮಾಡಿಕೊಂಡು [illegible] ಲೋಕಸಭೆಯ ವಿಸರ್ಜನ ಮಾಡಿಸಿ, ಪುನ [illegible] ಚುನಾ[illegible]ವಣೆಗಳನ್ನು ನಡೆಸಬಹುದೆಂದು [illegible] ಬ್ರಿಟನದ [illegible] ಲೋಕಮತವು [illegible] ಪೂರ್ಣ ಅನುಕೂಲವಿಲ್ಲೆಂಬ ಮೊಂದು ಸಂಗತಿ ಮಾತ್ರ ಈ ಚುನಾವಣೆಯಲ್ಲಿ ಸಿದ್ಧವಾಗಿದೆ.

• •

ಮುಂಬಯಿ ಸರಕಾರದ ಮುಂದಿನ ವರ್ಷದ ಅಂದಾಜು ಪತ್ರಿಕೆಯು [illegible] ಎಸೆಂಬ್ಲಿ-ಕೌನ್ಸಿಲುಗಳಲ್ಲಿ ಮಂಡಿಸಲ್ಪಟ್ಟಿದ್ದು ಅದರ [illegible] ಕೋಟಿ [illegible] ಲಕ್ಷ ರೂ [illegible] ಕೋಟಿ [illegible] ಲಕ್ಷ ರೂಪಾಯಿಗಳಷ್ಟು [illegible] ಅರ್ಥ ಮಂತ್ರಿಗಳು ಅಂದಾಜು ಮಾಡಿರುತ್ತಾರೆ. ಇದೇ [illegible] ಪ್ರಾಂತದಲ್ಲಿ ಸಂಪೂರ್ಣ ಮದ್ಯಪ್ರತಿಬಂಧ [illegible] ಉತ್ಪನ್ನವು ಪೂರ್ಣ [illegible] ಮದ್ಯ ನಿರೋಧನದ [illegible] ಬೆಳೆಯುವದು [illegible] ಕರಗಳೇನೂ [illegible] ಸಮಾಧಾನಕರ ಸಂಗತಿ [illegible] ಸರಕಾರದ [illegible] ಪತ್ರಿಕೆ [illegible]

ಪತ್ರಿಕಾ—ಪ್ರಕಟನೆ.

[illegible]

([illegible] ಪ್ರಕಟಿಸಿದ್ದು)

ಬೊಂಬೇ ಸ್ಟೀಮ ನೆವ್ಹಿಗೇಶನ್ ಕಂಪನಿ ಲಿ,

ಮುಂಬಯಿ.

ತಿದ್ದಲ್ಪಟ್ಟ ತಿಕೀಟಿನ ದರಗಳು:—

ಕುಮಟಾ ಬಂದರದಿಂದ—

	ಕೆಳಗಿನ ತರಗತಿ	೧ನೇ ತರಗತಿ (ಕೆಬಿನದಲ್ಲಿ ಮಲಗುವ ವ್ಯವಸ್ಥೆ ಸಹಿತ)
ಮುಂಬಯಿಗೆ	ರೂ ೧೬	ರೂ ೫೮
ಮಾರ್ಮಗೋವೆಗೆ	" ೬	" ೧೫
ಕಾರವಾರಕ್ಕೆ	" ೧—೧೨	" ೫ ೪
ತದಡಿಗೆ	" ೦—೧೪	" ೨—೧೦
ಭಟಕಳಕ್ಕೆ	" ೨—೬	" ೬—೧೨
ಮಲ್ಪೆಗ	" ೫—೪	" ೧೫—೧೨
ಮಂಗಳೂರಿಗೆ	" ೯—೮	" ೨೬—೮

ಕುಮಟಾ ತಾ ೨೬—೨—೫೦ ಕಂಪನಿಯ ಏಜಂಟ, ಕುಮಟಾ.

ಜಿಲ್ಲಾ ಸಮಾಚಾರ.

ಕುಮಟಾ— ಜಿಲ್ಲಾ ಗ್ರಾಮೋದ್ಧಾರ ಮಂಡಳದವರು ಇಲ್ಲಿ [illegible]

[illegible]

ಪ್ರಕಟನೆ.

[illegible]

ಪರಿಶಿಷ್ಟ ೧

ಪರಿಶಿಷ್ಟ ೨.

ಸಂಗ್ರಹದ ಮಾಹಿತಿ ತಿಳಿಸುವ ಪತ್ರಕದ ಮಾದರಿ

[illegible]

M K JADHAV

[illegible]

[illegible]

[illegible]

Maharashtra Apex Bank ltd.,

Head Office —UDIPI S Kanara

[illegible]

M K Jadhav

[illegible]

THE BANK OF RURAL INDIA LTD.

(Incorporated in Indian [illegible] Liability of Members Limited)

HEAD OFFICE — "Satvabhama Bhuvanam" KARWAR. N K

Offices at — KARWAR KUMTA, SIRSI, HONAVAR YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	, Rs	10,00,000
Subscribed Capital	„ Rs	5 00 000
Paid-up Capital & Reserves	„ Rs	5 08 502-8-0

Rates of Interest on Deposits

Current a/c @ 1 % p a *Savings Bank a/c @ 2½ %*

Fixed Deposits for 3 months @ 3% per annum

„ „ for 6 months @ 3½% „

„ „ for 12 months or more @ 4% „

All kinds of modern Banking business transacted

Karwar, 1st Jan 1950

P X GRACIOUS
MANAGING DIRECTOR

ವೈ॥ ವಾ॥ ಪಳಯೀಪುರ ಕೃಷ್ಣರಾಯರು

[illegible]

ನಮ್ಮಲ್ಲಿ

F B 3 ಸಣ್ಣ-ದೊಡ್ಡ ಶಿಕ್ಕದ ಬೂಕುಗಳೂ ಗೇಟ ರಶಿದಿ ಬೂಕುಗಳೂ, ಕೇಶ ಮೆಮೋ ಬೂಕುಗಳೂ ಸ್ಟಾಕ - ಪಿಸ್ಸಿ ರಜಿಸ್ಟರ ಬೂಕುಗಳೂ ಸಿಗುತ್ತವೆ

ಬೇಕು !

[illegible] ಬೇಕು ! [illegible] ಬರೆದು ಕೇಳಿರಿ

-ಬರಾವರ (ಜ ಧಾ ವಂಡ) ತಾ ೨೦ - ೨ - ೫೦	ಶಾ. ದಾ. ಕಾಸರಕೋಡ ಮೆನೇಜರ

ನಮ್ಮಲ್ಲಿ ಕತ್ತ್ರದಿಂದ ತಯಾರಿಸಿದಂಥ ಚಕಾರ್ ಹುರಿ, ಬಾವಿ ಹಗ್ಗ, ಬ್ರಶ ಮೆಟ್ಟು, ಮಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಚಾಂಪಿಯನ್ಸ್, ಕೊಯರ್ ಸೊಸೈಟಿ ಲಿಮಿಟೆಡ್, ಹೊನ್ನಾವರ (ಉ ಕನ್ನಡ)

PUBLIC WORKS DEPARTMENT

Separate Sealed Tenders in Schedule "B" to be issued by this office are invited from the public for each of the following works —

S No	Name of work	Estimated Amount Rs	Earnest Money Rs	Security Deposit Rs
1	Constructing a Rest House for Soldiers at Karwar	23 370/-	234/-	1 16?/-
2	Additions and alterations to the Sub Jail at Karwar	42 854/	429/	2,143/-

2 Application for forms will be entertained upto 10th March 1950 and Schedule "B" will be issued upto 20-3-1950 during office hours The last date for receiving Schedules is upto 4 P M on 30-3-1950

3 Schedule for each work can be obtained on payment of Rs 5 each which will not be refunded Other particulars are given in the regular notice issued separately copy of which can be had free of cost Contract documents can be seen at the office of the Undersigned during working hours

No A-31 CB
Office of the Ex Engineer, Kan D
Karwar 2nd February 1950

G N GODSE
EXECUTIVE ENGINEER KAN DN

[illegible] ಕೃಷ್ಣ ಶಾನಭಾಗ (ಸಂಪಾದಕ) ಇವರು [illegible] ಪ್ರೆಸ್‌ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩|
ಅಂಚೆಯಿಂದ ವರ್ಷಕ್ಕೆ ೪-೧ ೦
" ೬ ತಿಂಗಳಿಗೆ ೨ ೪-೦
ಬಿಡಿ ಸಂಚಿಕೆಗೆ ೦-೧ ೬
ವ್ಹಿ. ಪಿ. ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು
ವರ್ಗಣಿಯ ಹಣವನ್ನು
ಮುಂಗಡ ಕಳ್ಸಿ ಕಳ್ಳದು

Reg. No. B. 1270 Monday, 6-3-1950.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೩೩

ಕುಮಟಾ - ಸೋಮವಾರ, ತಾ ೬--೩ --೧೯೫೦

ಜಾಹೀರಾತುಗಳ ದರ
೧ಇ ಎರ್ಡು ಉದ್ದ ಸ್ತಂಭದ
ಸ್ಥಳ ಸಾಲಿಗೆ ಆ ಆಣೆಯಂತೆ
ಹೆಚ್ಚು ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ಇಲ್ಲವೆ ಪತ್ರದ್ವಾರಾ
ನಿರ್ಧರಿಸಲಾಗುವದು

Civil Courts' Jurisdiction to try suits for possession under the new Tenancy Act NOT BARRED

Mr G S Hukkeri the Joint Civil Judge at Kumta has, on 27—2—1950 delivered judgment in Orig Suit No 279 of 1949 (Manjanath Damu vs Pursayya Devappa) which is a suit filed by the landlord against his tenant for possession of the lease-hold on the ground that it is required for bona fide personal cultivation after due termination of the tenancy. The defendant had hotly contested that only the Mamlatdars can try such suits under the new Bombay Tenancy & Agricultural Lands Act of 1948 and that the Civil Courts jurisdiction is barred both expressly and impliedly by the provisions of Sections 29 (2) and 85 of the Act Mr Hukkeri has held in his judgment that Mamlatdar may, also accept and try such suits if the parties go to him for adjudication of their dispute and that the general jurisdiction of the Civil Courts is barred only if the Mamlatdar has decided the dispute one way or the other The relevant portion of Mr Hukkeris' judgment is reproduced below for the benefit of those who are interested in tenancy matters

The issue No 2 in the case referred to the jurisdiction of the Court to try the suit Discussing that issue the judge says—

"Issue No 2 Notice given by the Plff with a view to terminate the deft s tenancy is produced at Ex 13 It is dated 27-3-1948 Under Sec 7(1) of B T Act of 1939, a landlord, if he wanted bona fide his land for personal cultivation he was required to give one years notice, terminating the tenancy for the above said purpose Accordingly in the present case, Plff gave the notice Ex 13 One year would be complete on 31 3-1949 That is why the Plff has stated in para 2 of his plaint that the cause of action for possession arose on 1-4 1949 But in the meantime the B T Act of 1939 was repealed and the Bom Tenancy and Agricultural Lands Act of 1948 came into force in its place, on 28—12—1948 Now the contention raised by the pleader for the Deft is that in the present case the cause of action arose after the coming into force of the B T Act of 1948 and therefore the procedure provided in this new Act for taking possession of land on the ground of personal cultivation must be followed As against this the pleader for the Plff argues that the Deft s tenancy was terminated immediately after the Deft received the notice on 29—3 1948 and that by reason of this fact Plff became entitled to take possession of the suit land on 29-3 1948 itself So he wanted to suggest that since the right to take possession accrued to the Plff prior to the coming into force of the B T & A L Act of 1948 the procedure provided in the B T Act of 1939 for taking possession must be followed Under Sec 7(1) of B T Act of 1939 a landlord, in order that he should be entitled to recover possession, was required to fulfil two conditions First he ought to give a notice in writing with a view to terminate tenancy, stating therein that he bona fide requires his land for personal cultivation The second condition is that the period of notice must be one year If both these conditions are fulfilled, then the landlord will have a cause of action for possession Termination of tenancy by itself does not create any right in a landlord, unless and until it is coupled with the fact mentioned in the above said second condition Therefore, I do not think that there is any substance in the Plff s pleader s argument that the right to recover possession accrued before the coming into force of the B T Act of 1948 It accrued for the first time, on 1 4 1949 Therefore the procedure provided in the B T & A L Act of 1948 for the purpose of taking possession on the ground of bona fide personal cultivation must be followed in such cases

Then the next question would be what is the procedure prescribed in respect of such matters in the new Act? In this connection, the Deft s pleader referred to Sec 29 (2) and Sec 85 of the B T & A L Act of 1948 Sec 29 (2) reads as follows No landlord shall obtain possession of any land or dwelling house held by a tenant except under an order of the Mamlatdar " In view of this provision it is argued that remedy for obtaining possession under this Act is by way of an application to the Mamlatdar Sec 85 bars the jurisdiction of Civil Courts in respect of matters that are to be "settled decided, or dealt with" by the Mamlatdar So it is suggested by Deft's Pleader that the Civil Court has no jurisdiction to deal with the question of possession, as the Mamlatdar is empowered to do the same under Sec 29(2) As against this interpretation, Plff s pleader avers that under Sec 29(2) of B T and A L Act of 1948, Mamlatdar has no power to go into the question as to whether landlord is entitled to recover possession of his land What the Mamlatdar is to do under Sec 29(2) is that he should take action to put the landlord in actual possession of his land In support of this interpretation Plff s pleader has relied on the provisions in Sec 29(1) and in Sec 70(n) of the B. T & A L Act, of 1948 The duties and functions of the Mamlatdar under this Act are specifically defined by the Legislature in Sec 70 of the Act. All the matters that are required either to be determined or decided by the Mamlatdar are clearly enumerated in sub sections (a) to (m) of Section 70. The function of deciding the right of the landlord to take possession of his land is not at all included in Sec 70 Similarly the function of deciding the questions to whether a landlord bona fide requires the land for personal cultivation is not included in Sec 70 Now we come to Sec 70 (n) It empowers the Mamlatdar "to take measures for putting the tenant or

landlord into possession of land or dwelling house According to the suggestion of Plft 's pleader, this sub-section and Sec 29(2), must be read together The words decide or determine are not to be found in Sec 70(n) The words "to take measures for putting landlord into the possession clearly connote some function of an executive nature Otherwise there was no point in changing the language of Sec 70( ) from that of the previous sub sections As the functions and duties to be performed by the Mamlatdar for the purposes of this Act are fully and exhaustively defined in Sec 70 the other sections in the Act, such as Sec 29 (2) must be construed subject to or in harmony with the provisions of this Sec 70 It is a well-accepted principle of construction that a provision of law should receive a strict interpretation when it is sought by it to oust the ordinary jurisdiction of the Civil Court So the function of the Mamlatdar under Sec 29 (2), when this sub-Sec is so interpreted, would be to take action to put the landlord in possession of the land, whose right to take such possession has been recognised and declared by some competent authority

Next we come to the omnibus sub-section (O) of Sec 70 This sub-section does not refer to any subject specifically The wording is as follows " to decide such other matters as may be referred to him by or under this Act " The wording is so vague as to include any matter that may be referred to the Mamlatdar But I think the words " as may be referred to him " are important in this sub section In view of this wording, it appears that the choice of referring any matter, that is not covered by the previous sub-sections, either to the Mamlatdar or to some other authority is left to the landlord or tenant as the case may be There is no compulsion that such other matters must be referred to the Mamlatdar and Mamlatdar alone If the landlord chooses to refer such matter to any authority other than the Mamlatdar then I think that that authority will be perfectly competent to hear and decide that matter and Sec 85 will not apply in such cases The prohibition contained in Sec 85 will apply only when a particular matter is " required to be settled decided or dealt with by the Mamlatdar ' Now a matter can be said to be required to be " settled decided or dealt with by the Mamlatdar under sub section (o) of Sec 70 only when such matter is referred to the Mamlatdar by the landlord or the tenant If the matter is referred to the Mamlatdar then I think Mamlatdar alone will have the power to decide such matter and the jurisdiction of the Civil Court will be barred under Sec 85 So it all depends upon the landlord or tenant as the case may be to refer the matter in dispute to the forum of his choice Once they select a particular forum then the decision given by that authority will be final In the present case as the action arose, as stated above after the coming into force of the B T and A L Act of 1948 Hence the provisions of this Act are applicable to this case The landlord in this case has chosen to refer this matter to the Civil Court and hence this court is quite competent to hear and decide this case But this Court will have no jurisdiction to put the landlord into actual possession of the land since the Mamlatdar is required to do this function under Sec 29 (2) read with Sec 70 (n) of the B T and A L Act of 1948

For all the reasons stated above I decide that this Court has got jurisdiction to hear and decide this case

ಹೊಸ ಟೆನನ್ಸಿ ಕಾಯಿದೆಯಂತೆ ಸಹ ಹೊಲಗಳ ಕಬಜೆ ಕೊಡಿಸಲು ದಿವಾಣಿ ಕೋರ್ಟುಗಳಿಗೆ ಅಧಿಕಾರವಿದೆ

(ಮೇಲಿನ ಇಂಗ್ಲಿಶ ತೀರ್ಪಿನ ಸಾರ)

ಕುಮಟೆಯ ದಿವಾಣಿ ನ್ಯಾಯಾಲಯದ ಜತೆ-ನ್ಯಾಯಾಧೀಶರಾಗಿರುವ ರಾ|| ಹ ಶ್ರೀಕರ ಇವರು ಮೂಲ ದಾವೆ ನಂ ೩೭೯/೪೯ರಲ್ಲಿ ಕಳೆದ ಸೋಮವಾರ ದಿನ ತೀರ್ಪು ಕೊಟ್ಟು ಹೊಸ ಟೆನನ್ಸಿ ಕಾಯಿದೆಯಂತೆ ಕೂಡ ಒಡೆಯರಿಗೆ ಹೊಲಗಳ ಕಬಜೆ ಕೊಡಿಸಲು ದಿವಾಣಿ ನ್ಯಾಯಸ್ಥಾನಗಳಿಗೆ ಅಧಿಕಾರವುಂಟೆಂದು ತೀರ್ಮಾನಿಸಿರುತ್ತಾರೆ ಈ ದಾವೆಯಲ್ಲಿ ವಾದಿ-ಒಡೆಯನು ಸ್ವಂತ ಸಾಗುವಳಿಗಾಗಿ ಹೊಲದ ಕಬಜೆ ಬೇಡಿ ೧೯೪೮ ಮಾರ್ಚದಲ್ಲಿ ನೋಟೀಸು ಕೊಟ್ಟಿರುತ್ತಿದ್ದಾಗ್ಯೂ ನೋಟೀಸಿನ ಅವಧಿಯು ತಾ ೧೪-೪-೪೯ಕ್ಕೆ ಮುಗಿದು ಅಂದು ದಾವೆಗೆ ಕಾರಣವಾಗಿತ್ತಾದ್ದರಿಂದ, ವಾದಿಯ ದಾವೆಯು ಕಾರಣ ಪ್ರಾರಂಭವಾದ ಮೇಲೆ ಅಮಲಿನಲ್ಲಿ ಬಂದ ಹೊಸ ಟೆನನ್ಸಿ ಕಾಯಿದೆಯೊಳಗಿನ ವಿಧಾನವು ಈ ದಾವೆಗೆ ಅನ್ವಯಿಸತಕ್ಕದ್ದೆಂದು ರಾ|| ಹುಕ್ಕೇರಿಕರರು ನಿರ್ಣಯಿಸಿ, ಮುಂದೆ ಹೊಸ ಕಾನೂನಿನಂತೆ ದಿವಾಣಿ ಕೋರ್ಟುಗಳ ಅಧಿಕಾರ ಎಷ್ಟು ನಿಯಂತ್ರಿಸಲ್ಪಟ್ಟಿದೆಂಬುದರ ಚರ್ಚೆ ಮಾಡಿದ್ದಾರೆ ಈ ಚರ್ಚೆಯಲ್ಲಿ ಹೊಸ ಟೆನನ್ಸಿ ಕಾಯಿದೆಯ ೨೯ (೨) ೭೦ ಮತ್ತು ೮೫ನೇ ಕಲಮುಗಳು ಪ್ರಧಾನವಾದವುಗಳು ಮಾಮಲೇದಾರ ಪ್ರಭೃತಿ ಟೆನನ್ಸಿ ಅಧಿಕಾರಿಗಳು ಈ ಕಾಯಿದೆಯಂತೆ ನಿರ್ಣಯಿಸಬೇಕಾದ, ತೀರ್ಮಾನಿಸಬೇಕಾದ ಇಲ್ಲವೆ ನಿಕಾಲೆಯಲ್ಲಿ ತರಬೇಕಾದ ವಿಷಯಗಳ ನಿರ್ಣಯ, ತೀರ್ಮಾನ ಯಾ ನಿಕಾಲೆ (decide, determine or deal) ಮಾಡಲು ೮೫ನೇ ಕಲಮು ಪ್ರತಿಬಂಧ ಹಾಕಿದೆಂಬುದು ನಿಜ ಆದರೆ ಒಡೆಯರು ಕಬಜೆ ಪಡೆಯಲು ಹಕ್ಕುದಾರರೋ ಹೇಗೆಂಬುದನ್ನು ನಿರ್ಣಯಿಸುವ ಯಾ ತೀರ್ಮಾನಿಸುವ ಅಧಿಕಾರ ಮಾಮಲೇದಾರರಿಗೆ ಉಂಟೋ ಹೇಗೆಂಬುದನ್ನು ನೋಡಬೇಕು ಒಡೆಯರಿಗೆ ಕಬಜೆ ಕೊಡಿಸುವ ಅಧಿಕಾರ ಮಾಮಲೇದಾರರಿಗೆ ಕಲಮು ೨೯(೨)ರಲ್ಲಿ ಮತ್ತು ಕಲಮು ೭೦ (ನ) ಇವುಗಳಲ್ಲಿ ಕೊಡಲಾಗಿದೆ ಕಲಮು ೭೦ರಲ್ಲಿ ಮಾಮಲೇದಾರರ ಕರ್ತವ್ಯಗಳೂ ಅಧಿಕಾರಗಳೂ ನಿರ್ದೇಶಿಸಲ್ಪಟ್ಟಿವೆ ಆದರೆ ಆ ಕಲಮಿನ (ಅ) ದಿಂದ (ಮ) ವರೆಗಿನ ಉಪಕಲಮುಗಳಲ್ಲಿ ಉಪಯೋಗಿಸಿದ ಭಾಷೆಯನ್ನು ಕಾನೂನಕರ್ತರು ಒಮ್ಮೆಲೆ ಬದಲಿಸಿ (ನ) ಉಪಕಲಮಿನಲ್ಲಿ " ಕಬಜೆ ಕೊಡಿಸುವ ವ್ಯವಸ್ಥೆ ಮಾಡುವದು " (to take measures to give possession) ಎಂಬ ಹೊಸ ಶಬ್ದಗಳನ್ನು ಉಪಯೋಗಿಸಿದ್ದಾರೆ, ಆದ್ದರಿಂದ ಒಡೆಯರಿಗೆ ಹೊಲಗಳ ಕಬಜೆ ಕೊಡಿಸಬರುತ್ತದೋ ಹೇಗೆಂಬುದರ ತೀರ್ಮಾನ ಯಾ ನಿರ್ಣಯ ಮಾಡುವ ಕರ್ತವ್ಯ ಮಾಮಲೇದಾರರ ಅವಶ್ಯ-ಕರ್ತವ್ಯಗಳಲ್ಲಿ ಬರುವದಿಲ್ಲ ಕಲಮು ೨೯ (೨) ಪ್ರತ್ಯಕ್ಷ ಕಬಜೆ ಕೊಡಿಸುವದಕ್ಕಷ್ಟೇ ಸಂಬಂಧಿಸಿದೆ ಕಬಜೆ ಪಡೆಯಲು ಪಾತ್ರತೆಯುಂಟೋ ಹೇಗೆಂಬುದರ ನಿರ್ಣಯ ಮಾಡುವದಕ್ಕೆ ಅದರ ಸಂಬಂಧವಿಲ್ಲ ಆದ್ದರಿಂದ ಒಡೆಯರಿಗೆ ಕಬಜೆ ಕೊಡಿಸಬಹುದೋ ಹೇಗೆಂಬುದನ್ನು ನಿರ್ಣಯಿಸುವದು ಮಾಮಲೇದಾರರ ಅವಶ್ಯ ಕರ್ತವ್ಯಗಳಲ್ಲಿ ಬರುವದಿಲ್ಲ ಆದರೆ ಕಲಮು ೭೦ (ಓ) ಉಪಕಲಮು ಸರ್ವಗ್ರಾಹಿಯಾಗಿದೆ ಅದನ್ನು ಪಕ್ಷಗಾರರು ತಮ್ಮ ಕಡೆ ತರಬಹುದಾದ ವಿವಾದಗಳನ್ನು ತೀರ್ಮಾನಿಸಲು ಮಾಮಲೇದಾರರಿಗೆ ಶಕ್ಯವುಂಟು ಹಾಗೆ ಪಕ್ಷಗಾರರು ಸ್ವಖುಷಿಯಿಂದ ತಮ್ಮ ಕಡೆಗೆ ತರಬಹುದಾದ ವಿವಾದಗಳನ್ನು ಮಾಮಲೇದಾರರು ನಿರ್ಣಯಿಸಬೇಕಾಗುತ್ತದೆ ಆದರೆ ಪಕ್ಷಗಾರರು ಒಮ್ಮೆ ಮಾಮಲೇದಾರರ ಮುಂದಿಟ್ಟು ನಿರ್ಣಯಿಸಿಕೊಂಡ ಪ್ರಕರಣಗಳ ವಿಚಾರ ಮಾಡಲು ಮಾತ್ರ ದಿವಾಣಿ ನ್ಯಾಯಸ್ಥಾನಗಳಿಗೆ ಪ್ರತಿಬಂಧವಾಗಬಹುದು. ಹೊರತು ಮಾಮಲೇದಾರರ ಕಡೆಗೆ ಹೋಗದ ಕಬಜೆಯ ಪ್ರಕರಣಗಳ ವಿಚಾರಿಸಿ ನಿರ್ಣಯಿಸಲು ದಿವಾಣಿ ನ್ಯಾಯಸ್ಥಾನಗಳಿಗೆ ಏನೂ ಪ್ರತಿಬಂಧವಿಲ್ಲ, ಎಂದು ರಾ|| ಹುಕ್ಕೇರಿಕರರು ವಿವರಿಸಿ ತಮ್ಮ ತೀರ್ಪು ಕೊಟ್ಟಿರುತ್ತಾರೆ

ಸಮಾಪ್ತಿ

E B 3 ಸಣ್ಣ-ದೊಡ್ಡ ಲೆಕ್ಕದ ಬೂಕುಗಳೂ, ರಸೀದಿ ಬೂಕುಗಳೂ, ಕಾರ್ಡ ಮೆಮೋ ಬೂಕುಗಳೂ ಸ್ಟಾಕ್ - ವಿಕ್ರಿ ರಜಿಸ್ಟರ ಬೂಕುಗಳೂ ಸಿಗುತ್ತವೆ

ಸ್ಟಾರ ಆಫ ಕೆನರಾ ಪ್ರೆಸ್, ಕುಮಟಾ

ವಿವಿಧ ವಿಷಯಗಳು

[illegible]

•••

[illegible]

•••

[illegible]

•••

[illegible]

NOTIFICATION

Applications are invited for enlistment as candidates for temporary posts of clerks in the Judicial Department of the Kanara District. Minimum qualification required is Matriculation or other equivalent examination and a sound knowledge of typewriting. Knowledge of Kannada is essential. Candidates knowing short-hand will be given preference. Candidates after their enlistment will have to serve as Section writers till they are absorbed in clerical vacancies in their turn. **Applications in candidates own handwriting** with copies of certificates regarding qualification and good moral character should reach the undersigned on or before the 15th March 1950. Only those who are below the age of 22 in the case of Advanced Class and 25 in the case of Intermediate and Backward Classes need apply.

District Court of Kanara

Karwar, 2nd March 1950

N S Shrikhande

District Judge, Kanara

ಸಿದ್ದಾಪುರ—

ಮಂಕಿ—

ಗೋಕರ್ಣ—

ಕುಮಟಾ—

ಭಟಕಳ—

ಬೈಲೂರ—

ಜಾಹೀರ ನೋಟೀಸು.

ಅಬ್ದುಲ್ಲಖಾನ ವ|| ಇಸೂಪಖಾನ

ಬೇಕು!

ಅಳ್ನಾವರ ವಿ ಶನ್ ಪ್ರಾಥಮಿಕ ಶಾಲೆಗೆ ಕನ್ನಡ ಟ್ರೇಂಡ ಶಿಕ್ಷಕ ಬೇಕು! ಪೆನ್ಶನರಿಗೆ ವಿಶೇಷ ಪ್ರಾಶಸ್ತ್ಯ. ಪಗಾರ ಮೊದಲಾದವುಗಳ ಬಗ್ಗೆ ಬರೆದು ಕೇಳಿರಿ

ಅಳ್ನಾವರ (ಜಿ. ಧಾರವಾಡ) ತಾ ೨೦—೨—೫೦ } ಫಾದರ ಕಾರ್ನೆರೋ ಮೆನೇಜರ

Maharashtra Apex Bank Ltd.

Head Office —UDIPI S Kanara

ಈ ಬೇಂಕಿನ ... ಶೇರುಗಳು ಮಾರಾಟಕ್ಕಿವೆ. ಕೊಳ್ಳಲಿಚ್ಛಿಸುವವರು ಈ ಕೆಳಗಿನವರ ಕಡೆ ಪತ್ರ ಬರೆದು ತಿಳಕೊಳ್ಳಬಹುದು

ಪ್ರಿ ... ಎಲ್ ಕಾಮತ,

ಪೋ ಬಿಣಗಾ (ಕಾರವಾರ)

ನಮ್ಮಲ್ಲಿ ಕಸ್ತದಿಂದ ತಯಾರಿಸಿದಂಥ ಚಕರ್ಾ ಹುರಿ, ಬಾವಿ ಹಗ್ಗ, ಬ್ರಶ್ ಮೆಟ್, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ.

ಚೆಅರಮನ್, ಕೊಯರ್ ಸೊಸೈಟಿ ಲಿಮಿಟೆಡ್ ಹೊನ್ನಾವರ (ಉ ಕನ್ನಡ)

ಕಾಟಾ ಕಲ್ಲುಗಳು

ಡೀಝೆಲ್ ಮಶಿನುಗಳಿಗೆ ಮತ್ತು ವ್ಯಾಪಾರಸ್ಥರಿಗೆ ಬೇಕಾಗುವ ತೂಕ-ಅಳತೆಗಳನ್ನು ಪೂರೈಸುತ್ತೇವೆ.

ಬಂಗಾಲೀ ಕಲ್ಲಿನ ಸೆಟ್ಟುಗಳು ಸಿಗುತ್ತವೆ.

ಹೆಗಡೆ ಬಂಧುಗಳು, ನೆಲ್ಲೀಕೇರಿ, ಕುಮಟಾ

ಜಿಲ್ಲಾ ಸಮಾಚಾರ.

ಕಾರವಾರ—

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ! ವೇಳೆ!! ಸೌಕರ್ಯ!!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — ... ನಮ್ಮಲ್ಲಿ ಬರುವ ಯಾವತ್ತು ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ... ಪ್ರಯಾಣಿಕರಿಗೆ ತಕ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ:— ಮ್ಹಾಳಪ್ಪಾ ಪೈ.

...ಲಾವದರಿಂದ ಸಂದರ್ಶಕರನ್ನು ಭಕ್ತಿಯಿಂದ ಪದಗಗಳಿಗೂ, ಹವಗಗಳಿಂದ ಭಕ್ತಿಗೂ [illegible] ಕೆಲಸವನ್ನು ಅವು ಮಾಡಲು ವು ಸಂದರ್ಶಕರು ದೊರೆಯು ಇಲ್ಲವೆ ಪಬಾವಿನ ವ್ಯವಸ್ಥೆಯನ್ನು [illegible] ಮಾಡತಕ್ಕೊಳ್ಳಬೇಕಾಗ ವೆಂದು ಎಂದು ಸದರಿ ವಿನಾಶಿರಾ ದಳದ ಅಧಿಕಾರಿಗಳ ತಿಳಿಸಿರುತ್ತಾರೆ

ಅಂಕೋಲಾ— ೮॥ ಸ್ವ ಸಂಘದ ಕರ್ನಾಟಕ ಪ್ರಾಂತೀಯ ಪ್ರಸಿದ್ಧಿ ಮಂಡಳಕ್ಕೆ ಈ ಜಿಲ್ಲೆಯ ಪರವಾಗಿ ರಾ॥ ಗಜಾನನ ಕೃಷ್ಣ ನಾಯಕ ಭಟಕಳ, ಕೃಷ್ಣ ವೆಂಕಟರಮಣ ಭಟಕಳ ಶಿರ್ಸಿ ಮತ್ತು ರಮಾನಾಥ ನಾಗವೇಕರ ಅಂಕೋಲಾ ಇವರು ಆರಿಸಲ್ಪಟ್ಟಿದ್ದಾರೆ

ಈ ಜಿಲ್ಲೆಯ ಪ್ರೈಸ್ಸನೇಟರ್ ಸಂಘದ [illegible] ಅಧಿವೇಶನವು ಇದೇ ಬರುವ ತಾ ೧೫ನೇ ಬುಧವಾರ ಸಂಜೆ ೪ಕ್ಕೆ ಇಲ್ಲಿಯ ಶೀಕಲ್ಸ ಹಾಯಸ್ಕೂಲಿನಲ್ಲಿ ಮುರುಗೋಡದ ಆರೋಗ್ಯಾಧಿಕಾರಿ ರಾ ವ್ಹಿ ಪಿ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ಕೂಡ ವದು ಯಲ್ಲಾಪುರದಲ್ಲಿ ವೈಸ್ಸನೇಟರ ಆಗಿರುವ ರಾ॥ ವಿ ವ್ಹಿ ನಾಯ್ಕರು ಸ್ವಾಗತಾಧ್ಯಕ್ಷರಾಗುತ್ತಾರೆ ಅಧಿವೇಶನದ ವಿಷಯ ಚರ್ಚಿಸಬಿ ತಿಯ ಸಭೆ ಮುಂಗಳವಾರ ಕೂಡಲಿರುವದರಿಂದ ಸದಸ್ಯರು ಸೋಮವಾರ ತಾ ೧೩ಕ್ಕೇ ಅಂಕೋಲೆಗೆ ಬಂದು ತಲ್ಪಬೇಕೆಂದು ಅಧ್ಯಕ್ಷರು ಸೂಚಿಸುತ್ತಾರೆ

ಕುಮಟೆಯೊಳಗಿನ ಒಕ್ಕಲತನದ ಪ್ರದರ್ಶನವನ್ನೂ ಪ್ರದರ್ಶನದ ಕಾಲಕ್ಕೆ ನಡೆಯಲಿರುವ ಬೋಧಪ್ರದ ಕಾರ್ಯಕ್ರಮಗಳನ್ನೂ ನೋಡಲು ಅನುಕೂಲವಾಗುವಂತೆ ಜಿಲ್ಲೆಯೊಳಗಿನ ಗ್ರಾಮ ಚಿಕಿತ್ಸಾಲಯಗಳ ಕಾರ್ಯಕರ್ತರಿಗೆ ಸಿವ್ಹಿಲ್ ಸರ್ಜನರು ಒಂದು ವಾರದ ಬಿಡುವು ಕೊಡಬೇಕಾಗಿ ಅಗಸ್ಸೂರ ಗ್ರಾಮ ಚಿಕಿತ್ಸಾಲಯದವರ ಸೂಚನೆಯುಂಟು

ಕಳೆದ ಜನವರಿ ತಿಂಗಳಿನಿಂದ ರೀಮಾನಗಳಿಯಲ್ಲೂ ಸರಕಾರದವರು ಒಂದು ಭತ್ತದ ಉಗ್ರಾಣ ತೆರೆದು ಆ ಕಡೆಯ ಭತ್ತ ಅಲ್ಲೇ ತಕ್ಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ ಆದರೆ ಭತ್ತ ಕೊಟ್ಟವರು ತಮ್ಮ ಹಣಕ್ಕಾಗಿ ಇಲ್ಲಿ ಅಂಕೋಲೆಗೇ ಬರಬೇಕಂತೆ! ೧-೨ ಚೀಲ ಭತ್ತ ಕೊಟ್ಟವರು ಸಹ ಕೈಯಿಂದ ಖರ್ಚು ಮಾಡಿ ಹಣ ಒಯ್ಯಲು ಇಲ್ಲಿಗೆ ಬರಬೇಕೆಂದು ಹೇಳುವದು ಜಾಣತನವಲ್ಲ ಅವರ ಹಣವನ್ನು ರೀಮಾನಗುಳಿಯಲ್ಲೇ ಕೊಡುವ ವ್ಯವಸ್ಥೆ ಮಾಡಬಾರದೇ ?

ಶಿರ್ಶಿ— (ತಾ. ೨೪-೨-೫೦) ಇಲ್ಲಿಯ ರೇಂಜ ಕಚೇರಿಯೊಳಗಿನ ಮುಖ್ಯ ಕಾರಕೂನ ರಾ॥ ಪಂಡೇಯ ವರು ನಿನ್ನೆ ಒಬ್ಬರಿಂದ ಲಂಚ ಪಡೆಯುತ್ತಿರುವಾಗ ಲಂಚನಿರ್ಮೂಲನ ಇಲಾಖೆಯ ಇನ್ಸಪೆಕ್ಟರ ರಾ॥ ಕಾಮತರು ರಾ॥ ಪಾಂಡೇಯವರನ್ನು ಹಿಡಿದು ಪಂಚನಾಮೆ ಮಾಡಿದ್ದಾರೆ

ಇಲ್ಲಿಯ ಮಾಂಸದ ಪೇಟೆಯವರು ತಮ್ಮ ಕುರಿಗಳನ್ನು ಊರ ಹೊರಗೆ ಎಲ್ಲಾದರೂ ಕಡಿಯದೆ ಪೇಟೆಯ ಸಮೀಪದಲ್ಲಿ ರಸ್ತೆಯ ಮಗ್ಗುಲಿಗೇ ಕಡಿಯುತ್ತಾರೆ! ಮತ್ತು ರಕ್ತವನ್ನೂ ಕುರಿಗಳ ಹೊಟ್ಟೆಯೊಳಗಿನ ಅರಕ್ಕ ಆಹಾರವನ್ನೂ ಅಲ್ಲೇ ಒಗೆಯುತ್ತಾರೆ! ಅದರಿಂದ ಆ ದಾರಿಯ ಹಸೆ ಅಸಹ್ಯವಾಗಿ ನೆರೆಹೊರೆಯಲ್ಲಿರುವ ಜನರನ್ನು ಗಾಸಿಗೊಳಿಸುತ್ತಿದೆ ಮಾಂಸ ಮಾರಾಟಗಾರರ ಈ ಕ್ರಮವನ್ನು ನಿಲ್ಲಿಸಬೇಕಾಗಿ ಆ ಭಾಗದ ಜನರು ೪ ತಿಂಗಳ ಹಿಂದೆ ಮ್ಯುನಿಸಿಪಾಲಿಟಿಗೆ ಒಂದು ಮನವಿ ಮಾಡಿದರು ಆದರೆ ಮ್ಯುನಿಸಿಪಾಲಿಟಿಯವರು ಇನ್ನೂ ಯಾವದೇ ಕ್ರಮ ಕೈಕೊಂಡಿಲ್ಲ! ನಗರ ಪಿತರು ಇನ್ನಾದರೂ ಎಚ್ಚತ್ತು ತಕ್ಕ ಕ್ರಮ ಕೈಕೊಳ್ಳುವರೇ ?

ಇತ್ತ ಕೆಲ [illegible] ಹಳ್ಳಿಗಳಿಂದ ಇಲ್ಲಿಯ ಪೇಟೆಗೆ [illegible] ಅದಿಕ [illegible] ಚೀಲಗಳಿಗಿಂತ ಬಹಳಷ್ಟು ಅಧಿಕ ಕಳವಾಗುತ್ತಿವೆ ಅದು ಎಲ್ಲಿ ಹೋಗುತ್ತಿದೆಂಬು ದರ ಪತ್ತೆ ಹತ್ತುತ್ತಿದ್ದಿಲ್ಲ ಪೋಲೀಸರು ಮೊನ್ನೆ ಅದರ ಪತ್ತೆ ಹಚ್ಚಿ ೧೦ ೧೫ ಚೀಲ ಅಡಿಕೆ ಸಹಿತ ಇಬ್ಬರನ್ನು [illegible] ಸಂಶಯವಾಗಿ [illegible] ನಡಿಸಿದಲ್ಲಿ ಇನ್ನೂ ಕೆಲವು ಕಳ್ಳರು ಸಿಗಬಹುದೆಂದು ಊರವರು ಮಾತಾಡುತ್ತಾರೆ

ಸರಕಾರಿ ಧಾನ್ಯವನ್ನು ಸಾಗಿಸಿಕೊಡುವ ಮೋಟಾರ ಬಂಡಿಗಳಿಗೆ ಜಿಲ್ಹಾಧಿಕಾರು ಪೆಟ್ರೋಲ ಕೊಡಿಸುವದಿಲ್ಲ, ಶಿರ್ಸಿ ಮ್ಯುನಿಸಿಪಲ್ ಚುನಾವಣೆಗೆ ನಿಂತ ಹುರಿಯಾಳುಗಳಿಗೆ ಮಾತ್ರ ಬಹಳಷ್ಟು ಪೆಟ್ರೋಲ ಕೊಟ್ಟಿದ್ದಾರೆ ಎಂದು ಮುಂತಾಗಿ ತಾ ೨೬—೧೨—೪೯ರ 'ವೃತ್ತ'ದಲ್ಲಿ ಬಂದ ಟೀಕೆಗೆ ಜಿಲ್ಹಾಧಿಕಾರು ಉತ್ತರ ಕಳಿಸಿದ್ದಾರೇನೆಂದರೆ — ನಾವು ಧಾನ್ಯ ಸಾಗಿಸುವ ಗುತ್ತಿಗೆ ಕೊಡುವಾಗ, ಪ್ರಾಂತಿಕ ಮೋಟಾರ-ಸಾಗಾಟ ನಿಯಂತ್ರಣ ಫಂಡಿಗಳಿಂದ ಇಲ್ಲವೆ ಪ್ರಾದೇಶಿಕ ಸೀಘಾಧಿಕಾರಿಗಳಿಂದ ಬರುವ ಆಜ್ಞಾಪತ್ರದಂತೆಯೇ ಪೆಟ್ರೋಲ ಕೂಪನುಗಳನ್ನು ಕೊಡುವೆವೆ ಮತ್ತು ಇತ್ತೀಚೆ [illegible] ಗೆಸ್ಟ-ಪ್ಲೆಂಟ ಇದ್ದ ಮೋಟಾರ ಬಂಡಿಗಳಿಗೆ ಪೆಟ್ರೋಲ ಕೊಡಕೂಡದೆಂದು ಈಗ ಆ ಅಧಿಕಾರಿಗಳು ನಮಗೆ ಸೂಚನೆ ಕೊಟ್ಟಿರುತ್ತಾರೆ ಅದರಿಂದ ನಾವು ಗೆಸ್-ಪ್ಲೆಂಟ ಗಾಡಿಗಳಿಗೆ ಪೆಟ್ರೋಲ ಕೊಡಿಸುವದನ್ನು ನಿಲ್ಲಿಸಬೇಕಾಗಿದೆ ಈ ನಿಯಮಕ್ಕೆ ಅಪವಾದಭೂತವಿದ್ದ ಗಾಡಿಗಳಿಗೆ ನಾವು ಪೆಟ್ರೋಲ ಕೊಡುತ್ತೇವೆ. ಶಿರ್ಸಿಯ ಮ್ಯುನಿಸಿಪಲ ಚುನಾವಣೆಗೆ ನಿಂತ ಯಾವ ಹುರಿಯಾಳರಿಗೂ ನಮ್ಮ ಕಚೇರಿಯಿಂದ ಪೆಟ್ರೋಲ ಕೊಡಿಸಿದ್ದು ಇರುವದಿಲ್ಲ ಈ ಚಳವಳಿಗೆ ನಾವು ನೂರಾರು ಗ್ಯಾಲನ ಪೆಟ್ರೋಲ ಕೊಡಿಸಿದ್ದವೆಂದು "ವೃತ್ತ" ದಲ್ಲಿ ಪ್ರಕಟವಾದ ವರದಿ ನಿರಾಧಾರ ವಿರುದ್ಧವಾಗಿವೆ ಇತ್ಯಾದಿ

ಮುಂಬಯಿ ಸರಕಾರದವರ ಫಿರ್ತಿ ನೇತ್ರ-ಚಿಕಿತ್ಸಕರ ಸಂಚಾರಿ ದಳವು ತಾ ೬-೩-೫೦ರಿಂದ ತಾ ೨೪-೩-೫೦ರ ವರೆಗೆ ಈ ಜಿಲ್ಲೆಯಲ್ಲಿ ಸಂಚರಿಸುವದು ಈ ದಳದವರು ದೃಷ್ಟಿ ಮಂದ ಇದ್ದವರ ಕಣ್ಣುಗಳ ತಪಾಸಣೆ ಮಾಡಿ ಅವರಿಗೆ ಬೇಕಾಗುವ "ಚಾಳೀಸು" ಗಳ ಮಾಹಿತಿ ಕೊಡುವರು, ಕಣ್ಣಿನ ಬೇನೆಯುಳ್ಳವರಿಗೆ ಚಿಕಿತ್ಸೆಯ ಕ್ರಮ ಹೇಳಿಕೊಡುವರು ಕಣ್ಣಿಗೆ ಶಸ್ತ್ರ-ಚಿಕಿತ್ಸೆ ಮಾಡುವದು ಅವಶ್ಯ ಕಂಡಲ್ಲಿ ಆ ಚಿಕಿತ್ಸೆ ಎಲ್ಲಿ ಮತ್ತು ಎಂದು ಮಾಡಿಕೊಳ್ಳಬೇಕೆಂಬ ಬಗ್ಗೆ ಮಾಹಿತಿಯನ್ನು ಸಹ ಕೊಡುವರು ದಳದವರ ಕಡೆಯಿಂದ ಚಿಕಿತ್ಸೆ ಮಾಡಿಕೊಳ್ಳಬಯಸುವವರು ಮೊದಲು ಹತ್ತಿರದಲ್ಲಿರುವ ಸರಕಾರಿ ಯಾ ಖಾಸಗಿ ಡಾಕ್ಟರರಿಗೆ ಭೆಟ್ಟಿಯಾಗಿ, ಅವರ ಕಡೆಯಿಂದ ಗೊತ್ತುಪಡಿಸಲು ತಪಾಸಣೆ ಮಾಡಿಸಿಕೊಳ್ಳಬೇಕೆಂದೂ, ದಳದ ನೇತ್ರ ಚಿಕಿತ್ಸಾವಿಶಾರದರಿಂದ ಪರೀಕ್ಷೆ ಮತ್ತು ಚಿಕಿತ್ಸೆ ಮಾಡಿಕೊಂಡಲ್ಲಿ ಪ್ರಯೋಜನವಾಗುವದೆಂದು ಅವರು ಅಭಿಪ್ರಾಯಪಟ್ಟರೆ ಮಾತ್ರ ದಳದವರನ್ನು ಕಾಣಬೇಕೆಂದೂ ದಳದ ನಾಯಕರಾಗಿರುವ ಡಾ॥ ವ್ಹಿ ಆರ್ ಕೆಂಪ್ಪೇಕರ ಇವರು ತಿಳಿಸುತ್ತಾರೆ

ನೇತ್ರ-ಚಿಕಿತ್ಸಾ ದಳದ ಸಂಚಾರಕ್ರಮ ಮುಂದಿನಂತಿದೆ ತಾ ೬ ಹಳಿಯಾಳ, ತಾ ೭ ಯಲ್ಲಾಪುರ, ತಾ ೮ ಮುಂಡಗೋಡ, ತಾ ೯ ಶಿರ್ಸಿ, ತಾ ೧೦ ಸಿದ್ದಾಪುರ ತಾ ೧೪—೧೫ ಕಾರವಾರ, ತಾ ೧೬ ಅಂಕೋಲಾ, ತಾ ೧೮ ಗೋಕರ್ಣ, ತಾ ೨೦ ಕುಮಟಾ ತಾ ೨೨ ಹೊನ್ನಾವರ, ತಾ ೨೪ ಭಟಕಳ ಮೇಲೆ ಹೇಳಿದ ಆಯಾ ಊರುಗಳಲ್ಲಿರುವ ಸರಕಾರಿ, ಮ್ಯುನಿಸಿಪಲ್ ಇಲ್ಲವೆ ಲೋಕಲ್‌ಬೋರ್ಡಿನ ಚಿಕಿತ್ಸಾಲಯಗಳಲ್ಲಿ — ಆಸ್ಪತ್ರೆಗಳಲ್ಲಿ — ಚಿಕಿತ್ಸೆಯ ಕೆಲಸ ಮಾಡುವರು. (ಅಂಥ ಅಡಚಣೆಯ ಪ್ರಸಂಗವಿದ್ದಲ್ಲಿ ಸ ಚರದ ಈ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡುವ ಅಧಿಕಾರವನ್ನು ದಳದ ನಾಯಕರು ಕಾದಿಟ್ಟುಕೊಂಡಿರುತ್ತಾರೆ)

ಅವ್ವಿನಳ್ಳಿಯಲ್ಲಿ ಪೋಲಿಸ ಚೌಕಿಯು ಆದಾಗಕ್ಕೆ ಬೇ ಹಾಕಿಕೊಟ್ಟವರಿಗೆ, ಬೇರೆ ಕಟ್ಟಿಕೊಟ್ಟು ಈಗ ೮ ತಿಂಗಳಾಗುತ್ತ ಬಂದರೂ, ಇನ್ನೂ ಹಣ ಸಿಕ್ಕಿಲ್ಲವಂತೆ! ಜಿಲ್ಹಾ ಪೋಲೀಸ ಸಾಹೇಬರು ಇದೇನೆಂದು ನೋಡಬೇಕು.

ಮುಂಡಗೋಡ— ತಾ ೨೬—೨—೫೦ ' ವೃತ್ತ ' ದಲ್ಲಿ, ಮುಂಡಗೋಡದೊಳಗಿನ ಚುನಾವಣೆಯ ಕಡೆಯ ರೋಲ ದರದಲ್ಲಿ ಆದ ತಿದ್ದುಪಡಿಯನ್ನು ಪ್ರಕಟಿಸುವ ಜಿಲ್ಹಾಧಿಕಾರ ಆಜ್ಞೆ ಪ್ರಕಟವಾಗಿದೆಯಷ್ಟೇ ಆ ಪತ್ರದಲ್ಲಿ ೬—೯—೦ ಇರುತ್ತದೆ, ರೂ ೮—೯—೦ ಅಲ್ಲ ಓದುಗರು ಈ ಅಚ್ಚಿನ ದೋಷವನ್ನು ತಿದ್ದಿಕೊಳ್ಳಬೇಕಾಗಿ ಅರಿಕೆಯಿದೆ

ಯಲ್ಲಾಪುರ—(ತಾ ೨-೩-೫೦) ಇಂದು ಇಲ್ಲಿ ಜಿಲ್ಹಾ ಲೋಕಲ್ ಬೋರ್ಡಿನ ತ್ರೈಮಾಸಿಕ ಸಾಮಾನ್ಯ ಸಭೆ ಕೂಡಿತ್ತು ಸಭೆಯ ಆರಂಭಕ್ಕೆ ರಾ॥ ಗಾಯತೊಂಡೆಯವರು ವೈ॥ ವಾ॥ ಹಳದೀಪುರ ಕೃಷ್ಣರಾಯರ ನಿಧನದ ಬಗ್ಗೆ ಪಶ್ಚಾತ್ತಾಪದರ್ಶಕ ಗೊತ್ತುವಳಿಯೊಂದನ್ನು ಸಭೆಯ ಮುಂದಿಟ್ಟರು ಸಭಾಸದರೆಲ್ಲರೂ ಎದ್ದುನಿಂತು, ಮೃತಾತ್ಮನಿಗೆ ತಮ್ಮ ವಂದನೆಗಳನ್ನರ್ಪಿಸಿ ರಾ॥ ಗಾಯತೊಂಡೆಯವರ ಗೊತ್ತುವಳಿಯನ್ನು ಸರ್ವಾನುಮತದಿಂದ ಸ್ವೀಕರಿಸಿದರು

ಹಳಿಯಾಳ— (ತಾ ೨೫-೨ ೫೦) ಮುಂಬಯಿ ಪ್ರಾಂತಿಕ ಸೇವಾನಿವೃತ್ತ ಶಿಕ್ಷಕರ ಸಂಘದವರು ಸೇವಾನಿವೃತ್ತರ ಬಗ್ಗೆಗಿ ಹೋರಾಡುತ್ತಿರುವದರಿಂದ ನಮ್ಮ ಜಿಲ್ಲೆಯ ಪ್ರಾಥಮಿಕ ಸೇವಾನಿವೃತ್ತರು ಸಂಘಕ್ಕೆ ತಮ್ಮ ವರ್ಗಣಿಯನ್ನು ರಾ॥ ಗಣೇಶ ಗಂಗಾಧರ ಪೆಂಡಸೆ, ಕಿಲ್ಲ ರವಿವಾರ ಪೇಠ, ನಾಶಿಕ ಇವರ ಪತ್ತೆಗೆ ಕಳಿಸಿಕೊಡಬೇಕಾಗಿ ರಾ॥ ಗಿಂಡೇಶಾಸ್ತ್ರಿಯವರು ವಿನಂತಿಸುತ್ತಾರೆ.

ತಾ ೧-೮-೧೯೪೭ ಮತ್ತು ತಾ ೩೧—೧೨—೪೯ರ ನಡುವೆ ಸೇವಾನಿವೃತ್ತರಾದ ಪ್ರಾಥಮಿಕ ಶಿಕ್ಷಕರು ನಿವೃತ್ತಿ ವೇತನಕ್ಕಾಗಿ ಈಗಾಗಲೇ ಅರ್ಜಿ ಮಾಡಿರದಿದ್ದರೆ ಅವರು ಸದರಿ ಸಂಘದಿಂದ ಫಾರ್ಮ ತರಿಸಿಕೊಂಡು ಕೂಡಲೇ ಅರ್ಜಿ ಮಾಡಬೇಕಾಗಿಯೂ ರಾ ಗಿಂಡೇಯವರ ಸೂಚನೆಯು

ಹಳಿಯಾಳದಿಂದ ಬೆಳಗಾವಿಗೆ ಭತ್ತ ಒಯ್ಯುವ ಮೋಟಾರ ಬಂಡಿಗಳು ಬೆಳಗಾವಿಯಿಂದ ತಿರುಗಿ ಬರುವಾಗ ಸಾಂಬ್ರಾಣಿಯೊಳಗಿನ ಭತ್ತವನ್ನು ಹಳಿಯಾಳಕ್ಕೆ ತರದೆ ಬಾಲಿ ಬರುತ್ತವೆಂದೂ, ಸಾಂಬ್ರಾಣಿಯ ಭತ್ತ ತರಲು ಪ್ರತ್ಯೇಕ ಬಂಡಿಗಳನ್ನು ಕಳಿಸಿಕೊಡಬೇಕಾಗುತ್ತದೆಂದೂ, ಇದು ಪೆಟ್ರೋಲಿನ ಅಪವ್ಯಯವೆಂದೂ ಈ ಅಪವ್ಯಯವನ್ನು ಜಿಲ್ಹಾಧಿಪರು ನಿಲ್ಲಿಸಬೇಕೆಂದೂ ಸಾಂಬ್ರಾಣಿಯ ಗೃಹಸ್ಥರೊಬ್ಬರು ಬರೆಯುತ್ತಾರೆ

ಮಳಗಿ— (ತಾ ೧೯—೨—೫೦) ನಿನ್ನೆ ಇಲ್ಲಿಯ ಶಾಲೆಯ ವಿದ್ಯಾರ್ಥಿಗಳ ವಿದ್ಯಾರ್ಥಿಸಂಘದ ಹಿರಿಯಾತನದಲ್ಲಿ ಶಸ್ತ್ರ ಶಿಬಿರ್ಗಳ ಕಾರ್ಯಕ್ರಮವನ್ನು ಏರ್ಪಡಿಸಿದ್ದರು ವಿದ್ಯಾರ್ಥಿಗಳು ಆಗ ಅಂತಹ ಸಮಾರಂಭಗಳ ಮಹತ್ವವನ್ನು ತಿಳಿಸಿ ಹೇಳಿದರಲ್ಲದೆ ವಿದ್ಯಾರ್ಥಿಗಳಿಗೆ ಆರೋಗ್ಯಾದಿ ವಿಷಯಗಳನ್ನು ಸರಿಯಾಗಿ ಕಲಿಸಲು ಕೆಲವೊಂದು ಉಪಕರಣಗಳು ಬೇಕಾಗುತ್ತವೆಂದೂ ಅವನ್ನು ಊರವರು ಪೂರೈಸಬೇಕೆಂದೂ ದಿನ ವಿಸಿದರು ಆಗ ರಾ॥ ವ್ಹಿ ಎಸ್ ನಾಯ್ಕರು ಒಂದು ದೇಣಿಗೆ ಕನ್ನಡಿಯನ್ನೂ, ರಾ॥ ನಾಯಕರ ಒಟ್ಟಿಗೆ [illegible]

(ಮುಂದೆ ೪ನೇ ಪುಟ ನೋಡಿರಿ)

ಇವನು ಪಾಂಡುರಂಗ ಕೃಷ್ಣ ಕಾನಡಾವ (ಸಂಪಾದಕ) ಇವರು ಕುಮಟೆಯ ತ್ರಮ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ರೂ ೩
ಅಂಚೆಯಿಂದ ವರ್ಷಕ್ಕೆ ೪—೧—೦
" ೬ ತಿಂಗಳಿಗೆ ೨ ೪—೦
ಪ್ರತಿ ಸಂಚಿಕೆಗೆ " ೦-೧-೬
ವ್ಹಿ ಪಿ ಯಿಂದ ಕಳಿಸುವರೆ ೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು ಮುಂಗಡ ಕಟ್ಟತಕ್ಕದ್ದು

Reg. No. B 1270 Monday, 13-3-1950.

ಕಾನಡಾವೃತ್ತ.

ವರ್ಷ ೩೨.] THE KANARA NEWS. [ಸಂಚಿಕೆ ೩೭.

ಕುಮಟಾ - ಸೋಮವಾರ, ತಾ ೧೩—೩—೧೯೫೦

ಜಾಹೀರಾತುಗಳ ದರ.
೧೫ ಎಮ್ ಉದ್ದ ಸ್ತಂಭದ ಪ್ರತಿ ಸಾಲಿಗೆ ೮ ಆಣೆಯಂತೆ
ವಿಶೇಷ ಅಲ್ಲದೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಹ [illegible]
[illegible]ನೆ ಪತ್ರವ್ಯಾಪಾರ ಮಾಡಬೇಕು

ವಿವಿಧ ವಿಷಯಗಳು.

———*———

ಮಹಾತ್ಮಾಜಿಯವರು ತಮ್ಮ ಜೀವಮಾನದ ಕೊನೆವರೆಗೆ ಕೈಯಿಂದ ಭತ್ತ ಕುಟ್ಟಿ ತಯಾರಿಸಿದ ಅಕ್ಕಿ, ಹಳ್ಳಿಯ ಗಾಣದಿಂದ ತಯಾರಿಸಿದ ಎಣ್ಣೆ, ಬೀಸುಗಲ್ಲುಗಳ ಮೇಲೆ ಬೀಸಿದ ಹಿಟ್ಟು, ಬೆಲ್ಲ ಮುಂತಾದವುಗಳ ಪ್ರಚಾರ ಮಾಡಿ, ಜನತೆಯ ಆರೋಗ್ಯದ ದೃಷ್ಟಿಯಿಂದಲೂ ಹಳ್ಳಿಯ ಗೃಹೋದ್ಯಮಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದಲೂ ಇವುಗಳಿಗೆ ಸರಕಾರವೂ ಸಮಾಜವೂ ಪ್ರೋತ್ಸಾಹವನ್ನೀಯಬೇಕೆಂದು ಸದಾ ಕಾಲ ಆಗ್ರಹಪಡಿಸುತ್ತಿದ್ದರು ಅವರ ಸಂಸ್ಥಾಪಿಸಿದ ಅ ಭಾ॥ ಗ್ರಾಮೋದ್ಯೋಗ ಪುನರುಜ್ಜೀವನ ಸಂಸ್ಥೆಯೂ ಅದೇ ಪ್ರಚಾರವನ್ನು ನಡೆಸುತ್ತಿತ್ತು ಆದರೆ ಈಗ ನಾಡಿನಲ್ಲೆಲ್ಲ ಗಾಂಧಿಜಿಯವರ ಅನುಯಾಯಿಗಳಿಂದ ತುಂಬಿದ ಕೊಂಗ್ರೆಸ ಸರಕಾರಗಳು ಅಧಿಕಾರಾರೂಢವಾಗಿರುತ್ತಿದ್ದರೂ ಅವರ ಈ ಧ್ಯೇಯವು ಕೃತಿಯಲ್ಲಿಳಿಯುವದು ಕಂಡುಬರುವದಿಲ್ಲ! ಈಗ ನಾಡಿನಲ್ಲಿ ಎತ್ತ ನೋಡಿದರೂ ಅಕ್ಕಿಯ ಗಿರಣಿಗಳು, ಹಿಟ್ಟು ಬೀಸುವ ಗಿರಣಿಗಳು, ಎಣ್ಣೆಯ ಗಿರಣಿಗಳು, ಸಕ್ಕರೆಯ ಗಿರಣಿಗಳು, ಭೂಮಿತಿ-ಶ್ರೇಣಿಯಿಂದಲ್ಲದಿದ್ದರೂ ಗಣಿತಶ್ರೇಣಿಯಿಂದ ಬೆಳೆಯುತ್ತಲಿವೆ! ಕುಮಟೆಯಲ್ಲಿ ಈಗ ೮-೧೦ ಹಿಟ್ಟಿನ ಗಿರಣಿಗಳಾಗಿವೆ! ಇಡೀ ಜಿಲ್ಲೆಯಲ್ಲಿ ಸುಮಾರು ೩೦ ೩೫ ಅಕ್ಕಿಯ ಗಿರಣಿಗಳಾಗಿವೆ! ಹಳ್ಳಿಗಳೊಳಗಿನ ಗಾಣಗಳಂತೂ ಎಂದೋ ಮೂಲೆಗುಂಪಾಗಿ ಕೂತಂದವು ಈವಾಗ ಮಣ್ಣುಪಾಲು ಇಲ್ಲವೆ ಧೂಳಿಪಾಲಾಗಿ ಹೋಗಿವೆ! ಹೀಗೆ ಗಿರಣಿಗಳು ಹೆಚ್ಚಾಗಿರುವದರಿಂದ ಹಳ್ಳಿಗಳಲ್ಲಿ ಇಂದು ನಿರುದ್ಯೋಗ, ಆಲಸ್ಯ ಮತ್ತು ದಾರಿದ್ರ್ಯ ಮಿಗಿಲಾಗಿ ಹೋಗಿವೆ! ಈ ಸ್ಥಿತಿಯನ್ನು ಸುಧಾರಿಸಲಿಕ್ಕೆ ಪುನಃ ಗಾಂಧಿಜಿಯವರು ಅವತಾರಕ್ಕೆ ಬರಬೇಕಾಗುತ್ತದೋ ಏನೋ!

* *

೧೯೪೬ರಲ್ಲಿ ಕೊಂಗ್ರೆಸ್ಸಿಗರು ಅಧಿಕಾರಕ್ಕೆ ಬಂದ ಕೂಡಲೆ ಸರಕಾರಿ ಭತ್ತದ ಅಕ್ಕಿಯನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಕೈಕುಟ್ಟಿಗರಿಂದಲೇ ತಯಾರಿಸಿಕೊಳ್ಳಬೇಕೆಂದೂ, ಕೈಕುಟ್ಟಿಗರಿಂದ ಸಾಗದೆ ಇದ್ದ ಭತ್ತವನ್ನಷ್ಟೇ ಗಿರಣಿಗಳಿಗೆ ಕೊಡಬೇಕೆಂದೂ ಮುಂಬಯಿ ಸರಕಾರವು ಒಂದು ಫರ್ಮಾನು ಹೊರಡಿಸಿತ್ತು ಈ ಬಗ್ಗೆ ತುಸು ಹೆಚ್ಚಿಗೆ ಖರ್ಚು ಬಂದರೂ ಪರಿವೆಯಿಲ್ಲೆಂದೂ ಅದು ವಿಧಿಸಿತ್ತು. ಅದರಂತೆ ನಮ್ಮತ್ತ ಕಡೆಯ ಅಧಿಕಾರಿಗಳು, ಸ್ವ-ಂತೋಷದಿಂದಲ್ಲದಿದ್ದರೂ ಸರಕಾರಿ ಹುಕುಮಿನ ಒತ್ತಾಯದಿಂದ, ಪ್ರತಿವರ್ಷ ಸಾವಿರಗಟ್ಟಲೆ ಚೀಲ ಭತ್ತವನ್ನು ಹಳ್ಳಿಗಳ ಕೈಕುಟ್ಟಿಗರಿಗೆ ಪೆರೆಯಲಿಕ್ಕೆ ಕೊಡುವ ಪ್ರಘಾತವನ್ನು ಪ್ರಾರಂಭಿಸಿದ್ದರು ಈ ಪ್ರಘಾತದಿಂದ ಸಾವಿರಾರು ಹಳ್ಳಿಗರಿಗೆ ಒಂದು ಉದ್ಯೋಗ ಕಲ್ಪಿಸಿಕೊಟ್ಟಂತಾಗಿತ್ತು ಎಷ್ಟೋ ಜನರು ಸರಕಾರದವರ ಈ ಪ್ರಘಾತ ಮುಂದರಿಯುವದೆಂಬ ನಂಬಿಗೆ ಹಿಡಿದು, ನೂರಾರು ರೂಪಾಯಿ ವೆಚ್ಚ ಮಾಡಿ ಒತ್ತ ಬೇಯಿಸುವ ಒಗ್ಗಾಗಿ ಟಾಕಿ ಮಾಡಲಾದವುಗಳನ್ನೂ, ಸುಲಭದಲ್ಲಿ ಅಕ್ಕಿ ಸಾಣಿಸುವ ಒಗ್ಗೆ ಸರಿಗೆಯ ಸಾಣಿಗೆಗಳನ್ನೂ ತಯಾರಿಸಿಕೊಂಡದ್ದುಂಟು ಆದರೆ ಇತ್ತಲಾಗಿ ಬಂದ ಹೊಸ ತಾಲೂಕ-ಅಧಿಕಾರಿಗಳೂ ಹೊಸ ಜಿಲ್ಹಾಧಿಕಾರಿಗಳೂ ಮುಂಬಯಿ ಸರಕಾರದವರ ಮೇಲೆ ಹೇಳಿದ ಫರ್ಮಾನನ್ನು ಸಂಪೂರ್ಣ ಅಲಕ್ಷಿಸಿ ಎಲ್ಲ ಭತ್ತವನ್ನು — ಕೈಯಿಂದ ಭತ್ತ ಕುಟ್ಟಿ ಕೊಡಲು ಸಾವಿರ ಸಂಖ್ಯೆಯಿಂದ ಜನರು ಸಿದ್ಧರಿದ್ದಾಗ್ಯೂ, ಭತ್ತ ಮರೆದು ಕೊಡಲು ಜನರಿಗೆ ಈಗ ಅನುಕೂಲವಿದ್ದಾಗ್ಯೂ — ತಮ್ಮ ಪ್ರೀತಿಯ ಗಿರಣಿಗಳಿಗೆ ಕೊಟ್ಟು, ಪರಭಾರೆ ಅಕ್ಕಿ ಮಾಡಿಸಿಕೊಳ್ಳುತ್ತಿದ್ದಾರೆ ಕೈಕುಟ್ಟಿಗರಿಗೆ ಭತ್ತ ಕೊಡದೆ ಹೀಗೇಕೆ ಗಿರಣಿಗಳೊಡೆಯರ ಹೊಟ್ಟೆ ತುಂಬುತ್ತೀರೆಂದು ಅಧಿಕಾರಿಗಳಿಗೆ ಕೇಳಿದರೆ "ಕೈಕುಟ್ಟಿಗರಿಗೆ ಭತ್ತ ಕೊಡಬೇಕೆಂಬ ಹೊಸ ಹುಕುಮೊಂದೂ ಬಂದಿಲ್ಲ, ಹಳೆಯ ಹುಕುಮಿನ ಪುನರಾವೃತ್ತಿ ಹೊರಟಿಲ್ಲ" ಎಂದು ಅವರು ಉತ್ತರ ಕೊಡುತ್ತಾರೆ! ೧೯೪೬ರಲ್ಲಿ ಹೊರಟ ಹುಕುಮು ರದ್ದಾಗಿಲ್ಲ, ಅದು ಇನ್ನೂ ಊರ್ಜಿತವಿದೆ ಎಂದು ವಾದಿಸಿದರೂ ಈ ಅಧಿಕಾರಿಗಳು ಕಿವಿಗೊಡುವದಿಲ್ಲ! ಹಳೆಯ ಸಂಪ್ರದಾಯದಂತೆ ಕೆಲವೊಂದು ಕೈಕುಟ್ಟಿಗರಿಂದ ಕರಾರು ಮೊದಲಾದವುಗಳನ್ನು ಬರೆಯಿಸಿಕೊಂಡು ಅವರಿಗೆ ಭತ್ತ ಕೊಡಲು ಅಪ್ಪಣೆಮಾಡುತ್ತಿದ್ದಾಗ್ಯೂ ಕೈಕುಟ್ಟಿಗರಿಗೆ ಭತ್ತ ಕೊಟ್ಟರೆ ಅದರ ಲೆಕ್ಕವಿಡಲು ತೊಂದರೆಯಾಗುತ್ತದೆ ಎಂದು ಮುಂತಾದ ಕುಂಟ ನೆವಗಳನ್ನು ಮುಂದೊಡ್ಡಿ, ಅವರು ಗಿರಣಿಗಳ ಒಡೆಯರು ಒಯ್ಯದೆ ಉಳಿದ ಅಲ್ಪ ಸ್ವಲ್ಪ ಭತ್ತ ಮಾತ್ರ ಈ ಕೈಕುಟ್ಟಿಗರಿಗೆ ಕೊಡುತ್ತಾರೆ ಕೆಲವು ಸರಕಾರಿ ಉಗ್ರಾಣಗಳ ಅಧಿಕಾರಿಗಳಿಗೂ ಗಿರಣಿಗಳ ಒಡೆಯರಿಗೂ ಏನೇನೋ ಒಳ-ಸಂಬಂಧಗಳು ಬೆಳೆದಿವೆಯೇ ಕೆಂಬ ಸಂಶಯ ಬರಹತ್ತಿದೆ ಕೈಕುಟ್ಟಿಗರು ಭತ್ತ ಬೇಡಿ ಬಂದರೆ ಅವರಿಗೆ ಭತ್ತವಿಲ್ಲೆಂದು ಹೇಳಿ ಈ ಉಗ್ರಾಣಿಗಳು ಬಾಗಿಲಿಯಿಂದ ತಿರುಗಿ ಕಳಿಸುತ್ತಾರೆ ಮತ್ತು ಬಳಿ ಬಂದ ಭತ್ತವನ್ನು— ೪ ೬ ಚೀಲ ಭತ್ತ ಸಹ—ಗಿರಣಿಗಳಿಗೆ ಕೊಟ್ಟುಬಿಡುತ್ತಾರೆ! ಆದರಿಂದ ಕೈಕುಟ್ಟಿಗರ ಉದ್ಯೋಗವನ್ನು ಪ್ರಾರಂಭಿಸಿದ ಮತ್ತು ಆ ಬಗ್ಗೆ ಎಲ್ಲ ಸಲಕರಣೆಗಳನ್ನೂ, ಶಿಬಂದಿಯನ್ನೂ ಕೂಡಿಸಿರುವ ಜನರು, ಸರಕಾರವನ್ನು ನಂಬಿ ಈ ಉದ್ಯೋಗವನ್ನು ಕೈಕೊಂಡಿದ್ದೇ ತಮ್ಮ ತಪ್ಪಾಯಿತು, ಎಂದು ದಗ್ಧ ಹೃದಯದಿಂದ ಪಶ್ಚಾತ್ತಾಪಪಡುವ ಪ್ರಸಂಗ ಒದಿದೆ! ಜಿಲ್ಹಾಧಿಕಾರಿಗಳೂ ಮುಂಬಯಿ ಸರಕಾರವೂ ಕೆಳ-ಅಧಿಕಾರಿಗಳ ಈ ಲೀಲೆಗಳು ಸಮ್ಮತವಿರುತ್ತವೇನೆಂಬುದರ ಕೂಡಲೆ ಖುಲಾಸೆ ಆಗಬೇಕಾಗಿ ಅರಿಕೆಯಿದೆ

* *

ಜಲಿಯಾಳ ತಾಲೂಕಿನಲ್ಲಿ ಕಳೆದ ತಿಂಗಳ ಅಂತ್ಯಕ್ಕೆ ಆದ ಬಾಂಬು ಗುಂಡಿನ ಸ್ಫೋಟದಿಂದ ಎಲ್ಲೆಲ್ಲಿಯು ಸಣ್ಣದೊಡ್ಡ ಭೂಮಾಲಕರಿಗ ಕಳವಳವುಂಟಾಗಿದೆ ಮುಂಬಯಿ ಸರಕಾರವು ತಾ ೨೨-೨-೧೯೫೦ ನಾಗರಿಂದು ವಿಶೇಷ ಸರಕಾರಿ ಗಾಝೆಟನ್ನು ಹೊರಡಿಸಿ, ಹಳಿಯಾಳ ತಾಲೂಕಿನಲ್ಲಿ ಸೀರಾಯಿ ಮತ್ತು ಬಿನ್-ಸೀರಾಯಿ ಹೊಲ-ತೋಟಗಳ ಪರಮಾವಧಿ ಗೇಣಿಯು ಅನುಕ್ರಮವಾಗಿ ಸರಕಾರಿ ಸಿವಿಸ್ತ ಬೆಳೆಯ ಪ್ರಮಾಣದ ಯಾ ಆದರ ಬೆಲೆಯ ೧ ಮತ್ತು ೧ಕ್ಕೆ ಮೀರತಕ್ಕದ್ದಲ್ಲೆಂದು ವಿಧಿಸಿದೆ ಈ ಆಜ್ಞೆ ಹೊರಡುವ ಬರೀ ೨೨ ದಿನಗಳ ಹಿಂದೆ (ತಾ ೨೫-೧-೧೯೫೦) ಸರಕಾರದ ಕಂದಾಯ ಖಾತೆಯವರು ರೈತ-ಪಕ್ಷದ ವಕೀಲರಾ॥ ಆರ್ ಜಿ ಕಾಮತ ಇವರಿಗೆ ಬರೆದ ಸ್ಪಷ್ಟ ಪತ್ರದಲ್ಲಿ, "ಸದ್ಯಕ್ಕೆ ಗೇಣಿಯ ಪರಮಾವಧಿಯನ್ನು ಇಳಿಸುವದು ಅವಶ್ಯವುಂಟೆಂದು ಸರಕಾರವು ಭಾವಿಸುವದಿಲ್ಲ" ಎಂದು ತಿಳಿಸಿದ್ದರು ಆ ಪತ್ರದ ಬೆನ್ನಿಗೇ ಸರಕಾರದ ಹೊಸ ಆಜ್ಞೆ ಹೊರಟಿದೆ! ತಾ ೨೫-೧ ೫೦ ಮತ್ತು ತಾ ೨೨ ೨-೫೦ರ ನಡುವಿನ ನಾಲ್ಕು ವಾರಗಳ ಅಲ್ಪಾವಧಿಯಲ್ಲಿ ಸರಕಾರದ ಮಂಚಿನ ನಿರ್ಣಯವನ್ನು ಒಮ್ಮೆಲೇ

THE BANK OF RURAL INDIA LTD,

(Incorporated in IndianUnion Liability of M[illegible]los Limited)

HEAD OFFICE — "Satvabhama Bhuvanam , KARWAR. N K

Offices at — KARWAR, KUMTA, SIRSI HONAVAR, YELLAPUR BHAIKAL SIDDAPUR, ANKOLA, HUBLI & DHARWAR

Authorised Capital	,, Rs 10 00,000,
Subscribed Capital	, Rs 5 00,000,
Paid-up Capital & Reserves	, Rs 5 03502-8-0

Rates of Interest on Deposits

Current a c @ 1 % p a *Savings Bank a/c @ 2½ %*

Fixed Deposits for 3 months @ 3% per annum

,, for 6 months @ 3½% ,,

,, for 12 months or more @ 4% ,,

All kinds of modern Banking business transacted

Karwar, 1st Jan, 1950

P X GRACIOUS
MANAGING DIRECTOR

ಸ್ಥಾನಿಕ ವೃತ್ತಾಂತ.

ಕುಮಟಾ— ಹೋದ ಪಕ್ಷದ ಮುಂದಿನದಿಂದ ಚಳಿಯು ಹಿಂದಾಗಿರುತ್ತದ್ದು ಹಗಲಿರುಳು ಶಕೆಯಾಗ ಹತ್ತಿದೆ ಇತ್ತ ೬ ದಿನಗಳಿಂದಂತೂ ಆಕಾಶದಲ್ಲಿ ಒಮ್ಮೊಮ್ಮೆ ಮೋಡಗಳು ಮುಸುಕುತ್ತಿರುವದರಿಂದ ಶಕೆಯು ತೀವ್ರವಾಗುತ್ತಿದೆ ಈ ಮೋಡಗಳನ್ನೂ ಶಕೆಯನ್ನೂ ನೋಡಿದರೆ ಸಮಿಾಪದಲ್ಲೇ ಒಂದೆರಡು ಮಳೆಗಳು ಆಗಬಹುದೆಂದು ತೋರುತ್ತದೆ

ಮೊದಲೇ ಪ್ರಕಟವಾದಂತೆ ನಮ್ಮ ಜಿಲ್ಲೆಯ ೨ನೇ ಒಕ್ಕಲತನ, ದನಗಳು ಮತ್ತು ಗ್ರಾಮೋದ್ಯೋಗಗಳು ಇವುಗಳ ಪ್ರದರ್ಶನವನ್ನು ಶ್ರೀ ಎಸ್ ವ್ಹಿ ಕೃಷ್ಣಮೂರ್ತಿಯವರು ಮೊನ್ನೆ ಸಂಜೆ ಉದ್ಘಾಟಿಸಿರುತ್ತಾರೆ ಈ ಉದ್ಘಾಟನೆಯ ಸಮಾರಂಭಕ್ಕೆ ಜಿಲ್ಲಾಧಿಪರೂ, ಜಿಲ್ಲಾಧಿಪರ ಕಚೇರಿಯ ಉಚ್ಚ ಅಧಿಕಾರಿಗಳೂ ಎಕ್ಸಿಕ್ಯೂಟಿವ್ ಇಂಜಿನೀಯರರೂ, ಸಹಕಾರ, ಆರೋಗ್ಯ—ಬೇಸಾಯ ಮೊದಲಾದ ಖಾತೆಗಳ ಹಲವಾರು ಅಧಿಕಾರಿಗಳೂ, ಜಿಲ್ಲೆಯ ಎಲ್ಲ ಭಾಗಗಳಿಂದ ನೂರಾರು ಪ್ರವಾಸಿಗರೂ ಕೂಡಿದ್ದರು. ಈ ಸಮಾರಂಭವು ಪ್ರದರ್ಶನ ಮಂಟಪದ ಎದುರಿನಲ್ಲಿ ಆಟ ನಾಟಕಗಳ ಬಗ್ಗೆ ಕಟ್ಟಿಸಲ್ಪಟ್ಟಿರುವ ನಾಟ್ಯಮಂದಿರದಲ್ಲಿ ನಡೆಯಿತು ನೂರಾರು ಸ್ತ್ರೀಯರೂ ಈ ಸಮಾರಂಭ ನೋಡಲು ಕೂಡಿದರು ಪ್ರಾರಂಭಕ್ಕೆ ಸ್ವಾಗತಗೀತಗಳಾದವು ಆಮೇಲೆ ಪ್ರದರ್ಶನ ಸಮಿತಿಯ ಅಧ್ಯಕ್ಷ ಶ್ರೀ ಚಿತ್ರಿಗಣೇಶ ಭಟ್ಟರ ಸ್ವಾಗತ ಭಾಷಣವಾಯಿತು ಈ ಭಾಷಣದಲ್ಲಿ ರಾವ ಭಟ್ಟರು ಜಿಲ್ಲೆಯೊಳಗಿನ ಬೇಸಾಯ—ವ್ಯವಸಾಯಗಳ ಅವನತಿ ದುರ್ದೆಸೆ ಇನ್ನು ಹೃದಯಂಗಮವಾಗಿ ಬಣ್ಣಿಸಿ, ಅವುಗಳ ಪ್ರಗತಿ ಸುಧಾರಣೆಗಳ ಸಾಧನೆಯ ಕೆಲವು ಹೊಸ ಮಾರ್ಗಗಳನ್ನು ಸೂಚಿಸಿರುತ್ತಾರೆ ರಾ॥ ಭಟ್ಟರ ಭಾಷಣ ಮುಗಿದ ಮೇಲೆ ಅವರ ವಿನಂತಿಯಂತೆ ಶ್ರೀ ಕೃಷ್ಣಮೂರ್ತಿಯವರು ಎದ್ದು ಪ್ರಾರಂಭ ಮಾಡಿಕೊಟ್ಟರು ಹಾಗೆ ಅವರು ಪ್ರದರ್ಶನ ಪ್ರಾರಂಭ ಮಾಡಿಕೊಡುವ ಮೊದಲ ಸುಮಾರು ೨೦—೨೫ ಮಿನಿಟುಗಳ ವರೆಗೆ ಅಂಕಿ ಸಂಖ್ಯೆಗಳಿಂದಲೂ, ಬೋಧಪ್ರದ ತಾತ್ವಿಕ ಮಾಹಿತಿಯಿಂದಲೂ ತುಂಬಿದ ಭಾಷಣವನ್ನು ಮಾಡಿದರು. ನಮ್ಮ ಜಿಲ್ಲೆಗೂ ನಮ್ಮ ನೆರೆಯ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಗೂ ಇರುವ ಸಾಮ್ಯ ವೈಷಮ್ಯಗಳನ್ನು, ಬೇಸಾಯದ ಸುಧಾರಣೆ, ಗ್ರಾಮೋದ್ಯೋಗಗಳ ಸುಧಾರಣೆ, ಉದ್ಯೋಗಗಳ ಬೆಳವಣಿಗೆ, ಉದ್ಯೋಗಪ್ರಿಯತೆ, ಕಲ್ಪಕತೆ ಮುಂತಾದ ವಿಷಯಗಳಲ್ಲೂ ಕ್ಷೇತ್ರಗಳಲ್ಲೂ ನಮ್ಮ ದೇಶದ್ಯ ಅಪಾರ ಸಾಧಿಸಬೇಕಾದ, ಸಾಧಿಸಿದ ರಾಷ್ಟ್ರಗಳೂ ಇರುವ ಅಂತರ—ವ್ಯತ್ಯಾಸಗಳನ್ನೂ ಕೃಷ್ಣಮೂರ್ತಿಯವರು ಚೆನ್ನಾಗಿ ವೇದಕವಾಗಿ ವಿವರಿಸಿ, ಈಗ ನಾಡಿನಲ್ಲಿ ಪ್ರಜಾರಾಜ್ಯವಾಗಿದೆ ನಾಡಿಗೆ ಸ್ವಾತಂತ್ರ್ಯ ಸಿಕ್ಕಿದೆ, ಸ್ವಗಂತ್ರ್ಯ ಭಾರತದ ಸರಕಾರವು ಈ ಎಲ್ಲ ಕುಂದು ಕೊರತೆಗಳನ್ನು ಹೋಗಲಾಡಿಸಿ ನಾಡಿನಲ್ಲಿ ನಂದನವನ್ನು ರಚಿಸಬೇಕೆಂದು ನೆನ್ನೆ ಜನರು ಸಹನೆ ಕಳೆದುಕೊಳ್ಳದೆ ತಾವೇ ಮುಂದಾಗಿ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಬೇಕೆಂದು ಬೋಧಿಸಿದರು ಇಂತಹ ಪ್ರದರ್ಶನಗಳು ಆ ಪ್ರಗತಿ ಸಾಧನೆಗೆ ಎಂತು ಸಹಾಯಕವಾಗಬಲ್ಲವೆಂಬುದನ್ನೂ ಶ್ರೀ ಕೃಷ್ಣಮೂರ್ತಿಯವರು ವಿವರಿಸಿದರು ಕೊನೆಗೆ ಶ್ರೀ ಶಿವಾನಂದ ಶಾಸ್ತ್ರಿಯವರ ಆಭಾರ ಮನ್ನಣೆ ಮತ್ತು "ವಂದೇ ಮಾತರಂ" ರಾಷ್ಟ್ರಗೀತಗಳಾಗಿ ಈ ಸಮಾರಂಭವು ಮುಗಿಯಿತು ಆಮೇಲೆ ಶ್ರೀ ಕೃಷ್ಣಮೂರ್ತಿ ಜಿಲ್ಲಾಧಿಪರು ಜನರ ಸಂಘದ ಪ್ರತಿನಿಧಿಗಳೊಡನೆ ಪ್ರದರ್ಶನ

(೩ನೇ ಪುಟದಲ್ಲಿ ನೋಡಿರಿ)

ಆಜ್ಞೆ.

ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,

ಕಾರವಾರ, ತಾ. ೩—೩—೧೯೫೦.

ನಂ ಜಿಎ — ೧೯೪೬ನೇ ಇಸವಿಯ ಅವಶ್ಯಕ ವಸ್ತುಗಳ ಪೂರೈಕೆಯ (ತಾತ್ಕಾಲಿಕ ಅಧಿಕಾರಗಳು ಕಾಯದೆಯ (೧೯೪೬ರ ೨೪ನೇ ಕಾಯದೆಯ) ೩ನೆಯ ಕಲಮಿನ (೨)ನೆಯ ಉಪಕಲಮು ಹಾಗೂ ಭಾರತ ಸರಕಾರದ ಆಹಾರ ಮಂತ್ರಿಗಳು, ಗಡಗಳು ಮತ್ತು ಶಕ್ತಿ ಇವುಗಳ ಖಾತೆಯವರು ತಾ. ೩—೩—೧೯೪೭ಕ್ಕೆ ಹೊರಡಿಸಿದ ಪಿ ೧೧೦ನೇ ಕ್ರಮಾಂಕದ ಸರಕಾರಿ ಪ್ರಕಟನೆ ಇವುಗಳನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ ಮತ್ತು ತಾ. ೧೮—೧೧—೧೯೪೯, ತಾ ೮—೧೨—೧೯೪೯, ತಾ ೨೪—೧೨—೧೯೪೯ ಮತ್ತು ತಾ ೨೦—೨—೧೯೫೦ಕ್ಕೆ ಚಿಮಣಿ ಎಣ್ಣೆಯ ಮಾರಾಟದ ಸಂಬಂಧದಲ್ಲಿ ಈ ಕಚೇರಿಯಿಂದ ಹೊರಟ ೫೯ನೇ ಕ್ರಮಾಂಕದ ಯಾವತ್ತೂ ಆಜ್ಞೆಗಳನ್ನು ರದ್ದುಗೊಳಿಸಿ ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಆಜ್ಞೆ ಹೊರಡಿಸಿರುತ್ತಾರೇನೆಂದರೆ —

ತಾ ೧೫—೨—೧೯೫೦ ರಿಂದ ಮುಂದೆ, ಈ ಆಜ್ಞೆಗೆ ಜೋಡಿಸಲ್ಪಟ್ಟಿರುವ ಪರಿಶಿಷ್ಟಗಳೊಳಗಿನ ೧ ನೇ ಸ್ತಂಭದಲ್ಲಿ ನಿರ್ದೇಶಿಸಲ್ಪಟ್ಟಿರುವ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಬಿಳೀ ಚಿಮಣಿ ಎಣ್ಣೆಯ ಸದರಿ ಪರಿಶಿಷ್ಟಗಳ ೨, ೩, ೪ನೇ ಸ್ತಂಭಗಳಲ್ಲಿ ಹೇಳಿರುವ ದರಗಳಿಗಿಂತ ಹೆಚ್ಚಿಗೆ ಬೆಲೆ ತಕ್ಕೊಂಡು ಮಾರಲ್ಪಡ ಕೂಡದು.

ಆದರೆ—

(ಅ) ಎಲ್ಲ ಮುದ್ರೆಗಳ ಕೆಂಪು ಚಿಮಣಿ ಎಣ್ಣೆಯನ್ನು ಮಾರುವಲ್ಲಿ ೪ ಇಂಪೀರಿಯಲ್ ಗೆಲನ್ನುಗಳ ಪ್ರತಿ ಡಬ್ಬಿಯ ಚಿಲ್ಲರೆ ಮಾರಾಟದ ಧಾರಣೆಯು ಸದರಿ ಪರಿಶಿಷ್ಟಗಳೊಳಗಿನ ೨ ನೇ ಸ್ತಂಭದಲ್ಲಿ ಹೇಳಿರುವ ಬೆಲೆಗಿಂತ ೩ ಆಣೆ ಕಡಿಮೆಯಿರತಕ್ಕದ್ದು

(ಬ) ಎಲ್ಲ ಮುದ್ರೆಗಳ ಕೆಂಪು ಮತ್ತು ಬಿಳೀ ಚಿಮಣಿ ಎಣ್ಣೆಯನ್ನು ಹಳೇ ತಗಡಿನ ಡಬ್ಬಿಗಳಲ್ಲಿ ತುಂಬಿ ಮಾರುವದಾದಲ್ಲಿ ೪ ಇಂಪೀರಿಯಲ್ ಗೆಲನುಗಳ ಡಬ್ಬಿಯ ಚಿಲ್ಲರೆ ಮಾರಾಟದ ಬೆಲೆಯು ಬಿಳೀ ತಗಡಿನ ಡಬ್ಬಿಯಲ್ಲಿ ತುಂಬಿದ ಎಣ್ಣೆಯ ಚಿಲ್ಲರೆ ಬೆಲೆಗಿಂತ ೭॥ ಆಣೆ ಕಡಿಮೆಯಿರತಕ್ಕದ್ದು

(ಕ) ಚಿಮಣಿ ಎಣ್ಣೆಯ ಮಾರಾಟದ ಕ್ರಿಯೆಯೊಂದು ವ್ಯವಹಾರದಲ್ಲಿ ಲೆಕ್ಕದಂತೆ ಆಗುವ ಅಂತ ಬೆಲೆಯು ಸಮಿಾಪದ ಎಲ್ಲಿ ದುಡ್ಡಿಗೆ ಪರಿವರ್ತಿಸಲ್ಪಡತಕ್ಕದ್ದು. ಅಂದರೆ ಅರ್ಧ ಪೈಲ್ಲಿಯೂ ಅದಕ್ಕೂ ಹೆಚ್ಚಿನ ಪೈಲ್ಲಿಯ ಅಂಶ ಬರುತ್ತಿದ್ದರೆ ಅದನ್ನು ಪೂರ್ಣ ಪೈಸ ಮಾಡಬೇಕು, ಅರ್ಧ ಪೈಸಗೂ ಕಡಿಮೆ ಬರುವ ಪೈಲ್ಲಿಯ ಅಂಶವನ್ನು ಬಿಟ್ಟುಬಿಡಬೇಕು

ಪರಿಶಿಷ್ಟ ೧

(ಹೊಳಪುಳ್ಳ ತಗಡಿನ ಡಬ್ಬಿಗಳಲ್ಲಿ ಮಾರಲ್ಪಡುವ ಎಲ್ಲ ಮುದ್ರೆಗಳ ಬಿಳೀ ಚಿಮಣಿ ಎಣ್ಣೆಯ ದರಗಳು)

ತಾಲೂಕ, ಪೇಟೆ ಯಾ ಊರು	ಹೊಸ ಬಿಳೀ ತಗಡಿನ ಡಬ್ಬಿಗಳಲ್ಲಿ ತುಂಬಿ ಮಾರಲಾಗುವ ಪ್ರತಿ ೪ ಇಂ ಗೆಲನುಗಳ ಡಬ್ಬಿಗಳ ಚಿಲ್ಲರೆ ಬೆಲೆ (ಡಬ್ಬಿ ಸಹಿತ)	ಪ್ರತಿ ಬಾಟಲಿನ ಚಿಲ್ಲರೆ ಬೆಲೆ: ೧ನೇ ಸ್ತಂಭದಲ್ಲಿರುವ ಸ್ಥಳಗಳಲ್ಲಿ ಹಾಗೂ ಅದರ ಸುತ್ತು ಮುತ್ತಲಿನ ೫ ಮೈಲು ಯಾ ಕಡಿಮೆ ಅಂತರದ ಸ್ಥಳಗಳಲ್ಲಿ	ಪ್ರತಿ ಬಾಟಲಿನ ಚಿಲ್ಲರೆ ಬೆಲೆ: ೩ ನೇ ಸ್ತಂಭದಲ್ಲಿ ಹೇಳಿದ ಸ್ಥಳಗಳನ್ನು ಬಿಟ್ಟು ಇನ್ನುಳಿದ ಸ್ಥಳಗಳಲ್ಲಿ
(೧)	(೨)	(೩)	(೪)
೧ ಕಾರವಾರ ಪೇಟೆ	೬—೬—೦	೦—೬—೩	೦—೬—೯
೨ ಕೋಡಿಬಾಗ, ಕುಮಟಾ ಮತ್ತು ಹೊನ್ನಾವರ	೬—೫—೦	೦—೯—೩	೦—೭—೯
೩ ಸದಾಶಿವಗಡ, ಶಿರಸಿ, ವೆಂಕಟಾಪುರ, ಶಿರಾಲಿ	೬—೫—೩	೦—೬—೩	೦—೬—೯
೪ ಉಪ್ಪಿನಪಟ್ಟಣ	೬—೭—೩	೦—೬—೨	೦—೬—೯
೫ ಭಟಕಳ	೬—೭—೬	೦—೬—೩	೦—೬—೯
೬ ಅಂಕೋಲಾ	೬—೫—೬	೦—೬—೩	೦—೬—೯
೭ ಸಿದ್ದಾಪುರ ಪೇಟೆ	೭—೬—೩	೦—೭—೩	೦—೭—೯
೮ ಯಲ್ಲಾಪುರ ಶಿರಸಿ	೬—೧೩—೩	೦—೭—೬	೦—೭—೦
೯ ಹಳಿಯಾಳ	೬—೧೩—೬	೦—೬—೯	೦—೭—೩
೧೦ ಸುಪಾ	೭—೧೩—೯	೦—೭—೯	೦—೮—೩
೧೧ ಮುಂಡಗೋಡ	೭—೭—೦	೦—೭—೩	೦—೭—೯

[illegible]

[illegible]	[illegible]	[illegible]	[illegible]
(೧)	(೨)	(೩)	(೪)
[illegible]	[illegible]	[illegible]	[illegible]

M K JADHAV.
[illegible]

Notice to Motor Owners in the Karnatak Region.

Owners of Motor Vehicles residing in the Karnatak Region are formed that the tax for one or more quarters in the next financial year 1950-51 has to be paid so as to reach this Office on or before 1—50 in respect of motor vehicles bearing regional registration marks and on or before 30—3—50 (31st being public holiday) in respect vehicles registered elsewhere Tax can be paid in cash, crossed cheques drawn on the Imperial Bank of India, Belgaum only, challans and by mony orders or at the Regional Transport Office Belgaum, between 11 A M and 3 P M on week days and 9-30 to 11 A M on Saturday

2 Payment of tax should be accompanied by Registration Certificate of the vehicle, Certificate of Valid Insurance and a declaration form "AT" of "FT" as the case may be No tax token or discs will be issued nor the Registration Certificate endorsed unless the above requirements are duly complied with.

3 Nonuse intimation of vehicles which are kept idle should be submitted before the date on which the tax tokens or discs already issued for such vehicles expire, stating clearly the place [name of garage] where the vehicle is kept idle under nonuse and shall not remove it from such place without the prior permission of the Registering Authority, failing which the owners will be liable for payment of tax and penalty until the date they notify the nonuse of their vehicles as stated above

No 2122/3F/KR of 50
Regional Transport Office,
Belgaum 8-3-50

D K SUHTANKAR,
Regional Transport Officer,
K R Belgaum

NOTIFICATION.

In amplification of orders contained in Government Circular Labour and Housing Department No 986 46 dated the 11th January, 1950 authorising the stockists of indigenous cement to sell without permits 10 bags of cement per person per month and 20 bags on the recommendation of the nearest Revenue Authority, Government is further pleased to direct that the limit of allotment of cement by Revenue authorities should be raised to 3 tons i e 60 bags in any individual case Applicants will be required to sign and lodge with the Revenue authority making recommendation a declaration to the effect that cement is required for bona fide use which should be mentioned and that it will not be used otherwise than in accordance with the declaration signed by them

For large demands persons should apply to the Joint Provincial Rationing Officer, Cement 7 Queen s Barracks, Cooperage Fort, Bombay in the prescribed application form which will be available in the District Rural Development Board Office as well as from the Stockists of indigenous cement

Karwar,
10-3-1950

M K JADHAV,
Collector & Chairman
R D Board Kanara

[illegible]

ಇವರು ಪ್ರತಿವಾದಿಯು ಈ ತರ್ಕ್ರಾರು ತಿರಸ್ಕರಿಸಿ ಕಲಮು ೨೫ರನ್ವಯ ಗೇಣಿ-ಹಣ ತೆರಲು ಅವಧಿ ಕೊಟ್ಟು ಆ ಅವಧಿಯಲ್ಲಿ ಗೇಣಿಯನ್ನು ತೆರದಿದ್ದರೆ, ಪ್ರತಿವಾದಿಯು ಕಬ್ಜಾ ಬಿಟ್ಟು ಕೊಡಬೇಕಾಗುವದೆಂದು ಹುಕುಮು ಮಾಡಿರುತ್ತಾರೆ (ಈ ತೀರ್ಪಿನ ಮುಖ್ಯ ಅಂಶಗಳನ್ನು ಮುಂದೆ ಪ್ರಕಟಿಸಲಾಗುವದು.)

ಕುಮಟಾ-ಅಂಕೋಲಾ ತಾಲೂಕುಗಳಲ್ಲಿ ಸೀಧಾ-ಅಂಗಡಿಗಳ ಮುಖಾಂತರ ಜನರಿಗೆ ಮಾರಲೆಂದು ಸರಕಾರವು ತರಿಸಿಟ್ಟ ೩೦೦ ಟನ್ನ (೧೨೨೦ ಖಂಡಿ) ಗೆಣಸು ಸರಕಾರದವರ ಸಂಗ್ರಹದಲ್ಲಿರುವದೆಂದೂ, ಅವನ್ನು ಯಾವ ಬೇಕಾದ ವ್ಯಾಪಾರಿಯು ತನಗೆ ಪ್ರೂಕ್ತವಾದ ಧಾರಣೆಗೆ ಕೊಂಡುಕೊಳ್ಳಬಹುದೆಂದೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಈ ಗೆಣಸನ್ನು ಸಾಗಿಸಲು ಪರ್ಮಿಟ್ಟುಗಳ ಬೇಕಾದಲ್ಲಿ ಆ ಬಗ್ಗೆ ಸರಕಾರವು ಪರ್ಮಿಟ್ಟುಗಳನ್ನು ಕೊಡುವದೆಂದೂ, ಇಷ್ಟವುಳ್ಳವರು ಜಿಲ್ಲಾ ಪೂರೈಕೆ ಅಧಿಕಾರಿಗಳನ್ನು ಕಂಡು ಸ್ಟಾಕ ವಗೈರೆ ನೋಡಬಹುದೆಂದೂ ಜಿಲ್ಲಾಧಿಪರ ಕಚೇರಿಯವರು ಜಾಹೀರ ಮಾಡಲು ತಿಳಿಸಿರುತ್ತಾರೆ

ಗೋಕರ್ಣದಲ್ಲಿ ನಡೆದಿದೆ ಪ್ರಾ। ರಾ। ಲಿಕ್ಷಣ ಶಿಕ್ಷಕಿಯರ ನಾಲ್ಕನೆಯ ವರ್ಗದ ಶುಂಗಲೋತ್ಸವವು ಬರುವ ರವಿವಾರ ತಾ। ಗಂಗೊಳ್ಳಿ ವಕೀಲರ ಅಧ್ಯಕ್ಷತೆಯಲ್ಲಿ ಜರಗುವದು

ಪಟ್ಟಣಗಳೊಳಗಿನ ಜನರ ಉಪಯೋಗಕ್ಕೆ ಬೇಕಾಗುವಷ್ಟು ಮಟ್ಟಿಗೆ ಇಡಬಹುದಾದ ಪಡಭೂಮಿಗಳನ್ನಷ್ಟೇ ಸಾಗುವಳಿಗೆ ಕೊಡಲಾಗುತ್ತದೆ, ಹೊರತು ಎಲ್ಲ ಪಡಭೂಮಿಗಳನ್ನಲ್ಲ ಎಂಬುದನ್ನು ಜನರು ಲಕ್ಷದಲ್ಲಿಡಬೇಕಾಗಿ ಜಿಲ್ಲಾಧಿಪರ ಸೂಚನೆಯಿದೆ

ಕಾರವಾರ— ಡಾ। ಕೊಪ್ಪೀಕರ ಇವರ ಸಂಚಾರ ನೇತ್ರ ಚಿಕಿತ್ಸಾ ದಳದ ಮೋಟಾರ ಬಂಡಿಗೆ ಪೆಟ್ರೋಲ ಸಿಗದಿರುವದರಿಂದ, ಕಳೆದ ವಾರದ “ವೃತ್ತ”ದಲ್ಲಿ ಪ್ರಕಟವಾದಂತೆ ದಳದವರು ಸದ್ಯಕ್ಕೆ ಈ ಜಿಲ್ಹೆಯಲ್ಲಿ ಸಂಚರಿಸಲಿಕ್ಕಿಲ್ಲೆಂದು ತಿಳಿದುಬಂದಿದೆ. ಮುಂದೆ ಪೆಟ್ರೋಲ ಸಿಕ್ಕ ಮೇಲೆ ದಳದವರು ಸಂಚರಿಸಬಹುದಂತೆ.

ಪ್ರತಿ ಜಿಲ್ಹೆಯಲ್ಲಿ ಈಗ ಜಿಲ್ಲಾಧಿಪರಿಗೆ ಸಲಹೆ ಕೊಡಲು ಗ್ರಾಮೋದ್ಧಾರ-ಮಂಡಳ, ಬೆಲೆ ಮತ್ತು ಪೂರೈಕೆ ಸಲಹೆ ಮಂಡಳ, ಮದ್ಯಪಾನ-ಪ್ರತಿಬಂಧ ಸಮಿತಿ ಇತ್ಯಾದಿ ಇತ್ಯಾದಿ ಮಂಡಳಗಳಿವೆ ಆಯಾ ಮಂಡಳಗಳ ಸಭೆಗಳು ಪ್ರತಿ ಪ್ರತ್ಯೇಕ ಕಾಲಕ್ಕೆ ಮತ್ತು ಪ್ರತಿ-ಪ್ರತ್ಯೇಕವಾಗಿ ಕೂಡುತ್ತವೆ ಬಿನ್ನ ಭಿನ್ನ ಮಂಡಳ-ಸಮಿತಿಗಳ ಸದಸ್ಯರೂ ಕೆಲವು ಸಲ ಬೇರೆ ಬೇರೆ ಇರುತ್ತಾರೆ ಈ ಎಲ್ಲ ಮಂಡಳ-ಸಮಿತಿಗಳ ಸದಸ್ಯರಿಗೆ ಸರಕಾರದಿಂದ ವಾಹನ-ಭತ್ತೆಯೂ ದೈನಿಕ ಜೀವನ-ವೆಚ್ಚದ ಭತ್ತೆಯೂ ಸಲ್ಲುತ್ತದೆ ಈ ಖರ್ಚು ಸಾವಿರಗಟ್ಟಲೆ ರೂಪಾಯಿಗಳಷ್ಟು ಬರುತ್ತದೆ ಸರಕಾರದವರು ಈಗ ಈ ಅನವ್ಯಯ ವೆಚ್ಚವನ್ನು ಕಡಿಮೆ ಮಾಡಿ ತರುವದಕ್ಕಾಗಿ ಎಲ್ಲ ಪ್ರಕಾರದ ಸಲಹೆ ಕೊಡಲು ಒಂದೇ ಒಂದು ಸಮಿತಿಯನ್ನು ನೇಮಿಸಿದರೆ ಸಾಕೆಂದು ನಿರ್ಣಯಿಸಿರುತ್ತಾರೆಂಬುದೊಂದು ಅನಧಿಕೃತ ಸುದ್ದಿ ಬಂದಿದೆ. ಸಮಿತಿಗಳ ಸಂಖ್ಯೆಯನ್ನು ಇಳಿಸಿದಂತೆ ಸರಕಾರವು ಸದಸ್ಯರ ಸಂಖ್ಯೆಯನ್ನೂ ಇಳಿಸಿ, ಜಿಲ್ಲಾಧಿಪರಿಗೆ ಸಲಹೆ ಕೊಡುವ ನಿಜವಾದ ಪಾತ್ರತೆಯುಳ್ಳ ಅನುಭವಿಕ ಜನರನ್ನಷ್ಟೇ ಆ ಸಮಿತಿಯಲ್ಲಿರುವಂತೆ ನಿರ್ಬಂಧ ಮಾಡಿದರೆ ಸರಕಾರದ ಮಿತವ್ಯಯದ ಯೋಜನೆ ಇನ್ನಷ್ಟು ಫಲಪ್ರದವಾಗುವದೆಂದು ಕೆಲವು ಅನುಭವಿಕರ ಸೂಚನೆಯುಂಟು ಈಗಿರುವ ಮಂಡಳಗಳೊಳಗಿನ ಬಹಳಷ್ಟು ಸದಸ್ಯರು ಜಿಲ್ಲಾಧಿಪರು ಇಲ್ಲವೆ ಅವರ ಹಸ್ತಕರು ಹೇಳಿದ ಮಾಹಿತಿಯನ್ನಷ್ಟು ಕೇಳಿ ತಲೆದೂಗುವವರೇ ಇದ್ದಾರೆಂದೂ ಇಂಥ ಹಾವಭ್ಯರು ಜಿಲ್ಲಾಧಿಕಾರಿಗಳಿಗೆ ಸಲಹೆ ಕೊಡುವದು ಅಷ್ಟಕ್ಕಷ್ಟೇ ಇರುತ್ತದೆಂದೂ ಅವರ ಪ್ರತಿಪಾದನೆಯುಂಟು.

ಜಾಹೀರ ನಿಮಂತ್ರಣ.

ಕಾಸರಕೋಡ ಶ್ರೀ ಗಣಪತಿ ನಾರಾಯಣ ದೇವರ ವರ್ಷಾಸನ ರಥೋತ್ಸವವು ಇದೇ ವಿಕೃತಿ ಸಂ॥ದ ಚೈತ್ರ ಶು॥ ಆಷ್ಟಮಿ ಬುಧವಾರ ತಾ. ೨೨—೩—೧೯೫೦ ನೇದು ಜರಗುವದು, ಮತ್ತು ಚೈತ್ರ ಶು॥ ೫ (ಶೇಷ) ಶುಕ್ರವಾರ ತಾ ೨೪—೩—೧೯೫೦ನೇದಿಗೆ ಶ್ರೀದೇವರ ನೂತನ ಧ್ವಜಸ್ತಂಭದ ಪ್ರತಿಷ್ಠೆಯ ಕಾರ್ಯ ನಡೆಯುವದು. ಶ್ರೀ ದೇವರ ಭಜಕರು ಈ ಮಹೋತ್ಸವಗಳಿಗೆ ಅವಶ್ಯ ಬಂದು ಶ್ರೀ ದೇವರ ಕೃಪಾಪ್ರಸಾದಕ್ಕೆ ಪಾತ್ರರಾಗಬೇಕಾಗಿ ವಿನಂತಿಯಿದೆ.

ಮಿತಿ ವಿರೋಧಿ ಸಂ॥ರದ ಫಾಲ್ಗುಣ ಕೃಷ್ಣ ೧೦ಮಿ, ತಾ ೧೧—೩—೫೦.	ವೆಂಕಟೇಶ ಮೂಡ್ಲಗಿರಿ ಗಾಯತೊಂಡೆ ಪ್ರತಿಷ್ಠಾ ಕಾರ್ಯದ ಕಾರ್ಯವಾಹಕ.

ಇಮಾರತ ಕಟ್ಟಿಗೆ ಮಾರಾಟದ ನೋಟೀಸು.

ಪಶ್ಚಿಮ ಭಾಗ ಕಾನಡಾ ಡಿವ್ಹಿಜನದಲ್ಲಿ ಕೆಳಗೆ ತೋರಿಸಿದಂತೆ ಜಂಗಲಿ ಜಾತಿಯ ಇಮಾರತಿ ಕಟ್ಟಿಗೆಯ ಜಾಹೀರ ಲಿಲಾಂವು ಮಾಡಲ್ಪಡುವದು ಲಿಲಾಂವು ಆಯಾಯ ಡಿಪೋದ ಎದುರಿಗೆ ತೋರಿಸಿದ ತಾರೀಖು ಮತ್ತು ವೇಳೆಗೆ ಶುರುವಾಗುವದು

ಲಿಲಾಂವು ನಡೆಯುವ ಡಿಪೋದ ಹೆಸರು	ಲಿಲಾಂವಿನ ತಾರೀಖು ಮತ್ತು ಸಮಯ	ಲಿಲಾಂವು ಮಾಡಲ್ಪಡುವ ಇಮಾರತಿ ನಾಟುಗಳು			
ಹಟ್ಟಿಕೇರಿ (ಅಂಕೋಲೆಯ ಸಮೀಪ)	೧೬—೧೨—೧೯೫೦ ನೇ ದಿವಸದ ೮-೩೦ ಘಂಟೆಗೆ	ಮತ್ತಿ	ನಾಟು	೩೬	ಟನ್ನ
		ನಂದಿ	,,	೫೩	,,
		ಹೊಂದಳ	,,	೪೯	,,
		ಜಂಬು	,,	೩೧	,,
		ಹೆದ್ದಿ	,,	೬	,,
		ಇತರ ಜಂಗ್ಲಿ	,,	೮	,,
		(ನವಾಸ) ಸ್ಲೀಪರ		೮೦೦	ನಂಬರ
ಮಲ್ಲಾಪುರ (ಹೊನ್ನಾವರದ ಸಮೀಪ)	೧೮—೩—೧೯೫೦ ನೇ ದಿವಸದ ೮-೩೦ ಘಂಟೆಗೆ	ಸುರಹೊನ್ನಿ	,,	೩೫	ಟನ್ನ
		(ಪೂನ) ನಾಟು, ನಂದಿ ನಾಟು		೨೭	,,

ನೋಡಿಕ್ಕೆ ೨೫ರಷ್ಟು ಸಪಾಲಿನ ರಕಮು, ಲಿಲಾಂವು ಮುಗಿದ ಕೂಡಲೆ, ಕೊಡಬೇಕಾಗುವದು. ಬಾಕಿಯ ರಕಮನ್ನು ತಾ ೩೧-೩-೧೯೫೦ನೇ ಯೊಳಗಾಗಿ ಇಲ್ಲವೆ ಅದಕ್ಕಿಂತ ಮುಂಚೆ ಮಾಲು ರವಾ ಮಾಡುವ ದಿವಸದಲ್ಲಿ ಮಾಲು ರವಾ ಮಾಡುವ ಮೊದಲು ಕೊಡತಕ್ಕದ್ದು

ಹೆಚ್ಚಿನ ವಿವರಗಳಿಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಬರೆಕೊಳ್ಳಬಹುದು

ಕಾರವಾರ,

ತಾ ೧೦-೩ ೧೯೫೦

ಬಿ. ಎಫ್. ಬ್ರಿಟೊ,
ಡಿವ್ಹಿಜನಲ್ ಫಾರೆಸ್ಟ ಆಫೀಸರ,
ಪಶ್ಚಿಮ ಭಾಗ, ಕಾನಡಾ, ಕಾರವಾರ

ವಿವಿಧ ವಿಷಯಗಳು

(೧ನೇ ಪುಟದಿಂದ ಮುಂದುವರಿದುದು.)

ಬದಲಿಸಬೇಕಾದಂತಹ ಕಠಿಣ ಪ್ರಸಂಗವೇನು ಬಂತೋ ತಿಳಿಯದು! ಹಳಿಯಾಳ ತಾಲೂಕಿನಲ್ಲಿ ಮೊದಲೇ ಒಡೆಯ-ಒಕ್ಕಲಿಗರ ನಡುವೆ ತಂಟೆಗಳುಂಟು ಎಷ್ಟೋ ಒಕ್ಕಲಿಗರು ಈಗಾಗಲೇ ಒಡೆಯರಿಗೆ ಹಣ್ಣುಮಾಡುವ ಇಲ್ಲವೆ ಅವರ ಮನೆಗಳಿಗೆ ಕೊಳ್ಳಿ ಹಾಕುವ ಬೆದರಿಕೆಗಳನ್ನು ಹಾಕುತ್ತಿರುವರು! ಇದರಿಂದ ಜಿಲ್ಲಾಧಿಪರು ಕಳೆದ ಹೋಳಿಯ ಹಬ್ಬದ ಕಾಲಕ್ಕೆ ಹಳಿಯಾಳದೊಳಗೆ ಏನಾದರೂ ಅನಾಹುತ, ಇಲ್ಲವೆ ಶಾಂತತಾಭಂಗದ ಕೃತ್ಯಗಳು ಒದಗಿಬರಬಹುದೆಂಬ ಭೀತಿಯಿಂದ ಕ್ರಿ ಪ್ರೊ ಕೋಡಿನ ೧೪೪ನೇ ಕಲಮಿನನ್ವಯ ಪ್ರತಿಬಂಧಕ ಹುಕುಮನ್ನು ಹೊರಡಿಸಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿ ಸರಕಾರದವರ ಹೊಸ ಹುಕುಮು ಪುಂಡ ಒಕ್ಕಲಿಗರಿಗೆ ಇನ್ನಿಷ್ಟು ಪ್ರೋತ್ಸಾಹ ಕೊಡದೆ ಉಳಿಯುವದೇ? ಸರಕಾರದವರು ಸ್ಥಾನಿಕ ಪರಿಸ್ಥಿತಿಯನ್ನು ಅರಿತು ತಮ್ಮ ಹೊಸ ಹುಕುಮನ್ನು ಹೊರಡಿಸಿರುವರೋ ಯಾ ಅರಿಯದೆ ಹೊರಡಿಸಿರುವರೋ ಎಂಬುದನ್ನು ತಿಳಿಯುವ ಮಾರ್ಗವಿಲ್ಲ ನಮ್ಮೀ ಜಿಲ್ಹೆಯಲ್ಲಿ ಟೆನನ್ಸಿ ಕಾಯಿದೆಯ ಪರಿಣಾಮ ಇಷ್ಟ ದಿಶೆಯಿಂದ ಆಗಿರದೆ ಅನಿಷ್ಟ ದಿಶೆಯಿಂದ ಆಗಹತ್ತಿದೆಂದು ವಿಚಾರವಂತ ಅಧಿಕಾರಿಗಳೂ ಅಧಿಕಾರೇತರರೂ ಅಭಿಪ್ರಾಯ ವ್ಯಕ್ತಗೊಳಿಸುತ್ತಿದ್ದಾರೆ, ಮತ್ತು ಟೆನನ್ಸಿ ಕಾಯಿದೆಯ ಪರಿಣಾಮ ಹೇಗಾಗಿದೆಂಬುದನ್ನು ಕಂಡುಹಿಡಿದು ಅದರ ಲೋಪ-ದೋಷಗಳನ್ನು ತೋರಿಸಿಕೊಡಲು ಒಂದು ಚೌಕಶಿ ಸಮಿತಿ ನೇಮಿಸಬೇಕೆಂದು ಸೂಚಿಸಿದ್ದಾರೆ ಪರಿಸ್ಥಿತಿ ಹೀಗಿರುವಾಗ, ಈ ಸೂಚನೆಯು ಇತ್ಯರ್ಥವಾಗುವ ಮುಂಚೆ, ಸರಕಾರದವರು ಹಳಿಯಾಳ ತಾಲೂಕಿನಲ್ಲಿ ಅನಪೇಕ್ಷಿತ ಬಾಂಬು-ಗುಂಡನ್ನು ಹಾರಿಸಿದ್ದು ಉಚಿತವೇನು?

ಜಿಲ್ಲಾ ಸಮಾಚಾರ.

ಕಾರವಾರ— [illegible]

[illegible]

ಆಹಾರ-ನಿಯಂತ್ರಣದ ಧೋರಣೆಯಲ್ಲಿ ಬದಲಾವಣೆಯಿಲ್ಲ

[illegible]

[illegible]

(ಜಿಲ್ಲಾಧಿಕಾರಿ ... [illegible])

[illegible]

TENDER NOTICE.

Sealed item rate tenders on B 2 Forms are invited by the Undersigned for the work of Erection of Lahore Sheds at the places specified below, the work being estimated to cost Rs 13,000 each approximately.

2 Blank tender forms will be issued on payment of Rs 2 per copy of tender and the tenders will be received in the office of the undersigned up to 10 A M on 18th March 1950 and will be opened the same day if possible The envelope containing the tender should be superscribed as "Tender for erection of Lahore Sheds"

3. Earnest money of Rs 130 per shed should be paid into a Treasury and the Treasury Chalan or chalans should accompany the tender

4 The period of completion is 2 months from the date of the order to commence

5 The principle materials viz Cement, C I sheets, cut timber as per tender will be supplied free at the site of the work

6 Contractor should quote for Lahore Sheds at one or more places at their choice.

7 The acceptance of the tender rests with Government who do not bind themselves to accept the lowest or any tender

8 Any further particulars can be had from the office of the undersigned during office hours on any working day.

Bombay,
24th February, 1950

R. N. SAMARTH
Director of Civil Supplies, Bombay.

LIST OF PLACES WHERE LAHORE SHEDS ARE TO BE CONSTRUCTED

District.	Places
Banaskantha	Deesa, Wae, Shivari, Palanpur, Tharad and Nalgad.
Mehsana	Mehsana, Kalol, Vijapur, Hariz, Kheralau, Kadi and Visnagar
Amreli	Amreli and Damnagar
Baroda	Jetpur, Sankheda, Sadbli, Karjan, Jarod, Dabhoi and Baroda
Kaira	Nadiad
Panchmahals	Sant Road and Limkheda
Broach	Broach, Amod, Waghra, Walia and Dediapada.
Surat	Mangrol, Songadh, Kathor, Billimora, Mahura and Surat City.
Thana	Thana
Ahmednagar	Ahmednagar, Wambori and Mirajgaon
West Khandesh	Dhondaicha, Nandurbar and Dhulia.
Nasik	Yeola and Manmad.
North Satara	Koregaon
Sholapur	Barsi and Pandharpur
Bijapur	Telgi, Indi, Almel and Muddebihal
Kanara	Alnavar.
South Satara	Miraj
Kolhapur	Kolhapur, Hat Kangale, Haldi, Gargoti, Kaura, Paedi, Ajra, Bogadwa, Bambaode and Bijar Phaga

ಗೆ ಕಳ್ಳಿಸಿದ ದಿನದಿಂದ ೧ ತಿಂಗಳೊಳಗೆ ಜಿಲ್ಲಾಧಿಕಾರ ಅಪ್ಪಣೆಯಿಲ್ಲದೆ ಆ ತೆರನಾದ ಆಹಾರವನ್ನು ಯಾರಿಗೂ ಉಪಯೋಗಿಸಕೂಡದು, ಎಂದು ಸದರಿ ಕಾಯದೆಯು ನಿರ್ಬಂಧಿಸುತ್ತದೆ. ಈ ನಿರ್ಬಂಧವನ್ನು ಉಲ್ಲಂಘಿಸಿ ನಡೆಯುವದು ಗುನ್ಹೆಯಾಗುತ್ತದೆ ಎಂದು ಪ್ರಕಟಿಸಲು ಜಿಲ್ಲಾಧಿಕಾರಿ ತಿಳಿಸಿರುತ್ತಾರೆ.

೬-೩-೫೦ರಿಂದ ಮುಂದೆ, ಪುನಃ ಇನ್ನೊಂದು ಹುಕುಮು ಹೊರಬೀಳುವ ತನಕ, ಈ ಜಿಲ್ಲೆಯೊಳಗಿನ ಯಾವಾತನೂ ತನ್ನ ಕಡೆಗೆ ಇರುವ ಅಥವಾ ತನಗೆ ಸಿಗಬಹುದಾದ ಪೆಟ್ರೋಲ ಕೂಪನ, ಪಂಚ ಯಾ ವಿಶೇಷ-ಮಾತ್ರಕ ಇವುಗಳ ಆಧಾರದಿಂದ, ಸದರಿ ಕೂಪನು-ಪಂಚಗಳ ಮೇಲೆ ತನ್ನ ಯಾ ತನ್ನ ಏಜಂಟನಲ್ಲ ಅಸಿಸ್ಟಂಟರ ಹೆಸರು ಬರೆದೊಂದನಹೆ ಪೆಟ್ರೋಲ ಪಡೆಯಕೂಡದೆಂದು ಜಿಲ್ಲಾಧಿಕಾರಿ ಅವಶ್ಯಕ ವಸ್ತುಗಳ ಪೂರೈಕೆಯ ಸಂರಕ್ಷಣೆಯ ಬಗ್ಗೆ ಒಂದು ಆಜ್ಞೆ ಹೊರಡಿಸಿದ್ದಾರೆ. ಪೆಟ್ರೋಲಿನ ಕೂಪನ ಪಂಚಗಳನ್ನು ಮೋಟಾರ ಬಂಡಿ ಯುಳ್ಳವರು ಬಂಡಿಯ ನೋಂದಣಿ ನಕ್ಕಾ ಇಲ್ಲವೆ "A" ಪರವಾನಿಗೆಯನ್ನು ತಮ್ಮ ಕಡೆಗೆ ಯಾ ಸದರಿ "ಏಜಂಟನಲ್ಲ ಅಸಿಸ್ಟಂಟರ" ಕಡೆಗೆ ಹಾಜರಪಡಿಸಿ ಸದರಿ ಕೂಪನ ಪಂಚಗಳ ಮೇಲೆ ಅದೇ ಬರೆಯಬೇಕೆಂದೂ ಜಿಲ್ಲಾಧಿಕಾರಿ ಸದರಿ ಆಜ್ಞೆಯಲ್ಲಿ ಸೂಚನೆ ಕೊಟ್ಟಿರುತ್ತಾರೆ.

ಮುಂಬಯಿ ಪ್ರಾಂತ (ಈಗ ಹೊಸ ಘಟನೆಯಂತೆ "ಸ್ಟೇಟ" ಯಾ ರಾಜ್ಯಾಂಗವೆಂದು ಸಂಬೋಧಿಸಲ್ಪಡುತ್ತದೆ) ದಲ್ಲಿ ಮುಂಬಯಿ ಸರಕಾರ್ವು ಪಕ್ಷಿಗಳ ಚಲನ-ವಲನಗಳ ನಿಯಂತ್ರಣೆಯ ಬಗ್ಗೆ ೪ ವಿಭಾಗಗಳನ್ನು ಮಾಡಿದೆ ಅವು ಯಾವವೆಂದರೆ — (೧) ಬೃಹನ್ ಮುಂಬಯಿ, (೨) ಉತ್ತರ ಜಿಲ್ಲೆಯನ್ನು ಬಿಟ್ಟು ಉತ್ತರ ವಿಭಾಗ, (೩) ಉತ್ತರ ಜಿಲ್ಲೆ ಸಹಿತ ಮಧ್ಯ ವಿಭಾಗ ಮತ್ತು (೪) ದಕ್ಷಿಣ ವಿಭಾಗ ಈ ವಿಭಾಗಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಒಯ್ಯಲಿಕ್ಕೆ ಯಾವದೂ ಒಂದು ವಿಭಾಗದ ಹೊರಗೆ ಪಕ್ಷಿಗಳನ್ನು ನಿರ್ಯಾತ ಮಾಡುವದಾದಲ್ಲಿ ಆ ಬಗ್ಗೆ ಮುಂಬಯಿಯ ಆಗಿನ ನಾಗರಿಕ ಪೂರೈಕೆ ಇಲಾಖೆಯ ಡಾಯರೆಕ್ಟರರ ಅಪ್ಪಣೆ ಚೀಟಿ ಪಡೆಯುವದವಶ್ಯವುಂಟು. ಆಯಾ ವಿಭಾಗದಲ್ಲೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪಕ್ಷಿಗಳನ್ನು ಸ್ಥಳಾಂತರಿಸಲು ಯಾವ ನಿರ್ಬಂಧವೂ ಇರುವದಿಲ್ಲ, ಯಾರ ಅಪ್ಪಣೆಯ ಅವಶ್ಯಕತೆಯೂ ಇಲ್ಲ.

ಇತ್ತೀಚೆಗೆ, ಒಂದಿಲ್ಲೊಂದು ಕಾರಣದಿಂದ, ನಮ್ಮ ದೇಶದೊಳಗೆ ರೋಗ ಬೀಜಗಳು ಬೆಳೆಯುತ್ತಲಿವೆ ನಮ್ಮ ಜಿಲ್ಲೆಯಲ್ಲಿಯೂ ಕ್ಷಯ ರೋಗದಿಂದ ಬಳಲುವವರ ಯಾ ಅದಕ್ಕೆ ತುತ್ತಾಗುತ್ತಿರುವವರ ಪ್ರಮಾಣ ದಿನೇ ದಿನೇ ಹೆಚ್ಚುತ್ತಲಿದೆ ಈ ಸಂಕಟವನ್ನು ಸಂಹಾರಿಸುವ ಕಾಲವು ಇದಿರಾಗುವದವಶ್ಯವುಂಟು ಈ ಬಗ್ಗೆ ಏನು ಪರಿಹಾರೋಪಾಯ ಯೋಜನೆ ಮಾಡಬಹುದೆಂಬುದರ ಆಲೋಚನೆ ಮಾಡುವದಕ್ಕಾಗಿ ಅಲ್ಲಿಯ ಕೆಲವು ಪ್ರಮುಖರು ಇದೇ ಬರುವ ತಾ ೧೬-೩-೫೦ ನೇ ದಿನ ಸಾಯಂಕಾಲ ೬ಕ್ಕೆ ಇಲ್ಲಿಯ ಟಿಕ್ ಸಮಾಜದ ಮಂದಿರದಲ್ಲಿ ಜಿಲ್ಲೆಯ ನಾಗರಿಕರ ಸಾರ್ವಜನಿಕ ಸಭೆಯನ್ನು ಕರೆದಿರುತ್ತಾರೆ ಜಿಲ್ಲಾಧಿಕಾರಿಗಳಾಗಿರುವ ರಾ|| ಜಾಧವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರಂತೆ ಜಿಲ್ಲೆಯ ಪ್ರಮುಖರು ಈ ಸಭೆಗೆ ಅವಶ್ಯ ಬರಬೇಕಾಗಿ ವಿನಂತಿಸಿರುವರು.

(೧೦-೩-೫೦) ಕಳೆದ ಸೋಮವಾರ ದಿಂದ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ಗಿರೀಶರ್ಮರೊಳಗಿನ ಸರಮೋಘದ ಖಟ್ಲೆಯ ವಿಚಾರಣೆಗೆ ಪ್ರಾರಂಭವಾಗಿದೆ ಸರಕಾರ ಪಕ್ಷದಿಂದ ಪಬ್ಲಿಕ ಪ್ರಾಸಿಕ್ಯೂಟರ ವಕೀಲ ರಾ|| ಮುದ್ರುಮ ಹಾಗು ಇವರು (ಬೆಳಗಾವಿಯಲ್ಲಿ ಹಿಂದೆ ಸರಕಾರಿ ಪಬ್ಲಿಕ ಪ್ರಾಸಿಕ್ಯೂಟರರಾಗಿದ್ದವರು) ಕೆಲಸ ನಡಿಸುತ್ತಿದ್ದಾರೆ (ಇಲ್ಲಿಯ ಸರಕಾರಿ ವಕೀಲ ರಾ|| ಮಾವಿನಕುರ್ವೆ ಅವರು ಆರೋಪಿತರ ಕಡೆ ಸಂಬಂಧಿಕರಾಗಿಯುಳ್ಳವರೆ ತಂಗರ ಸಂಬಂಧಿ ಆಗಿರುವದು ಕಂಡು ಬರುತ್ತದೆಂತಲೂ, ಅವರು ಖಟ್ಲೆಯ ಕೆಲಸ ದಕ್ಷತೆಯಿಂದ ಮತ್ತು ನಿರ್ಪಕ್ಷಪಾತದಿಂದ ನಡಿಸ್ಯಾರೆಂದು ನಂಬಲಾಗುವದಿಲ್ಲೆಂತಲೂ ಯಾರೋ ಮುಂಬಯಿ ಸರಕಾರದವರಿಗೆ ತಿಳಿಸಿ, ರಾ|| ಮಾವಿನಕುರ್ವೆಯವರ ಬದಲು ರಾ|| ಮ. ದ್ರು. ನಾಯಕರ ನೇಮಣೂಕಿಯನ್ನು ಮಾಡಿಸಿಕೊಂಡಿರುತ್ತಾರೆಂದು ತಿಳಿಯುತ್ತದೆ) ಪ್ರಥಮತಃ ವಿಚಾರಣೆಯ ಕಾಲಕ್ಕೆ ಕೆಳ ಕೋರ್ಟಿನಲ್ಲಿ ಖಟ್ಲೆ ನಡಿಸಿದ ರಾ|| ಗಜಾನನ ಕಾಮತರು ರಾ|| ವಿ ಎಂ ಧುರಂಧರ ಹಾಗು ರಾ|| ವ. ಧು. ನಾಯಕರು ಫಿರ್ಯಾದಿ ಪಕ್ಷದ ಸಾಕ್ಷಿದಾರರೊಳಗಿಂದ ಅವಶ್ಯಕ ತೋರುವ ಎಷ್ಟೋ ಮಂದಿಯನ್ನು ಬಿಟ್ಟುಕೊಡುತ್ತಿದ್ದರೂ ಈ ಖಟ್ಲೆಯ ವಿಚಾರಣೆ ಈ ತಿಂಗಳ ಕೊನೆಯ ವರೆಗೂ ನಡೆಯಬಹುದೆಂದು ನಿರೀಕ್ಷಕರು ಊಹಿಸುತ್ತಾರೆ ಈ ಖಟ್ಲೆಯೊಳಗಿನ ಇನ್ನೊಂದು ವಿಶೇಷವೆಂದರೆ, ಕೆಳಕೋರ್ಟಿನಲ್ಲಿ ಎಲ್ಲ ಆರೋಪಿತರ ಪರವಾಗಿ ವಕೀಲ ರಾ|| ಬಿ ಜಂಬಾವರ ಕರದಲ್ಲಿ ವಾ|| ಹಳದೀಪುರ ಕೃಷ್ಣರಾಯರೂ ಕೆಳ ಸಭಕ್ಕಲು ಸೆಶನ್ಸ ಕೋರ್ಟಿನಲ್ಲಿ ಖಟ್ಲೆ ಬಂದ ಮೇಲೆ ಕೆಲವು ಆರೋಪಿತರು ತಾವು ಬಡವರೆಂದೂ ತಮಗೆ ಸ್ವಂತ ವಕೀಲರನ್ನು ಕೊಡುವ ಪರಿಸ್ಥಿತಿಯಲ್ಲಿಂದೂ ಹಾಗೂ ಸರಕಾರದಿಂದ ಕೊಂಡರಂತೆ ಆಗ (ಇದು ದೇಹಾಂತ-ಶಿಕ್ಷೆ ಹೇಳುವ ಕೊಲೆಪಾತಕದ ಪ್ರಕರಣವಾಗಿರುವದರಿಂದ) ನ್ಯಾಯಾಧೀಶರು ಸರಕಾರದ ವೆಚ್ಚದಿಂದ ಅವರಿಗೆ ಧವ ಕವ ವಕೀಲರನ್ನು ಕೊಡಬೇಕಾಯಿತು ಆಗ ಈ ವಕೀಲರನ್ನು ಕೊಡುವ ಪರಂಪರಾಗತ ಪದ್ಧತಿಯನ್ನು ನ್ಯಾಯಾಧೀಶ ರಾ|| ಡೋಂಗರೆಯವರು ಅನುಸರಿಸದೆ (ವಕೀಲರ ಹಿರಿಯತನದ ಅನುಕ್ರಮವನ್ನು ಯಾ ಕಿರಿತನದ ಅನುಕ್ರಮವನ್ನು ಲಕ್ಷ್ಯಕ್ಕೆ ತರದೆ ಹಿರಿಯರೂ ಅಲ್ಲ ಅತ್ತ ಕಿರಿಯರೂ ಅಲ್ಲ ಅಂತಹ ರಾ ಬಿ ಜಂಬಾವರರಿಗೆ ಓರ್ವ ಆರೋಪಿಯ ಪರವಾಗಿ ವಕಾಲತು ಕೊಟ್ಟಿರುತ್ತಾರೆ! (ಇನ್ನೂರ ಪರವಾಗಿ ರಾ|| ಗೋಪಾಲರಾವ ಹಳದೀಪುರ ಮತ್ತು ಇವರು ಇವರಿಗೆ ವಕಾಲತು ಕೊಡಲಾಗಿದೆ ಉಳಿದವರ ಪರವಾಗಿ ರಾ|| ವಿನಾಯಕರಾವ ಗೋರೆಕರ ಇವರು ವಕಾಲತು ತಕ್ಕೊಂಡಿರುತ್ತಾರೆ) ರಾ|| ಬಿ ಈ ನೇಮಣೂಕಿಯಿಂದ ಸ್ಥಾನಿಕ ವಕೀಲ ವರ್ಗದಲ್ಲಿ ಕೆಲ ಮಟ್ಟಿಗೆ ಅಸಮಾಧಾನವುಂಟಾಗಿದೆ

नोटीस

इसवि सन १९२३च्या मुंबई लोकल बोर्ड अॅक्ट VI प्रमाणे कले या इलेक्शन रूल ७ प्रमाणे कानडा जिल्ह्यातील तमाम लोकांस जाहीर करण्यात येते की —

कानडा जिल्हा लोकल बोर्डाच्या सुपा पेठा मधातून निवडून आलेले मेंबर श्री गोविंद बाळकृष्ण परुळेकर यांनी राजीनामा दिल्या कारणाने खाली झालेली जागा भरण्यासाठी होणाऱ्या बाय्-इलेक्शन प्रोग्राम येणे प्रमाणे ठरविला आहे

(१) नेमणुकी पत्र स्वीकारण्याची शेवटची तारीख (रिटर्निंग ऑफीसर म्हणजे सुपा महालकरी साहेबांच्या ऑफीसात)	इसवी सन् १९५०च्या मार्च महिन्याच्या २९ ता बुधवार रोजी (ऑफीस टाइमात)
(२) नेमणुकी पत्र तपास करणे (रिटर्निंग ऑफीसराच्या ऑफीसात म्हणजे सुपा महालकरी साहेबांच्या ऑफीसात)	इसवी सन १९५० च्या मार्च महिन्याच्या ३० ता गुरुवार रोजी (ऑफीस टाइमात
(३) मत देणे (मत देण्याकरिता सुपा पेठ्यांत निवडलेल्या पोलिंग ठाण्यावर)	इसवि सन १९५०च्या मे महिन्याच्या १५ तारीख सोमवार रोजी (सकाळी ८ वाजल्यापासून दुपारी १२ पर्यंत आणि दुपारी १-३० ते सायंकाळी ५ पर्यंत
(४) मते मोजणे (रिटर्निंग आफीसराच्या आफीसात म्हणजे सुपा महालकरी साहेबांच्या आफीसात)	इसवि सन् १९५०च्या मे महिन्याच्या १८ तारीख गुरुवार रोजी (आफीस टाइमात

नेमणूकी पत्राचे फॉर्म सुपा महालकरी साहेबांकडे मिळतील या मतदार संघातून निवडून यावे असे ज्या मतदारांची इच्छा असेल त्यांनी त्या मतदार संघाच्या सुधारलेल्या मतदार यादीत ज्यांची नावे आहेत त्यांपैकी एकाद्या कडून निवडला गेला पाहिजे व त्याला दुसऱ्याची अनुमती घेतली पाहिजे आणि त्यांनी उभेदवार म्हणून निवडला गेल्यास कबूल आहे असे त्या नेमणूकी पत्रावर सही केली पाहिजे तसेच नेमणूकी पत्रे वरील नमूद केलेल्या वेळात रिटर्निंग आफीसर सुपा महालकर आपल्या ऑफीसात स्वीकारतील

नेमणूकी पत्र देण्याच्या पूर्वी जिल्हा लोकल बोर्डाचा सभासद होण्याची इच्छा असलेल्याला १०० रुपये रिटर्निंग ऑफिसराकडे डीपाझीट ठेवले पाहिजे आणि नेमणूकी पत्राबरोबर इलेक्शन कमिशन नमुन्याप्रमाणे प्रतिज्ञा लेखावर सही केली पाहिजे उमेदवार एकाहून जास्त पसंत होणार असेल तर मतदार होण्यास लायक असलेल्या द्वारा घेणे इच्छा असल्यास मत घेण्यासाठी नेमलेली पोलिंग ठाणी खालील प्रमाणे आहेत —

(१) कालसाय (कालसाय देवस्थान) (२) कुंभारवाडा (कुंभारवाडा धर्मशाळा
(३) सुपा (सुपा ग्राम चावडी) (४) अमु (अमु नागनाथ देवस्थान)
(५) गुंध (गुंध फॉरेस्ट नाका) (६) कॅसलरॉक (कॅसलरॉक धर्मशाळा)

कारवार
१—३—१९५०

M K. JADHAV.
कलेक्टर, कानडा जिल्हा

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 20-3-1950.

[illegible Kannada masthead]

THE KANARA NEWS.

Possession Suits can be tried by Civil Courts

On the morrow of the Joint Civil Judge's judgment, Mr P D Limaye the principal Civil Judge of Kumta delivered his judgment in O S 151 of 1949 (Gulabi vs Mannu & anr) and held that possession suits under Secs 14 & 25 of the new Tenancy Act can be tried by the Civil Courts as well as by the Mamlatdar Pertinent extracts of his judgment are reproduced below Issue No 3 in the suit was, "Whether this Court has jurisdiction to award possession in view of Sec 85 of the B T & A L Act of 1948" Dealing with this issue the Judge says —

"(20) Plaint shows that the suit is for possession on the ground of sub-letting and for non-payment of rent (That it is now proved there was no sub-letting) no question of sub-letting arises Payment of rent for 1947-48 is proved 1948-49 rent alone is due Cause of action for a suit for possession for non payment of rent for 1948-49 arises at the end of April 20, 1949, 15 days after the day fixed for the payment of the last instalment of land revenue, as per section 14 (1) (a) (i) of the B T & A L Act 1948 So this suit being filed for a relief, cause of action for which arises after 28-12-1948, the day on which the B T & A L Act 1948 came into force, is to be governed by the provisions of the B T and A L Act, 1948

21 It is urged on behalf of defts that this court has no jurisdiction to award possession, the Civil Court being expressly barred to do so under Sec 85 of the B T and A L Act 1948 Sec 85 of the Act runs as under —

23 So the Civil Courts are not to settle, decide or deal with a matter which is by or under this Act required to be settled, decided or dealt with by the Mamlatdar etc

24 'Require' according to the Oxford Dictionary is 'Lay down a imperative' So the matters which are necessarily to be settled decided or dealt with by the Mamlatdar cannot be settled decided or dealt with by the Civil Court In this suit I am only concerned with S 14 and S 25 sections entitling a landlord to possession of the land from tenant for non-payment of rent In case the tenant fails to pay rent within the time prescribed in S 14 (1) (a) (i) of the B T & A L Act 1948 a landlord can terminate the tenancy S 25 then comes into play S 25 runs as under —

So I am to see whether this section — S 25 — necessarily requires the Mamlatdar to entertain applications for ejectment for non-payment of rent or it rests with the choice of the landlord to approach the Mamlatdar or the Civil Court

25 I must then turn to S 70 of the B T & A L Act and see as to whether the entertainment of an application under S 25 is one of the applications included in the duties and functions of a Mamlatdar under this Act If that application is included in that section, that will be an application which necessarily has to be made to the Mamlatdar and the Civil Court's jurisdiction will be barred under S 85 of the Act

26 S 70 enumerates the duties and functions of the Mamlatdar under the B T & A L Act 1948 in detail and runs as under —

27 If we carefully read this Sec it will be evident that entertaining an application under S 25 to eject a tenant is not one of the functions which necessarily has to be done by the Mamlatdar I am now referred to S 70 (n) and it is urged on behalf of Defts that "To take measures for putting the landlord or tenant into the possession of the land or dwelling house" necessarily includes an application under S 25 as filing an application under S. 25 necessarily requires the Mamlatdar to take measures for putting the landlord into possession of a land S 25 requires a Mamlatdar (1) to call upon the tenant to tender to the landlord the rent in arrears together with the costs of the proceeding within 15 days from the date of the order, (2) to pass an order directing that the tenancy had not been terminated if the tenant complies with the order, and (3) to pass an order for ejectment if the tenant fails to abide by the first order Only after the third order is passed the taking of measures to put the landlord into possession begins and not till then No measures to put the landlord into possession need be taken in case the tenant complies with the first order The second order also cannot be construed as a measure to put the landlord into possession of a land So I hold that only after the third order — the order for ejectment — the duty and function of the Mamlatdar under S 70 (n) of the Act begins and not till then I, therefore, reject the contention of Defts

28 Defts further point out Secs. 29 and 70 (o) and argue that under S 29 a landlord is prohibited from obtaining possession of any land except under an order of the Mamlatdar and that, therefore, a landlord asking for possession of any land for non-payment of rent must necessarily apply to the Mamlatdar under S 70 (o) of the Act There is a distinction between 'entitled to possession' and 'to obtain possession' "To obtain possession" is a matter for execution of a decree declaring a person as entitled to possession So I think that is a matter for the executing court—an executing civil court — and that court may not perhaps be able to give actual possession, being barred to do so under S 85 read with S 29 and S 70 (n) of the B T & A L Act, 1948 So that consideration need not come in the way of this Court to pass a decree for possession I, therefore, reject the second contention of the Defts

29 Thirdly, I am referred to S 73 (2) of the Act and it is argued that the Mamlatdar under the Act can

award possession and that the Mamlatdar is not only an executive authority to put a person in possession under S 70(n) of the Act but also a judicial authority That is the plain meaning of that section A Mamlatdar can award possession in case a landlord or a tenant applies to the Mamlatdar instead of approaching to Civil Court When can a Mamlatdar award possession ? Is it in all cases ? No Only in cases referred to the Mamlatdar under S 70 o) and not necessarily in all cases under the Act I, therefore, reject the third contention of the defts

30 Whether a civil court can pass a decree for possession, not being able to execute the decree, as per plain meaning of a special Act reserving that right in the special tribunal created by the Act was a matter for decision in a recent Madras case in I. L R 1950 Madras page 152 In that case under the Madras Non residential Buildings Rent Control Order 1942, clause 5 a tenant in possession of a non-residential building could not be evicted except under a direction by the Controller on an application made to him It was therein held that it cannot be said that these words are wide enough to deprive the civil courts of their jurisdiction to pass decrees and all that the rule contemplated was the control of the relief of eviction actual throwing out of the tenant Under the B T and A.L. Act 1948 too all that the provisions of S 29 and S 70(n) of the Act contemplate is (1) to reserve the right of actually handing over possession — or putting the landlord into possession as stated in S 70(n) — in the Mamlatdar under the Act and (2) to prohibit the landlord to obtain possession — actual possession — without an order of a Mamlatdar under S. 29 (2) of the Act I, therefore, rely on the ruling of the Madras High Court in 1950 Madras page 152 and decide this issue in the affirmative

Maharashtra Apex Bank Ltd.

Head Office — UDIPI S Kanara

ಈ ಬೆಂಕಿನ ೧೨೫ ಶೇರುಗಳು ಮಾರಾಟಕ್ಕಿವೆ. ಕೊಳ್ಳಲಿಚ್ಛಿಸುವವರು ಈ ಕೆಳಗಿನವರ ಕಡೆ ಸಮಕ್ಷಮ ಯಾ ಪತ್ರ ಬರೆದು ತಿಳಕೊಳ್ಳಬಹುದು

ವ್ಹಿ. ಎಲ್. ಕಾಮತ,
ಪೋ: ಬಿಣಗಾ (ಕಾರವಾರ)

ಮಹತ್ವದ ವಾರ್ತೆಗಳು.

— ರಝಾಕಾರರ ಹಾವಳಿ ನಡೆದಾಗ ಹೈದರಾಬಾದದ ಮುಖ್ಯಮಂತ್ರಿಗಳಾಗಿದ್ದ ಮತ್ತು ಶಸ್ತ್ರಬಲದಿಂದ ಹೈದರಾಬಾದವನ್ನು "ಸ್ವತಂತ್ರ, ಸಾರ್ವಭೌಮ ರಾಜ್ಯ" ವನ್ನಾಗಿ ಮಾರ್ಪಡಿಸಲು ಪ್ರಯತ್ನಿಸಿದ ಮೀರ ಲಾಯಕ ಅಲ್ಲಿಯನ್ನೂ ಅವರ ಸಹಕಾರಿ ಮಂತ್ರಿಗಳನ್ನೂ ಹೈದರಾಬಾದದ ಶರಣಾಗತಿಯ ನಂತರ ಅವರವರ ಮನೆಗಳಲ್ಲಿ ಸ್ಥಾನಬದ್ಧರನ್ನಾಗಿ ಮಾಡಿತ್ತು. ಸದರಿ ಮಂತ್ರಿಗಳ ಅನಾಚಾರ-ದುರಾಚಾರಗಳ ಚೌಕಶಿಯನ್ನೂ ನಡಿಸಿತ್ತು. ಇತ್ತೀಚೆಗೆ ಆ ಚೌಕಶಿಯು ಮುಗಿದು, ಬೇರೆ ಬೇರೆ ಮಂತ್ರಿಗಳ ವಿರುದ್ಧ ಖಟ್ಲೆ ಮಾಡಿಕೊಡುವ ಏರ್ಪಾಟು ಸಹ ಆಗುತ್ತಿತ್ತೆಂದು ತಿಳಿಯುತ್ತಿದೆ. ಆದರೆ ಮೀರ ಲಾಯಕ ಅಲ್ಲಿಯು ತನ್ನ ಹೆಂಡರು ಮಕ್ಕಳ ಸಹಿತ, ಮನೆಯ ಸುತ್ತಲೂ ಹಗಲು-ರಾತ್ರಿ ಪೋಲೀಸ ಕಾವಲು ಇದ್ದಾಗ್ಯೂ, ಓಡಿಹೋಗಿರುವನಾಗಿ ಕಳೆದ ತಾ [illegible]ನಾಗೆ ಒಮ್ಮೆಲೇ ತಿಳಿದು ಬಂತು! ಕೂಡಲೆ ಹೈದರಾಬಾದದ ಪೋಲಿಸ ಅಧಿಕಾರಿಗಳು ಹಿಂದುಸ್ಥಾನದ ಎಲ್ಲ ಪೋಲೀಸ ಠಾಣ್ಯಗಳಿಗೆ ವರದಿಯನ್ನು ಕೊಟ್ಟು, ರೇಲ್ವೆ ಸ್ಟೇಶನಗಳಲ್ಲಿಯೂ, ವಿಮಾನತಳಗಳಲ್ಲಿಯೂ, ಬಂದರಗಳಲ್ಲಿಯೂ ಕಾವಲಿರಲು ಸೂಚನೆ ಕೊಟ್ಟರು. ಹೈದರಾಬಾದದಲ್ಲಿ ಹಲವಾರು ಮನೆಗಳಲ್ಲಿ ಶೋಧವನ್ನೂ ಮಾಡಿದರು. ನಂತರ, ಹೈದರಾಬಾದದೊಳಗಿನ ಸೈನಿಕ ಸರಕಾರದ ಆದರೆ ಎಲ್ಲೂ ಪತ್ತೆ ಹತ್ತಲಿಲ್ಲ! ಲಾಯಕ ಅಲ್ಲಿಯು ತನ್ನ ಕುಟುಂಬೀಯರೊಡನೆ ಸುರಕ್ಷಿತವಾಗಿ ಕರಾಚಿಗೆ ತಲ್ಪಿರುತ್ತಾನೆಂದು ಮೊನ್ನೆ ಕರಾಚಿಯಿಂದ ಅಧಿಕೃತ ವಾರ್ತೆ ಬಂದಿದೆ. ಲಾಯಕ ಅಲ್ಲಿಯು ಹೇಗೆ ಮತ್ತು ಎಲ್ಲಿಂದ ಕರಾಚಿಗೆ ಹೋದನೆಂಬುದು ಮಾತ್ರ ಇನ್ನೂ ನಿರ್ದಿಷ್ಟವಾಗಿ ತಿಳಿದಿಲ್ಲ. ಮೀರ ಲಾಯಕ ಅಲ್ಲಿಯು ತಾ ೩ನೇಗೆ (ಹೈದರಾಬಾದದಲ್ಲಿ ಹೋಳಿ ಹಬ್ಬದ ಸಂಭ್ರಮ ನಡೆದಾಗ) ಮದ್ರಾಸ-ಮುಂಬಯಿ ಟಪಾಲ ಉಗಿ-ಬಂಡಿಯಿಂದ ಮುಂಬಯಿಗೆ ಪ್ರವಾಸ ಮಾಡಿ, ತಾ ೪ನೇ ಪ್ರಾತಃಕಾಲಕ್ಕೆ ಮುಂಬಯಿಯಕ್ಕಿಳಿದು, ಅದೇ ದಿನ ಬೆಳಗ್ಗೆ ೭||-ಆರ ಸುಮಾರಿಗೆ ಸಾಂತಾಕ್ರುಝು ವಿಮಾನ ನಿಲ್ದಾಣದಲ್ಲಿ ವಿಮಾನ ಹತ್ತಿ ಕರಾಚಿಗೆ ಹಾರಿ ಹೋದನೆಂದೂ, ಅವನ ಕುಟುಂಬೀಯರು ಒಂದೆರಡು ದಿನ ಮುಂಬಯಿಯಲ್ಲಿ ತಮ್ಮ ಆಪ್ತರೊಡನೆ (ಇವರಲ್ಲಿ ಕೆಲವರು ಹಿಂದುಗಳಿರುತ್ತಾರಂತೆ!) ಗುಪ್ತವಾಗಿ ಉಳಿದು "ಸರಸ್ವತೀ" ಹಡಗದಿಂದ ಕರಾಚಿಗೆ ಪ್ರಯಾಣ ಬೆಳಸಿದರೆಂದೂ ಮುಂಬಯಿಯಿಂದ ಒಂದು ವಾರ್ತೆ ಹಬ್ಬಿದೆ! ಮೀರ ಲಾಯಕ ಅಲ್ಲಿಗಾಗಲಿ ಅವರ ಕುಟುಂಬೀಯರಿಗಾಗಲಿ ವಿಮಾನ-ಮಾರ್ಗವಾಗಿ ಇಲ್ಲವೆ ಹಡಗದಿಂದ ಪರದೇಶ ಪ್ರಯಾಣಕ್ಕೆ ಅವಶ್ಯವಿರುವ ಅಪ್ಪಣೆ-ಚೀಟಿಗಳು ಹ್ಯಾಗೆ ಸಿಕ್ಕವೆಂದು ಮುಂಬಾಪುರಸ್ಥರು ಆಶ್ಚರ್ಯಪಡುತ್ತಿರುವರೆಂದೂ ಸುದ್ದಿಯುಂಟು! ಆದರೆ ಮೊನ್ನೆ ಇನ್ನೊಂದು ಸುದ್ದಿ ಬಂದಿದೆ. ಯಾವನೋ ಒಬ್ಬ ಅಜ್ಞಾತ ಅಮೇರಿಕನ್ ವೈಮಾನಿಕನು ಸಿಕಂದರಾಬಾದದಿಂದ ೧೫ ಮೈಲು ಹೊರಗಿರುವ ಒಂದು ಹಾಳು ಸುರಿಯುತ್ತಿರುವ ವಿಮಾನ ನಿಲ್ದಾಣದಲ್ಲಿ ತನ್ನ ವಿಮಾನವನ್ನು ಇಳಿಸಿ, ಲಾಯಕ ಅಲ್ಲಿಯನ್ನು ಅದರಲ್ಲಿ ಕೂಡ್ರಿಸಿಕೊಂಡು, ತಾ. ೪ನೇ ದಿನ ಕರಾಚಿಗೆ ಹಾರಿ ಹೋದನೆಂದು ಈ ಸುದ್ದಿ ಹೇಳುತ್ತಿದೆ! ಈ ಸುದ್ದಿಗಳ ಗೊಂದಲದಲ್ಲಿ ಯಾವುದನ್ನು ನಂಬಬೇಕು, ಯಾವುದನ್ನು ನಂಬಬಾರದು ತಿಳಿಯದಂತಾಗಿದೆ! ಮೀರ ಲಾಯಕ ಅಲ್ಲಿಯ ಬಾಬತ್ತು ೨೦ ಲಕ್ಷ ರೂ ಬೆಲೆ ಬಾಳುವ ಆಸ್ತಿಯನ್ನು ಈಗ ಹೈದರಾಬಾದ ಸರಕಾರವು "ದೇಶಭ್ರಷ್ಟರ ಆಸ್ತಿ" ಯೆಂದು ಜಪ್ತ ಮಾಡಿಟ್ಟಿದೆ; ಇನ್ನಿತರ ಮಂತ್ರಿಗಳನ್ನೂ ಅವರವರ ಮನೆಯಲ್ಲಿ ಇರಗೊಡದೆ ತುರಂಗಗಳಿಗೆ ಕಳಿಸಿ

ಹೊನ್ನಾವರದ ರಸಿಕ ಮಹಾಶಯರಿಗೆ

ಕೆಲವೆ ದಿವಸ ರಸದೂಟ!

ಕಲಾವೈಭವ ನಾಟ್ಯಸಂಘ, ಬೆಳಗಾಂವ

ಇವರ ಅಪೂರ್ವ ಕಾಣಿಕೆ

ವಧೂವರ

ಹೊನ್ನಾವರದಲ್ಲಿ ಕಟ್ಟಿಸಿದ ನವ್ಯ ಸ್ವಂತ ಥೇಟರಿನಲ್ಲಿ ತಾ ೨೧—೩—೫೦ನೇ ಮಂಗಳವಾರ ರಾತ್ರಿ ೧೦ ಘಂಟೆಗೆ

ಸಂಘದೊಡೆಯರು.
ಬಾಳಪ್ಪ ಏಣಗಿ.

ಜಾಹೀರ ನಿಮಂತ್ರಣೆ.

ಕಾಸರಕೋಡ ಶ್ರೀ ಗಣೇಶ ನಾರಾಯಣ ದೇವರ ವಿಷ್ಣು ರಥೋತ್ಸವವು ಇದೇ ವಿಕೃತ ಸಂ|| ದ ಚೈತ್ರ ಶು|| ಅಧಿಕ ಬುಧವಾರ ತಾ. ೨೨—೩—೧೯೫೦ ನೇಗೆ ಜರಗುವದು; ಚೈತ್ರ ಶು|| ೫ (ಶೇಷ) ಶುಕ್ರವಾರ ತಾ. ೨೪—೩—೧೯೫೦ನೇಗೆ ಶ್ರೀದೇವರ ನೂತನ ಧ್ವಜಸ್ತಂಭದ ಪ್ರತಿಷ್ಠಾ ಕಾರ್ಯ ನಡೆಯುವದು. ಶ್ರೀ ದೇವರ ಭಕ್ತರು ಈ ಮಹೋತ್ಸವಗಳಿಗೆ ಅವಶ್ಯ ಬಂದು ಶ್ರೀ ದೇವರ ಕೃಪಾಪ್ರಸಾದಕ್ಕೆ ಪಾತ್ರರಾಗಬೇಕಾಗಿ ವಿನಂತಿಯು ಇದೆ

ಮು|| ವಿರೋಧಿ ಸಂ|| ರದ ಫಾಲ್ಗುಣ ಕೃಷ್ಣ ೧೦ಮಿ, ತಾ. ೧೧—೩—೫೦ } ವೆಂಕಟಿ ಶ ಮೂಡ್ಲಗಿರಿ ಗಾಯತೊಂಡೆ ಪ್ರತಿಷ್ಠಾ ಕಾರ್ಯದ ಕಾರ್ಯವಾಹಕ

ಕಂಬಳಿಗಳು.

ಕುರುಬರ ಉಣ್ಣೆಯ ಉದ್ಯೋಗ ಬೆಳವಣಿಗೆಯ ಸಹಕಾರಿ ಸಂಸ್ಥೆ ಲಿ,
ರಾಣೆಬೆನ್ನೂರ ಜಿ ಧಾರವಾಡ.

ಜಾತ್ರೆಗೆ ಬೇಕಾಗುವ ಎಲ್ಲ ನಮೂನೆಯ ವಿಜಾಪುರ, ಬಾಗಲಕೋಟೆ, ರಾಣೆಬೆನ್ನೂರ ಕಂಬಳಿಗಳೂ, ಕೂಲಿ ಜನರಿಗೆ ಮತ್ತು ಬಡ ಜನರಿಗೆ ಬೇಕಾಗುವ ಕಡಿಮೆ ಕಿಮ್ಮತ್ತಿನ ಕಂಬಳಿಗಳೂ ನಮ್ಮಲ್ಲಿ ಸಿಗುತ್ತವೆ. ಎಲ್ಲ ಸಂಘಗಳೂ, ಸಹಕಾರಿ ಸಂಸ್ಥೆಗಳೂ, ವ್ಯಾಪಾರಸ್ಥರೂ ಇಂದೇ ಪತ್ರವ್ಯವಹಾರ ಮಾಡಿ ಲಾಭ ಪಡೆಯಬೇಕಾಗಿ ವಿನಂತಿ

ಚೇರಮನ್.

ಕೊಟ್ಟಿದೆ. ಲಾಯಕ ಅಲ್ಲಿಯ ಮನೆಯ ಸುತ್ತ ಕಾವಲು ಹಚ್ಚಿ ಪೋಲೀಸರಲ್ಲಿ ಹಲವಾರು ಜನರನ್ನು, ಲಾಯಕ ಅಲ್ಲಿಯ ಪಲಾಯನಕ್ಕೆ ಸಹಾಯ ಮಾಡಿದವರೆಂಬ ಆರೋಪವಿಟ್ಟು ನಿಜಾಮರ ಹಿಂದಿನ ಸೇನಾಪತಿ ಎಲ್. ಎಡ್ರೂಸ ಮತ್ತು ಹೈದರಾಬಾದದ ಬೇರೆ ಕೆಲವು ಪ್ರಮುಖ ಮುಸಲ್ಮಾನರನ್ನೂ ಸೆರೆ ಹಿಡಿದಿಟ್ಟಿವೆ. ಅದೇನಿದ್ದರೂ ಮೀರ ಲಾಯಕ ಅಲ್ಲಿಯ ಈ ಗುಪ್ತ ಪಲಾಯನವೆಂಬುದು ಹೈದರಾಬಾದ ಸರಕಾರಕ್ಕೂ, ಅಲ್ಲಿಯ ಪೋಲೀಸ ಇಲಾಖೆಗೂ, ಪರ್ಯಾಯದಿಂದ ಹಿಂದುಸ್ಥಾನ ಸರಕಾರದ ಗೃಹ ಇಲಾಖೆಗೂ ಒಂದು ದೊಡ್ಡ ಕಳಂಕವಾಗಿರುತ್ತದೆಂಬುದಕ್ಕೆ ಸಂದೇಹವಿಲ್ಲ!

— ಕಳೆದ ತಿಂಗಳಲ್ಲಿ ಪೂರ್ವ ಬಂಗಾಲದೊಳಗೆ ಪ್ರಾರಂಭವಾದ ಕೊಲೆ-ಕೊಳ್ಳೆ ಲೂಟಿಗಳೊಳಗೆ ೩|| ಸಾವಿರಕ್ಕಿಂತ ಹೆಚ್ಚಿಗೆ ಹಿಂದುಗಳ ಕೊಲೆಯಾಗಿರುತ್ತದೆಂದೂ, ಸುಮಾರು ೫ ಕೋಟಿ ರೂ. ಬೆಲೆ ಬಾಳುವ ಆಸ್ತಿಯ ನಾಶ ಇಲ್ಲವೆ ಲೂಟಿಯಾಗಿರುತ್ತದೆಂದೂ ಭಾರತ-ಸರಕಾರವು ತನ್ನ ಕಡೆ ಬಂದಿರುವ ವಿಶ್ವಸನೀಯ ಪುರಾವೆಯ ಮೇಲಿಂದ ಲೆಕ್ಕ ಹಾಕಿದೆ. ಸ್ತ್ರೀಯರ ವಿಟಂಬನೆ, ಬಲಾತ್ಕಾರದ ಧರ್ಮಾಂತರ ಇವುಗಳ ಅಂಕಿ-ಸಂಖ್ಯೆಗಳು ಇನ್ನೂ ತಿಳಿದಿಲ್ಲವಂತೆ. ಪಾಕಿಸ್ತಾನಿಗಳ ಈ ಅಮಾನುಷ ಅತ್ಯಾಚಾರಗಳಿಂದ ಪಶ್ಚಿಮ ಬಂಗಾಲವು ಕ್ಷುಬ್ಧವಾಗಿರುತ್ತಿದ್ದರೂ ಪಂ|| ಜವಾಹರಲಾಲರು ಸ್ವತಃ ಎರಡಾವರ್ತಿ ಕಲಕತ್ತೆಗೆ ಭೆಟ್ಟಿ ಕೊಟ್ಟು ಜನರಿಗೆ ಶಾಂತತೆಯಿಂದ ಇರಲು ಬೋಧಿಸಿರುವದರಿಂದ ಮತ್ತು ಪೂರ್ವ ಪಾಕಿಸ್ತಾನದೊಳಗಿನ ಅಲ್ಪಸಂಖ್ಯಾಕರ ಅಂದರೆ ಅಲ್ಲಿರುವ ಹಿಂದುಗಳ ವಿತ್ತ-ಜೀವಿತಗಳ ಹಾಗೂ ಮಾನಮರ್ಯಾದೆಗಳ ಸಂರಕ್ಷಣೆಯ ಬಗ್ಗೆ ಭಾರತ ಸರಕಾರವು ತನ್ನ ಕೈಲ ವಸ್ತು ಪ್ರಯತ್ನ ಮಾಡುವದೆಂದು ಭರವಸೆ ಕೊಟ್ಟಿದ್ದರಿಂದ ಪಶ್ಚಿಮ ಬಂಗಾಲದಲ್ಲಿ ಸಂಪೂರ್ಣ ಶಾಂತತೆ ನೆಲಸಿದೆ. ಅಲ್ಲಿ ನಡೆದಿರುವ ಕೆಲವು ಅತ್ಯಾಚಾರಗಳ ಬುಡದಲ್ಲಿ ಪಾಕಿಸ್ತಾನದ ಗುಪ್ತಚಾರರು ಇಲ್ಲವೆ ಪಂಚಮಸ್ತಂಭೀಯರು ಇರತಕ್ಕರೆಂಬುದು ಈಗೀಗ ಬೆಳಕಿಗೆ ಬಂದಿದೆ "ಪಾಕಿಸ್ತಾನದಲ್ಲಿ ಹಿಂದುಗಳ ಮೇಲೆ ಅತ್ಯಾಚಾರಗಳಾಗುತ್ತವೆಂದು ದೂರುವ ಭಾರತದಲ್ಲೂ ಅಲ್ಪಸಂಖ್ಯ ಮುಸಲ್ಮಾನರ ಮೇಲೆ ಅತ್ಯಾಚಾರಗಳು ನಡೆದಿವೆ ನೋಡಿರಿ!" ಎಂದು ಜಗತ್ತಿಗೆ ತೋರ್ಪಡಿಸುವದಕ್ಕಾಗಿ ಈ ಗುಪ್ತಚಾರ-ಪಂಚಮಸ್ತಂಭೀಯರೇ ಕಳೆದ ಒಂದೆರಡು ವಾರಗಳಲ್ಲಿ ಕಲಕತ್ತಾ, ಮುಂಬಯಿ, ನಾಗಪುರ, ದಿಲ್ಲಿ ವಗೈರೆ ಪ್ರಮುಖ ನಗರಗಳಲ್ಲಿ ದಂಗೆಗಳನ್ನು ಎಬ್ಬಿಸಲೆಳಸಿದ್ದರು. ಆದರೆ ಸರಕಾರದವರ ದಕ್ಷತೆಯ ಮೂಲಕ ಅವು ಮಿಡಿಯಿರುವಾಗಲೇ ಚಿವುಟಲ್ಪಟ್ಟವು. ಈ ದಂಗೆಗಳಲ್ಲಿ ಭಾಗ ವಹಿಸಿದವರು ಪಾಕಿಸ್ತಾನದ ಸಂಬಂಧಿಕರು ಇಲ್ಲವೆ ಅಭಿಮಾನಿಗಳಿರುತ್ತಾರೆಂಬುದೂ ಈಗ ಪುರಾವೆಯಿಂದ ಸಿದ್ಧವಾಗಹತ್ತಿದೆ. ಇಂಥ ದೇಶದ್ರೋಹಿಗಳನ್ನು ದೇಶದೊಳಗೆ ಇಟ್ಟುಕೊಳ್ಳದೆ ಅವರಿಗೆ ಕೂಡಲೇ ಹೊರದೂಡಬೇಕೆಂದೂ ಇಲ್ಲದಿದ್ದರೆ ಅವರು ದೇಶಕ್ಕೆ ಒಂದಿಲ್ಲೊಂದು ದಿನ ಕೊಳ್ಳಿ ಇಡುವರೆಂದೂ ದೇಶಪ್ರೇಮಿಗಳನೇಕರು ಸರಕಾರಕ್ಕೆ ಸೂಚನೆ ಕೊಡುತ್ತಿದ್ದಾರೆ

— ಕಾಶಿಮ ರಝ್ವಿಯು ಈಗ ತನ್ನ ಬಚಾವಿಯನ್ನು ತಾನೇ ಮಾಡಿಕೊಳ್ಳುವನೆಂದೂ ವಕೀಲರ ವಕಾಲತು ರದ್ದುಪಡಿಸಿರುವನೆಂದೂ ತನ್ನ ಖಟ್ಲೆಗಳ ವಿಚಾರಣೆ ನಡೆಸುವ ನ್ಯಾಯಾಧೀಶರ ಮುಂದಕ್ಕೆ ಅರುಹಿಕೊಂಡಿದ್ದಾನೆ ತನ್ನ ಬಚಾವಿಗಾಗಿ ಪಾಕಿಸ್ತಾನದಲ್ಲಿರುವ ಹಲವಾರು ಸಾಕ್ಷಿದಾರರ ಸಾಕ್ಷಿ ಬರಕೊಳ್ಳುವ ಬಗ್ಗೆ ನ್ಯಾಯಾಲಯವು ಓರ್ವ ಕಮಿಶನರ ಯಾನೆ ಪ್ರತಿನಿಧಿಯನ್ನು ಕಳಿಸಿಕೊಡಬೇಕಾಗಿಯೂ ಅವನ ಅರ್ಜಿ ದಾಖಲಾಗಿದೆ ಈ ಕಮಿಶನನ ಕಾರ್ಯ ಹೇಗೆ ಸಾಧ್ಯವಾದೀತೆಂಬುದೊಂದು ಪ್ರಶ್ನೆ ನ್ಯಾಯಾಧೀಶರ ಮುಂದುಂಟಾಗಿದೆ ಅದನ್ನೇ ನ್ಯಾಯಾಧೀಶರು ಈಗ ಆಲೋಚಿಸುತ್ತಿದ್ದಾರೆ. ವಕೀಲರ ಅಭಾವದಲ್ಲಿ ಕಮಿಶನರರ ಮುಂದೆ ತನ್ನ ಸಾಕ್ಷಿದಾರರ ಪುರಾವೆ ಮಂಡಿಸಲು ಕಾಶಿಮ ರಝ್ವಿಯೇ ಪಾಕಿಸ್ತಾನಕ್ಕೆ ಹೋಗುವ ಪ್ರಸಂಗ ಬರಬಹುದು! ಆಗ ಕಾಶಿಮ ರಝ್ವಿಯನ್ನು ಪಾಕಿಸ್ತಾನಕ್ಕೆ ಒಯ್ಯುವದು ಇಲ್ಲವೆ ಕಳಿಸಿಕೊಡುವದು ಹೇಗೆ ಮತ್ತು ಒಮ್ಮೆ ಅವನನ್ನು ಅಲ್ಲಿ ಕಳಿಸಿಕೊಟ್ಟರೆ ಅವನನ್ನು ತಿರುಗಿ ಹಿಂದುಸ್ಥಾನಕ್ಕೆ ತರುವದು ಹ್ಯಾಗೆ ಎಂಬೀ ಪ್ರಶ್ನೆಗಳನ್ನೂ ನ್ಯಾಯಾಧೀಶರು ಆಲೋಚಿಸಬೇಕಾಗುವದು

— ಸ್ವತಂತ್ರ ಭಾರತದಲ್ಲಿ ಗೋವೆಯಂಥಹ ಪರಕೀಯರ ಪ್ರಭುತ್ವಕ್ಕೊಳಪಟ್ಟ "ಬಿಂದಿ"ಗಳಿರುವದು ಅನಿಷ್ಟ ಮತ್ತು ಅಸುರಕ್ಷಿತವಿರುತ್ತದೆಂದೂ ಗೋವಾ, ದೀವ, ದಮಣ ಇವುಗಳನ್ನು, ಅಲ್ಲಿಯ ನಿವಾಸಿಗಳು ಸಮ್ಮತಿಸಿದರೆ, ಪೋರ್ತುಗಾಲ ಸರಕಾರವು ಭಾರತಕ್ಕೆ ಬಿಟ್ಟುಕೊಡಬೇಕೆಂದೂ ಭಾರತ ಸರಕಾರವು ಇತ್ತೀಚಿಗೆ ಪೋರ್ತುಗಾಲ ಸರಕಾರಕ್ಕೆ ಒಂದು ರಾಯಸ ಬರೆದಿರುವದೆಂದು ಪ್ರಕಟವಾಗಿದೆ ಭಾರತದ ಪ್ರತಿನಿಧಿಗಳಾಗಿ ಲಿಸ್ಬನದಲ್ಲಿರುವ ಶ್ರೀ|| ಪಿ. ಏ ಮೆನನ್ನರು ಈ ಸಂಬಂಧದಲ್ಲಿ ಪೋರ್ತುಗೀಜ ಸರಕಾರದ ವಿದೇಶ ಇಲಾಖೆಯವರೊಡನೆ ಬಹಳ ದಿನಗಳಿಂದ ಮಾತುಕತೆಗಳನ್ನು ನಡೆಸಿದ್ದಾರೆಂದೂ ಸುದ್ದಿಯುಂಟು

— ಕಾಶ್ಮೀರದ ಸಂಬಂಧದಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ಇರುವ ತಂಟೆಯನ್ನು ಬಗೆಹರಿಸಲು ಈಗ ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಮಂಡಳವು ಓರ್ವ ಮಧ್ಯಸ್ಥನನ್ನು ನೇಮಿಸಲು ನಿರ್ಣಯಿಸಿರುತ್ತಿದ್ದು, ಈಗ ಮಂಡಳವು ಆ ಮಧ್ಯಸ್ಥನನ್ನು ಹುಡುಕಹತ್ತಿದೆ. ಅಮೇರಿಕೆಯ ಎಡ್ಮಿರಲ್ ನಿಮಿಟ್ಜ ಮತ್ತು ಹಿಂದೆ ಪಾಲಿಸ್ತಾನದಲ್ಲಿ ಆರಬರ ಮತ್ತು ಯಹೂದಿಗಳ ನಡುವಿನ ತಂಟೆಯನ್ನು ಬಗೆಹರಿಸಿದ ಡಾ|| ರಾಲ್ಫ ಬುಂಚ ಇವರಿಬ್ಬರ ಹೆಸರುಗಳು ತುರ್ತಕ್ಕೆ ಕೇಳಿಬರುತ್ತಿವೆ

— ಕಳೆದ ಬುಧವಾರ ದಿಲ್ಲಿಯ ಪಾರ್ಲಿಮೆಂಟಿನಲ್ಲಿ ಸಾರಿಗೆ ಇಲಾಖೆಯ ಬೇಡಿಕೆಗಳ ಚರ್ಚೆ ನಡೆದಾಗ ಆ ಇಲಾಖೆಯ ಮಂತ್ರಿಗಳಾಗಿರುವ ಶ್ರೀ|| ಕೆ. ಸಂತಾನಮ್ ಇವರು ಆಸಾಮ ಸರಕಾರದ ಮೇಲೆ ಭಯಂಕರ ಆರೋಪಗಳನ್ನು ಮಾಡಿ, ಆಸಾಮ ಸರಕಾರವು ಸಾರ್ವಜನಿಕ ಹಣ ದುಂದು ಮಾಡುವದರಲ್ಲಿ ನೈಪುಣ್ಯ ಪಡೆದಿದೆಯೆಂದು ಉದ್ಗರಿಸಿದರು! ಶಿಲಾಂಗದಿಂದ ಚಾರ್ರೈಲಾರಿ ತನಕ ೨೩೦ ಮೈಲುದ್ದ ಮತ್ತು ಚಾರ್ರೈಲಾರಿಯಿಂದ ಅಗರ್ತಾಲಾ ತನಕ ೧೨೦ ಮೈಲುದ್ದ ಹೀಗೆ ಆಸಾಮ ಸರಕಾರವು ಎರಡು ಮಾರ್ಗಗಳನ್ನು ಯೋಗ್ಯ ಇಂಜಿನಿಯರರ ಸಲಹೆ ಪಡೆಯದೆ ರಚಿಸಿದೆಯೆಂದೂ, ಆ ಮಾರ್ಗಗಳ ಮೇಲೆ ಮಾಡಿದ ವೆಚ್ಚವೆಲ್ಲ ಅನವ್ಯಯವಾಗಿದೆಂದೂ ಈ ದುಂದುಗಾರಿಕೆಗೆ ಜವಾಬದಾರರ ತೋರುವ ಉಚ್ಚ ದರ್ಜೆಯ ಇಂಜನಿಯರರಿಗೆಲ್ಲ ತುರ್ತಕ್ಕೆ ಅಧಿಕಾರಭ್ರಷ್ಟ ಮಾಡತಕ್ಕದ್ದೆಂದೂ ಅವರು ತಿಳಿಸಿ, ಈ ಇಡೀ ಪ್ರಕರಣದ ಪೂರ್ಣ ಚೌಕಶಿಯಾಗುವದು ಅವಶ್ಯವುಂಟೆಂದೂ ಪ್ರತಿಪಾದಿಸಿದರು ಶ್ರೀ|| ಸಂತಾನಮ್ ಇವರ ಈ ಉದ್ಗಾರಗಳು ಆಸಾಮ ಸರಕಾರದ ಮಂತ್ರಿಗಳನ್ನು ಕೆರಳಿಸಿವೆ! ಅವರು ಶ್ರೀ|| ಸಂತಾನಮ್ ಇವರ ಮಾತುಗಳನ್ನು ಕಡು ಕೋಪದಿಂದ ನಿಷೇಧಿಸಲಾರಂಭಿಸಿದ್ದಾರೆ!

— ವಿಜಾಪುರದೊಳಗಿನ ಸುಪ್ರಸಿದ್ಧ ಗೋಲಗುಮಟವು ಈಗ ನಾದುರುಸ್ತ ಆಗಿದೆಯಂತೆ. ಅದರ ದುರುಸ್ತಿಗಾಗಿ ಭಾರತ ಸರಕಾರವು ೨ ಲಕ್ಷ ೧೮ ಸಾವಿರ ರೂ. ಮಂಜೂರ ಮಾಡಿದೆಂದು ತಿಳಿಯುತ್ತದೆ.

— ಅಮೇರಿಕೆಯಲ್ಲಿ ಈಗ ಬಟಾಟೆಗಳ ಸಂಗ್ರಹ ಮಿತಿಮೀರಿದೆಯಂತೆ. ೮ ಕೋಟಿ ಬುಶೆಲ್ಲ (= ಸುಮಾರು ೧೬ ಕೋಟಿ ಚಟ್ಟಿಗಳಷ್ಟು) ಬಟಾಟೆಗಳು ಗಿರಾಕಿಗಳಿಲ್ಲದೆ ಬಿದ್ದುಕೊಂಡಿವೆಯಂತೆ! ಈ ಸಂಗ್ರಹದ ವಿಲೆ ಮಾಡುವದು ಹೇಗೆಂಬುದೊಂದು ಸಮಸ್ಯೆ ಅಲ್ಲಿಯ ಸರಕಾರದ ತಲೆ ಕೆಡಿಸಹತ್ತಿದೆಯಂತೆ! ಪರದೇಶಗಳ ಗಿರಾಕಿಗಳಿಗೆ ಈ ಸಂಗ್ರಹವನ್ನು ಪುಕ್ಕಟೆಯಾಗಿ (೧೦೦ ರತ್ತಲುಗಳಿಗೆ ಒಂದೇ ಮುಕ್ಕಾಲಾಣೆ ಬೆಲೆ ತಕ್ಕೊಂಡು) ಕೊಡಲು ಆ ಸರಕಾರವು ಸಿದ್ಧವಾಗಿದೆಯಂತೆ!

ಸ್ಥಾನಿಕ ವೃತ್ತಾಂತ.

ಕುಮಟಾ— ಬಿಸಿಲು ಮಿಗಿಲಾಗುತ್ತಿದೆ. ಆಗಾಗ ಮೋಡಗಳೂ ಆಗುತ್ತಿವೆ ಮಾರ್ಗಗಳಲ್ಲಿ ಧೂಳಿನ ಕಾಟ ಬಹಳವಾಗಿದೆ. ಪೆಟ್ರೋಲ ಸಿಗದ್ದರಿಂದ ಮ್ಯುನಿಸಿಪಾಲಿಟಿಯವರು ನೀರು ಹಾಕುವದನ್ನು ನಿಲ್ಲಿಸಿದ್ದಾರೆ.

ಆಚೆಯ ರವಿವಾರ ಮಧ್ಯಾಹ್ನ ಇಲ್ಲಿಯ ತಾಲೂಕ ಕಚೇರಿಯಲ್ಲಿ ಜಿಲ್ಲಾಧಿಕಾರಿ ರಾ|| ಜಾಧವ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಪ್ರಮುಖ ಒಡೆಯ-ಒಕ್ಕಲಿಗರ ಸಭೆಯೊಂದು ಕೂಡಿತ್ತು. ಒಕ್ಕಲತನದ ಕಾನೂನಿನ ಬಗ್ಗೆ ಕೆಲ ಕಾಲ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಸದ್ಯಕ್ಕೆ ೧೨ ಬಗೆಯ ಒಕ್ಕಲತನದ ಪ್ರಕರಣಗಳಿವೆಂದೂ, ಒಕ್ಕಲತನದ ಕಾನೂನಿನ ಪರಿಚಯ ಅವಶ್ಯವಾಗಿದೆಂದೂ, ಅದರ ಚೌಕಶಿಗಾಗಿ ಒಂದು ಚೌಕಶಿ ಸಮಿತಿ ನೇಮಿಸಬೇಕೆಂದೂ ಒಡೆಯರು ಸೂಚಿಸಿದರು. ಈಗಿರುವ ಒಕ್ಕಲತನದ ಕಾನೂನಿನಲ್ಲಿ ವ್ಯತ್ಯಾಸ ಮಾಡುವದು ಅಗತ್ಯವಿಲ್ಲೆಂದೂ, ಆದರೆ ಕೆಲವನ್ನಷ್ಟು (ಸ್ವಂತ ಸಾಗುವಳಿಗಾಗಿ ಒಡೆಯರಿಗೆ ಬಿಟ್ಟುಕೊಡುವ ಕಲಮುಗಳು) ರದ್ದುಗೊಳಿಸಬೇಕೆಂದೂ ಒಕ್ಕಲಿಗರ ಮುಂದಾಳುಗಳ ಅಭಿಪ್ರಾಯವಾಯಿತು!

ಮುಂಬಯಿ ಜೈಲಿನಲ್ಲಿ ಇರಿಯಲ್ಪಟ್ಟ ಒಕ್ಕಲಿಗರ; ಜನಗಳು ಹಾಗು ಗ್ರಾಮೋದ್ಯೋಗಗಳು ಇವುಗಳ ಪ್ರದರ್ಶನದ ಮುಕ್ತಾಯ ಅಂದು ಆಗುವದಂತೆ. ಈ ಹೊತ್ತು ಸಂಚಿ ಪ್ರದರ್ಶನಕ್ಕೆ ಬಂದ ಉತ್ಪನ್ನ ವಸ್ತುಗಳ ಮಾರಾಟ—ವ್ಯವಸ್ಥೆಗಳನ್ನು ಕೊಡುವದಕ್ಕಾಗಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಭೆ ಸೇರಿದೆ.

ಕಳೆದ ಮಂಗಳವಾರ ಮುಂಜಾನೆ ನಗರಾಧ್ಯಕ್ಷರ ನಿಮಂತ್ರಣೆಯಂತೆ, ಜಿಲ್ಲಾಧಿಕಾರಿ ರಾ|| ಜಾಧವ ಇವರ ಅಧ್ಯಕ್ಷತೆಯಲ್ಲಿ ನಗರ ಸಭೆಯ ಸಭಾಗೃಹದಲ್ಲಿ ಸೇರಿದ ಸಭೆಯಲ್ಲಿ ಶ್ರೀ ಎಸ್. ವ್ಹಿ. ಕೃಷ್ಣಮೂರ್ತಿರಾಯರು ಭಾರತದ ಹೊಸ ರಾಜ್ಯಘಟನೆಯ ಮೇಲೆ ಇಂಗ್ಲೀಷ ಭಾಷೆಯಲ್ಲಿ ಬೋಧಪ್ರದ ವ್ಯಾಖ್ಯಾನವನ್ನಿತ್ತರು. ಘಟನೆಯ ರಚನೆಯ ಪ್ರಾರಂಭಕ್ಕೆ ಇದ್ದ ಪರಿಸ್ಥಿತಿ, ಆ ಮೇಲೆ ಆದ ಸ್ಥಿತ್ಯಂತರಗಳು ಮತ್ತು ಈಗಿರುವ ದೇಶದ ಪರಿಸ್ಥಿ

[illegible]

ಕಾರವಾರ— (ತಾ ೧೬–೩ ೫೦) [illegible]

[illegible]

ಜಿಲ್ಲಾ ಸಮಾಚಾರ

(ಒನೇ ಪುಟದಿಂದ ಮುಂದುವರಿದದ್ದು)

[illegible]

ಕುಮಟೆಯಲ್ಲಿ ಬಾಲಗಂಧರ್ವರ ಆಗಮನ.

ಸ್ವಯಂವರ, ದ್ರೌಪದಿ, ಏಕಚ ಪ್ಯಾಲಾ ಕ ನಸ್ಥೀಪಾತ್ರಾ, ಕಚ ದೇವಯಾನಿ, ಮಾನಾಪಮಾನ ಮೊದಲಾದ ನಾಟಕಗಳ ಅಭಿನೇತೃಗಳಾದ 'ಗಂಧರ್ವ ಸಂಗೀತ ನಾಟಕ ಮಂಡಳಿ' ಇವರು ಕುಮಟಾ [illegible] ತಿಂಗಳ [illegible] ಬರುವರು

ಪ್ರಥಮ ಪ್ರಯೋಗ — (ರುಕ್ಮಿಣಿ) ಸ್ವಯಂವರ

[illegible]

ಶ್ರೀ ಪರ್ತಗಾಳಿ ಮಠದ ಶ್ರೀರಾಮನವಮಿಯ ಮಹೋತ್ಸವ

[illegible]

ಪರ್ತಗಾಳಿಗೆ ಶ್ರೀ ದ್ವಾರಕಾನಾಥ ತೀರ್ಥರ ಆಗಮನ.

[illegible]

ಜಿಲ್ಲಾ ಸಮಾಚಾರ.

[illegible]

ಸಿದ್ದಾಪುರ— [illegible]

ಪತ್ರಿಕಾ—ಪ್ರಕಟನೆ.

[illegible]

ಪ್ರಯಾಣಿಕರ ಇಂದಿನ ಆವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ—ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — [illegible]

ಮಾಲಕ: — ಮ್ಯಾನೇಜಮೆಂಟ ಪೈ.

ಬಿಟ್ಟು ಹೋಗಿದ್ದಾನೆ ಎಂದು ತಿಳಿಸಿದನು. [illegible]

[illegible]

(ತಾ ೪-೩-೫೦) [illegible]

ಈ ನೌಕರರು [illegible] ಅಂಗಡಿಯಲ್ಲಿ [illegible]

[illegible]

ಭಟ್ಕಳ— (ತಾ ೫-೩-೫೦) [illegible]

[illegible]

ಮಾಡಿದರು ಕನ್ನಡಿಗರ ಪ್ರಾಂತೀಯ ಮನೋಭಾವನೆ ಎಲ್ಲಿಗೆ ಮುಟ್ಟಿದೆ ನೋಡಿರಿ!

(ತಾ ೨-೩-೫೦) ಸಿದ್ಧಾಪುರ ಅಂಗಡಿಗಳಲ್ಲಿ [illegible]

(ತಾ ೧೬-೩-೫೦) [illegible]

ಇಲ್ಲಿಯ [illegible] ಸಂಬಳ ಸಿಕ್ಕುವಂತೆ ಮಾಡಿ?

[illegible]

ಮಂಕಿ— ತಾ ೬-೩ ೫೦ರ 'ವೃತ್ತ'ದಲ್ಲಿ [illegible] ಸಂಬಂಧದಲ್ಲಿ ಪ್ರಕಟ[illegible] ನಾಟಕಗಳನ್ನು [illegible]

[illegible]

ಹೊನ್ನಾವರ— (ತಾ ೬-೩-೫೦) [illegible] ಇಂಗ್ಲಿಷ ಶಾಲೆಯನ್ನು [illegible]

[illegible]

(ಮುಂದೆ ೪ನೇ ಪುಟ ನೋಡಿರಿ)

ಇದನ್ನು ಪಾಂಡುರಂಗ ಕೃಷ್ಣ ಶೆಣವಿ (ಸಂಪಾದಕ) ಇವರು ಕಾರವಾರ [illegible] ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 27 3-1950.

ಕಾನಡಾವೃತ್ತ.

ವರ್ಷ ೩೨.] THE KANARA NEWS. [ಸಂಚಿಕೆ ೩೯.

ಕುಮಟಾ. ಸೋಮವಾರ, ತಾ ೨೭—೩—೧೯೫೦

ವರ್ಗಣಿಯ ದರ

ಜಾಹೀರಾತುಗಳ ದರ

ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಮ್ ।

ಕಾನಡಾ ವೃತ್ತ.

[illegible]

ವಿಕೃತಿ ಸಂ|| ಚೈತ್ರ ಶು|| ೮ಮಿ, ಸೋಮವಾರ

ಅವಿವೇಕದ ಕಾನೂನು.

ನಮ್ಮ ಮುಂಬಯಿಯ ಕಾಂಗ್ರೆಸ ಸರಕಾರವು "ಬಹುಸಂಖ್ಯಾಕ ಪ್ರಜೆಗಳ ಹಿತ್ತಿನ ಸಲುವಾಗಿ" ಕಾನೂನುಗಳ ಮೇಲೆ ಕಾನೂನುಗಳನ್ನೂ, ಯೋಜನೆಗಳ ಮೇಲೆ ಯೋಜನೆಗಳನ್ನೂ ಮಾಡುತ್ತಿದೆ. ಕಳೆದ ೩|| ವರ್ಷಗಳಲ್ಲಿ ಈ ಸರಕಾರವು ರಚಿಸಿರುವ ಕಾನೂನುಗಳ ಸಂಖ್ಯೆಯನ್ನೂ ಯೋಜನೆಗಳ ವಿಸ್ತಾರವನ್ನೂ ನೋಡಿದರೆ ಕಣ್ಣುಗಳು ಕುಕ್ಕುತ್ತಿವೆ, ಮನಸ್ಸು ತಲ್ಲಣಗೊಳ್ಳುತ್ತಿದೆ. ಯಾವದೇ ಕಾನೂನು ಮಾಡುವಾಗ ಆಳವಾದ ವಿಚಾರ, ಸೂಕ್ಷ್ಮ ಪರಿಶೀಲನೆ ಮತ್ತು ಪರಿಣಾಮಗಳ ಪರ್ಯಾಲೋಚನೆ ಮಾಡಬೇಕೆಂಬ ಅರಿವೇ ಈ ಸರಕಾರಕ್ಕೆ ಇಲ್ಲವೆಂದು ದುಃಖದಿಂದ ನಮೂದಿಸಬೇಕಾಗಿದೆ. ರಾಜಕಾರಣದಲ್ಲಿ ನುರಿತ ಹಿಂದಿನ ಬ್ರಿಟಿಶ ಸರಕಾರವು ಯಾವದೇ ಕಾನೂನು ಮಾಡಬೇಕಾದಾಗ್ಯೂ ಸರ್ವಸಾಮಾನ್ಯವಾಗಿ ಜಾಯಿಂಟ ಮಂಡಳಗಳನ್ನೂ, ಪರಿಶೀಲಕ ಸಮಿತಿಗಳನ್ನೂ ನೇಮಿಸಿ, ಪರಿಸ್ಥಿತಿಯ ಸರ್ವಾಂಗೀಣ ವಿಚಾರವನ್ನು ಮಾಡುತ್ತಿತ್ತು. ಇಂಡಿಯನ್ ಪಿನಲ ಕೋಡನ್ನು ಮೆಕಾಲೇ ದೊರೆಗಳು ೧೮೩೭ರಲ್ಲಿ ತಯಾರಿಸಿಕೊಟ್ಟಾಗ್ಯೂ ಅದು ಕಾಯದೆಯಾದದ್ದು ೧೮೬೦ರಲ್ಲಿ. ಪುರಾವೆ ಕಾನೂನಿನ ಮಸೂದೆಯು ೧೮೬೮ರಲ್ಲಿ ತಯಾರಾಗಿತ್ತಿದ್ದರೂ ಅದು ಕಾನೂನಾಗಲು ೪ ವರ್ಷ ಹಿಡಿಯಿತು. ಹಿಂದೀ ರಾಜಕಾರಣದಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿದ ಮತ್ತು ಪೂಜ್ಯ ಮಹಾತ್ಮರಿಗೆ ಅಸಹಕಾರದ ಮಾರ್ಗವನ್ನು ಹಿಡಿಸಿದ "ರೌಲೆಟ ಕಾನೂನು" ಮಾಡಬೇಕಾದರೂ ಸರಕಾರವು ರೌಲೆಟ ಸಮಿತಿಯನ್ನು ನೇಮಿಸಿ, ಅದರ ವರದಿಯನ್ನು ಬರಮಾಡಿಕೊಂಡು, ಸಂಪೂರ್ಣ ವಿಚಾರದಿಂದಲೇ ಆ ಕಾನೂನನ್ನು ರಚಿಸಿತ್ತೆಂಬುದನ್ನು ನಾವು ಮರೆಯಲಾಗದು. ನುರಿತ ರಾಜಕಾರಣಿಗಳು ಅನುಸರಿಸಬೇಕಾದ, ಅನುಸರಿಸುತ್ತಿರುವ ಮಾರ್ಗವಿದೇ. ಅಂತಹ ಇಕ್ಕಟ್ಟಿನ ಪ್ರಸಂಗ— ಯುದ್ಧದಂತಹ ಪ್ರಸಂಗ— ವಿದ್ದರೆ ಮಾತ್ರ ಭರಭರ ಸೂಚನೆಗಳನ್ನೂ ಕಟ್ಟಳೆಗಳನ್ನೂ ಮಾಡಬೇಕು. ಸಾಮಾನ್ಯ ಶಾಂತಿಯ ಕಾಲದಲ್ಲಿ ವಿಚಾರ ಮಾಡಿ ಪೂರ್ಣ ಸಾಪೂರ್ಣ ವಿಚಾರಮಾಡಿ ಕಾನೂನನ್ನು ರಚಿಸಬೇಕು. ಅಂದರೆ ಅವು ಹಿಂದವಾಗು ಶಕ್ಯವಿದ್ದಷ್ಟು ನಿರ್ದೋಷವಾಗುತ್ತವೆ. ಅವುಗಳ ಪರಿಷ್ಕರಿಸುವ ಪ್ರಸಂಗ ಇಲ್ಲವೆ! ಪರಿಣಾಮದಿ ಬೆರಗುಗೊಳ್ಳುವ ಪ್ರಸಂಗ ಬರುವದಿಲ್ಲ. "ವರೆ ನಮ್ಮ ಮುಂಬಯಿಯ "ಜನತಾ ಸ" ರಕಾರ"ಕ್ಕೆ ಇದ್ಯಾವದೂ ಗೊತ್ತಿಲ್ಲ! ಮನಸ್ಸಿಗೆ ಬಂದಂತೆ ಭರಭರನೆ ಕಾನೂನು-ಕಟ್ಟಳೆಗಳನ್ನು ಮಾಡಿ ಕಾಲ್ಪನಿಕ ಪುರುಷಾರ್ಥ ಸಾಧಿಸಿದ ಜಂಭ ಕೊಚ್ಚುತ್ತದೆ. ಒಂದೇ ಅದಕ್ಕೆ ಗೊತ್ತು. ಒಕ್ಕಲತನದ ಕಾನೂನೊಂದೇ ಈ ವರ್ತನೆಗೆ ಸಮರ್ಪಕ ಉದಾಹರಣೆ. ೧೯೩೭ರಲ್ಲಿ ಅಧಿಕಾರಗ್ರಹಣ ಮಾಡಿದ ಖೇರ-ಮುರಾರಜಿಯವರ ಕಾಂಗ್ರೆಸ ಮಂತ್ರಿಮಂಡಳವು ಪ್ರಾಂತದೊಳಗಿನ ಬೇರೆ ಬೇರೆ ಭಾಗಗಳ ಒಗಿನ ಪರಿಸ್ಥಿತಿಯ ಎಳ್ಳಷ್ಟೂ ಅಭ್ಯಾಸ ಮಾಡದೆ, ಜಿಲ್ಲೆಯ ಒಕ್ಕಲತನದ ಪ್ರಕಾರಗಳನ್ನು ತಿಳಕೊಳ್ಳದೆ "ಸಬ್ ಘೋಡೇ ಬಾರಾ ಟಕ್ಕೇ" ಎಂಬಂತೆ ಎಲ್ಲ ಒಗೆಯ ಒಕ್ಕಲತನಗಳಿಗೂ ಅನ್ವಯಿಸುವ ಒಂದು ಕಾನೂನನ್ನು ರಚಿಸಬಹುದು ಉದ್ಯುಕ್ತವಾಗಿ ೧೯೩೯ರಲ್ಲಿ ಮೊದಲನೇ ಒಕ್ಕಲತನದ ಕಾನೂನನ್ನು ರಚಿಸಿ ಬಿಟ್ಟಿತ್ತು. ಸುದೈವದಿಂದ ಆಗ ಕಾಂಗ್ರೆಸ ಮಂತ್ರಿ-ಮಂಡಳಕ್ಕೆ ಕಾನೂನ ಮಂಡಳದಲ್ಲಿ ನಿಃಶಂಕ ಬಹುಮತ ಸಿಕ್ಕಿದ್ದಿಲ್ಲ. ಅದರಿಂದ ೧೯೩೯ರ ಕಾನೂನನ್ನು ರಚಿಸುವಾಗ ಅದು ಕೈಬಿಗಿಯಾಗಿಯೇ ಬೇಕಾಯಿತು. ಈ ಕಾನೂನನ್ನು ಕಾರ್ಯರೂಪದಲ್ಲಿಳಿಸಲು ಮಾತ್ರ ಈ ಮಂತ್ರಿಮಂಡಳವು ಅಧಿಕಾರದಲ್ಲುಳಿಯಲಿಲ್ಲ. ನಡುವೆ ಮಹಾಯುದ್ಧದ ಕಟಕಟಿಯುಂಟಾದ್ದರಿಂದ ರಾಜೀನಾಮೆಯನ್ನಿತ್ತು ಅದು ಹೊರಬೀಳಬೇಕಾಯಿತು. ಕಾಂಗ್ರೆಸ ಮಂತ್ರಿಮಂಡಳದ ಈ ಕಾನೂನಿನ ಚಿಕ್ಕೆಯ ಬಗ್ಗೆ ತಮಗೆ ಸಂದೇಹವಿರುತ್ತಿದ್ದರೂ, ೧೯೪೦-೪೬ರಲ್ಲಿ ಸವರ್ನರ್ ಅಧಿಕಾರ ಪಟ್ಟ ಪ್ರಾಂತಾಧಿಪರು ಈ ಕಾನೂನನ್ನು ಪ್ರಾಂತದ ಕೆಲವೊಂದು ಭಾಗಗಳಲ್ಲಿ ಜಾರಿಯಲ್ಲಿ ತಂದರು. ಆದರೆ ಆ ಕಾನೂನಿನ ಇಷ್ಟಾನಿಷ್ಟ ಪರಿಣಾಮಗಳ ಪರೀಕ್ಷಣವನ್ನಾಗಲಿ ನಿರೀಕ್ಷಣವನ್ನಾಗಲಿ ಅವರು ಮಾಡಲಿಲ್ಲ. ಯುದ್ಧದಿಂದುಂಟಾದ ಅಘೋಷಿತಪೂರ್ವ ಸ್ಥಿತ್ಯಂತರಗಳಲ್ಲಿ ಆ ಪರೀಕ್ಷಣ-ನಿರೀಕ್ಷಣ ಮಾಡುವಷ್ಟು ಸವಡೂ ಅವರಿಗೆ ದೊರೆಯಲಿಲ್ಲ. ಮುಂದೆ ೧೯೪೬ರ ಎಪ್ರಿಲ ತಾರೀಕಿಗೆ ಕಾಂಗ್ರೆಸ್ಸು ಪುನಃ ಅಧಿಕಾರ-ಸೂತ್ರಗಳನ್ನು ಕೈಯಲ್ಲಿ ಕೊಂಡಿತು. ಈ ಅಧಿಕಾರ ಗ್ರಹಣವಾದ ಒಂದೇ ವಾರದಲ್ಲಿ ಒಕ್ಕಲತನದ ಕಾನೂನು ಇಡೀ ಪ್ರಾಂತಕ್ಕೆ ಅನ್ವಯಿಸಲ್ಪಟ್ಟಿತು. ಅದರ ಪರಿಣಾಮವೇನಾಗುತ್ತದೆಂಬುದರ ಹಾದಿಯನ್ನಾದರೂ ಸರಕಾರವು ನೋಡಬಹುದಾಗಿತ್ತು. ಆದರೆ ಅದ್ಯಾವುದನ್ನೂ ನೋಡುವ ಗೋಜಿಗೆ ಹೋಗದೆ ಅದೇ ವರ್ಷದ ಮಳೆಗಾಲದಲ್ಲಿ ಕಂದಾಯ ಮಂತ್ರಿಗಳಾದ ಮಾನ್ಯ ಮೊರಾರಜಿ ದೇಸಾಯಿಯವರು ಒಂದು ವಿಸ್ತೃತ ತಿದ್ದುಪಡಿಯ ಮಸೂದೆಯನ್ನು ತಂದು ಮೂಲ ಕಾನೂನಿನ ರೂಪವನ್ನು ತಮ್ಮ ಇಷ್ಟದಂತೆ ಬದಲಿಸಿಬಿಟ್ಟರು! ಶ್ರೀ|| ದತ್ತೋಪಂತ ಬೆಳವಿ, ಶ್ರೀ|| ಕಲ್ಲಾಪುರ ನರಸಿಂಗರಾವ ದೇಸಾಯಿಯವರಂತಹ ಅನುಭವಿಗಳು ಮಾಡಿದ ಟೀಕೆಯನ್ನಾಗಲಿ ತೋರಿಸಿಕೊಟ್ಟ ಲೋಪದೋಷಗಳನ್ನಾಗಲಿ ಅರಿತುಕೊಂಡು ಅಳವಡಿಸಿಕೊಳ್ಳುವ ಜಾಣ್ಮೆ, ತಾಳ್ಮೆ ಯಾ ವಿವೇಕವನ್ನು ಅವರು ಆಗ ತೋರ್ಪಡಿಸಲಿಲ್ಲ! ತಮ್ಮ ಬೆನ್ನಿಗಿರುವ ದೊಡ್ಡ ಬಹುಮತದ ಸಹಾಯದಿಂದ ಅವರು ಆ ಟೀಕೆಯನ್ನೆಲ್ಲ ಗಾಳಿಗೆ ತೂರಿಬಿಟ್ಟರು! ಮಾತ್ರ ಇಡೀ ಪ್ರಾಂತದಲ್ಲಿ ಒಡೆಯ-ಒಕ್ಕಲಿಗರೊಳಗೆ ತಂಟೆ ವ್ಯಾಜ್ಯಗಳನ್ನೆಬ್ಬಿಸಿಬಿಟ್ಟರು! ಇಷ್ಟರಿಂದಲೂ ಅವರಿಗೆ ಸಮಾಧಾನವಾಗಲಿಲ್ಲ. ಕಾನೂನಿನ ಅಮಲಬಜಾವಣೆಯನ್ನು ಪೂರ್ವಪರಂಪರಾಗತ ರೀತಿಯಂತೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೂ ನ್ಯಾಯಾಲಯಗಳಿಗೂ ಸ್ವಾತಂತ್ರ್ಯವನ್ನು ಕೊಡದೆ ಅಂತರಂಗದಿಂದ ಪರಿಪತ್ರಗಳನ್ನೂ ಒಳ-ಹುಕುಮಗಳನ್ನೂ ಹೊರಡಿಸಲಾರಂಭಿಸಿದರು! ಇದರಿಂದ ನಮ್ಮ ಜಿಲ್ಹೆಯ ಟೆನನ್ಸಿ ಕೋರ್ಟುಗಳಲ್ಲಿ ಅದ್ಭುತ ಪ್ರಕಾರಗಳು ನಡೆಯುತ್ತಿದ್ದವು! ಟೆನನ್ಸಿ ಅವ್ವಲ ಕಾರಕೂನರು ಸ್ವೀಕರಿಸಿ ನಿರ್ಣಯಿಸಿದ ನೂರಾರು ದಾವೆಗಳು ಮುಂದೆ ಅನಧಿಕೃತವೆಂದು ಸಾರಲ್ಪಟ್ಟವು! ಅಧಿಕಾರವುಂಟೆಂದು ಭಾವಿಸಿ ತಾವು ಸ್ವೀಕರಿಸಿದ ಸಾವಿರಾರು ದಾವೆಗಳನ್ನು ಅವರು ತಮಗೆ ಅಧಿಕಾರವಿಲ್ಲೆಂದು ಹೇಳಿ ತಿರಸ್ಕರಿಸಬೇಕಾದ ಪ್ರಸಂಗ ಬಂತು! ಎತ್ತ ನೋಡಿದತ್ತ ವ್ಯಾಜ್ಯಗಳು, ಕಲಹಗಳು, ತಂಟೆಗಳು ತಲೆದೋರಿದವು! ಸರ್ವಪ್ರಯತ್ನ ಮಾಡಿ ಬೆಳೆಯನ್ನು ಹೆಚ್ಚಿಸಬೇ

THE BANK OF RURAL INDIA LTD.

(Incorporated in IndianUnion Liability of Members Limited)

HEAD OFFICE — "Satyabhama Bhuvanam , KARWAR. N. K

Offices at — KARWAR, KUMTA, SIRSI, HONAVAR, YELLAPUR BHATKAL, SIDDAPUR, ANKOLA, HUBLI & DHARWAR

Authorised Capital „ Rs 10,00 000.
Subscribed Capital „ Rs 5,00 000
Paid-up Capital & Reserves „ Rs. 5-08 602-8-0

Rates of Interest on Deposits

Current a/c @ 1 % p a Savings Bank a/c @ 2½ %

Fixed Deposits for 3 months @ 3% per annum
for 6 months @ 3½% „
for 12 months or more @ 4%

All kinds of modern Banking business transac

Karwar, Jan 1950

P X GRACI
MANAGING DIRECTOR

ಕಾದ ಮತ್ತು ನಾಡಿನ ಆಹಾರ-ಪರಿಸ್ಥಿತಿಯನ್ನು ಸುಧಾರಿಸಲು ಒಡೆಯರೂ ಒಕ್ಕಲಿಗರೂ ನೆರವನ್ನೀಯಬೇಕಾದ ಕಾಲದಲ್ಲಿ ಅವರು ಹೊಲ ಭೂಮಿಗಳನ್ನು ದುರ್ಲಕ್ಷಿಸಿ ಕೋರ್ಟ-ಕಚೇರಿಗಳ ಕಟ್ಟೆಗಳಲ್ಲಿ ಕೂಡಿ ಕಚ್ಚಾಡುತ್ತಿರುವ ದೃಶ್ಯವು ಎಲ್ಲೆಲ್ಲೂ ಕಣ್ಣಿಗೆ ಬೀಳಹತ್ತಿತು! ಸಾಗುವಳಿಗಾರರ ಸ್ಥಿತಿಗತಿಯನ್ನು ಸುಧಾರಿಸಿ ಭೂಸಾಗುವಳಿಯನ್ನು ಉತ್ತಮಗೊಳಿಸಬೇಕೆಂದೂ ನಾಡಿನ ಆಹಾರ-ಸಂಪತ್ತನ್ನು ಬೆಳಸಬೇಕೆಂದೂ ಕಾನೂನಿನ ರಚನೆಯ ಕಾಲಕ್ಕೆ ಕಾನೂನು-ಕರ್ತರು ತಮ್ಮ ಮುಂದಿಟ್ಟುಕೊಂಡಿದ್ದ ಉದ್ದೇಶವಾಗಲಿ ಗುರಿಯಾಗಲಿ ಸಾಧ್ಯವಾಗುವ ಚಿಹ್ನವೆಲ್ಲೂ ಕಂಡು ಬರಲಿಲ್ಲ. ತದ್ವಿರುದ್ಧವಾಗಿ ಸಾಗುವಳಿಯೂ ಉತ್ಪತ್ತಿಯೂ ಮೊದಲಿಗಿಂತ ನಿಕೃಷ್ಟವಾಗಹತ್ತಿತು! ಈ ನಾಲ್ಕು ವರ್ಷಗಳಲ್ಲಿ ಮಾಮಲೇದಾರರು ಹೊರಡಿಸುತ್ತಿರುವ ಬೆಳೆಯ ಪ್ರಕಟನೆಗಳೇ ಈ ಮಾತನ್ನು ಸಿದ್ಧಗೊಳಿಸುತ್ತವೆ! ಸರಕಾರದವರ ಅಕ್ಕಿ-ಭತ್ತಗಳ ಖರೀದಿಯ ಅಂಕಿಗಳೂ ಈ ಮಾತನ್ನು ದೃಢಪಡಿಸುತ್ತವೆ. ೧೯೪೬ರಲ್ಲಿ ತಿದ್ದುಪಡಿ ಹೊಂದಿದ ಕಾನೂನು ಅಮಲಿನಲ್ಲಿ ಬರುವ ಮುಂಚೆಯೇ ೧೯೪೫-೪೬ರ ಸಾಗುವಳಿ ಮುಗಿದಿತ್ತು; ಆ ವರ್ಷ ಸರಕಾರವು [illegible] ಟನ್ನು ಅಕ್ಕಿ-ಭತ್ತಗಳನ್ನು ನಮ್ಮ ಜಿಲ್ಹೆಯಲ್ಲಿ ಖರೀದಿಸಲು ಸಮರ್ಥವಾಗಿತ್ತು. ಮತ್ತು ಆ ವರ್ಷ ಸರಕಾರದವರು ಸೀಧಾ-ಹಂಚಿಕೆಗಾಗಿ [illegible] ಟನ್ನು ಕಾಳನ್ನಷ್ಟೇ ಹೊರಗಿಂದ ತರಿಸಿಕೊಳ್ಳಬೇಕಾಯಿತು. ಆದರೆ ಒಕ್ಕಲತನದ ಅಮಲಿನ ಮೊದಲನೇ ವರುಷದಲ್ಲಿ, ೧೯೪೭-೪೮ರಲ್ಲಿ, ಸರಕಾರವು ಬರೇ ೫,೫೦೦ ಟನ್ನು ಅಕ್ಕಿ-ಭತ್ತಗಳನ್ನು ಜಿಲ್ಹೆಯಲ್ಲಿ ಖರೀದಿಸಲು ಶಕ್ತವಾಗಿ, ಸೀಧಾ-ವಿತರಣಕ್ಕಾಗಿ ೯,೩೩೩ ಟನ್ನು ಕಾಳನ್ನು ಹೊರಗಿಂದ ತರಿಸಿಕೊಳ್ಳಬೇಕಾಯಿತು! ಒಕ್ಕಲತನದ ಕಾನೂನಿನಿಂದ ಸಾಗುವಳಿದಾರ ಒಕ್ಕಲಿಗರು ಎಷ್ಟು ಸ್ಫೂರ್ತಿಗೊಂಡು ಎಷ್ಟು ಹೆಚ್ಚು ಬೆಳೆ ಬೆಳಸಿದರು ಮತ್ತು ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸಿದರು ಎಂಬುದು ಈ ಮಾತುಗಳಿಂದ ನಿಚ್ಚಳವಾಗುತ್ತದೆ. ಆದರೆ ಒಕ್ಕಲತನ ಕಾನೂನಿನ ಪ್ರತಿಷ್ಠಾಪನಾಚಾರ್ಯರಾದ ಮಾನ್ಯ ಮುರಾರಜಿಯವರಿಗಾಗಲಿ ಅವರ ಸಹಕಾರಿಗಳಿಗಾಗಲಿ ಇದೆಲ್ಲ ದೃಷ್ಟಿಗೆ ಬಿದ್ದಿಲ್ಲ; ಬೀಳುವದೂ ಇಲ್ಲ! ತಾವು ನಿರ್ಮಿಸಹೊರಟ ಗಣಪತಿಯು ಗಣಪತಿಯಾಗದೆ ಮಂಗದ ಮರಿಯಾಗಿದೆಂಬುದರ ಅರಿವೂ ಅವರಿಗಿಲ್ಲ! ಒಕ್ಕಲತನದ ಕಾನೂನು ಇಷ್ಟ-ಫಲದಾಯಿಯಾಗದಿರಲಿಕ್ಕೆ ಕಾರಣಗಳೇನೆಂಬುದರ ನಿಷ್ಪಕ್ಷಪಾತ ಮತ್ತು ನ್ಯಾಯ-ಸಮ್ಮತ ಚೌಕಶಿ ತಜ್ಞರಿಂದ ಮಾಡಿಸಬೇಕೆಂಬ ವಿಚಾರವೂ ಅವರಿಗೆ ಹೊಳೆಯಲೊಲ್ಲದು! ಒಕ್ಕಲಿಗ ಸಮಾಜದ ಉತ್ಕರ್ಷಕ್ಕಾಗಿ ಮತ್ತು ಭೂ-ಸಾಗುವಳಿಯ ಸುಧಾರಣೆಗಾಗಿ ತಾವು ರಚಿಸಿದ ಕಾನೂನು ಯಶಸ್ವಿ ಕಾರ್ಯ ಮಾಡದಿರಲಿಕ್ಕೆ ಒಡೆಯ ಸಮಾಜವೇ ನಡುವೆ ಕಂಟಕಪ್ರಾಯವಾಗಿರುತ್ತದೆಂಬುದೊಂದು ಸಿದ್ಧಾಂತವನ್ನು ಮಾಡಿಕೊಂಡು, ಆ ವರ್ಗದ ಉಚ್ಚಾಟನ ಮಾಡುವ ಮಹತ್ವಾಕಾಂಕ್ಷೆ ಮತ್ತು ಹುಮ್ಮಸ ಅವರು ಹಿಡಿದಿದ್ದಾರೆ! ಭೂಮಾಲಿಕರೆಲ್ಲ ತೋಳಗಳಂತಿರುವರೆಂದೂ, ಕುರಿಗಳಂತಿರುವ ಒಕ್ಕಲಿಗರನ್ನು ಹಿಂಡಿ ತಿಂದು ಕೊಬ್ಬಿರುವರೆಂದೂ ಅವರು ಘಂಟಾಘೋಷವಾಗಿ ಹೇಳುತ್ತಾರೆ! ಮತ್ತು ಆ ತೋಳಗಳನ್ನು ನಿದಾನವಾಗಿ ನಿರ್ನಾಮಗೊಳಿಸುವ ಮಾತನ್ನಾಡುತ್ತಿದ್ದಾರೆ! ಈ ತಮ್ಮ ಧ್ಯೇಯ-ಸಾಧನೆಗಾಗಿ ಅವರು ೧೯೪೮ನೇ ಇಸವಿಯ ಹೊಸ ಒಕ್ಕಲತನದ ಕಾನೂನನ್ನು ರಚಿಸಿಕೊಂಡಿದ್ದಾರೆ. ಈ ಕಾನೂನಿನ ಕೇವಲ ಅಂಶಗಳು ಸಮತೋಲ ಬುದ್ಧಿಯ ಮತ್ತು ಸರ್ವರನ್ನೂ ಸಮದೃಷ್ಟಿಯಿಂದ ನೋಡುವ ಯಾವ ವಿಚಾರವಂತನಿಗೂ ಒಪ್ಪಿಗೆಯಾಗುವಂತಿಲ್ಲ. "ಒಕ್ಕಲಿಗರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಸುಧಾರಿಸುವದಕ್ಕಾಗಿ ಹಾಗೂ ಜನರು ಬೇಸಾಯದ ಭೂಮಿಯ ಪೂರ್ಣ ಮತ್ತು ಉತ್ತಮ ಉಪಯೋಗ ನಿಶ್ಚಯವಾಗಿಯೂ ಪಡೆಯುವಂತೆ ಮಾಡುವದಕ್ಕಾಗಿ" ಎಂದು ಈ ಕಾನೂನಿನ ಪ್ರಸ್ತಾವನೆಯಲ್ಲಿ ಬರೆದ ಕಾನೂನಿನ ಉದ್ದೇಶ ಎಷ್ಟರ ಮಟ್ಟಿಗೆ ಸಫಲವಾಗುವದೆಂದು ಕಾನೂನಕರ್ತರು ಆಲೋಚಿಸಿದಂತೆ ತೋರುವದಿಲ್ಲ. ಒಡೆಯರ ಹಕ್ಕುಗಳನ್ನು ಒಂದಿಲ್ಲೊಂದು ಬಗೆಯಿಂದ, ಒಂದಿಲ್ಲೊಂದು ಕ್ರಮದಿಂದ ಸಂಪೂರ್ಣದಲ್ಲಿ ತರುವದೇ ಈ ಕಾನೂನಿನ ನಿಜವಾದ ಉದ್ದೇಶವಿರಬೇಕೆಂದೂ, ಒಡೆಯರನ್ನು ದಣಿಸಿ ಒಕ್ಕಲಿಗರಿಗೆ ಸುಖಿಯಾಗಬೇಕೆಂಬ ವಿಚಾರವೇ ಸರಕಾರದ ತಲೆಯಲ್ಲಿ ಸುಳಿಯುತ್ತಿರಬೇಕೆಂದೂ ಈ ಕಾನೂನಿನ ಬೇರೆ ಬೇರೆ ಅಂಶಗಳನ್ನು ಮೇಲಿಂದ ನೋಡಿದ ಓದುವವರಿಗೆ ಸಹ ಹೊಳೆಯದಿರಲಾರದು! ಒಡೆಯರಿಗೆ ನ್ಯಾಯ ಕೊಡಬೇಕೆಂಬ ಕಲ್ಪನೆ ಈ ಕಟ್ಟಳೆಯ ಯಾವ ಭಾಗದಲ್ಲೂ ಕಾಣುವದಿಲ್ಲ. ಭೂಮಿಯನ್ನು ರೂಪಿತಗೊಳಿಸಿದವನು ಯಾರು ಎಂಬುವದನ್ನು ನೋಡದೆ, ಅದರಲ್ಲಿ ಒಡೆಯನು ಎಷ್ಟು ಹಣ ಮತ್ತು ಶ್ರಮ ಸುರುವಿರಬಹುದೆಂಬುದನ್ನು ಲಕ್ಷಿಸದೆ ಅಥವಾ ಒಕ್ಕಲಿಗನು ಆ ಭೂಮಿಯಲ್ಲಿ ಏನೇನು ಕೆಲಸ ಮಾಡುತ್ತಾನೆ ಎಷ್ಟು ಶ್ರಮ ವಹಿಸುತ್ತಾನೆ ಎಂಬುದನ್ನು ಸಹ ಗಣಿಸದೆ ಎಲ್ಲ ಒಕ್ಕಲಿಗರಿಗೂ ಈ ಕಟ್ಟಳೆಯು ಬೆಳೆಯ ೨/೩ ಯಾ ೩/೪ ಪಾಲು ಕೊಡುತ್ತಿದೆ; ಒಡೆಯರಿಗೆ ⅓ ಯಾ ¼ ಪಾಲು ಕೊಡುತ್ತಿದೆ! ಒಡೆಯರ ಈ ಪಾಲನ್ನು ಪುನಃ ಸರಕಾರವು ತನ್ನ ಮರ್ಜಿಗೆ ಬಂದಂತೆ ಇಳಿಸುತ್ತ, ಇಳಿಸುತ್ತ ಶೂನ್ಯಾಂಕಕ್ಕೆ ಮುಟ್ಟಿಸಲು ಅಧಿಕಾರಪಟ್ಟಿದೆ! ಒಡೆಯನಿಗೆ ಯೋಗ್ಯ ಪರಿಹಾರ ಕೊಡದೆ ಒಂದು ದಿನ ಅವನನ್ನು ಘಟ್ಟಕ್ಕೆ ಯಾ ದೇಶಾಂತರಕ್ಕೆ ಸರಕಾರವು ಓಡಿಸಬಹುದು! "ಅಪವರ್ಗೋ ಧನಂ ರಕ್ಷೇತ್" ಎಂಬ ಉಕ್ತಿಗೆ ಅನುಗುಣವಾಗಿ, ತಮ್ಮ ಸಂಸಾರಕ್ಕೆ ಬೇಕಾಗುವ ಅಕ್ಕಿ, ಕಾಯಿ ಮೊದಲಾದ ಜೀನಸುಗಳು ಕೆಲವಂಶದಿಂದಾದರೂ ತಮ್ಮ ಕೈಯಲ್ಲಿರಬೇಕೆಂಬ ವಿಚಾರದಿಂದ ಒಡೆಯರು ಹೊಲಭೂಮಿಗಳನ್ನು ಸಂಪಾದಿಸಿದ್ದಿರುತ್ತದೆ. ಆದರೆ ಅವರ ಉದ್ದೇಶವನ್ನು ಸರಕಾರವು ವಿಫಲಗೊಳಿಸಿ, ಹಣವನ್ನೇ ಅವರು ಕೊಂಡು ತಮ್ಮ ಜೀವನಕ್ಕೆ ಬೇಕಾದ ಸಾಮುಗ್ರಿಯನ್ನು ಪೇಟೆಯಲ್ಲಿ ಕೊಂಡುಕೊಳ್ಳಲು ಹಚ್ಚಬಹುದು! ಒಡೆಯನಿಗೆ ಭೂಮಿ ಮಾರುವ ಇಷ್ಟವಿರಲಿ ಇಷ್ಟವಿಲ್ಲದಿರಲಿ, ಒಕ್ಕಲಿಗನು ಒಡೆಯನ ಭೂಮಿ ಕೊಂಡುಕೊಳ್ಳಲು ಅಪೇಕ್ಷಿಸಿದರೆ, ಸರಕಾರವು ನಾಮ-ಮಾತ್ರ ಹಣವನ್ನು ಒಡೆಯನಿಗೆ ಕೊಟ್ಟು ಅವನ ಭೂಮಿಯನ್ನು ಬಲಾತ್ಕಾರದಿಂದ ಒಕ್ಕಲಿಗನಿಗೆ ಕೊಡಬಹುದು! ಒಡೆಯನ ಭೂಮಿಯಲ್ಲಿ ಒಕ್ಕಲಿಗನು ಗಿಡಮರಗಳನ್ನು ನೆಟ್ಟು ಬೆಳಸಿದರೆ ಅವುಗಳ ಉತ್ಪನ್ನ ಪೂರ್ಣ ಆ ಒಕ್ಕಲಿಗನೇ ತಿನ್ನಬೇಕೆಂದು ಈ ಕಟ್ಟಳೆ ವಿಧಿಸುತ್ತಿದೆ! ಒಕ್ಕಲಿಗನ ಪರಿಶ್ರಮವಿಲ್ಲದೆ ತನ್ನಿಂದ ಬೆಳೆದ ಗಿಡಮರಗಳ ಫಲವೆಲ್ಲವೂ ಪುನಃ ಅವನಿಗೆ [illegible] ಸಿಗಬೇಕಂತೆ! ಗಡಿ-ಭೂಮಿಗಳ ಕಟ್ಟುಗಳ ವಾರ್ಷಿಕ ಯಾ ಚಾಲತಿ ದುರುಸ್ತಿಯನ್ನು ಒಕ್ಕಲಿಗನು ಮಾಡಬೇಕೆಂದು ಇಲ್ಲವೆ ದೊಡ್ಡ ದುರುಸ್ತಿಯಲ್ಲಿ ಕಾಯಿಕ ಶ್ರಮ ಮಾಡಬೇಕೆಂದು ಕರಾರು ಯಾ ಪದ್ಧತಿಯಿರುತ್ತಿದ್ದರೂ ಈ ದುರುಸ್ತಿಯನ್ನು ಒಡೆಯನೇ ಮಾಡಬೇಕೆಂದೂ, ಅವನು ಮಾಡದಿದ್ದರೆ ಒಕ್ಕಲಿಗನು ಮಾಡಿ ಅದರ ವೆಚ್ಚ ಒಡೆಯನಿಂದ ಪಡೆಯಬಹುದೆಂದೂ ಈ ಕಟ್ಟಳೆ ಮಾಡಿದೆ! ಗೇಣಿಯ ವಿಷಯದಲ್ಲಿ, ಒಡೆಯ ಹಕ್ಕು-ಬಾಧ್ಯತೆಗಳ ವಿಷಯದಲ್ಲಿ ಹಿಂದಾದ ಡಿಕ್ರಿ ಕರಾರು, ಪದ್ಧತಿಗಳೆಲ್ಲ ರದ್ದಾದರೂ, ಅವುಗಳಂತೆ ಒಕ್ಕಲಿಗನಿಗೆ ಸಿಕ್ಕ ಹಕ್ಕು-ಅಧಿಕಾರಗಳು ಮಾತ್ರ ಊರ್ಜಿತವಿರುವವಂತೆ! ಯಾವದೊಂದು ಕಡೆ ಒಕ್ಕಲಿಗರು ತುಂಟತನ ಮಾಡಿ ಒಡೆಯನ ಭೂಮಿ ಹಾಳು ಕೆಡಹಿದರೆ ಸರಕಾರವು ಆ ಭೂಮಿಯ ಆಡಳಿತೆಯನ್ನು ತನ್ನ ಅಧಿಕಾರಿಗಳ ಕಡೆಯಿಂದ ಮಾಡಿಸಿ ಆ ಒಡೆಯನಿಗೆ ಭೂಮ್ಯಂಶ ಕೊಡುವದು! ಭಾರತದ ಹೊಸ ರಾಜ್ಯಘಟನೆಯ ೧೯ನೇ ಕಲಮು ಪ್ರಜೆಗಳಿಗೆ ಸ್ಥಿರ-ಚರ ಆಸ್ತಿಯನ್ನು ಸಂಪಾದಿಸಲಿಕ್ಕೂ, ಬೇಕಾದಂತೆ ಅದರ ವಿನಿಯೋಗ ಮಾಡಲಿಕ್ಕೂ ಸ್ವಾತಂತ್ರ್ಯ ಕೊಟ್ಟಿರುತ್ತಿದ್ದರೂ, ಈ ಕಟ್ಟಳೆಯ ೬೩, ೬೪ನೇ ಕಲಮುಗಳು ಮುಂಬಯಿ ರಾಜ್ಯಾಂಗದಲ್ಲಿ ಹೊಲಭೂಮಿಯುಳ್ಳ ದುರ್ದೈವಿ ಭೂಮಾಲಿಕರ ಆ ಸ್ವಾತಂತ್ರ್ಯದ ನಿರ್ದಲನ ಮಾಡುತ್ತಿದೆ. ಈ ಎಲ್ಲ ಅಂಶಗಳು ಭಾರತೀಯ ಪ್ರಜಾರಾಜ್ಯದ ಘಟನೆಯ ೧೯ ಮತ್ತು ೩೧ನೆಯ ಕಲಮುಗಳಿಗೆ ಎಷ್ಟರ ಮಟ್ಟಿಗೆ ಸರಿಬೀಳುತ್ತವೆಂಬುದನ್ನು ಕಾಯಿದೆ ಪಂಡಿತರು ವಿಮರ್ಶಿಸಬೇಕು.

ಇವೆಲ್ಲವುಗಳಗಿಂತ ಈ ಕಟ್ಟಳೆಯ ೮೫ನೇ ಮತ್ತು ೮೯ನೇ ಕಲಮುಗಳು ವಿಶೇಷ ತಿರಸ್ಕರಣೀಯವಿರುತ್ತವೆ. ಇಷ್ಟುದಿನ ನಾವು ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಿ ಮುಲ್ಕಿ ಅಧಿಕಾರಿಗಳಿಗೆ ನ್ಯಾಯದಾನದ ಅಧಿಕಾರ ಕೊಡಬಾರದೆಂದು ಪ್ರತಿಪಾದಿಸುತ್ತ ಬಂದಿದ್ದೇವೆ. ಕಾಂಗ್ರೆಸ್ಸು ತನ್ನ ಜನ್ಮದಿಂದಲೂ ಈ ತತ್ವ ಪ್ರತಿಪಾದಿಸುತ್ತ ಬಂದಿದೆ. ಆದರೆ ಪ್ರಸ್ತುತ ಕಾನೂನು ದಿವಾಣಿ ನ್ಯಾಯಾಲಯಗಳ ಅಧಿಕಾರಗಳನ್ನು ಕಸಿದುಕೊಂಡು, ನ್ಯಾಯ-ನೀತಿಗಳ ತತ್ವವನ್ನು ಅರಿಯದ, ಕಾನೂನು-ಕಟ್ಟಳೆಗಳ ಮರ್ಮವನ್ನು ತಿಳಿಯದ ಮುಲ್ಕೀ ಕಾರ್ಯಾಂಗದ ಅಧಿಕಾರಿಗಳಿಗೆ ಅವನ್ನು ಒಪ್ಪಿಸಿದೆ! ಈ ಒಂದೇ ಮಾತೇ ಈ ಕಾನೂನಿನ ಸ್ವರೂಪವನ್ನೂ, ಅದರ ಉತ್ಪಾದಕರ ಮನೋವೃತ್ತಿಯನ್ನೂ ತ್ರಯಸ್ಥರಿಗೆ ತೋರ್ಪಡಿಸಬಲ್ಲದು.

ಇವೀಗ ಈ ಕಾನೂನು ಭಾರತದ ಘಟನೆಯ ೩೧(೬)ನೇ ಕಲಮಿನಂತೆ ರಾಷ್ಟ್ರಪತಿಗಳ ಮಂಜೂರಿ ಪಡೆಯಲು ದಿಲ್ಲಿಗೆ ಹೋಗಿರಬೇಕು. ಆಗ ರಾಷ್ಟ್ರಪತಿಗಳು ಈ ಕಾನೂನಿನ ನಿಜ ಸ್ವರೂಪವನ್ನು ವಿಮರ್ಶಿಸಿ, ಅದರೊಳಗಿನ ಅನಿಷ್ಟ ಅಂಶಗಳನ್ನು ತೆಗೆದೊಗೆಯುವಂತೆ ಮುಂಬಯಿ ಸರಕಾರಕ್ಕೆ [illegible] ಮಾಡಬೇಕೆಂದೂ, ಈ ಕಾನೂನಿನಿಂದ ನಮ್ಮಲ್ಲಿ ಹುಟ್ಟಿದ ಗೊಂದಲವನ್ನು ಶಾಂತಗೊಳಿಸುವ [illegible] ಮಾಡಬೇಕೆಂದೂ ನಮ್ಮ ನಮ್ರ ಅರಿಕೆಯು [illegible]

ಬಿಸಿ ಬಿಸಿ ಸುದ್ದಿ.

ಕಾರವಾರ— (ತಾ ೨೭) ಗೋಕರ್ಣದ [illegible] ಮಹಾಬಲೇಶ್ವರದ [illegible] ನ್ಯಾಯಾಧೀಶರು [illegible] (೬) [illegible] ಮಾಡಿದ್ದಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ೩-೪ ದಿನಗಳಿಂದ [illegible]

[illegible]

ಕಾರವಾರ— [illegible]

[illegible]

ಶ್ರೀ|| ಕೃಷ್ಣಮೂರ್ತಿರಾಯರ ಭಾಷಣ

([illegible] ಮುಂದೆ)

[illegible] ಗೊಬ್ಬರ [illegible] ಎಕರೆ ಭೂಮಿಗೆ [illegible] ? [illegible] ಲಕ್ಷಗಟ್ಟಲೆ ಜನಗಳ [illegible] ಬಡಿದು ಮಾಡುತ್ತೇವೆ ! [illegible] ಸಮಾಗೆ [illegible] ಮಾಡಲು ಇಲ್ಲ ಅವಕಾಶವಿಲ್ಲವೆ [illegible] ಕಾಣುತ್ತವಂತೆ !

[illegible] ನಮಗೆ [illegible] ವರ್ಷಗಳವರೆಗೂ ಭಾರತೀಯರು [illegible] ಹಿಂದೆ [illegible] ವರ್ಷಗಳಲ್ಲಿ ನಮ್ಮ [illegible] ಆದಿಕಾಲದಲ್ಲಿ [illegible] ?

[illegible] ಲಕ್ಷ ಜನಗಳು ನಮ್ಮ ದೇಶದಲ್ಲಿವೆ [illegible] ಇಂಗ್ಲಂಡದಲ್ಲಿ [illegible]

ಇನ್ನು ನಮ್ಮ ಕೊರತೆಗಳನ್ನು ನೋಡಿರಿ ನಮಗೆ [illegible] ಲಕ್ಷ ಟನ್ನು [illegible] ಲಕ್ಷ ಟನ್ನು [illegible] ನಡೆದಿದೆ.

[illegible] ನಮ್ಮಲ್ಲಿ [illegible] ಜೀವನದೃಷ್ಟಿ [illegible] ನಮ್ಮ [illegible] ಆಹಾರೋತ್ಪತ್ತಿ [illegible] ಆದರೆ [illegible] ನಿಮ್ಮ ಜಿಲ್ಲೆಯಲ್ಲಿ [illegible] ಲಕ್ಷ ಟನ್ನು [illegible] ವಸ್ತುಗಳನ್ನು ತಯಾರಿಸ [illegible] ನಿಮ್ಮ [illegible] ಜನಕ್ಕೆ ಹೋಗಿ [illegible] ಕೈಗಾರಿಕೆಗಳನ್ನು [illegible] ಬಂದು [illegible] ಕೈಗಾರಿಕೆಗಳನ್ನು [illegible] ಈ ಪ್ರದರ್ಶನದ [illegible]

ಅವರು [illegible] ಕೈಗಾರಿಕೆಗಳನ್ನು ಕಲಿತು ಬರುವಂತೆ ಮಾಡಿಕೊಂಡರೆ, ಅವರ ಸಹಾಯದಿಂದ ನೀವು ನಿಮ್ಮ ಜಿಲ್ಲೆಯೊಳಗಿನ ಸಂಪತ್ತನ್ನು [illegible] ಬಹುದಾಗಿದೆ. [illegible] ವ್ಯವಸಾಯ, [illegible] ತಯಾರಿ, [illegible] ತಯಾರಿ ಇವುಗಳಿಂದ ನೀವು [illegible] ಸಂಪಾದಿಸಬಹುದು, ಜನ[illegible] ಉದ್ಯೋಗ [illegible] ಕೊಡಬಹುದು, ಸಂಶೋಧನೆಯು [illegible] ನಿಮ್ಮ [illegible] ಕೈಗಾರಿಕೆಗಳನ್ನೂ ಬೆಳೆಸಬಹುದು.

[illegible] ಪ್ರದರ್ಶನ ಮಂದಿರಗಳು, [illegible] ಪ್ರದರ್ಶನಗಳು ಮತ್ತು ಪ್ರಚಾರ [illegible] ದೇಶಗಳಲ್ಲಿ ನೀವು ಯಾವ ನಗರಕ್ಕೆ ಹೋಗಿರಿ, ಅಲ್ಲಿ [illegible] ದರ್ಶನ ಪ್ರಶಾಲೆಗಳನ್ನು ನೋಡುವಿರಿ [illegible] ದಿನದಿಂದ ಪ್ರಾರಂಭಿಸಿ ಇಂದಿನ [illegible] ಇವುಗಳು [illegible] ಎಂಬುವನ್ನು ನೀವು [illegible] ಸಂಪಾದಿಸಬಹುದು [illegible] ನಡೆಯುತ್ತಿದೆ ಈ ಸಂ[illegible] ವರ್ಷಕ್ಕೆ [illegible] ಲಕ್ಷ [illegible] ವ್ಯಾಪಾರವಾಗುತ್ತಿದೆ ! ಕಳೆದ ವರ್ಷ [illegible] ನೋಡಿದೆ [illegible] ಯಂತ್ರಗಳು, [illegible] ಟೆಲಿಫೋನ ಸೆಟ್ಟುಗಳು, ನಮ್ಮಲ್ಲಿಯ [illegible] ಸುಧಾರಿಸಲು [illegible] ಯಾವ ಹಳ್ಳಿಗೆ [illegible] ಬಳಸಿ [illegible] ವಿದ್ಯು[illegible] ಆಧುನಿಕ ಜೀವನ-[illegible] ಗಳ ದೃಷ್ಟಿಗೆ ಬೀಳುತ್ತವೆ [illegible] ಜೀವನಕ್ಕೆ [illegible] ಈ ಬಗ್ಗೆ [illegible] ಈ ಪ್ರದರ್ಶನವು [illegible] ಈ ಪ್ರದರ್ಶನವನ್ನು ಉದ್ಘಾಟಿಸುತ್ತೇನೆ.

ವಾರ್ತೆಗಳು.

—ಕರಾಚಿಯ ಹಾಯಕೋರ್ಟಿನ ಮುಂದಿನ ಬೈಲಿನಲ್ಲಿ ಹಿಂದೆ ಅಲ್ಲಿಯ ಹಿಂದೀ ವಣಿಕ್ ಸಂಘದವರು ಮಹಾತ್ಮಾಜಿಯವರ ಪೂರ್ಣಾಕಾರದ ಕಂಚಿನ ಪ್ರತಿಮೆಯೊಂದನ್ನು ತಯಾರಿಸಿಕೊಂಡು ನಿಲ್ಲಿಸಿದ್ದರು. ೧೯೪೭ರಲ್ಲಿ ಪಾಕಿಸ್ತಾನ ನಿರ್ಮಿತಿಯಾದ ಮೇಲೆ ಕೆಲವು ದುರಾತ್ಮರು ಮಹಾತ್ಮರ ಈ ಪ್ರತಿಮೆಯನ್ನು ಭಂಗಗೊಳಿಸಲು ಪ್ರಯತ್ನಿಸಿದ್ದರು. ಆದರೆ ಆಗ ಅವರ ಆ ಪ್ರಯತ್ನ ಸಫಲವಾಗಿದ್ದಿಲ್ಲ. ಆದರೆ ಕಳೆದ ವಾರ ಒಂದು ಮುಂಜಾನೆ ೮ ಅಡಿ ಎತ್ತರದ ವೇದಿಕೆಯ ಮೇಲಿದ್ದ ಈ ಪ್ರತಿಮೆಯು ನೆಲದ ಮೇಲೆ ಉರುಳಿಬಿದ್ದದ್ದೂ ಕೆಲವು ಕಡೆ ಅದಕ್ಕೆ ಪೆಟ್ಟಾದದ್ದೂ ಕಂಡು ಬಂತು! ಅಧಿಕಾರಿಗಳು ಅದನ್ನು ಈಗ ದರ್ಶನೀಯ ವಸ್ತುಗಳ ಸಂಗ್ರಹಾಲಯದಲ್ಲಿ ಒಯ್ದಿಟ್ಟಿರುತ್ತಾರೆ. ಅದನ್ನು ದುರುಸ್ತಗೊಳಿಸಿ ಪುನಃ ಹಿಂದೆ ಇದ್ದಲ್ಲೇ ಅದನ್ನು ಸ್ಥಾಪಿಸಲಾಗುವದೆಂದೂ ಪಾಕಿಸ್ತಾನ ಸರಕಾರ ಪ್ರಕಟಗೊಳಿಸಿದೆ. ಪ್ರತಿಮೆಯು ಯಾರೊಬ್ಬರ ಕುಪಕೃತ್ಯದಿಂದ ಬಿದ್ದಿದ್ದಿಲ್ಲೆಂದೂ, ವೇದಿಕೆಯಲ್ಲಿ ಬಿರುಕು ಬಿಟ್ಟದ್ದರಿಂದ ಬಿದ್ದಿತೆಂದೂ ಪಾಕಿಸ್ತಾನಿ ಪ್ರವಕ್ತರು ಹೇಳುವ ಮಾತು ಅನೇಕರಿಗೆ ವಿಶ್ವಾಸಾರ್ಹ ಕಾಣುವದಿಲ್ಲ. ಪಾಕಿಸ್ತಾನಿ ಕಿಡಿಗೇಡಿಗಳೇ ಅದನ್ನು ಉರುಳಿಸಿರಬೇಕೆಂದು ಅವರ ಅಂಬೋಣ. ಆ ಪ್ರತಿಮೆಯನ್ನು ಪಾಕಿಸ್ತಾನದಲ್ಲಿಡುವದು ಬೇಡೆಂದೂ ಅದನ್ನು ಮುಂಬಯಿಗೆ ತಂದು ಸಿಂಧಿ ನಿರಾಶ್ರಿತರ ವಸತಿಯಲ್ಲಿ ಸ್ಥಾಪಿಸಬೇಕೆಂದೂ ಸಿಂಧಿ ಜನರ ಆಗ್ರಹವಿದೆ.

— ಇದೇ ಏಪ್ರಿಲ ತಾ. ೧ರಿಂದ ಇಡೀ ಮುಂಬಯಿ ರಾಜ್ಯಾಂಗದಲ್ಲಿ ಪೂರ್ಣ ಮದ್ಯಪ್ರತಿಬಂಧದ ಕಾನೂನು ಜಾರಿಯಲ್ಲಿ ಬರುವದು. ವಿದೇಶೀಯರೂ, ಕುಡಿತದ ಚಟ ಬಿಡಲಾರದ ವ್ಯಕ್ತಿಗಳೂ ಸರಕಾರದಿಂದ ಸ್ಪೆಷಲ-ಚೀಟಿಗಳನ್ನು ಪಡೆದುಕೊಂಡು ಮದ್ಯಪಾನ ಮಾಡಬೇಕಾಗುವದು.

— ಕೇಂದ್ರ ಮಂತ್ರಿಮಂಡಳದಲ್ಲಿ ಬೇಗನೇ ಹಲವು ಬದಲಾವಣೆಗಳಾಗಲಿವೆಂದು ಸುದ್ದಿಯುಂಟು. ಡಾ|| ಅಂಬೇಡಕರ ಶ್ರೀ|| ಗೋಪಾಲಸ್ವಾಮಿ ಅಯ್ಯಂಗಾರ, ಶ್ರೀ|| ನಿಯೋಗಿ ಮತ್ತು ಶ್ರೀ|| ಸಂತಾನಂ ಇವರು ರಾಜಿನಾಮೆ ಕೊಡಲು ಸಿದ್ಧರಾಗಿರುವರಂತೆ. ಸಮಾಜಸತ್ತಾವಾದಿ ಪಕ್ಷದ ಕೆಲವು ತರುಣರನ್ನು ಪಂ|| ಜವಾಹರಲಾಲರು ಮಂತ್ರಿಮಂಡಳದಲ್ಲಿ ಸೇರಿಕೊಳ್ಳುತ್ತಾರೆಂದೂ ವಾರ್ತೆಯುಂಟು.

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲಾಜ

[ಊಟ ಹಾಗೂ ವಸತಿಯ ಸುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ

ವಿ ಸೂಚನೆ— [illegible]

ಮಾಲಕ:— [illegible]

ಕುಮಟೆಯ ಒಕ್ಕಲತನದ ಪ್ರದರ್ಶನದ ಉದ್ಘಾಟಕರಾದ

ಶ್ರೀ ಎಸ್ ಶ್ರೀಕೃಷ್ಣಮೂರ್ತಿರಾಯರ

ಭಾಷಣದ ಸಾರಾಂಶ.

ಸಾಹಕಾರಿಯರೇ ಮಹಿಳೆಯರೇ, ತಾಲೂಕಿನ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ... ನನಗೆ ಕೊಟ್ಟ ಗೌರವಕ್ಕಾಗಿ ನಾನು ... [illegible]

[illegible]

... ಕಟ್ಟಿದ ಸರ್ಕಾರು ... [illegible] ... ಕೈಗಾರಿಕೆ, ವ್ಯಾಪಾರ ... [illegible]

... ಕ್ರಿಯೆಗಳಿಗಾಗಿ ೧೦ ಕೋಟಿ ರೂ ... [illegible]

ಜಾಹೀರ ವಿನಂತಿ.

ಕಾನಡಾ ಜಿಲ್ಲಾ ಶಿರ್ಸಿ ತಾಲೂಕ ಶ್ರೀ ಕ್ಷೇತ್ರ ಮಂಜಗುಣಿ ಶ್ರೀ ವೆಂಕಟರಮಣ ದೇವರ ಭಕ್ತರ ಮಹಾಜನರಲ್ಲಿ ಇವರ ಕಡೆಯಿಂದ —

ನಮ್ಮಲ್ಲಿಯ ಶ್ರೀ ದೇವಸ್ಥಾನದ ಪ್ರಾಕಾರದ ಮೇಲ್ಛಾವಣಿಯು ಬಹಳ ಜೀರ್ಣವಾದ್ದರಿಂದ, ಶ್ರೀ ದೇವರ ಪ್ರೇರಣೆಯ ಮೇರೆಗೆ, ಜೀರ್ಣೋದ್ಧಾರ ಮಾಡಲು ಆಲೋಚಿಸಿ, ಆ ಬಗ್ಗೆ ನಮ್ಮ ಗ್ರಾಮದ ಸಂಘಟಿತ ಮಹಾಸಂಘವು ಶ್ರೀ ದೇವರ ಕಾರ್ಯಕ್ಕೆ ತೊಡಗಿದೆ. ಭಕ್ತರು ಶ್ರೀ ದೇವರ ವೋದವುಳ್ಳ ಮಾಧ್ರಿತ ಹಣಗಳನ್ನು ಕಳಿಸಿಕೊಂಡು ಶ್ರೀ ದೇವತಾ ಕಾರ್ಯಕ್ಕೆ ಸಹಾಯ ನೀಡಬೇಕಾಗಿ ವಿನಂತಿ.

ಮಂಜಗುಣಿ, ಸುಬ್ರಾಯ ವಿಶ್ವೇಶ್ವರ ಭಟ್ಟ
ತಾ ೧೫ ೩-೫೦. ಆ. ವಿ. ದೇವನಳ್ಳಿ,
ಮಂಜುನಾಥ ದೇವರ ಹೆಗಡೆ
ಚನ್ನಯ್ಯಾ ಸೀ ಗೌಡಾ, ಪಾಟೀಲ
ಮೊಕ್ತೇಸರರು.

THE AREA RATIONING AUTHORITY,
KARNATAK REGION, BELGAUM

NOTICE.

All the motor vehicle owners in the Karnatak Region are hereby informed that the issue of basic ration for motor vehicles for April–May–June 1950 quarter will be issued at the following centres on the dates and places shown against each centre –

Dist.	Centre	Location	Dates	Time
1) Dharwar	Hubli	Travellers Bungalow Hubli	30th & 31st March & 1st & 2nd April, 50	11–30 a m to 4 p m
2) Karwar	Karwar	Dist Bungalow, Karwar	27th & 28th March 1950	– do –
3) Bijapur	Bijapur	Travellars' Bungalow, Bijapur	31st March & 1st April 1950	– do –
4) S Satara	Sangli	Travellers' Bungalow, Sangli	27th to 29th March 1950	– do –

2 Prescribed application forms can be had either at each distribution centre or from the office of the Area Rationing Authority, Belgaum.

3 Supplementary ration for cars, motor cycles, and goods vehicles and special ration for Local Bodies, Police, Health Dept vans and Ambulances will be issued at the head office at Belgaum

4 The Stage carriage operators of Belgaum District should obtain their ration at the Head office at Belgaum

5 Conditions of issue of petrol ration will be the same as in the past

No P R O – 2840 of 1950
Area Rationing Office,
Belgaum, 17th March, 1950

D K SUKTHANKAR (Capt.)
Area Rationing Authority,
Karnatak Region, Belgaum.

ಬಗೆಹರಿಯ ದಿವಸಗಳು ಬಂದಿವೆ. ನಾಡಿನ ಬಿಕ್ಕಟ್ಟುಗಳ ಮತ್ತು ಸಮಸ್ಯೆಗಳು ಬಗೆಹರಿಯಬೇಕಾದರೆ ಸಾಮಾನ್ಯ ಪ್ರಜೆಗಳದ ನಮ್ಮ ನಮ್ಮ ಕರ್ತವ್ಯ ಅರಿತುಕೊಳ್ಳಬೇಕು. ಟೀಕೆ ಮಾಡುವದು ಸುಲಭ; ಕಾರ್ಯ ಮಾಡುವದು ಕಷ್ಟ. ಮಾನವನ ಸ್ವಭಾವೀಗ ಮುಗಿದಿದೆ. ಈಗ ನಾವೆಲ್ಲ ದೇಶದ ಅಭ್ಯುದಯದ ಕಡೆಗೆ ಗಮನಕೊಡಬೇಕು.

ಜನಬಲ ನಮಗೆ ಸಾಕಷ್ಟಿದೆ, ಪ್ರಕೃತಿದತ್ತ ಸಂಪತ್ತೂ ಬೇಕಷ್ಟಿದೆ. ಆದರೂ ನಮ್ಮ ನಾಡಿನಲ್ಲಿ ೧೦೦ಕ್ಕೆ ೮೫ರಷ್ಟು ಜನ ಬೇಸಾಯವನ್ನವಲಂಬಿಸಿದ್ದಾರೆ. ನಿರುದ್ಯೋಗಿತನ ಪ್ರಮಾಣವೂ ಅಧಿಕ! ಗೃಹ ಉದ್ಯೋಗಗಳನ್ನು ನಾವು ಪ್ರಾರಂಭಿಸಿದರೂ ಪಾಶ್ಚಾತ್ಯ ಹೋಲಿಕೆಯಾದ ಬೇಸಾಯವನ್ನು ಬಿಟ್ಟು ಹಳ್ಳಿಗಳ ಜನರ ಪ್ರಗತಿಯಾಗದೆ ರಾಷ್ಟ್ರದ ಪ್ರಗತಿ ಸಾಧ್ಯವಿಲ್ಲ. ಯುದ್ಧ ಪೂರ್ವ ಕಾಲದಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಪ್ರತಿಯೊಬ್ಬ ಪ್ರಜೆಯು ಸರಾಸರಿ ಉತ್ಪನ್ನ ಕೈಗಾರಿಕೆಗಳಿಂದ ೮೦೦ ಡಾಲರ (ಎಲ್ಲ ವೃತ್ತಿಗಳಿಂದ ೧೪೨೦ ಡಾಲರ) ಮತ್ತು ಇಂಗ್ಲಂಡದಲ್ಲಿ ೩೪೦ ಪೌಂಡ (ಎಲ್ಲ ವೃತ್ತಿಗಳಿಂದ ೯೮೦ ಪೌಂಡ) ಇದ್ದಾಗ್ಯೂ ಭಾರತದಲ್ಲಿ ಕೈಗಾರಿಕೆಗಳಿಂದ ೧೮ ರೂ (ಎಲ್ಲ ವೃತ್ತಿಗಳಿಂದ ೬೫ ರೂ) ಇತ್ತು! ಬೇಸಾಯ ಮತ್ತು ಅದಕ್ಕೆ ಸಂಬಂಧಿಸಿದ ಉಪ ಕಸಬುಗಳಿಂದ ಇಡೀ ಭಾರತದ ಉತ್ಪನ್ನ ವರ್ಷಕ್ಕೆ ೨೫೭೦ ಕೋಟಿ ರೂ. ದೊಡ್ಡ ಉದ್ಯೋಗಗಳಿಂದ ೭೦೦ ಕೋಟಿ ರೂ, ಗ್ರಾಮೋದ್ಯೋಗಗಳಿಂದ ೫೦ ಕೋಟಿ ರೂ. ಮತ್ತು ಇತರ ಮೂಲಗಳಿಂದ ೯೮೦ ಕೋಟಿ ರೂ. ಹೀಗೆ ಒಟ್ಟು ೪೫೦೦ ಕೋಟಿ ರೂ. ಇರುತ್ತದೆಂದು ಸದ್ಯಕ್ಕೆ ಅಂದಾಜು ಮಾಡಲಾಗಿದೆ. ವ್ಯವಸ್ಥಿತ ಕೈಗಾರಿಕೆಗಳಲ್ಲಿ ೧೦೦ಕ್ಕೆ ೫ ಮತ್ತು ಜನರೂ ಎಲ್ಲ ಬಗೆಯ ಕೈಗಾರಿಕೆಗಳಲ್ಲಿ ೧೦೦ಕ್ಕೆ ೧೦ ರಷ್ಟು ಜನರೂ ತೊಡಗಿರುವರೆಂದು ಎಣಿಕೆ ಮಾಡಲಾಗಿದೆ. ಅಮೇರಿಕೆಯಲ್ಲಿ ಈ ಪ್ರಮಾಣ ೧೦೦ಕ್ಕೆ ೪೧.೭ ಮತ್ತು ಇಂಗ್ಲಂಡಿನಲ್ಲಿ ೪೭.೩ ಇರುತ್ತದೆ.

ಆದ್ದರಿಂದ ನಮ್ಮಲ್ಲಿ ಸಾಮಾನ್ಯ ಪ್ರಜೆಯ ಜೀವಮಾನ ಹೆಚ್ಚಬೇಕು, ಆರ್ಥಿಕ ಮಟ್ಟ ಉತ್ತಮಗೊಳ್ಳಬೇಕು. ಆದಕಾರಣ ಪೂರ್ವದಲ್ಲಿ ನೈತಿಕ ಮಟ್ಟ ಎತ್ತರವಾಗಬೇಕು. ಶಿಸ್ತು, ಸಂಘಟನೆಗಳು ಆಚರಣೆಯಲ್ಲಿ ಬರಬೇಕು. ಇಂದು ನಮ್ಮ ಜನರಲ್ಲಿ ಉತ್ತಮ ಬಾಳು ಬಾಳಬೇಕೆಂಬ ಆಸೆ ಇಲ್ಲವಾಗಿದೆ! ತಮ್ಮ ತಮ್ಮ ಕೆಲಸದಲ್ಲಿ ದಕ್ಷತೆ ಕೌಶಲ್ಯಗಳಿಂದ ದುಡಿಯಬೇಕೆಂಬ ಆಸಕ್ತಿಯೂ ಕಡಿಮೆಯಾಗಿದೆ! ಸಹಕಾರ–ಪ್ರೇಮಗಳ ಬದಲು ಮತ್ಸರ–ತಿರಸ್ಕಾರ ಹೆಚ್ಚುತ್ತಿದೆ! ಈ ಸ್ಥಿತಿ ಹೋಗಬೇಕು. ತನ್ನ ಜೀವನಕ್ಕೆ ಬೇಕಾಗುವ ಪ್ರತಿಯೊಂದು ವಸ್ತು ತಾನು ಉತ್ಪಾದಿಸುವದು ತನ್ನ ಪ್ರಥಮ ಕರ್ತವ್ಯವಿರುತ್ತದೆಂಬ ಭಾವನೆ ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕು. ಜನರಲ್ಲಿ ವಿದ್ಯೆ, ಉದ್ಯೋಗಶೀಲತೆ ಮತ್ತು ಜೀವನದ ಶ್ರಮ ಪದ್ಧತಿ ಹೆಚ್ಚಾಗಬೇಕು. ಸಾಮಾಜಿಕ ಜೀವನದ ಬಯಕೆ ಹಬ್ಬಬೇಕು. ಒಂಟಿ ಹಂಗಿನಗಳ ಹಿತಕ್ಕಿಂತ ಜನತಾ ರಾಷ್ಟ್ರದ ಹಿತಕ್ಕೆ ಹೆಚ್ಚು ಬೆಲೆ ಕೊಡಬೇಕು. ಇದನ್ನು ಸಾಧಿಸುವ ಹೊಣೆ ವಿದ್ಯಾವಂತರ ಮೇಲಿದೆ. ಅವರು ಸದಾ ಕಾಲ ಚಿಂತಿಸಿ, ಯೋಜನೆಗಳನ್ನು ಸಿದ್ಧಗೊಳಿಸಿ, ಅವನ್ನು ಕೃತಿಯಲ್ಲಿ ತರಲು ತತ್ಪರರಾಗಬೇಕು. ಜನರಲ್ಲಿ ಸ್ವಪ್ರಯತ್ನದ ಸಂಸ್ಕಾರದ ಭಾವನೆ ಬೆಳೆಸಬೇಕು. ಸ್ವಪ್ರಯತ್ನದಿಂದಲೂ ಸ್ವಯಂಪ್ರೇರಣೆಯಿಂದಲೂ ಜನರು ಮುಂದಾಗುವಂತೆ ಅವರನ್ನು ವಿದ್ಯಾವಂತರು ಅಣಿಗೊಳಿಸಬೇಕು. ೧೦೦೦ ಪ್ರಜೆಗಳುಳ್ಳ ೧೦ ೨೦ ಹಳ್ಳಿಗಳ ಸಮೂಹಕ್ಕೆ ಒಂದೊಂದು ಸಂಘ ಸ್ಥಾಪಿತವಾಗಬೇಕು. ಪ್ರತಿ ಸಮಿತಿಯಲ್ಲಿ ೧೦ ೧೫ ಸದಸ್ಯರು ಸೇರ್ಪಡೆಯಾಗಬೇಕು. ಮೊದಲು ೬ ದು ವರ್ಷದ ನಂತರ ಮತ್ತೆ ೫ ದು ವರ್ಷಗಳ, ಆ ನಂತರ ೫ದು ವರ್ಷಗಳ ಹೀಗೆ ಈ ಸಮಿತಿಗಳು ಯೋಜನೆಗಳನ್ನು ಸಿದ್ಧಗೊಳಿಸಿ ಕಾರ್ಯಗೊಳಿಸುವಂತೆ ತರಬೇಕು. ಪ್ರತಿ ವರ್ಷ ಹಾಕಿದ ಛಂದಾ ಕೆಲಸ ಎಷ್ಟರ ಮಟ್ಟಿಗೆ ಆದಂತೆ ಕೊಟ್ಟ ಸಂಬಳ ಉಪಯೋಗಿಸಿದ ಕಟ್ಟು ಮಾನವನ ಶ್ರಮ ಉತ್ಪಾದಿಸಿದ ವಸ್ತುಗಳ ಪ್ರಮಾಣ ಮತ್ತು ಬೆಲೆ ಒಟ್ಟು ಜನಸಂಖ್ಯೆ ಮತ್ತು ಪ್ರತಿಯೊಬ್ಬನೂ ಮಾಡಿದ ಕೆಲಸ ಇವುಗಳ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಬೇಕು. ೨ ವರ್ಷಗಳಿಗೆ ಸಾಕಾಗುವಷ್ಟು ಧಾನ್ಯ ಸಂಗ್ರಹವನ್ನು ಆಯಾ ಊರಿನ ಪ್ರಜೆಗಳು ಮಾಡಬೇಕು. ಮೇಲೆ ನಮೂದಿಸಿದ ಪ್ರವೃತ್ತಿ ಯಾಂತ್ರಿಕ ಸಂಸ್ಥೆ ಮೊದಲಾದ ಉಪಕರಣಗಳನ್ನು ಬಳಕೆಯಲ್ಲಿ ತರುವ ವ್ಯವಸ್ಥೆ ಮಾಡಬೇಕು. ನಿತ್ಯ ವಸ್ತುವಿನ ಗ್ರಾಮಗಳು ಸ್ವಾವಲಂಬಿಗಳಾಗುವಂತೆ ಈ ಯೋಜನೆಗಳಿಗೆ ಸರಕಾರವು ನೆರವು ಕೊಡಬೇಕು." ಎಂದು ಸರ್ ಮೋಕ್ಷಗುಂಡಮ್ ವಿಶ್ವೇಶ್ವರಯ್ಯನವರು ಹೇಳಿದ್ದಾರೆ.

ಆಹಾರದ ಬೆಳವಣಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದಿಮೆಗಳು ೨೪ ಬಗೆಯ ಉತ್ಪತ್ತಿಗೆ ಸಂಬಂಧಪಟ್ಟ ಕೈಗಾರಿಕೆಗಳು ೪ ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ಉದ್ದಿಮೆಗಳು ೧೧ ಮತ್ತು ಇತರ ೯೦ ಉದ್ಯೋಗಗಳು ಹೀಗೆ ೧೨೯ ಉದ್ದಿಮೆಗಳನ್ನು ಈ ಯೋಜನೆಯಲ್ಲಿ ಸೇರಿಸಲಾಗಿದೆ. ಅವರ ಪಟ್ಟಿಗೊಳಿಸಿದ್ದಾರೆ. ಇವುಗಳಲ್ಲಿ ಕೆಲವು ಪಕ್ಕಾ ಕೈಗಾರಿಕೆಗಳು ದಿನಾ ನಿತ್ಯ ಜೀವನದಲ್ಲಿ ಆರಂಭಿಸಬಹುದಾದ ಬೀಜ ಬಿತ್ತುವದ ನೇಗಿಲು ತಯಾರಿಸುವದ, ಹಪ್ಪಳ ಮಾಡುವದು, ಕಾಗದ ತಯಾರಿಸುವುದು, ಹಣ್ಣುಗಳನ್ನು ಒಣಗಿಸುವದು, ಹಾಲು ಬೆಣ್ಣೆ ತುಪ್ಪ ಇವುಗಳ ತಯಾರಿಕೆ. ಒಣಗಿದ ಹಣ್ಣು ಮತ್ತು ತರಕಾರಿ ಮಾಂಸ ಮಾರಾಟ, ಎಣ್ಣೆ, ಉಪ್ಪಿನಕಾಯಿ, ಚಟ್ನಿ ಮತ್ತು ಮಸಾಲಾ ಪದಾರ್ಥ, ಹಣ್ಣುಗಳನ್ನು ಡಬ್ಬಿಗಳಲ್ಲಿ ತುಂಬುವದು, ತೆಂಗು, ಈಚಲ ಬಗನಿ ಮರ ದಿಂದ ಬೆಲ್ಲ, ಸಕ್ಕರೆ ಕಲ್ಲುಸಕ್ಕರೆಗಳನ್ನು ಮಾಡುವದು, ಹಗ್ಗಗಳ ರಾಸಾಯನಿಕ ಪದಾರ್ಥಗಳನ್ನು ತಯಾರಿಸುವುದು ಕೃತಕ ಮಾಡುವ, ತೋಟಗಳನ್ನು ಹಣ್ಣಿನ ಗಿಡಗಳನ್ನು ಬೆಳೆಸುವದು ಉಪ್ಪಿನ ಉದ್ದಿಮೆ, ನಾರಿನ ಚೀಲಗಳನ್ನು ಹೆಣೆಯುವದ, ಬೆತ್ತ ಗಾಂಧಿ ಬಿದಿರು–ಬೆತ್ತಗಳ ಸಾಮಾನು ತಯಾರಿಸುವದು, ಮೋಟಾರು ಮಾರ್ಗದ ಸಾಮಾನುಗಳು, ಹಂಚು, ಇಟ್ಟಿಗೆ, ಮಣ್ಣಿನ ಸಾಮಾನುಗಳು ದೋಣಿಗಳು ಕಾಗದ, ಅಗ್ಗದ ಬಣ್ಣ ಪಾನೀಯ ಇವುಗಳ ತಯಾರಿಕೆ, ಬಂಡಿಗಳು, ಟೋಪಿಗಳು, ಸಂಚಿವಸ್ತ್ರಗಳು, ಬೆಂಕಿಯ ಸಾಮಾನು ಸಾಬೂನ, ಪಲ್ಲಂಗ, ಕೊಡೆಗಳ ಸಾಮಾನು ಮುಂತಾದವುಗಳನ್ನು ನಮ್ಮಲ್ಲಿ ತಯಾರಿಸಬಹುದಾಗಿದೆ.

ಇತರ ದೇಶಗಳಲ್ಲಿ ಸಾಧ್ಯವಿದ್ದದ್ದು ನಮಗೇಕೆ ಸಾಧ್ಯವಾಗಬಾರದು? ಜಪಾನದಲ್ಲಿ ನೂರಕ್ಕೆ ೫೫ ಗೃಹ ಕೈಗಾರಿಕೆಯು ಕಾರ್ಖಾನೆಗಳು ಹುಟ್ಟಿದಂದಲೇ ನಡೆಯುವ ಕೈಗಾರಿಕೆಗಳಾಗಿವೆ. ೧೦೦ಕ್ಕೆ ೪೪ರಷ್ಟು ಕೈಗಾರಿಕೆಗಳು ೫ಕ್ಕೆ ಕಡಿಮೆ ಜನರಿಂದ ನಡೆಸಲ್ಪಡುವ ಕೈಗಾರಿಕೆಗಳಾಗಿವೆ. ಹೋದ ಯುದ್ಧಕ್ಕೆ ಮೊದಲು ಜಪಾನಿನ ಪರಿಣಾಮದ ಗೃಹ ಕೈಗಾರಿಕೆ ಸಾಮಾನುಗಳ ಬೆಲೆ ೧೭ ಕೋಟಿ ರೂ ಆಗುತ್ತಿತ್ತು ಒಂದು ಒಂದರಿಂದಲೇ ೧೪೦೦೦ ಕೇಂದ್ರಗಳಲ್ಲಿ ೧೧೦೦ ಬಗೆಯ ಸಾಮಾನುಗಳನ್ನು ತಯಾರಿಸುತ್ತಿರುವರಂತೆ! ಸ್ವಿಟ್ಜರ್ಲೆಂಡಿನ ಪಟ್ಟಣ ಹಳ್ಳಿಗಳ ಬೀದಿಗಳಲ್ಲಿ ಈ ಉದ್ಯೋಗಗಳು ಕಾಣಬರುವಲ್ಲದೆ ಅಲ್ಲಿನ ಜನರು ತಯಾರಿಸುವ ವಿಜ್ಞಾನದ ಸಾಮಾನುಗಳು ಜಗತ್ತಿನ ಮಾರುಕಟ್ಟೆಗೆ ಹೋಗುತ್ತವೆ. ಅಲ್ಲಿ ಮನೆಗೆ ಬಂದ ಮೇಲೆ ಆ ಗಂಡಸರು ಕೂಡ ದುಡಿದು ಹೆಚ್ಚಿನ ಕಡ್ಡಿಗಳನ್ನು ಜೋಡಿಸಿ ಗಡಿಯಾರದ ಬಿಡಿಭಾಗಗಳನ್ನು ತಯಾರಿಸುತ್ತಾರೆ.

೨೦೦೦ ದಿಂದ ೪ ಆಣೆಯ ವರೆಗೆ ದುಡಿಯುತ್ತಾರಂತೆ! ಒಂದು ಹಾಕುವದು, ಮೆರಗು ಕೊಡುವದು ಅಕ್ಷರಗಳನ್ನು ಕೂಡಿಸುವದು ಇಂಥ ದೊಡ್ಡ ಕೆಲಸಗಳು ಮಾತ್ರ ಕಾರಖಾನೆಗಳಲ್ಲಿ ಆಗುತ್ತವೆ. ಆ ಕಾರಖಾನೆಗಳಲ್ಲಿ ಸಹ ಹೆಚ್ಚೆಂದರೆ ೧೦ ಜನ ಇರುತ್ತಾರೆ. ಜಪಾನದಲ್ಲಿ ೧೦೦ ಸಣ್ಣ ಗೃಹ ಕೈಗಾರಿಕೆಗಳ ಕೇಂದ್ರಗಳಲ್ಲಿ ೬ ಒಕ್ಕ "ಗಿಲ್ಲಿಸ" ಸೀಸದ ಕಡ್ಡಿಗಳು (ಪೆನ್ಸಿಲು) ತಯಾರಾಗುತ್ತವೆ! ಆರ್ಥ ಆಣೆಗೆ ಒಂದು ಡಝನ ಸೀಸದ ಕಡ್ಡಿಗಳು ಸಿಗುತ್ತವೆ! ಜಪಾನದೊಳಗೆ ೧೦೦ಕ್ಕೆ ೯೦ರಷ್ಟು ಹಳ್ಳಿಗಳಲ್ಲಿ ವಿದ್ಯುದ್ದೀಪಗಳು ಬೆಳಗುತ್ತವೆ ನಮ್ಮಲ್ಲಿಂದ ಹೋಗುವ ಹತ್ತಿಯ ಮೂಟೆಗಳ ಬೇಲ–ಪಟ್ಟಿಗಳಿಂದ ಜಪಾನಿ ಜನರು ಬಂ ಕು—ಕೆ ತ್ತಿ ರಿ ಗ ಳ ನ್ನು ತಯಾರಿಸುತ್ತಾರೆ! ಸಕ್ಕರೆಗಳ ಇಟ್ಟು ಹೆಚ್ಚುವಾಕ್ಕಳು ಮತ್ತು ಹಿರ್ಯ ನಂಟು ಈ ೫ ಮಂದಿ ದಿನ ೧ಕ್ಕೆ ೮೦೦ ಕಾನು ಹಾಗದ ತಯಾರಿಸಿ ೧೯ ರೂ ಗಳಿಸುತ್ತಾರೆ ಕಾಗದಕ್ಕೆ ಅವರು ಬಿದಿರು ಉಪಯೋಗಿಸುವದಿಲ್ಲ, ಮಲ್ಬೆರಿಯ ಎತ್ತರದ ನಾರುಳ್ಳ ಗಿಡಗಳ ದಂಟುಗಳನ್ನು ಉಪಯೋಗಿಸುತ್ತಾರೆ ಜಪಾನದಲ್ಲಿ ಹುಟ್ಟುವ ಅಂತು ಒಟ್ಟು ರೇಷ್ಮೆಯಲ್ಲಿ ಭಾಗ ಗೃಹ ಕೈಗಾರಿಕೆಗಳಿಂದಲೇ ಹುಟ್ಟುತ್ತದೆ ರೂ ೭೦ಕ್ಕೆ ೧ ಮಗ್ಗ ಸಿಗುತ್ತದೆ ಗಂಡ ಹೆಂಡರಿಬ್ಬರು ನೆರೆಹೊರೆಯ ಹುಡುಗಿಯ ಸಹಾಯದಿಂದ ದಿವಸಕ್ಕೆ ೩೦೦ ಗಜ ಬಟ್ಟೆ ನೇಯುವ ತಿಂಗಳಿಗೆ ರೂ ೯೦ ಸಂಪಾದಿಸುತ್ತಾರಂತೆ. ಯುದ್ಧಕ್ಕೆ ಮೊದಲು ಜಪಾನದಲ್ಲಿ ರೂ ೭/ಕ್ಕೆ ೧ ಬೈಸಿಕಲ್ಲು ದೊರೆಯುತ್ತಿತ್ತು, ಮತ್ತು ಕಲಕತ್ತೆಯಲ್ಲಿ ಅದು ರೂ ೧೬ಕ್ಕೊಂದರಂತೆ ಮಾರಲ್ಪಡುತ್ತಿತ್ತು. ರೂ ೪೦೦ದಲ್ಲಿ ಸ್ವಾಕಲ ತಯಾರಿಸುವ ಒಂದು ಕಾರಖಾನೆ ಜಪಾನದಲ್ಲಿ ತಯಾರಾಗುತ್ತಿತ್ತು. ಬರೇ ಮಣ್ಣಿನ ಸಾಮಾನುಗಳಿಂದ ಜಪಾನಿಗಳು ೫೨ ಕೋಟಿ ರೂ ದುಡಿಯುತ್ತಿದ್ದರು. ವಿದ್ಯುದ್ದೀಪಗಳ ಬಲ್ಬುಗಳು, ಕೆಮರಾ ಗಡಿಯಾರ ಇವೆಲ್ಲ ಜಪಾನಿನಲ್ಲಿ ಗೃಹಕೈಗಾರಿಕೆಗಳಿಂದ ತಯಾರಾಗುತ್ತವೆ! ಒಂದು ಕಾಗದದಿಂದಲೇ ಅವರು ೩೦೦ ತರದ ಸಾಮಾನು ತಯಾರಿಸುತ್ತಾರೆ ಜಪಾನ ಪ್ರತಿಯೊಂದು ಮನೆ ಒಂದು ಕಾರಖಾನೆ! ಅಲ್ಲಿಯ ಮಾಹಿತಿಯಂತೇ ಅಲ್ಲಿಯ ಕೈಗಾರಿಕೆಗಳ ಪ್ರಗತಿಗೆ ಮೂಲಧ್ಯೇಯವಂತೆ ೧ ಕೋಟಿ ಜನ ಹೆಂಗಸರು ಕೈಗಾರಿಕೆಗಳಲ್ಲಿ ನಿರತರಿರುತ್ತಾರೆ ಜಪಾನದಲ್ಲಿ ೨ ಕೋಟಿ ಎಕರೆಗಳಷ್ಟೇ ಸಾಗು ಭೂಮಿಯಿದ್ದರೂ ಭಾರತದ ೩ರಷ್ಟು ಭತ್ತ ಬೆಳೆಯುತ್ತದೆ ಒಂದು "ಹೆಕ್ಟರ" (ಅಕರೆ) ಭೂಮಿಯಲ್ಲಿ ಸ್ವಿಟ್ಜರ್ಲೆಂಡ ಬಸ್ಸ ಭಾಗವಾಗುತ್ತದೆ ನಮ್ಮಲ್ಲಿ ಒಂದೇ ಟನ್ನ ಮಾತ್ರ! ಕಳೆದ ೬೫ ವರ್ಷಗಳಲ್ಲಿ ಜಪಾನದೊಳಗೆ ಭತ್ತ ಬೆಳೆಯುವ ಪ್ರದೇಶ ೧೦೦ಕ್ಕೆ ೨೯ ರಷ್ಟು ಹೆಚ್ಚಿದೆ ಪ್ರತಿ ಎಕರೆಯ ಸರಾಸರಿ ಉತ್ಪತ್ತಿ ೧೦೦ಕ್ಕೆ ೭೦ರಷ್ಟು ಹೆಚ್ಚಿದೆ. ಅಂತು ಉತ್ಪತ್ತಿ ೧೦೦ಕ್ಕೆ ೧೧೩ರಷ್ಟು ಹೆಚ್ಚಿದೆ ಗೋದಿಯ ಉತ್ಪತ್ತಿ ೧೦೦ಕ್ಕೆ ೪೨೫ರಷ್ಟು ಹೆಚ್ಚಿದೆ! ೧೯೩೦ರಲ್ಲಿ ಜಪಾನದೊಳಗೆ ೬೬ ೪೯ ಟನ್ನ ಹಾಲು ಹುಟ್ಟಿತು, ೧೯೪೧ರಲ್ಲಿ ಅದರ ಉತ್ಪತ್ತಿ ೩,೯೩,೮೫೪ ಟನ್ನಿಗೆ ಮುಟ್ಟಿತು! ಜಪಾನದ ವಿಮಾನಗಾರರೆಲ್ಲರೂ ೩೦೦೦ ಜನ ತೊಡಗಿದ್ದಾರೆ ಜಗತ್ತಿನ ಅಂತು ವಿಮಾನ—ರ ಯಲ್ಲಿ ೭ ಹೇಳುವ ಇಷ್ಟು ನಿಷ್ಠರು ಹುಟ್ಟಿಸುವುದನ್ನು ಉತ್ತಮ ಮಾಡುವದರಲ್ಲಿ ' ನಾವು ಏನೂ ಹ ಳು ಮಾಡಲಾರೆವು ಹೇಳಿದಾಗ ಬಹಳ ಬೆಲೆಯಿದೆ ಎಂದು ಸರ್ ಜಪಾನ ಅಧಿಕಾರಿಯು ಶ್ರೀ ಜವಾಹರ ಲಾಲರಿಗೆ ಉತ್ತರ ಕೊಟ್ಟನಂತೆ ಪ್ರತಿ ಮನೆಯ ಜನ ಅಲ್ಲಿನ ಗ ಡಿಯ ಲ್ಲಿ ಹೇಳಿಯನ್ನು ಇಟ್ಟು ಅದರ ಮುಮ್ಮಾರಸನೆ ತೆಗೆದು ೧೫ ದಿನಗಳಿಗೊಮ್ಮೆ ಅದನ್ನು

(ಇನ್ನೂ ಮುಗಿಯಬೇಕಾಗಿದೆ)

ಇದನ್ನು ಪಾಂಡುರಂಗ ಕೃಷ್ಣ ಸಿಂಗಿ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ ಸ್ವರ ಪ್ರಭಾತ ಪ್ರೆಸ್ ದಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ರೂ ೩
ಅಂಚೆಯಿಂದ ವರ್ಷಕ್ಕೆ ೧೦
" ೬ ತಿಂಗಳಿಗೆ ೨ ೪-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ ಪಿ ಯಿಂದ ಕಳಿಸುವ
೬ ಆಣೆ ಹೆಚ್ಚಿಗೆ ಬೀಳುವದು
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg No B 1270 Monday 3 4 1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೪೦.

ಕುಮಟಾ - ಸೋಮವಾರ, ತಾ ೩—೪—೧೯೫೦

ಜಾಹೀರಾತುಗಳ ದರ
೧ ಇಂಚ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ಠರಾಯಿಸಲಾದೀತು.

ವಿವಿಧ ವಿಷಯಗಳು.

—*—

ಪೂರ್ವ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರಾಗಿರುವ ಹಿಂದುಗಳ ಮೇಲೆ ಕಳೆದ ಫೆಬ್ರುವರಿ ತಿಂಗಳಲ್ಲಿ ನಡೆದ ಅತ್ಯಾಚಾರಗಳೂ ಅವುಗಳ ಪ್ರತಿಕ್ರಿಯೆಯಾಗಿ ಭಾರತಕ್ಕೊಪ್ಪಿದ ಪಶ್ಚಿಮ ಬಂಗಾಲದಲ್ಲಿ ನಡೆದ ಅತ್ಯಾಚಾರಗಳೂ ಇವುಗಳನ್ನು ಪರ್ಯಾಲೋಚಿಸಿ, ಪಾಕಿಸ್ತಾನ ಮತ್ತು ಭಾರತ ಇವೆರಡೂ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾಕರಿಗೆ (ಪಾಕಿಸ್ತಾನದಲ್ಲಿ ಹಿಂದುಗಳಿಗೆ ಮತ್ತು ಭಾರತದಲ್ಲಿ ಮುಸಲ್ಮಾನರಿಗೆ) ಯೋಗ್ಯ ಸಂರಕ್ಷಣೆ ಸಿಗುವಂತೆಯೂ, ಮೊನ್ನಿನ ಅತ್ಯಾಚಾರಗಳಲ್ಲಿ ಆಸ್ತಿ-ಪಾಸ್ತಿಗಳನ್ನು ಕಳಕೊಂಡು ಯಾ ಬೇರೆ ರೀತಿಯಿಂದ ನಿರಾಶ್ರಿತರಾದವರಿಗ ಯೋಗ್ಯ ಪರಿಹಾರ ದೊರೆಯುವಂತೆಯೂ, ಈ ಅತ್ಯಾಚಾರಗಳಿಗೆ ಪ್ರೇರಣೆ ಇಲ್ಲವೆ ಪ್ರೋತ್ಸಾಹ ಕೊಟ್ಟ ಅಧಿಕಾರಿಗಳಿಗ ತಕ್ಕ ಶಾಸನವಾಗುವಂತೆಯೂ, ಈ ಅತ್ಯಾಚಾರಗಳ ಮೂಲ ಕಾರಣಗಳನ್ನು ಹುಡುಕಿತೆಗೆದು ಅವುಗಳ ಉಚ್ಚಾಟನೆಯಾಗುವಂತೆಯೂ ಉಭಯ ರಾಷ್ಟ್ರಗಳ ಸರಕಾರಗಳಿಗ ಸಮ್ಮತವಾಗುವಂತಹ ಯೋಜನೆಯೊಂದನ್ನು ಮಾಡಲೆಂದು ನಿನ್ನೆಯಿಂದ ದಿಲ್ಲಿಯಲ್ಲಿ ಭಾರತದ ಪ್ರಧಾನಮಂತ್ರಿ ಪಂ|| ನೆಹರುರವರೂ ಪಾಕಿಸ್ತಾನದ ಮಹಾಮಂತ್ರಿ ಜನಾಬ ಲಿಯಾಕತ್ ಅಲಿಖಾನರೂ ಒಂದೆಡೆ ಕೂಡಿ ವಿಚಾರವಿನಿಮಯ ನಡಿಸಿದ್ದಾರೆ ಈ ವಿಚಾರ-ವಿನಿಮಯ ಕರಾಚಿಯಲ್ಲಿ ನಡೆಯಲೆಂದು ಲಿಯಾಕತ ಅಲಿಯವರ ಅಂಬೋಣವಿತ್ತು. ಆದರೆ ಈ ವಿಚಾರ-ವಿನಿಮಯದಲ್ಲಿ ತಮ್ಮ ಕೆಲವು ಸಹಕಾರಿಗಳು ಸೇರಬಯಸುತ್ತಿರುವರೆಂದೂ, ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಈ ಸಹಕಾರಿಗಳು ಕರಾಚಿಗೆ ಪ್ರಯಾಣ ಬೆಳೆಸಲಾರರೆಂದೂ ಪಂಡಿತಜಿಯವರು ತಿಳಿಸಿದ್ದರಿಂದ ಲಿಯಾಕತರು ದಿಲ್ಲಿಗೆ ಬರಲು ಒಪ್ಪಬೇಕಾಯಿತು ಅದರಂತೆ ನಿನ್ನೆ ಮುಂಜಾನೆ ಕರಾಚಿಯಿಂದ ಅವರು ಹೊರಟು ನಿನ್ನೆ ಮಧ್ಯಾಹ್ನವೇ ದಿಲ್ಲಿಗೆ ಬಂದು ಮುಟ್ಟಿದ್ದಾರೆ ಈ ಮಾತುಕತೆಗಳ ಕಾಲಕ್ಕೆ ಹಾಜರಿರಲು ಕಲಕತ್ತೆಯಿಂದ ಪಶ್ಚಿಮ ಬಂಗಾಲ ರಾಜ್ಯಾಂಗದ ಪ್ರಧಾನ ಮಂತ್ರಿಗಳಾಗಿರುವ ಡಾ|| ಬಿಧನಚಂದ್ರ ರಾಯರು ನಿನ್ನೆಯೇ ದಿಲ್ಲಿಗೆ ತಲ್ಪಿದ್ದಾರೆ ಉಭಯ ಮಹಾಮಂತ್ರಿಗಳೊಳಗಿನ ಈ ವಿಚಾರ-ವಿನಿಮಯವು ಅಪೇಕ್ಷಿತ ಶಾಂತ ವಾತಾವರಣದಲ್ಲಿ, ಸ್ನೇಹ-ಸೌಹಾರ್ದದಿಂದ ನಡೆಯುವಂತೆ ಮತ್ತು ಈ ವಿಚಾರವಿನಿಮಯದ ಪರಿಣಾಮವಾಗಿ ಉಭಯ ರಾಷ್ಟ್ರಗಳಿಗೂ ಅವುಗಳೊಳಗಿನ ಅಲ್ಪಸಂಖ್ಯಾಕರಿಗೂ ಸುಖದಾಯಕವಾಗುವಂತಹ ಒಪ್ಪಿತದ ಯೋಜನೆಯೊಂದು ಸಿದ್ಧವಾಗುವಂತೆ ದೇವರು ಕರುಣಿಸಲೆಂದು, ರಾಷ್ಟ್ರಪತಿ ರಾಜೇಂದ್ರಪ್ರಸಾದರು ಕಳೆದ ಬುಧವಾರ ದಿಲ್ಲಿಯ ನಭೋವಾಣಿಯಲ್ಲಿತ್ತ ಭಾಷಣದಲ್ಲಿ ಹಾರೈಸಿದಂತೆ, ನಾವು ಕೂಡ ಹಾರೈಸುವಾ

ಪೂರ್ವ ಪಾಕಿಸ್ತಾನದಲ್ಲಿ ನಡೆದ ಅತ್ಯಾಚಾರಗಳ ಉದ್ವೇಗಜನಕ ಕಥೆಗಳನ್ನು ಹೇಳಿ ಭಾರತೀಯರನ್ನು ಉದ್ರೇಕಿಸುವದು ಯಾ ಪಾಕಿಸ್ತಾನದ ಮೇಲೆ ದಂಡೆತ್ತಿ ಹೋಗಬೇಕು, ಪೂರ್ವ ಬಂಗಾಲದಲ್ಲಿ, ಹಿಂದೆ ಹೈದರಾಬಾದದಲ್ಲಿ ನಡಿಸಿದಂತೆ 'ಪೋಲೀಸ ಕ್ರಮ' ನಡಿಸಬೇಕು, ಅಲ್ಪಸಂಖ್ಯಾಕರ ವಿನಿಮಯ ಮಾಡಬೇಕು ಎಂದು ಮುಂತಾಗಿ ವಾದಿಸುವದು ಭಾರತೀಯರಿಗೆ ತರವಲ್ಲ ಪೂರ್ವ ಪಾಕಿಸ್ತಾನದಲ್ಲಿ ನಡೆದ ಅತ್ಯಾಚಾರಗಳಿಗೆ ಭಾರತೀಯರೂ ಕೆಲವಂಶದಿಂದ ಜವಾಬದಾರರಾಗುತ್ತಾರೆ ಪಾಕಿಸ್ತಾನಿಗಳಲ್ಲಿ ಕ್ರೋಧ, ದ್ವೇಷ ಅಥವಾ ಸೇಡಿನ ಬುದ್ಧಿ ಹುಟ್ಟಿಸುವಂತಹ ಉಕ್ತಿಗಳನ್ನು ಆಡುವವರು, ಕೃತಿಗಳನ್ನು ಮಾಡುವವರು ಯಾ ಲೇಖಗಳನ್ನು ಬರೆಯುವವರು ಆ ಕ್ರೋಧ ದ್ವೇಷಗಳಿಂದೆಸಗಿದ ಅತ್ಯಾಚಾರಗಳ ಹೊಣೆಯನ್ನು ತಪ್ಪಿಸಿಕೊಳ್ಳಲಾರರು ಪಾಕಿಸ್ತಾನದ ವಿರುದ್ಧ ಪೋಲೀಸ ಕ್ರಮ ನಡಿಸಬೇಕೆಂದು ಅಥವಾ ಅವಶ್ಯ ಕಂಡರೆ ಯುದ್ಧ ಸಾರಬೇಕೆಂದು ಹೇಳುವದು ಸುಲಭ! ಈ ಮಾತನ್ನಾಡುವವರಿಗೆ ಯುದ್ಧವೆಂದರೇನು ಪೋಲೀಸ ಕ್ರಮವೆಂದರೇನು ಎಂಬುದರ ಅರಿವಾದರೂ ತಿಳಿಯುತ್ತದೋ ಇಲ್ಲೋ ಎಂಬ ಸಂಶಯ ಬರುತ್ತಿದೆ! ೧೯೪೮ರಲ್ಲಿ ಹೈದರಾಬಾದದ ವಿರುದ್ಧ ಭಾರತದ ಸರಕಾರವು ನಡಿಸಿದ ಕ್ರಮ ಶೀಘ್ರದಲ್ಲಿ ಯಶಸ್ವಿಯಾಯಿತೆಂದು ಪೂರ್ವ ಪಾಕಿಸ್ತಾನದಲ್ಲೂ ಅದು ಯಶಸ್ವಿಯಾಗುವದೆಂದು ಹೇಳುವವರಿಗೆ ದಡ್ಡರೆನ್ನಬೇಕೋ ಹೆಡ್ಡರೆನ್ನಬೇಕೋ ತಿಳಿಯದು! ಇಲಿ ಹಿಡಿದ ಪಂಜರದಲ್ಲೇ ಹುಲಿ ಹಿಡಿಯುವ ಪ್ರಯತ್ನ ಮಾಡಬೇಕೆಂದು ಹೇಳುವವರಷ್ಟೇ ಈ ಮಂದಿ ಜಾಣರಿರುತ್ತಾರೆನ್ನು ಹೇಳಬಹುದು! ಪೂರ್ವ ಪಾಕಿಸ್ಥಾನದ ಮೇಲೆ ಭಾರತದ ಸೇನೆಯು ದಂಡೆತ್ತಿ ಹೋದರೆ ಪಶ್ಚಿಮ ಪಾಕಿಸ್ತಾನವು ಸುಮ್ಮಗುಳಿಯುವದೇ? ಪಾಕಿಸ್ತಾನವು ಹೈದರಾಬಾದದಷ್ಟು ನಿರ್ಬಲವಿರುವದಿಲ್ಲ ಪಾಕಿಸ್ತಾನದ ಜನ್ಮದ ಕಾಲದಲ್ಲಿದ್ದಕ್ಕಿಂತ ಅದು ಈಗ ಹಲವು ಪಟ್ಟು ಬಲಶಾಲಿಯಾಗಿರುತ್ತದೆಂದು ಪಾಕಿಸ್ತಾನದ ಮಹಾಮಂತ್ರಿಗಳು ಮೊನ್ನೆಯೇ ಹೇಳಿದ್ದಾರೆ ಒಂದು ವೇಳೆ ಪಾಕಿಸ್ತಾನವು ಅಷ್ಟೇನು ಬಲಶಾಲಿಯಿಲ್ಲ, ಅದನ್ನು ವಿಶೇಷ ಪ್ರಯತ್ನವಿಲ್ಲದೆ ಹಣಿಯಬಹುದು, ಮಣಿಸಬಹುದು ಎಂದು ಒಂದೊಮ್ಮೆ ಗೃಹೀತ ಹಿಡಿದು ನಡೆದಾಗ್ಯೂ ಹಿಂದ ಪಾಕಿಸ್ತಾನ ಯುದ್ಧವೆಸಗಿದಲ್ಲಿ ಪಾಕಿಸ್ತಾನದ ಸಹಾಯಕ್ಕೆ ಅನ್ಯರು ಓಡಿ ಬರಲಿಕ್ಕಿಲ್ಲೆಂದು ಯಾರಾದರೂ ಭರವಸೆ ಕೊಡಬಲ್ಲರೇ? ಬ್ರಿಟನ, ಅಮೇರಿಕಾ, ಆಫ್ರಿಕಾ ಇವುಗಳ ಸಹಾನುಭೂತಿ ಪಾಕಿಸ್ತಾನದ ಕಡೆಗುಂಟೆಂಬುದು ಈಗಾಗಲೇ ಸುಸ್ಪಷ್ಟವಾಗಿದೆ ಮೇಲಾಗಿ ಪಾಕಿಸ್ತಾನದ ಬೆನ್ನಿಗೆ ಇಸ್ಲಾಮ ರಾಷ್ಟ್ರಗಳಿವೆ ಧರ್ಮದ ಮಾತೆತ್ತಿದ ಕೂಡಲೆ ವಿವೇಕವನ್ನ ಅಥವಾ ಸಾರಾಸಾರ ಗ್ರಹಣದ ವಿಚಾರವನ್ನು ಮರೆತ ಬಿಡುವ ಈ ಇಸ್ಲಾಮ ರಾಷ್ಟ್ರಗಳು ಪಾಕಿಸ್ತಾನದ ಪಕ್ಷ ಹಿಡಿದು ರಣಭೂಮಿಯಲ್ಲಿಳಿಯಲಾರವೆಂದು ವಿಶ್ವಾಸ ಹಿಡಿಯಲಾಗುತ್ತದೆಯೇ? ಇಂತಹ ಪರಿಸ್ಥಿತಿಯಲ್ಲಿ ಪಂಡಿತ ಜವಾಹರಲಾಲರು ಪರಸ್ಪರ ವಿಚಾರ ವಿನಿಮಯದಿಂದಲೇ ಹಿಂದ-ಪಾಕ ವಿವಾದವನ್ನು ಬಗಹರಿಸಲು ಮುಂದಾದದ್ದು ಜಾಣತನದ ಮಾರ್ಗವಲ್ಲೆಂದು ಹೇಳಬಹುದೇ?

ಮೇಲಾಗಿ ಹಿಂದುಸ್ಥಾನ-ಪಾಕಿಸ್ತಾನಗಳ ಪರಸ್ಪರ ಸಂಲಗ್ನ ರಾಷ್ಟ್ರಗಳಾಗಿವೆ, ನೆರೆ ಹೊರೆಯ ರಾಷ್ಟ್ರಗಳಾಗಿವೆ ಈ ಎರಡೂ ರಾಷ್ಟ್ರಗಳು ನೆರೆ ಹೊರೆಯವರಂತೆ ಪ್ರೇಮದಿಂದ ಮತ್ತು ಪರಸ್ಪರ ಬಾಂಧವ್ಯ ಬುದ್ಧಿಯಿಂದ ಉಳಿದರೆ ಮಾತ್ರ ಪರಸ್ಪರರಿಗೆ ಸುಖವುಂಟು ಇಲ್ಲದಿದ್ದರೆ ಎರಡೂ ರಾಷ್ಟ್ರಗಳು ಪ್ರಗತಿ ಹೊಂದುವದರ ಬದಲು ಪರಾಗತಿ ಹೊಂದುತ್ತ ಹೋಗವವು ಈ ಮಾತನ್ನು ನಮ್ಮಂತೆ ಪಾಕಿಸ್ತಾನಿಗಳೂ ಮನಗಂಡು, ಭಾರತ ಪಾಕಿಸ್ತಾನಗಳು ಮಿತ್ರರಂತೆ, ಬಂಧುಗಳಂತೆ ಉಳಿಯುವ ಹಾಗೆ ದಿಲ್ಲಿಯಲ್ಲಿ ಕೂಡಿದ ಉಭಯ ಮಹಾಮಂತ್ರಿಗಳು ಯೋಜನೆ ಮಾಡಲೆಂದೂ, ಪರಮಾತ್ಮನು ಅವರಿಗೆ ಸರಿ ದಾರಿ ತೋರಲೆಂದೂ ನಾವೆಲ್ಲ ಹಾರೈಸುವಾ

* *

ಪಂ|| ಜವಾಹರಲಾಲ ನೆಹರುರವರಿಗೆ ಮೊಸ್ಕೋಕ್ಕೆ ಭೆಟ್ಟಿ ಕೊಡಲು ರಶಿಯ ಪ್ರಭು ಸ್ಟೆಲಿನ್ನರಿಂದ ನಿಮಂತ್ರಣ ಬಂದಿರುತ್ತದೆಂದು ತಿಳಿಯುತ್ತದೆ ಈಗ ರಶಿಯಾದೊಳಗ ಭಾರತದ ರಾಯಭಾರಿಗಳಾಗಿರುವ ಡಾ|| ಸರ್ವಪಳ್ಳಿ ರಾಧಾಕೃಷ್ಣನ್ನರು ಕೆಲ ಕಾಲದ ಹಿಂದೆ ಸ್ಟೆಲಿನ್ನರ ಭೆಟ್ಟಿ ತಕ್ಕೊಂಡಾಗಲೇ ಪಂ|| ನೆಹರರವರಿಗೆ ಮಾಸ್ಕೋಕ್ಕೆ ನಿಮಂತ್ರಣ ಕೊಡಬೇಕೆಂಬ ನಿರ್ಣಯವಾಗಿತ್ತಂತೆ ಪಂಡಿತಜಿಯವರು ಸ್ಟೆಲಿನರ ಈ ನಿಮಂತ್ರಣೆಯನ್ನು ನಿರಾಕರಿಸುವಂತಿಲ್ಲ

* *

ಹೈದರಾಬಾದದಿಂದ ಕರಾಚಿಗೆ ಕಳ್ಳತನದಿಂದ ಓಡಿಹೋದ ಮೀರ ಲಾಯಕ ಅಲ್ಲಿಯನ್ನು, ಅವನ ಅಪರಾಧಗಳ ವಿಚಾರಣೆಗಾಗಿ, ತಮಗೆ ಒಪ್ಪಿಸಬೇಕೆಂದ ಭಾರತ ಸರಕಾರವು ಪಾಕಿಸ್ತಾನ ಸರಕಾರಕ್ಕೆ ಹೇಳಬಹುದು, ಭಾರತ-ಪಾಕಿಸ್ತಾನ ಸರಕಾರಗಳೆರಡೂ ಬ್ರಿಟಿಶ ರಾಷ್ಟ್ರಕೂಟದ ಸದಸ್ಯರಾಗಿರುವದರಿಂದ ಪಾಕಿಸ್ತಾನವು ಭಾರತದ ಬೇಡಿಕೆಯನ್ನು ತಿರಸ್ಕರಿಸಬರುವಂತಿಲ್ಲ ಎಂಬ ದೊಂದು ಸೂಚನೆ ಮುಂದೆ ಬಂದಿದೆ ಆದರೆ ಪಾಕಿಸ್ತಾನವು ಭಾರತದ ಬೇಡಿಕೆಯನ್ನು ತಿರಸ್ಕರಿಸಿಬಿಟ್ಟರೆ—ಮೀರ ಲಾಯಕ ಅಲ್ಲಿಯ ಪಲಾಯನಕ್ಕೆ ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ನೆರವನ್ನಿತ್ತ ಪಾಕಿಸ್ತಾನ ಸರಕಾರವು ಅವನನ್ನು ಭಾರತಕ್ಕೆ ಒಪ್ಪಿಸಲು ಖಂಡಿತ ತಿರಸ್ಕರಿಸುವದೆಂದು ಬೇರೆ ಹೇಳಬೇಕೇ? — ಮುಂದೇನು ಎಂಬ ಪ್ರಶ್ನೆಗೆ ಈ ಸೂಚನೆ ಮಾಡಿದವರು ಸಮರ್ಪಕ ಉತ್ತರ ಕೊಡುವದಿಲ್ಲ! ರಾಷ್ಟ್ರಕೂಟದಲ್ಲಿ ಈ ಬಗ್ಗೆ ದಾವೆ ಹೂಡಬೇಕು ಮತ್ತು ಪಾಕಿಸ್ತಾನಕ್ಕೆ ಕೂಟದ ಇತರ ಸದಸ್ಯರ ಕಡೆಯಿಂದ ಒತ್ತಾಯ ಮಾಡಿಸ

ಬೇಕು ಎಂದು ಕದಂಬಿತ್ ಈ ಸ್ವದೇಶಸ್ಥರು ಉತ್ತರ ಕೊಡಬಹುದು! ಆದರೆ ರಷ್ಯ ಕೂಟದ ಇನ್ನಿತರ ಸದಸ್ಯರ ಬಲವತ್ತು ಯಾವ ಬಗೆ, ಇದೇ ಜನರು ಭಾರತದ ಬಗ್ಗೆ ಪಾಕಿಸ್ತಾನದ ಮನಸ್ಸು ನೋಯಿಸಲು ಎಷ್ಟರ ವರೆಗೆ ಸಿದ್ಧರಾದಾರು ಹಾಗೂ ಈ ಸದಸ್ಯರು ಒಂದು ವೇಳೆ ಆಗ್ರಹ ಹಿಡಿದರೆ ಪಾಕಿಸ್ತಾನವು ಆ ಆಗ್ರಹಕ್ಕೆ ಎಷ್ಟರ ಮಟ್ಟಿಗೆ ಮಾನ ಕೊಟ್ಟೀತು ಎಂಬೀ ಪ್ರಶ್ನೆಗಳೂ ಇವೆ ಆದರಿಂದಲೇ ಈ ಮಾರ್ಗವನ್ನು ಅನುಸರಿಸಲು ಹಿಂದುಸ್ಥಾನ ಸರಕಾರವು ಸಿದ್ಧವಿಲ್ಲೆಂದು ಉಪಮುಖ್ಯಮಂತ್ರಿ ಸರದಾರ ಪಟೇಲರು ಪಾರ್ಲಮೆಂಟಿನಲ್ಲಿ ಹೇಳಿರುತ್ತಾರೆ

ನಿಜಾಮ ಲಾಯಕ ಅಲ್ಲಿಯ ಪಲಾಯನಕ್ಕೆ ಸಹಾಯ ಮಾಡಿದವರೆಂದು ಸೆರೆಹಿಡಿಯಲ್ಪಟ್ಟವರ ಸಂಖ್ಯೆ ಈಗ ೧ಲಕ್ಕೆ ಮುಟ್ಟಿದೆ ಪೂರ್ಣ ಚೌಕಶಿ ಮಾಡಿದರೆ ಹೈದರಾಬಾದದೊಳಗಿನ ಎಷ್ಟೋ ಅಧಿಕಾರಿಗಳೂ ಪ್ರಮುಖರೂ ಕೂಡ ಈಗ ಸೆರೆಹಿಡಿಯಲ್ಪಟ್ಟವರ ಜೊತೆಗೆ ಆರೋಪಿಗಳಾಗಿ ನಿಲ್ಲುವ ಯೋಗ ಬಂದೀತೆಂದು ಔರಂಗಾಬಾದದಿಂದ ಸುದ್ದಿ ಹೊರಟಿದೆ ನಿಜಾಮ ಲಾಯಕ ಅಲ್ಲಿಯು ಓಡಿಹೋಗುವ ಪೂರ್ವದಲ್ಲಿ ಸ್ವತಃ ನಿಜಾಮರನ್ನು ಭೆಟ್ಟಿಯಾಗಿದ್ದನೆಂದೂ ಅವರ ಆಶೀರ್ವಾದ ಪಡೆದೇ ಅವನು ಪಲಾಯನ ಮಾಡಿರುತ್ತಾನೆಂದೂ ಔರಂಗಾಬಾದದಲ್ಲಿ ಮಾತು ಕೇಳಿಬರುತ್ತದಂತೆ! ಛತ್ತಾರಿಯ ನವಾಬ ಸರ್ ಮಿರ್ಝಾ ಇಸ್ಮಾಯಿಲರಂತಹ ಸಮತೂಕ ಬುದ್ಧಿಯ ಅನುಭವಿಕ ರಾಜಕಾರಣಿಗಳನ್ನು ಒದಿಗೊತ್ತಿ ನಿಜಾಮ ಲಾಯಕ ಅಲ್ಲಿಗೆ ತಮ್ಮ ಮಹಾಮಂತ್ರಿಯನ್ನಾಗಿ ನೇಮಿಸಿಕೊಂಡ ನಿಜಾಮರ ವಿರುದ್ಧ ಇಂತಹ ಆರೋಪಗಳು ಬರುವದು ಸ್ವಾಭಾವಿಕವಿರುತ್ತದೆ

• •

ಕಳೆದ ವಾರದಲ್ಲಿ ದೇಶದೊಳಗಿನ ವರಿಷ್ಠ ನ್ಯಾಯಾಲಯಗಳು ಕೆಲವೊಂದು ಘಟನಾತ್ಮಕ ಪ್ರಶ್ನೆಗಳ ಮೇಲೆ ಕೊಟ್ಟ ನಿರ್ಣಯಗಳು ನಮೂದಿಸತಕ್ಕಂತಹವಿವೆ. ಘಟನೆಯ ಅಭ್ಯಾಸಕರಿಗೆ ಬೋಧಪ್ರದವಿರುವ ಆ ನಿರ್ಣಯಗಳು ಇಂತಿವೆ — (೧) ಮುಂಬಯಿಯ ಕಾನೂನ ಮಂಡಳಗಳು ೨ ವರ್ಷಗಳ ಹಿಂದೆ ಒಂದು ಕಾನೂನು ಮಾಡಿ, ಮುಂಬಯಿ ನಗರದೊಳಗಿನ ರೂ ೧೦೦೦೦ ರ ವರೆಗಿನ ಮೊಬಲಗುಳ್ಳ ದಾವೆಗಳ ಇತ್ಯರ್ಥ ಮಾಡಲಿಕ್ಕೆ ಒಂದು ಸಿಟಿ ಸಿವ್ಹಿಲ ಕೋರ್ಟನ್ನು ಸ್ಥಾಪಿಸಿತ್ತು (ಈ ಕೋರ್ಟಿನ ಸ್ಥಾಪನೆಯಾಗುವ ಮುಂಚೆ ರೂ ೨೦೦ಕ್ಕೆ ಮೇಲ್ಪಟ್ಟ ಎಲ್ಲ ದಾವೆಗಳು ನಾಮದಾರ ಹಾಯಕೋರ್ಟಿನಲ್ಲೇ ನಡೆಯಬೇಕಾಗಿತ್ತು) ಸದರಿ ಸಿವ್ಹಿಲ ಕೋರ್ಟಿನ ಹಣ ಸಂಬಂಧಿ ಅಧಿಕಾರ ಮರ್ಯಾದೆಯನ್ನು ಇಷ್ಟ ಕಂಡರೆ ರೂ ೨೫೦೦೦ ದ ತನಕ ಬೆಳಸಲು ಸದರಿ ಕಾನೂನಿನ ೪ನೇ ಕಲಮು ಪ್ರಾಂತಿಕ ಸರಕಾರಕ್ಕೆ ಅಧಿಕಾರ ಕೊಟ್ಟಿತ್ತು. ಆ ಅಧಿಕಾರವನ್ನುಪಯೋಗಿಸಿ ಕಳೆದ ಜನವರಿಯಲ್ಲಿ ಮುಂಬಯಿ ಸರಕಾರವು ಸದರಿ ಸಿಟಿ ಸಿವ್ಹಿಲ ಕೋರ್ಟಿನ ಅಧಿಕಾರಕ್ಷೇತ್ರವನ್ನು ರೂ. ೨೫೦೦೦ ದ ತನಕ ಬೆಳೆಸುವ ಒಂದು ಪ್ರಕಟನೆಯನ್ನು ಹೊರಡಿಸಿತು ಈ ಪ್ರಕಟನೆ ಹೊರಟ ಕೆಲವೇ ದಿನಗಳಲ್ಲಿ ಓರ್ವನು ರೂ ೧೧೨೦೦ ದ ವಸೂಲಿಯ ಬಗ್ಗೆ ಒಂದು ದಾವೆಯನ್ನು ಸಿಟಿ ಸಿವ್ಹಿಲ ಕೋರ್ಟಿನಲ್ಲಿ ದಾಖಲಿಸದೆ ನಾಮದಾರ ಹಾಯಕೋರ್ಟಿನಲ್ಲೇ ದಾಖಲಮಾಡಿದರು ತನ್ನ ದಾವೆ ಸ್ವೀಕರಿಸಲಿಕ್ಕೆ ಸಿಟಿ ಸಿವ್ಹಿಲ ಕೋರ್ಟಿಗೆ ಅಧಿಕಾರವಿಲ್ಲೆಂದೂ ಆ ಕೋರ್ಟಿಗೆ ಅಧಿಕಾರ ಕೊಟ್ಟು ಸರಕಾರವು ಹೊರಡಿಸಿದ ಪ್ರಕಟನೆಯು ಅಧಿಕಾರಬಾಹ್ಯ ಮತ್ತು ಅಸಿಂಧುವಿರುತ್ತದೆಂದೂ ವಾದಿಯು ಸಾಧನೆಯಿತ್ತು. ಈ ಪ್ರಕರಣದಲ್ಲಿ ಮಹತ್ವದ ಘಟನಾತ್ಮಕ ಪ್ರಶ್ನೆ ಅಡಕವಾಗಿರುವದರಿಂದ ನ್ಯಾಯಮೂರ್ತಿಗಳು ಮುಂಬಯಿ ಸರಕಾರಕ್ಕೆ ಪಕ್ಷಕಾರವನ್ನಾಗಿ ಸೇರಿಸಿಕೊಂಡು ದಾವೆಯಲ್ಲಿ ಅಡಕವಾದ ಅಧಿಕಾರದ ಮೂಲಭೂತ ಪ್ರಶ್ನೆಯನ್ನು ಇತ್ಯರ್ಥಕ್ಕಾಗಿ ನ್ಯಾಯಮೂರ್ತಿಗಳ ಮಂಡಳದ ಮುಂದಿಟ್ಟರು ಕಳೆದ ವಾರ ನ್ಯಾಯಮೂರ್ತಿ ಮಂಡಳವು ವಾದಿಯ ವಕೀಲರ ಹಾಗೂ ಸರಕಾರಿ ವಕೀಲರ ಪ್ರತಿಪಾದನೆಗಳನ್ನು ಪೂರ್ಣವಾಗಿ ಕೇಳಿಕೊಂಡು, ಸಿಟಿ ಸಿವ್ಹಿಲ ಕೋರ್ಟಿನ ಅಧಿಕಾರ-ಮರ್ಯಾದೆಯನ್ನು ಸ್ವತಃ ಕಾನೂನ ಮಂಡಳವು ಬೆಳೆಸಬಹುದಾಗಿತ್ತೆಂದೂ ಅದನ್ನು ಬೆಳೆಸುವ ಅಧಿಕಾರವನ್ನು ಅದು ಸರಕಾರಕ್ಕೆ ಕೊಟ್ಟದ್ದು ಅಕ್ರಮವಿರುತ್ತದೆಂದೂ, ಸಿಟಿ ಸಿವ್ಹಿಲ ಕೋರ್ಟ ಕಾನೂನಿನ ೪ನೆಯ ಕಲಮಿನ ಅಂಶವು ಈ ಮೂಲಕ ಅಸಿಂಧವಿರುತ್ತದೆಂದೂ, ಆ ಕಲಮಿನನ್ವಯ ಮುಂಬಯಿ ಸರಕಾರವು ಹೊರಡಿಸಿದ ಪ್ರಕಟನ ಕಾನೂನ ಸಮ್ಮತವಿರುವದಿಲ್ಲೆಂದೂ, ವಾದಿಯು ದಾವೆ ಸಿಟಿ ಕೋರ್ಟಿನಲ್ಲಿ ನಡೆಯುವಂತಿಲ್ಲವಾದ್ದರಿಂದ ಹಾಯಕೋರ್ಟಿನಲ್ಲಿ ಅದು ದಾಖಲ ಮಾಡಿದ್ದು ಸರಿಯಿರುತ್ತದೆಂದೂ ತೀರ್ಮಾನಿಸಿರುತ್ತಾರೆ ಸರಕಾರವು ಪಡೆಯಬಹುದಾದ ಅಧಿಕಾರಕ್ಕೆ ಒಂದು ಮಿತಿಯುಂಟು ಎಂಬುದು ಈ ನಿರ್ಣಯದಿಂದ ಸಿದ್ಧವಾಗಿದೆ (೨) ಪಾಟಣಾ ಹಾಯಕೋರ್ಟಿನ ನ್ಯಾಯಮೂರ್ತಿಗಳ ಪೂರ್ಣಮಂಡಳ (ಫುಲ್ ಬೆಂಚ) ದ ಮುಂದೆ ಬಿಹಾರ ಸಾರ್ವಜನಿಕ ಭದ್ರತೆಯ ಕಾನೂನು ಎಷ್ಟರ ಮಟ್ಟಿಗೆ ಅಧಿಕೃತವಿರುತ್ತದೆಂಬ ಪ್ರಶ್ನೆಯೊಂದು ಉದ್ಭವಿಸಿತ್ತು ಈ ಕಾನೂನಿನನ್ವಯ ಬಿಹಾರ ಪ್ರಾಂತದ ಸರಕಾರದವರು ಶ್ರೀ|| ಬ್ರಜನಾಥ ಶರ್ಮಾ ಎಂಬವರ ವಿರುದ್ಧ ಸಿಂಗಭೂಮ ಮತ್ತು ಮನಭೂಮ ಜಿಲ್ಹೆಗಳಲ್ಲಿ ಪ್ರವೇಶ ಮಾಡಕೂಡದೆಂದೂ ಒಂದು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದರು ಶ್ರೀ|| ಶರ್ಮಾ ಇವರು ಈ ಆಜ್ಞೆ ಅಕ್ರಮವಿರುತ್ತದೆಂದು ನಿರ್ಣಯಿಸಿಕೊಳ್ಳಲು ಪಾಟಣಾ ಹಾಯಕೋರ್ಟಿನಲ್ಲಿ ಅರ್ಜಿ ಮಾಡಿದ್ದರು ನ್ಯಾಯಮೂರ್ತಿಗಳು ಶ್ರೀ|| ಶರ್ಮಾ ಇವರ ಪಕ್ಷವನ್ನು ಎತ್ತಿ ಹಿಡಿದು, ಕೆಲವೊಂದು ಜಿಲ್ಹೆಗಳಲ್ಲಿ ಅವರು ಪ್ರವೇಶ ಮಾಡಕೂಡದೆಂದೂ ಸಂಚರಿಸಕೂಡದೆಂದೂ ಸರಕಾರವು ಹೊರಡಿಸಿದ ಆಜ್ಞೆಯು ಭಾರತದ ಪ್ರಜಾರಾಜ್ಯಘಟನೆಯ ೧೯(೧)ನೇ ಕಲಮಿಗೆ(ಭಾರತೀಯ ಪ್ರಜಾ ಜನರು ದೇಶದೊಳಗೆ ತಮಗೆ ಬೇಕಾದಲ್ಲಿ ಸಂಚರಿಸಲು ಸ್ವತಂತ್ರರಿರುತ್ತಾರೆಂದು ಹೇಳಿ ಘಟನೆಯು ಇತ್ತ ಸಂಚಾರ ಸ್ವಾತಂತ್ರ್ಯದ ಅಂಶಕ್ಕೆ) ವಿರುದ್ಧವಿರುತ್ತದೆಂದೂ, ಈ ಕಾರಣ ಅಕ್ರಮವಿರುತ್ತದೆಂದೂ ಇಂತಹ ಆಜ್ಞೆ ಹೊರಡಿಸಲು ಸರಕಾರಕ್ಕೆ ಅಧಿಕಾರ ಕೊಡುವ ಬಿಹಾರ ಭದ್ರತಾ ಕಾನೂನು ಕೂಡ ಅಕ್ರಮವಿರುತ್ತದೆಂದೂ ನಿರ್ಣಯ ಕೊಟ್ಟಿರುತ್ತಾರೆ (೩) ಮದ್ರಾಸ ಹಾಯಕೋರ್ಟಿನಲ್ಲಿ ಪುನಃ ಆ ಪ್ರಾಂತದ ಸಾರ್ವಜನಿಕ ಭದ್ರತೆಯ ಕಾನೂನಿನ ಕ್ರಮಬದ್ಧತೆಯ ಪ್ರಶ್ನೆಯುದ್ಭವಿಸಿತ್ತು. ಕಳೆದ ವರ್ಷವೇ ಆದ ಈ ಕಾನೂನಿನನ್ವಯ ಮದ್ರಾಸ ಸರಕಾರವು ಬಂಧಿಸಿಟ್ಟ ಶ್ರೀ|| ವೆಂಕಟ್ರಮಣ ಮತ್ತು ವೆಂಕಟೇಶ್ವರ ಎಂಬ ಇಬ್ಬರು ಕಮ್ಯುನಿಸ್ಟ ಪಕ್ಷದ ಗೃಹಸ್ಥರು ತಮ್ಮ ಬಂಧನ ಕಾನೂನುಬಾಹ್ಯವಿರುತ್ತದೆಂದೂ, ತಮ್ಮ ಬಿಡುಗಡೆ ಮಾಡಬೇಕೆಂದೂ ಹಾಯಕೋರ್ಟಿಗೆ ಅರ್ಜಿ ಮಾಡಿದ್ದರು ತಾ ೨೬—೧—೧೯೫೦ ನೇ ದಿವಸ ಅಮಲಿನಲ್ಲಿ ಬಂದ ಹೊಸ ಪ್ರಜಾರಾಜ್ಯ ಘಟನೆಯು ಹೇಳಿರುವ ಪ್ರಜೆಗಳ ಮೂಲಭೂತ ಹಕ್ಕುಗಳ ಮೇಲೆ ಗದೆ ಎತ್ತುವ ಸದರಿ ಕಾನೂನು ಜನವರಿ ತಾ ೨೬ ನೇ ದಿನ ರದ್ದಾದಂತೆಯೇ ಸರಿ ಎಂದು ಮುಖ್ಯ ನ್ಯಾಯಾಧೀಶ ಶ್ರೀ|| ಗೋವಿಂದ ಮೆನನ ಮತ್ತು ನ್ಯಾ|| ಮೂ|| ಕೃಷ್ಣಸ್ವಾಮಿ ನಾಯುಡು ಇವರು ನಿರ್ಣಯ ಕೊಟ್ಟದ್ದಲ್ಲದೆ, ಬೇರೆ ಬೇರೆ ಕಾನೂನುಗಳಿಗನುಸಾರವಾಗಿ ಬಂಧನದಲ್ಲಿದ್ದವರ ಬಂಧನಗಳನ್ನು ಜನವರಿ ತಾ ೨೬ ರ ನಂತರ ಕಾನೂನ ಬದ್ಧ ಮಾಡುವದಕ್ಕಾಗಿ ರಾಷ್ಟ್ರಪತಿಗಳ ಪ್ರಜಾರಾಜ್ಯೋದಯವಾದ ಕೂಡಲೆ ಹೊರಡಿಸಿದ ಸುಗ್ರೀವಾಜ್ಞೆಯೂ (ಆರ್ಡಿನನ್ಸ) ಕೂಡ ಅಧಿಕಾರಬಾಹ್ಯ ಮತ್ತು ಅಕ್ರಮವಿರುತ್ತದೆಂದು ಸಾರಿರುತ್ತಾರೆ ಮತ್ತು ಅರ್ಜಿದಾರರ ಬಿಡುಗಡೆ ಮಾಡಲು ಸರಕಾರಕ್ಕೆ ಅಪ್ಪಣೆ ಮಾಡಿರುತ್ತಾರೆ ಈ ತೀರ್ಮಾನದಿಂದ ಮಾತ್ರ ಅರ್ಜಿದಾರರ ಬಿಡುಗಡೆಯಾಗಿರುವದಿಲ್ಲ ಮೊನ್ನೆಯೇ ಕೇಂದ್ರ ಕಾನೂನ-ಸಭೆಯು ಮಾಡಿದ ಹೊಸ ಭದ್ರತಾ ಕಾನೂನಿನನ್ವಯ ಹೊಸ ಹುಕುಮನ್ನು ಹೊರಡಿಸಿ ಮದ್ರಾಸ ಸರಕಾರವು ಅವರನ್ನು ಇನ್ನೂ ಬಂಧನದಲ್ಲಿಯೇ ಇಟ್ಟಿದೆ! (೪) ಕೇಂದ್ರ ಕಾನೂನ ಸಭೆಯ ಸದರಿ ಹೊಸ ಭದ್ರತಾ ಕಾನೂನಿನ ಕ್ರಮಬದ್ಧತೆಯ ಪ್ರಶ್ನೆಯೂ ಕೂಡ ನಾಗಪುರ ಹಾಯಕೋರ್ಟಿನ ಮುಂದೆ ಉದ್ಭವಿಸಿತ್ತು ಈ ಕಾನೂನಿನಂತೆ ನಿರ್ಬಂಧಿಸಲ್ಪಟ್ಟವರಿಗೆ ಸ್ಥಾನಬದ್ಧತೆಯ ಕಾರಣಗಳನ್ನು ತಿಳಿಸಬೇಕಾಗಿಲ್ಲೆಂದು ಅದೇ ಕಾನೂನಿನ ೧೪ನೆಯ ಕಲಮಿನಲ್ಲಿ ಹೇಳಲಾಗಿದೆ ಸದರಿ ಕಾನೂನಿನನ್ವಯ ಸ್ಥಾನಬದ್ಧರಾಗಿಡಲ್ಪಟ್ಟ ೬ ಜನರು ನಾಗಪುರ ಹಾಯಕೋರ್ಟಿಗೆ ಅರ್ಜಿ ಮಾಡಿ, ತಮಗೆ ಸ್ಥಾನಬದ್ಧತೆಯ ಕಾರಣಗಳನ್ನು ತಿಳಿಸಿಲ್ಲೆಂದೂ, ಆದರಿಂದ ತಮ್ಮ ಬಂಧನವು ಅಕ್ರಮವಿರುತ್ತದೆಂದೂ ಹೊಸ ಭದ್ರತಾ ಕಾನೂನಿನ ೧೪ನೆಯ ಕಲಮು ಕೂಡ, ಪ್ರಜಾರಾಜ್ಯ ಘಟನೆಯಲ್ಲಿ ಹೇಳಿರುವ ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಅದು ವಿಸಂಗತವಿರುತ್ತದಾದ್ದರಿಂದ ಅಸಿಂಧವಿರುತ್ತದೆಂದೂ ವಾದಿಸಿದ್ದರು ನ್ಯಾಯಮೂರ್ತಿ ಹೇಮಾನ್ನ ಮತ್ತು ಮುಧೋಳಕರ ಇವರು ಸದರಿ ೧೪ನೆಯ ಕಲಮು ಘಟನೆಯಂತೆ ಅಕ್ರಮವಾಗುವದಿಲ್ಲೆಂದು ನಿರ್ಣಯಿಸಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿರುತ್ತಿದ್ದರೂ ಸ್ಥಾನಬದ್ಧತೆಯ ಕಾರಣಗಳನ್ನು ತಿಳಿಸದೆ ಯಾರೊಬ್ಬರನ್ನು ಬಂಧಿಸಿಡುವದು ನ್ಯಾಯಸಮ್ಮತವಾಗುವಂತಿಲ್ಲೆಂದೂ ಕಾನೂನ ಸಭೆಯು ತನ್ನ ಕಾನೂನಿನಲ್ಲಿ ಯೋಗ್ಯ ತಿದ್ದುಪಡಿ ಮಾಡಿ, ಬಂಧಿತರಿಗೆ ಬಂಧನೆಯ ಕಾರಣಗಳನ್ನು ಸರಕಾರವು ತಿಳಿಸಿ ಬಂಧನದ ನ್ಯಾಯ್ಯಾನ್ಯಾಯ್ಯತೆಯನ್ನು ನಿರ್ಣಯಿಸಿಕೊಳ್ಳಲು ಅವರಿಗೆ ಅವಕಾಶ ಕೊಡುವಂತೆ ಏರ್ಪಾಟು ಮಾಡಬೇಕೆಂದೂ ಸೂಚನೆ ಕೊಟ್ಟಿರುತ್ತಾರೆ

ಭಾರತದ ಸರ್ವಶ್ರೇಷ್ಠ ನ್ಯಾಯಾಲಯದ ಮುಂದೂ ಪ್ರಜೆಗಳ ಮೂಲ ಹಕ್ಕುಗಳ ಪ್ರಶ್ನೆಯನ್ನೊಳಗೊಂಡ ಒಂದು ಮಹತ್ವದ ಪ್ರಕರಣದ ವಿಚಾರ ಇದೀಗ ನಡೆದಿದೆ ಅಲ್ಲಿ ಏನು ತೀರ್ಮಾನವಾಗುತ್ತದೆಂದು ನೋಡಬೇಕು

ಜಿಲ್ಲಾ ಸಮಾಚಾರ.

ಕಾರವಾರ— [illegible]

[illegible]

[illegible]

[illegible]

[illegible]

ಅಂಕೋಲಾ— [illegible]

[illegible]

ಯಲ್ಲಾಪುರ— [illegible]

[illegible]

ಜಾಹೀರ ವಿನಂತಿ

[illegible] ಶ್ರೀ [illegible] ದೇವರ [illegible] —

[illegible] ಶ್ರೀ ದೇವಸ್ಥಾನದ [illegible] ಶ್ರೀ ದೇವರ [illegible] ಅ ಬಗ್ಗೆ ನಮ್ಮ [illegible] ಶ್ರೀ ದೇವರ [illegible] ಶ್ರೀ ದೇವರ [illegible] ಶ್ರೀ ದೇವ [illegible] ವಿನಂತಿ

[illegible], ಸುಬ್ರಾಯ ವಿಷ್ಣೇಶ್ವರ ಭಟ್ಟ
[illegible] ಅ. ವಿ ದೇವನಳ್ಳಿ
ಮಂಜುನಾಥ ದೇವರ ಹೆಗಡೆ
ಚನ್ನಯ್ಯಾ [illegible] ಗೌಡಾ, [illegible]
ಮೊಕ್ತೇಸರರು.

ಪ್ರಯಾಣಿಕರ ಇಂದಿನ ಆವಶ್ಯಕತೆ ?

ಸ್ವಚ್ಛತೆ ! ನೀತಿ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — ಕೆನರಾದಿಂದ ([illegible] ಹಾಗೂ [illegible] ಮೋಟಾರ ಸರ್ವಿಸ್ಸಿನಿಂದ) ನಮ್ಮಲ್ಲಿ [illegible] ಪ್ರಯಾಣಿಕರ [illegible] ಮತ್ತೆ, ಬೆಳಗಾವ [illegible] ಬೆಳಗಾವ ಮೇಲ ಗಾಡಿಗಳ ಪ್ರಯಾಣಿಕರಿಗೆ [illegible] ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ: — ಮ್ಹಾಳಪ್ಪಾ ಪೈ.

ದ ಸುದ್ದಿಯುಂಟು. ಪೋಲೀಸರು ಮುತ್ತಿದಾಗ ಸರಾಯಿಗಳ್ಳರು ಸರಾಯಿ-ಭಟ್ಟಿಯನ್ನು ಅಲ್ಲಿಯೇ ಬಿಟ್ಟರಂತೆ. ಅವರ ಬಳಿ ಬಹಳಷ್ಟು ರಸಾಯನವೂ ಸಿಕ್ಕಿರುತ್ತದಂತೆ. ಈ ಸರಾಯಿಗಳ್ಳರನ್ನು ಹಿಡಿದಂದಿನಿಂದ ಸ್ಥಾನಿಕ ಕುಡುಕರನೇಕರು ಹುಚ್ಚು ಹಿಡಿದಂಥವರಾಗಿದ್ದಾರಂತೆ!

ಅಕ್ಕಿ-ಭತ್ತಗಳ ಗ್ರಾಹಕರ ಬಗ್ಗೆ ಅಪ್ಪಣೆ-ಚೀಟಿ ಬೇಡಿ ಬಂದ ಹಳ್ಳಿಗರಿಗೆ ಮಾಮಲೇದಾರರು ಬಹಳ ತುಚ್ಛತೆಯಿಂದ ನಡೆಸುತ್ತಾರೆಂದು ದೂರು ಕೇಳಬರುತ್ತಿದೆ. ಹಾಸಣಗಿ ಗ್ರಾಮದ ರಾ|| ಮಹಾಬಲೇಶ್ವರ ಹೆಗಡೆ ಇವರು ಸರಕಾರಕ್ಕೆ ಈಗಾಗಲೇ ೩೦ ಚೀಲ ಭತ್ತ ಸರಕಾರಕ್ಕೆ ಕೊಟ್ಟಿರುತ್ತಾರೆ. ಇನ್ನುಳಿದ ೧೭ ಚೀಲ ಭತ್ತ ಮನೆಗೆ ತರಲು ಅಪ್ಪಣೆ ಕೊಡಬೇಕೆಂದು ಅವರು ಮಾಮಲೇದಾರರ ಕಡೆಗೆ ಹೋದಾಗ, "ನೀವು ಹಳ್ಳಿಯವರು ಮೋಸಗಾರರು ಸಾಕ್ಕು, ಹೇಳುತ್ತೀರಿ!" ಎಂದು ಅಪಮಾನಕಾರಕ ನುಡಿಗಳನ್ನಾಡಿದರಂತೆ. ರಾ|| ಹೆಗಡೆಯವರಿಗೆ ಮಾಮಲೇದಾರರ ಈ ಕಟೂಕ್ತಿಗಳನ್ನು ಕೇಳಿ ತೀವ್ರ ವೇದನೆಗಳಾದವಂತೆ. ಅಧಿಕಾರಿಗಳು ಹಳ್ಳಿಗರೊಡನೆ ಈ ರೀತಿ ವರ್ತಿಸುವದು — ಅದೂ ಈಗಿನ ಜನತೆಯ ರಾಜ್ಯದಲ್ಲಿ — ಉಚಿತವೇನು?

ಇಲ್ಲಿಯ ಪ್ರಮುಖ ವಕೀಲ ರಾ|| ನಾರಾಯಣ ದಾದಾ ಕಾಮತ ಇವರು ಕಳೆದ ಸೋಮವಾರ ಬೆಳಗ್ಗೆ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಮೃತರು ಸಹನಶೀಲರೂ, ಪ್ರೇಮಾದರಗಳಿಂದ ಜನರನ್ನು ಆಕರ್ಷಿಸುವವರೂ ಆಗಿದ್ದರು. ಇವರ ಮನೆಯಲ್ಲಿ ೬೩ ಜನರಿದ್ದಾರೆ. ಇಷ್ಟು ದೊಡ್ಡ ಕುಟುಂಬ ನಮ್ಮಲ್ಲಿ ಕಡೆ ಎಲ್ಲೂ ಕಾಣಸಿಗುವದಿಲ್ಲ. ಇಂಥಹ ದೊಡ್ಡ ಕುಟುಂಬವನ್ನು ಸದಾದೃಷ್ಟಿಯಿಂದಲೂ, ಸಮಸ್ತರ ಸ್ನೇಹ-ಸಹಕಾರಗಳಿಂದಲೂ ನಡೆಸಿಕೊಂಡು ಹೋಗುವ ಜಾಣ್ಮೆ ಮೃತರಲ್ಲಿತ್ತು. ಅವರ ಸ್ಮಶಾನ ಯಾತ್ರೆಗೆ ೧೫೦ಕ್ಕೆ ಮಿಕ್ಕಿ ಜನರು — ಊರಿನ ಜನಸಂಖ್ಯೆಯ ೩/೪ ಪಾಲು — ಕೂಡಿದ್ದರು. ಊರಲ್ಲಿ ಅವರ ನಿಧನದ ನಿಮಿತ್ತ ಹರತಾಳವಾಚರಿಸಲ್ಪಟ್ಟಿತು. ಮೃತಾತ್ಮರಿಗೆ ದೇವರು ಸದ್ಗತಿಯನ್ನೀಯಲಿ!

ಹಳಿಯಾಳ— (ತಾ. ೩-೩-೫೦) ಈ ಊರಲ್ಲಿ ಆಧುನಿಕ ಪದ್ಧತಿಯ ಹೆರಿಗೆ-ಮನೆಯನ್ನೊಂದು ಕಟ್ಟಿಸಬೇಕೆಂದು ಸಂಕಲ್ಪಿಸಿ, ಈಗೊಂದು ವರುಷದಿಂದ ಇಲ್ಲಿಯ ಪ್ರಮುಖರು ರೂ. ೩೦,೦೦೦ಕ್ಕೆ ಮೇಲ್ಪಟ್ಟು ಹಣ ಕೂಡಿಸಿದ್ದಾರೆ. ಆದರೆ ಹೆರಿಗೆಮನೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆದುದು ಎಲ್ಲೂ ಕಂಡು ಬರುವದಿಲ್ಲ! ಇಷ್ಟು ಹಣದಿಂದ ಹೆರಿಗೆಮನೆಯಾಗದೆಂದು ನಿಧಿ-ಸಂಗ್ರಾಹಕರು ಅಂದುಕೊಂಡಿರುತ್ತಿದ್ದರೆ, ಕೂಡಿದ ನಿಧಿಯಿಂದ ಹೆರಿಗೆಮನೆಗೆ ಅನುಕೂಲವಾಗುವಂಥಹ ಕಟ್ಟಡವನ್ನು ಅವರು ಕಟ್ಟಿಸಿ, ತಾತ್ಕಾಲಿಕ ಅದನ್ನು ಸ್ತ್ರೀಯರ ಚಟುವಟಿಕೆಗಳ ಬಗ್ಗೆ ಉಪಯೋಗಿಸಲು ಕೊಡಬೇಕೆಂದೂ, ಮುಂದೆ ಪರಿಸ್ಥಿತಿ ಅನುಕೂಲವಾದಾಗ ಹೆರಿಗೆಮನೆಯನ್ನು ತೆರೆಯಲು ಸುಲಭವಾಗುವದೆಂದೂ ರಾ|| ಬಿ. ಟಿ. ಆಚಾರ್ಯರು ಸಲಹೆ ಕೊಡುತ್ತಾರೆ.

ದಾಂಡೇಲಿಯಲ್ಲಿ ಬೆಂಕಿಯ ಅಪಘಾತ ನಡೆದಾಗ ಬೆಂಕಿ ಹತ್ತಿದ ಮರವೊಂದನ್ನು ಜನರು ಕಡಿದು ತೆಗೆದ ಬಗ್ಗೆ ಜಂಗಲ ಅಧಿಕಾರಿಗಳು ಸಿಟ್ಟಿಗೆದ್ದು ಜನರಿಗೆ ಬೈದರೆಂದು ಮುಂದಾಗಿ ತಾ. ೨೦-೩-೧೯೫೦ರ "ವೃತ್ತ"ದಲ್ಲಿ ಬಂದ ಟೀಕೆಯನ್ನು ಅನುಲಕ್ಷಿಸಿ ದಾಂಡೇಲಿಯ ಕಟ್ಟಿಗೆ ವ್ಯಾಪಾರಿಗಳಾಗಿರುವ ರಾ|| ಕೇಶವ ಕೋಠಾರಿ ಇವರು ತಿಳಿಸುತ್ತಾರೇನೆಂದರೆ:— ಡಿ. ಎಫ್. ಓ. ಸಾಹೇಬರು ಮರ ಕಡಿದವರಿಗೆ ಬೈದರೆಂಬುದು ನಿಜವಲ್ಲ. ಈ ಮರದ ಒಂದು ಟೊಂಗೆಗಷ್ಟೇ ಬೆಂಕಿ ಹತ್ತಿತ್ತು. ಆ ಟೊಂಗೆಯನ್ನು ಕಡಿದರೆ ಸಾಕೆಂದೂ, ಇಡೀ ಮರವನ್ನು ಕಡಿಯುವದು ಅಗತ್ಯವಿಲ್ಲೆಂದೂ, ಮರ ಕಡಿಯುವಲ್ಲಿ ವೇಳೆ ಮತ್ತು ಶ್ರಮ ವಿನಾಕಾರಣ ವ್ಯಯಿಸುವದು ಬೇಡೆಂದೂ ಸಾಹೇಬರು ಹೇಳಿದ್ದರು. ಹೊರತು ಮರದ ಪ್ರೇಮದಿಂದ ಅವರು ಮರ ಕಡಿಯುವದು ಬೇಡೆಂದು ಹೇಳಿದ್ದಲ್ಲ. ಜನರು ಮಾತ್ರ ಅವರ ಮಾತಿನ ಅಪಾರ್ಥ ಮಾಡಿಕೊಂಡರು! ಬೆಂಕಿಯನ್ನು ಆರಿಸಲು ತಮ್ಮ ಕಚೇರಿಯ ನೀರು, ಕೆಳ ಮಂತಾದವುಗಳನ್ನು ಉಪಯೋಗಿಸಗೊಟ್ಟು ನೆರವಾದ ಸಾಹೇಬರಿಗೆ ಜನರು ಈ ರೀತಿ ದೂಷಣಗಳನ್ನು ಕೊಡುವದು ತಪ್ಪು. ಇತ್ಯಾದಿ.

(ತಾ. ೨೨-೩-೫೦) ಇಂದು ಈ ತಾಲೂಕಿನ ಬೆಳವಟಗಿ, ನಂದಿಗದ್ದೆ, ಬಸವಳ್ಳಿ ಮತ್ತು ಜನಗೆ ಗ್ರಾಮಗಳಲ್ಲಿ "ಲೆವ್ಹಿ ದಿನ"ದ ಆಚರಣೆಯಾಯಿತು. ಕಳೆದ ತಿಂಗಳಲ್ಲಿ ಮದನಳ್ಳಿಯಲ್ಲಿ ಆದ ಆಚರಣೆಗಿಂತಲೂ ಈ ಗ್ರಾಮಗಳೊಳಗಿನ ಆಚರಣೆ ಮಿಗಿಲಾಯಿತೆಂದು ಹೇಳಿದರೆ ತಪ್ಪಾಗುವಂತಿಲ್ಲ. ಜಿಲ್ಹಾಧಿಕಾರಿ ಪರ್ಸನಲ್ ಅಸಿಸ್ಟಂಟರು ಇಂದಿನ ಸಮಾರಂಭದ ಅಧ್ಯಕ್ಷರಾಗಿದ್ದರು. ಅವರೂ ಸ್ಥಾನಿಕ ಅಧಿಕಾರಿಗಳೂ ಬೆಳವಟಗಿಯಲ್ಲಿ ಕೂಡಿದ ಪ್ರಚಂಡ ಸಭೆಯಲ್ಲಿ ಭಾಷಣಗಳನ್ನು ಮಾಡಿ ಸರಕಾರದವರ ಈಗಿನ ಖರೀದಿಯ ಕಾರ್ಯದಲ್ಲಿ ಜನರು ಸಂಪೂರ್ಣ ಸಹಕಾರ ನೀಡುವದರ ಆವಶ್ಯಕತೆಯನ್ನು ತಿಳಿಸಿಹೇಳಿದರು. ಬಸವಳ್ಳಿ, ಬೆಳವಟಗಿ, ನಂದಿಗದ್ದೆ ಮತ್ತು ಜನಗೆ ಗ್ರಾಮಗಳಲ್ಲಿ ಈ ವರ್ಷ ಸರಕಾರದವರು ಅನುಕ್ರಮವಾಗಿ ೧೨೫೬, ೩೧೭೪, ೨೩೬೪, ೨೭೦೩ ಚೀಲ ಭತ್ತ ಖರೀದಿಸಬೇಕೆಂದು ಗೊತ್ತು ಮಾಡಿರುತ್ತಿದ್ದು, ಆ ಗ್ರಾಮಗಳ ರೈತರು ಅವರಿಗೆ ಅನುಕ್ರಮವಾಗಿ ೧೩೫೨, ೨೭೫೨, ೧೯೪೬ ಮತ್ತು ೨೪೪೩ ಚೀಲ ಭತ್ತ ಕೊಟ್ಟಿರುತ್ತಾರೆ. ಇಂದು ಅವರಿಂದ ವಸೂಲಾದ ಭತ್ತವೇ ೨೭೮೫ ಚೀಲಗಳಷ್ಟಿದೆ! ಸರಕಾರದವರು ಗೊತ್ತುಪಡಿಸಿದ್ದಕ್ಕಿಂತ ೯೫ ಚೀಲ ಹೆಚ್ಚಿಗೆ ಭತ್ತ ಕೊಟ್ಟ ಬಸವಳ್ಳಿ ಗ್ರಾಮಕ್ಕೆ ಇಂದಿನ ಸಮಾರಂಭದಲ್ಲಿ ಮೊದಲನೇ ಬಹುಮಾನ ಸಿಕ್ಕಿತು.

(ತಾ. ೨೩-೩-೫೦) ನಂದಿಗದ್ದೆಯ ಸಾಮಾಜಿಕ ಶಿಕ್ಷಣ (ಪ್ರೌಢ ಶಿಕ್ಷಣ) ವರ್ಗದ ವಿದ್ಯಾರ್ಥಿಗಳು ಇಂದು "ಕೃಷ್ಣಾರ್ಜುನರ ಕಾಳಗ" ಎಂಬ ಯಕ್ಷಗಾನ ಆಟವನ್ನು ಆಡಿತೋರಿಸಿದರು. ಈ ಆಟ ನೋಡಲು ಸಾವಿರಾರು ಜನರು ಕೂಡಿದ್ದರು.

ಸುಪಾ— (ತಾ. ೩೦-೩-೫೦) ರಾ|| ಪರುಳೇಕರ ಇವರ ರಾಜೀನಾಮೆಯಿಂದ ತೆರವಾದ ಜಿಲ್ಹಾ ಲೋಕಲ ಬೋರ್ಡಿನ ಸದಸ್ಯ ಸ್ಥಳದ ಬಗ್ಗೆ ಈಗ ನಡೆಯುವ ಉಪಚುನಾವಣೆಗಾಗಿ ಜಗಲಬೇಟದ ರಾ|| ವಿ. ದ. ಮಾಳಗಾಂವಕರ ಇವರೂ ರಾ|| ಪರುಳೇಕರರೂ ಹುರಿಯಾಳುಗಳಾಗಿ ನಿಂತಿರುತ್ತಾರೆ. ಎರಡೂ ಮಂದಿಯ ಹುರಿಯಾಳುಗಳ ಅರ್ಜಿಗಳು ಸಿನ್ನಯೋ ಹಾಜರಾಗಿವೆ. [ರಾ|| ಗೋವಿಂದರಾವ ಪರುಳೇಕರರು ರಾಜೀನಾಮೆ ಕೊಟ್ಟಿದ್ದೇಕೆ, ಉಪಚುನಾವಣೆ ನಡೆಸಬೇಕಾದಂಥಹ ಪ್ರಸಂಗ ಬಂದದ್ದೇಕೆ ಮತ್ತು ಆ ಉಪಚುನಾವಣೆಗೆ ಪುನಃ ಹುರಿಯಾಳುಗಳಾಗಿ ನಿಂತಿರುವದೇಕೆ ಎಂಬುದು ತಿಳಿಯದು! ನಮಗಂತೂ ರಾ|| ಪರುಳೇಕರರ ಈ ವರ್ತನೆ ಬರೇ ಮಕ್ಕಳಾಟ (ಪೋರ-ಖೇಳ) ತೋರುತ್ತದೆ! ಇಂಥಹ ಮಕ್ಕಳಾಟಗಳು ಇನ್ನು ಮುಂದೆ ನಡೆಯದಂತೆ ಮತ್ತು ಬೋರ್ಡಿನ ಹಣ, ಶ್ರಮ ಮತ್ತು ಹೊತ್ತು ಅಂಥಹ ಮಕ್ಕಳಾಟದ ಚಾಳಿಗಳನ್ನು ಪೂರೈಸುವಲ್ಲಿ ವ್ಯಯವಾಗದಂತೆ ಸರಕಾರವು, ಬೋರ್ಡಿನ ಕಾನೂನಿನಲ್ಲಿ ಅವಶ್ಯವಾದ ತಿದ್ದುಪಾಟಗಳನ್ನು ಮಾಡಿ, ವ್ಯವಸ್ಥೆ ಮಾಡುವದು ಅವಶ್ಯವಿರುತ್ತದೆ. —ಸಂಪಾದಕ]

ಮುಂಡಗೋಡ— (ತಾ. ೩೦-೩-೫೦) ಈಗ ಇಂದೂರಿನಲ್ಲಿ ಕುಡಿಯುವ ನೀರಿನ ಒಂದೇ ಬಾವಿಯುಂಟು. ಊರೊಳಗಿನ ಸುಮಾರು ೨೦೦ ಮನೆಗಳ ಜನರೆಲ್ಲ ಆ ಬಾವಿಯಿಂದಲೇ ನೀರು ಪೂರೈಸಿಕೊಳ್ಳಬೇಕಾಗಿದೆ. ಅದರಿಂದ ಬಾವಿಯ ಮೇಲೆ ಬಹಳ ಗಲಾಟೆಯಾಗುತ್ತಿದ್ದು ಈ ಬಾವಿಯ ಮೇಲ್ಗಡೆ ಇನ್ನೊಂದು ಬಾವಿಯುಂಟು. ಅದರ ದುರುಸ್ತಿಗೆ ಆರಂಭವಾಗಿ ಈಗ ೨ ವರ್ಷಗಳಾದವು. ಆದರೆ ಇನ್ನೂ ಆ ದುರುಸ್ತಿ ಮುಗಿಯಲೊಲ್ಲದು. ಬಾವಿಯಲ್ಲಿ ೬-೮ ಅಡಿ ಆಳವಾಗುವಷ್ಟು ಕೆಸರು-ಮಣ್ಣುಗಳು ತುಂಬಿವೆ. ಅವನ್ನು ತೆಗೆಯಿಸಿದರೆ ಜನರಿಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ಜನರಿಗೆ ಅನುಕೂಲತೆ ಮಾಡಿಕೊಡಬೇಕು, ಅವರ ಕಷ್ಟ ಪರಿಹಾರ ಮಾಡಬೇಕು, ಎಂಬ ಸುಬುದ್ಧಿ ಅಧಿಕಾರಿಗಳಿಗೆ ಬರಬೇಕಲ್ಲವೇ?

ಶಿರಸಿ— (ತಾ. ೨೧-೩-೫೦) ಇಲ್ಲಿ ಶಿರಸಿಯಲ್ಲಿ ಕೋವಿ ಮತ್ತು ಮದ್ದುಗುಂಡು ಮಾರಲು ಪರವಾನೆ ಪಡೆದ ೨ ಅಂಗಡಿಗಳಿವೆ. ಆದರೆ ಎರಡೂ ಅಂಗಡಿಗಳ ವ್ಯವಹಾರ ಒಂದೇ! ಈ ಅಂಗಡಿಗಳಲ್ಲಿ ಕೇಪು, ಮದ್ದು ದೊರಕಬೇಕಾದರೆ ೩-೩, ೪-೪ ತಿಂಗಳು ತಪಶ್ಚರ್ಯೆ ಮಾಡಬೇಕು! ಅಂಗಡಿಗಳಿಗೆ ಹೋದಹೋದಾಗ "ಶಿಲ್ಕು ಇಲ್ಲ— ಬರುವದು — ಇನ್ನೊಂದು ವಾರದಲ್ಲಿ ಸಿಗುವದು" ಎಂಬ ಮಾತುಗಳೇ ಕೇಳಬರುತ್ತಿವೆ. ವಿನಹ ಬೇಕಾದ ಸಾಮಾನು ಸಿಗುವದಿಲ್ಲ! ಆದರೆ ಪುಣ್ಯವಂತ ಮನುಷ್ಯರಿಗೆ ಮಾತ್ರ ಬೇಕಾದ ಸಾಮಾನು ಕೂಡಲೇ ಸಿಗುತ್ತಿದೆ. ಹೋದ ನವಂಬರ ತಿಂಗಳಲ್ಲಿ ಸರಕಾರದಿಂದ ಅಪ್ಪಣೆ ಪಡೆದುಕೊಂಡು ಬಂದವರಿಗೆ ಕೇಪು-ಮದ್ದುಗಳು ಇನ್ನೂ ಸಿಗದಿದ್ದಾಗ್ಯೂ ಈ ತಿಂಗಳಲ್ಲೇ ಅಪ್ಪಣೆ ಪಡೆದುಕೊಂಡು ಬಂದ ಕೆಲವರಿಗೆ ಕೂಡಲೇ ಅವು ಸಿಕ್ಕುವೆಯಂತೆ! ಇದರೊಳಗಿನ ರಹಸ್ಯವೇನೆಂಬುದು ಸಾಮಾನ್ಯರಿಗೆ ತಿಳಿಯದು! ಕಾಡು ಪ್ರಾಣಿಗಳಿಂದ ಹೊಲ-ಮನೆಗಳನ್ನು ರಕ್ಷಿಸಿಕೊಂಡು ಆಹಾರ-ಧಾನ್ಯ ಹೆಚ್ಚಿಸಬೇಕಾದ ಈ ಕಾಲದಲ್ಲಿ ಮದ್ದು

(೪ನೇ ಪುಟದ ಮೇಲೆ ಮುಂದರಿಸಿದೆ)

ಪ್ರಕಟನೆ.

ಕುಮಟಾ ಶಿಕ್ಷಕ ಶಾಲೆಯು ಇದೇ ಜೂನ ತಾ ೧೫ರಿಂದ ಪುನಃ ತೆರೆಯಲ್ಪಡುವದು. ಈ ಶಾಲೆಗೆ ಪ್ರವೇಶಬಯಸುವವರು ಕನ್ನಡ ಮುಲ್ಕೀ ಪರೀಕ್ಷೆಯಲ್ಲಿ ಇಲ್ಲವೆ ಇಂಗ್ಲಿಶ ೩ನೇ ಇಯತ್ತೆಯಲ್ಲಿ ತೇರ್ಗಡೆಯಾದವರು ಅಥವಾ ಸೆಕೆಂಡರಿ ಸ್ಕೂಲ ಲಿವ್ಹಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಇರತಕ್ಕದ್ದು. ವಯಸ್ಸು ೧೬ಕ್ಕೆ ಮೇಲ್ಪಟ್ಟು ೨೫ರ ಒಳಗೆ ಇರತಕ್ಕದ್ದು. ಶಿಕ್ಷಣವು ೨ ವರ್ಷ ಅವಧಿಯದು ಇರುವದು. ಶಿಕ್ಷಣದ ಸಲುವಾಗಿ ಫೀ ಇರುವದಿಲ್ಲ. ವಸತಿಗೃಹ-ಸೌಕರ್ಯ ಪ್ರತ್ಯೇಕ ಇರುವದು. ವರ್ಷದ ೧೧ ತಿಂಗಳುಗಳಲ್ಲಿಯೂ ಪ್ರತಿ ಒಬ್ಬ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ೨೦ರೂ.ಗಳಂತೆ ಶಿಷ್ಯವೇತನ ಕೊಡಲಾಗುವದು. ಪ್ರತಿಯೊಬ್ಬ ವಿದ್ಯಾರ್ಥಿಗೆ ವರ್ಷದಲ್ಲಿ ಹಾಫ ಶರ್ಟ, ಹಾಫ ಪ್ಯಾಂಟ ಮತ್ತು ಒಂದು ಖಾದಿ ಟೊಪ್ಪಿಗೆ ಕೂಡಿರುವ ಒಂದು ಜೋಡಿ ಸಮವಸ್ತ್ರವನ್ನು ಸರಕಾರಿ ಖರ್ಚಿನಿಂದ ಕೊಡುವದರಲ್ಲಿ ಬರುವದು.

ಕಾರವಾರ ಜಿಲ್ಹೆಯ ವಿದ್ಯಾರ್ಥಿಗಳಿಗೆ ಮಾತ್ರ ಈ ಶಾಲೆಯಲ್ಲಿ ಪ್ರವೇಶವಿದೆ. ಶಾಲೆಯ ಪರಿಚಯ-ಪತ್ರಿಕೆಯನ್ನು ಮತ್ತು ಅರ್ಜಿ-ಫಾರ್ಮಗಳನ್ನು ಈ ಆಫೀಸಿನಿಂದ ಪಡೆಯಬಹುದು. ಅರ್ಜಿಯ ಫಾರ್ಮಗಳನ್ನು ತಾ. ೧೫-೫-೧೯೫೦ರ ಒಳಗಾಗಿ ಕಳಿಸತಕ್ಕದ್ದು.

ಶಿಕ್ಷಕ ಶಾಲಾ,
ಕುಮಟಾ,
ತಾ ೧-೪-೧೯೫೦

ಎಂ. ವ್ಹಿ. ಭಾಗವತ
ಸುಪರಿಂಟೆಂಡೆಂಟ,
ಶಿಕ್ಷಕ ಶಾಲಾ, ಕುಮಟಾ

ಇದನ್ನು ಪಾಂಡುರಂಗ ಕೃಷ್ಣ ಸಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ಪಾನ-ನಿರೋಧನ ಸಪ್ತಾಹದ ಸಂಚಿಕೆ.

Reg. No. B. 1270. Monday, 10-4-1950.

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ.೩।
ಅಂಚೆಯಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ೦-೧-೬
ವ್ಹಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

ಕಾನಡಾವೃತ್ತ.

ವರ್ಷ ೩೨.] THE KANARA NEWS. [ಸಂಚಿಕೆ ೪೦.

ಕುಮಟಾ:- ಸೋಮವಾರ, ತಾ. ೧೦—೪—೧೯೫೦.

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೪ ಆಣೆಯಂತೆ.
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಖುದ್ದು
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಮದ್ಯನಿರೋಧನ-ಕಾರ್ಯದಲ್ಲಿ ಜನರು ಸರಕಾರಕ್ಕೆ ನೆರವಾಗಬೇಕು.

ಕಾನಡಾವೃತ್ತ.

ವಿಕೃತಿ ಸಂ॥ ಚೈತ್ರ ಕೃಷ್ಣ ೭ಮಿ

ಮದ್ಯನಿರೋಧನವೇ ರಾಮರಾಜ್ಯದ ಅಡಿಗಲ್ಲು.

ಮದ್ಯಪಾನವು ನಮ್ಮ ಹಿಂದು ಧರ್ಮಶಾಸ್ತ್ರಗಳಂತೆ ಒಂದು ಮಹಾಪಾತಕವೆಂದೆಣಿಸಲ್ಪಡುತ್ತಿದೆ. “ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ। ಮಹಾಂತಿ ಪಾತಕಾನ್ಯಾಹುಸ್ತತ್ಸಂಸರ್ಗಶ್ಚ ಪಂಚಮಮ್॥”, “ಸುರಾ ವೈ ಮಲಮನ್ನಾನಾಮ್” ಎಂದು ಮುಂತಾಗಿ ಮನ್ವಾದಿ ಮಹರ್ಷಿಗಳು ಬರೆದು, ಮದ್ಯಪಾನವನ್ನೂ ಮದ್ಯಪಿಗಳ ಸಂಸರ್ಗವನ್ನೂ ತೀವ್ರತವಾಗಿ ನಿಷೇಧಿಸಿದ್ದಾರೆ. ಆದರಂತೆ ಪ್ರಾಚೀನ ಭಾರತೀಯ ಅರಸರೂ ಹಿಂದುಸ್ಥಾನದಲ್ಲಿ ಆಗಿಹೋದ ಅನೇಕ ಮುಸಲ್ಮಾನ ಅರಸರೂ ಸುರಾಪಾನವು ಅದೊಂದು ಅಪರಾಧವೆಂದೆಣಿಸಿ, ತಮ್ಮ ಸರ್ವಸಾಮಾನ್ಯ ಪ್ರಜೆಗಳನ್ನು ಮದ್ಯಪಾನದಿಂದ ಅಲಿಪ್ತ ಇಟ್ಟಿದ್ದರು. ಕೆಲವಾರು ರಾಜರೂ ರಾಜಪುರುಷರೂ ಮದ್ಯಪಾನ ಮಾಡುತ್ತಿದ್ದರೆಂದು ಇತಿಹಾಸವು ಹೇಳುತ್ತಿರುವದಾದರೂ, ಮದ್ಯಪಾನ ಮಾಡುವದು ಅದೊಂದು ಹೀನ, ಲಜ್ಜಾಸ್ಪದ ಮತ್ತು ಅಧರ್ಮ್ಯ ಕೃತಿ ಇರುತ್ತದೆಂಬುದಾಗಿ ಆ ಸೇತುಹಿಮಾಚಲ ಭಾರತವರ್ಷದಲ್ಲಿ ಎಲ್ಲ ಮತ-ಪಂಥೀಯರು ಎಣಿಸುತ್ತಿದ್ದರು. ಇಂದಿಗೂ ಸಹ ಜನಸಾಮಾನ್ಯರು ಸುರಾಪಾನವದೊಂದು ಧರ್ಮಬಾಹಿರ, ನೀತಿಬಾಹಿರ, ಅಧೋಗತಿಗೊಯ್ಯುವ ಕೃತಿಯೆಂದು ತಿಳಿಯುತ್ತಾರೆ.

ಆದರೆ ಬ್ರಿಟಿಶರ ಆಳಿಕೆಯಲ್ಲಿ, ಮದ್ಯಪಾನಕ್ಕೆ ಪ್ರೋತ್ಸಾಹ ಕೊಡಕೂಡದೆಂದು ಸರಕಾರದವರ ಠರಾವುಗಳು ಮೇಲಿಂದ ಮೇಲೆ ಆಗುತ್ತಿದ್ದಾಗ್ಯೂ ಮತ್ತು ಮದ್ಯಪಾನವನ್ನು ನಿಯಂತ್ರಣದಲ್ಲಿಡುವದಕ್ಕೆಂದೇ ಹೆಚ್ಚೆಚ್ಚು ಅಬಕಾರಿ ಸುಂಕ ಹೇರಲ್ಪಡುತ್ತಿದ್ದಾಗ್ಯೂ, ಆಳರಸರ ಸಮಾಜ-ಸಮಾರಂಭಗಳಲ್ಲಿ ಮದ್ಯಕ್ಕೆ ಒಂದು ಗಣ್ಯ ಸ್ಥಾನ ದೊರೆಯುತ್ತಿದ್ದುದರಿಂದ ನಮ್ಮಲ್ಲಿ ಮದ್ಯಪಾನದ ಚಟ ಬಂದು ಸೇರಿತು! ಪಾಶ್ಚಾತ್ಯರ ಸಂಸರ್ಗದಿಂದ ಸುಶಿಕ್ಷಿತರೂ ಕೂಡ ಮದ್ಯ ಕುಡಿಯುವದು ಅದೊಂದು ಸುಸಂಸ್ಕೃತ ನಾಗರಿಕತೆಯ ಕುರುಹು ಎಂದು ಎಣಿಸಹತ್ತಿದ್ದರು! ಮದ್ಯ ಕುಡಿಯುವದು ಅದೊಂದು ಹೇಯ ಕೃತಿ ಅಥವಾ ದಂಡನೀಯ ಅಪರಾಧವೆಂದೆಣಿಸಲ್ಪಡದ್ದರಿಂದ ಸರಿ ಕುಡಿಯುವ ದುಶ್ಚಟವು ನಾಡಿನಲ್ಲೆಲ್ಲ ಹಬ್ಬಿತು! ಕೆಲವರು ಬಹಿರಂಗವಾಗಿ ಕುಡಿಯಹತ್ತಿದರೆ, ಬೇರೆ ಕೆಲವರು ಅಂತರಂಗದಿಂದ ಕುಡಿಯಹತ್ತಿದರು! ಈ ದುಶ್ಚಟವು ಎಷ್ಟು ವಿಶಾಲವಾಗಿ ಹಬ್ಬುತ್ತಿತ್ತೆಂಬುದಕ್ಕೆ ಒಂದೇ ಸಾಕ್ಷಿ ಸಾಕು. ೩೫ ವರ್ಷಗಳ ಹಿಂದೆ ಸರಾಯಿಯ ಮೇಲಿನ ಸುಂಕಗಳಿಂದ ಹಿಂದುಸ್ಥಾನ ಸರಕಾರಕ್ಕೂ ಪ್ರಾಂತಿಕ ಸರಕಾರಗಳಿಗೂ ಸಿಗುತ್ತಿದ್ದ ಆದಾಯವು ಅವುಗಳ ಒಟ್ಟು ಆದಾಯದ ನಾಲ್ಕನೇ ಒಂದು ಪಾಲಾಗಿತ್ತೆಂದು ಮಹಾತ್ಮಾ ಗಾಂಧಿಯವರು ಒಮ್ಮೆ ಬರೆದಿದ್ದರು.

ಮದ್ಯಪಾನದಿಂದ ಮನುಷ್ಯನ ನೈತಿಕ, ಆರ್ಥಿಕ ಮತ್ತು ಶಾರೀರಿಕ ಅಧೋಗತಿಯಾಗುತ್ತದೆಂಬುದನ್ನು ಯಾರಿಗೂ ಹೇಳಬೇಕಾಗಿಲ್ಲ. ಇದು ಈವಾಗ ಪ್ರತಿಯೋರ್ವನ ಅನುಭವದ ಮಾತಾಗಿದೆ. ಸರಾಯಿ ಕುಡಿಯುವವರು ಎಂತಹ ಪಾಪಗಳನ್ನು ಮಾಡುತ್ತಾರೆಂಬುದನ್ನು ನಾವು ಈ ವರೆಗೆ ನೋಡಿದ್ದೇವೆ, ಇನ್ನೂ ನೋಡುತ್ತಿದ್ದೇವೆ. ಸರಾಯಿಯ ವ್ಯಸನಕ್ಕೆ ಬಲಿಬಿದ್ದವರು ತಮ್ಮ ಹೆಂಡಿರು-ಮಕ್ಕಳನ್ನು ಉಪವಾಸ ಹಾಕಿ ದುರ್ದೆಸೆಗೆ ಈಡು ಮಾಡುತ್ತಿರುವದನ್ನೂ ಕೊನೆಗೆ ಭಣಂಗ ಭಿಕಾರಿಗಳಾಗುತ್ತಿರುವದನ್ನೂ ನಾವು ಕಂಡಿದ್ದೇವೆ. ಕುಡುಕರು ಕುಡಿದು, ಕುಡಿದು ತಮ್ಮ ಬುದ್ಧಿ-ಶಕ್ತಿ ಮತ್ತು ದೈಹಿಕ ಶಕ್ತಿಗಳನ್ನು ಕಳೆದುಕೊಳ್ಳುತ್ತಿರುವದನ್ನೂ ನಾವು ನೋಡಿರುತ್ತೇವೆ. ಮದ್ಯಪಾನದಿಂದ ಆಗುವ ಅನರ್ಥಗಳನ್ನು ನಮ್ಮಲ್ಲಿಯ ಎಷ್ಟೋ ನಾಟಕಕಾರರೂ ಕಾದಂಬರಿಕಾರರೂ ಯಥಾರ್ಥವಾಗಿ ಚಿತ್ರಿಸಿ, ಸಮಾಜವನ್ನು ಈ ದುರಭ್ಯಾಸದಿಂದ ಪರಾವೃತ್ತಗೊಳಿಸಲು ಪ್ರಯತ್ನ ಮಾಡಿದ್ದುಂಟು. ಆದರೆ ಅದರ ಪರಿಣಾಮವಾಗದೆ ಮದ್ಯಪಾನದ ಪ್ರಸಾರ ಬೆಳೆಯುತ್ತ ನಡೆಯಿತು! ಆದರಿಂದ ೧೯೨೦ರಲ್ಲಿ ಮಹಾತ್ಮಾಜಿಯವರು ಮದ್ಯಪಾನ-ನಿಷೇಧವನ್ನು ರಾಷ್ಟ್ರೀಯ ಸಭೆಯ ಮೂಲಭೂತ ಕಾರ್ಯಕ್ರಮದ ಒಂದು ಅಂಗವನ್ನಾಗಿ ಮಾಡಿ, ಮದ್ಯ-ವ್ಯಾಪಾರದ ವಿರುದ್ಧ ತಮ್ಮ ಹೋರಾಟವನ್ನಾರಂಭಿಸಬೇಕಾಯಿತು. ೧೯೨೦-೨೧ರ ಅಸಹಕಾರದ ಆಂದೋಲನದಲ್ಲೂ, ೧೯೩೦-೩೧ರ ಸತ್ಯಾಗ್ರಹ ಸಂಗ್ರಾಮದಲ್ಲೂ ಮದ್ಯದ ಅಂಗಡಿಗಳ ಮುಂದೆ ಪರ್ಗಾವಲನ್ನಿಟ್ಟು ಮತ್ತು ಲಕ್ಷಾವಧಿ ಸಿಂದಿಗಿಡಗಳನ್ನು ನಾಶ ಮಾಡಿ ಸಹಸ್ರಾವಧಿ ರಾಷ್ಟ್ರೀಯ ಯುವಕ-ಯುವತಿಗಳು ಸೆರೆಮನೆಗೆ ಹೋದ ಕಥೆಯನ್ನು ನಾವು ಇನ್ನೂ ಮರೆತಿಲ್ಲ. ೧೯೩೭ರಲ್ಲಿ ಕೊಂಗ್ರೆಸ್ಸು ಕಾನೂನು-ಸಭೆಗಳನ್ನು ಕೈವಶಪಡಿಸಿಕೊಂಡು ಮಂತ್ರಿ-ಮಂಡಳಗಳನ್ನು ರಚಿಸುತ್ತಲೆ ಮಹಾತ್ಮಾಜಿಯವರು ಎಲ್ಲ ಕೊಂಗ್ರೆಸ ಮಂತ್ರಿಮಂಡಳಗಳಿಗೆ ಮದ್ಯಪಾನೋಚ್ಚಾಟನದ ನಿರ್ದಿಷ್ಟ ಕಾರ್ಯಕ್ರಮವನ್ನು ಕೈಕೊಂಡು ಅದನ್ನು ತ್ವರ್ಯವೇ ಈಡೇರಿಸಬೇಕಾಗಿ ಕೊಟ್ಟ ಆಗ್ರಹದ ಆದೇಶವನ್ನೂ ನಾವು ಮರೆತಿಲ್ಲ ನಮ್ಮ ಮುಂಬಯಿಯ ಕೊಂಗ್ರೆಸ ಮಂತ್ರಿಮಂಡಳವು ೧೯೩೭ರಲ್ಲಿ ಕ್ರಮೇಣ ಮದ್ಯನಿರೋಧನ ಮಾಡುವ ಕಾರ್ಯಕ್ರಮವನ್ನು ಕೈಕೊಂಡು, ೧೯೩೯ರ ಕೊನೆಗೆ ಅಧಿಕಾರ-ಸನ್ಯಾಸ ಮಾಡುವದರೊಳಗಾಗಿ ನಮ್ಮ ಜಿಲ್ಲೆಯಲ್ಲೂ ಮುಂಬಯಿ, ಅಹಮದಾಬಾದ ಮೊದಲಾದ ಕೆಲವು ನಗರಗಳಲ್ಲೂ, ಬೇರೆ ಕೆಲವು ಭಾಗಗಳಲ್ಲೂ ಮದ್ಯ-ಪ್ರತಿಬಂಧವನ್ನು ಜಾರಿಯಲ್ಲಿ ತಂದಿದ್ದರು. ನಡುವೆ ಬಂದ ಪ್ರಾಂತಾಧಿಪರ ಸರ್ವಾಧಿಕಾರಿ ಸರಕಾರವು ಮದ್ಯನಿರೋಧದ ಹಿಂದಿನ ಕಾನೂನು-ಕಟ್ಟಳೆಗಳನ್ನು ರದ್ದುಗೊಳಿಸದಿದ್ದಾಗ್ಯೂ ಅವುಗಳ ಕಾರ್ಯಕ್ಷೇತ್ರವನ್ನು ಅದು ವಿಸ್ತರಿಸಲೂ ಇಲ್ಲ; ಯಾ ಆ ಕಾನೂನ ಕಟ್ಟಳೆಗಳ ಅಮಲಬಜಾವಣಿಯನ್ನು ಕಠೋರವಾಗಿ ನಡಿಸಲೂ ಇಲ್ಲ. ಆ ಕಾರ್ಯವನ್ನು ಕೊಂಗ್ರೆಸ ಮಂತ್ರಿಮಂಡಳವೇ ಪುನಃ ಅಧಿಕಾರಕ್ಕೆ ಬಂದ ಮೇಲೆ

ನಿರ್ಮದ್ಯ ಭಾರತದ ಕನಸು ಕಾಣುತ್ತಿದ್ದ ಮಹಾತ್ಮಾ



ರಾಷ್ಟ್ರಪತಿಗಳ ಆಶೀರ್ವಾದ

Government House,
NEW DELHI,
१७ मार्च, १९५०.

मद्यनिषेध महात्मा गांधी के द्वारा चित्रित नव समाज की आधारभूत शिला थी। हर्ष का विषय है कि मुंबई राज्यकी सरकार पूर्ण मद्यनिषेध की नीति पर कार्य करके इस समाजकी स्थापनाकी ओर अग्रसर हो रही है। मेरा पूर्ण विश्वास है कि उस नीतिके कारण उस राज्य के मजदूरों और कृषकोंका अंततोगत्वा बड़ा भारी लाभ होगा। मेरी उत्कट इच्छा है कि उस राज्य की सरकार को इस दिशामें पूर्ण सफलता प्राप्त हो।

राजेंद्र प्रसाद

ಮಾಡಬೇಕಾಯಿತು. ಅದರಂತೆ ೧೯೪೭ರ ಏಪ್ರಿಲ್ ತಿಂಗಳಲ್ಲಿ ಕೊಂಗ್ರೆಸ ಮಂತ್ರಿಮಂಡಳವು ಅಧಿಕಾರ ಸೂತ್ರಗಳನ್ನು ತಿರುಗಿ ಕೈಯ್ಯಲ್ಲಿ ತಕ್ಕೊಳ್ಳುತ್ತಲೇ ೧೯೪೭ರಲ್ಲಿ ಕೈಕೊಂಡ [illegible] ನದ ಕಾರ್ಯವನ್ನು [illegible] ಜಾರಿ ಮಾಡಿ, ೩ ಘಟ್ಟಗಳಿಂದ ಇಡೀ ಪ್ರಾಂತದಲ್ಲಿ ಸಂಪೂರ್ಣ ಮದ್ಯ ಪ್ರತಿಬಂಧವನ್ನು ಜಾರಿಯಲ್ಲಿ ತರುವ ಪ್ರತಿಜ್ಞೆಯನ್ನು ತೊಟ್ಟಿತು. ಆ ಪ್ರತಿಜ್ಞೆಯು ಈಗ ಪೂರ್ಣವಾಗಿ ಇಂದು ಇಡೀ ಮುಂಬಯಿ ರಾಜ್ಯಾಂಗದಲ್ಲಿ ಸಂಪೂರ್ಣ ಮದ್ಯ-ಪ್ರತಿಬಂಧದ ಕಟ್ಟಳೆ ಅಮಲಿನಲ್ಲಿ ಬಂದಿರುತ್ತದೆ. ಸಮಗ್ರ ಭಾರತ ವರ್ಷದಲ್ಲಿ ಇಡೀ ರಾಜ್ಯಾಂಗದೊಳಗೆ ಪೂರ್ಣ ಮದ್ಯ ಪ್ರತಿಬಂಧವನ್ನು ಮೊದಲು ಜಾರಿಯಲ್ಲಿ ತಂದ ಕೀರ್ತಿ ನಮ್ಮ ಮುಂಬಯಿ ಸರಕಾರಕ್ಕೇ ಸಲ್ಲುತಿದೆ. ಮದ್ಯಪಾನದ ವಿಧಿನಿಷೇಧವಿಲ್ಲದ ಪ್ರಮುಖರು ಎತ್ತಿದ ಬಗೆಬಗೆಯ ಆಕ್ಷೇಪಗಳನ್ನು ಲೆಕ್ಕಿಸದೆ, ಮದ್ಯಪ್ರಿಯರೂ ಅವರ ವಕೀಲರೂ ಹಾಕುತ್ತಿರುವ ಬೆದರಿಕೆಗಳಿಗೆ ಸೊಪ್ಪು ಹಾಕದೆ ಮದ್ಯ ನಿರೋಧನದಿಂದ ಉಂಟಾಗಬಹುದಾದ ಹಣದ ಅಡಚಣಿಯನ್ನು ತಾವು ಸಹಾಯಿಸಿಕೊಡಲಾರೆವೆಂದು ಭಾರತ ಸರಕಾರವು ಕೊಟ್ಟ ಎಚ್ಚರಿಕೆಯಿಂದಲೂ ಎದೆಗುಂದದೆ, "ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲಿ!" ಎಂಬಂತೆ 'ಪೂಜ್ಯ ಮಹಾತ್ಮಾಜಿಯವರ ಆಶೀರ್ವಾದದ ಬಲವೊಂದಿದ್ದರೆ ಸಾಕು, ನಾವು ಅವರ ಪ್ರೇರಣೆಯಿಂದ ಪ್ರಾರಂಭಿಸಿದ ಕಾರ್ಯವನ್ನು ಪೂರ್ಣಗೊಳಿಸಿಯೇ ಬಿಡುವೆವು" ಎಂಬ ದೃಢ ನಿರ್ಧಾರದಿಂದ ಈ ತಿಂಗಳ ಪ್ರಾರಂಭದಿಂದ ಇಡೀ ರಾಜ್ಯಾಂಗದಲ್ಲಿ ಮುಂಬಯಿ ಸರಕಾರವು ಜಾರಿಯಲ್ಲಿ ತಂದ ಸಂಪೂರ್ಣ ಮದ್ಯಪ್ರತಿಬಂಧದ ಯೋಜನೆಯನ್ನು ಪೂಜ್ಯ ಮಹಾತ್ಮಾಜಿಯವರ ಆತ್ಮವು ಆನಂದಾತಿಶಯದಿಂದ ಆಶೀರ್ವದಿಸುವದೆಂದು ನಾವು ನಂಬುತ್ತೇವೆ. ರಾಷ್ಟ್ರಪತಿ ರಾಜೇಂದ್ರರು ತಮ್ಮ ಆಶೀರ್ವಾದಪತ್ರದಲ್ಲಿ ಹೇಳಿರುವಂತೆ, ಮಹಾತ್ಮಾಜಿಯವರ ಕನಸಿನ ರಾಮರಾಜ್ಯದಲ್ಲಿ ಮದ್ಯಕ್ಕೆ ಸ್ಥಳವಿಲ್ಲ, ಮದ್ಯನಿರೋಧನವೇ ಆ ರಾಮರಾಜ್ಯದ ಅಡಿಗಲ್ಲು ಆಗಿರುತ್ತದೆ. ಮುಂಬಯಿ ಸರಕಾರವು ಇಂದು ಆ ಅಡಿಗಲ್ಲನ್ನು ಇಟ್ಟು ರಾಮರಾಜ್ಯ ಕಟ್ಟಲು ಪ್ರಾರಂಭ ಮಾಡಿದ ಬಗ್ಗೆ ನಾವು ಅದನ್ನು ಅಭಿಮಾನಪೂರ್ವಕವಾಗಿ ಹರಸುತ್ತೇವೆ.

ಆದರೆ ಮದ್ಯನಿರೋಧನದ ಈ ಕಾರ್ಯವು ಸರಕಾರದವರೊಬ್ಬರ ಕಡೆಯಿಂದಲೇ ಸಾಧ್ಯವಾಗುವಂತಿಲ್ಲ. ವಿಶಾಲ ನಾಡಿನಲ್ಲಿ, ಸಾವಿರಗಟ್ಟಲೆ ಹಳ್ಳಿಪಳ್ಳಿಗಳಲ್ಲಿ, ಬೆಟ್ಟ-ಬೈಲುಗಳಲ್ಲಿ ಇರುವ ಕೇರಿಕೇರಿಗಳಲ್ಲಿ ಕಾವಲಿಟ್ಟು ಸಾರಾಯಿಯ ನಿರ್ಮಿತಿಯನ್ನೂ ಉಪಯೋಗವನ್ನೂ ಆಯಾತವನ್ನೂ ವ್ಯಾಪಾರವನ್ನೂ ನಿಲ್ಲಿಸ[illegible]ದು ಸರಕಾರದವರಿಂದ ಎಂದೂ ಸಾಧ್ಯವಾಗುವಂತಿಲ್ಲ. ನಾಡಿನ ಸಮಸ್ತ ಜನರು ಸರಕಾರಕ್ಕೆ ಸಹಾಯ ಮಾಡಿದರೆ ಮಾತ್ರ ಈ ಮಹಾಕಾರ್ಯ ಯಶಸ್ವಿಯಾದೀತು. ಸರಕಾರದಷ್ಟೇ ಜನರೂ ಕೂಡ ಸುರಾ-ರಾಕ್ಷಸಿಯನ್ನು ನಾಡಿನೊಳಗಿಂದ ಹೊಡೆದೋಡಿಸಲು ಪ್ರತಿಜ್ಞಾಬದ್ಧರಾಗಿ ಹಗಲಿರುಳು ತಮ್ಮ ಸುತ್ತಮುತ್ತ ಕಾವಲಿಟ್ಟು ಸಾರಾಯಿಯ ವಾಸನೆ ಬಂದ ಕೂಡಲೆ ಅದರ ಪತ್ತೆ ಹಚ್ಚಿ, ಎಳ್ಳಷ್ಟು ದಯೆ-ಮಾಯೆ ತೋರಿಸದೆ ಕುಡುಕರನ್ನೂ ಸಾರಾಯಿಗಳ್ಳರನ್ನೂ ಸರಕಾರಕ್ಕೆ ಹಿಡಿದುಕೊಟ್ಟು, ಅವರಿಗೆ ಶಾಸನ ಮಾಡಿಸುವ ಕ್ರಮವನ್ನಿಟ್ಟುಕೊಂಡರೆ ಮಾತ್ರ ಈ ರಾಷ್ಟ್ರದ ರಾಮರಾಜ್ಯದ ಅಡಿಗಲ್ಲು ಭದ್ರವಾಗಿ ಕೂಡ್ರುವದು ಮತ್ತು ಸರಕಾರದವರು ಕೈಕೊಂಡ ಸಾಹಸವು ಸಫಲವಾಗುವದು. ಸರಕಾರದವರೊಡನೆ ಇನ್ನಿತರ ವಿಷಯಗಳಲ್ಲಿ ಏನೇ ಮತಭೇದಗಳಿದ್ದಾಗ್ಯೂ ಅವರ ಇನ್ನಿತರ ಕಾರ್ಯಗಳು ಎಷ್ಟೇ ತಿರಸ್ಕರಣೀಯವಿರುತ್ತಿದ್ದರೂ ಸುರಾ-ರಾಕ್ಷಸಿಯ ವಿರುದ್ಧ ಅವರು ಹೂಡಿದ ಹೋರಾಟದಲ್ಲಿ ಸಮಸ್ತ ಪ್ರಜೆಗಳು ಮನಃಪೂರ್ವಕವಾಗಿ ಸಹಕರಿಸಬೇಕಾಗಿ ನಾವು ಸೂಚಿಸುತ್ತೇವೆ.

ಮಹತ್ವದ ವಾರ್ತೆಗಳು.

—ಪೂರ್ವ ಬಂಗಾಲದೊಳಗಿನ ಅತ್ಯಾಚಾರಗಳಿಂದ ಭಾರತದೊಳಗೆ ಉಂಟಾದ ಜಾತೀಯ ಅಸ್ವಸ್ಥತೆಯನ್ನು ಉದ್ರೇಕಗೊಳಿಸದಂತೆ ಭಾರತ ಸರಕಾರವೂ ಬಂಗಾಲ, ಮುಂಬಯಿ, ಮಧ್ಯಪ್ರಾಂತ ಮೊದಲಾದ ಸರಕಾರಗಳೂ ಹಿಂದು ಮಹಾಸಭೆಯು [illegible] ನಿರ್ಬಂಧಿಸತೊಡಗಿದೆ. [illegible] ಮುಂಬಯಿಯಲ್ಲಿ [illegible] ಕೆಲವರನ್ನು ಮುಂಬಯಿ ಪೋಲೀಸರು ನಿರ್ಬಂಧಿಸಿದ್ದಾರೆ, ಪುಣೆಯಲ್ಲಿ "ಕೇಸರಿ" "ಕಾಲ" ಪತ್ರಿಕೆಗಳ ಸಂಪಾದಕರನ್ನೂ ಹಿಂದು ಮಹಾಸಭೆಯ ಹಿಂದಿನ ಅಧ್ಯಕ್ಷ ಶ್ರೀ ಲಕ್ಷ್ಮಣರಾವ ಭೋಪಟಕರರನ್ನೂ ಪುಣೆಯ ಪೋಲೀಸರು ನಿರ್ಬಂಧಿಸಿದ್ದಾರೆ. ನಾಗಪುರದಲ್ಲಿ ಹಿಂದು ಮಹಾಸಭೆಯ ಸಧ್ಯದ ಅಧ್ಯಕ್ಷ ಡಾ॥ ನಾರಾಯಣರಾವ ಖರೇ ಅವರಿಗೆ ನಾಗಪುರ ಬಿಟ್ಟು ಹೊರಹೋಗದಂತೆ ಮತ್ತು ಭಾಷಣಗಳನ್ನು ಮಾಡದಂತೆ ಮಧ್ಯಪ್ರಾಂತ ಸರಕಾರವು ಪ್ರತಿಬಂಧ ಮಾಡಿದೆ. ಕಲಕತ್ತೆಯಲ್ಲಿ ರಾಷ್ಟ್ರೀಯ ಸಂಘದ ಅಧ್ಯಕ್ಷ ಶ್ರೀ॥ [illegible] ಅವರಿಗೆ ಕಲಕತ್ತೆ ಬಿಟ್ಟು ಹೊರಟುಹೋಗಲು ಪಶ್ಚಿಮ ಬಂಗಾಲ ಸರಕಾರವು ವಿಧಿಸಿತ್ತು. ಹಾಗೆ ಮಾಡದ್ದರಿಂದ ಅವರು ಈಗ ನಿರ್ಬಂಧಿಸಲ್ಪಟ್ಟಿರುತ್ತಾರೆ. ಅ॥ ಭಾ॥ ಹಿಂದು ಮಹಾಸಭೆಯ ಕಾರ್ಯದರ್ಶಿ ಶ್ರೀ॥ [illegible] ನಿರ್ಬಂಧಿಸಲ್ಪಟ್ಟ ಸುದ್ದಿಯುಂಟು. ಭಾರತ ಸರಕಾರದ ಈ ಧೋರಣೆ ಮನ್ನಣೆಗೆ ಒಪ್ಪದ್ದರಿಂದಲೇ ಏನೋ ಕೇಂದ್ರ ಸರಕಾರದ ಉದ್ಯೋ-

ಗ[illegible] ಡಾ॥ ಶ್ಯಾಮಾಪ್ರಸಾದ ಮುಖರ್ಜಿಯವರೂ ಅನ್ನೊಬ್ಬ ಮಂತ್ರಿಗಳಾದ ಶ್ರೀ ಕ್ಷಿತೀಶಚಂದ್ರ ನಿಯೋಗಿಯವರೂ ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟ ವಾರ್ತೆಗಳಿವೆ.

— ಪಶ್ಚಿಮ ಗೋಲಾರ್ಧ (ದಕ್ಷಿಣೋತ್ತರ ಅಮೇರಿಕೆಗಳು ಮತ್ತು ಅವುಗಳ ಹತ್ತಿರವಿರುವ ನಡುಗಡ್ಡೆಗಳು) ದಲ್ಲಿ [illegible] ಹಿಂದೀ ಯಾತ್ರಿಕರು [illegible] ಕೇಂದ್ರ [illegible] ಮಂಡಳದಲ್ಲಿ ವಿದೇಶ ಖಾತೆಯ ಉಪಮಂತ್ರಿಗಳು ಹೇಳಿರುತ್ತಾರೆ: ಕಾನಡಾ ೫೦೦೦, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ೧೫೦೦, [illegible] ೪೦, ಅರ್ಜೆಂಟೈನ ೩೦೦, [illegible] ೫೬೦೦೦ [illegible] ೨೮೦೧೨೯ [illegible] ೫೦೦ [illegible] ೧೯೩೬೭ ಜಮೈಕಾ ೩೨೬೧, [illegible] ೫೯ [illegible] ೨೧೫೧೬೭ [illegible] ೫೦೦ ಮತ್ತು [illegible] ೨೧೫

— ನೆಹರು-ಲಿಯಾಕತ ಮಾತುಕತೆಗಳು ಮೊನ್ನೆವರೆಗೂ ನಡೆದು, ಮೊನ್ನೆ ಮಧ್ಯಾಹ್ನ [illegible] ಲಿಯಾಕತ ಅಲ್ಲಿಖಾನರು ಉಭಯ [illegible] ಒಡಂಬಡಿಕೆಗೆ [illegible] ಅಂದೇ ಸಂಜೇ ಕರಾಚಿಗೆ ಮರಳಿರುತ್ತಾರೆ. [illegible] ಒಡಂಬಡಿಕೆಯು ಇಂದು ಮಧ್ಯಾಹ್ನದಲ್ಲಿ [illegible] ಯಲ್ಲೂ ಒಂದೇ ಕಾಲಕ್ಕೆ ಹಿಂದು-ಪಾಕ [illegible] ಗಳಲ್ಲಿ ಪ್ರಕಟವಾಗಲಿದೆ,

ಜಾಹೀರ ನೋಟೀಸು

ನನ್ನ ತಂದೆ ತಿಮ್ಮಣ್ಣ ಗಣಪಭಕ್ತ ಬಡೆ [illegible] ಅವರಿಗೆ ನನ್ನ ಹಿರಿಯ ಮಾವನು ಮುಂದೆ ಗಂಡು ಮಕ್ಕಳು ಅವರಿಗೆ ಈಗ [illegible] ಈಗ [illegible], ಮುಕ್ತರ ಮೇಲೆ ಭೇದಭಾವವಾಗಿದೆ ೩ನೇ ಭಾಗ [illegible] ಬಡ ಆಸ್ತಿ [illegible] ಮೊನ್ನೆ ತಾ ೩-೪ ನಂನೇ ದಿವಸ [illegible] ರೂ ೧೬೦೦ [illegible] ಎಂತ ಬರೆಸಿಕೊಟ್ಟಿದ್ದಾರೆ. ಅದು ನನಗೆ ಬಾಧಕವಲ್ಲ. [illegible] ಹಿಂದೆ ಎಷ್ಟೋ ಆಸ್ತಿ ಅದೇ ರೀತಿ [illegible] ಮಾಡಿದ್ದಾರೆ. ಅದರ [illegible] ಆಸ್ತಿ ಏನೂ ಇಲ್ಲ, [illegible] ಆಸ್ತಿ [illegible] ದು [illegible] ಆಸ್ತಿ ಮಾಡುವದು [illegible] ಇದರಂತೆ ಮಾಡಿದ ಆಸ್ತಿ [illegible] ಅದೆಲ್ಲಾ ನನ್ನ ಅವಿಭಕ್ತ [illegible] ಅವರು ಮಾಡುವ ಯಾವದೇ [illegible] ಬೋಜಾ [illegible] ಕೀರದಲ್ಲ, ಅದು ನನಗೆ ಬಾಧಕವಲ್ಲದ್ದಕ್ಕೆ ಇನ್ನು ಮುಂದೆ ವಿವಾದವೂ ಮಾಡಿದಲ್ಲಿ ನಾವು [illegible] ಜಾಹೀರ ಇರಲಿ.

ಕಿರ್ [illegible] ತಾ ೮-೪-೫೦

ರಾಮಾ ತಿಮ್ಮಣ್ಣ ಭಕ್ತ ಬಡೆ

THE BANK OF RURAL INDIA LTD.

(Incorporated in India Union Liability of Members Limited)

HEAD OFFICE — "Satyabhama Bhuvanam, **KARWAR** N K

Offices at — KARWAR, KUMTA SIRSI HONAVAR, YELLAPUR BHATKAL, SIDDAPUR ANKOLA HUBLI & DHARWAR

Authorised Capital	„ Rs	10 00,000
Subscribed Capital	„ Rs	5,00 000
Paid up Capital & Reserves	„ Rs	5 08602-3-0

Rates of Interest on Deposits

Current a/c @ 1 % p a *Savings Bank a/c @ 2½ %*

Fixed Deposits for 3 months @ 3% per annum

for 6 months @ 3½%

for 12 months or more @ 4%

All kinds of modern Banking business transacted

Karwar, 1st Jan 1950

P X GRACIOUS

MANAGING DIRECTOR

PUBLIC NOTICE
Re
THE BOMBAY SALES TAX ACT, 1946

ಸನ್ ೧೯೪೬ನೇ ಇಸವಿಯ ಮುಂಬಯಿಯ ಮಾರಾಟಗಳ ಮೇಲಿನ ಕರದ ಕಾನೂನಿನ ಸಂಬಂಧದ

ಜಾಹೀರ ನೋಟೀಸು.

ಸಂಬಂಧಪಟ್ಟ ಯಾವತ್ತು ಜನರಿಗೆ ಈ ಮೂಲಕ ತಿಳಿಸುವದೇನಂದರೆ — ಸನ್ ೧೯೫೦ನೇ ಇಸವಿಯ ಏಪ್ರಿಲ ತಿಂಗಳ ೧ನೇ ತಾರೀಖಿನಿಂದ ಸನ್ ೧೯೪೬ನೇ ಇಸವಿಯ ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಕಾನೂನಿನಲ್ಲಿ ನಿರ್ದಿಷ್ಟವಾದ ೧ನೇ ಹಾಗೂ ೨ನೇ ಪರಿಶಿಷ್ಟಗಳು ಸುಧಾರಿಸಲ್ಪಡುವವು ಮತ್ತು ಅವು ಈ ಕೆಳಗಿನಂತಾಗುವವು —

ಬಂಗಾರ-ಬೆಳ್ಳಿಗಳ ಗಟ್ಟಿಗಳ ಹಾಗೂ ನಾಣ್ಯಗಳ ಮಾರಾಟಗಳು ನೂರಕ್ಕೆ ಒಂದು ಪ್ರತಿಶತದಷ್ಟು ದರದ ಮೇರೆಗೆ ಮಾರಾಟಗಳ ಮೇಲಿನ ಕರಕ್ಕೆ ಒಳಪಟ್ಟಿರುವವು ಎಂಬುದನ್ನು ಸಹ ಲಕ್ಷದಲ್ಲಿಡತಕ್ಕದ್ದು.

೧ನೇ ಹಾಗೂ ೨ನೇ ಪರಿಶಿಷ್ಟಗಳಲ್ಲಿ ನಮೂದಿಸಿದಂಥ ಮತ್ತು ಬಂಗಾರ ಬೆಳ್ಳಿಗಳ ಗಟ್ಟಿಗಳನ್ನು ಹಾಗೂ ನಾಣ್ಯಗಳನ್ನು ಹೊರತುಪಡಿಸಿರುವ ಯಾವತ್ತು ಇತರ ಸರಕುಗಳ ಮಾರಾಟಗಳು ಪ್ರತಿ ರೂಪಾಯಿಯಲ್ಲಿ ಅರ್ಧ ಆಣೆಯ ದರದ ಮೇರೆಗೆ ಸಾಮಾನ್ಯ ಮಾರಾಟಗಳ ಮೇಲಿನ ಕರಕ್ಕೆ ಒಳಪಟ್ಟಿರುವವು

ಪರಿಶಿಷ್ಟ ೧

(ಸನ್ ೧೯೫೦ನೇ ಇಸವಿಯ ಏಪ್ರಿಲ ತಿಂಗಳ ೧ನೇ ತಾರೀಖಿನಿಂದ ಅಮಲಿನಲ್ಲಿದ್ದಂತೆ)

(ಯಾವ ಸರಕುಗಳ ಮಾರಾಟಗಳು ಪ್ರತಿ ರೂಪಾಯಿಯಲ್ಲಿ ಒಂದು ಆಣೆಯ ದರದ ಮೇರೆಗೆ ಮಾರಾಟಗಳ ಮೇಲಿನ ಕರವನ್ನು ಕೊಡುವದಕ್ಕೆ ಪಾತ್ರವಿರುವವೋ ಅಂಥ ಸರಕುಗಳ ಯಾದಿಯು)

೧ (೧) ಕಾರುಗಳು, ಮೋಟಾರ, ಟ್ಯಾಕ್ಸಿ ಕ್ಯಾಬುಗಳು ಮೋಟಾರ ಸೈಕಲುಗಳು ಹಾಗೂ ಸೈಕಲ್ ಜೋಡಣೆಗಳು, ಮೋಟಾರ ಸ್ಕೂಟರಗಳು, ಮೋಟಾರಬೋಟುಗಳು, ಮೋಟಾರ ಅಂಬ್ಯುಲನ್ಸುಗಳು, ಮೋಟಾರ ವ್ಯಾನುಗಳು ಹಾಗೂ ಮೋಟಾರ ಲಾರಿಗಳು ಸಹಿತವಾಗಿ ಮೋಟಾರ ವಾಹನಗಳು,

(೨) ಮೋಟಾರ ವಾಹನಗಳ ಚಾಸಿಗಳು,

(೩) ಮೋಟಾರ ವಾಹನಗಳ ಭಾಗಗಳಿಂದು ಅಥವಾ ಉಪಕರಣಗಳೆಂದು ಹೊರತಾಗಿ ಇತರ ಉದ್ದೇಶಗಳ ಸಲುವಾಗಿ ಸಾಮಾನ್ಯವಾಗಿ ಉಪಯೋಗಿಸಲ್ಪಡದಂಥ ವಸ್ತುಗಳಾಗಿರದಂಥ, ಮೋಟಾರ ವಾಹನಗಳ ಭಾಗಗಳೆಂದು ಹಾಗೂ ಉಪಕರಣಗಳೆಂದು ಉಪಯೋಗಿಸಲ್ಪಡುವಂಥ (ಟೈರು ಹಾಗೂ ಇತರ ಟ್ಯೂಬುಗಳು ಮತ್ತು ಟ್ಯೂಬುಗಳು ಹಾಗೂ ಬ್ಯಾಟರಿಗಳು ಸಹಿತವಾಗಿ) ವಸ್ತುಗಳು

(೪) ರೇಡಿಯೋಗಳು ಹಾಗೂ ಅವುಗಳ ಕಂಪೋನೆಂಟು ಯಂತ್ರಗಳು ಮತ್ತು ಅವುಗಳ ಭಾಗಗಳು ವಾಯರಲೆಸ್ಸನ್ನು ಸ್ವೀಕರಿಸುವದರ ಸಲುವಾಗಿ ಅಲ್ಲದೆ ಇತರ ಉದ್ದೇಶಗಳ ಸಲುವಾಗಿ ವಿಶಿಷ್ಟವಾಗಿ ಯೋಜಿಸಲ್ಪಡದಂಥ ಯಾವತ್ತು ವಿದ್ಯುಚ್ಛಕ್ತಿಯ ಸಾಮಗ್ರಿಗಳ ಆಂಪ್ಲಿಫಾಯರುಗಳು, ಎಂಪ್ಲಿಫಾಯರುಗಳು ಹಾಗೂ ಧ್ವನಿವಾಹಕ ಯಂತ್ರಗಳ ಸಹಿತವಾಗಿ, ವಾಯರಲೆಸ್ಸನ್ನು ಸ್ವೀಕರಿಸುವ ಉಪಕರಣಗಳು ಹಾಗೂ ಸಾಧನಗಳು ಮತ್ತು ಅವುಗಳಿಗೆ ಸೇರಿದ ಭಾಗಗಳು.

(೫) ಸಿನೇಮ ಟೋಗ್ರಾಫಿಕ, ಫೋಟೋಗ್ರಾಫಿಕ, ಹಾಗೂ ಇತರ ಕ್ಯಾಮರಾಗಳು ಪ್ರೊಜೆಕ್ಟರುಗಳು ಹಾಗೂ ಎನ್ಲಾರ್ಜರುಗಳು ಅಂಥ ಕ್ಯಾಮರಾಗಳ, ಪ್ರೊಜೆಕ್ಟರಗಳ ಹಾಗೂ ಎನ್ಲಾರ್ಜರಗಳ ಲೆನ್ಸುಗಳು ಹಾಗೂ ಇತರ ಭಾಗಗಳು ಹಾಗೂ ಉಪಕರಣಗಳು ಮತ್ತು ಅವುಗಳ ಸಂಬಂಧದಿಂದ ಉಪಯೋಗಕ್ಕಾಗಿ ಬೇಕಾಗುವ ಫಿಲ್ಮುಗಳು ಪ್ಲೇಟುಗಳು ಹಾಗೂ ಇತರ ವಸ್ತುಗಳು

(೬) ದ್ಯುತಿಶೋಧಕಗಳು ಹಾಗೂ ಅವುಗಳ ಭಾಗಗಳು,

(೭) ಸುಗಂಧಗಳ ಹಾಗೂ ಪ್ರಸಾಧನ ಸರಂಜಾಮಿನ ಸರಕುಗಳ ಕೆಳಗಿನ ಪರಿಶಿಷ್ಟದಲ್ಲಿ ಹೇಳಿರುವ ಔಷಧ ಸಂಬಂಧವಾದ ಇತರ ವಸ್ತುಗಳ ಹೊರತಾಗಿ ಸುಗಂಧ ದ್ರವ್ಯಗಳು ಸೌಂದರ್ಯವರ್ಧಕ ದ್ರವ್ಯಗಳು ಹಾಗೂ ಶೃಂಗಾರವರ್ಧಕ ಪದಾರ್ಥಗಳು ಮತ್ತು ನಮೂದಿಸಲಾದ ಪದಾರ್ಥಗಳು ಈ ಕೆಳಗಿನಂತೆ —

(೧) ಅಗರ ಬತ್ತಿಗಳು ಹಾಗೂ ಊದುಬತ್ತಿಗಳು
(೨) ಧೂಪ
(೩) ಶೃಂಗಾರದ ಸಲುವಾಗಿ ಉಪಯೋಗಿಸಲ್ಪಡುವ ಎಣ್ಣೆಗಳು
(೪) ಕೂದಲಿನಲ್ಲಿ ಹಚ್ಚಿಕೊಳ್ಳುವ ಉದ್ದೇಶವಿದ್ದಂಥ ಪ್ಯಾಕ್ ಹೊರತಾಗಿ ಇತರ ಪದಾರ್ಥಗಳು
(೫) ಹಲ್ಲು ತಿಕ್ಕುವ ಸಲುವಾಗಿ ಇರುವ ಪುಡಿಗಳು, ಹಾಗೂ ಪೇಸ್ಟುಗಳು, ಹಲ್ಲು ಪುಡಿಗಳು ಹಾಗೂ ಹಲ್ಲು ತಿಕ್ಕುವ ಬ್ರಶ್ಶುಗಳು
(೬) ಓಡಿ ಕೊಲೋನ
(೭) ರೇಜರುಗಳು ಸೇಫ್ಟಿ ರೇಜರುಗಳು ಹಾಗೂ ರೇಜರ ಬ್ಲೇಡುಗಳು
(೮) ಶೇವಿಂಗ ಸ್ಟಿಕ್ಕುಗಳು ಹಾಗೂ ಶೇವಿಂಗ ಬ್ರಶ್ಶುಗಳು

(೮) ಸೆಂಟುಗಳು ಹಾಗೂ ಸೆಂಟುಗಳ ಲೇಪ (ಮೇಲಿನ ಸರಕುಗಳ ಮಾರಾಟಗಳ ಮೇಲೆ ರೂಪಾಯಿಯಲ್ಲಿ ಅರ್ಧ ಆಣೆಯಂತೆ ಮಾರಾಟಗಳ ಮೇಲಿನ ಕರವನ್ನು ಕೊಡಲೇಬೇಕಾಗುವದು)

(೯) ಕೃತಕವು ರೇಶಿಮೆಯು ಸಹಿತವಾಗಿ ರೇಶಿಮೆಯು ಹಾಗೂ (೯೦% ಕ್ಕಿಂತ ಹೆಚ್ಚು ರೇಶಿಮೆ ಯ ಮಿಶ್ರಣವುಳ್ಳ ಬಟ್ಟೆಗಳ ಹೊರತಾಗಿ) ಯಾವತ್ತು ರೇಶಿಮೆಯ ಸರಕುಗಳು

(೧೦) ಫೌಂಟನ್ ಪೆನ್ನುಗಳು, ಸ್ಟೈಲೋಗ್ರಾಫ ಪೆನ್ನುಗಳು ಹಾಗೂ ಪ್ರೊಪೆಲಿಂಗ ಪೆನ್ಸಿಲುಗಳು

(೧೧) ಯಾವತ್ತು ಗ್ಲಾಸಿನ ಪ್ಯಾನೆಲ್ಸುಗಳು ಹಾಗೂ ವಾಚುಗಳು ಮತ್ತು ಅವುಗಳ ಭಾಗಗಳು

(೧೨) ರತ್ನ ಕಂಬಳಗಳು

(೧೩) ಗ್ರಾಮೋಫೋನುಗಳು ರೇಡಿಯೋ ಗ್ರಾಮೋಫೋನುಗಳು ಹಾಗೂ ಅವುಗಳಲ್ಲಿ ಸೇರಿರುವ ಭಾಗಗಳು ಮತ್ತು ರೆಕಾರ್ಡುಗಳು

(೧೪) ಕೃತಕ ಗಡಿಯಾರಗಳು, ಟೈಮ್‌ಪೀಸುಗಳು ಹಾಗೂ ಅವುಗಳಿಗೆ ಬೇಕಾಗುವ ಬಿಡಿ ಭಾಗಗಳು ಯಾವತ್ತು ಅಂಗಭಾಗಗಳು

(೧೫) ರತ್ನಾದಿಗಳು ಬೆಲೆಯುಳ್ಳ ಹರಳುಗಳು ಕೃತ್ರಿಮ ಹರಳುಗಳು ಮತ್ತು ಸಿಂಪಿಗಳು ... ಮುತ್ತುಗಳು

(೧೬) ಗಾಜು ... ಕಾರ ... ಮತ್ತು

(೧೭) ಹಸ್ತದಂತದಿಂದ, ಗಂಧದ ಕಟ್ಟಿಗೆಯಿಂದ ಅಥವಾ ಕಲ್ಲಿನಿಂದ ಮಾಡಿದ ಅಥವಾ ಅವುಗಳ ಜೋಡಣೆಯುಳ್ಳ ಪದಾರ್ಥಗಳು, ಮತ್ತು ಅಂಥ ಅಥವಾ ಅಂಥ ವಸ್ತುಗಳ ಸೌಂದರ್ಯವನ್ನು ಹೆಚ್ಚಿಸುವ ಸಾಮಾನು ಮತ್ತು ಸಾದಾ ಹಸ್ತದಂತದ ಬಳೆಗಳ ಹೊರತಾಗಿ ಬಂಗಾರದ ಹಾಗೂ ಬೆಳ್ಳಿಯ ಜರಿ ಸೂಜಿನ ಕೆಲಸಗಳು

(೧೮) ಕಸೂತಿಯ ಹಾಗೂ ಜರತಾರಿಯ ಲೇಸುಗಳು, ಅಂಚುಗಳು ಹಾಗೂ ಜರ್ಕಿ ಮಾಲು ಮುಂತಾದವುಗಳು

(೧೯) (ಅ) ಸಾದಾ ಗಾಜಿನ ಬಳೆಗಳು, (ಬ) ದಂಗೆ ಸೋಡದ ಹಾಗೆ ಆಯಾತವಾದ ಸಲುವಾಗಿ ಉಪಯೋಗಿಸಲ್ಪಡುವ ಅದ್ದಿಗೆ ಹಾಗೂ ಹರಿದು ಒಡೆದ ಗಾಜಿನ ಚೂರುಗಳು, (ಕ) ಶುದ್ಧ ಗಾಜಿನ ಬಾಟ್ಲಿಗಳು, (ಡ) ವೈದ್ಯಕೀಯ, ರಸಾಯನಿಕ (ಲ್ಯಾಬೋರೇಟರಿಯ ಹಾಗೂ ಶಾಸ್ತ್ರೀಯ) ಉದ್ದೇಶಗಳ ಸಲುವಾಗಿ ಉಪಯೋಗ ಮಾಡುವ ಬಗ್ಗೆ ಯೋಜಿಸಲಾದ ಗಾಜಿನ ಸಾಮಾನಿನ ಹೊರತಾಗಿ) ಗಾಜಿನ ಹಾಗೂ ಪಿಂಗಾಣಿ ಮಣ್ಣಿನ ಸಾಮಾನುಗಳು ಮತ್ತು ಮಣ್ಣಿನ ಪಾತ್ರಗಳನ್ನು ಬಿಟ್ಟು ಮನೆಯಲ್ಲಿ ಉಪಯೋಗ ಮಾಡುವ ಪಾತ್ರೆಗಳು

(೨೦) ಬಾಂಡುಗಳನ್ನು, ಫ್ರೇಮುಗಳನ್ನು ಹಾಗೂ ಆಕೃತಿಗಳನ್ನು ಬಿಡಿಸಿ ಮೇಜಿನ ಮೇಲೆ ಇಡಲಾಗುವ ಚಿತ್ರ ಸಾಮಾನು

(೨೧) ಕೋಲ್ಡ ಸ್ಟೋರೇಜ, ರೆಫ್ರಿಜರೇಟರ, ಏರ ಕಂಡಿಷನಿಂಗ (ಸಾಧನ)ಗಳನ್ನು ಮಾಡುವ ಅಥವಾ ಅವುಗಳಿಗಾಗಿ ಬೇಕಾಗುವ ಯಂತ್ರಗಳು ಮತ್ತು ವಿದ್ಯುತ್ ಯಂತ್ರಗಳು

(೨೨) ಸ್ನಾನವನ್ನು ಬಿಸಿಮಾಡುವ (ಗೀಜರ ಮುಂತಾದ) ಬಗ್ಗೆ ಅಥವಾ ಶೃಂಗಾರಗೊಳಿಸುವ ಬಗ್ಗೆ ಇರುವ ವಿದ್ಯುತ್ತಿನ ಹಾಗೂ ಅಂಥ ಇತರ ಉಪಕರಣಗಳು ಮತ್ತು ಅವುಗಳ ಭಾಗಗಳು ಹಾಗೂ ಸಲಕರಣೆ ಸಾಧನಗಳು

(೨೩) ಟಿಂಟೆಡ, ಟಿಂಟೆಡ ಗ್ಲಾಸ್, ಫೋಟೋಕ್ರೋಮಿಕ ಬಲ್ಬು ಹಾಗೂ ಬೆಳಕಿಗೆ ಅವುಗಳ ಹೊರತು ಇತರ ದೀಪಗಳ ವಿದ್ಯುಚ್ಛಕ್ತಿಯ ಸಾಧನಗಳು

(೨೪) ಹೊಳಪು ನೀಡುವ ಅಥವಾ ಹೊಳೆಯುವ ಬಂಗಾರದ, ಬೆಳ್ಳಿಯ ಅಥವಾ ಮುಲಾಮಾ ಹಚ್ಚಿದ ಧಾತುವಿನ ಯಾವದೇ ಪದಾರ್ಥಗಳು ಯಾವತ್ತು ಆಭರಣಗಳು ಮತ್ತು ಬಂಗಾರದ, ಬೆಳ್ಳಿಯ ಅಥವಾ ಮುಲಾಮಾ ಹಚ್ಚಿದ ಧಾತುವಿನ ನೂಲು, ಜರಿ ಅಥವಾ ಇತರ ಸರಕು ಪದಾರ್ಥಗಳು

(೨೫) ಉಡುಗೊರೆಗಳಿಗಾಗಿ ಉಪಯೋಗಿಸಲಾಗುವ ಯಾವ ಆಭರಣಗಳಲ್ಲಿ ಹಾಗೂ ಪದಾರ್ಥಗಳಲ್ಲಿ ಉಪಯೋಗಿಸಲಾದ ರೇಶಿಮೆಯ, ಕೃತಕ ರೇಶಿಮೆಯ ಹಾಗೂ ಸಂಯೋಜಿತ ನಾರಿನ ಬಟ್ಟೆ ಸರಕಿನ ನೂರಕ್ಕೆ ಐವತ್ತಕ್ಕಿಂತ ಹೆಚ್ಚಿರುವಂಥ ಅಂಥ ಯಾವತ್ತು ಆಭರಣಗಳು ಮತ್ತು ಪದಾರ್ಥಗಳು

(೨೪) [illegible]

(೨೫) ([illegible] ಚರ್ಮವನ್ನು [illegible]) [illegible] ಜನರಿಗೆ ಮತ್ತು ಅನ್ಯರಿಗಾಗಿ ಮಾಡಿದ ಸ್ವಯಂಕೃತ ಉಪಯೋಗದ ಅಥವಾ ಮಾನವನ ಉಪಯೋಗದ [illegible]

(೨೬) [illegible] ಹಿಡಿಯುವ [illegible]

(೨೭) [illegible] ಕಡಿಮೆ ಬೆಲೆಗೆ ಮಾರಾಟವಾಗುವ [illegible] ಪಾದರಕ್ಷೆಗಳು

(೨೮) ಹಿಂದುಸ್ಥಾನದಲ್ಲಿ ತಯಾರಾಗಿದ ಅಥವಾ ಪರದೇಶಗಳಿಂದ ಹಿಂದುಸ್ಥಾನಕ್ಕೆ ಆಮದು ಮಾಡಿದ [illegible] ಅಕ್ಷರಗಳು, [illegible] ಮಾಡಿದ [illegible], [illegible], [illegible] ಮತ್ತು [illegible] ಕೆಲಸ, [illegible] ಹಾಗೂ [illegible]

(೨೯) ಸಿಗರೇಟು ಇರುವ ಪೆಟ್ಟಿಗೆಗಳು ಹಾಗೂ ಸಿಗರೇಟ್ ಪ್ಯಾಕೆಟುಗಳು

(೩೦) ಘಟಿಕೆ ಸಾಮಾನು

(ಟಿಪ್ಪಣೆ — ೭ನೇ ೧೪ನೇ ಹಾಗೂ ೧೬ನೇ ನೋಂದುಗಳು [illegible] ಮಾಡಲ್ಪಟ್ಟ ನಂತರ ಇದ್ದಂತೆ ತೋರಿಸಲ್ಪಟ್ಟಿವೆ)

ಪರಿಶಿಷ್ಟ ೨

(ಸನ್ ೧೯೪೬ನೇ ಇಸವಿಯ ವಿಕ್ರಿ ಕರದ ೧ನೇ ಕಲಮಿನಿಂದ ಅವಲಿನಲ್ಲಿದ್ದಂತೆ ತೋರಿಸಲ್ಪಟ್ಟಿವೆ)

(ಯಾವ ಸರಕುಗಳ ಮಾರಾಟಗಳನ್ನು ಮಾರಾಟಗಾರ ಮೇಲಿನ ಕರದಿಂದ ಮಾಫು ಮಾಡಲಾಗಿರುವದೋ ಅಂಥ ಸರಕುಗಳ ಯಾದಿಯು)

(೧) ಯಾವತ್ತು ನಮೂನೆಗಳ ಅಕ್ಕಿಯು ಸಹಿತವಾಗಿ, ಯಾವತ್ತು ಧಾನ್ಯಗಳು ಮತ್ತು ಬೇಳೆಗಳು ಮೋಹರು ಮಾಡಿದ ಆವರಣಗಳಲ್ಲಿ ಮಾರಾಟ ಮಾಡಲ್ಪಟ್ಟದ್ದಕ್ಕೆ ಹೊರತಾಗಿ

(೨) ಆಟಾ, ಮೈದಾ, ಸಜ್ಜಿಗೆ ಹಾಗೂ ಹೊಟ್ಟು ಇವುಗಳ ಸಹಿತವಾಗಿ ಹಿಟ್ಟು, ಮೋಹರು ಮಾಡಿದ ಆವರಣಗಳಲ್ಲಿ ಮಾರಾಟ ಮಾಡಲ್ಪಟ್ಟದ್ದಕ್ಕೆ ಹೊರತಾಗಿ

(೩) ಬ್ರೆಡ್,

(೪) ಮಾಂಸ, ಮೋಹರು ಮಾಡಿದ ಆವರಣಗಳಲ್ಲಿ ಮಾರಾಟ ಮಾಡಲ್ಪಟ್ಟದ್ದಕ್ಕೆ ಹೊರತಾಗಿ,

(೫) ಮೀನು, ಮೋಹರು ಮಾಡಿದ ಆವರಣಗಳಲ್ಲಿ ಮಾರಾಟ ಮಾಡಲ್ಪಟ್ಟದ್ದಕ್ಕೆ ಹೊರತಾಗಿ,

(೬) [illegible]ಗಳು,

(೭) ದನಕರುಗಳು, ಕುರಿಗಳು ಹಾಗೂ ಆಡುಗಳು

(೮) ತಾಜಾ ತರಕಾರಿಗಳು,

(೯) ತಾಜಾ ಹಣ್ಣುಗಳು,

(೧೦) ಹೊಟೇಲುಗಳಲ್ಲಿ, ವಿಶ್ರಾಂತಿ ಗೃಹದಲ್ಲಿ, ರಿಫ್ರೆಶ್‌ಮೆಂಟ ರೂಮಿನಲ್ಲಿ, ಊಟದ ಮನೆಯಲ್ಲಿ ಅಥವಾ ಆಹಾರವು ಅಥವಾ ಅಮಲೇರದ ಪೇಯಗಳು ಪೂರೈಸಲ್ಪಡುವಂಥ ಇತರ ಸ್ಥಳದಲ್ಲಿ ಸೇವಿಸಲಾಗುವ ಆಹಾರವು ಹಾಗೂ ಅಮಲೇರದ ಪೇಯಗಳು (ಒಂದು ವೇಳೆಗೆ ಸೇವಿಸಿದ ಇಂಥ ಆಹಾರದ ಅಥವಾ ಪೇಯಗಳ ಬೆಲೆಯು ಒಂದು ರೂಪಾಯಿಗೆ ಮೀರದ ಹೊರತು)

(೧೧) ಬೆಲ್ಲ

(೧೨) ಉಪ್ಪು

(೧೩) ಮೆಣಸು, [illegible] ಹಾಗೂ ಮೆಣಸಿನಕಾಯಿಯು

(೧೪) ಪೂರ್ಣವಾದ ಅಥವಾ ಬೇರ್ಪಡಿಸಿದ ತಾಜಾ ಹಾಲು [illegible] ಹಾಲಿನ ಪುಡಿ,

(೧೫) ತೆಗೆದು ಹಾಕಲ್ಪಟ್ಟಿದೆ.

(೧೬) [illegible] ಎಣ್ಣೆ

(೧೭) [illegible], [illegible] ಹಾಗೂ ಇತರ ಮಿಶ್ರಣಗಳ ಹೊರತಾಗಿ [illegible] ಆಹಾರಗಳು

(೧೮) ಫಲವತ್ತಾಗಿ ಮಾಡುವ ಪದಾರ್ಥಗಳು

(೧೯) ಕ್ವಿನೈನು

(೨೦) ಕೋಲ್‌ಗ್ಯಾಸ್

(ಅ) ಸರಕಾರದವರು ಅಥವಾ ಯಾವದೇ ಸ್ಥಾನಿಕ ಅಧಿಕಾರಿ ಸಂಸ್ಥೆಯ ಉಪಯೋಗದ ಸಲುವಾಗಿ ಅಥವಾ

(ಬ) (ಮಾರಾಟ ಮಾಡುವ ಅಥವಾ ಕಚೇರಿಯ ನಿವೇಶನಗಳಲ್ಲಿ ಹೊರತಾಗಿ ಇತರ) ಯಾವದೇ [illegible] ಉಪಯೋಗದ ಸಲುವಾಗಿ ಗ್ಯಾಸ ಸಪ್ಲಾಯ ಕಂಪನಿಯಿಂದ ಮಾರಾಟ ಮಾಡಲ್ಪಟ್ಟಾಗ

(೨೧) ([illegible], [illegible], [illegible], [illegible] ತಂಬಾಕ ಮುಂತಾದವುಗಳ ಸಹಿತವಾಗಿ) ಯಾವುದೇ ನಮೂನೆಯ ತಂಬಾಕು [illegible] ಅಥವಾ [illegible]

(೨೨) [illegible] ಪೆಟ್ಟಿಗೆಗಳು

(೨೩) ತೆಗೆದು ಹಾಕಲ್ಪಟ್ಟಿದೆ

(೨೪) ತೆಗೆದು ಹಾಕಲ್ಪಟ್ಟಿದೆ

(೨೫) ವಿದ್ಯುಚ್ಛಕ್ತಿ

(೨೬) ಮೋಟಾರು ಸ್ಪಿರಿಟು, ಅಂದರೆ ಯಾವದೇ ನಮೂನೆಯ ಮೋಟರು ವಾಹನದ ಸಲುವಾಗಿ [illegible] ಚಲನ ಶಕ್ತಿಯನ್ನು ಕೊಡತಕ್ಕ ಹಾಗೂ ಯಾವದರ ಫ್ಲ್ಯಾಶಿಂಗ ಪಾಯಿಂಟು ೭೬ ಡಿಗ್ರಿ ಫ್ಯಾರನ್‌ಹೈಟಿನ ಕೆಳಗೆ ಇರುವದೋ ಅಂಥ ಯಾವದೇ ದ್ರವ ಪದಾರ್ಥವು ಅಥವಾ ದ್ರವ ಪದಾರ್ಥಗಳ ಮಿಶ್ರಣವು ಎಂದರ್ಥವಾಗುತ್ತದೆ

(೨೭) [illegible] ([illegible]) [illegible] ದ್ರವ್ಯಯುಕ್ತ [illegible] ಹೊರತುಪಡಿಸಿ

(೨೮) ಮಜ್ಜಿಗೆ ಮತ್ತು ಮೊಸರು

(೨೯) ತೆಗೆದು ಹಾಕಲ್ಪಟ್ಟಿದೆ

(೩೦) ಅರಿಶಿಣ ಹಾಗೂ ಅರಿಶಿಣ ಪುಡಿ

(೩೧) ಖಾದಿ

(೩೨) ಗಿರಣಿಯ ಹತ್ತಿಯ ನೂಲಿನಿಂದಲೇ ಅಥವಾ ಕೈಯಿಂದ ತೆಗೆದ ಹತ್ತಿಯ ನೂಲಿನಿಂದಲೇ ಕೈಮಗ್ಗಗಳ ಮೇಲೆ ನೇಯಲಾದ ಅರಿವೆಯು ಮತ್ತು ಇಂಥ ಅರಿವೆಯಿಂದ ಅಥವಾ ನೂಲಿನಿಂದಲೇ ಮಾಡಲ್ಪಟ್ಟ [illegible], [illegible], ಟವೆಲ್ಲುಗಳು ಹಾಗೂ ಕರವಸ್ತ್ರಗಳು

(೩೩) ತೆಗೆದು ಹಾಕಲ್ಪಟ್ಟಿದೆ

(೩೪) ಅವಲಕ್ಕಿ ಮತ್ತು [illegible] ([illegible] ಸಹಿತವಾಗಿ)

(೩೫) ಗೊಬ್ಬರ ಎಣ್ಣೆಯ ಹಿಂಡಿಯ ಸಹಿತ

(೩೬) ಪ್ರಾಂತಿಕ ಸರಕಾರದವರು ಸರಕಾರಿ ಗೆಝೇಟಿನಲ್ಲಿ ಜಾಹೀರನಾಮೆ ಕೊಟ್ಟು ನಮೂದಿಸಿದ ಮನುಷ್ಯರಿಂದಲೇ ಅಥವಾ ಪಶುಗಳ ಸಹಾಯದಿಂದಲೇ ನಡೆಸಲ್ಪಡುವ ಒಕ್ಕಲತನದ ಸಾಧನಗಳು ಅಂದರೆ —

ಒಕ್ಕಲತನದ ಉಪಕರಣಗಳು.

(೧) [illegible]ಗಳು (ಎಲ್ಲ ಪ್ರಕಾರದವು) (೨) ಗುದ್ದಲಿಗಳು (ಎಲ್ಲ ಪ್ರಕಾರದವು) (೩) ಹಾರೆಗಳು (೪) [illegible] ಪಾವಡಾಗಳು (೫) ನೇಗಿಲ ಕುಡಿಗಳು (೬) ಕೊಯ್ಯುಗತ್ತಿಗಳು (ಎಲ್ಲ ಪ್ರಕಾರದವು), (೭) ಕಬ್ಬಿಣದ ನೇಗಿಲುಗಳು (೮) ಕುಂಟೆಗಳು (ಎಲ್ಲ ಪ್ರಕಾರದವು) (೯) ಉಜ್ಜು ಗೊರಡಗಳು (೧೦) ದಿಬ್ಬ ಮಾಡುವ ಸಾಧನಗಳು (೧೧) ಹಂಟೆ ಒಡೆಯುವ ಸಾಧನಗಳು (೧೨) ಬೀಜ ಸ್ವಚ್ಛ ಮಾಡುವ ಸಾಧನಗಳು (೧೩) ನೆಡುವ ಸಾಧನಗಳು (೧೪) ಕೊಯ್ಯುವ ಸಾಧನಗಳು (೧೫) ಹುಲ್ಲು ಕೊಯ್ಯುವ ಸಾಧನಗಳು (೧೬) [illegible] ಮಾಡುವ ಸಾಧನಗಳು (೧೮) ಕೇರುವ ಯಂತ್ರಗಳು (೧೯) ಧಾನ್ಯ ತೆಗೆಯುವ ಯಂತ್ರಗಳು (೨೦) [illegible] ಯಂತ್ರಗಳು (೨೧) ಕಬ್ಬಿಣದ ಹಾಗೂ ಉಕ್ಕಿನ ಕಪ್ಪಲಿಗಳು (೨೨) ಕೈ ಪಂಪುಗಳು (೨೩) ರಹಾಟುಗಳು (೨೪) ಗೊಬ್ಬರ ಕಡಿಯುವ ಸಾಧನಗಳು (೨೫) [illegible]ಗಳು (೨೬) ಬಕೇಟುಗಳು (೨೭) ಕಾಡಗೋಲುಗಳು (೨೮) [illegible]ಗಳು (೨೯) ಒಕ್ಕಲಿಗರಿಂದ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಚಕ್ಕಡಿಗಳು (೩೦) ಶೇಂಗಾವನ್ನು (ನೆಲಗಡಲೆಯನ್ನು) ಒಡೆಯುವ ಬಗ್ಗೆ ಕೈಯಂತ್ರ

(೩೭) ಪ್ರಾಂತಿಕ ಸರಕಾರದವರಿಂದ ಅಥವಾ ಮುಂಬಯಿ ಪ್ರಾಂತದ ಡೈರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಅಥವಾ ಭಾಗಗಳ ಎಜ್ಯುಕೇಶನಲ್ ಇನ್ಸಪೆಕ್ಟರರಿಂದ ಮುಂಜೂರ ಮಾಡಲ್ಪಟ್ಟ ಅಥವಾ ಮುಂಬಯಿಯ ಮ್ಯುನಿಸಿಪಲ್ ಶಾಲೆಗಳ ಕಮಿಟಿಯಿಂದ ಮಂಜೂರು ಮಾಡಲ್ಪಟ್ಟ ಪಠ್ಯ ಪುಸ್ತಕಗಳು

(೩೮) ಸ್ಲೇಟು ಮತ್ತು ಪಾಟಿಯ ಪೆನ್ಸಿಲುಗಳು

(೩೯) [illegible] ಮತ್ತು [illegible] ಸಾಮಾನುಗಳು ([illegible])

(೪೦) ಇಂಕಪಟ್ಟಿ

(೪೧) ಎಕ್ಸರಸಾಯಿಜ ಡ್ರಾಯಿಂಗ ಪುಸ್ತಕಗಳು

(೪೨) ಸನ್ ೧೮೯೯ನೇ ಇಸವಿಯ ಹಿಂದುಸ್ಥಾನದ ಸ್ಟಾಂಪ ಆಕ್ಟಿನ ನಿಯಮಗಳ ಪ್ರಕಾರ ಯೋಗ್ಯ ರೀತಿಯಿಂದ ಅಧಿಕಾರ ಕೊಡಲ್ಪಟ್ಟ [illegible] ಮಾರಿದ ಸ್ಟ್ಯಾಂಪ ಕಾಗದ

(೪೩) ಯಾವ ಜಾಹೀರಾತುಗಳ ಸಂಬಂಧದಿಂದ ವರ್ತಮಾನ ಪತ್ರದಲ್ಲಿ ಜಾಹೀರಾತಿನ ಮೇಲಿನ ದರವು ಸನ್ ೧೯೪೬ನೇ ಇಸವಿಯ ಮುಂಬಯಿ ಫೈನಾನ್ಸ (ಸನ್ ೧೯೩೨ನೇ ಇಸವಿಯ ಮುಂಬಯಿಯ ೨ನೇ) ಆಕ್ಟಿನ ೭ನೇ ಭಾಗದನ್ವಯ ಕೊಡಲ್ಪಟ್ಟಿರುವದೋ ಅಂಥ ಜಾಹೀರಾತುಗಳು ಇರುವ ಯಾವದೇ ಜರ್ನಲನ, ಮ್ಯಾಗಝೀನಿನ ಅಥವಾ ಇತರ ನಿಯತಕಾಲಿಕ ಪತ್ರಿಕೆಯು ಸಹಿತವಾಗಿ ವರ್ತಮಾನ ಪತ್ರಗಳು

(೪೪) [illegible], ಕುರಿಗಳ ಹಾಗೂ ಆಡುಗಳ ಚರ್ಮಗಳು ಹಾಗೂ ತೊಗಲುಗಳು ಹಾಗೂ ಚರ್ಮ ಮತ್ತು ತೊಗಲು (ಹದ ಮಾಡಿದ್ದಿರಲಿ ಅಥವಾ ಹದ ಮಾಡದಿದ್ದಿರಲಿ)

(೪೫) ಹತ್ತಿ (ಅರಳಿದ್ದು ಅಥವಾ ಅರಳದೆ ಇದ್ದದ್ದು)

(೪೬) ಹತ್ತಿಯ ನೂಲು

(೪೭) ಹತ್ತಿಯ ಕಾಳು

(೪೮) ತೆಗೆದು ಹಾಕಲ್ಪಟ್ಟಿದೆ.

(೪೯) ಎಲ್ಲ ಧರ್ಮಗಳ ಧಾರ್ಮಿಕ ಗ್ರಂಥಗಳು

(೫೦) ವೀಳ್ಯದೆಲೆ

(೫೧) ತೆಗೆದು ಹಾಕಲ್ಪಟ್ಟಿದೆ

(೫೨) ಕೈಯಿಂದ ತೆಗೆದ ಉಣ್ಣೆಯ ನೂಲಿನಿಂದಲೇ ಕೈಮಗ್ಗಗಳ ಮೇಲೆ ನೇಯಲಾದ ಅರಿವೆಯು

(೫೩) ಹಿಂದುಸ್ಥಾನ ಸರಕಾರದ ಕ್ಯಾಂಟೀನ ಸರ್ವೀಸ ಡಿಪಾರ್ಟಮೆಂಟಿನಿಂದ ಪಡೆಯಲಾದ ಹಾಗೂ ಆ ಡಿಪಾರ್ಟಮೆಂಟಿನಿಂದ ದಾಖಲೆ ಪಡೆದ ಕ್ಯಾಂಟೀನ ಕಂಟ್ರಾಕ್ಟರರಿಂದ ಭಾರತದ ಅಥವಾ [illegible] ಅಥವಾ ಮಿತ್ರರಾಷ್ಟ್ರಗಳ ಫೌಜುಗಳ ಮೆಂಬರರಿಗೆ ಸದರಿ ಸರಕಾರದಿಂದ ಗೊತ್ತು ಮಾಡಲ್ಪಟ್ಟ ಬೆಲೆಗಳ ಪ್ರಕಾರ ಮಾರಾಟ ಮಾಡಲಾದ ಸಾಮಾನುಗಳು

(೫೪) ಚರಖಾ ಹಾಗೂ ಪ್ರಾಂತಿಕ ಸರಕಾರದವರು ಸರಕಾರಿ ಗ್ಯಾಝೆಟಿನಲ್ಲಿ ಜಾಹೀರನಾಮೆ ಕೊಟ್ಟು ನಿರ್ದಿಷ್ಟ ಮಾಡಬಹುದಾದಂಥ, ಕೈಯಿಂದ ತೆಗೆದ ನೂಲನ್ನು ಅಥವಾ ಕೈಯಿಂದ ನೇಯಲಾದ ಬಟ್ಟೆಯನ್ನು ತಯಾರಿಸುವ ಕೆಲಸದಲ್ಲಿ ಉಪಯೋಗಿಸಲಾದ ಇತರ ಸಾಧನಗಳು ಅಂದರೆ —

(೧) ಹಿಂಜುವ ಬಿಲ್ಲು
(೨) ಕೈಯಿಂದ ಹಿಂಜುವ ಯಂತ್ರ
(೩) ಹಿಂಜುವ ಬಿಲ್ಲಿನ ದಾರಗಳು
(೪) ಕಟ್ಟಿಗೆಯ [illegible] (ಕಟ್ಟಿಗೆಯ ಸುತ್ತಿಗೆ)
(೫) ಕೈಯಿಂದ ಹತ್ತಿಯನ್ನು ಕಾಳಿನಿಂದ ಬಿಡಿಸುವ ಸಾಧನಗಳು,
(೬) [illegible] ರಾಟಿ ಹಾಗೂ ಅದರ ಬಿಡಿಭಾಗಗಳು
(೭) [illegible]ಗಳು
(೮) ಕೈ ರೀಲುಗಳು (ಕಟ್ಟಿಗೆಯವು)
(೯) ಕೈಯಿಂದ ನಡೆಸಲ್ಪಡುವ [illegible]ಗಳು
(೧೦) 'ಪಿಟ್_ಲೂಮು' 'ಫ್ರೇಮ_ಲೂಮು' ಹಾಗೂ ಸೆಮಿ ಆಟೋಮ್ಯಾಟಿಕ ಲೂಮು ಇವುಗಳನ್ನೊಳಗೊಂಡ ಕೈ ಮಗ್ಗಗಳು

(೫೫) ಕಾಯಿಪಲ್ಲೆಯ ಬೀಜಗಳು

(೫೬) ಬಂಕರ ಕಲ್ಲಿದ್ದಲಿ

(೫೭) ಕಚ್ಚಾ ರೇಶಿಮೆಯು ಹಾಗೂ ರೇಶಿಮೆಯ ಮತ್ತು ಕೃತ್ರಿಮ ರೇಶಿಮೆಯ ನೂಲು

(೫೮) (ಹೆಣೆಯುವ ನೂಲಿನ ಹೊರತಾಗಿ [illegible]) ಉಣ್ಣೆಯ ಕಚ್ಚಾ ಉಣ್ಣೆಯು, ಉಣ್ಣೆಯ ಗೊಂಡೆಗಳು, ಉಣ್ಣೆಯ ನೂಲು

(೫೯) ಕೈಮಗ್ಗಗಳ ಮೇಲೆ ನೇಯಲಾದ ಹಾಗೂ ಪ್ರತಿಯೊಂದು ವಾರಿಗೆ ಎರಡು ರೂಪಾಯಿಗೆ ಮೀರದಂಥ ದರದ ಪ್ರಕಾರ ಮಾರಲಾದ ಯಾವದೇ ತರದ ಅರಿವೆಯು

(೬೦) ಸೇಲ್ಸಟ್ಯಾಕ್ಸ ಕಮಿಶನರರಿಂದ ಈ ಉದ್ದೇಶದ ಸಲುವಾಗಿ ಮಾನ್ಯ ಮಾಡಲ್ಪಟ್ಟ [illegible] ಮಾರಾಟ ಮಾಡಲ್ಪಟ್ಟ ಖಾದಿಯ ಬಟ್ಟೆಗಳು ಹಾಗೂ ಇತರ ವಸ್ತುಗಳು

ಟಿಪ್ಪಣೆ — ೩೦ನೇ ೩೨ನೇ, ೩೩ನೇ ಹಾಗೂ ೪೩ ನಂಬರಿನ ನೋಂದಣಿಗಳು ಸುಧಾರಣೆ ಮಾಡಲ್ಪಟ್ಟನಂತರ ಇದ್ದಂತೆ ತೋರಿಸಲ್ಪಟ್ಟಿವೆ ೫೫ರಿಂದ ೬೦ರ ವರೆಗಿನ ನೋಂದಣಿಗಳು ಹೊಸವಿರುತ್ತವೆ)

ನಂಬರ ೪೯೬(೧) **ವ್ಹಿ. ಎಲ್. ಗಿಡವಾನಿ,**
ಮುಂಬಯಿ, ಡೆಪ್ಯುಟಿ ಕಮಿಶನರ ಆಫ್
ತಾ ೫_೪_೫೦ ಸೇಲ್ಸ ಟ್ಯಾಕ್ಸ,
ಮುಂಬಯಿ ರಾಜ್ಯ

ಜಿಲ್ಲಾ ಸಮಾಚಾರ

ಹೊನ್ನಾವರ— [illegible]

[illegible]

ಶಿರಸಿ— [illegible]

[illegible]

ಸಿದ್ದಾಪುರ— [illegible]

[illegible]

ಮುಂಡಗೋಡ— [illegible]

NOTIFICATION

Government has outlined the following procedure for distribution of Iron and Steel for non agricultural demands -

1 In rural areas and small towns, with a population below 25000, according to 1941 census, non-agricultural quota of iron and steel will be distributed for (1) building construction, (2) small scale fabrication of consumer goods at 65 and 35 per cent respectively

2 Sixty per cent of the iron and steel alloted for building construction is earmarked for housing and repairs to buildings 25% for the construction of public institutions like schools, libraries, dispensaries etc, 10% for other essential non-residential constructions such as godowns, offices shops etc and 5% for essential small industries such as grinding mills, workshops etc

The Collector and Chairman of the District Rural Development Board will be in charge of these quotas and the Agency for distribution will be the same as that for the distribution of the agricultural quota. Demands for steel for purposes of essential repairs will generally be given priority over those for new construction

M K Jadhav,
Collector & Chairman,
R D Board Kanara

[illegible]

ಮಂಚಿಕೇರಿ— [illegible]

ಹಳಿಯಾಳ— [illegible]

ಕಾರವಾರ— [illegible]

[illegible]

ಮಹತ್ವದ ವಾರ್ತೆಗಳು.

[illegible]

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ—ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — [illegible]

ಮಾಲಕ:— ಮ್ಯಾನೇಜ್ಮೆಂಟ್.

[illegible] ('ಸಂಪಾದಕ') ಇವರು [illegible] 'ಸ್ಟಾರ ಆಫ್ ಕನರಾ ಪ್ರೆಸ್'ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಮುಂಬಯಿ ಪ್ರಾಂತಕ್ಕೆ ರೂ. ೨
ಅಂಚೆಯಿಂದ ಪರದೇಶಕ್ಕೆ ೩-೦
೬ ತಿಂಗಳಿಗೆ ೧-೮-೦
ಬಿಡಿ ಸಂಚಿಕೆಗೆ ೦-೧-೬
ವರ್ಗಣಿಯ ಹಣವನ್ನು ಮುಂಗಡ ಕಳಿಸತಕ್ಕದ್ದು

Reg. No. B 1270 Monday, 17-1-1950

ಕಾನಡಾವೃತ್ತ

ವರ್ಷ ೪೨] THE KANARA NEWS. [ಸಂಚಿಕೆ ೬೨

ಕುಮಟಾ - ಸೋಮವಾರ, ತಾ ೧೭—೧—೧೯೫೦

ಜಾಹೀರಾತುಗಳ ದರ
ಕಾರ್ಯಾಲಯಕ್ಕೆ ಬರೆದು ತಿಳಿಯಬೇಕು.

ವಿವಿಧ ವಿಷಯಗಳು.

ಮದ್ರಾಸ ರಾಜ್ಯಾಂತರ್ಗತದೊಳಗಿನ ತಿರುವಣ್ಣಾಮಲೈ ಕ್ಷೇತ್ರದಲ್ಲಿ ಆಶ್ರಮ ಮಾಡಿಕೊಂಡಿದ್ದ ಜಗದ್ವಿಖ್ಯಾತ ಯೋಗೀಂದ್ರ ಶ್ರೀ ರಮಣ ಮಹರ್ಷಿಗಳು ಕಳೆದ ಶುಕ್ರವಾರ ರಾತ್ರಿ ೮|| ಘಂಟೆಗೆ ನಿರ್ವಾಣಪದವಿಯನ್ನು ಹೊಂದಿರುತ್ತಾರೆ. ಮಹರ್ಷಿಗಳು ಇತ್ತ ಕೆಲವು ದಿನಗಳಿಂದ ಅಸ್ವಸ್ಥರಿದ್ದರು. ಅವರ ಪ್ರಕೃತಿ ಚಿಂತಾಜನಕವಿರುತ್ತದೆಂದು ಈಗ ೮-೧೦ ದಿನಗಳಿಂದ ಸುದ್ದಿಗಳೂ ಬರುತ್ತಿದ್ದವು. ದೇಶ ವಿದೇಶಗಳಿಂದ ಬಹು ಭಕ್ತರೂ ಮಹರ್ಷಿಗಳ ಅಂತ್ಯದರ್ಶನಕ್ಕಾಗಿ ಆಶ್ರಮದಲ್ಲಿ ಕೂಡಿದ್ದರು. ಮಹರ್ಷಿಗಳು ಶುಕ್ರವಾರ ಸಂಜೆ ಹಣ್ಣಿನ ರಸ ಸೇವಿಸಿದ್ದರೆಂದೂ ಕೊನೆಯ ಗಳಿಗೆಯ ವರೆಗೂ ಜಾಗ್ರದವಸ್ಥೆಯಲ್ಲಿದ್ದರೆಂದೂ ಆಶ್ರಮವಾಸಿಗಳು ಹೇಳುತ್ತಾರೆ. ಶ್ರೀ ರಮಣ ಮಹರ್ಷಿಗಳು ಸಮಾಧಿಸ್ಥರಾದ ಕಾಲಕ್ಕೆ ಸರಿಯಾಗಿ ಆಕಾಶದೊಳಗೆ ಒಂದು ತೇಜಸ್ವಿ ಉಲ್ಕೆಯು ಉತ್ತರದಿಂದ ದಕ್ಷಿಣಕ್ಕೆ ಹಾರಿ ಹೋದದ್ದನ್ನು ಮದ್ರಾಸ ಸರಕಾರದ ಕಾರ್ಯದರ್ಶಿ ಶ್ರೀ|| ರಾಜನ್ನಿ ಮೊದಲಾದವರೂ ಬೇರೆ ಅನೇಕ ಜನರೂ ನೋಡಿರುತ್ತಾರಂತೆ.

ಶ್ರೀ ರಮಣ ಮಹರ್ಷಿಗಳು ಮಧುರಾ ಜಿಲ್ಲೆಯ ಒಂದು ದೊಡ್ಡ ವಕೀಲರ ಮಕ್ಕಳು. ವೆಂಕಟರಾಮನ್ ಎಂದು ಅವರ ಪೂರ್ವಾಶ್ರಮದ ಹೆಸರು. ಬಾಲ್ಯದಿಂದಲೂ ಅವರು ಸಂತ-ಸಾಧುಗಳ ಚರಿತ್ರೆಗಳನ್ನು ಕೇಳುವದರಲ್ಲೂ ಓದುವದರಲ್ಲೂ ವಿಶೇಷ ಆಸಕ್ತಿ ತೋರುತ್ತಿದ್ದರು. ಇತರ ವಿದ್ಯೆಯ ಅಭ್ಯಾಸದ ಕಡೆ ಅವರ ಲಕ್ಷವಿದ್ದಿಲ್ಲ. ಪ್ರಾಯದ ೧೭ನೇ ವರುಷದಲ್ಲಿ ಅವರು ಮನೆ ಬಿಟ್ಟು ಪರಮಾತ್ಮನ ಶೋಧಕ್ಕಾಗಿ ಹೊರಟರು, ಮತ್ತು ಸಂಚಾರ ಮಾಡುತ್ತ ಮಾಡುತ್ತ ಅರುಣಾಚಲ ಕ್ಷೇತ್ರಕ್ಕೆ ಬಂದು ಅಲ್ಲಿಯ ಪ್ರಸಿದ್ಧ ಶ್ರೀ ಅರುಣಾಚಲ ದೇವರ ಮಂದಿರದಲ್ಲಿ ತಾಸುಗಟ್ಟಲೆ ಧ್ಯಾನಸ್ಥರಾಗಿ ಕೂಡುತ್ತಿದ್ದರು. ಹೀಗೆ ಕೆಲವು ಕಾಲ ಕಳೆದ ಮೇಲೆ ಈ ಮಹರ್ಷಿಗಳು ಆ ಮಂದಿರದ ಹತ್ತಿರವೇ ಇರುವ ಒಂದು ಗುಹೆಯಲ್ಲಿ ಒಂದು ತಿಂಗಳ ಕಾಲ ದೀರ್ಘ ಸಮಾಧಿ ಹಿಡಿದು ಕೂತಿದ್ದರಂತೆ. ಆಗ ಅವರ ಶರೀರದ ಕೆಲವು ಭಾಗವನ್ನು ಕ್ರಿಮಿ-ಕೀಟಕಗಳು ತಿಂದಿದ್ದವಂತೆ! ಮಹರ್ಷಿಗಳ ಈ ಯೋಗ-ಸಮಾಧಿಯನ್ನು ಪ್ರತ್ಯಕ್ಷ ಕಂಡ ದಿವಂಗತ ಮಹಾ ಪಂಡಿತ ಗಣಪತಿ ಶಾಸ್ತ್ರಿ ಕಾವ್ಯಕಂಠ ಇವರು ಅವರಿಗೆ ರಮಣ ಮಹರ್ಷಿಗಳೆಂದು ಅಭಿಧಾನವನ್ನಿತ್ತು ಅವರ ಮಹಿಮೆಯನ್ನು ಲೋಕದಲ್ಲೆಲ್ಲ ಪ್ರಚುರಗೊಳಿಸಿದರು. ಮುಂದೆ ಕಾಲ ಹೋದಂತೆ ಮಹರ್ಷಿಗಳು ಇರುವಲ್ಲಿ ಒಂದು ಆಶ್ರಮವಾಯಿತು. ಸಾವಿರಾರು ಜನರು ಈ ಆಶ್ರಮಕ್ಕೆ ಬಂದು ತಮ್ಮ ಆಧ್ಯಾತ್ಮಿಕ ಜ್ಞಾನದ ತೃಷೆಯನ್ನು ಹಿಂಗಿಸಿಕೊಳ್ಳುತ್ತಿದ್ದರು. ಮಹರ್ಷಿಗಳಿಗೆ ಈಗ ಪ್ರಾಯದ ೭೧ ವರ್ಷ ನಡೆಯುತ್ತಿತ್ತು. ಅವರ ನಿರ್ಯಾಣದಿಂದ ಭಾರತವು ಒಂದು ತೇಜಸ್ವಿ ಆಧ್ಯಾತ್ಮಿಕ ಗುರುಗಳನ್ನು ಕಳೆದುಕೊಂಡಂತಾಗಿದೆ.

* * *

ಕಳೆದ ವಾರ ತಿಳಿಸಿದಂತೆ ಹಿಂದುಸ್ತಾನ ಪಾಕಿಸ್ತಾನಗಳ ಮುಖ್ಯಮಂತ್ರಿಗಳ ನಡುವೆ ದಿಲ್ಲಿಯಲ್ಲಿ ಆದ ಒಡಂಬಡಿಕೆಯನ್ನು ಉಭಯ ಮಹಾಪ್ರಧಾನರು ಕಳೆದ ಸೋಮವಾರ ಪಾರ್ಲಮೆಂಟ ತಮ್ಮ ತಮ್ಮ ಶಾಸನ ಮಂಡಳಗಳ ಮುಂದಿಟ್ಟು, ಅದರ ವಿವರಣೆಯನ್ನೂ ಮಾಡಿದರು. ಈ ಒಡಂಬಡಿಕೆಯ ಸಾರಾಂಶವಿಂತಿದೆ:—(೧) ಹಿಂದುಸ್ತಾನದಲ್ಲಾಗಲಿ ಪಾಕಿಸ್ತಾನದಲ್ಲಾಗಲಿ ಅಲ್ಪಸಂಖ್ಯಾಕ ಸಮಾಜಗಳಿಗೆ ನಿರ್ಭಯವಾಗಿ ಮತ್ತು ಮಾನ ಮರ್ಯಾದೆಯಿಂದ ಜೀವಿಸಲು ಪೂರ್ಣ ಅವಕಾಶ ಇರಬೇಕು. ಅಲ್ಪಸಂಖ್ಯಾಕರಿಗೆ ಇತರರಂತೆ ಸಮ ಬಾಧ್ಯತೆಗಳೂ ವಿತ್ತ-ಜೀವಿತ, ಸಂಸ್ಕೃತಿ, ಸದಾಚಾರ, ಉದ್ಯೋಗ-ವ್ಯವಹಾರ ಧರ್ಮ, ಪ್ರಚಾರ-ಸ್ವಾತಂತ್ರ್ಯ, ಭಾಷಣ ಇವುಗಳ ಸಂಬಂಧದಲ್ಲಿ ಸ್ವಾತಂತ್ರ್ಯವು ದೊರೆಯತಕ್ಕದ್ದು. ಭಾರತದಲ್ಲಿ ಈ ಸ್ವಾತಂತ್ರ್ಯವನ್ನು ಭಾರತದ ಪ್ರಜಾರಾಜ್ಯದ ಘಟನೆಯು ಈಗಾಗಲೇ ಹಿಂದ-ಭೂಮಿಯೊಳಗಿನ ಅಲ್ಪಸಂಖ್ಯಾಕರಿಗೆ ದೊರಕಿಸಿಕೊಟ್ಟಿದೆ. ಪಾಕಿಸ್ತಾನದ ಘಟನಾ ಸಮಿತಿಯು ಸಿದ್ಧಗೊಳಿಸಿರುವ ಧ್ಯೇಯ-ನಿರೂಪಣ ಗೊತ್ತುವಳಿಯಲ್ಲಿ ಸಹ ಈ ತತ್ವಗಳು ಸ್ವೀಕರಿಸಲ್ಪಟ್ಟಿವೆಂದೂ, ಮುಂದೆ ತಮ್ಮ ಘಟನೆಯೂ ಕೂಡ ತತ್ಸದೃಶ ಅಲ್ಪಸಂಖ್ಯಾಕರಿಗೆ ಮೇಲೆ ಹೇಳಿದ ಹಕ್ಕು ಬಾಧ್ಯತೆಗಳನ್ನು ಸ್ವಾತಂತ್ರ್ಯಗಳನ್ನೂ ಕೊಡುವದೆಂದೂ ಪಾಕಿಸ್ತಾನ ಮಹಾಮಂತ್ರಿಗಳು ಆಶ್ವಾಸನೆ ಕೊಟ್ಟಿರುತ್ತಾರೆ. (೨) ಉಭಯ ರಾಷ್ಟ್ರಗಳೊಳಗಿನ ಅಲ್ಪಸಂಖ್ಯಾಕರು ತಮ್ಮ ರಾಷ್ಟ್ರಕ್ಕೆ ಮತ್ತು ಸರಕಾರಕ್ಕೆ ನಿಷ್ಠೆಯಿಂದಿರಬೇಕು, ತಮ್ಮ ಮೇಲೆ ಬರಬಹುದಾದ ಸಂಕಟಗಳ ನಿವಾರಣೆಗಾಗಿ ತಮ್ಮ ಸರಕಾರಕ್ಕೇ ಮೊರೆಹೋಗಬೇಕು (೩) ಪೂರ್ವ ಪಾಕಿಸ್ತಾನದಲ್ಲೂ ಪಶ್ಚಿಮ ಬಂಗಾಲ, ಆಸಾಮಗಳಲ್ಲೂ ಸದ್ಯಕ್ಕೆ ಉಂಟಾದ ಗಲಭೆ-ಗೊಂದಲಗಳ ಪರಿಣಾಮವಾಗಿ ದೇಶಾಂತರ ಮಾಡಬಯಸುವ ಜನರಿಗೆ ಉಭಯ ಸರಕಾರಗಳು ನಿರ್ಭಯವಾಗಿ ಸಂಚರಿಸ ಕೊಡಬೇಕು, ದೇಶಾಂತರ ಮಾಡಲು ಅವರಿಗೆ ಸಾಕಷ್ಟು ಸಂರಕ್ಷಣೆಯನ್ನು ಕೊಡಬೇಕು (೪) ಗುಳೆ ಹೋಗುವ ವ್ಯಕ್ತಿಗಳು ತಮ್ಮ ಚರಾಸ್ತಿ ತಮ್ಮೊಡನೆ ಒಯ್ಯಲು ಸ್ವತಂತ್ರರಿರಬೇಕು, ಒಯ್ಯಲಾಗದ ಆಸ್ತಿಯನ್ನು ಅವರು ಭದ್ರತೆಗಾಗಿ ಬೇಂಕುಗಳಲ್ಲಿಡಬಹುದು. ನಗದು ಹಣ ಒಯ್ಯಲು ಮಾತ್ರ ಕೆಲವು ನಿರ್ಬಂಧಗಳಿವೆ. ಪ್ರತಿಯೊಬ್ಬ ಪ್ರಾಯಸ್ಥ ದೇಶತ್ಯಾಗಿಯು ರೂ. ೧೫೦ರ ವರೆಗೆ ಮಾತ್ರ, ಅಪ್ರಾಪ್ತವಯಸ್ಕನು ರೂ. ೭೫ರ ವರೆಗೆ ಮಾತ್ರ ನಗದು ಹಣ ಒಯ್ಯಬಹುದಾಗಿದೆ. (೫) ದೇಶ-ತ್ಯಾಗಿಗಳು ಬಿಟ್ಟು ಹೋಗುವ ಸ್ಥಾವರಾಸ್ತಿಯ ಮೇಲಿನ ಅವರ ಒಡೆತನ ನಷ್ಟವಾಗಲಾರದು. ಈ ದೇಶತ್ಯಾಗಿಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ತಿರುಗಿ ಸ್ವಸ್ಥಾನಕ್ಕೆ ಹೋದರೆ ಅದು ಅವರಿಗೆ ಸಿಗಬೇಕು, ಇಷ್ಟವಿದ್ದರೆ ಅವರು ಆ ಆಸ್ತಿಯನ್ನು ಹಿಂದಿನಂತೆ ಮಾರಬಹುದು, ಇಲ್ಲವೆ ತನಕ ಆ ನಿರಾಶ್ರಿತರ ಆಸ್ತಿಗಳ ವ್ಯವಸ್ಥೆಯನ್ನು ಸರಕಾರ-ರಚಿತ ವಿಶ್ವಸ್ತ-ಮಂಡಳಗಳು ನಡಿಸಿ ಉತ್ಪನ್ನವನ್ನು ಒಡೆಯರಿಗೆ ಮುಟ್ಟಿಸುವ ವ್ಯವಸ್ಥೆ ಮಾಡುವವು (೬) ಬಂಗಾಲ-ಆಸಾಮಗಳೊಳಗಿನ ಸದ್ಯದ ಗಲಭೆಗಳ ಕಾಲಕ್ಕೆ ಕೊಲೆ ಕೊಳ್ಳೆ ಸುಲಿಗೆಯ ಅಪರಾಧಗಳನ್ನು ಮಾಡಿದ ಪುಂಡರ ಯೋಗ್ಯ ಶಿಕ್ಷೆ ಮಾಡುವ ವ್ಯವಸ್ಥೆಯನ್ನು ಆಯಾ ಸರಕಾರಗಳು ಮಾಡಬೇಕು. ಸುಲಿಗೆಯಾದ ಆಸ್ತಿಯನ್ನು ಹುಡುಕಿ ತೆಗೆದು ಅವರ ಒಡೆಯರಿಗೆ ಮುಟ್ಟಿಸುವ ವ್ಯವಸ್ಥೆ ಮಾಡಬೇಕು. ಒತ್ತಾಯದ ಧರ್ಮಾಂತರಗಳನ್ನೆಲ್ಲ ರದ್ದುಗೊಳಿಸಬೇಕು. ಅಪಹೃತ ಹೆಣ್ಣುಮಕ್ಕಳ ಶೋಧ ಮಾಡಿ ಅವರನ್ನು ಅವರವರ ಜನರ ಕಡೆ ಮುಟ್ಟಿಸುವದಕ್ಕಾಗಿ ಉಭಯ ಸರಕಾರಗಳು ಮಂಡಳಗಳನ್ನು ನೇಮಿಸಬೇಕು (೭) ಉಭಯ ರಾಷ್ಟ್ರಗಳಲ್ಲಿ ಜಾತೀಯ ದ್ವೇಷ ಉಂಟುಮಾಡುವ ಯಾ ಹೆಚ್ಚಿಸುವ ಸುದ್ದಿಗಳನ್ನು ಹುಟ್ಟಿಸುವ ಇಲ್ಲವೆ ಪ್ರಚುರಗೊಳಿಸುವ ಪತ್ರಿಕೆಗಳ, ವ್ಯಕ್ತಿಗಳ ಇಲ್ಲವೆ ಸುದ್ದಿ-ಪ್ರಸಾರಕ ಸಂಸ್ಥೆಗಳ ತಕ್ಕ ಬಂದೋಬಸ್ತ ಮಾಡಬೇಕು, ಮೊನ್ನೆ ಮೊನ್ನೆ ನಡೆದ ಗಲಭೆಗಳ ಕಾರಣಗಳನ್ನೂ ಪರಿಣಾಮಗಳನ್ನೂ

Notification under section 6(1) of the Bombay Land Requisition Act (XXXIII) of 1948

NOTIFICATION

No O/A 2368
Karwar 10—4—1950

In exercise of the powers of the Provincial Government under sub-section (1) of section 6 of the Bombay Land Requisition Act 1948 (XXXIII of 1948) conferred on him by Government Notification No O-1614/10276-XIa) dated 8-11-1948 the Collector of Kanara is pleased

(i) to specify the areas within the limits of the Municipality of Kumta as the areas and

(ii) to authorise the Mamlatdar of Kumta for the purpose of the said sub-section (1)

Karwar,
10 4-1950

M K JADHAV
Collector of Kanara

ಹಿಡಿದು, ಇಂತಹ ಅನಿಷ್ಟ ಪರಿಣಾಮಗಳು ಮುಂದೆ ಪುನಃ ಉದ್ಭವಿಸದಂತೆ ಏನು ಉಪಾಯ-ಯೋಜನೆ ಮಾಡಬಹುದೆಂಬುದನ್ನು ಸೂಚಿಸಲು ಒಂದು ಸ್ವತಂತ್ರ ಚೌಕಶಿ ಸಮಿತಿಯನ್ನು ನೇಮಿಸಬೇಕು (೮) ಹಿಂದುಸ್ಥಾನ-ಪಾಕಿಸ್ತಾನಗಳಲ್ಲಿ ಅಲ್ಪ-ಸಂಖ್ಯಾಕರಿಗೆ ತಮ್ಮ ಭದ್ರತೆಯ [illegible] ಗುವಂತೆ ಉಭಯ ರಾಷ್ಟ್ರಗಳ ಸರಕಾರಗಳಲ್ಲಿ ಅಲ್ಪಸಂಖ್ಯಾಕರ ಪ್ರತಿನಿಧಿ ಮಂತ್ರಿಗಳನ್ನು ನಾಮಿಸಿಕೊಳ್ಳಬೇಕು, ಮತ್ತು ಈ ಒಡಂಬಡಿಕೆಯನ್ನು ಕಾರ್ಯಕಾರಿ ಮಾಡಲಿಕ್ಕೆ ಪೂರ್ವ ಬಂಗಾಲ, ಪಶ್ಚಿಮ ಬಂಗಾಲ, ಆಸಾಮುಗಳಲ್ಲಿ ಅಲ್ಪಸಂಖ್ಯಾಕರ ಮಂಡಳಗಳಿರಬೇಕು ಇತ್ಯಾದಿ ಮುಖ್ಯಮಂತ್ರಿಗಳ ಈ ಒಡಂಬಡಿಕೆಯಿಂದ ಸರ್ವಸಾಮಾನ್ಯವಾಗಿ ನಮ್ಮ ದೇಶದಲ್ಲೂ, ಪಾಕಿಸ್ತಾನದಲ್ಲೂ, ವಿದೇಶಗಳಲ್ಲೂ ಸಂತೋಷ-ಸಮಾಧಾನವುಂಟಾಗಿದೆ ವಿದೇಶೀಯ ಅಗ್ರಗಣ್ಯ ರಾಜಕಾರಣಿಗಳು ಈ ಒಡಂಬಡಿಕೆಯನ್ನು ಮನಸೋಕ್ತ ಹೊಗಳಲಾರಂಭಿಸಿದ್ದಾರೆ. ಆದರೆ ಈ ಒಡಂಬಡಿಕೆಯ ಕರಾರುಗಳಾಗಲಿ ರೂಪರೇಷೆಯಾಗಲಿ ಮಹತ್ವದ್ದಲ್ಲ ಪಂ. ಜವಾಹರಲಾಲರು ಪತ್ರಕಾರರ ಸಭೆಯಲ್ಲೂ, ಕಾಯದೆ ಮಂಡಳದಲ್ಲೂ ಹೇಳಿರುವಂತೆ ಅದನ್ನು ಆಚರಣೆಯಲ್ಲಿ ತರುವದೇ ಮಹತ್ವದ್ದಾಗಿದೆ ಪಾಕಿಸ್ತಾನದ ಮುಖ್ಯಮಂತ್ರಿ ಜನಾಬ ಲಿಯಾಕತ ಅಲಿ ಖಾನರು ಇದನ್ನು ನಿಃಸಂಕೋಚವಾಗಿಯೂ 'ಪ್ರಾಮಾಣಿಕತನದಿಂದಲೂ ಆಚರಣೆಯಲ್ಲಿ ತರುವರೆಂಬ ವಿಶ್ವಾಸ ತಮಗುಂಟಾಗಿದೆಯೆಂದೂ ಪಂಡಿತಜಿಯವರು ಹೇಳಿ, ನಮ್ಮ ರಾಷ್ಟ್ರವು ಇದನ್ನು ಧೈರ್ಯ ವಿಶ್ವಾಸದಿಂದಲೂ, ಆಸ್ಥೆ-ಶ್ರದ್ಧೆಯಿಂದಲೂ ಪಾಲಿಸಿ ರಾಷ್ಟ್ರದ ಘನತೆಯನ್ನು ಬೆಳೆಸಬೇಕಾಗಿ ಅಪ್ಪಣೆ ಕೊಟ್ಟಿದ್ದಾರೆ

ಗಮನಾರ್ಹ ವಿಷಯಗಳು.

ಸಾಲೆ ವೈಶಾಖ ಶು|| ೧ ದಿಯಿಂದ ಶು|| ೫ ಮಿಯ ವರೆಗೆ ರಾಮನಾಥ (ಗೋವೆ) ಯಲ್ಲಿ ಶ್ರೀ ರಾಮನಾಥ-ಶಾಂತೇರಿ-ಕಾಮಾಕ್ಷಿ ದೇವಸ್ಥಾನದೊಳಗೆ, ಗೋಕರ್ಣ-ಮಠಾಧೀಶ ಶ್ರೀ ಮದ್-ದ್ವಾರಕಾನಾಥತೀರ್ಥ ಸ್ವಾಮಿಗಳ ನೇತೃತ್ವದಲ್ಲಿ, **ಶ್ರೀ ಮಹಾಸುದರ್ಶನ ಹವನ, ನವಚಂಡೀ ಹವನ** ಮುಂತಾದ ಲೋಕಾಭಿವೃದ್ಧಿ ಕಾರಕ ಅನುಷ್ಠಾನಗಳು ನಡೆಯಲಿವೆ ಶ್ರೀ ದೇವರ ಸಮಸ್ತ ಭಕ್ತರು ಈ ಕಾರ್ಯಕ್ಕೆ ಬಂದು ಸೇವಾಗಿ ಶ್ರೇಯೋಭಾಗಿಗಳಾಗಬೇಕಾಗಿ ಶ್ರೀ ಸಂಸ್ಥಾನದವರ ವಿನಂತಿಯುಂಟು ಈ ಉತ್ಸವದ ಕಾಲಕ್ಕೆ ಶ್ರೀ ಗುರುಗಳ ಹಾಗೂ ಬೇರೆ ವಿದ್ವದ್ವ್ಯಕ್ತಿಗಳ ಪ್ರವಚನಾದಿಗಳು ನಡೆಯುವವಂತೆ

*

ಕಳೆದ ೭೦-೭೩ ವರ್ಷಗಳಿಂದ ರೈತ ಸಾಲಗಾರರಿಗೆ ಯೋಗ್ಯ ಪರಿಹಾರ ದೊರಕಿಸಿಕೊಡುತ್ತಿದ್ದ "ಡೆಕ್ಕನ ಎಗ್ರಿಕಲ್ಚರಿಸ್ಟ ರಿಲೀಫ ಎಕ್ಟ' ಕಾಯಿದೆಯು ಇದೇ ಬರುವ ಮೇ ತಾ. ೨೬ ಕ್ಕೆ (ಕನ್ನಡ ಮುಂಬಯಿಯ ರೈತರ ಸಾಲ ಪರಿಹಾರ ಕಾನೂನು ಜಾರಿಯಲ್ಲಿ ಬಂದ ಮೂರನೇ ವರ್ಷ ಮುಗಿಯುವ ದಿನ) ರದ್ದಾಗುತ್ತಿದೆ ಅದರಿಂದ ಈ ಕಾಯಿದೆಯಂತೆ ಪರಿಹಾರ ದೊರಕಿಸಬಯಸುವ (ಸಾಲ-ಪರಿಹಾರ ಕಾಯಿದೆಯ ಕಕ್ಷೆಯಲ್ಲಿ ಬರಲಾರದ ರೈತರು) ಜನರು ತಮ್ಮ ದಾವೆ ಅರ್ಜಿಗಳನ್ನು ತಾ. ೨೭-೫-೧೯೫೦ರ ಮೊದಲೇ ದಾಖಲಮಾಡಬೇಕಾಗುವದು ಸಾಲ ಪರಿಹಾರ ನ್ಯಾಯ ಮಂಡಳಿಯೆದುರು ಅಥವಾ ವ್ಯವಹಾರ ನಡೆದಿರುವ ದಿವಾಣಿ ಕೋರ್ಟುಗಳಲ್ಲಿ [illegible] ಎಂಬ [illegible] ಕೊಡದ ಮುಂಜಾಗ್ರತೆಯಿಂದು ಸಾಮಾನ್ಯ ದಿವಾಣಿ ನ್ಯಾಯಾಲಯಗಳಲ್ಲಿ ಲೆಕ್ಕಾಚಾರ ಬೇಡಿ— ಇಲ್ಲವೆ ತಾವು ಮಾಡಿರುವ ಕ್ರಯ ಮುದ್ದತ್ತ-ಕ್ರಯಗಳು ಅಡವುಗಳಾಗಿರುತ್ತವೆಂದು ಠರಾಯಿಸಿಕೊಂಡು ಲೆಕ್ಕಾಚಾರ ಯಾ ಬೇರೆ ಬಗೆಯ ಪರಿಹಾರ ಬೇಡಿ— ದಾವೆಗಳನ್ನು ದಾಖಲ ಮಾಡಬೇಕಾಗುವದು ಇಂತಹ ದಾವೆಗಳನ್ನು ಸ್ವೀಕರಿಸಲಿಕ್ಕೆ ಇದೇ ತಾ ೨೪ರಿಂದ ಬೇಸಿಗೆಯ ಬಿಡುವಿಗಾಗಿ ಮುಚ್ಚಲ್ಪಡುವ ದಿವಾಣಿ ಕೋರ್ಟುಗಳು ತಾ. ೨೭—೫—೫೦ರ ವರೆಗೂ —ಕಚೇರಿಯ ದಿನಗಳಲ್ಲಿ ಮತ್ತು ಕಚೇರಿಯ ವೇಳೆಗೆ— ತೆರೆದಿರಲ್ಪಡುವವೆಂದೂ ಅದರಂತೆ ಮೇಲಧಿಕಾರಿಗಳ ಅಪ್ಪಣೆಯಾಗಿದೆಯೆಂದೂ ತಿಳಿಯುತ್ತದೆ

*

ಆಚೆಯ ವಾರ ಹಳಿಯಾಳ ತಾಲೂಕಿನ ಓರ್ವ ಗ್ರಾಮಸ್ಥರ ಪೆಟ್ಟಿಗೆಯೊಳಗಿಂದ ನಾಪತ್ತೆಯಾದ ರೂ ೧೦೨೦೦ರ ನೋಟುಗಳಲ್ಲಿ — ಕಳೆದ ವಾರ ರೂ ೧೦೦೦೦ದ (೯೦-೧೦೦ ರೂಪಾಯಿಗಳ) ನೋಟುಗಳು ಒಂದು ಅಂಚೆ ಪೆಟ್ಟಿಗೆಯಲ್ಲಿ ಸಿಕ್ಕವು! ಈ ಕಳವು ಧಾರವಾಡ [illegible] ದ್ದರಿಂದ ಕಳ್ಳನು ಅವನ್ನು ಅಂಚೆ ಪೆಟ್ಟಿಗೆಯಲ್ಲಿ ಹಾಕಬೇಕಾಗಿ ಬಂತು

*

ಹಳಿಯಾಳದೊಳಗೆ ಬಹಳಷ್ಟು ಭತ್ತ— ೧೦ ೧೫ ಸಾವಿರ ಖಂಡುಗಳಾಗಬಹುದಂತೆ— ಕೆಂಪಾದ ಬಯಲು ಪ್ರದೇಶದಲ್ಲಿ ಬಿದ್ದುಕೊಂಡಿದೆ! ಯಾವ ಗೋದಾಮಿಗೆ ಅದನ್ನು ಕೊಡಬೇಕೆಂಬುದರ ನಿರ್ಧಾರವಾಗದ್ದರಿಂದ ಅದು ಹಾಗೆ ಬಿದ್ದಿರುತ್ತದಂತೆ! ಹಳಿಯಾಳದಲ್ಲಿ ಮಳೆಯುಗಾಲ ಬೇಗನೆಯುಂಟು ಮಳೆಬಿದ್ದರೆ ಈ ಭತ್ತವೆಲ್ಲ ಕೆಡುವದು ಹಾನಿಗುಡದು ಅದರ ಸಾವೆ ಸರಕಾರಕ್ಕೆ ಇಲ್ಲವೇನೋ! ಕಳೆದ ವರ್ಷ ಬಿಜಾಪುರದಲ್ಲಿ ಜೋಳ ನಿರೀಕ್ಷಿತವಾದ್ದರಿಂದಲೂ, ಮಹಾಪೂರ ಬಂದದ್ದರಿಂದಲೂ ನೆಲಮನೆಗಳಲ್ಲಿ (pits) ಸಂಗ್ರಹಿಸಿಟ್ಟ ೪೦೦೦ ಖೇಲು ಜೋಳ ಹಾಳಾಗಿಹೋದಾಗ ಅವರಲ್ಲಿ ಚರ್ಚೆ ಮಾಡಿದ್ದಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ಸೆಕೆ ಬಹಳ, ಮೋಡಗಳು ಬೀಳುತ್ತಿದೆ

ಕಳೆದ ಬುಧವಾರ ಸಂಜೆ ಇಲ್ಲಿನ ನಾಟ್ಯಗೃಹದಲ್ಲಿ ಕುಮಟಾ ನಾಗರಿಕರ ಪರವಾಗಿ ನಗರಾಧ್ಯಕ್ಷ ಡಾ|| ಬಾಳಿಗಾ ರು ಹಾಲಿ ತಮ್ಮ ನಾಟ್ಯಪ್ರಯೋಗಗಳಿಂದ ಈ ಊರ ನಾಗರಿಕರನ್ನು ಮುಗ್ಧಗೊಳಿಸುತ್ತಿರುವ ನಟಸಮ್ರಾಟ ಶ್ರೀ|| ನಾರಾಯಣರಾವ ರಾಜಹಂಸ ಯಾನೆ ಬಾಲಗಂಧರ್ವರ ಸತ್ಕಾರಕ್ಕಾಗಿ ಸಭೆ ಕರೆಸಿದ್ದರು ನಾಟ್ಯಗೃಹ ಜನರಿಂದ ಕಿಕ್ಕಿರಿದು ತುಂಬಿತ್ತು. ಸಭಾಧ್ಯಕ್ಷ ಶ್ರೀ|| ಲಿಮಯೆ [illegible] ಬಾಲಗಂಧರ್ವರ ದೀರ್ಘಕಾಲದ ನಾಟ್ಯಕಲಾ-ಸೇವೆಯನ್ನು ಕೊಂಡಾಡಿದರು ಗಂಧರ್ವರ ಮಂಡಳಿಯೊಳಗಿನ ಶ್ರೀ|| ಮಾಳವಣಕರ [illegible] ಅವರಲ್ಲೇ ಇವರು ಗಂಧರ್ವರ ಚಾರಿತ್ರ್ಯದ ಪರಿಚಯ ಮಾಡಿಕೊಟ್ಟು, ಈ ಸತ್ಕಾರದ ಬಗ್ಗೆ ಸಂತೋಷ ಪ್ರದರ್ಶಿಸಿದರು ಶ್ರೀ|| ಗಂಧರ್ವರು ತಮ್ಮ ಭಾಷಣದಲ್ಲಿ, ನಾಟಕಕಲೆಯ ದುರ್ದಶೆಯನ್ನು ಬಣ್ಣಿಸಿ, ಇಂದು ಸಿನೆಮಾಗಳ ಮೂಲಕ ನಾಟ್ಯ ಸಂಸ್ಥೆಗಳು ವಿನಾಶದತ್ತ ಹೋಗುತ್ತಿದ್ದರೂ ಇನ್ನು ೧೮ ೧೩ ವರ್ಷಗಳ ನಂತರ ಅವು ಪುನಃ ಸುದಿನಗಳನ್ನು ಕಾಣುವವೆಂದು ಆಶಾವಾದಿ ಭವಿಷ್ಯ ಹೇಳಿದರು

ಮೊನ್ನೆಯ ಮ್ಯಾಟ್ರಿಕ ಪರೀಕ್ಷೆಯ ವಿಶೇಷ ಸಂಚಿಕೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಕೂಡ [illegible] ಭಟ್ಟ ಇವನೂ (೪೦೦ ಗುಣ ದೊರಕಿಸಿ) ಉತ್ತೀರ್ಣನಾಗಿದ್ದಾನೆ

ಉಮೇದವಾರರು ಬೇಕು!

ಮುದ್ರಣಾಲಯದೊಳಗಿನ ಕೆಲಸ ಕಲಿಯಬಯಸುವ ಕನ್ನಡ, ಮರಾಠಿ, ಇಂಗ್ಲಿಷ ಭಾಷೆ ಬಲ್ಲ ತರುಣರು, ಸ್ಥಳೀಕ ಉಮೇದವಾರರು ಬೇಕು ಆಸ್ಥೆಯಿಂದ ಕಲಿಯುವ, ಚುರುಕು ಹುಡುಗರಿಗೆ ಪ್ರೋತ್ಸಾಹ ಕೊಡಲಾದೀತು ಮಾಡುವ ಕೆಲಸ, ಹೊಂದಿದ ಅನುಭವ, ಪ್ರಗತಿಗಳ ನಿರೀಕ್ಷಣೆಯಿಂದ ಪ್ರತಿಫಲ ಕೊಡಲಾದೀತು ಭೆಟ್ಟಿಯಾಗಿರಿ —

ಮೆನೇಜರ, "ಕಾನಡಾವೃತ್ತ", ಕುಮಟಾ

THE REGIONAL TRANSPORT AUTHORITY, K R BELGAUM

NOTICE

Applications in the prescribed form, which can be had from this office are invited for permits to operate stage carriage services on the following routes from the existing operators on the routes, or in the area, or the Joint stock companies of all or majority of the existing operators operating in or around the area or route for which application is made, or others including local bodies in Karnatak Region

S No	Name of the route
1	Belgaum—Hubli
2	Haliyal Alnavar
4	Hubli—Halkusugal Via Byahatti—Tirlapur
4	Belgaum—Bagewadi via Halga

All applications should be submitted so as to be received in this office on or before 4-5-50 and those received after this date will not be entertained

- Applications should clearly state the time table proposed to be maintained They should be complete in all respects and if incomplete they will be treated as invalid

Permits will be granted on purely temporary basis in accordance with the existing instructions from the Government and issued as and when the petrol quota allotted to this Region permits

D. K SUKHTANKAR
Secretary
Regional Transport Authority,
K R, Belgaum

No 3415/4 B'KR of 50
Regional Transport Office,
Belgaum, 11-4-50

ಜಿಲ್ಲಾ ಸಮಾಚಾರ.

ಸುಪಾ— (ತಾ. ೭-೪-೫೦) [illegible]

ಹಳಿಯಾಳ— [illegible]

ಯಲ್ಲಾಪುರ— [illegible]

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ರೀತಿ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲಾಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ— [illegible]

ಮಾಲಕ:— ಮ್ಹಾಳಪ್ಪಾ ಪೈ.

[illegible]

ಮುಂದಗೋಡ—

[illegible]

ಶಿರಸಿ—

[illegible]

ಅಂಕೋಲಾ—

[illegible]

ಹೊನ್ನಾವರ—

[illegible]

ಮುಕ್ಕಾಲು ಶತಮಾನದಿಂದಲೂ ಕರ್ನಾಟಕದಲೆಲ್ಲ
ಹೆಸರುವಾಸಿಯಾಗಿರುವ
— ಇದೀಗ ಎಂದಿಗಿಂತಲೂ ಉತ್ತಮ!!
(ಮಂಗಳೂರಿ) ಕುಮುಟಾ ನಶ್ಯ
ವ್ಯಾಪಾರಿ ಸಂಬಂಧ ಮಾಹಿತಿಗಾಗಿ ಬರೆಯಿರಿ:—
ದಿ ಮಂಗಳೂರು ಸ್ನಫ್ ವರ್ಕ್ಸ್, ಕುಮುಟಾ.
ಪ್ರೊಪ್ರೈಟರ್ — ಟಿ ಎಮ್. ಎಸ್ ಎಂಡ್, ಸನ್

ಇದನ್ನು [illegible] ಪ್ರಕಟಿಸಿದರು

ವರ್ಗಣಿಯ ದರ
[illegible]

Reg. No. B 1270 Monday, 24-4 1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೪..]

ಕುಮಟಾ ಸೋಮವಾರ, ತಾ ೨೪—೪—೧೯೫೦

ಜಾಹೀರಾತುಗಳ ದರ.
[illegible]

ಜಂಗಲ-ಪಟ್ಟಿಗಳ ಸವಲತ್ತಿಗೆ ಜಂಗು ಹಿಡಿದಿದೆ!

[illegible]ಬರ ಮೇ ತಿಂಗಳಲ್ಲಿ ಕ[illegible]ಯೊಳಗೆ, ಆಲ್ಗಕ್ಕೆ ಕಂದಾಯ ಮತ್ತು ಕಾಡು ಇಲಾಖೆಗಳ [illegible]ಂತ್ರಿಗಳಾಗಿದ್ದ ಮಾನ್ಯ ವ[illegible] ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಕೂಡಿದ ಅಧಿಕಾರಿಗಳ[illegible] ಸಮಿತಿಯಲ್ಲಿ [illegible] ದೇಸಾಯಿ ಅವರಿಗೆ ಆಗಿನ ಜಂಗಲ [illegible]ಯಾಗಿ, ಬೇಸಾಯಗಾರರಿಗೆ ಜಂಗಲ [illegible] ಕೆಲವೊಂದು ಸವಲತ್ತುಗಳನ್ನು [illegible]ಬೇಕೆಂದು ನಿರ್ಧಾರವಾಯಿತು. ಬೇಸಾಯಗಾರರಿಗೆ [illegible] ಮತ್ತು [illegible] ಜಂಗಲ ಪಟ್ಟಿಯನ್ನು ಬೇಸಾಯಗಾರರು [illegible]ಗೊಳಿಸಿಕೊಳ್ಳಬೇಕೆಂಬುದೇ ಆ ಸವಲತ್ತು [illegible]ಗಿನ ಮಹತ್ವದ ಸವಲತ್ತಾಗಿತ್ತು. ಜಂಗಲ [illegible]ಯ ಈ ಸವಲತ್ತಿನ ಪ್ರಯೋಜನ ನಮ್ಮ [illegible]ಯ ಬೇಸಾಯಗಾರರಿಗೆ ಎಷ್ಟರಮಟ್ಟಿಗೆ ಸಿಕ್ಕಿದೆ [illegible] ಪರೀಕ್ಷಿಸುವದು ಈ ಲೇಖದ ಉದ್ದೇಶವಾಗಿರುತ್ತದೆ.

ಜಂಗಲ—ಪಟ್ಟಿ ಯಾಕೆ ಬೇಕು?

ಜಂಗಲ ಪಟ್ಟಿಯನ್ನು ಯಾಕೆ ಬಿಡಬೇಕು [illegible] ಅದರ ವಿಸ್ತಾರವೆಷ್ಟಿರಬೇಕು ಎಂಬುದನ್ನು [illegible] ನೋಡುವ. ಜಂಗಲ ಸಮೀಪದಲ್ಲಿರುವ [illegible]ಗಳಿಗೆ ಬೆಟ್ಟದ ಸಾನ್ನಿಧ್ಯದಿಂದ [illegible] ಉಪದ್ರವಗಳಾಗುತ್ತಿವೆ (೧) ಬೆಟ್ಟದೊಳಗಿನ ಕಾಡು [illegible]ದಿಗಳೂ ಮಂಗಗಳೂ ಹೊಲದಲ್ಲಿ ಹುಟ್ಟುವ [illegible]ರನ್ನು ತಿಂದು ಹಾಳು ಮಾಡುತ್ತಿವೆಂಬುದನ್ನು [illegible] ಬಲ್ಲಿರಿ. ಕಾಡು ಹಂದಿಗಳು ಹಿಂಡು[illegible]ಕೊಂಡು ಬಂದರೆ ದಿನ ಬೆಳಗಾಗುವದರೊಳಗೆ [illegible] ಹೊಲವನ್ನು [illegible] ಎಷ್ಟೋ ಮಂದಿ ಕಣ್ಣಾರೆ ಕಂಡಿದ್ದಾರೆ. [illegible]ಂಗಗಳ ಬಾಧೆಯ ಅನುಭವವಂತೂ ಹಳ್ಳಿಗ[illegible]ರಿಗೂ ಉಂಟು, ಪಟ್ಟಣಗಳೊಳಗಿನ [illegible]ಗೂ ಉಂಟು. ಮಂಗಗಳ ಈ ಕಾಟವನ್ನು ಸಹಿಸಲಾಗದೆ ಎಷ್ಟೋ ಜನರು ಬೇಸಾಯದ ಆಸ್ತೆಯ[illegible] ಬಿಟ್ಟಿರುವದನ್ನು ನಾವು ನೋಡಿದ್ದೇವೆ (೨) [illegible] ಮಂಗಗಳ ಕಾಟದಷ್ಟೇ ಬೆಟ್ಟದ ಬದಿಯ [illegible]ಗಳಿಗೆ ಕಾಡು ಹಕ್ಕಿಗಳ ಕಾಟವುಂಟು. ಹೊಲ[illegible]ಳಗಿನ ಭತ್ತದ ಪೈರು ತೆನೆ ಬಿಟ್ಟಾಗ ಈ ಹಕ್ಕಿ[illegible] ಹಿಂಡುಗಟ್ಟಿಕೊಂಡು ಬಂದು, ಎಳೆಯ ತೆನೆ[illegible]ಗಳನ್ನು ಮುರಿದು ತಮ್ಮ ಗೂಡುಗಳಿಗೆ ಒಯ್ಯು[illegible] ಮುಂಜಾನೆಯಿಂದ ಸಂಜೆಯ ವರೆಗೂ ಅವ[illegible]ಟ ನಡೆಯುತ್ತಿದೆ! ಹೊಲದ ಸುತ್ತು ಮುತ್ತ[illegible] ಬೆಟ್ಟದೊಳಗಿನ ಮರಗಳೂ ಗಿಡಗಂಟಿಗಳೂ [illegible] ಹಕ್ಕಿಗಳಿಗೆ ಒಳ್ಳೇ ಆಶ್ರಯವನ್ನು ಕೊಡುತ್ತಿವೆ [illegible] ಹಗಲು ಹೊತ್ತಿನಲ್ಲಿ ಹಕ್ಕಿಗಳ [illegible]ವಳಿಯಾದ[illegible] ಇರುಳಿನಲ್ಲಿ ಇಲಿಗಳೂ ಹೆಗ್ಗಣಗಳೂ ಹೊಲವ[illegible] ಮತ್ತು ಹಾವಳಿ [illegible]ಕುತ್ತಿವೆ! ಇವುಗಳಿಗೆ [illegible] ಬೆಟ್ಟದೊಳಗಿನ ಮರಗಳ ಪೊಳ್ಳುಗಳೂ ಬಿಲಗಳ ಬಂಡೆಗಳ ಒಡಕುಗಳೂ ದುರ್ಗಗಳಂತೆ ಆಶ್ರಯ ಕಲ್ಪಿಸಿಕೊಡುತ್ತಿವೆ! (೩) ಬೆಟ್ಟದ ಬದಿಯ ಹೊಲಗಳಿಗೆ ಸ್ವಂತ [illegible] ಕೀಟಕಗಳ ಕಾಟವು ಉಂಟು. ಬೇಸಿಗೆಯಲ್ಲಿ ಈ ಕೀಟಕಗಳು ಬೆಟ್ಟದೊಳಗಿನ ಹುಲ್ಲು ತಿಂದು ಜೀವಿಸಿ ಮಳೆಗಾಲದಲ್ಲಿ ಭತ್ತದ ಸಸಿಗಳು ಎದ್ದು ಬರುತ್ತಲೇ ಅವನ್ನು ತಿನ್ನಲು [illegible] (೪) ಸಾಲಿನ [illegible]ಗಳಲ್ಲಿವೆ ಕೊಳೆರೋಗದ (fungus disease) [illegible] ಅದಮ್ಯ ಸಮೀಪದ ಹೊಲಗಳಿಗೆ ಬಾಧಿಸುತ್ತಿದೆ. ಬೆಟ್ಟದೊಳಗಿನ ಗಿಡಮರಗಳ ಹಸಿರು ಎಲೆಗಳಲ್ಲಿ [illegible] ದಿರುವ ಸೂಕ್ಷ್ಮ ಕ್ರಿಮಿಗಳು [illegible]ಯಿಂದ ನಾಲ್ಕೂ ಕಡೆಗೆ ಹಬ್ಬುತ್ತಿವೆ ಮತ್ತು ಪೈರನ್ನು ನಾಶ ಮಾಡುತ್ತಿವೆ.

ಈ ಉಪದ್ರವಗಳನ್ನು ಬೇರೆ ತಂತ್ರಗಳಿಂದ ನಿವಾರಿಸಿಕೊಳ್ಳಬಹುದೇನೋ. ಆದರೆ ನಮ್ಮಲ್ಲಿಯ ಬಡ ಹಳ್ಳಿಗರಿಗೆ ಅವೆಲ್ಲಿಂದ ಸಾಧ್ಯವಾಗಬೇಕು? ಆದಿಂದ ಬೆಟ್ಟವನ್ನು ಹೆಗ್ಗಿಂದಲೂ [illegible] ಹೊಲ[illegible]ದಲೂ ಆದಷ್ಟು ದೂರದಲ್ಲಿಡುವದೇ ನಮ್ಮ ಜನರಿಗೆ ಸಾಧ್ಯವಿರುವ ಒಂದೇ ಒಂದು ಉಪಾಯ. ಬೆಟ್ಟವು ಹೊಲದಿಂದ ದೂರವುಳಿದರೆ, ಹೊಲ ಬೆಟ್ಟಗಳ ನಡುವೆ ವಿಶಾಲವಾದ [illegible] ಪಟ್ಟಿಯನ್ನು ಬಿಟ್ಟರೆ ಮೇಲೆ ಹೇಳಿದ ಉಪದ್ರವಗಳು ಬಹಳ ಮಟ್ಟಿಗೆ ನಿವಾರಣೆ ಹೊಂದುತ್ತವೆಂದು ತಜ್ಞರ ಹಾಗೂ ಅನುಭವಿಕರ ಅಭಿಪ್ರಾಯವುಂಟು. ಪಕ್ಷಿಗಳಿಗೂ ಇಲಿ ಮುಂತಾದವುಗಳಿಗೂ ಹೊಲವು ತಮ್ಮ ಆಶ್ರಯಸ್ಥಾನದಿಂದ ದೂರವಾಗುತ್ತಿರುವದರಿಂದ ಅವುಗಳ ಕಾಟ ಕಡಿಮೆಯಾಗುತ್ತಿದೆ. ಪಟ್ಟಿಯಲ್ಲಿ ಹುಲ್ಲು ಬೆಳೆಯಗೊಟ್ಟು ಅಲ್ಲಿ ದನಗಳನ್ನು ಮೇಯಬಿಟ್ಟರೆ, ಹೊಲಕ್ಕೆ ಬಾಧೆ ಕೊಡುತ್ತಿರುವ ಕ್ರಿಮಿಕೀಟಕಗಳ ತತ್ತಿಗಳನ್ನು ಮೇಯುತ್ತಿರುವ ದನಗಳು ತುಳಿದು ಹಾಕಿ, ಅವುಗಳ ಸಂತಾನವನ್ನು ನಿಯಂತ್ರಣದಲ್ಲಿಡುತ್ತವೆ. ಬೆಟ್ಟವನ್ನು ಹೊಲಗಳಿಂದ ದೂರ ಇಡಬೇಕೆಂಬುದೂ ಹೊಲಗಳ ಸಮೀಪ ಬಂದ ಬೆಟ್ಟವನ್ನು ಕಡಿದು ಸ್ವಚ್ಛಗೊಳಿಸಬೇಕೆಂದು ಹೇಳುವದೂ ಇದಕ್ಕಾಗಿಯೇ!

ಜಂಗಲ ಪಟ್ಟಿಯ ಸರಕಾರಿ ಠರಾವುಗಳು

ಜಂಗಲ ಪಟ್ಟಿಯ ವಿಷಯ ಮತ್ತು ಅದರ ಸಂಬಂಧದ ನಿಬಂಧನೆಗಳು ಈ ಕೆಳಗೆ ಕಾಣಿಸಿದ ಸರಕಾರಿ (ಕಂದಾಯ ಖಾತೆಯ) ಠರಾವುಗಳಲ್ಲೂ ಸರಕಾರಿ ಹುಕುಮುಗಳಲ್ಲೂ ಗ್ರಥಿತವಾಗಿವೆ —

(೧) ಠರಾವ ನಂ [illegible]
(೨) ಠರಾವ ನಂ [illegible]
(೩) ಠರಾವ ನಂ [illegible]
(೪) ಠರಾವ ನಂ [illegible]
(೫) ಠರಾವ ನಂ [illegible]
(೬) ಠರಾವ ನಂ [illegible]
(೭) ಕಾನಡಾ ಜಿಲ್ಲೆಯ ಜಂಗಲ ಸವಲತ್ತುಗಳ ನಿಯಮಾವಳಿ (೮) ಕಮಿಶನರ (ದ. ಭಾ.) ಅವರ [illegible]
(೯) ಕಾನಡಾ ಜಿಲ್ಲೆಯ ಕಲೆಕ್ಟರರ ಓ/ಪ ತಾ [illegible] ಹುಕುಮು

ಈ ಹುಕುಮುಗಳನ್ನೂ ಠರಾವುಗಳನ್ನೂ ಓದಿದರೆ ತುಂಬ ಕರುಣಾಜನಕವಾಗುತ್ತದೆ! ಒಂದಕ್ಕೊಂದು ತಾಳವಿಲ್ಲ, [illegible]ವಿಲ್ಲ! ಒಂದು ಕೈಯಿಂದ ಕೊಟ್ಟ ದಾನವನ್ನು ಇನ್ನೊಂದು ಕೈಯಿಂದ ಅಪಹರಿಸುವ ಪ್ರವೃತ್ತಿಯೇ [illegible] ಠರಾವುಗಳಲ್ಲಿ ಕಂಡು ಬರುತ್ತಿದೆ! ಅದು ಹೇಗೆಂದು ನೋಡಿರಿ [illegible] ಠರಾವಿನಲ್ಲೂ [illegible] ರ ಸರಕಾರಿ ಠರಾವಿನಲ್ಲೂ ಈ ಕೆಳಗಿನ ಸವಲತ್ತುಗಳು ರೈತರಿಗೆ ದಯಪಾಲಿಸಲ್ಪಟ್ಟಿದ್ದವು — (೧) ಜಂಗಲ ಪಡಕೊಂಡ ವ್ಯಕ್ತಿಯು ಯಾ ಸಂಘವು ೨ ವರ್ಷಗಳಲ್ಲಿ ಇಡೀ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬೇಕು (೨) ಈ ಪಟ್ಟಿಯೊಳಗಿನ ಸಂರಕ್ಷಿತ ಜಾತಿಯ ಮರಗಳನ್ನು ಜಂಗಲ ಇಲಾಖೆಯವರು ಪಟ್ಟಿಯ ಮೇರೆಗಳು ನಿಶ್ಚಿತವಾದ ದಿನದಿಂದ ೨ ವರ್ಷದೊಳಗೆ ಕಡಿದೊಯ್ಯಬೇಕು (೩) ಉಳಿದ ಎಲ್ಲ ಮರಗಳನ್ನು ಪಟ್ಟಿ ಪಡಕೊಂಡ ವ್ಯಕ್ತಿಯು ಯಾ ಸಂಘವು ಕಟ್ಟಿಕೊಂಡು ಪಟ್ಟಿ ಸ್ವಚ್ಛಗೊಳಿಸಲು ತಗಲುವ ವೆಚ್ಚವನ್ನು ಪೂರೈಸಿಕೊಳ್ಳಬೇಕು.

ಆದರೆ ಸಂರಕ್ಷಿತೇತರ ಮರಗಳ ಕಟ್ಟಿಗೆಗೆ ಬೆಲೆಯೇ ಇಲ್ಲದ್ದರಿಂದ ಪಟ್ಟಿಯ ಸ್ವಚ್ಛತೆಯ ವೆಚ್ಚ

THE BANK OF RURAL INDIA LTD.
(Incorporated in India: Uno Liability of Members Limited)
HEAD OFFICE — "Satyabhama Bhuvanam" KARWAR. N K
Offices at KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	Rs 10,00,000.
Subscribed Capital	Rs 5,00,000
Paid-up Capital & Reserves	Rs 5 08 602-8-0

Rates of Interest on Deposits
Current a/c @ 1% p a. Savings Bank a/c @ 2½ %
Fixed Deposits for 3 months @ 3% per annum
for 6 months @ 3½% „
for 12 months or more @ 4% „
All kinds of modern Banking business transacted

Karwar
1st Jan, 1950

P X GRACIOUS
MANAGING DIRECTOR

ವನ್ನು ಪಟ್ಟಿ ಕಡಿದ ನಂತರ, ತನ್ನ ಸ್ವಂತ ಖರ್ಚಿನಿಂದಲೇ ತೆಗೆಯಬೇಕಾದ ಪ್ರಸಂಗ ಬಂತು! ವೇಳೆಗೆ ಜಂಗಲ ಇಲಾಖೆಯವರು ಸಂರಕ್ಷಿತ ಜಾತಿಯ ಮರಗಳನ್ನು ಕಡಿಯಬಾರದೆಂದು [illegible] ದಂಡಗಳಲ್ಲಿದೆ [illegible] ಮೇಲೆ ಮರದ ಬಡವನ್ನು [illegible] ಮರಗಳನ್ನು ತೆಗೆದ ಪಟ್ಟಿ ಸ್ವಚ್ಛಗೊಳಿಸುವ ಕೆಲಸವನ್ನು ಪಟ್ಟಿ ಪಡಕೊಂಡವನೇ ಮಾಡಬೇಕಾಯಿತು. ಈ ಭೂಮಾಲಿಕ ಬೇರೆ ತೆರೆಯ ಮೇಲೆ ಬರೆಯುತ್ತಿದ್ದ! ತಾ [illegible] ರಾವಿನಿಂದಲೂ ಈ ಪರಿಸ್ಥಿತಿ ಸುಧಾರಿಸಲಿಲ್ಲ. ಸಂರಕ್ಷಿತ ಮರಗಳನ್ನು [illegible] ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಜಂಗಲ ಇಲಾಖೆಯವರು ಕಡಿದು ಒಯ್ಯದಿದ್ದಲ್ಲಿ ಅಸ್ತ ಪಟ್ಟಿ ಪಡಕೊಂಡವನಿಗೆ ದೊರೆಯುವವು ಎಂದಿತ್ತೇ ಈ ರಾವಿನಲ್ಲಿತ್ತು. ಆದರೆ ಜಂಗಲ ಇಲಾಖೆಯವರು ಎಲ್ಲಾ ಸಂರಕ್ಷಿತ ಮರಗಳನ್ನು ಒಯ್ಯದೆ ಬಿಡಲಿಲ್ಲ! ಅದರಿಂದ ಆ ಮರಗಳ ಪಟ್ಟಿ ಪಡಕೊಂಡ ಭೂಮಾಲಿಕನಿಗೂ ಸಿಗಲಿಲ್ಲ! ಇವರು ಮರಗಳನ್ನು ಕಡಕೊಂಡು ಹೋದ ಮೇಲೆ ಅವುಗಳ ಉತ್ತರಕ್ರಿಯೆ ಮಾಡುವ ಯೋಜನೆ ಪಟ್ಟಿ ಪಡಕೊಂಡವರಿಗೆ ತಪ್ಪಲಿಲ್ಲ! ಹೀಗಾಗಿ ಜಂಗಲ ಪಟ್ಟಿಗಳನ್ನು ಪಡಕೊಳ್ಳಲಿಕ್ಕಾಗಲಿ ಅವನ್ನು ಸ್ವಚ್ಛಗೊಳಿಸಿಕೊಳ್ಳಲಿಕ್ಕಾಗಲಿ ಬೇಸಾಯಗಾರರಿಗೆ ಆಸ್ಥೆ [illegible] ಆತುರತೆ ಉಳಿಯಲಿಲ್ಲ. ಅದರಿಂದ ತಾ. [illegible] ರಲ್ಲಿ ಸರಕಾರವು ಹೊಸದೊಂದು ರಾವು ಮಾಡಿ, ಜಂಗಲಪಟ್ಟಿಯೊಳಗಿನ ಸಾಗವಾನಿ, ಶೀಸವು ಮತ್ತು ಗಂಧದ ಮರಗಳನ್ನು ಬಿಟ್ಟು, ಉಳಿದ ಎಲ್ಲ ಬಗೆಯ ಸಂರಕ್ಷಿತ ಮರಗಳನ್ನು ಪಟ್ಟಿಯ ಸ್ವಚ್ಛತೆಯ ಸಲುವಾಗಿ ಸ್ವಚ್ಛಗೊಳಿಸುವದಕ್ಕಾಗಿ, ಪಟ್ಟಿ ಪಡಕೊಂಡವರಿಗೆ ಬಿಟ್ಟುಕೊಡಬೇಕೆಂದು ತೀರ್ಮಾನಿಸಿತು. ಆದರೆ ಈ ರಾವು ಈ ಸವಲತ್ತನ್ನು ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲೂ ಕೊಡಬೇಕೆಂದು ಠರಾಯಿಸದೆ, "ಪ್ರತಿಯೊಂದು ಪ್ರಕರಣದ ಗುಣ-ದೋಷಗಳನ್ನು ಪರಾಂಬರಿಸಿ" (in each individual case on its merits) ಕೊಡಬೇಕು ಎಂಬದೊಂದು ನಿರ್ಬಂಧವನ್ನು ಹಾಕಿಟ್ಟಿತು! ಈ ಗುಣದೋಷಗಳನ್ನು ಪರೀಕ್ಷಿಸುವ ಜವಾಬ್ದಾರಿಯೂ ಕೂಡ ಬೇಸಾಯಗಾರರ "ಮಿತ್ರ"ರಾದ ಜಂಗಲ ಇಲಾಖೆಯವರಿಗೆ ಒಪ್ಪಿಸಲ್ಪಟ್ಟಿತು. ಜಂಗಲ ಇಲಾಖೆಯವರು ಆಗ ಒಂದು ಹೊಸ ಸುಲಭ ತಂತ್ರ ಹೂಡಿದರು! ಯಾವದೊಂದು ಜಂಗಲಪಟ್ಟಿಯ ಬೇಡಿಕೆ ಮುಂದೆ ಬಂದ ಕೂಡಲೇ ಅವರು ಅದರೊಳಗಿನ ಮರಗಳ ಬೆಲೆ — ಅದೂ ಕೂಡ [illegible] ದರಾವುಗಳಂತೆ ಬೇಸಾಯಗಾರನಿಗೆ ಬಿಟ್ಟುಕೊಟ್ಟ ಸಂರಕ್ಷಿತೇತರ ಮರಗಳನ್ನು ಹಿಡಿದು ಎಲ್ಲ ಮರಗಳ ಬೆಲೆ! — ಕಟ್ಟಿ ಮತ್ತು ಜಂಗಲ ಪಟ್ಟಿಯ ಸ್ವಚ್ಛತೆಯ ವೆಚ್ಚದ ಅಂದಾಜು ಮಾಡಿ, ವೆಚ್ಚಕ್ಕಿಂತ ಮರಗಳ ಬೆಲೆ ಹೆಚ್ಚಾಗುತ್ತಿದ್ದರೆ ಆ ಹೆಚ್ಚಿನ ಹಣವನ್ನು ಜಂಗಲ ಪಟ್ಟಿ ಪಡಕೊಳ್ಳುವಾತನು ಸರಕಾರಕ್ಕೆ ಕೊಡಬೇಕೆಂದು ಠರಾಯಿಸಹತ್ತಿದರು! ಮರಗಳ ಬೆಲೆಗಿಂತ ಸ್ವಚ್ಛತೆಯ ವೆಚ್ಚ ಹೆಚ್ಚಿಗೆ ಬಂದರೆ ಅದನ್ನು ತೆರುವ ವ್ಯವಸ್ಥೆ ಮಾತ್ರ ಅವರೂ ಮಾಡಲಿಲ್ಲ! ಸರಕಾರವೂ ಮಾಡಲಿಲ್ಲ! ಇನ್ನೊಂದು ಕುಯುಕ್ತಿಯೂ ನಡೆಯಹತ್ತಿತು! ಜಂಗಲ ಇಲಾಖೆಯವರು ಮರಗಳ ಬೆಲೆ ಕಟ್ಟುವಾಗ ವಾಸ್ತವಿಕ ಬೆಲೆಗಿಂತ ಹೆಚ್ಚಿಗೆ ಬೆಲೆ ಕಟ್ಟಹತ್ತಿದರು! ಮತ್ತು ಖರ್ಚಿನ ಅಂದಾಜು ಮಾಡುವಾಗ ಕೈ ಬಿಗಿಹಿಡಿಯಹತ್ತಿದರು. ತಮ್ಮ ಬೆಟ್ಟದಿಂದ ಬೇಸಾಯಗಾರರಿಗೆ ಆದ ಅಪಾರ ಕಷ್ಟ ನಷ್ಟಗಳ ವಿಚಾರ ಮಾಡುವಷ್ಟು ಇಚ್ಛೆ ಆ ಬಗ್ಗೆ ಕನಿಕರ ಮತ್ತು ಅನುಭಾವ ಪಡುವಷ್ಟು ಜನಾನ್ನ ಈ ವನ್ಯ ಅಧಿಕಾರಿಗಳಿಗೆ ಎಲ್ಲಿಂದ ಬರಬೇಕು? ೧೯೪೦ರ ಈ ರಾವು ಸಾಕಷ್ಟು ಪರಿಣಾಮಕಾರಿಯಾಗಲಿಲ್ಲವೆಂಬ ವಿಷಯವೇ ಏನೋ, ೧೯೪೪ರ ಜನವರಿಯಲ್ಲಿ ಸರಕಾರವು ಇನ್ನೊಂದು ಹುಕುಮನ್ನು ಹೊರಡಿಸಿ, ಜಂಗಲ ಪಟ್ಟಿ ಪಡಕೊಂಡವನ ಇಚ್ಛೆಗನುಸರಿಸಿ ಜಾಮೀನು ಕೊಟ್ಟು, ಸತತ ೫ ವರ್ಷಗಳ ತನಕ ಜಂಗಲ ಪಟ್ಟಿಯೊಳಗಿನ ಗಿಡ ಗಂಟಿಗಳನ್ನು ಸವರಿ ತೆಗೆಯುವೆನೆಂದೂ, ಅದನ್ನು ಸ್ವಚ್ಛವಾಗಿಡುವೆನೆಂದೂ, ಹಾಗೆ ಮಾಡಲು ತಪ್ಪಿದರೆ ಅದರೊಳಗಿದ್ದ ಮರಗಳ ಬೆಲೆಯನ್ನು — (ಜಂಗಲ ಇಲಾಖೆಯವರು ಕಟ್ಟಿದ ಬೆಲೆಯನ್ನು!) — ಸರಕಾರಕ್ಕೆ ಕೊಡುವೆನೆಂದೂ ಕರಾರು ಬರಕೊಡಬೇಕೆಂದು ವಿಧಿಸಿತು! ಮರಗಳ ಬೆಲೆಯ ದಂಡ ತೆತ್ತ ಮೇಲಾದರೂ ಜಂಗಲ ಪಟ್ಟಿ ಉಳಿಯುತ್ತದೆಯೇ? ಅದೂ ಇಲ್ಲ! ಅದು ತಿರುಗಿ ಜಂಗಲದಲ್ಲಿ ಸೇರುವದು!

ಕೊಂಗ್ರೆಸ ಸರಕಾರ ಬಂದ ಮೇಲೂ ಸ್ಥಿತಿ ಸುಧಾರಿಸಲಿಲ್ಲ!

೧೯೪೬ರಲ್ಲಿ ಕೊಂಗ್ರೆಸ್ಸಿನ ಕೈಯಲ್ಲಿ ಅಧಿಕಾರ ಸೂತ್ರಗಳು ಬಂದ ಮೇಲೆ ಈ ಪರಿಸ್ಥಿತಿ ಸುಧಾರಿಸೀತೆಂಬ ಆಶೆ ಹಳ್ಳಿಗರೊಳಗೆ ಉಂಟಾಗಿತ್ತು. ಆದರೆ ಅದೂ ಈಗ ಬಯಲಾಗಿದೆ. ತಾ. ೭-೬-೪೮ ಕ್ಕೆ ಜನತಾ ಸರಕಾರವು ಒಂದು ವಿಸ್ತೃತ ರಾವು ಮಾಡಿ ಜಂಗಲ-ಪಟ್ಟಿಯ ಮಿತಿ-ಮೇರೆಗಳನ್ನೂ, ರೂಪರೇಷೆಗಳನ್ನೂ, ಪಟ್ಟಿಯನ್ನು ಸ್ವಚ್ಛಗೊಳಿಸುವ ಕ್ರಮವನ್ನೂ ವಿಸ್ತೃತವಾಗಿ ನಿರ್ಧರಿಸಿದೆ. ಈ ರಾವಿನ ಮಹತ್ವದ ಅಂಶವೆಂದರೆ, ಬಡ ಬೇಸಾಯಗಾರರಿಗೆ ಎಷ್ಟೇ ತಾಪ-ತೊಂದರೆಗಳಾಗಲಿ ಇದವ ಕಷ್ಟ-ನಷ್ಟಗಳಾಗಲಿ, ದಟ್ಟಡವಿ (high forest) ಗಳಲ್ಲೂ, ಜಂಗಲ-ಪಟ್ಟಿಯ ಸವಲತ್ತು ಕೊಡುವದು ಅಯುಕ್ತವೆಂದು ತೋರಿ ಬರುವ ಪ್ರದೇಶಗಳಲ್ಲೂ ಜಂಗಲ-ಪಟ್ಟಿಗಳು ಸಿಗುವಂತಿಲ್ಲೆಂದು ಸರಕಾರವು ವಿಧಿಸಿದೆ! ಜಂಗಲ ಪಟ್ಟಿಗಳ ಅಗಲಳತೆ ಪುನಃ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಇರತಕ್ಕದ್ದೆಂದು ಠರಾಯಿಸಲ್ಪಟ್ಟಿದೆ! ದಟ್ಟ (substantial) ಜನವಸತಿಯುಳ್ಳ ಗ್ರಾಮದ ಸುತ್ತಲಿನ ಪಟ್ಟಿ ೧/೨ ಮೈಲು ಅಗಲವಿರಬೇಕು; ಘನ ಬೇಸಾಯ ಭೂಮಿಗಳ ಸುತ್ತಲಿನ ಪಟ್ಟಿ ೧/೪ ಮೈಲು ಅಗಲವಿರಬೇಕು; ೧೦ ಕ್ಕಿಂತ ಕಡಿಮೆ ಮನೆಗಳುಳ್ಳ ಪ್ರದೇಶದ ಸುತ್ತ ೨ ಫರ್ಲಾಂಗ ಪಟ್ಟಿ ಬಿಟ್ಟರೆ ಸಾಕು, ೫ ಎಕರೆ ತೋಟ ಇಲ್ಲವೆ ೨೫ ಎಕರೆ ತರಿಯುಳ್ಳ ಪ್ರದೇಶದ ಸುತ್ತ ೧ ಫರ್ಲಾಂಗ ಅಗಲತೆಯ ಪಟ್ಟಿ ಬಿಟ್ಟರೆ ಸಾಕು, ಇನ್ನೂ ಕಿರಿದಾದ ತೋಟ ತರಿಗಳ ಸುತ್ತ ೨೨ ಮಾರುಗಳ ಪಟ್ಟಿ ಸಾಕು. ಹೀಗೆ ಗ್ರಾಮಗಳ ಜನಸಂಖ್ಯೆಯನ್ನೂ ಹೊಲಗಳ ವಿಸ್ತಾರವನ್ನೂ ನೋಡಿಕೊಂಡು ಅವುಗಳಿಗೆ ಕೊಡಬೇಕಾದ ಪಟ್ಟಿಗಳ ಅಗಲತೆಯನ್ನು ನಿರ್ಧರಿಸಬೇಕಾಗಿದೆ. ಬೇರೆ ಬೇರೆ ಹೊಲಗಳ ಗುಂಪು ಮಾಡಿ ಅವುಗಳ ಸುತ್ತಲಿನ ಪಟ್ಟಿಯ ಅಗಲತೆಯನ್ನು ನಿರ್ಣಯಿಸುವ ಹಕ್ಕೆಯನ್ನು ಸರಕಾರವು ಜಿಲ್ಲಾಧಿಪನಿಗೆ ಕೊಟ್ಟಿದೆ. ಪಟ್ಟಿಯ ವಿಸ್ತಾರದ ಈ ಪ್ರಮಾಣಗಳನ್ನು ನಿರ್ಣಯಿಸುವಾಗ ಸರಕಾರವು ಯಾರ ಸಲಹೆಯನ್ನು ಪಡೆಕೊಂಡಿತ್ತೆಂಬುದು ಅಥವಾ ಯಾತರ ಮೇಲಿಂದ ಅವನ್ನು ನಿರ್ಣಯಿಸಿತೆಂಬುದು ತಿಳಿಯದು. ಹೆಚ್ಚು ಜನವಸತಿಯುಳ್ಳ ಗ್ರಾಮಗಳಿಗೆ ಜಂಗಲ ಬಾಧೆ ಹೆಚ್ಚು ಮತ್ತು ಕಡಿಮೆ ಮನೆಗಳುಳ್ಳ ಗ್ರಾಮಗಳಿಗೆ ಅದು ಬಾಧೆ ಕಡಿಮೆ ಹೀಗೇನು ನಮ್ಮ ಅನುಭವವಿಲ್ಲ. ಕಡಿಮೆ ಮನೆಗಳುಳ್ಳ ಹಳ್ಳಿಗಳಿಗೆ ವನ ಬಾಧೆ ಹೆಚ್ಚಾಗುತ್ತಿದೆಂಬುದೇ ನಮ್ಮ ದೀರ್ಘ ಕಾಲದ ಅನುಭವವೆಂಬುದು ಇದೇ

Gibb High School, Kumta

The Social Gathering & Prize Distribution Ceremony of the School will be held from 28th to 30th of this month when all the past students of the School are cordially invited to be present

J. V Gavasker,
Headmaster

22-4-1950

PUBLIC WORKS DEPARTMENT

Seperate sealed tenders in Schedule "B" to be issued by this office are invited from the public for the following works -

S No	Name of work	Estimated amount.	Earnest Money.	Security Deposit
1	Constructing a masonry landing stage on Sadashivgad side on Sadashivgad-Kodibag ferry	Rs 12,778/-	Rs 128/-	Rs 639/-
2	S R to Karwar Bellary road at miles 40, 41, 42 & 43 (metal & murum collection)	Rs 27,[illegible]9/-	Rs 281/-	1400/-

Application for forms will be entertained upto 12-5-50 and schedule "B" forms will be issued upto 22-5-50 during office hours. The last date for receiving the sealed tenders is upto 1 P. M. on 31-5-1950

Schedules for each work can be obtained on payment of Rs [illegible] and Rs 3/- respectively which amounts will not be refunded.

Other particulars are given in the regular notice issued separately copies of which can be obtained if desired

No A31[illegible]8

Office of the Ex. Engr. Kan. Dn.
Karwar, 21st April 1950

G N GODSE
Executive Engineer
Kanara Division

...ಕಿ ಹೆಚ್ಚು ವಿಸ್ತಾರದ ಹೊಲಗಳಿಗಿಂತ ಕಡಿಮೆ ವಿಸ್ತಾರದ ಹೊಲಗಳಿಗೆ ಬೆಟ್ಟದ ನಾಯಿಯಿಂದ ಬಾಧೆ ಹೆಚ್ಚಿರುತ್ತದೆಂಬುದೂ ನಮ್ಮ ಅನುಭವವಿದೆ ಆದರೂ ಸರಕಾರವು ತದ್ವಿಪರೀತ ಕಲ್ಪನೆ ಮಾಡಿಕೊಂಡು ಜಂಗಲಪಟ್ಟಿಗಳ ವಿಸ್ತಾರ ಹೆಚ್ಚಿಸಬೇಕಾದಲ್ಲಿ ಅದನ್ನು ಸಂಕೋಚಗೊಳಿಸಿಬಿಟ್ಟಿದೆ !

ಜಂಗಲ-ಪಟ್ಟಿಗಳ ಸಂಬಂಧದ ಅರ್ಜಿಗಳನ್ನು ಕೂಡಲೆ ನಿಕಾಲೆಯಲ್ಲಿ ತರಬೇಕೆಂದು ಸದರಿ ಸರಕಾರಿ ಠರಾವಿನಲ್ಲಿ ಉಂಟು ಸರಕಾರದ ಈ ಆಜ್ಞೆ ಬರೇ ಕಾಗದಯಲ್ಲಿ ಮಾತ್ರ ಉಂದಿಲ್ಲ ! ಜಂಗಲ ಪಟ್ಟಿಗಳ ಬಗ್ಗೆ ಮಾಡಿದ ಎಷ್ಟೋ ಅರ್ಜಿಗಳು ತಿಂಗಳುಗಟ್ಟಲೆಯಲ್ಲ, ವರ್ಷಗಟ್ಟಲೆಯಾದರೂ ನಿಕಾಲೆಯಲ್ಲಿ ಬರುವದಿಲ್ಲೆಂದು ಅನುಭವಿಕರು ಹೇಳುತ್ತಾರೆ

ಜಂಗಲ ಪಟ್ಟಿಯನ್ನು ವಿಭಾಗಶಃ (by sub coupes) ಸ್ವಚ್ಛಗೊಳಿಸಿಕೊಳ್ಳುವ ವಿಧಾನವೊಂದು ಮೇಲ್ಕಾಣಿಸಿದ ಠರಾವಿನಲ್ಲಿ ಕಲ್ಪಿಸಲ್ಪಟ್ಟಿದೆ ಒಂದು ವಿಭಾಗ ಪೂರ್ಣ ಸ್ವಚ್ಛವಾಯಿತೆಂದು ಮುಲ್ಕಿ ಅಧಿಕಾರಿಗಳು ಪ್ರಶಸ್ತಿ ಪತ್ರ ಕೊಟ್ಟ ಮೇಲೆಯೇ ಜಂಗಲ ಅಧಿಕಾರಿಗಳು ಆ ಸ್ವಚ್ಛಗೊಳಿಸಿದ ಪಟ್ಟಿಯೊಳಗಿನ ಕಟ್ಟಿಗೆಯ ಸಾಗಾಟಕ್ಕೆ ಅಪ್ಪಣೆ-ಚೀಟಿ ಕೊಡುತ್ತಾರೆ ಈ ವಿಧಾನದಿಂದ ಎಷ್ಟು ಕಷ್ಟವಾಗುತ್ತದೆಂಬುದನ್ನು ನೋಡಿರಿ ಸ್ವಚ್ಛತೆಯ ಕೆಲಸ ಪ್ರತ್ಯಕ್ಷ ಸ್ಥಳಕ್ಕೆ ಬಂದು ನೋಡಿಕೊಂಡು ಪ್ರಶಸ್ತಿ-ಪತ್ರ ಬರೆದು ಕೊಡಲಿಕ್ಕೆ ಮುಲ್ಕಿ ಅಧಿಕಾರಿಗಳಿಗೆ ತಿಂಗಳುಗಟ್ಟಲೆ ಕಾಲ ತಗಲುತ್ತಿದೆ ! ಆ ಮೇಲೆ ಜಂಗಲ ಅಧಿಕಾರಿಗಳು ಬಂದು ಪರೀಕ್ಷಿಸುತ್ತಾರೆ ಅವರು ಬರುವಷ್ಟರಲ್ಲಿ ಕಡಿದು ತೆಗೆದ ಮರಗಳ ಬುಡಗಳಿಗೆ ಚಿಗುರು ಬರುತ್ತಿದೆ ! ಅದನ್ನು ನೋಡಿ ಸ್ವಚ್ಛತೆಯ ಕೆಲಸ ಸರಿಯಾಗಿಲ್ಲೆಂದು ಶರಾ ಬರೆದು ಅವರು ಮುಲ್ಕಿ ಅಧಿಕಾರಿಗಳ ಪ್ರಶಸ್ತಿ-ಪತ್ರವನ್ನು ತಿರುಗಿ ಕಳಿಸುತ್ತಾರೆ! ಈ ಪ್ರಶಸ್ತಿ-ಪತ್ರದ ವಿಧಾನ ಮುಗಿಯಲಿಕ್ಕೆ ತಿಂಗಳುಗಟ್ಟಲೆ ಕಾಲ ಬೇಕಾಗುತ್ತಿದೆ ಅಲ್ಲಿಯ ವರೆಗೆ ಮರಗಳನ್ನೂ ಗಿಡಗಂಟಿಗಳನ್ನೂ ಕಡಿದು ಕೊಡಲು ಬಂದ ಕೂಲಿಯಾಳುಗಳು ಎಲ್ಲಿ ನಿಲ್ಲುತ್ತಾರೆ? ಪಟ್ಟಿಯನ್ನು ಸರಿಯಾಗಿ ಸ್ವಚ್ಛಗೊಳಿಸಿಕೊಡುತ್ತೇನೆಂದು ಪಟ್ಟಿ ಪಡಕೊಳ್ಳುವವನು ಜಾಮೀನು ಕೊಟ್ಟ ಮೇಲೆ ಈ ವಿಧಾನದ ಆವಶ್ಯಕತೆಯೇನುಂಟೆಂದು ಕಾಡು ಇಲಾಖೆಯ ಅಧಿಕಾರಿಗಳಿಗೇ ಗೋಚರ !

ತಾ ೨೯-೧-೪೯ರ ಸರಕಾರಿ ಠರಾವು ಇನ್ನಿಷ್ಟು ನಿರುತ್ಸಾಹದಾಯಕವಾಗಿದೆ ತಾ ೨೮-೧-೪೯ರ ಠರಾವಿನಂತೆ ಪಟ್ಟಿ ಪಡಕೊಳ್ಳುವವನು ಬರಕೊಡಬೇಕಾಗುವ ಕರಾರಿನಲ್ಲಿ ಪಟ್ಟಿ ಪಡಕೊಂಡ ಕಾಲದಿಂದ ಕನಿಷ್ಟ ೧೦ ವರ್ಷಗಳ ವರೆಗಾದರೂ ಪಟ್ಟಿಯ ಹತ್ತರವಿರುವ ಹೊಲವನ್ನು ಸಾಗುಮಾಡತಕ್ಕದ್ದೆಂಬ ಹೊಸ ಶರ್ತನ್ನು ಸೇರಿಸಬೇಕಾಗಿ ಈ ಠರಾವು ಹೇಳುತ್ತಿದೆ ! ಬೆಟ್ಟದ ಬದಿಯ ಹಳ್ಳಿಗಳಲ್ಲಿ ವಾಸಿಸುವ ಜನರ ಆಯುಮಾನವೇ ಮೊದಲು ಕಡಿಮೆ ಮತ್ತು ಅಸ್ಥಿರವಿದೆ ಮೇಲಾಗಿ ಬೆಟ್ಟದ ಬದಿಯ ಸಾಗುವಳಿಯದು ! ಅದು ಲಾಭದಾಯಕವಗುತ್ತದೆಂದು ಏನು ಖಾತ್ರಿ ಇರುವದು? ಆದು ಪ್ರಯೋಜನಕಾರಿಯಾಗಲಿ ಆಗದಿರಲಿ, ಅದನ್ನು ಪಟ್ಟಿ ಪಡಕೊಂಡಾತನು ೧೦ ವರ್ಷಗಳ ವರೆಗೆ ಸಾಗುಮಾಡಲೇಬೇಕೆಂದು ಒತ್ತಾಯ ಮಾಡುವದು ನ್ಯಾಯ್ಯವಾದೀತೇ !

ಸರಕಾರಿ ಠರಾವುಗಳೊಳಗಿನ ಕಠೋರ ನಿರ್ಬಂಧಗಳು ಸಾಕಷ್ಟಿಲ್ಲೆಂದು ಅಧಿಕಾರಿಯುಕ್ತ ನಮ್ಮ ಜಿಲ್ಹಾಧಿಪರ ಕಚೇರಿಯವರೂ ಬೇರೆ ಕೆಲವು ನಿರ್ಬಂಧಗಳನ್ನು ಹಾಕಿರುತ್ತಾರೆ ! ಜಂಗಲ ಪಟ್ಟಿಯು ಕಂಜಿಗೇರಿ ಮರಗಳನ್ನು ಬೆಳೆಸುವನೆಂದೂ, ಪಡುವ ಕಾಫಿಯ ಗಿಡಗಳನ್ನು ಇಲ್ಲವೆ ಹಣ್ಣು-ಹಂಪಲಗಳ ಗಿಡಗಳನ್ನು ಬೆಳೆಸುವೆನೆಂದೂ ಪಟ್ಟಿ-ಪಡಕೊಳ್ಳುವವನು ತನ್ನ ಕರಾರಿನಲ್ಲಿ ಬರೆದುಕೊಡಬೇಕೆಂದು ಜಿಲ್ಹಾಧಿಪರ ಫರಮಾನ ಆಜ್ಞೆಯಾಗಿದೆ! ಪಟ್ಟಿಯೊಳಗಿನ ಗಿಡ ಮರಗಳಿಂದಲೂ ಗಿಡಗಂಟಿಗಳಿಂದಲೂ ಹೊಲ ಒಕ್ಕಲಿಗರಿಗೆ ಬಾಧೆಯಾಗುತ್ತಿದೆಂದು ಅದರ ಸ್ವಚ್ಛತೆಯ ಕ್ರಮ ಕೈಕೊಳ್ಳಲಾಗುತ್ತದೆಂಬ ಜ್ಞಾನವೇ ಜಿಲ್ಹಾಧಿಪರ ಕಚೇರಿಯವರಿಗೆ ಇರದಿರುವದು ಸೋಜಿಗವಲ್ಲವೇ ?

ಜಂಗಲ—ಪಟ್ಟಿ ಪಡಕೊಳ್ಳುವ ಕ್ರಮವನು ಜಿಲ್ಹಾಧಿಪರು ಈಗ ನಿರ್ಧರಿಸಿದ್ದಾರೆ ಯಾರೊಬ್ಬರು ಪಟ್ಟಿ ಬೇಡಿ ಅರ್ಜಿ ಮಾಡಿದರೆ, ಮಾಮುಲೆದಾರರು ತಮ್ಮ ಸ್ವಂತ ಅಭಿಪ್ರಾಯ ಸಹಿತ ಅದನ್ನು [illegible] ಕಳಿಸಿಕೊಡಬೇಕ ಸ್ವಾಂತ ಸಾಹೇಬರು [illegible] ಆ ಪ್ರಕರಣವನ್ನು ಜಂಗಲ ಇಲಾಖೆ ವರಿಗೆ ಕಳಿಸಿ, ಅವರ ಅಪ್ಪಣೆ ಗಿದ್ದರೆ ಅವನ್ನು ತಿಳಿಸಲು ವಿನ್ನವಿಸಬೇಕು ಜಂಗಲ ಇಲಾಖೆಯವರು ತಮ್ಮ ಅಭಿಪ್ರಾಯ ಸಹಿತ ಅದನ್ನು ಮಾಮಲೇದಾರರಿಗೆ ಕಳಿಸುವರು, ಆ ಸ್ಥೇಯ ಪಟ್ಟಿಯ ಸ್ವಚ್ಛತೆಯ ಖರ್ಚಿನ ಅಂದಾಜು ಮಾಡಲಾಗುವದು. ಈ ಖರ್ಚಿಗಿಂತ ಪಟ್ಟಿಯೊಳಗಿನ ಮರಗಳ ಬೆಲೆ ಹೆಚ್ಚಿಗೆಯಾಗುತ್ತಿದ್ದರೆ ಆ ಹೆಚ್ಚಿಗೆಯಾಗುವ ರಕಮನ್ನು ಅರ್ಜಿದಾರನು ಸರಕಾರಕ...

A Con 346- 47

ಸನ್ ೧೯೪೭ನೇ ಇಸವಿಯ ಮುಂಬಯಿಯ ಒಕ್ಕಲಿಗ ಸಾಲಗಾರರ ಪರಿಹಾರದ ವಿಷಯದ ಆಕ್ಟಿನ ನ್ಯಾಯ ಪಕ್ಷಗಾರನಿಗೆ ಸಮನ

ಅಂಕೋಲಾ ಒಕ್ಕಲಿಗ ಸಿವ್ಹಿಲ್ ಜಜ್ಜ (ಜ್ಯುನಿಯರ ಡಿವಿಜನ್) ಕೋರ್ಟಿನ ಅದಾಲತಿ ವ್ಯವಹಾರಿ ನಂಬರ [illegible] ಸನ್ [illegible] ಇಸವಿಯ [illegible]

ಅರ್ಜದಾರ — ದರಖಾಸ್ತ } [illegible]

ವಿರುದ್ಧ

ಎದುರುಗಾರ ಜವಾಬದಾರ { 1 [illegible] / 2 [illegible] / 3 [illegible] } ಇವರಿಗೆ

[illegible]

R. V Naik
ಕೋರ್ಟಿನ ಶಿರಸ್ತೇದಾರ.

ಕೋರ್ಟಿನ ಮೊಹರು

ಪ್ರಯಾಣಿಕರ ಇಂದಿನ ಆವಶ್ಯಕತೆ ?
ಸ್ವಚ್ಛತೆ ! ವೇಳೆ !! ಸೌಕರ್ಯ !!!
ಹಾಗಾದರೆ—ಸದಾ ಸಂದರ್ಶಿಸಿರಿ
ದಿ ಕೆನರಾ ಲೊಜ
[ಊಟ ಹಾಗೂ ವಸತಿಯ ಸುಖಕೇಂದ್ರ]
(ಕೆನರಾ—ಬೊಂಬೇ)
ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ
ವಿ ಸೂಚನೆ — [illegible]
ಮಾಲಕ:— ಮ್ಯಾನೇಜರು

ಎಂಬಬೇಕ ... ಆಗುತ್ತಿದೆ! ಸಂರಕ್ಷಿತ ಮಾರ್ಗಗಳ ... ಯಿಂದ ಸ್ವಲ್ಪ ... ಸಂರಕ್ಷಿತ (ರಿಸರ್ವ್ಡ) ... ನ್ನು ... ಜಂಗಲ ... ಜಂಗಲ ಇಲಾಖೆಯವರು ... ಜಾತಿಯ ಮರಗಳ ಗಣನೆಯನ್ನೂ ... ಇನ್ನುಳಿದ ನಿರ್ಬಂಧಗಳನ್ನು ... ಜಂಗಲ ... ಎಷ್ಟು ಮಂದಿಯಿದ್ದಾರೆ?

[illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ಪ್ರಕಟನೆ.

ಕುಮಟಾ [illegible]

[illegible]

[illegible] } ಎಂ. ವ್ಹಿ ಭಾಗವತ
ಸುಪರಿಂಟೆಂಡೆಂಟ
[illegible]

[illegible]

ಇಂತಿ ... ಇತ್ಯಾದಿ.

ಪತ್ತೆ ಮಾಡಿಕೊಟ್ಟರೆ ಬಹುಮಾನ!

ತಾ ೪—೪—೧೯೫೦ ಸ್ ದಿವಸ ಚಕ್ರ ಕೇಳಿದಾಗ ಇಬ್ಬಣ್ಣ ವೈಬಣ್ಣದ ೭ ವರ್ಷ ಪ್ರಾಯದ ಒಂದು ಎಮ್ಮೆ ಪಾಡ ಕಳೆದು ಹೋಗಿರುತ್ತದೆ ಅದನ್ನು ಹುಡುಕಿಕೊಟ್ಟವರಿಗೆ ಬಹುಮಾನ ಕೊಡಲಾಗುವದು

ಶಿವಪ್ಪಾ ಬಾಬ ಶೇಟ ಬಗ್ಗೋಣಾ, ಕುಮಟಾ

A Con 1830 47

ಸ. ೧೯೪೭ನೇ ಇಸವಿಯ ಮುಂಬಯಿ ಒಕ್ಕಲಿಗ ಸಾಲಗಾರರ ಪರಿಹಾರದ ವಿಷಯದ ಆಕ್ಟನನ್ವಯ ಪಕ್ಷಗಾರರಿಗೆ ಸಮನ್ಸು.

[illegible]

ವಿರುದ್ಧ

[illegible]

[illegible]

(ಕೋರ್ಟಿನ ಮೊಹರು)

R. V Naik
ಕೋರ್ಟಿನ ಶಿರಸ್ತೇದಾರ

ಮುಕ್ಕಾಲು ಶತಮಾನದಿಂದಲೂ ಕರ್ನಾಟಕದಲ್ಲೆಲ್ಲ
ಹೆಸರುವಾಸಿಯಾಗಿರುವ
—ಇದೀಗ ಎಂದಿಗಿಂತಲೂ ಉತ್ತಮ!!
((ಮಂಗಳೂರಿ) ಕುಮಟಾ ನಸ್ಯ
ವ್ಯಾಪಾರ ಸಂಬಂಧ ಮಾಹಿತಿಗಾಗಿ ಬರೆಯಿರಿ:—
ದಿ ಮಂಗಳೂರು ಸ್ನಫ್ ವರ್ಕ್ಸ, ಕುಮಟಾ
ಪ್ರೊಪ್ರೈಟರ — ಟಿ ಎ. ೨ ಎಸ್ ಎಂಡ್ ಸನ್

ಜಿಲ್ಲಾ ಸಮಾಚಾರ.

ಹಳಿಯಾಳ— ಹಳಿಯಾಳ ತಾಲೂಕಿನ ೧೯೪೯—೫೦ನೇ ವರ್ಷದ ಮುಂಗಾರಿ ಭತ್ತದ ಬೆಳೆಯು ಪ್ರಕಟನೆಗಾಗಿ ಪ್ರಕಟಿಸಲಾಗಿದೆ ಈ ತಾಲೂಕಿನಲ್ಲಿ ೭ ಸರ್ವೇ ಗ್ರಾಮಗಳು ಪ್ರತಿಯೊಂದು ಗ್ರಾಮದಲ್ಲಿ ಹೊಲಗಳನ್ನು (ನೀರಾವರಿಯುಳ್ಳದ) ಕರಿಯ ೪ ವರ್ಗಗಳನ್ನು ಮಾಡಿರುತ್ತಾರೆ ೧—೨ನೇ ಗ್ರಾಮಗಳಲ್ಲಿ ರೂ ೬ ಯಾ ಹೆಚ್ಚಿಗೆ ಕಂದಾಯವಾದವು ೧ನೇ ವರ್ಗ ರೂ ೪ರಿಂದ ೬ರವರೆಗೆ ಕಂದಾಯವಾದವುಗಳು ೨ನೇ ವರ್ಗ, ರೂ ೨ರಿಂದ ೪ರವರೆಗೆ ಕಂದಾಯವಾದವುಗಳು ೩ನೇ ವರ್ಗ ಮತ್ತು ಉಳಿದವು ೪ನೇ ವರ್ಗವೆಂದು ವರ್ಗವಾರಿ ಮಾಡಿರುತ್ತಾರೆ ಇನ್ನುಳಿದ ೫ ಗ್ರಾಮಗಳಲ್ಲಿ ರೂ ೪ ಯಾ ಹೆಚ್ಚಿಗೆ ಕಂದಾಯವುಳ್ಳವು ೧ನೇ ವರ್ಗ, ರೂ ೩ ರಿಂದ ೪ರ ವರೆಗಿನ ಕಂದಾಯವಾದವು ೨ನೇ ವರ್ಗ, ರೂ ೨ರಿಂದ ೩ರವರೆಗಿನ ಕಂದಾಯವಾದವು ೩ನೇ ವರ್ಗ ಮತ್ತು ಉಳಿದವು (ರೂ ೨ಕ್ಕೂ ಕಡಿಮೆ ಕಂದಾಯವಾದವು) ೪ನೇ ವರ್ಗ ಎಂದು ವರ್ಗೀಕರಣ ಮಾಡಲಾಗಿದೆ ಆಯಾ ಗ್ರಾಮಗಳೊಳಗಿನ ಬೇರೆ ಬೇರೆ ವರ್ಗದ ಹೊಲಗಳ ಬಂದ ಸರಾಸರಿ ಭತ್ತದ ಬೆಳೆಯ ಮಾನ (ಎಕರೆ ೧ಕ್ಕೆ) ಈ ಕೆಳಗೆ (ಮಣಗಳಲ್ಲಿ) ಕೊಟ್ಟಿದೆ —

ಗ್ರಾಮ	೧ನೇ ವರ್ಗ	೨ನೇ ವರ್ಗ	೩ನೇ ವರ್ಗ	೪ನೇ ವರ್ಗ
I	೩೦	೨೮	೨೨	೧೪
II	೩೨	೩೬	೨೦	೧೪
III	೩೨	೩೨	೧೮	೧೪
IV	೩೦	೩೨	೧೮	೧೪
V	೩೫	೩೫	೨೦	೧೪
VI	೩೫	೩೫	೨೦	೧೨
VII	೩೫	೩೫	೨೦	೧೨

ಮುಂಡಗೋಡ— ಮುಂಡಗೋಡ ತಾಲೂಕಿನ ೧೯೪೯—೫೦ನೇ ಸಾಲಿನ ಮುಂಗಾರಿ ಭತ್ತದ ಬೆಳೆಯು ಪ್ರಕಟನೆಯು ಹೊರಬಿದ್ದಿದೆ ಈ ತಾಲೂಕಿನಲ್ಲಿ ೪ ಸರ್ವೇ ಗ್ರಾಮಗಳು, ಮಾಮಲೇದಾರ ರಾ॥ ಬಿ. ಎನ್. ಕುಲಕರ್ಣಿ ಇವರು ಎಲ್ಲ ಗ್ರಾಮಗಳ (ನೀರಾವರಿಯುಳ್ಳದ) ಹೊಲಗಳನ್ನು ಒಂದೇ ಪ್ರಕಾರದ ವರ್ಗವಾರಿ ಮಾಡಿದ್ದಾರೆ ಎಕರೆ ೧ಕ್ಕೆ ರೂ ೪ ಯಾ ಹೆಚ್ಚಿಗೆ ಕಂದಾಯವುಳ್ಳವು ೧ನೇ ವರ್ಗ, ರೂ. ೩ ರಿಂದ ೪ರ ವರೆಗೆ ಕಂದಾಯವುಳ್ಳವು ೨ನೇ ವರ್ಗ, ರೂ ೨ರಿಂದ ೩ರ ವರೆಗೆ ಕಂದಾಯವಾದವು ೩ನೇ ವರ್ಗ ಮತ್ತು ರೂ ೨ಕ್ಕೂ ಕಡಿಮೆ ಕಂದಾಯವುಳ್ಳವು ೪ನೇ ವರ್ಗ ಹೀಗೆ ವರ್ಗವಾರಿ ಮಾಡಲಾಗಿದೆ ಆಯಾ ಗ್ರಾಮಗಳ ಬೇರೆ ಬೇರೆ ವರ್ಗಗಳ ಹೊಲಗಳ ಬೆಳೆದ ಸರಾಸರಿ ಭತ್ತದ ಬೆಳೆಯ ಮಾನ (ಮಣಗಳಲ್ಲಿ) ಈ ಕೆಳಗಿನಂತಿದೆ

ಗ್ರಾಮ	೧ನೇ ವರ್ಗ	೨ನೇ ವರ್ಗ	೩ನೇ ವರ್ಗ	೪ನೇ ವರ್ಗ
I	೨೮	೨೪	೨೦	೨೦
II	೨೫	೨೪	೨೨	೧೪
III	೨೪	೨೨	೨೦	೧೮
IV	[illegible]	೨೦	೨೦	೧೮

ಯಲ್ಲಾಪುರ— (ತಾ ೧೬ ೪-೫೦) ಯಲ್ಲಾಪುರ ಮಾಮಲೇದಾರರು ತಾ ೩—೪—೫೦ರ "ವೃತ್ತ"ದಲ್ಲಿ ಪ್ರಕಟವಾದಂತೆ ಹಾಗೂ ರಾ॥ ಮುಖಾಬಲೇಶ್ವರ ಹೆಗಡೆಯವರಿಗೆ ಭತ್ತದ ಗ್ರಾಮಾಂತರದ ಬಗ್ಗೆ ಅಪ್ಪಣೆ ಕೊಟ್ಟ ಬೇರೆ ಹೊಲಗಳ ಆದಮಾನದ ಲೆಕ್ಕಗಳನ್ನು ಅವರು ಪ್ರಕಟಿಸಿದ ಸಾಹುಕಾರರಿಂದ ರಾ॥ ಎಸ್. ಪಿ. ಕಾಯ್ಕಿಣಿ

ಪ್ರಕಟನೆ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಕನ್ನಡ, ಮರಾಠಿ ಮತ್ತು ಉರ್ದು ಶಾಲೆಗಳಲ್ಲಿ ಟೀಚರ್-ಶಿಕ್ಷಕರೆಂದು ಕೆಲಸ ಮಾಡಲಿಚ್ಛಿಸುವ ಮುಂದೆ ಹೇಳಿದ, ಮಧ್ಯಮ ಮತ್ತು ಹಿಂದುಳಿದ ವರ್ಗದ ಉಮೇದವಾರರು ತಾರೀಖು ೧೮-೫-೧೯೫೦ನೇದರೊಳಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಅರ್ಜಿ ಮಾಡತಕ್ಕದ್ದು. ಅರ್ಜಿಯನ್ನು ನಿರ್ದಿಷ್ಟ ಫಾರ್ಮಿನಲ್ಲಿಯೇ ಮಾಡತಕ್ಕದ್ದು. ಮುದ್ರಿತ ಫಾರ್ಮುಗಳು ಆಯಾ ತಾಲೂಕ ಶಾಲಾ ಮಾಸ್ತರರ ಕಡೆಗೆ ಸಿಗುತ್ತವೆ. ಫಾರ್ಮು ಒಂದರ ಬೆಲೆ ಅರ್ಧ ಆಣೆ ಇರುವದು. ಅರ್ಜಿಗಳು ಮುದ್ರಿತ ಫಾರ್ಮಿನಲ್ಲಿ ಇಲ್ಲದಿದ್ದಲ್ಲಿ ಅವುಗಳನ್ನು ಸ್ವೀಕರಿಸಲಾಗದು

ಉಮೇದವಾರರು ಕಾನಡಾ ಜಿಲ್ಲೆಯ ನಿವಾಸಿಗಳಾಗಿರಬೇಕು

ಉಮೇದವಾರರಲ್ಲಿರಬೇಕಾದ ಗುಣಗಳ ಪಾತ್ರತೆ

(೧) ಉತ್ತೀರ್ಣ ಪರೀಕ್ಷೆ	(೨) ಮರಾಠಿ ಪ್ರಾಥಮಿಕ ಪ್ರಮಾಣಪತ್ರ ಪರೀಕ್ಷೆ	(೩) ಕನ್ನಡ ಪ್ರಾಥಮಿಕ ಪ್ರಮಾಣ ಪತ್ರ ಪರೀಕ್ಷೆ ಹಾಗೂ ಫೈನಲ್ ಸ್ಕೂಲ ಸರ್ಟಿಫಿಕೇಟ ಪರೀಕ್ಷೆ.
	ಪಡೆಯಬೇಕಾದ ಕನಿಷ್ಠ ಗುಣಗಳು	ಪಡೆಯಬೇಕಾದ ಕನಿಷ್ಠ ಗುಣಗಳು
(೧) ಮುಂದುವರಿದವರು —	ನೂರಕ್ಕೆ ೪೫ರಂತೆ	ನೂರಕ್ಕೆ ೫೦ರಂತೆ
(೨) ಮಧ್ಯಮದವರು —	,, ೩೫ರಂತೆ	,, ೪೦ರಂತೆ.
(೩) ಹಿಂದುಳಿದವರು —	,, ೪೦ರಂತೆ	,, ೪೦ರಂತೆ

ಟಿ ಸೂ — ಮೇಲೆ ತೋರಿಸಿದ ಗುಣಗಳನ್ನು ಪಡೆದ ಉಮೇದವಾರರು ಸಾಕಷ್ಟು ಸಿಗದಿದ್ದಲ್ಲಿ ಮತ್ತು ಅವಶ್ಯವಿದ್ದಲ್ಲಿ ಮಾತ್ರ ನೂರಕ್ಕೆ ೪೦ಕ್ಕಿಂತ ಹೆಚ್ಚು ಗುಣಗಳನ್ನು ಪಡೆದ ಉಮೇದವಾರರನ್ನು ಆರಿಸುವ ವಿಚಾರ ಮಾಡಬಹುದು

೨ ಮೆಟ್ರಿಕ್, ಎಸ್ ಎಸ್ ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ, ಇಂಗ್ಲಿಷದಲ್ಲಿ ಮಾತ್ರ ಸಾಮಾನ್ಯಾಗಿ, ಉಳಿದ ವಿಷಯಗಳಲ್ಲಿ ಕನಿಷ್ಠ ೧೦೦ಕ್ಕೆ ೪೦ರಂತೆ ಗುಣಗಳನ್ನು ಪಡೆದವರು ಸಹ ಅರ್ಜಿ ಮಾಡಬಹುದು ಅಂಥವರಿಗೆ ಗುಣಗಳ ನಿರ್ಬಂಧವಿಲ್ಲ ಪ್ರಾಂತ ಆದ ಉಮೇದವಾರರಿಗೆ ಸಹ ಗುಣಗಳ ನಿರ್ಬಂಧವು ಅನ್ವಯಿಸುವದಿಲ್ಲ

೩ ಸರಕಾರಿ ಮತ್ತು ಹಳಿಯಾಳ ತಾಲೂಕಗಳ ಮರಾಠಿ ಶಾಲೆಗಳಲ್ಲಿ ಕೆಲಸ ಮಾಡಲಿಚ್ಛಿಸುವ ಗಂಡು ಉಮೇದವಾರರು ಬೆಳಗಾಂವ ಇಲ್ಲವೆ ಧಾರವಾಡ ಜಿಲ್ಲೆಯವರಿದ್ದರೂ ಅಡ್ಡಿ ಇಲ್ಲ.

೪ ಉಮೇದವಾರರು ತಾ ೧—೪—೧೯೫೦ಕ್ಕೆ ೧೮ ವರ್ಷಕ್ಕೆ ಮೀರಿ ೨೫ ವರ್ಷದೊಳಗಿನ ವಯಸ್ಸಿನವರಿರಬೇಕು ಟ್ರೇಂಡ ಇದ್ದಲ್ಲಿ ವಯಸ್ಸಿನ ನಿರ್ಬಂಧವನ್ನು ಸಡಿಲ ಮಾಡುವ ಬಗ್ಗೆ ವಿಚಾರ ಮಾಡಲಾಗುವದು

೫ ಸನ್ ೧೯೪೨ನೇ ಸಾಲಿನ ಸವಿನಯ ಕಾಯದೆಭಂಗ ಚಳವಳಿಯಲ್ಲಿ ಭಾಗ ವಹಿಸಿದ್ದರಿಂದಲೇ ಮೇಲಿನ ಗುಣಗಳಿಗೆ ಪ್ರತ್ಯೇಕ ಅವಕಾಶ ಪಡೆಯಲಿಕ್ಕೆ ಆಗಲಿಲ್ಲವೆಂದು ಲೇಖಿ ಪುರಾವೆ ಕೊಟ್ಟಲ್ಲಿ ಮಾತ್ರ ಅಂಥ ಉಮೇದವಾರರ ಅರ್ಜಿಗಳನ್ನು ಸ್ವೀಕರಿಸಲಾಗುವದು

೬ ಬೇರೆ ಯಾವದಾದರೊಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರು ಇಲ್ಲವೆ ಮಾಡಿದವರು ಸದರ ಸಂಸ್ಥೆಯ ಮುಖ್ಯಾಧಿಕಾರಿಯ ಶಿಫಾರಸಿ ಅವರ ಪತ್ರದೊಡನೆ ಅರ್ಜಿ ಮಾಡತಕ್ಕದ್ದು. ಅಂಥ ಅರ್ಜಿಗಳು ಬರ ಬಂದಲ್ಲಿ ವಿಚಾರವಾಗಲಾರವು

೭ ಉಮೇದವಾರರು ಭೆಟ್ಟಿಗೆ ಕರೆದಾಗ ತಮ್ಮ ಸ್ವಂತ ಖರ್ಚಿನಿಂದ ಭೆಟ್ಟಿಯಾಗತಕ್ಕದ್ದು

೮ ಯಾರೂ ಯಾವದೇ ತರದ ವಶೀಲಿಯನ್ನು ಹಚ್ಚಕೂಡದು ಹಚ್ಚಿದಲ್ಲಿ ಅಂಥವರ ಅರ್ಜಿಗಳನ್ನು ವಿಚಾರಿಸಲಿಕ್ಕೆ ಬರಲಾರದು

೯ ಅಪೂರ್ಣ ಮಾಹಿತಿಗಳುಳ್ಳ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ

೧೦ ಟೀಚರನೆಂದು ನೇಮಿಸಲಾದ ಉಮೇದವಾರರಿಗೆ ಮಾತ್ರ ಅದರಂತೆ ತಿಳಿಸಲಾಗುವದು

ನಂಬರ ೨೪೦
ಜಿಲ್ಲಾ ಸ್ಕೂಲ ಬೋರ್ಡ
ಕಚೇರಿ, ಕಾರವಾರ
18—4—1950

P A Gudisagar,
Administrative Officer &
Secretary, Staff Selection
Committee, D. S B., Kanara

ಜಾಹೀರ ನೋಟೀಸು.

ಇದರ ಮೂಲಕ ಜಾಹೀರಪಡಿಸುವದೇನೆಂದರೆ — ನನ್ನ ತಂದೆ ಗೋಪಾಲ ನಾರಾಯಣ ಹೆಗಡೆ ಸಾ॥ ಊರಕೇರಿ ತಾ, ಕುಮಟಾ ಇವರಿಗೆ ಹೇರಳ ಪಿತ್ರಾರ್ಜಿತ ಆಸ್ತಿಯಿದ್ದು, ಸದರ ಆಸ್ತಿಗಳಿಗೆ, ಹಿಂದೂ ಕಾಯದೆಯಂತೆ, ನಾನು ಮತ್ತು ನನ್ನ ಅಣ್ಣ ಗಣಪತಿ ಗೋಪಾಲ ಹೆಗಡೆ ಭಟ್ಟ ಸಾ॥ ಊರಕೇರಿ ಇವರಿಬ್ಬರೇ ಸಮಾಯಿಕ ಹಕ್ಕುದಾರರಾಗಿರುತ್ತೇವೆ. ನನ್ನ ತಂದೆಯವರು ಇತ್ತ ೪ ತಿಂಗಳಿಂದ ಅಸ್ವಸ್ಥರಾಗಿದ್ದಾರೆ, ಇತ್ತ ೨ ತಿಂಗಳಿಂದಂತೂ ಸ್ಥಿರಬುದ್ಧಿಯಲ್ಲಿಲ್ಲ ಅಂಥ ಸಂದರ್ಭದಲ್ಲಿ ನನಗೆ ಮತ್ತು ನನ್ನ ಹಕ್ಕಿಗೆ ಮೋಸಗೊಳಿಸುವ ಉದ್ದೇಶದಿಂದ ನನ್ನ ಅಣ್ಣ ಮತ್ತು ...ರವರು ದೇಶಪಾಂಡೆ ಸಾ॥ ಊರಕೇರಿ ಇವರು ಏನೋ ಲೇಖಿ ಪತ್ರ ಮಾಡಿಕೊಳ್ಳುವ ತಯಾರಿಯಲ್ಲಿರುತ್ತಾರೆಂದು ತಿಳಿಯುತ್ತದೆ ನನ್ನ ಸೇರುವಿಕೆಯ ಹೊರತು ನಮ್ಮ ಯಾವದೇ ಆಸ್ತಿಗಳಲ್ಲಿ, ಯಾವದೇ ರೀತಿಯಿಂದ ಏನೊಂದೂ ಹಕ್ಕು ಮಾಡಿಕೊಳ್ಳಲು ಯಾ ಹಕ್ಕು ಬಿಟ್ಟುಕೊಡಲು ಯಾರಿಗೂ ಹಕ್ಕು ಇಲ್ಲ ಮತ್ತು ಇರುವದಿಲ್ಲ ಇದಕ್ಕೆ ವಿರುದ್ಧ ಯಾರಾದರೂ ಯಾವದೇ ಕರಾರು ಮಾಡಿಕೊಂಡಲ್ಲಿ ಅದು ನನ್ನ ನ್ಯಾಯ್ಯವಾದ ಹಕ್ಕಿಗೆ ಬಾಧಕವಾಗಲಿಲ್ಲ, ಅದು ರದ್ದು ಎಂದು ತಿಳಿಯತಕ್ಕದ್ದು ಊರಕೇರಿ, ತಾ ೭—೪—೧೯೫೦

ಸಹಿ ಸಾವಿತ್ರಿ ಕೋಂ ಗಣೇಶ ಹೆಗಡೆ ಸಾ॥ ತಲಗೋಡ ಇವಳ ಎಡಗೈ ಹೆಬ್ಬೆಟ್ಟಿನ ಗುರ್ತು

ಮತ್ತು ಗಣಪತಿ ರಾಮಕೃಷ್ಣ ಭಟ್ಟ ಹಾಸಣಗಿ ಇವರು ಬರೆಯುತ್ತಾರೆ! ಯಾಕೆಂದರೆ (೧) ಭಕ್ತರ ಗ್ರಾಮಾಂತರಕ್ಕೆ ಅಪ್ಪಣೆ-ಚೀಟಿ ಕೊಡುವ ಕೆಲಸ ಗ್ರಾಮ ದ್ವಾರದು, ಮಾಮಲೇದಾರರದಲ್ಲ! (೨) ಯಾವದೇ ರೈತ ನು ಗರಜಯಲ್ಲಿ ಅ[illegible] ಮಾಡಿದ್ದು ಪರವಾನಗಿ ದೇಡಿ ಮಾಮಲೇದಾರರ [illegible] ವನಜ ಆವಶ್ಯಕತೆಯಿದ್ದ ಎಲ್ಲ ರೈತರಿಗೆ ಅವರು ಅ[illegible] ಚೀಟಿ ಕೊಟ್ಟಿದ್ದನ್ನು ಈ ಪ್ರಹಸ್ತರು ನೋಡಿದ್ದಾರೆ!

[೮೪ ಘಾಯದೆ ಮತ್ತು ಭಟ್ಟರ ಹೇಳಿಕೆಯಲ್ಲಿ ಒಂದ ಕ್ಕೊಂದು ಮೇಳ ದೀಸುವದಿಲ್ಲ! ೮೪ ಮಹಾಬಲೇಶ್ವರ ಹೆಗಡೆಯವರಿಂದ ಅವರು ಪನ್ನಿಸ್ಥಿತಿ ತಿಳಿಕೊಂಡದ್ದೂ ಕಾಣಾವದಿಲ್ಲ! ಕಾಲ್ಸರಿ ಎಲ್ಲಿ ಚುಚ್ಚುತ್ತಿರೆಂಬುದು ಕಾಲ್ಸರಿ ಹಾಕಿಕೊಂಡವನೇ ತಿಳಿಯಬಲ್ಲನು ಎಂಬುವಾಗಿ ಒಂದು ಗಾದೆ ಯುಂಟು ಘಾಯದೆ-ಭಟ್ಟರು ಆ ಕಾಲ್ಸರಿಯನ್ನು ಇನ್ನೂ ಹಾಕಿಕೊಂಡಿಲ್ಲೆಂದು ತೋರುತ್ತದೆ! — ಸಂಪಾದಕ

(ತಾ. ೬-೪-೫೦) ಸಿದ್ದಾಪುರದವರು ಕಳಿದ ದಿನಗಳ ದ ತಿಂಗಳಲ್ಲಿ ಮುಂಚಿತರು ಗ್ರಾಮದವರಿಗೆ ಒಂದು ರೀತಿ ಯೋ ದಯಪಾಲಿಸಿರುತ್ತಾರೆ ಅದು ಗ್ರಾಮಪಂಚಾಯತಿ ಯಲ್ಲಿ ಇಡಲ್ಪಟ್ಟಿದೆ ಈ ರೀಡಿಯೋಕ್ಕೆ ಬೇಕಾಗುವ ಬಟರಿ ಯನ್ನು ಸರಕಾರದವರೇ ತಿಂಗ–ತಿಂಗಳಿಗೆ ತಂದು ಕೊಡು ತ್ತಾರಂತೆ ಆದರೆ ಕಳೆದ ಇನವರಿ ತಿಂಗಳ ನಂತರ ಮುಂಚ ಕೇರಿಯು ರೀಡಿಯೋಕ್ಕೆ ಬಟರಿಯೇ ಸಿಕ್ಕಿಲ್ಲ! ಪೇಟ್ರುವ ರಿಯಲ್ಲಿ ಬಟರಿ ಬಂದಾಗ ಗ್ರಾಮಪಂಚಾಯತಿಯಲ್ಲಿ ಯಾರೂ ಇದ್ದಿಲ್ಲವಂತೆ, ಅದರಿಂದ ಬಟರಿ ತಕೆಸ್ಸಂಡ. ಬಂದ ಅಧಿಕಾರಿಯು ಅದನ್ನು ತಕ್ಕೊಂಡು ತಿರುಗಿಹೋದನಂತೆ! ಮಾರ್ಚ ತಿಂಗಳಲ್ಲಿ ಆ ಬಟರಿ-ಪೂರೈಕೆಯ ಅಧಿಕಾರಿ ಬರ ಲಿಲ್ಲವಂತೆ! ಹೀಗಾಗಿ ಈ ರೀಡಿಯೋ ಈಗ ೨ ತಿಂಗಳಿಂದ ದ ಮೌನವ್ರತ ಪಾಲಿಸುತ್ತದೆ! ಇದರ ರೀಡಿಯೋಕ್ಕೆ ಮಾಂಬಡಿಯು ಬಾಮಲ ಕೇಂದ್ರದ ವಿಚಾರ ಕೂ ಸಿಕೊಟ್ಟಿದ್ದಾರೆ ಆದರೆ ಬದಲು ಧಾರವಾಡ ಬಾನು ಕೇಂದ್ರದ ವಿಚಾರ ಕೊಡ್ರಿಸಿಕೊಟ್ಟರೆ ಒಳ್ಳೇದಾಗುತ್ತಿತ್ತು ದು ಕೆಲವರ ಅಂಬೋಣವಿದೆ.

ಜಾಹೀರ ನೋಟೀಸು.

ಶಿರ್ಸಿ ತಾಲೂಕ ಹೆಬ್ರೆ ಗ್ರಾಮದ ಪೈಕಿ [illegible] ಹಳ್ಳಿಯಲ್ಲಿರುವ ಪಟೀಲ ರುದ್ರಪ್ಪ ತಿಂಮ್ಮಾ ಗೌಡಾ ಇವರಿಗೆ ಈ ಕೆಳಗೆ ಸಹಿ ಮಾಡುವವನು ಈ ಮೂಲಕ ತಿಳಿಸುವದೇನೆಂದರೆ —

ನೀವು ನನಗೆ ಗಂಡು ಸಂತತಿಯಿಲ್ಲದ್ದರಿಂದ ನನ್ನ ಮನೆತನದ ಜೇಷ್ಠತೆಯನ್ನು ಮುಂದೆ ಸಾಗಿಸಿ ನಡಿಸ ಲೆಂದು ಬರಬೇಕೆಂದು ನನಗೆ ಹೇಳಿ, ತಾ ೪೧-೩ ೪೬ ರಲ್ಲಿ ಹೆಬ್ರೆ ಮತ್ತು ಬಂಡಲ ಗ್ರಾಮಗಳೊಳಗಿನ ನನ್ನ ಸಂಪೂರ್ಣ ಆಸ್ತಿಯನ್ನೂ ಹೆಬ್ರೆ ಗ್ರಾಮದ [illegible] ಒಳಗೊಳಗಿನ ಮನೆಯನ್ನೂ ನನಗೆ ರಜಿಸ್ಟರ ದಸ್ತಾಯಿಂ ದ ಬರೆಸಿ ಕೊಟ್ಟಿರುತ್ತೀರಿ ನನ್ನ ಜೀವನದ ವರೆಗೆ ಈ ಆಸ್ತಿಗಳ ಕಬಜಿ ಮತ್ತು ಉಪಭೋಗ ಮಾಡುವ ಹಕ್ಕನ್ನು ಆದರೆ ದಸ್ತಿನಿಂದ ನೀವು ಇಟ್ಟುಕೊಂಡಿದ್ದೀರಿ ಆದರೆ ೧೯-೬-೧೯೪೮ಕ್ಕೆ ಇನ್ನೊಂದು ರಜಿಸ್ಟರ ದಸ್ತು ಮಾಡಿ ಅದನ್ನು ನನಗೆ ಬರೆದುಕೊಟ್ಟಿರುತ್ತೀರಿ ಈಗ ನಿರ ಆಸ್ತಿಯಲ್ಲಿ ನಿಮಗೆ ಏನೂ ಹಕ್ಕಿಲ್ಲ, ಹಾಗೂ ಹೊಲ್ಕಾಸದ ಮನೆಯಲ್ಲಿರುವ ಕಂಚು–ತಾಮ್ರ ಮುಂತಾ ದ ಚರಾಸ್ತಿಯಲ್ಲಿಯೂ ನಿಮಗೆ ಹಕ್ಕಿಲ್ಲ ಆದರೂ ನೀವು ನನ್ನ ತಿರೀ ತೊಂದರೆಯು ಮಾಡಿಗೆ ಮಾರುಳಾಗಿ ನಾನು ನನ್ನ ಭತ್ತಗಾ-ಆಸ್ತಿಯೊಳಗಿನ ಅರ್ಧಾಂಶವನ್ನು ನಿದರಿ ಮಗಳ ಹೆಸರಿನಲ್ಲಿ ಬರೆದುಕೊಡಬೇಕೆಂದೂ, ಇಲ್ಲದಿ ದ್ದರೆ ಮನೆಯಲ್ಲಿ ಇಳಿಯಲು ಕೊಡುವದಿಲ್ಲೆಂದೂ ಧಮಕಿ ಹಾಕಲು ಆರಂಭಿಸಿರುವಿರಿ ಇದು ನಿಮಗೆ ಶೋಭಿಸುವ ದಲ್ಲ ಭತ್ತಗಾ ದಸ್ತಿನಲ್ಲಿ ಬರೆದಂತೆ ನಿಮ್ಮ ಜೀವನಕ್ಕೆ ಬೇಕಾದಂತೆ ಸಹಾಯಿಸಲು ನನ್ನ ಒಪ್ಪಿಗೆಯುಂಟು ನಿಮ್ಮ ಉದರಾರ್ಥ ನಡಿಸಲಿಕ್ಕೂ — ಅದರ ಬೇರೆ ನನ್ನ ಜೀವಿ ಇಲ್ಲದಿದ್ದರೂ — ನನ್ನ ಸಿದ್ಧತೆಯುಂಟು ಇಷ್ಟ ರಿಂದ ನಿಮ್ಮ ಸಮಾಧಾನವಾಗದಿದ್ದರೆ ನೀವು ನನ್ನ ಮನೆಯಿಂದ ಹೊರಬಿದ್ದು ಹೋಗಬೇಕು ಮನೆಯೊ ಳಗಿನ ಚರಾಸ್ತಿಗೆ ಕೈ ಹಚ್ಚಬಾರದು ಇದಕ್ಕೆ ವ್ಯತಿ ರಿಕ್ತವಾಗಿ ನೀವು ನಡೆದರೆ ನಾನು ನಿರುಪಾಯನಾಗಿ ನಿಮ್ಮನ್ನು ಹೊರದೂಡಿಸಲಿಕ್ಕೂ ಮನೆಯೊಳಗಿನ ಚರಾಸ್ತಿಯನ್ನು ನೀವು ಫರಾರಿ ಮಾಡದಂತೆ ವ್ಯವಸ್ಥೆ ಮಾಡಲಿಕ್ಕೂ ಕೋರ್ಟ ಕಂಡ ಕಾಯದೆ— ಇಲಾಜು ಮಾಡುವೆನು ಈ ಬಗ್ಗೆ ನೀವು ನನ್ನನ್ನು ದೂರಲಾಗದು. ತಿಂದರಿಲಿ ಗಿಹೊಸಳ್ಳಿ, ತಾ. ೨೧-೪-೧೯೫೦

ಬಂಗಾರೆಪ್ಪ ಬಸಪ್ಪ ಗೌಡಾ.

ಪ್ರಕಟನೆ.

ಕಾನಡಾ ಜಿಲ್ಹಾ ಸ್ಕೂಲ ಬೋರ್ಡ ಕಚೇರಿಯಲ್ಲಿಯ ಈ ಕೆಳಗಿನ ಜಾಗೆಗಳ ಬಗ್ಗೆ ಉಮೇದವಾರರ ಲೀಸ್ಟನ್ನು ತಯಾರಿಸುವದಿರುವದು ಪಗಾರ ಸ್ಕೇಲು ಈ ಕೆಳಗೆ ತೋರಿಸಿದಂತೆ ಇರುತ್ತದೆ. ಈ ಸ್ಥಳಗಳಿಗೆ ಉಮೇದವಾರರಾಗಬಿಚ್ಛಿಸುವವರು ಸ್ವಹಸ್ತಾಕ್ಷರದಿಂದ ಬರೆದ ಅರ್ಜಿಗಳನ್ನು ತಾ ೨೦-೫-೧೯೫೦ರೊಳ ಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಕಳಿಸತಕ್ಕದ್ದು

ಅರ್ಜಿಯಲ್ಲಿ ನಮೂದಿಸತಕ್ಕ ಮಾಹಿತಿಗಳು —

(೧) ಉಮೇದವಾರರ ಪೂರ್ಣ ಹೆಸರು ಮತ್ತು ವಿಳಾಸ, (೨) ಜಾತಿ (೩) ಜನ್ಮ ತಾರೀಖು (೪) ಶೈಕ್ಷಣಿಕ ಯೋಗ್ಯತೆ, (೫) ಗೊತ್ತಿದ ಭಾಷೆಗಳು, (೬) ಹೊಂದಿದ ಅನುಭವ, (೭) ಟಾಯಪಿಂಗ ಮಾಡು ವದರಲ್ಲಿ ವೇಗ (ಕಾರಕೂನನ ವಿಷಯದಲ್ಲಿ ಮಾತ್ರ).

I ಅಸಿಸ್ಟಂಟ ಎಡ್ಮಿನಿಸ್ಟ್ರೇಟಿವ್ಹ ಆಫೀಸರ — (ಕನಿಷ್ಠ ೩ ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ ಟ್ರೇಂಡ ಗ್ರೆಜ್ಯುಯೇಟರು ಮಾತ್ರ)	ರೂ ೭೦-೫-೧೩೦—E B.—೬-೧೬೦-೮-೨೦೦ (ಈ ಸ್ಕೇಲಿನಲ್ಲಿ ರೂ ೧೦೦/— ರ ವರೆಗೆ ಹೆಚ್ಚಿನ ಆರಂಭದ ಪಗಾರ ಕೊಡಲಾಗುವದು ಮತ್ತು ರೂ. ೧೫/– ಸ್ಪೇಶಲ್ ಪಗಾರವೂ ಕೊಡಲಾಗುವದು) (ಪುನರ್ಮಿಲನ ಕೇಸಾಗುವ ವರೆಗೆ)
II ಎಟೆಂಡೆನ್ಸ ಆಫೀಸರರು —	
(೧) ೩ ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ ಅಥವಾ ೩ ವರ್ಷ ಆಡಳಿತಿಯ ಅನುಭವವಿದ್ದ ಟ್ರೇಂಡ ಗ್ರೆಜ್ಯುಯೇಟರು	೭೦-೫ ೧೩೦ — E B — ೬-೧೬೦-೮-೨೦೦.
(೨) ಕನಿಷ್ಠ ೧೦ ವರ್ಷ ಶಿಕ್ಷಕನಾಗಿ ಕೆಲಸಮಾಡಿದ ಹಾಗೂ ಎಸ್. ಟಿ ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ನೊನ್-ಗ್ರೆಜ್ಯುಯೇಟರು ಅಥವಾ ಮೆಟ್ರಿಕ್ ಆದವರು	ರೂ. ೬೧—೩—೮೫— E B. —೪—೧೨೫. —೫—೧೪೦.
(೩) ಕನಿಷ್ಠ ೧೫ ವರ್ಷ ಪ್ರಾಥಮಿಕ ಶಿಕ್ಷಕನಾಗಿ ಕೆಲಸ ಮಾಡಿದ ಟ್ರೇಂಡ ಶಿಕ್ಷಕರು	ರೂ ೬೧—೩—೮೫ — E B —೪—೧೨೫— ೫—೧೪೦
III ಕಾರಕೂನರು — ಮೆಟ್ರಿಕ್, ಎಸ್ ಎಲ್ ಸಿ ಅಥವಾ ಎಸ್ ಎಸ್ ಸಿ ಪಾಸಾದವರು.	ರೂ ೪೬—೩—೮೫ (ಮೆಟ್ರಿಕ್ ಅಥವಾ ಅದರ ಸಮಾನ ಪರೀಕ್ಷೆ ಪಾಸಾದ ರಿಗೆ ರೂ. ೫೫/— ರಂತೆ, ಗ್ರೆಜ್ಯುಯೇಟರಿಗೆ ರೂ ೬೪/— ರಂತೆ ಮತ್ತು ಬಿ. ಟಿ. ಗ್ರೆಜ್ಯುಯೇಟರಿಗೆ ರೂ ೭೦/— ರಂತೆ ಆರಂಭದ ಪಗಾರ ಕೊಡ ಲಾಗುವದು ಕಾಯಂ ಆದ ನಂತರ ಕಾರಕೂನರ ಸ್ಕೇಲ ರೂ ೪೬—೩—೮೫ E B — ೪ — ೧೨೫ — ೫—೧೪೦ ಕೊಡಲಾಗುವದು)

ಸೂಚನೆ — (ಅ) ಮೇಲೆ ತೋರಿಸಿದ ಪಗಾರ ಸ್ಕೇಲಿನ ಜೊತೆಗಾಗಿ ಸರಕಾರಿ ನಿಯಮದಂತೆ ತುಟ್ಟಿ ಭತ್ತೆ ಕೊಡಲಾಗುವದು

(ಬ) ಬೇರೆ ಎಂಥವಾದರೊಂದು ಸಂಸ್ಥೆಯಲ್ಲಿ ಅಥವಾ ಖಾತೆಯಲ್ಲಿ ಕೆಲಸ ಮಾಡುತ್ತಿದ್ದವರು ಅಲ್ಲದೆ ಮಾಡಿದವರು ಸದರ ಸಂಸ್ಥೆ ಅಥವಾ ಖಾತೆಯ ಮುಖ್ಯಾಧಿಕಾರಿಯ ಶಿಫಾರಸಿಂ ಅವರ ವಿದ್ಯಮಾನ ಅರ್ಜಿ ಮಾಡತಕ್ಕದ್ದು ಅಂಥ ಅರ್ಜಿಗಳು ಪ ಭಾರಿ ಬಂದಲ್ಲಿ ಅವುಗಳ ವಿಚಾರವಾಗಲಾರದು

(ಕ) ಮೇಲಿನ ಉಮೇದವಾರರು, ನನ್ನ ಸ್ವಂತ ಖರ್ಚಿನಿಂದ ಸ್ಟಾಫ್ ಸಿಲೆಕ್ಷನ ಕಮಿಟಿಯವರು ಭೆಟ್ಟಿಗೆ ಕರೆದಾಗ ಅವರು ತಿಳಿಸಿದ ಜಾಗದಲ್ಲಿ ಬರಬೇಕಾಗುವದು, ಮತ್ತು ಯಾವತ್ತೂ ಸರ್ಟಿಫಿಕೇಟುಗಳನ್ನು ಭೆಟ್ಟಿಯ ಕಾಲಕ್ಕೆ ತಮ್ಮ ಸಂಗಡ ತರಬೇಕು

(ದ) ಯಾರೂ ಯಾವದೇ ತರದ ವಶೀಲಿಯನ್ನು ಹಚ್ಚಕೂಡದು ಯಾರಾದರೂ ಹಾಗೆ ಮಾಡಿದಲ್ಲಿ ಅವರ ಅರ್ಜಿಯನ್ನು ವಿಚಾರಕ್ಕೆ ತೆಗೆದುಕೊಳ್ಳಲಿಕ್ಕಿಲ್ಲ

(ಇ) ಅಪೂರ್ಣ ಮಾಹಿತಿಗಳುಳ್ಳ ಅರ್ಜಿಗಳ ವಿಚಾರ ಆಗಲಿಕ್ಕಿಲ್ಲ.

(ಫ) ೧೯೪೨ನೇ ಇಸವಿಯಲ್ಲಿ ಇದ ಕಾನೂನು ಭಂಗದ ಚಳವಳಿಯಲ್ಲಿ (Civil Disobedience Movement 1942) ಭಾಗ ವಹಿಸಿದ್ದರಿಂದ ನೌಕರಿಯ ಜಾಗಗಳಿಗೆ ಬೇಕಾದ ಶೈಕ್ಷ ಣಿಕ ಅರ್ಹತೆಗಳನ್ನು ಪಡೆಯಲಿಕ್ಕೆ ಆಗಲಿಲ್ಲವೆಂದು ಯೋಗ್ಯ ಬಗೆ ಪ್ರಮಾಣ ಹಾಜರಪಡಿಸಿದ್ದಲ್ಲಿ ಅಂಥ ಉಮೇದವಾರರ ಅರ್ಜಿಗಳನ್ನು ಸಹ ವಿಚಾರಕ್ಕೆ ತೆಗೆದುಕೊಳ್ಳಲಾಗುವದು

(ಗ) ಸ್ಟಾಫ ಸಿಲೆಕ್ಷನ್ ಕಮಿಟಿಯವರು ಆರಿಸಿದ ಉಮೇದವಾರರಿಗೆ ಮಾತ್ರ ತಿಳಿಸಲಾಗುವದು

ನಂಬರ ೨೪೪
ಕಾನಡಾ ಜಿಲ್ಹಾ ಸ್ಕೂಲ ಬೋರ್ಡ
ಕಚೇರಿ, ಕಾರವಾರ, ತಾ ೧೮-೪-೫೦

ಪಿ. ಏ ಗುಡಿಸಾಗರ,
ಎಡ್ಮಿನಿಸ್ಟ್ರೇಟಿವ ಆಫೀಸರ ಮತ್ತು ಸೆಕ್ರೆಟರಿ ಸ್ಟಾಫ ಸಿಲೆಕ್ಷನ್ ಕಮಿಟಿ, ದಿ ಜಿಲ್ಹಾ ಬೋರ್ಡ, ಕಾನಡಾ.

ದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯ ಶ್ರೀರಾಮ ತನ್ನ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
[illegible]
ವರ್ಗಣಿಯು ಮುಂಗಡ ಕಟ್ಟತಕ್ಕದ್ದು

Reg. No. B 1270. Monday, 1-5-1950.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ [illegible]

ಕುಮಟಾ.— ಸೋಮವಾರ, ತಾ ೧—೫—೧೯೫೦

ಜಾಹೀರಾತುಗಳ ದರ
[illegible]
ಕೇಳಬಹುದು.

ಜಂಗಲ-ಪಟ್ಟಿಯ ನಿಯಮಗಳು ಹೇಗಿರಬೇಕು?

ಸರಕಾರದವರ ಜಂಗಲ-ಪಟ್ಟಿಯ ಸವಲತ್ತುಗಳ ನಿಯಮಗಳಲ್ಲಿರುವ ಲೋಪ-ದೋಷಗಳನ್ನು ನಾವು ಕಳೆದ ಸಂಚಿಕೆಯಲ್ಲಿ ಸ್ಥೂಲರೂಪದಿಂದ ನಿರ್ದೇಶಿಸಿದ್ದೇವೆ. ಆ ನಿಯಮಗಳಲ್ಲಿ ಹಾಕಲಾಗಿರುವ ವಿವಿಧ ನಿರ್ಬಂಧಗಳ ಮೂಲಕ ಆ ಸವಲತ್ತುಗಳ ಪ್ರಯೋಜನ ಪಡೆಯಲು ರೈತ-ಬಾಂಧವರು ಮುಂದಾಗುವದಿಲ್ಲೆಂಬುದನ್ನೂ ತೋರಿಸಿದ್ದೇವೆ. ಆ ನಿಯಮಗಳಲ್ಲಿ ಆಮೂಲಾಗ್ರ ಸುಧಾರಣೆಯಾಗಬೇಕು. ಅಂದರೆ ಮಾತ್ರ ಜಂಗಲ ಪಟ್ಟಿಯ ಸವಲತ್ತುಗಳ ಪ್ರಯೋಜನ ಪಡೆಯಲು ರೈತರು ಒಪ್ಪುವರು; ಬೆಟ್ಟದ ಬದಿಯ ಹೊಲ ಹಿತ್ತಲುಗಳ ಸಾಗುವಳಿಯನ್ನು ಆಸ್ಥೆಯಿಂದ ಸಾಗಿಸುವರು ಮತ್ತು ನಾಡಿನ ಆಹಾರ-ಸಂಪತ್ತಿಯ ವೃದ್ಧಿಯಿಂದ ಸಮೃದ್ಧಗೊಳಿಸಲು ಅಣಿಯಾಗುವರು. ಹಾಗಾದರೆ ಈ ನಿಯಮಗಳಲ್ಲಿ ಏನು ಸುಧಾರಣೆಯಾಗಬೇಕು, ನಿಯಮಗಳು ಹೇಗಿರಬೇಕು ಎಂದು ಯಾರಾದರೂ ಕೇಳಬಹುದು. ಅವರಿಗಾಗಿ ನಮ್ಮಲ್ಲಿಯ ಅನುಭವ-ವೃದ್ಧರೊಬ್ಬರು ತಯಾರಿಸಿರುವ ನಿಯಮಾವಲಿಯನ್ನು ಸಾದರಗೊಳಿಸುತ್ತೇವೆ.

ಜಂಗಲ ಪಟ್ಟಿಯ ಆದರ್ಶ ನಿಯಮಗಳು

"ಜಂಗಲ-ಪಟ್ಟಿಗಳನ್ನು ಕುರಿತು ಸರಕಾರವು ಈ ಹಿಂದೆ ಮಾಡಿದ ಮತ್ತು ಹೊರಡಿಸಿದ ಯಾವತ್ತೂ ಠರಾವುಗಳನ್ನು ರದ್ದುಗೊಳಿಸಿ, ಈ ಹೊಸ ಹುಕುಮನ್ನು ಹೊರಡಿಸುತ್ತಿದೆ. ಕಾನಡಾ ಜಿಲ್ಹೆಯ ಘಟ್ಟದ ಮೇಲಿನ ಎಲ್ಲ ತಾಲೂಕುಗಳಿಗೂ ಇದು ಅನ್ವಯಿಸುತ್ತದೆ.

೧ ಬೆಟ್ಟದ ಬದಿಯಲ್ಲಿ ಸಾಗುವಳಿಯ ಭೂಮಿಯುಳ್ಳ ಪ್ರತಿಯೊಬ್ಬ ಭೂಮಾಲಿಕನಿಗೂ ತನ್ನ ಹೊಲ-ಹಿತ್ತಲುಗಳ ಸುತ್ತ ಈ ಕೆಳಗಿನ ನಿಯಮಗಳಿಗನುಸಾರವಾಗಿ ಜಂಗಲ-ಪಟ್ಟಿ ಬೇಡಲು ಮತ್ತು ಪಡೆಯಲು ಹಕ್ಕುಂಟು.

೨ ಜಂಗಲ ಪಟ್ಟಿಯ ಅಗಲಳತೆ — (ಅ) ೨ ಎಕರೆಗಳನ್ನು ಮೀರದ ವಿಸ್ತೀರ್ಣವುಳ್ಳ ಮತ್ತು ಕನಿಷ್ಠ ೨ ಮನೆಗಳುಳ್ಳ ಜನವಸತಿಯ ಪ್ರದೇಶದ ಸುತ್ತು ಬಿಡಲಾಗುವ ಜಂಗಲ-ಪಟ್ಟಿಯು ೩ ಸರಪಣಿ ಅಗಲವಿರತಕ್ಕದ್ದು; ಮತ್ತು ಸಾಗುವಳಿಯ ಭೂಮಿಯ ಸುತ್ತಣ ಜಂಗಲ ಪಟ್ಟಿಯು — ಆ ಹೊಲವು ಬಂಟವಾಗಿರಲಿ ಯಾ ಬೇರೆ ಹೊಲಗಳಿಗೆ ಹೊಂದಿಕೊಂಡಿರಲಿ — ೧ ಸರಪಣಿ ಅಗಲವಿರಬೇಕು. (ಬ) ಜಂಗಲ ಪಟ್ಟಿಯ ಅಗಲಳತೆಯನ್ನು ಹೊಲದ ಸರಹದ್ದಿನ ಒಡ್ಡಿನ (ಬೆಟ್ಟದ ಬದಿಯ) [illegible] ಅಳೆಯತಕ್ಕದ್ದು.

೩ ಜಂಗಲ ಪಟ್ಟಿಗಳ ಸ್ವಚ್ಛತೆಯ ಕ್ರಮ [illegible] — ಜಂಗಲ ಪಟ್ಟಿಯ [illegible] ಧರೆ [illegible] ಯಾ ಕಿರು-ಬೆಟ್ಟದ [illegible] ಒಳಗಿನ ಎಲ್ಲ ಗಿಡ-ಮರಗಳನ್ನು ತನಗಿಷ್ಟಬಿದ್ದಂತೆ ಕಡಿದುಕೊಳ್ಳಲು ಪಟ್ಟಿ ಪಡೆದಾತನು ಸ್ವತಂತ್ರನಿರತಕ್ಕದ್ದು.

ಅಪವಾದಗಳು — (೧) ಜಂಗಲ ಪಟ್ಟಿಯಲ್ಲಿ [illegible] ಸಾಗವಾನಿ, ಸೀಸವು ಮತ್ತು ಗಂಧದ ಗಿಡಗಳನ್ನು ಹೊರತುಪಡಿಸಿ ಉಳಿದ ಎಲ್ಲ ಜಾತಿಯ ಗಿಡಮರಗಳನ್ನೂ ಗಿಡಗಂಟಿಗಳನ್ನೂ ಪಟ್ಟಿ ಪಡೆದಾತನು ಕಡಿದು ತೆಗೆಯಬಹುದು (೨) ಸದಾ ಹಸಿರಾಗಿ ಬೆಳೆಯುವ (evergreen) ಒಟ್ಟದಲ್ಲಿ ಜಂಗಲ-ಪಟ್ಟಿಗಳು ಒದಗಿದರೆ ಅವುಗಳೊಳಗಿನ ಗಿಡಗಂಟಿಗಳನ್ನು (under-growth) ಕಡಿದು ಕೊಳ್ಳತಕ್ಕದ್ದು. (೩) ಗುಂಡದ ತಪ್ಪಲಿನಲ್ಲಿ ನೀರಿನ ಹರಿವಿರುವಲ್ಲಿ ಸಾಗವಾನಿ, ಸೀಸವು ಮತ್ತು ಗಂಧದ ಗಿಡಗಳನ್ನು ಬಿಟ್ಟು ಉಳಿದಲ್ಲಿ ಗಿಡಮರಗಳನ್ನು ಕಡಿದುಕೊಳ್ಳಬಹುದು. ಆದರೆ ನೆಲವು ಒಡೆಯದಂತೆ (erosion ಆಗದಂತೆ) ಜಾಗ್ರತೆ ತೆಗೆದುಕೊಂಡು ಸ್ವಚ್ಛತೆಯ ಕೆಲಸ ಸಾಗಿಸಬೇಕು.

೪ ಜಂಗಲ ಪಟ್ಟಿಯ ಸ್ವಚ್ಛತೆಯನ್ನು ಯಾರು ಮಾಡಬೇಕು? — (ಅ) ಜನವಸತಿಯ ಪ್ರದೇಶದ ಸುತ್ತಲಿನ ಜಂಗಲ ಪಟ್ಟಿಯ ಸ್ವಚ್ಛತೆಯ ಕಾರ್ಯವನ್ನು ಹೊಣೆಯನ್ನು ಆ ಪ್ರದೇಶದ ನಿವಾಸಿಗಳು ಸಂಘಟಿತ ಸಹಕಾರಿ ಸಂಸ್ಥೆಗೆ ಬಿಟ್ಟುಕೊಡಬೇಕು. (ಬ) ಅಂಥ ಸಂಘ ಸಂಸ್ಥೆಗಳು ಇಲ್ಲದಲ್ಲಿ ಯಾ ಅವು ಆ ಕೆಲಸ ಕೈಕೊಳ್ಳಲು ಒಪ್ಪದಿದ್ದಲ್ಲಿ ಜಂಗಲ ಕಾಯುವವರೇ ಸ್ವಚ್ಛತೆಯ ಕೆಲಸ ಮಾಡಬೇಕು. (ಕ) ಸಾಗುಭೂಮಿಯ ಸುತ್ತಲಿನ ಜಂಗಲ ಪಟ್ಟಿಯ ಸ್ವಚ್ಛತೆಯನ್ನು ಆಯಾ ಹೊಲ ದೊಡೆಯನೇ ನಿರ್ವಹಿಸತಕ್ಕದ್ದು.

೫ ಸ್ವಚ್ಛತೆಯ ಕಾರ್ಯ ನಿರ್ವಹಿಸಲು [illegible] ಪಟ್ಟಿಯೊಳಗಿನ ಎಲ್ಲ ಕಟ್ಟಿಗೆಯನ್ನು (ಸಾಗವಾನಿ, ಸೀಸವು ಮತ್ತು ಗಂಧ ಇವನ್ನಷ್ಟು ಬಿಟ್ಟು) ಪಟ್ಟಿಯ ಸ್ವಚ್ಛತೆ ಮಾಡಿದ ವ್ಯಕ್ತಿಗೆ ಯಾ ಸಂಘ ಸಂಸ್ಥೆಗೆ ಬಿಟ್ಟುಕೊಡಬೇಕು. (ಬ) ಪಟ್ಟಿಯ ಸ್ವಚ್ಛತೆ ಮಾಡುವಾಗ ಅಲ್ಲಿ ತಪ್ಪಿ ಒಳಗಿನ ಸಾಗವಾನಿ ಸೀಸವು ಯಾ ಗಂಧದ ಗಿಡಗಳಿಗೆ ಪೆಟ್ಟಾದರೆ ಇಲ್ಲವೆ ಅವು ಉರುಳಿ ಬಿದ್ದರೆ ಅವುಗಳ ಕಟ್ಟಿಗೆಯನ್ನು ಜಂಗಲ ಕಾಯುವವರು ತಕ್ಕೊಳ್ಳತಕ್ಕದ್ದು. (ಕ) ಜಂಗಲ ಪಟ್ಟಿಯಲ್ಲಿ ಕಡಿದು ತೆಗೆದ ಯಾವ ಕಟ್ಟಿಗೆಯನ್ನೂ — ಸಾಗವಾನಿ-ಸೀಸವು-ಗಂಧಗಳು ಹೊರತಾಗಿ — [illegible] ಯಾ ಅದರ ವಿಲೆ ಮಾಡಲು [illegible] ಜಂಗಲ ಕಾಯುವವರು ಯಾವದೇ ಬಗೆಯ [illegible] ಯಾ ಆತಂಕ ಮಾಡಕೂಡದು.

೬ ಜಂಗಲ ಪಟ್ಟಿಯ [illegible] ಕೂಡಲೆ ಪಟ್ಟಿ ಪಡಕೊಂಡವನ ಸರಕಾರಕ್ಕೆ ಒಂದು [illegible] ಬರೆದುಕೊಟ್ಟು, (೧ [illegible] ಪಟ್ಟಿಯ ಸ್ವಚ್ಛತೆಯನ್ನು ಮಾಡುವನು [illegible] ಅದನ್ನು ಪ್ರತಿ ವರ್ಷ ಸ್ವಚ್ಛತೆ ಮಾಡುತ್ತ, ಸ್ವಚ್ಛವಾಗಿಡುವೆನೆಂದೂ (೨) ಪಟ್ಟಿ ಸಿಕ್ಕ ನಂತರ [illegible] ವರ್ಷ ಅದರಲ್ಲಿ ಸವಣಿ (ನಾಗಲಿ) ಯನ್ನು ಬಿತ್ತುವೆನೆಂದೂ, ಆ ಮುಂದೆ ತನಗೆ ಇಷ್ಟಬಂದ ಬೇರೆ ಬಗೆಯ ಧಾನ್ಯವನ್ನಾಗಲಿ ಹುಲ್ಲನ್ನಾಗಲಿ ಬೆಳೆಸುವೆನೆಂದೂ, (೪) ಪಟ್ಟಿಯೊಳಗಿರುವ ಸಾಗವಾನಿ, ಸೀಸವು ಮತ್ತು ಗಂಧದ ಗಿಡಮರಗಳನ್ನು ಸುರಕ್ಷಿತವಾಗಿಡುವೆನೆಂದೂ, (೫) ಜಂಗಲ-ಸ್ವಚ್ಛತೆಯ ಬಗ್ಗೆ ಆಗಾಗ [illegible] ಪ್ರಸಂಗದಲ್ಲಿ ಆ ಬಗ್ಗೆ ಜಂಗಲ ಅಧಿಕಾರಿಗಳು [illegible] ಅವರ ಪರವಾನಗಿಯಿಂದ [illegible] ಕೊಡಬಹುದಾದ ಸೂಚನೆಗಳಿಗನುಸಾರ ನಡೆಯುವೆನೆಂದೂ, (೬) ನದಿಯಂತೆ [illegible] ಸಾಮಾನ್ಯವಾಗಿ ಅಜಾಗ್ರತೆ ಮಾಡಿ ಸರಕಾರಕ್ಕೇನಾದರೂ ಹಾನಿ ಮಾಡಿದರೆ ಅದನ್ನು ತನ್ನ ಆಸ್ತಿಯ ಉತ್ಪನ್ನದಿಂದ ತುಂಬಿಕೊಡುವೆನೆಂದೂ, (೭) ಪಟ್ಟಿಯ ಗಡಿಕಲ್ಲುಗಳನ್ನು ಅಬಾಧಿತವಾಗಿ ಕಾಯುವೆನೆಂದೂ, (೮) ಕರಾರಿನ ಯಾವುದೇ ಶರತ್ತುಗಳನ್ನು ಉಲ್ಲಂಘಿಸಿ ನಡೆದಲ್ಲಿ ಜಿಲ್ಲಾಧಿಕಾರಿ ತನ್ನ ಜಂಗಲ ಪಟ್ಟಿಯ ಸವಲತ್ತನ್ನು ರದ್ದುಗೊಳಿಸಿ, ಜಂಗಲಪಟ್ಟಿಯ ಸ್ವಚ್ಛತೆಯಿಂದ ತಾನು ಪಡೆದಿರುವ ಪ್ರಯೋಜನವನ್ನು (ಅಂದರೆ ಕಡಿದ ಕಟ್ಟಿಗೆಯ ಬೆಲೆಯೊಳಗಿಂದ ಪಟ್ಟಿಯ ಸ್ವಚ್ಛತೆಯ ವೆಚ್ಚವನ್ನು ಕಳೆದು ಉಳಿಯುವ ಮೊಬಲಗನ್ನು) ಆತ್ಮಿಂದ ವಸೂಲ ಮಾಡಬಹುದೆಂದೂ ಬಂಧನಗಳನ್ನು ಹಾಕಿಕೊಳ್ಳಬೇಕಲ್ಲದೆ, ಈ ಬಗ್ಗೆ ಇಬ್ಬರು ಜವಾಬ್ದಾರ ಗೃಹಸ್ಥರ ಜಾಮೀನು ಕೊಡಬೇಕು (ಜಂಗಲ-ಪಟ್ಟಿಯ ಸ್ವಚ್ಛತೆಯಿಂದ ಸಿಗಬಹುದಾದ ಪ್ರಯೋಜನದ ರಕಮಿನಷ್ಟೇ ಭದ್ರತೆಕೊಟ್ಟರೆ ಸಾಕು)

೭ ಜಂಗಲ ಪಟ್ಟಿಯೊಳಗಿನ ಕಟ್ಟಿಗೆಯು ಬೆಲೆಯನ್ನೂ ಅದರ ಸ್ವಚ್ಛತೆಯ ವೆಚ್ಚದ ಅಂದಾಜನ್ನೂ ಜಂಗಲ ಅಧಿಕಾರಿಗಳು ಜಂಗಲ-ಪಟ್ಟಿಯ ಸ್ವಚ್ಛತೆಯ ಕೆಲಸಕ್ಕೆ ಪ್ರಾರಂಭವಾಗುವ ಮುಂಚೆಯೇ ಪಂಚರ ಸಹಾಯದಿಂದ ಕಟ್ಟತಕ್ಕದ್ದು.

೮ ಜಂಗಲ-ಪಟ್ಟಿಯಲ್ಲಿ ಪ್ರಥಮ ವರುಷದಲ್ಲಿ ಜಂಗಲ-ಪಟ್ಟಿ ಪಡಕೊಂಡಾತನು ಸವಣಿಯನ್ನು ಬಿತ್ತಬೇಕು, ಮುಂದೆ ಅವನು ಅದರಲ್ಲಿ ತನಗೆ ಬೇಕಾದ ಬೇರೆ ಬಗೆಯ ಧಾನ್ಯವನ್ನು ಇಲ್ಲವೆ ಹುಲ್ಲನ್ನು ಬೆಳೆಸಬಹುದು.

೯ ಜಂಗಲ ಪಟ್ಟಿ ಬೇಡಿ ಬಂದ ಅರ್ಜಿಗಳ [illegible] ಅರ್ಜಿಯ ಮಿತಿಯಿಂದ [illegible] ದಿನಗಳಲ್ಲಿ ಆಗತಕ್ಕದ್ದು.

೧೦ [illegible] ನಿಯಮ [illegible] (೬) ರಲ್ಲಿಯ ಜಂಗಲ ಕಾಯುವವರೇ ಜಂಗಲ ಪಟ್ಟಿಯನ್ನು ಸ್ವಚ್ಛಗೊಳಿಸಬೇಕಾದ ಪ್ರಸಂಗದಲ್ಲಿ ಜಂಗಲ ಕಾಯುವವರು [illegible] ಸ್ವಚ್ಛತೆಯನ್ನು ಸಕಾಲದಲ್ಲಿ ಮಾಡಬೇಕಲ್ಲದೆ, ಪಟ್ಟಿಗೆ ಹೊಂದಿಕೊಂಡಿದ್ದ ಹೊಲದ ಮಾಲಿಕನು [illegible] ಪ್ರತಿ ವರ್ಷ ಅದನ್ನು ಸ್ವಚ್ಛಗೊಳಿಸಬೇಕು. ಈ ಸ್ವಚ್ಛ

ಪೋಲೀಸರಿಗೆ ಒಪ್ಪಿಸಿಕೊಟ್ಟರೆಂತಲೂ ಸಂಪೂರ್ಣ ಮದ್ಯ ಪ್ರತಿಬಂಧ ಅಮಲಿನಲ್ಲಿ ಬಂದ ದಿನದಿಂದ ಈ ವರೆಗಿನ ೩ ವರ್ಷಗಳಲ್ಲಿ ಕಳ್ಳ ಸರಾಯಿ ಮಾಡಿದ ಆರೋಪದನ್ವಯ ಪೋಲೀಸರು ೧೦ ಜನರ ಮೇಲೆ ಪ್ರಕರಣ ನಡೆಸಿರುತ್ತಾರೆ.

(ತಾ. ೨೪—೪— ...) ... ದಿವಾಣಿ ನ್ಯಾಯಾಧೀಶರಂತೆ ... ಒಡೆಯ ... ದಿವಾಣಿ ನ್ಯಾಯಾಲಯಗಳಿಗೆ ಹೊಸ ಟಿಪ್ಪಣಿ ... (೧೯೪೮ರಿಂದ) ... ಒಂದು ... ಕೊಟ್ಟಿರುತ್ತಾರೆ.

ಈ ವರ್ಷದ ಮ್ಯಾಟ್ರಿಕ ಪರೀಕ್ಷೆಯಲ್ಲಿ ... ಕನ್ನಡ ಶಾಲೆಯಿಂದ ಕೂಡಿ ... ವಿದ್ಯಾರ್ಥಿಗಳಲ್ಲಿ ೧೫ ಮಂದಿ ... ವಿದ್ಯಾರ್ಥಿಗಳಲ್ಲಿ ... ಉತ್ತೀರ್ಣರಾಗಿದ್ದಾರೆ. ಈ ... ಫಲಿತಾಂಶದ ... ಶಿಕ್ಷಕ-ಶಿಕ್ಷಕಿಯರಿಗೆ ... ಮಾಡಿದಂತಾಗಿದೆ.

... ವಿದ್ಯಾರ್ಥಿಗಳಿಗೆ ... ವಿದ್ಯಾರ್ಥಿ-ವೇತನ ಕೊಟ್ಟು ವಿದ್ಯಾರ್ಜನೆಗೆ ಪ್ರೋತ್ಸಾಹ ಕೊಡುವದು, (೨) ... ಬಟ್ಟೆಗಳನ್ನು ... (೩) ... ಮದ್ಯಪಾನನಿರೋಧನ ಕಾರ್ಯಕ್ಕೆ ನೆರವನ್ನೀಯುವದು, (೪) ... ಸಂಸ್ಥೆಗಳನ್ನು ... ಮುಂತಾದ ಉದ್ದೇಶಗಳನ್ನು ಸಾಧಿಸುವದಕ್ಕಾಗಿ ... ಸಂಸ್ಥೆಯ ಉದ್ದೇಶಗಳು ... ಸಹಾಯ ನೀಡಬೇಕಾಗಿ ಕೇಳಿಕೊಂಡಿದೆ.

... ಸಂಸ್ಥೆಯವರು ... ಬಾಂಧವರಲ್ಲಿ ಮದ್ಯ ನಿರೋಧನದ ಪ್ರಚಾರ ಮಾಡುವದಕ್ಕಾಗಿ ಒಂದು ... ಬಗ್ಗೆ ... ಜನರ ... ಬೇಗನೆ ... ಮಾಡುತ್ತಾರೆ.

(ತಾ. ೧೩—೪—೫೦) ನವಲಗುಂದದಲ್ಲಿ ... ಪ್ರಯಾಣಿಕರನ್ನು ಬಂಡಿಗಳಲ್ಲಿ ... ನವಲಗುಂದ ... ವಿಶೇಷ ... ೩೦—೬—೫೦ರ ವರೆಗೆ ... ತಿಳಿಸುತ್ತಾರೆ.

... ತಾ. ೨೫ ಮತ್ತು ... ಎಂಬ ... ಸಮಾಜ ... ಈ ... ೫೦೦ ... ಕರೆಯುತ್ತದೆ.

ಅಂಕೋಲಾ— ... ತಿಂಗಳಲ್ಲಿ ಈ ತಾಲೂಕಿನ ೪೦ ಹಳ್ಳಿಗಳಲ್ಲಿ ಪ್ರಾರಂಭಿಸಲ್ಪಟ್ಟ ಸರ್ವೋದಯ ...

... ಕಾರ್ಯಕರ್ತರು ... ಸಂಚಾಲಕರು ... ಪ್ರಕಟಿಸಿದ್ದಾರೆ. ... ತಿಂಗಳಲ್ಲಿ ... ಗ್ರಾಮೋದ್ಯೋಗಗಳ ... ಸರ್ವೋದಯ ... ಕಾರ್ಯಕ್ಕೆ ... (೧) ಒಂದು ... (೨) ... (೩) ... (೪) ... (೫) ... (೬) ... (೭) ... (೮) ... (೯) ... (೧೦) ಹಳ್ಳಿಗಳಲ್ಲಿ ... ಸರ್ವೋದಯ ... ಕಾರ್ಯಕರ್ತರು ... ಇದೇ ಮೇ ತಿಂಗಳಲ್ಲಿ ... ಸರ್ವೋದಯ ಕಾರ್ಯಕರ್ತರ ...

... ಯೋಜನೆಯನ್ನು ... ಮುಂಬಯಿ ... ಪ್ರಧಾನ ... ನಿಮಂತ್ರಿಸಲಿದೆ.

... ತಿಂಗಳ ಹಿಂದೆ ... ೧೦ ಜನರ ... ಪ್ರಕರಣವನ್ನು ... ಮಾಡಲು ... ಸಂಬಂಧಕರನ್ನು ... ಪ್ರಾಯಶ್ಚಿತ್ತ ... ಕೊಡುವ ...

ಹೊನ್ನಾವರ—(ತಾ. ೨೨—೪—೫೦) ... ಪೋಲೀಸ ... ಹೊನ್ನಾವರ ... "ಪ್ರೊಹಿಬಿಶನ್ ಪ್ರೊಟೆಕ್ಟ" ... ಮುಂದೆ ... ಮಾಡುವರು ...

ಈ ತಾಲೂಕಿನ ... ವಿಳಂಬವಾಗಿ ... ತಾಲೂಕಿನ ... ಬಿಟ್ಟ

(೭ ನೆ ಪುಟ ನೋಡಿರಿ)

ಜಾಹೀರ ಲಿಲಾಂವು.

ಕೆಳಗೆ ನಮೂದಿಸಿದ ಪೋಸ್ಟ ಡಿಪೋಗಳಲ್ಲಿ ... ಎದುರಿಗೆ ತೋರಿಸಿದ ತಾರೀಖುಗಳಲ್ಲಿ ... ಲಿಲಾಂವು ...

ಡಿಪೋ	ತಾರೀಖು	ವೇಳೆ
... ಮತ್ತು ...	೧೫—೫—೫೦ ವ ೧೬—೫—೫೦	ಮುಂಜಾನೆ ೯ ಘಂಟೆಗೆ
...	೧೭—೫—೫೦	,, ,,
...	೧೯—೫—೫೦ ವ ೨೦—೫—೫೦	,, ,,
...	೨೨—೫—೫೦	,, ,,

... ಬಂದ ...

ಧಾರವಾಡ, ತಾ. ೨೧—೪—೫೦

ಎಸ್. ಎಸ್. ಕಾರ್ಯಕರ್ತೆ.

... ಆಫೀಸರ, ... ಧಾರವಾಡ

ಇದನ್ನು ಪಾಂಡುರಂಗ ಕೃಷ್ಣ ... (ಸಂಪಾದಕ) ಇವರು ... ಪ್ರಿಂಟಿಂಗ ... ಪ್ರಕಟಿಸಿದರು

ಕೆ ಡತ್ಕ್ಷದ ... ಎಣ್ಣೆಯ ಕಂಪನಿಗಳ ಪ್ರತಿನಿಧಿಗಳಿಗೆ ಪತ್ರ ತಿಳಿಸಿ, ... ಇಳಿಸಿದಾಗ ನಮ್ಮ ನಿಯಂತ್ರಣ ಅಧಿಕಾರಿಗಳು ... ಎಣ್ಣೆಯ ... ಧಾರಣೆಗಳನ್ನು ಇಳಿಸಿ ... ಗಳನ್ನು — ... ಗಳನ್ನು — ... ಕಂಪನಿಗಳು ... ಗೆ ಕೊಡುತ್ತಿದೆ! ... ಗಳನ್ನು ಇಳಿದಾಗ ... ಇಳಿಸಬರುತ್ತದೆಂಬ ... (೩) ಸಕ್ಕರೆಯ ರೋಕ ಹಂಚಿಕೆಗಾರರಿಗೆ ಸಕ್ಕರೆ ಪೂರೈಸುವಾಗ ಸಕ್ಕರೆಯ ಚೀಲಗಳನ್ನು ತೂಗಿ ಕೊಡುವ ವ್ಯವಸ್ಥೆಯಿಲ್ಲ ಚೀಲದಲ್ಲಿರಬೇಕಾದಷ್ಟು ಸಕ್ಕರೆ ಅದರಲ್ಲಿದೆಯೆಂದೇ ನಂಬಿಸಿ ಅವರು ಅವನ್ನು ಸ್ವೀಕರಿಸಬೇಕಂತೆ! ... ಸಕ್ಕರೆಯ ಚೀಲಗಳಿಗೆ ... ತಕರಾರು ಮಾಡಕೂಡದು! ಬದಲಿ ... ವಿಕೆಗಾರರಿಗೆ ಸಕ್ಕರೆ ಕೊಡುವಾಗ ಮಾತ್ರ ಚೀಲಗಳನ್ನು ತೂಗಿ ಕೊಡಬೇಕಂತೆ! ಈ ವ್ಯವಹಾರದಲ್ಲಿ ಕೊರತೆ ಬರುತ್ತಿರುವದರಿಂದಲೇ ಅನುಭವಿಕರು ಸಕ್ಕರೆಯ ರೋಕ ಹಂಚುವಿಕೆಗಾರರಾಗಲು ಒಪ್ಪುವದಿಲ್ಲ! (೪) ಮುಂಬಯಿಯಿಂದ ಸಕ್ಕರೆ ಕಾರವಾರಕ್ಕೆ ಬರುತ್ತಿದೆ ಅಲ್ಲಿಂದ ಅದು ಮುಂದೆ ಯಲ್ಲಾಪುರ, ಹಳಿಯಾಳ ಊರುಗಳಿಗೆ ಮೋಟಾರ ಬಂಡಿಗಳಲ್ಲಿ ಮುಟ್ಟಿಸಲ್ಪಡುತ್ತಿದೆ ಅದರಿಂದ ಕಾರವಾರದ ರೋಕ ದರಕ್ಕೂ ಯಲ್ಲಾಪುರ-ಹಳಿಯಾಳಗಳೊಳಗಿನ ರೋಕ ದರಗಳಿಗೂ ... ಬಾಡಿಗೆಯ ... ಅಂತರವಿರಬೇಕಾದುದು ... ಕಾರವಾರದಿಂದ ಯಲ್ಲಾಪುರ ೬೦ ಮೈಲು ಮತ್ತು ಹಳಿಯಾಳ ೯೦ ಮೈಲು ಆಗುತ್ತಿದೆ ಚೀಲ ೧ನ್ನು ಕಾರವಾರದಿಂದ ಯಲ್ಲಾಪುರಕ್ಕೆ ತಲ್ಪಿಸಲು ಸರಾಸರಿ ... ರೂ ಮತ್ತು ಹಳಿಯಾಳಕ್ಕೆ ತಲ್ಪಿಸಲು ... ರೂ ವೆಚ್ಚ ಬರುತ್ತಿದೆ ಇದರಿಂದ ಕಾರವಾರದಲ್ಲಿ ಚೀಲ ೧ಕ್ಕೆ ರೂ ... ದರ ಇಟ್ಟರೆ ಯಲ್ಲಾಪುರದಲ್ಲಿ ಅದನ್ನು ರೂ ... ಯಾ ... ಇಡಬಹುದಾಗಿತ್ತು, ಹಳಿಯಾಳದಲ್ಲಿ ... ಯಾ ... ಇಡಬಹುದಾಗಿತ್ತು ಆದರೆ ನಮ್ಮ ನಿಯಂತ್ರಣಾಧಿಕಾರಿಗಳು ಯಲ್ಲಾಪುರದಲ್ಲಿ ಆ ದರವನ್ನು ರೂ ... ಮತ್ತು ಹಳಿಯಾಳದಲ್ಲಿ ರೂ ... ಇಟ್ಟಿರುತ್ತಾರೆ! ಕಾರವಾರದಿಂದ ... ರೂ ವೆಚ್ಚದಲ್ಲಿ ೬೦ ಮೈಲು ನಡೆದು ಯಲ್ಲಾಪುರಕ್ಕೆ ಹೋಗುವ ಸಕ್ಕರೆಯನ್ನು ಮುಂದೆ ೩೦ ಮೈಲು ಅಂತರ ದಾಟಿ ಹಳಿಯಾಳಕ್ಕೆ ಸಾಗಿಸಲು ರೂ ... ಬರುತ್ತದೆಂಬ ... ಇಂತಹ ಅದ್ಭುತ ಪ್ರಕಾರಗಳ ... ನಿಯಂತ್ರಣಗಳು ... ವಾಗಿವೆ

ಸ್ಥಾನಿಕ ವೃತ್ತಾಂತ.

[illegible]— [illegible]

[illegible]

ಗಿಬ್ಬ ಹಾಯಸ್ಕೂಲಿನ ... [illegible] ... " ಸಂಯುಕ್ತ ಕರ್ನಾಟಕ " ಪತ್ರಿಕೆಯ ... ಸಂಪಾದಕ ... [illegible] ... ವಿದ್ಯಾರ್ಜನೆ ಮಾಡಬೇಕೆಂದೂ ... [illegible]

[illegible] ... ಕಾಂಗ್ರೆಸ್ ... [illegible]

[illegible]

[illegible]

[illegible] ... ವಿದ್ಯಾರ್ಥಿಗಳಲ್ಲಿ ... [illegible]

[illegible] ... ವಿದ್ಯಾರ್ಥಿ ... [illegible]

KANARA COLLEGE KUMTA

Admissions to the F Y Arts & Science classes and Inter Arts & Science classes are now open students seeking admission are to apply on prescribed forms available from the College Office

Principal

ನಾಯಕವಾಡಿ ಎಸೋಸಿಯೇಟೆಡ್ ಇಂಡಸ್ಟ್ರೀಸ್, ಲಿ.

ಉತ್ತರ ಕಾನಡಾ ಜಿಲ್ಲೆಯ ಕರಾವಳಿ ತಾಲೂಕುಗಳೊಳಗಿನ ... ಮರಗಳನ್ನು ೨೦ ವರ್ಷಗಳ ಅವಧಿಯ ಮಟ್ಟಿಗೆ ಮುಂಬಯಿ ಸರಕಾರದಿಂದ ನಮ್ಮ ಕಂಪನಿಯ ಡ್ಯಾರೆಕ್ಟರರು ಪಡಕೊಂಡು ... ಮಾಡಿಕೊಂಡಿರುತ್ತಾರೆಂದೂ, ... ಆ ಬಗ್ಗೆ ಮುಂಬಯಿ ಸರಕಾರದೊಡನೆ ಕರಾರು ಸಹ ಮಾಡಿಕೊಂಡಿರುತ್ತಾರೆಂದೂ ... ಯಂತ್ರಗಳ ಸಹಾಯದಿಂದ ... ಪದ್ಧತಿಯಿಂದ ... ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಕಾರ್ಯವು ... ಸಾಗಿದೆಂದೂ ತಿಳಿಸಲು ತುಂಬಾ ಸಂತೋಷವಾಗುತ್ತದೆ ... ಸರಕಾರವು ಹೊನ್ನಾವರ ತಾಲೂಕಿನ ... ಗ್ರಾಮದ ... ಅನಂತವಾಡಿಯಲ್ಲಿ ೧೦ ಎಕರೆಗಳಷ್ಟು ಸ್ಥಳವನ್ನು ದಯಪಾಲಿಸಿರುತ್ತಾರೆ, ಅಲ್ಲೇ ... ಕಾರಖಾನೆಯನ್ನು ತೆರೆಯಲಾಗುವದು

ಮೆನೇಜಿಂಗ ಡ್ಯಾರೆಕ್ಟರ

[illegible]

ವಿಶ್ವ, ಈ ಸಲಿಗೆಯನ್ನು ನಿಲ್ಲಿಸಬೇಕಾಗಿ ಅರಿಕೆಯಿದೆ.

ಗೇರಸೊಪ್ಪ ಮಾವಿನಗುಂಡಿ ರಸ್ತೆ ಪೂರ್ತಿ ಹಾಳಾಗಿ ಹೋಗಿದೆ. ಅಲ್ಲಲ್ಲಿಯ ಸಂಕಗಳು ಜೀರ್ಣವಾಗಿವೆ। ರಸ್ತೆಯ ಮಗ್ಗಲುಗಳಲ್ಲಿ ಮರಗಳು ಒಣಗಿವೆ। [illegible] ಅದರ ದುರುಸ್ತಿಗಾಗಿ ಸಂಗ್ರಹಿಸಿಟ್ಟ [illegible] ಈಗ ಮಳೆಯಲ್ಲಿ [illegible] ಆರಂಭಿಸಿದೆ। [illegible] ಎಲ್ಲಿದ್ದಾರೋ ಏನೋ!

ಹೊನ್ನಾವರ [illegible]

[illegible]

ಜಿಲ್ಲಾ ಸಮಾಚಾರ.

[illegible]

THE BOMBAY MUTUAL LIFE ASSURANCE SOCIETY LTD

Bombay Mutual Bldg

Fort Bombay

NOTICE having been given of the loss of Policy No 72708 on the life of Mr Krishna Nagappa Shet of Kallabbe Taluka Kumta duplicate policy will be issued unless objection is filed with the undersigned within one month from this date

T C KAPUR

Date 1—5—1950 Manager

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ಮಧ್ಯಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟೆಂಡ, ಹುಬ್ಬಳ್ಳಿ.

ವಿ ಸೂಚನೆ — [illegible]

ಮಾಲಕ:— ಮ್ಯಾನೇಜರ್ ಪೈ.

ತೆಯ ಕಾರ್ಯವು ನವಂಬರ ಮತ್ತು ಏಪ್ರಿಲ ತಿಂಗಳ ನಡುವೆ ನಡೆಯಬೇಕ.

೧೧ ಜಂಗಲ-ಪಟ್ಟಿಯ ಸಂಬಂಧದಲ್ಲಿ ಸರಕಾರಕ್ಕೂ ಪಟ್ಟೆಯನ್ನು ಪಡೆದ ತನಗೂ ವಿವಾದವುಂಟಾದಲ್ಲಿ ಅದನ್ನು ಪಂಚಾಯತಿಯಿಂದ ತೀರ್ಮಾನಿಸಿಕೊಳ್ಳಬೇಕು.

೧೨ ಪಟ್ಟೆಯನ್ನು ಪಡೆದಾತನು ತನ್ನ ಕರಾರಿನಂತೆ ನಡೆಯದಿದ್ದರೆ ಇಲ್ಲವೆ ಜಂಗಲ-ಪಟ್ಟಿಗೆ ಸಂಬಂಧಪಟ್ಟ ಹೊಲವನ್ನು ಸಾಗುಮಾಡದೆ ಬಂಜರ ಕೆಡವಿದರೆ ಅವನ ಜಂಗಲ-ಪಟ್ಟೆಯ ಸವಲತನ್ನು ಜಿಲ್ಲಾಧಿಕಾರು ರದ್ದುಗೊಳಿಸಿ, ಅವನ ಪಡೆದಿರತಕ್ಕ ದಾದ ಪ್ರಯೋಜನವನ್ನು ಒಪ್ಪಿಸಿ [illegible] ಪಡೆಯಬಹುದು.

ಸರಕಾರದವರು ಈ ನಿಯಮಾವಲಿಯನ್ನು ಮಾನ್ಯ ಮಾಡಿ ಒದಗಿಸಿದ ಹುಕುಮು ಹೊರಡಿಸ ಬಹುದಾಗಿ ಸೂಚನೆಯಿದೆ.

ಸ್ಥಳಿಕ ವಿಷಯಗಳು.

(ಲೇಖಕ ಸ್ವರ್ಣಕಾರ)

ದೇಶದಲ್ಲೆಲ್ಲ ಈವಾಗ ಬರುವ ಚುನಾವಣೆಗೆ ಪೂರ್ವಾಂಗವೆಂದು ಮತದಾರ ಯಾದಿಗಳ ಸಿದ್ಧತೆ ನಡೆದಿದೆ. ಈ ಚುನಾವಣೆಯಲ್ಲಿ ಸಕಲ ಪ್ರಾಯಸ್ಥ ಸ್ತ್ರೀಪುರುಷರಿಗೆ ಮತದಾನದ ಹಕ್ಕು ಸಿಕ್ಕಿದುದೆಂಬುದನ್ನು ಓದುಗರು ಬಲ್ಲರು. ಇದೀ ಹಿಂದುಸ್ಥಾನದಲ್ಲಿ ಸುಮಾರು ೧೭ ಕೋಟಿ ಮತದಾರರಾಗುವರು. ನಮ್ಮ ಜಿಲ್ಹೆಯ ಮತದಾರರ ಸಂಖ್ಯೆಯೇ ೨೫ ಲಕ್ಷದ ಸಮೀಪ ಬರುತ್ತಿದೆ. ಈ ಎಲ್ಲ ಮತದಾರರ ಯಾದಿಯು—ಪುಟ ೧ರ ಮೇಲೆ ೩೦ ಮತದಾರರ ಹೆಸರುಗಳನ್ನು ಮುದ್ರಿಸಿದಾಗ್ಯೂ— ೬೫೦೦ "ಫೂಲಸ್ಕೇಪ" ಕಾಗದದ ೬೫೦೦ ಪುಟಗಳದ್ದಾಗುವದು. ಮತದಾರ ಯಾದಿಗಳ ಮುದ್ರಣವನ್ನು ಬರುವ ಜೂನ ತಿಂಗಳ ಕೊನೆಯೊಳಗಾಗಿ ಮುಗಿಸಬೇಕೆಂದು ಸರಕಾರದ ಸಂಕಲ್ಪವಾಗಿದೆ. ಕ್ಲುಪ್ತ ಕಾಲದಲ್ಲಿ ಈ ಮುದ್ರಣ ಕಾರ್ಯವನ್ನು ಮುಗಿಸಬೇಕಾದರೆ ದೇಶದೊಳಗಿನ ಸಕಲ ಮುದ್ರಣಾಲಯಗಳ ಸಹಕಾರ ಬೇಕಾಗುವದೆಂದು ಸರಕಾರಿ ಅಧಿಕಾರಿಗಳು ಒಪ್ಪಿಕೊಂಡಿದ್ದರು. ನಮ್ಮಲ್ಲಿಯ ಅಧಿಕಾರಿಗಳ ಈ ಬಗ್ಗೆ ಸ್ಥಾನಿಕ ಮುದ್ರಣಾಲಯಗಳ ಒಡೆಯರಿಗೆ ೩-೪ ತಿಂಗಳ ಹಿಂದೆ ಪತ್ರಗಳನ್ನು ಬರೆದು ಅವರಿಂದ ಮುದ್ರಣ ದರದ ಟೆಂಡರುಗಳನ್ನು ಸಹ ಬೇಡಿದ್ದರೆಂದು ತಿಳಿಯುತ್ತದೆ. ಆಗ ಕುಮಟೆಯೊಳಗಿನ ಮೂರು ಮುದ್ರಣಾಲಯಗಳ ಒಡೆಯರು ಫೂಲಸ್ಕೇಪ ಆಕಾರದ ಪುಟಗಳಿಗೆ ೮೦ ರಂತೆ ದರ ತಿಳಿಸಿ, ತಾವು ತಮ್ಮಿಂದಾಗುವಷ್ಟು ಮುದ್ರಣ ಮಾಡಿಕೊಡಲು ಸಿದ್ಧರಿದ್ದೇವೆಂದೂ ತಿಳಿಸಿದ್ದರಂತೆ. ಆದರೂ ನಮ್ಮ ಜಿಲ್ಹೆಯ ಮತದಾರ ಯಾದಿಗಳ ಮುದ್ರಣದ ಕೆಲಸವನ್ನು ನಮ್ಮ ಜಿಲ್ಹೆಯ ಮುದ್ರಣಾಲಯಗಳಿಗೆ ಒಪ್ಪಿಸದೆ ಸರಕಾರದವರು ಅದನ್ನು ಧಾರವಾಡದೊಳಗಿನ ಮುದ್ರಣಾಲಯಗಳಿಗೆ — ಅದೂ ಪುಟಗಳಿಗೆ ರೂ [illegible] ರಂತೆ ದರ ಕೊಡುವ ಮಾತು ಮಾಡಿ! — ಒಪ್ಪಿಸಿರುತ್ತಾರೆಂದು ತಿಳಿಯುತ್ತದೆ! ಪ್ರಜೆಗಳ ಮಾತನ್ನಾಡುವ ಮತ್ತು ಹೆಚ್ಚಿನ ಜನರ ಹೆಚ್ಚಿನ ಸುಖಕ್ಕಾಗಿ ರಾಜ್ಯವನ್ನಾಳುವ ಹವ್ಯಾಸ ಹಿಡಿದಿರುವ ಮುಂಬಯಿಯ "ಜನತಾ-ಸರಕಾರ"ದ ಅಧಿಕಾರಿಗಳು ಈ ಪರಿ ನಮ್ಮ ಜಿಲ್ಹೆಯ ಮುದ್ರಣಾಲಯಗಳನ್ನು ಕತ್ತಲೆಯಲ್ಲಿ

ಹಾಕಿ ಧಾರವಾಡದ ಮುದ್ರಣಾಲಯಗಳಿಗೆ ಈ ರೀತಿ ಭಾರಿ ದರಗಳನ್ನು ಕೊಟ್ಟು [illegible] ಹವನ್ನು ಮಾಡಿದ [illegible] ಚಿಕಿತ್ಸೆಯಾಗಬೇಕು. ಆವಶ್ಯಕವುಂಟು. ಈ [illegible] ಇಲ್ಲವೆ [illegible] ವಿಷಯವನ್ನು? ಪ್ರತಿ ಪುಟಕ್ಕೆ ರೂ [illegible] ಯಂತೆ ದರ ಹೆಚ್ಚಿಗೆ ಕೊಟ್ಟದರಿಂದ [illegible] ಪುಟಗಳಿಗೆ [illegible] ರೂ [illegible] ಹೆಚ್ಚಿಗೆ [illegible] ಕೊಡಬೇಕಾಗುವದ [illegible] ಅನವಶ್ಯಕವಾಗಿ [illegible] ಬಡ [illegible] ಎಂಬುದರ [illegible] ಬಗೆ [illegible] ರೀತಿ ಈ [illegible] ರೂ [illegible] ಅಗು ವದು [illegible] ಸರಕಾರದ ಪ [illegible] ಮಂತ್ರಿಗಳೂ ಗ್ರಹಮಂತ್ರಿಗಳೂ ಈ [illegible] ವನ್ನು ಮಾಡಿಸುವ ರೆಂದು ಆಶಿಸಬಹುದೇ?

* *

ಈವಾಗ ದಿಲ್ಲಿಯಲ್ಲಿ ಪ್ರಮುಖ ರಾಜಕಾರಣಿಗಳು ನಿಯಂತ್ರಣಗಳ [illegible] ಮಾತನ್ನು ಆಡುತ್ತಿದ್ದಾರೆ. ಕಮ್ಯುನಿಸ್ಟ ಖಾತೆಯಲ್ಲಿ ಮತ್ತು ಅಧಿಕಾರಸ್ಥರಲ್ಲಿ ಸಿಗುತ್ತಿದ್ದ [illegible] ಇಮ್ಮಡಿ, ಮೂಮ್ಮಡಿ ಸಾಕ್ಕಡಿ ವೇತನವನ್ನು ಪೂರ್ತಿಕೆ ಮತ್ತು ನಿಯಂತ್ರಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಹಾಗೂ ನಿಯಂತ್ರಣಗಳಿದ್ದುದರಿಂದ ವ್ಯಾಪಾರ [illegible] ವ ಮತ್ತು ನಿಯಂತ್ರಣಗಳು ರದ್ದಾದ ಮರುದಿನ ವ್ಯಾಪಾರ ಉದ್ಯೋಗವಿಲ್ಲದೆ ನಿರುದ್ಯೋಗಿಯಾಗಿ ಅಲೆಯಬೇಕಾಗುವ ಮಹಾನುಭಾವರು ಮಾತ್ರ ನಿಯಂತ್ರಣಗಳು ಮುಂದರಿಯಬೇಕೆಂದು ವಾದಿಸುತ್ತಿರುವರೆಂದು ವರದಿಯಾಗಿದೆ. ನಿಯಂತ್ರಣವಿದ್ದಲ್ಲಿ ಕಳ್ಳಪೇಟೆ, ಕಳ್ಳಾಟಿಕೆ, ಸುಳ್ಳು ಓಕೆ, ಭ್ರಷ್ಟಾಚಾರ ಮುಂತಾದ ಅನಿಷ್ಟ ಪ್ರಕಾರಗಳುದ್ಭವಿಸುತ್ತವಾದ್ದರಿಂದ, ಆ ಅನಿಷ್ಟ ಮತ್ತು ಅಸಂತೃಪ್ತಿಕಾರಕ ಪ್ರವೃತ್ತಿಗಳಿಗೆ ತಡೆಹಾಕುವ ದೃಷ್ಟಿಯಿಂದಲಾದರೂ ನಿಯಂತ್ರಣಗಳನ್ನು ರದ್ದುಗೊಳಿಸಬೇಕೆಂಬ ವಿಚಾರ-ಸರಣಿಯೂ ಮುಂದೆ

ಬಂದಿದೆ. ನಿಯಂತ್ರಣಗಳ ಉಚ್ಚಾಟನೆಯಿಂದ ಕೆಲವೊಂದು ಕೊರತೆಯುಳ್ಳ ವಸ್ತುಗಳು ಕೆಲವು ಕಾಲ ತುಟ್ಟಿಯಾಗಿ ಕೆಲವು ಜನರಿಗೆ ಕಷ್ಟಗಳಾಗಬಹುದು. ಆ ಕಷ್ಟಗಳನ್ನು ತಪ್ಪಿಸುವದಕ್ಕಾಗಿ ನಿಯಂತ್ರಣಗಳನ್ನು ಮುಂದರಿಸಿ ಕಳ್ಳಪೇಟೆ, ಕಳ್ಳಾಟಿಕೆ, ಭ್ರಷ್ಟಾಚಾರಗಳಂತಹ ಸಮಾಜಘಾತಕ ವೃತ್ತಿಗಳ ಬೆಳವಣಿಗೆಗೆ ಆನುವು, ಆಸರ ಮತ್ತು ಪ್ರೋತ್ಸಾಹ ಕೊಟ್ಟು ಸಮಾಜದ ನೈತಿಕ ಅಧಃಪಾತವಾಗಗೊಡುವದು ಸರ್ವಥಾ ಇಷ್ಟವಲ್ಲೆಂದು ಈ ನಿಯಂತ್ರಣ-ವಿರೋಧಿಗಳ ಪ್ರತಿಪಾದನೆಯುಂಟು. ನಿಯಂತ್ರಣಗಳಿಂದ ಜನಸಾಮಾನ್ಯರ ನೈತಿಕ ಶ್ರೇಯೋ ಹ್ರಾಸವಾಗುತ್ತ ನಡೆದಿದೆಯೆಂದೂ ಅದಕ್ಕೆ ತಡೆ ಹಾಕದಿದ್ದರೆ ರಾಷ್ಟ್ರದ ಘಾತವಾಗುವದೆಂದೂ ಅವರು ಎಚ್ಚರಿಕೆ ಕೊಟ್ಟಿದ್ದಾರೆ.

* *

ನಿಯಂತ್ರಣಗಳಿದ್ದಲ್ಲಿ ಕಳ್ಳಾಟಿಕೆ-ಪಕ್ಷಪಾತಗಳಿಗೆ ಒಟ್ಟಾಗಲಿಕ್ಕೆ ಅಥವಾ ಅವುಗಳ ಪುಟ ದೊರೆಯಲಿಕ್ಕೆ ನಿಯಂತ್ರಣಾಧಿಕಾರಿಗಳ ಅನಿಯಂತ್ರಿತ ಕಾರಭಾರವೇ ಪ್ರಧಾನ ಕಾರಣವಾಗಿದೆ. ನಮ್ಮಲ್ಲಿಯ ನಿಯಂತ್ರಣ ರಾಜ್ಯದಲ್ಲಿ ಅಧಿಕಾರಿಗಳ ಮೇಲೆ ಯಾವ ನಿಯಂತ್ರಣವೂ ಇಲ್ಲ! ಅವರು ಮಾಡಿದ್ದೇ ಲೆಕ್ಕ! ಅವರು ನಿರ್ಣಯಿಸಿದ್ದೇ ನಿರ್ಣಯ! ಈ ಲೆಕ್ಕ ಮಾಡುವಾಗ ಇಲ್ಲವೆ ನಿರ್ಣಯಗಳನ್ನು ಕೈಕೊಳ್ಳುವಾಗ ಅವರು ಯಾವದೇ ತತ್ವಗಳನ್ನು ಅಥವಾ ನಿಯಮಗಳನ್ನು ಪಾಲಿಸುವದಿಲ್ಲ! ಪಾಲಿಸಬೇಕೆಂಬ ನಿರ್ಬಂಧವಿದ್ದೂ ತೋರುವದಿಲ್ಲ! ನಮ್ಮ ಜಿಲ್ಹೆಯೊಳಗಿನ ಕೆಲವು ಉದಾಹರಣೆಗಳನ್ನು ನೋಡಿರಿ. (೧) ಹಿಂದೆ ಆಹಾರ ಧಾನ್ಯಗಳ ವಿಕ್ರಯದ ದರಗಳನ್ನು [illegible]ಸಿದಾಗ ಸೀಧಾ-ಅಂಗಡಿಗಳಲ್ಲಿ ಶಿಲ್ಕು ಇದ್ದ ಕಾಳುಕಡಿಗಳನ್ನು ಅಧಿಕಾರಿಗಳು ಏರಿದ ಹೊಸ ಧಾರಣೆಗಳಿಂದ ಮಾರಗೊಟ್ಟರು. ಆದೇ ಮೊನ್ನೆ ದರಗಳು ಇಳಿದಾಗ, ಅಂಗಡಿಗಳಲ್ಲಿ ಶಿಲ್ಕು ಇದ್ದ ಕಾಳುಕಡಿಯನ್ನು—ಹಳೆಯ ದರಗಳಿಂದ ಸರಕಾರಕ್ಕೆ ಹಣ ತೆತ್ತು ತಂದ ಸಂಗ್ರಹವನ್ನು — ಆ ಸಂಗ್ರಹ ತೀರುವ ವರೆಗೆ ಹಳೆಯ ದರಗಳಿಂದಲೇ ಮಾರಬೇಕೆಂದು ತೀರ್ಮಾನಿಸಿದರು! (೨) ಜನ-ಸಾಮಾನ್ಯರಿಗೆ ಧಾರಣೆಯ ಇಳಿತದ ಪ್ರಯೋಜನ

ಮುಂಬಯಿ ಸರಕಾರ

ನಾಗರಿಕ ಪೂರೈಕೆ ಖಾತೆ

ಮುಂಬಯಿ ಕೋಟೆ, ತಾ ೩೦—೪—೫೦.

ಪ್ರಕಟನೆ.

ತಾ ೩೦—೪—೧೯೫೦ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಅವಧಿಯ ನಡಾಲಿನ ಸಂಗ್ರಹದ ಮಾಹಿತಿಪತ್ರಿಕೆಗಳು.

೧೯೪೬ನೇ ಇಸವಿಯ ಮುಂಬಯಿ ಅಡಕೆ ನಡಾಲಿನ ವ್ಯಾಪಾರದ ಮತ್ತು ೧೯೪೮ನೇ ಇಸವಿಯ ಹಿಂದೀ ಸರಾಕ್ಷಣೆಗಳ ಅಡಕೆ ನಡಾಲಿನ ವ್ಯಾಪಾರದ ನಿಯಂತ್ರಣಾಜ್ಞೆಯಂತೆ, ತಾ ೩೦—೪—೧೯೫೦ಕ್ಕೆ ಅಂತ್ಯವಾಗುವ ತ್ರೈಮಾಸಿಕ ಅವಧಿಯ ನಡಾಲಿನ ಸಂಗ್ರಹದ ಮಾಹಿತಿ ಪತ್ರಿಕೆಗಳನ್ನು ತಾ ೧೦—೫—೧೯೫೦ರ [illegible] ಅಂತಹ ಪತ್ರಿಕೆಗಳನ್ನು ಮೇಲಿನ ನಿಯಂತ್ರಣಾಜ್ಞೆಗೆ ಜೋಡಿಸಿರುವ [illegible] ಡಿಸ್ಟ್ರಿಕ್ಟ ಕಂಟ್ರೋಲರ್, ೬-೮, ಕಾಪರೇಜ, ಕೋಟೆ, ಮುಂಬಯಿ [illegible] ಒಂಟಿ [illegible] ನಡಾಲಿನ ಮಾಹಿತಿಯನ್ನು ಸದರಿ ಮಾಹಿತಿಪತ್ರಿಕೆಯಲ್ಲಿ ನಮೂದಿಸಿದಂತೆ [illegible] ಮಾಹಿತಿ [illegible] ಅವಧಿಯಲ್ಲಿ ವ್ಯವಹಾರವೇನೂ ಆಗಿಲ್ಲವಾದರೆ ನಡಾಲ ಪತ್ರಿಕೆಗಳನ್ನು [illegible] ತಮ್ಮ ಮಾಹಿತಿ ಪತ್ರಿಕೆಯ [illegible] ಎಲ್ಲ [illegible] ತು [illegible]

G L SHETH,

[illegible] ಡಿಸ್ಟ್ರಿಕ್ಟ ಕಂಟ್ರೋಲರ [illegible]

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ೧೦-೩
ಅಂಚೆಯಿಂದ ವರ್ಷಕ್ಕೆ ೧೧-೦
" ೬ ತಿಂಗಳಿಗೆ ೬-೪-೦
ಬಿಡಿ ಸಂಚಿಕೆಗೆ ೦-೧-೬
ವ್ಹಿ. ಪಿ. ಯಿಂದ ಕಳಿಸಿದರೆ
೦-೪-೦ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg. No. B 1270. Monday, 8-5-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೧೫

ಕುಮಟಾ — ಸೋಮವಾರ, ತಾ ೮—೫—೧೯೫೦

ಜಾಹೀರಾತುಗಳ ದರ:
೧೨ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಸ್ಥಳಿಕ ವಿಷಯಗಳು.

(ಲೇಖಕ - ಸ್ಥಳವಾಸಿ)

ಕಾರವಾರದೊಳಗಿನ ಮುಖ್ಯ ಸರಕಾರಿ ವಕೀಲರ ಸದ್ಯದ ಅಧಿಕಾರಾವಧಿ ಬರುವ ಆಗೋಸ್ಟ ತಿಂಗಳಲ್ಲಿ ಮುಗಿಯುತ್ತಿದೆ ಅದರಿಂದ ಮುಂದಿನ ಸರಕಾರಿ ವಕೀಲರ ನೇಮಣೂಕಿಯ ವಿಚಾರ ಈಗಾಗಲೇ ಅಧಿಕಾರಿ ವರ್ಗದಲ್ಲಿ ನಡೆಯುತ್ತಿರಬಹುದು ಇಂತಹ ಸಂದರ್ಭದಲ್ಲಿ ಈಗಿನ ಸರಕಾರಿ ವಕೀಲರ ನಡಾವಳಿಯ ಬಗ್ಗೆ ಜನರಾಡುತ್ತಿರುವ ಮಾತುಗಳನ್ನು ನಮೂದಿಸಬಹುದು ಸರಕಾರಿ ವಕೀಲರಿಗೆ ಕೋರ್ಟುಗಳಲ್ಲಿ ಪ್ರಕರಣಗಳನ್ನು ನಡಿಸಿದ ದಿನಗಳ ಮಾನದಿಂದ ಮುಶಾಹಿರೆ ಸಿಗುತ್ತದೆ ಅದರಿಂದ ಸದ್ಯದ ವಕೀಲರು ಅದನ್ನು ಹೆಚ್ಚಿಗೆ ಮುಶಾಹಿರೆ ಸೆಳಕೊಳ್ಳುವದಕ್ಕಾಗಿ ಒಂದು ದಿನದಲ್ಲಿ ಮುಗಿಸಬಹುದಾದ ಕೆಲಸವನ್ನು ೨—೩—೪ ದಿನಗಳ ವರೆಗೆ ನಡಿಸುತ್ತಾರಂತೆ! ಒಂದೇ ದಿನ ನಡಿಸಿದ ೨-೩ ಪ್ರಕರಣಗಳಿಗಾಗಿ ೩ ದಿನಗಳ ಮುಶಾಹಿರೆಯನ್ನು ಇವರು ಸೆಳಕೊಂಡಿರಬಹುದಾಗಿಯೂ ಒಂದು ಆಕ್ಷೇಪವಾದವೂ ಉಂಟು ಸರಕಾರದಿಂದ ಮುಶಾಹಿರೆ ಪಡೆಯುವ ಒಂದೇ ದೃಷ್ಟಿಯಿಂದ ಇವರು test cases ಯಾನೆ ಕಾಯದೆಯನ್ನು ಒರೆಗಲ್ಲಿಗೆ ಹಚ್ಚಿ ನೋಡುವ ಪ್ರಕರಣಗಳೆಂದು ಹಲವಾರು ಮೊಕದ್ದಮೆಗಳನ್ನು ಎಬ್ಬಿಸಿದ್ದುಂಟಂತೆ! ಪೋಲೀಸ ಇಲಾಖೆಯ ವಕೀಲರು ಅಪರಾಧವಾಗುವದಿಲ್ಲೆಂದು ಅಭಿಪ್ರಾಯಪಟ್ಟ ಪ್ರಕರಣಗಳಲ್ಲಿ ಅಪರಾಧವಾಗುತ್ತದೆಂದೂ, ಖಟ್ಲೆ ನಡಿಸುವ ಕೆಲಸ ತಮಗೆ ಒಪ್ಪಿಸಿದ್ದಲ್ಲಿ ತಾವು ಅಪರಾಧವನ್ನು ಸಿದ್ಧ ಮಾಡುತ್ತೇವೆಂದೂ ಈ ವಕೀಲರು ಎಡೆಕಟ್ಟಿ ಹೇಳಿ ಮಾಡಿಸಿದ ಎಷ್ಟೋ ಖಟ್ಲೆಗಳು ಮುಂದೆ ನಿರರ್ಥಕವಾಗಿವೆಯಂತೆ! ಅಂಕೋಲೆಯ ಗೌಡ ಸಾರಸ್ವತ ಸಮಾಜದ ಶ್ರೀ ವೀರವಿಟ್ಠಲ ದೇವಸ್ಥಾನದ ಹರಿಜನ ಮಂದಿರ ಪ್ರವೇಶದ ಖಟ್ಲೆಯನ್ನು ಮಾಡಿಸಿದ ಮಹಾನುಭಾವರು ಈ ವಕೀಲರಿರುತ್ತಾರಂತೆ! ಬೇರೆಬೇರೆ ನ್ಯಾಯಾಲಯಗಳಲ್ಲಿ ಇವರ ನಡಿಸಿದ ಖಟ್ಲೆಗಳಲ್ಲಿ ಎಷ್ಟು ಯಶಸ್ವಿಯಾದವು, ಎಷ್ಟು ಅಯಶಸ್ವಿಯಾದವು, ಅಯಶಸ್ವಿಯಾದ ಖಟ್ಲೆಗಳಲ್ಲಿ ಇವರು ಅನುಕೂಲ ಅಭಿಪ್ರಾಯಕೊಟ್ಟು ಮಾಡಿಸಿದ ಖಟ್ಲೆಗಳು ಎಷ್ಟು ಎಂಬುದರ ವಿವರಪೂರ್ಣ ಮಾಹಿತಿಯನ್ನು ಮಾನ್ಯ ಗೃಹಮಂತ್ರಿಗಳು ಪಡಕೊಂಡು ಪರಿಶೀಲಿಸಿದಲ್ಲಿ ಅವರಿಗೂ ಈ ವಕೀಲರ ನಡಾವಳಿಯ ಪೂರ್ಣ ಪರಿಚಯವಾಗುವಂತಿದೆ ಪೋಲೀಸ ವಕೀಲರು ಖಟ್ಲೆ ಮಾಡಿಕೊಡಲು ಆಧಾರವಿಲ್ಲೆಂದು ಹೇಳಿದ ಪ್ರಕರಣಗಳಲ್ಲಿ ಖಟ್ಲೆಯಾಗುತ್ತದಾಗಿ ಇವರು ಸಲಹ ಕೊಟ್ಟಂತೆಯೇ ಖಟ್ಲೆ ಮಾಡಿಕೊಡಲು ಸಾಕಷ್ಟು ಆಧಾರವುಂಟೆಂದು ಪೋಲೀಸ ಅಧಿಕಾರಿಗಳಾಗಲಿ ಅವರ ವಕೀಲರಾಗಲಿ ಅಭಿಪ್ರಾಯಪಟ್ಟಾಗ, ಇವರು 'ಯೇನ ಕೇನ ಪ್ರಕಾರೇಣ" ಆ ಪ್ರಕರಣಗಳಲ್ಲಿ ತಮ್ಮ ಕೈ ಸೇರಿಸಿ, ಖಟ್ಲೆ ಮಾಡಿಕೊಡಲು ಆಧಾರ ತಮಗೆ ತೋರುವದಿಲ್ಲೆಂದು ಹೇಳಿ ಎಷ್ಟೋ ಪ್ರಕರಣಗಳನ್ನು ವಿಲೇಹಾಕಿಸಿದ್ದೂ ಉಂಟಂತೆ! ಉದಾಹರಣಾರ್ಥ ಕಾರವಾರದೊಳಗಿನ ಡಾಲಡಾ ಪ್ರಕರಣ ಈಗೊಂದು ವರುಷದಿಂದ ಈ ಪ್ರಕರಣ ನಡೆದಿದೆ ಖಟ್ಲೆ ಮಾಡಿಕೊಡಬೇಕೆಂದು ಪೋಲೀಸ ವಕೀಲರು ಈ ಪ್ರಕರಣದ ಎಲ್ಲ ಕಾಗದ-ಪತ್ರಗಳನ್ನು ಪರಾಂಬರಿಸಿ ಸಲಹೆ ಕೊಟ್ಟದ್ದುಂಟು ಆದರೂ ಸರಕಾರಿ ವಕೀಲರು ಖಟ್ಲೆ ಮಾಡಲು ಬರುವಂತಿಲ್ಲೆಂದು ಹೇಳಿ ಈ ಪ್ರಕರಣ ನಿಕಾಲೆಯಲ್ಲಿ ತರಲು ಸಲಹೆ ಕೊಟ್ಟಿರುತ್ತಾರಂತೆ! ಪ್ರಾಂತ ಅಧಿಕಾರಿಗಳಿಗೆ ಸರಕಾರಿ ವಕೀಲರ ಈ ಅಭಿಪ್ರಾಯ ಸರಿದೋರಲಿಲ್ಲ ಅವರು ಖಟ್ಲೆ ಮಾಡಿಕೊಡಿರೆಂದ ಪೋಲೀಸರಿಗೆ ಆಜ್ಞೆ ಮಾಡಿರುತ್ತಾರೆ ಆದರೂ ಇನ್ನೂ ಖಟ್ಲೆಯಾಗಿರುವದಿಲ್ಲ! ಹೀಗೇಕೆಂದು ಚೌಕಶಿ ಮಾಡಿದರೆ ಕಾಗದ-ಪತ್ರಗಳು ಸರಕಾರಿ ವಕೀಲರ ಕಚೇರಿಯಲ್ಲಿ ಬಿದ್ದುಕೊಂಡಿವೆಯಂತೆ! ಅಲ್ಲಿಂದ ಅವು ಹೊರಗೆ ಬೀಳುವದಿಲ್ಲವಂತೆ!! ಸರಕಾರವು ಈ ನಡಾವಳಿಯನ್ನು ಸಾಗ್ರವಾಗಿ ಪರಾಂಬರಿಸಿ ಇದರ ಪುನರಾವರ್ತನೆಯಾಗದಂತೆ ಇನ್ನು ಮುಂದಾದರೂ ದಕ್ಷತೆ ವಹಿಸುವದುಚಿತ

* * *

ಕಳ್ಳ ಪೇಟೆ, ಕಳ್ಳ ಸಂತೆ ಇವುಗಳ ಮೋಹ ಈವಾಗ ಯಾರನ್ನೂ ಬಿಟ್ಟಿಲ್ಲ ವರ್ತಕರಂತೆ ಗಿರಾಕಿಗಳೂ, ಅಧಿಕಾರಿಗಳಂತೆ ಅನಧಿಕಾರಿಗಳೂ, ಕೊಂಗ್ರೆಸ್ಸೇತರರಂತೆ ಕೊಂಗ್ರೆಸ್ಸಿಗರೂ, ಆತ್ಮೋದಯ ಕಾಂಕ್ಷಿಗಳಂತೆ ಸರ್ವೋದಯವಾದಿಗಳೂ ಎಲ್ಲರೂ ಅವಕಾಶ ಸಿಕ್ಕಲ್ಲಿ ಕಳ್ಳಪೇಟೆ ಮಾಡುತ್ತಿದ್ದುದು ದೃಷ್ಟಿಗೆ ಬೀಳುತ್ತಿದೆ! ಪ್ರಯಾಣಿಕ ವಾಹಕ ಮೋಟಾರ-ಬಂಡಿಗಳಲ್ಲಿ ಕೂತು ಶಾಸನ-ಸಭೆಗೆ ಹೋಗುವ ಕೆಲವು ಶಾಸನ ಸಭಾ-ಸದಸ್ಯರು ತಮ್ಮ ಬಂಡಿಗಳಿಗೆಂದು ಸರಕಾರದಿಂದ ಪೆಟ್ರೋಲ-ಕೂಪನುಗಳನ್ನು ಪಡೆದು ಕಳ್ಳಸಂತೆ ಮಾರುತ್ತಿದ್ದುದು ತಮಗೆ ತಿಳಿದು ಬಂದಿದೆಯಾಗಿ ದಿಲ್ಲಿಯ ಪ್ರಮುಖ ಅಧಿಕಾರಿಪದಾರೂಢರೊಬ್ಬರು ಮೊನ್ನೆಯೇ ಪ್ರಕಟ ಪಡಿಸಿರುತ್ತಾರ ಶಾಸನ-ಸಭೆಯ ಸದಸ್ಯರಾದ ಲೋಕ-ಪ್ರಮುಖ ಲೋಕ ಸೇವಕರನ್ನು, 'ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ'' ಎಂಬ ವ್ಯಾಸೋಕ್ತಿಯಂತೆ, ಕಳ್ಳ ಪೇಟೆಯ ಮೋಹವು ಬಿಡುವದಿಲ್ಲೆಂದ ಮೇಲೆ ನಮ್ಮಲ್ಲಿಯ ಸರ್ವೋದಯದ ಕಾರ್ಯಕರ್ತರನ್ನು ಅದು ಪಾರುಗೊಳಿಸಿದರೆ ಆಶ್ಚರ್ಯಗೊಳ್ಳಬೇಕಾದ ಕಾರಣವೇನೂ ಇಲ್ಲವಷ್ಟೇ! ಸರ್ವೋದಯದ ಬೇರೆ ಬೇರೆ ಅಂಗಗಳ ಹೆಸರಿನಲ್ಲಿ ವೆಚ್ಚವಾದ ಹಣವು ಸತ್ಕಾರ್ಯಕ್ಕೆ ಎಷ್ಟಕ್ಕೆ ಮುಟ್ಟಿದೆ ಎಂಬುದರ ಸೂಕ್ಷ್ಮ ಸಂಶೋಧನೆಯನ್ನು ಮಾಡಿದರೆ ಕೆಲವು ವಂಚನೆಯ ಪ್ರಕಾರಗಳು ಹೊರಬೀಳುವಂತಿವೆಯೆಂದು ಬಲ್ಲವರು ಹೇಳುತ್ತಾರೆ ಸರ್ವೋದಯ ಕಾರ್ಯಕ್ಕಾಗಿ ಜಂಗಲ ಇಲಾಖೆಯವರಿಂದ ಸಿಕ್ಕ ಎಷ್ಟೋ ಕಟ್ಟಿಗೆ ಆತ್ಮೋದಯ ಮಾಡಿಕೊಳ್ಳಲು ಅದೃಶ್ಯವಾದದ್ದುಂಟಂತೆ! ಚರ್ಮಕ್ಕೆ ಹದ ಕೊಡುವ ಶಿಕ್ಷಣದ ಶಾಲೆಯ ಕಟ್ಟಡಕ್ಕೆಂದು ದೊರೆತ ತಗಡುಗಳಲ್ಲಿ ಕೆಲವು ಕಳ್ಳಪೇಟೆಯ ಗಿರಾಕಿಗಳ ಉದಯ ಮಾಡಿವೆಯಂತೆ! ನಮ್ಮಲ್ಲಿಯ ಸರ್ವೋದಯ ಕಾರ್ಯದ ಪ್ರಗತಿಯನ್ನೂ ಪ್ರಕಾರವನ್ನೂ ಪರಿಶೀಲಿಸಲು ಮಾನ್ಯ ಮುರಾರಜಿ ದೇಸಾಯಿಯವರು ಬರುವವರಿದ್ದಾರೆಂದು ಸುದ್ದಿಯಿದೆ ಆಗ ಅವರು ಈ ಎಲ್ಲ ಲೋಕಾಪವಾದಗಳನ್ನು ನೆನಪಿನಲ್ಲಿಟ್ಟುಕೊಂಡು, ಸರ್ವೋದಯ ಕಾರ್ಯಕರ್ತರ ನಡಾವಳಿಯ ಸೂಕ್ಷ್ಮ ಪರೀಕ್ಷೆ ಮಾಡಬೇಕಾಗಿ ಜನರ ಆಗ್ರಹವುಂಟು ಇಲ್ಲದಿದ್ದರೆ ಸಾವಿರಗಟ್ಟಲೆ ರೂಪಾಯಿ ಖರ್ಚ ಮಾಡಿ ಕೈಕೊಂಡ ಸರ್ವೋದಯದ ಯೋಜನೆಯು ಅಪೇಕ್ಷಿತ ಪ್ರತಿಫಲವನ್ನು ಕೊಡದೆ ಗಂಗಾವಳಿ ಹೊಳೆಯ ನೀರಿನ ಪ್ರವಾಹದಲ್ಲಿ ಬಳದು ಹೋಗುವದೆಂದು ಹೇಳುತ್ತಾರೆ!

* * *

ಈಗ ಮುಂಬಯಿ ಸರಕಾರವು ಆಡಳಿತದ ವೆಚ್ಚವನ್ನು ಕಡಿಮೆ ಮಾಡಿ ತರುವದಕ್ಕಾಗಿ ಎಲ್ಲ ಖಾತೆಗಳ ಸಿಬಂದಿಯನ್ನು ನೂರಕ್ಕೆ ೨೦ಷ್ಟು ಕಡಿಮೆ ಮಾಡಿ ತರಬೇಕೆಂದು ನಿರ್ಣಯಿಸಿದೆ ಇಂತಹ

ಮಾಯಕವಾಡಿ ಎಸೋಸಿಯೇಟೆಡ್ ಇಂಡಸ್ಟ್ರೀಸ, ಲಿ.

ಉತ್ತರ ಕಾನಡಾ ಜಿಲ್ಲೆಯ ಕರಾವಳಿ ತಾಲೂಕುಗಳೊಳಗಿನ ಪೈರಿ ಮರಗಳನ್ನು ೩೦ ವರ್ಷಗಳ ಅವಧಿಯ ಮಟ್ಟಿಗೆ ಮುಂಬಯಿ ಸರಕಾರದಿಂದ ನಮ್ಮ ಕಂಪನಿಯ ಡ್ಯಾರೆಕ್ಟರರು ಪಡಕೊಂಡು ಆ ಬಗ್ಗೆ ಮುಂಬಯಿ ಸರಕಾರದೊಡನೆ ಕರಾರು ಸಹ ಮಾಡಿರುತ್ತಾರೆಂದೂ, ಪೈರಿ ಕಟ್ಟಿಗೆಯಿಂದ, ಯಂತ್ರಗಳ ಸಹಾಯದಿಂ ಸುಧಾರಿಸಿದ ಪದ್ಧತಿಯಿಂದ ಕಾಚನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸುವ ಕಾರ್ಯವು ಭರದಿಂದ ಸಾಗಿದೆಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ. ಕಾರಖಾನೆಯ ಸಲುವಾಗಿ ಸರಕಾರವು ಹೊನ್ನಾವರ ತಾಲೂಕಿನ ಮಂಕಿ ಗ್ರಾಮದ ಹತ್ತಿರ ಅನಂತವಾಡಿಯಲ್ಲಿ ೧೦ ಎಕರೆಗಳಷ್ಟು ಸ್ಥಳವನ್ನು ದಯಪಾಲಿಸಿರುತ್ತಿದ್ದು, ಅಲ್ಲೇ ಸದರ ಕಾರಖಾನೆಯನ್ನು ತೆರೆಯಲಾಗುವದು

ಮೆನೆಜಿಂಗ ಡ್ಯಾರೆಕ್ಟರ.

ಸಂದರ್ಭದಲ್ಲಿ ಗ್ರಾಮೋದ್ಧಾರ ಮಂಡಳಗಳ ಬಗ್ಗೆ ಆಗುವ ವೆಚ್ಚವನ್ನು ಸರಕಾರವು ಪರಾಂಬರಿಸ ಬಹುದಿತ್ತು. ಈ ಮಂಡಳದಿಂದ ಆಗುವ ಲೋಕೋಪಕಾರ ಅಷ್ಟಕ್ಕಷ್ಟೇ ಇವುಗಳನ್ನು ರದ್ದುಪಡಿಸಿದಲ್ಲಿ ಯಾರೂ ಅಳುವಂತಿಲ್ಲ. ಗ್ರಾಮೋದ್ಧಾರ ಮಂಡಳದ ಸಭೆಗಳೇನು ವೆಚ್ಚವಿಲ್ಲದೆ ನಡೆಯುವದಿಲ್ಲ. ಸದಸ್ಯರಿಗೆ ವಾಹನ-ಭತ್ತೆ ಮೊದಲಾದವುಗಳನ್ನು ಸಲ್ಲಿಸಬೇಕು! ಮೊನ್ನೆ ಧಾರವಾಡ ಜಿಲ್ಲೆಯಲ್ಲಿ ಸಂಚಾರಕ್ಕೆ ಬಂದಿದ್ದ ಲೋಕೋಪಯೋಗಿ ಇಲಾಖೆಯ ಮಂತ್ರಿ ಡಾ|| ಜೀವರಾಜ ಮೆಹತಾ ರವರು, ಶಿರ್ಸಿಗೂ ಒಂದು ಸಂದರ್ಶನ ಕೊಟ್ಟು ಹೋಗಬೇಕೆಂದು ಶಿರ್ಸಿಗೆ ಬಂದಿದ್ದರು. ಶಿರ್ಸಿಯಲ್ಲಿ ಅವರು ಉಳಿದದ್ದು ೨೪ ತಾಸು. ಅದರಲ್ಲಿ ೩-೪ ತಾಸು ಅವರ ಊಟ ಉಪಚಾರ ವಿಶ್ರಾಂತಿಗಳಿಗೆ ವೆಚ್ಚವಾದವು. ಉಳಿದ ೧೯ ತಾಸುಗಳಲ್ಲಿ ಮಂತ್ರಿಗಳು ಸಂದರ್ಶನಾಕಾಂಕ್ಷಿಗಳಿಗೆ ಸಂದರ್ಶನ ಕೊಟ್ಟು ಜಿಲ್ಹಾ ಗ್ರಾಮೋದ್ಧಾರ ಮಂಡಳದ ಸಭೆಯಲ್ಲೂ ಕೆಲ ಹೊತ್ತು ಕಳೆದರು. ಈ ೧೯ ತಾಸುಗಳಲ್ಲಿ ಮಂತ್ರಿಗಳು ಸ್ಥಳಿಕರಿಂದ ಏನು ಮಾಹಿತಿ ಪಡೆಕೊಂಡಾರು, ಎಂತಹ ದಿಗ್ದರ್ಶನ ಮಾಡ್ಯಾರು ಎಂಬುದು ದೇವರಿಗೇ ಗೊತ್ತು! ಆದರೂ ಶಿರ್ಸಿಯಲ್ಲಿ ಡಾ|| ಮೆಹತಾರವರ ಆಗಮನದ ಕಾಲಕ್ಕೆ ಗ್ರಾಮೋದ್ಧಾರ ಮಂಡಳದ ಸಭೆ ಇಡಲಾಗಿತ್ತು! ಕರ್ನಾಟಕದೊಳಗಿನ ಜಿಲ್ಹಾ ಗ್ರಾಮೋದ್ಧಾರ ಮಂಡಳಗಳ ಗೌರವ ಕಾರ್ಯದರ್ಶಿಗಳು ಪಡೆಯುವ 'ಗೌರವ-ವೇತನ' ಮತ್ತು ಪ್ರವಾಸಾದಿ ಭತ್ತೆಗಳನ್ನು ನೋಡಿದರೆ ಮನಸ್ಸು ತಲ್ಲಣಗೊಳ್ಳುತ್ತಿದೆ! ಈ ಗೌರವ ಕಾರ್ಯದರ್ಶಿಗಳ ಪಾತ್ರತೆಯೇನು? ಅವರ ಸಂಪಾದನೆಯ ಶಕ್ತಿಯೇನು? ಮಂಡಳದ ಕಾರ್ಯದರ್ಶಿಯಾದ್ದರಿಂದ ಅವರ ಉದ್ಯೋಗದಲ್ಲಿ ವ್ಯತ್ಯಯವುಂಟಾಗಿ ಅವರಿಗೆ ಆದ ಹಾನಿಯೆಷ್ಟು? ಮತ್ತು ಆ ಹಾನಿಯನ್ನು ತುಂಬಿಕೊಳ್ಳಲು ಅವರು ಮಂಡಳದ ನಿಧಿಯೊಳಗಿಂದ ಸೆಳೆಕೊಳ್ಳುವ ಹಣವೆಷ್ಟು? ಎಂಬುದರ ಪರೀಕ್ಷಣ ಮಾಡಿದರೆ "ದುಂದುರಾಯನ ಭಂಡಾರ ನರಿ-ನಾಯಿಗಳ ಪಾಲಾಯಿತು" ಎಂಬ ನಾಣ್ಣುಡಿಯ ನೆನಪಾಗುತ್ತಿದೆ! ಮಾನ್ಯ ಮುಂಬಯಿ ಸರಕಾರದವರು ಈ ವಿಷಯವನ್ನೂ ಪರಾಂಬರಿಸುವರು ದುಚಿತ

* * *

ಅಂಕೋಲಾ ತಾಲೂಕಿನ ಬೆಟ್ಟಗಳಲ್ಲಿ ಇತ್ತ ೨-೩ ತಿಂಗಳಿಂದ ಶಿಕಾರಿಗಳ ಹಾವಳಿ ಬಹಳವಾಗಿದೆ. ಅಸ್ತಮಾನವಾದೊಡನೆ ಈ ಶಿಕಾರಿಗಳು ಮೋಟಾರ ಬಂಡಿಗಳಲ್ಲಿ ಬೆಟ್ಟಕ್ಕೆ ಹೋಗಿ ಬೆಟರಿಗಳ ಸಹಾಯದಿಂದ ವನ್ಯ ಮೃಗಗಳ ಬೇಟೆಯಾಡುತ್ತಾರಂತೆ, ಮತ್ತು ಆ ಮೃಗಗಳ ಮಾಂಸವನ್ನು ಊರಿಗೆ ತಂದು ಮಾರಾಟ ಮಾಡುತ್ತಾರಂತೆ! ಜಂಗಲ ಅಧಿಕಾರಿಗಳ ಸಮ್ಮತಿ ಮತ್ತು ಸಹಾಯವಿಲ್ಲದೆ ಈ ಬೇಟೆಗಳಾಗುವಂತಿಲ್ಲ. ಇಂತಹ ಬೇಟೆಗಳಿಗೂ ಮಾಂಸದ ವ್ಯಾಪಾರಕ್ಕೂ ಅಪ್ಪಣೆ ಕೊಡಲಿಕ್ಕೆ ಜಂಗಲ-ಸವಲತ್ತುಗಳ ನಿಯಮಾವಲಿಯಲ್ಲಿ ಇಲ್ಲವೆ ಜಂಗಲ ಕಾನೂನಿನಲ್ಲಿ ಅವಕಾಶವುಂಟೇನೆಂಬುದರ ಖುಲಾಸೆಯಾಗಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— ಬಹಳ ದಿನ್ನ ರಾತ್ರಿ ೧೧ ಘಂಟೆ ೩೦ ನಿಮಿಷಕ್ಕೆ ಸ್ವಲ್ಪ ಮಳೆಯಾಯಿತು. ಗೋಕರ್ಣ-ಅಂಕೋಲೆ ಕಡೆಗೆ ಬಹಳ ಮಿಂಚುತ್ತಿತ್ತು. ಆ ಕಡೆ ಹೆಚ್ಚಿಗೆ ಮಳೆಯಾಗಿರಬಹುದು.

ಇಲ್ಲಿಯ ಧಂಡಿ ಹಬ್ಬ ವೈಶಾಖ ಶು|| ೧೨ರಿಗೆ ಆಗ ಬೇಕು. ಈ ವರ್ಷ ಪ್ರಧಾನ ಗುನಗರ ಅಸ್ವಸ್ಥತೆಯ ಮೂಲಕ ಅದು ೧೨ರಿಗೆ ಆಗಿದ್ದಿಲ್ಲ. ಮೊನ್ನೆ ರವಿವಾರ ಆಯಿತು.

ಈ ತಿಂಗಳಲ್ಲಿ ಬಟ್ಟೆಯ ಎಲ್ಲ ಬಟವಡೆ ಸಹಕಾರಿ ಮಂಡಳಿಗಳಲ್ಲೂ ನಗರಗಳಲ್ಲೂ ಪ್ರತಿಯೊಬ್ಬರಿಗೆ ೩ ಹಿಂಡು ಎಳ್ಳು ಕೊಡತಕ್ಕದ್ದೆಂದು ನಿರ್ಣಯಿಸಿ ಎಲ್ಲ ಬಟವಡೆಗಾರರಿಗೆ ಆ ರೀತಿ ಕೊಡಲು ತಿಳಿಸಿದ್ದಾರೆ. ಈಗ ಎಳ್ಳಿಯ ಪುರವಟೆ ಸಾಕಷ್ಟಿರುವದರಿಂದ ಪೇಟೆಯಲ್ಲಿ ಸಿಕ್ಕುವದಿಲ್ಲವೆಂದು ಅಂಗಡಿಯಲ್ಲಿ ಗ್ರಾಹಕರು ಲೂಟಿ ಇದ್ದಂತೆಯೂ, ಶಾಲೆ-ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೂ ಬೇಕಾಗುವ ಎಳ್ಳಿಯನ್ನು ಕೊಡಿಸಲು ಸಮಿತಿಯವರು ನಿರ್ಣಯಿಸಿದಾರೆ. ಈ ಹೆಚ್ಚಿನ ಎಳ್ಳು ಬೇಕಾದವರು ಸಮಿತಿಗೆ ಅರ್ಜಿ ಮಾಡಿಕೊಳ್ಳಬೇಕೆಂದು ಬಟವಡೆ ಸಮಿತಿಯವರು ತಿಳಿಸುತ್ತಾರೆ.

ಇಲ್ಲಿಯ ಸಾವಕಾರ ರಾ|| ಚಿತ್ರಿಗಿ ಗಣೇಶ ಭಟ್ಟರಲ್ಲಿ ಅವರ ಹಿರೇ ಮಗನ ಮದುವೆಯಾಯಿತು. ಈ ಮದುವೆಗಾಗಿ ಶಿರ್ಸಿಯಿಂದ ಕಡೆಮೊದಲೂ ಬೇರೆ ಬೇರೆ ಊರುಗಳಿಂದಲೂ ಬಹಳ ಜನ ಬಂದಿದ್ದರು. ಅದರಿಂದ ರಾ|| ಭಟ್ಟರಲ್ಲಿ ಸಮಾರಂಭನಿಬಂಧಕ ಆಜ್ಞೆಯ ಉಲ್ಲಂಘನೆಯಾಗುತ್ತದೆಯೆಂಬ ತಿಳುವಳಿಕೆಯಿಂದ ಆಜ್ಞೆಯ ರವಿವಾರ ಮಧ್ಯಾಹ್ನ ೨ರ ಸುಮಾರಿಗೆ ಇಲ್ಲಿಯ ಹೊಸ ಫೌಜದಾರ ರಾ|| ದೇವಬಾಗಕರರೂ, ಸೀಧಾ ಕಚೇರಿಯ ಬದಲಿ ಸೀಧಾಧಿಕಾರಿ (ಕಾಯಂ ಸೀಧಾಧಿಕಾರಿ ರಾ|| ಕೇ. ಡಿ. ನಾಯ್ಕರು ರಜೆ ತಕ್ಕೊಂಡು ಕಾರವಾರಕ್ಕೆ ಹೋಗಿದ್ದರು) ಸ|| ನಾಯಿಂಪಕ್ಕ ಮತ್ತು ಸೀಧಾ ಕಾರಕೂನ ರಾ|| ಸದಾನಂದ ಶೇಟ್ಟಿ ಇವರು ಪೋಲೀಸ ಟೋಳಿಯಲ್ಲಿ ಹೋಗಿ ಅಕಸ್ಮಾತ್ತಾಗಿ ಮದುವೆ ಚಪ್ಪರಕ್ಕೆ ಹೋಗಿ ತಪಾಸಣೆ ಮಾಡಿದರು. ಆಗ ಒಂದು ಕಡೆ ೧೬ ಒಂದು ಕಡೆ ೨೦ ಮತ್ತು ಇನ್ನೊಂದು ಕಡೆ ೧೦ ಮಂದಿ ಹೀಗೆ ಊಟಕ್ಕಾಗಿ ಜನರು ಎಲೆಗಳನ್ನಿಟ್ಟುಕೊಂಡು ಊಟಕ್ಕೆ ಕುಳಿತದ್ದರಿಂದ, ಪೋಲೀಸ ಸೀಧಾಧಿಕಾರಿಗಳೂ ಪಂಚರೂ ಅಡಿಗೆ ಮನೆಗಳೊಳಗಿನ ಅಡಿಗೆಯ ತಪಾಸಣೆ ಮಾಡಿದಾಗ ಅವುಗಳಲ್ಲಿ ಸುಮಾರು ೬೦೦ ಜನರಿಗೆ ಸಾಕಾಗುವಷ್ಟು ಅಡಿಗೆಯಿದ್ದುದು ಕಂಡು ಬಂತಂತೆ. ಫೌಜದಾರರು ಈ ಬಗ್ಗೆ ಪಂಚನಾಮೆ ಮಾಡಿಸಿ ಆಟ್ಟ ಅನ್ನವನ್ನು ಚಪ್ಪರದೊಳಗಿನ ಜನರಿಗೆ ಕೊಟ್ಟು, ಅಡಿಗೆಯ ದೊಡ್ಡ ದೊಡ್ಡ ಪಾತ್ರೆಗಳನ್ನು ಜಪ್ತು ಮಾಡಿ ಕಚೇರಿಗೆ ತಂದರು. ಈ ತಪಾಸಣೆಯ ಕಾಲದಲ್ಲಿ ರಾ|| ಭಟ್ಟರ ಮನೆಯ ಅಂಗಳದ ಒಂದು ಬದಿಗೆ ಸುಮಾರು ೧೦೦ ಜನ ಅತ್ತಿ ಭತ್ತಗಳ ಚೀಲ-ಮೂಟೆಗಳಿದ್ದವಂತೆ. ಈ ಅತ್ತಿ ಭತ್ತಗಳ ಸಂಬಂಧದಲ್ಲಿ ರಾ|| ಭಟ್ಟರು ಸೀಧಾ-ಕಚೇರಿಯವರಿಗೆ ಪ್ರತಿಜ್ಞಾ-ಲೇಖ ಇಲ್ಲವೆ ಮಾಹಿತಿ-ಪತ್ರ ಕೊಟ್ಟಿದ್ದಿಲ್ಲವಾದ್ದರಿಂದ ಸೀಧಾಧಿಕಾರಿಗಳು ಈ ಬಗ್ಗೆ ಪಂಚನಾಮೆ ಮಾಡಿ, ಅತ್ತಿ-ಭತ್ತಗಳನ್ನು ನಿರ್ಬಂಧಿಸಿಟ್ಟಿರುತ್ತಾರೆ. ಅಧಿಕಾರಿಗಳ ರಾ|| ಗಣೇಶ ಭಟ್ಟರಲ್ಲಿ ನಡಿಸಿದ ತಪಾಸಣೆ ಪಂಚನಾಮೆಗಳಿಂದ ಊರಲ್ಲಿ ಒಂದು ಬಗೆಯ ಕ್ಷೋಭೆಯುಂಟಾಗಿದೆ.

ಇಲ್ಲಿಯ ಮಾಮಲೇದಾರ ರಾ|| ಪಂಢರೀನಾಥ ಎಮ್. ನಾಯ್ಕರಿಗೆ ಖಾನಾಪುರಕ್ಕೆ ವರ್ಗವಾಗಿರುತ್ತದ್ದು, ಅವರ ಸ್ಥಳದಲ್ಲಿ, ೪ ವರ್ಷಗಳ ಹಿಂದೆ ಇಲ್ಲಿ ಜ್ಯಾ. ಶಿರಸ್ತೇದಾರರಾಗಿದ್ದ ರಾ|| ಪಡತಿಯವರು ಬರುವರು.

ಇಲ್ಲಿಯ ದಿವಾಣಿ ಕೋರ್ಟಿನಲ್ಲಿ ಇತ್ತ ೬-೭ ತಿಂಗಳಿಂದ "ಕ್ಲಾರ್ಕ ಆಫ್ ದಿ ಕೋರ್ಟ್" ರಾಗಿದ್ದ ರಾ|| ಲಕ್ಷ್ಮೀನಾರಾಯಣ ವೆಂಕಟೇಶ ಭಟ್ಟ ಶಿರ್ಸಿ ಇವರು ಕಳೆದ ರಜಾಪಾದ ಕರ್ತಿಯಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತಾತ್ಮರು ಸರಳರೂ, ಸಿದ್ಧಕ್ಷ್ಯಕ್ಷಣದಿಂದ ಕೆಲಸ ಮಾಡತಕ್ಕವರೂ, ಕೈಕೆಳಗಿನವರಿಗೆ ಪ್ರೀತಿಯಿಂದ ನಡಿಸುವವರೂ ಆಗಿದ್ದರು. ಅವರಿಗೆ ದೇವರು ಸದ್ಗತಿಯನ್ನೀಯಲಿ!

ಮಾರುವದಿದೆ!

ಅವರ್ಸಾ ಗ್ರಾಮ ಸರ್ವೆ ನಂಬರ ೧೮೨ ಅ ೧ಬ, ವಿಟ ಕ್ಷೇತ್ರ ೦-೧೪-೦, ಆಕಾರ ೦-೧೧-೯, ಮುಲಗೇಣಿ ಹಕ್ಕಿನ ಬಾಗಾಯತ ಜಮೀನು ಅಂದಾಜ ಅಪ್ಪನ್ನ ರೂ ೧೫೦ಕ್ಕೆ ಮೋಲ್ಪಟ್ಟು ಅದರಲ್ಲಿರುವ ಕಲ್ಲು ಪಂಚಾಂಗ, ಕಲ್ಲು ಗೋಡೆ, ಮಂಗಳೂರು ಹಂಚಿನ ಮಾಡಿನ ಮಾಳಿಗೆ ಮನೆ ಉದ್ದ ಫೂಟ ೪೨, ಅಗಲ ಫೂಟ ೩೮ ಇದ್ದ ಮನೆ ಮತ್ತು ಬಾಗಾಯತ ಕೂಡಾ ಯೋಗ್ಯ ಬೆಲೆಗೆ ಮಾರಾಟ ಮಾಡುವದಿರುವದರಿಂದ ಕೊಳ್ಳುವ ಇಚ್ಛೆಯವರು ಸಮಕ್ಷ ನೋಡಿ, ಈ ಕೆಳಗಿನ ಸಹಿಕಾರರಿಗೆ ಭೆಟ್ಟಿಯಾಗಿ ವಿಚಾರಿಸಬಹುದು. ಸದರಿ ಜಮೀನು ಮೂಲಗೇಣಿ ಹಕ್ಕಿನದಿದ್ದು ಅದರ ವಾರ್ಷಿಕ ಮೂಲಗೇಣಿ ರೂ ೮-೩-೦ ಮಾತ್ರ ಇರುತ್ತದೆ. ಈ ಹೊರತು ಬೇರೆ ಯಾವದೇ ತರದ ಹಕ್ಕು-ಸಂಬಂಧ ಯಾರಿಗೂ ಬೋಜಾ ಇರುವದಿಲ್ಲ. ಅವರ್ಸಾ, ತಾ ೩-೪-೫೦.

ಫೋಂಡು ನರಸಿಂಹ ಹೆಗಡೆ

NOTIFICATION UNDER SEC 6 (1) OF THE BOMBAY LAND REQUISITION ACT, 1948

CORRIGENDUM.

In this office Notification No O/A 2968 dated 28—1—1950 in clause (ii) after the words "the Huzur Mamlatdar, Karwar (town) the words" and the Mamlatdar of Sirsi respectively" shall be added

Karwar, 29 4—1950 **M K. JADHAV,** Collector of Kanara

ಮುಕ್ಕಾಲು ಶತಮಾನದಿಂದಲೂ ಕರ್ನಾಟಕದಲ್ಲೆಲ್ಲ ಹೆಸರುವಾಸಿಯಾಗಿರುವ

— ಇದೀಗ ಎಂದಿಗಿಂತಲೂ ಉತ್ತಮ!

(ಮಂಗಳೂರಿ) ಕುಮಟಾ ನಶ್ಯ

ವ್ಯಾಪಾರ ಸಂಬಂಧ ಮಾಹಿತಿಗಾಗಿ ಬರೆಯಿರಿ:—

ದಿ ಮಂಗಳೂರು ಸ್ನಫ್ ವರ್ಕ್ಸ, ಕುಮಟಾ.

ಪ್ರೊಪ್ರೈಟರ — ಟಿ ಎಮ್ ಎಸ್ ಎಂಡ್ ಸನ್

ಜಿಲ್ಲಾ ಸಮಾಚಾರ.

ಧಾರವಾಡ— (ತಾ [illegible]) ಕಳೆದ [illegible] ಕನ್ನಡ ಟ್ರೇನಿಂಗ ಕಾಲೇಜಿನ ಪ್ರಶಿಕ್ಷ- [illegible] ಪರೀಕ್ಷೆಯ ಫಲಿತಾಂಶವು [illegible] ತಿಳಿಯುತ್ತದೆ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟಂಡ, ಹುಬ್ಬಳ್ಳಿ.

ವಿ ಸೂಚನೆ.— [illegible]ದಿಂದ (ಯು [illegible], ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮಲ್ಲಿ ಬರುವ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ಏರ್ಪಾಡು ಮಾಡಲಾಗುವದು ಇವಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ

ಮಾಲಕ:— ಮ್ಹಾಳಪ್ಪಾ ಪೈ.

೨೯ರಂತೆ, ದೋಣಿಯಲ್ಲಿದ್ದ ನಾವಿಕರು ದೋಣಿಯಿಂದಲ್ಲಿ ಇದ್ದು ಸಾಹೇಬರನ್ನು ಸಮುದ್ರದ ತೀರಗಳ್ಳಿ ೧೨ ಜನರು ಇರುತ್ತಾರೆಂತೆ, ಒಬ್ಬನು ಅಲ್ಲಿಯೇ ... ಇರುತ್ತಾನಂತೆ.

ಒಳೆದ ವರ್ಷ ಸರಕಾರ ಧಾನ್ಯ—ಎತ್ತುವಳಿಯ ಕೆಲಸ ವನ್ನು ಉತ್ತಮವಾಗಿ ... ನಮ್ಮ ಜಿಲ್ಲೆಗೆ ... ಬಾರಿಕೋಳಿಸಿದ ರೂ. ೧೫೦೦೦ ಹಣವನ್ನು ಶಿಕ್ಷಣಗಳಲ್ಲಿ ದೀಜದ ಹೋರಿಗಳನ್ನು ಖರೀದಿಸುವದಕ್ಕಾಗಿ ... ಯೋಗಿಸಬೇಕೆಂದು ಹಿಂದೊಮ್ಮೆ ಜಿಲ್ಲಾ ಗ್ರಾಮೋದ್ಧಾರ ... ಮಂಡಳ ದವರ ... ಆಗಿ, ಸರಕಾರಕ್ಕೆ ಈ ... ಸಮ್ಮತವಾಗಲಿಲ್ಲವಂತೆ ಹಣದ ವಿನಿಯೋಗದ ಪ್ರಶ್ನೆಯು ಪುನರಾಲೋಚನೆ ಮಾಡಬೇಕೆಂದು ಅವರ ... ಸಿದ್ದರು ಆದರಂತೆ ಜಿಲ್ಲಾ ಗ್ರಾಮೋದ್ಧಾರ ಮಂಡಳ ದವರೂ ಜಿಲ್ಲಾ ಫೋಕಲ ಕಲದ ಸಮಿತಿಯವರೂ ಒಟ್ಟಿಗೆ ಸಭೆಸೇರಿ ಆಲೋಚಿಸಿ, ಸಂಕರೋತ್ಪಾದನ ಸಂಘದವರ ದಣವನ್ನು ಕುಮಟೆಯೊಳಗಿನ ಕನರಾ ಕೋಟ್ರೇಜಗೆ ... ಯಾಗಿ ಕೊಡಬೇಕೆಂದು ತೀರ್ಮಾನಿಸಿರುತ್ತಾರೆ.

ಕಳೆದ ತಾ. ೨೮ರಂದು ಇಲ್ಲಿಯ ಸರಕಾರಿ ಹಾಯ್ ಸ್ಕೂಲಿನ ವಿದ್ಯಾರ್ಥಿಗಳ ವಾರ್ಷಿಕ ವಿನೋದೋತ್ಸವ ರಾ| ಸಣ್ಣಪ್ಪ ಪರಮೇಶ್ವರ ಗಾಂವಕಾರ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಂಜಾನೆಯಲ್ಲಿ ವಿದ್ಯಾರ್ಥಿಗಳ ಶಿಲ್ಪ ಕೃತಿಗಳ ಪ್ರದರ್ಶನವೂ ಸಂಜೆಯಲ್ಲಿ ಬಗೆಬಗೆಯ ವಿನೋದಾವಳಿಗಳೂ ನಡೆದವು. ಶಾಲೆಯ ... ಕ್ರೀಡೆಗಳಲ್ಲೂ ಮೇಲ್ಮೆ ... ದವರಿಗೆ ಅಧ್ಯಕ್ಷರ ಕಡೆಯಿಂದ ಬಹುಮಾನಗಳನ್ನು ಕೊಡಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮ.ಮ. ... ಜಿಯವರು ಬೋಧಿಸಿದಂತೆ ಶಾರೀರಿಕ ಶ್ರಮದ ... ಗಳನ್ನು ಮೇಲೆ ಶಿಕ್ಷಣವು ಆಧಿಷ್ಠಿತವಾಗಬೇಕೆಂದೂ, ಶಿಕ್ಷಣದಲ್ಲಿ ವಿಷಯಗಳಿಗೆ ಪ್ರಾಧಾನ್ಯ ಕೊಡದೆ ವಿದ್ಯಾರ್ಥಿಯ ಬುದ್ಧಿ—ಮನಸ್ಸುಗಳಿಗೆ ಪ್ರಾಧಾನ್ಯ ಕೊಡಬೇಕೆಂದೂ ಬೋಧಿಸಿದರು. ಆ ಮೇಲೆ ಕೆಲವು ನಾಟ್ಯದೃಶ್ಯಗಳ ಪ್ರಯೋಗಗಳಾದವು.

ಸುಭಾಷ ಕಪ್ ಕ್ರಿಕೆಟ ಪಂದ್ಯಾಟಗಳ ಪ್ರಾಥಮ್ಯಯು ಕಳೆದ ತಾ. ೧೯ ಆಯಿತು. ಕ್ರಿಕೆಟ ಆಟಗಾರರ ೪ ಸಂಘಗಳು ಈ ಪಂದ್ಯಾಟದಲ್ಲಿ ಭಾಗ ವಹಿಸಿದ್ದವು. ... ಕ್ರಿಕೆಟ ಕ್ಲಬದವರು ಈ ಪಂದ್ಯಾಟವನ್ನು ಗೆದ್ದರು. ವಿಜಯಿ ಸಂಘದ ಕರ್ಣಧಾರರಿಗೆ ಕಪ್ಪನ್ನು ... ಜಿಲ್ಲಾಧಿಕಾರಿ ರಾ| ... ಮಾಡಿ, ಕ್ರಿಕೆಟ ಆಟದಿಂದ ಸಾಂಘಿಕತೆಯು ಹೋಷಣೆಯಾಗುತ್ತದೆಂದು ಹೇಳಿದರು.

ಅಂಕೋಲಾ— ಸರ್ವೋದಯ ಕಾರ್ಯದ ವಿಕಾಸ ಹೇಗೆ ಸಾಧಿಸಬಹುದು, ಅದರ ಕಾರ್ಯವನ್ನು ಹೇಗೆ ಸಂಘಟಿಸಬೇಕು ಎಂಬೀ ಪ್ರಶ್ನೆಗಳ ಚರ್ಚೆ ಮಾಡುವ ಸಲುವಾಗಿ ಇದೇ ಬರುವ ತಾ. ೧೦ರಿಂದ ೧೧ರ ವರೆಗೆ ಸರ್ವೋದಯ ಸಂಮೇಲನವು ಹಿಚಕಡ ಗ್ರಾಮದೊಳಗಿನ ಸರ್ವೋದಯ ಕೇಂದ್ರದಲ್ಲಿ ಸರ್ವೋದಯ ಸಮ್ಮೇಲನವನ್ನು ಕೂಡಿಸಲು ನಿಶ್ಚಯಿಸಿದ್ದಾರೆ. ತಾ. ೧೦ರಂದು ಮುಂಜಾನೆ ಸರ್ವೋದಯ ಪ್ರದರ್ಶನ, ಮಧ್ಯಾಹ್ನದಲ್ಲಿ ಸಮ್ಮೇಲನ ಹಾಗೂ ತಾ. ೧೧ರಂದು ಮುಂಜಾನೆ ... ಸರ್ವೋದಯ ಯೋಜನೆಯ ... ಮತ್ತು ಸಂಜೆಯಲ್ಲಿ ... ನಡೆಯುವವು. ಸರ್ವೋದಯ ಕಾರ್ಯದಲ್ಲಿ ಆಸಕ್ತರಾದವರೆಲ್ಲ ಸಮ್ಮೇಲನಕ್ಕೆ ಬರಬೇಕಾಗಿ ಸಂಚಾಲಕರ ವಿನ್ನಹವಿದೆ.

ಜಗತ್ಪ್ರಸಿದ್ಧ ... ಯವರ ... ಸಾರ್ವಜನಿಕ ಅಂಕೋಲೆಯಲ್ಲಿ ... ವ್ಯವಸ್ಥೆ ಮಾಡ

ಲಾಗಿದೆ! ಒಂದಿಷ್ಟು ಸಕ್ಕರೆಗಾಗಿ ಜನರು ೮ ಮೈಲು ನಡೆಯಬೇಕೆಂದು ಹೇಳುವದು ಎಷ್ಟರ ಮಟ್ಟಿಗೆ ನ್ಯಾಯ ... ದೇವರಿಗೇ ಗೊತ್ತು! ಈ ಸಕ್ಕರೆಯನ್ನು ಹೊನ್ನಳ್ಳಿಯಲ್ಲೇ (ಅವಾಗ ಎಷ್ಟೋ ಬಟವಡೆಯಾಗುವಲ್ಲಿ) ಸಿಗುವಂತೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುವದೆಂದು ಹೇಳುತ್ತ ಜನರ ಅಂಚೋಲ್ಯದಂಟು ಅಧಿಕಾರಿಗಳು ಈ ಬೇಡಿಕೆಯನ್ನು ಯಾಕೆ ಮಾನ್ಯ ಮಾಡಬಾರದು?

ಇಲ್ಲಿಯ ಮಾಮಲೇದಾರ ರಾ| ಬಾಂದೇಕರ ಇವರಿಗೆ ಬೇರೆ ಜಿಲ್ಲೆಗೆ ವರ್ಗವಾಗಿದ್ದು, ಭಟಕಳದಲ್ಲಿ ಮಹಾಲಕರಿಗಳಾಗಿದ್ದ ರಾ| ... ಇವರು ಯಲ್ಲಾಪುರ ಮಾಮಲೇದಾರರಾಗಿ ಬಂದಿದ್ದಾರೆ.

ಸುಪಾ— ೧೯೪೯ ೫೦ನೇ ಸಾಲಿನ ಸುಪಾ ಪೇಟೆಯ ... ಭಾಗದ ಪರೀಕ್ಷೆಯ ಪ್ರಕಟಣೆ ಈಗ ಪ್ರಕಟವಾಗಿದೆ. ಮಾಹಾಲಕರಿಗಳು ೬-೭ ನೇ ವರ್ಗ ಗಳಲ್ಲಿ ಎರಡೆ ... ದಿಂದ ಇರುವರಿಗೆ ತೇರ್ಗಡೆಯಾ ... ೫ನೇ ವರ್ಗದ ... ಗಳಿಂದಲೂ ... ತೇರ್ಗಡೆಯಾದದ್ದು ... ಸರ್ವೇ ... ವರ್ಗದ ... ತೇರ್ಗಡೆ ... ಸಸಿಡ್ವು ೧ನೇವರ್ಗಕ್ಕೆ ಮತ್ತು ... ತೇರ್ಗಡೆ ... ನಡವು ೬ನೇ ವರ್ಗಕ್ಕೆ ... ಕೆಳಗೆ ತೋರಿಸಿದಂತೆ ಸರಾಸರಿ ಭಾಗದ ... (... ಮುಖಗಳಲ್ಲಿ) ಬಂದಿದ್ದಂದು ... ಸಿದ್ದರೆ.

ಸರ್ವೇ ಗ್ರಾಸ್ಯ	೫ನೇ ವರ್ಗದವರು	೬ನೇ ವರ್ಗದವರು,
೩	೨೩	೨೬
೭	೨೪	೧೪
೮	೨೫	೨೦
೯	೧೬	೧೬

ಹಳಿಯಾಳ— (ತಾ. -೨-೪-೫೦) ಇಲ್ಲಿಯ ಸೀಮೆ ... ಅಂಗಡಿಯ ರಾ| ... ಯವರ ದೇಶ ... ಮಾಡಿದ್ದೇಯವರು ... ಪರವಾನೆಯು ಶರತ್ತುಗಳನ್ನು ಉಲ್ಲಂಘಿಸಿದ್ದು ಕಂಡು ಬಂದದ್ದರಿಂದ ಜಿಲ್ಲಾಧಿಕಾರಿ ಅವರ ಪರವಾನೆಯನ್ನು ರದ್ದು ಪಡಿಸಿರುತ್ತಾರೆ. ಶಿಲ್ಕು ಇರುವ ಸಾವಳವನ್ನು ೧ ತಿಂಗಳೊಳಗಾಗಿ ವಿಲೇವಾರಿ ಮಾಡಿ ಪರವಾನೆಯನ್ನು ಮಾಮಲೇದಾರರಿಗೆ ಒಪ್ಪಿಸಬೇಕೆಂದು ಅವರಿಗೆ ಅಪ್ಪಣೆ ಮಾಡಿರುತ್ತಾರೆ.

ಕಳೆದ ತಾ. ೨೬ಕ್ಕೆ ಕೇರಿಗಾಂವದಲ್ಲಿ ರೆಡ್ಡಿ ದಿನದ ಆಚರಣೆಯಾಯಿತು. ಧಾರವಾಡದ ರಾ| ಹುಕ್ಕೇರಿಕರ ರಾಮರಾಯರು ಅಧ್ಯಕ್ಷರಾಗಿದ್ದರು. ಸುಮಾರು ೨೫೦ ಜನ ರೈತ ಜನ ... ಯಿತು. ಈ ಕೇಲಗಳಿಗೂ ಹೆಚ್ಚಿಗೆ ಭತ್ತ ಕೊಟ್ಟ ಒಕ್ಕಲಗರಿಗೆ ಬಹುಮಾನಗಳನ್ನು ಕೊಡಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಾಡಿನ ಆಹಾರ ಸಮಸ್ಯೆಯನ್ನು ಬಿಡಿಸುವಲ್ಲಿ ರೈತರು ಸರಕಾರಕ್ಕೆ ನೆರವಾಗಬೇಕೆಂದು ಬೋಧಿಸಿದರು.

ಈಗ ತಾಲೂಕಿನಲ್ಲಿ ನೀರಿನ ಕೊರತೆ ಬಹಳವಾಗಿದೆ ಕೆರೆ-ಬಾವಿಗಳಲ್ಲಿ ಮುದ್ದು ಹಾಕದೇ ಇದ್ದರೂ ನೀರು ಸಾಲದಾಗಿದೆ. ಇನ್ನೂ ೧೫ ದಿನಗಳಲ್ಲಿ ಮಳೆಯಾಗದಿದ್ದರೆ ನೀರಿಲ್ಲದೆ ಜನರು ಬಳಲುವ ಪ್ರಸಂಗ ಬರುವಂತಿದೆ. ಇಲ್ಲಿಯ ಮ್ಯು| ಯು ಕ್ಷೇತ್ರದಲ್ಲಿ ತರುಗಣಿ ಬಾವಿಯೊಂದುಂಟು. ಅದರ ಪಂಪು ಹಾಳಾಗಿ ಹೋಗಿದೆ. ಅದನ್ನು ಮ್ಯು| ಯವರು ಕೂಡಲೇ ಸರಿಪಡಿಸುವ ವ್ಯವಸ್ಥೆ ಮಾಡಬೇಕಾಗಿ ಸೂಚನೆಯುಂಟು. ಅದೇ ರೀತಿ ಸರಕಾರದವರು ಬತ್ತುತ್ತಿರುವ ಕೆರೆಬಾವಿಗಳಲ್ಲಿ ಬೋರಿಂಗ ಮಾಡಿಸುವ ಕ್ರಮವನ್ನು ಶೀಘ್ರವೇ ಕೈಕೊಳ್ಳಬೇಕಾಗಿ ವಿನ್ನಹ. ವಿಳಂಬ ಮಾಡಿದರೆ ನರು ಒಂದೇ ನೀರಿದೇ ಸಾಯುವ ಇಲ್ಲವೆ ದೇಶಾಂತರ ಮಾಡುವ ಪ್ರಸಂಗ ಬರುವದು.

ಜಾಹೀರ ಲಿಲಾಂವು.

ಕೆಳಗೆ ನಮೂದಿಸಿದ ಫಾರೆಸ್ಟ ಡಿಪೋಗಳಲ್ಲಿ ಅವುಗಳ ಎದುರಿಗೆ ತೋರಿಸಿದ ತಾರೀಖುಗಳಲ್ಲಿ ಆ ವೇ. ಸಾಗವಾನಿ ವ ಜಂಗಲಿ ಜಾತಿಯ ಇಮಾರತಿ ಕಟ್ಟಿಗೆಯ ಜಾಹೀರ ಲಿಲಾಂವು ಮಾಡಲ್ಪಡುವದು.

ಡಿಪೋ	ತಾರೀಖು	ವೇಳೆ
ಮಳಗಿ, ಕಾತೂರ ಮತ್ತು ಪಾಳಾ	೧೫—೫—೫೦ ವ ೧೬—೫—೫೦	ಮುಂಜಾನೆ ೮ ಘಂಟೆಗೆ
ಮುಂಡಗೋಡ	೧೭—೫—೫೦	,, ,,
ತಿನವಳ್ಳಿ ವ ಕೋರ್ಲಕೇರಿ	೧೯—೫—೫೦ ವ ೨೦—೫—೫೦	,, ,,
ಹುಬ್ಬಳ್ಳಿ	೨೨—೫—೫೦	,, ,,

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಧಾರವಾಡ, **ಎನ್. ಎಸ್. ಕಾಯಕಿಣಿ.**

೨೧—೪—೫೦ ಡಿವ್ಹಿಜನಲ್ ಫಾರೆಸ್ಟ ಆಫೀಸರ, ಪೂರ್ವ ಭಾಗ ಧಾರವಾಡ.

THE BANK OF RURAL INDIA LTD.,

(Incorporated in India Union Liability of Members Limited)

HEAD OFFICE — "Satyashrama Bhuvanam, **KARWAR.** N. K.

Offices at — KARWAR, KUMTA SIRSI, HONAVAR, YELLAPUR BHATKAL, SIDDAPUR, ANKOLA, HUBLI & DHARWAR

Authorised Capital ,, Rs 10,00,000,

Subscribed Capital ,, Rs. 5,00,000.

Paid-up Capital & Reserves ,, Rs 5 08502-6-0

Rates of Interest on Deposits

Current a/c @ 1 % p a *Savings Bank a/c @ 2½ %*

Fixed Deposits for 3 months @ 3% per annum

,, for 6 months @ 3½% ,, ,,

,, for 12 months or more @ 4% ,,

All kinds of modern Banking business transacted.

Karwar, 1st June 1950

P X GRACIOUS
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ... (ಸಂಪಾದಕ) ಇವರು ... ಮುದ್ರಿಸಿ ಪ್ರಕಟಿಸಿದರು

Reg. No. B. 1270 Monday, 15-5-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೪೭

ಕುಮಟಾ — ಸೋಮವಾರ, ತಾ ೧೫—೫—೧೯೫೦

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩!
ಅಂಚೆಯ ಆದ ವರ್ಷಕ್ಕೆ—೧ ೦
೬ ತಿಂಗಳಿಗೆ ೨ ೪—೦
ಬಿಡಿ ಸಂಚಿಕೆಗೆ ,, ೦ ೧-೬
ವ್ಹಿ ಪಿ ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೬ ಆಣೆಯಂತೆ
ಪಡಕ್ಕ ಇಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ವಿವಿಧ ವಿಷಯಗಳು.

ಇದೇ ಮೇ ತಾ ೭ಕ್ಕೆ ಡಾ! ನಾರಾಯಣ ರಾವ ಹರ್ಡೀಕರರ ಪ್ರಾಯಕ್ಕೆ ೬೦ ವರ್ಷಗಳು ತುಂಬಿ, ೬೧ನೇ ವರ್ಷದಲ್ಲಿ ಅವರು ಪದಾರ್ಪಣ ಮಾಡಿದರು ಡಾ|| ಹರ್ಡೀಕರರು ಹಿಂದುಸ್ತಾನಿ ಸೇವಾದಲವನ್ನು ಸಂಘಟಿಸಿ ಕೊಂಗ್ರೆಸ್ಸಿಗೂ, ಸ್ವಾತಂತ್ರ್ಯ ಸಮರದ ಆಂದೋಲನಕ್ಕೂ ಸಲ್ಲಿಸಿದ ಸೇವೆ ಮಹತ್ತರವಾದದ್ದು. ಡಾಕ್ಟರರು ೧೯೨೦ರಲ್ಲಿ ಅಮೇರಿಕೆಯಿಂದ ತಿರುಗಿ ಭಾರತಕ್ಕೆ ಬಂದಾಗ ಒಂದು ಕೊಂಗ್ರೆಸ್ಸಿನ ರಾಜಕಾರಣದಲ್ಲಿ ಪ್ರತ್ಯಕ್ಷ ಸೇರುವ ಮೊದಲು ಕೊಂಗ್ರೆಸ್ಸಿನ ಕೆಲಸವನ್ನು ಮಾಡುವ ಸ್ವಯಂಸೇವಕರೂ ಕಾರ್ಯಕರ್ತರೂ ಇದ್ದಿಲ್ಲೆಂದಲ್ಲ ಆದರೆ ಈ ಕಾರ್ಯಕರ್ತ ಸ್ವಯಂಸೇವಕರಲ್ಲಿ ಶಿಸ್ತಿನ ಸಂಯಮವಾಗಲಿ, ಸಂಘಟನೆಯು ಸಹಕಾರವಾಗಲಿ ಇರಲಿಲ್ಲ ಅದರಿಂದ ತಲೆಗೊಂದು ವಿಚಾರವಾಗಿ ಅವರ ಕೆಲಸ ವಿಶ್ಶಳಿತ ಮತ್ತು ಅಸಂಘಟಿತವಾಗುತ್ತಿತ್ತು. ಡಾಕ್ಟರರು ಈ ಮಾತನ್ನು ಕಂಡು ಹಿಡಿದು, ಕೊಂಗ್ರೆಸಿನ ಕಾರ್ಯವನ್ನು ನಾಡಿನಲ್ಲಿ ಸುಸಂಘಟಿತವಾಗಿ ಪ್ರಚುರಗೊಳಿಸಲು ತರಬೇತಿ ಹೊಂದಿದ ಮತ್ತು ಸಂಘಟನೆಯು ಮಹತ್ವವನ್ನರಿತ ಸ್ವಯಂಸೇವಕರು ಬೇಕೆಂಬ ನಿರ್ಣಯಕ್ಕೆ ಬಂದರು, ಮತ್ತು ೧೯೨೩ ರಲ್ಲಿ ಕೊಕೊನಾಡಾ ಕೊಂಗ್ರೆಸ್ಸಿನ ಕಾಲಕ್ಕೆ ಪಂ|| ಜವಾಹರಲಾಲರ ಅಧ್ಯಕ್ಷತೆಯಲ್ಲಿ ಅ! ಭಾ! ಸ್ವಯಂಸೇವಕ ಪರಿಷತ್ತನ್ನೊಂದು ಕ್ರೂಢಿಸಿ, ಒಂದು ಸುಸಂಘಟಿತ ಸ್ವಯಂಸೇವಕ ದಲದ ನಿರ್ಮಾಣದ ಮಹತ್ವದ ಕಾರ್ಯವನ್ನು ಕೈಕೊಂಡರು ಕೊಂಗ್ರೆಸ್ಸಿನ ನಾಯಕರಿಂಗೂ ಅವರ ಸೂಚನೆ ಮಾನ್ಯವಾಯಿತು. ಅದೇ ಕೆಲವು ದಿನಗಳಲ್ಲಿ ಡಾ|| ಹರ್ಡೀಕರರು ಬಾಗಲಕೋಟೆಯಲ್ಲಿ ಹಿಂದುಸ್ತಾನಿ ಸೇವಾದಲದ ಶಿಬಿರವನ್ನು ತೆರೆದು, ಅಲ್ಲಿ ನೂರಾರು, ಸಾವಿರಾರು ತರುಣರಿಗೆ ಶಿಸ್ತಿನ ಜೀವನಕ್ರಮ ಕಲಿಸಿ ಮತ್ತು ಸಂಘಟನೆಗಾಗಿಯೂ ರಾಷ್ಟ್ರೀಯತೆಯ ಪ್ರಚಾರಕ್ಕಾಗಿಯೂ ಅವಶ್ಯವುಳ್ಳ ಬೌದ್ಧಿಕ ಶಿಕ್ಷಣವನ್ನಿತ್ತು, ಅವರಿಗೆ ರಾಷ್ಟ್ರಸೇವೆಯ ದೀಕ್ಷೆಯನ್ನು ಕೊಟ್ಟರು. ಹಿಂದುಸ್ತಾನದ ಸಕಲ ಪ್ರಾಂತಗಳಲ್ಲೂ ಇಂತಹ ದೀಕ್ಷಾಬದ್ಧ ತರುಣರು ಇದ್ದುದರಿಂದಲೇ ೧೯೩೦ ರ ಉಪ್ಪಿನ ಸತ್ಯಾಗ್ರಹವೂ ೧೯೩೨—೩೩ ಸತ್ಯಾಗ್ರಹ-ಸಂಗ್ರಾಮವೂ ಯಶಸ್ವಿಯಾಗಿ ನಡೆದವು. ಮುಂದೆ ಕಾರಣಾಂತರಗಳಿಂದ ಬಾಗಲಕೋಟೆಯ ಹಿಂದುಸ್ತಾನಿ ಸೇವಾದಲದ [illegible]ರವನ್ನು ಮುಚ್ಚಬೇಕಾಯಿತು ಆದರೂ ಡಾ|| ಹರ್ಡೀಕರರ ಕೈಕೆಳಗೆ ಶಿಕ್ಷಣ ಪಡೆದ ತರುಣರು [illegible] ತಮ್ಮ ನಾಡಿನಲ್ಲಿ ಇಂದು ಶಿಸ್ತು-ಸಂಘಟನೆಯ ಪ್ರಚಾರ ಮಾಡುತ್ತಿದ್ದಾರೆ ಹಿಂದುಸ್ತಾನಿ ಸೇವಾದಲವನ್ನಲ್ಲದೆ ಡಾ|| ನಾರಾಯಣರಾಯರು ಕರ್ನಾಟಕದಲ್ಲಿ ಭಗಿನೀ ಸಮಾಜದಂತಹ ಹಲ ಸಂಸ್ಥೆಗಳನ್ನು ಸಂಘಟಿಸಿ ಕರ್ನಾಟಕದಲ್ಲಿ ಸಂಘಟನೆಯ ಬೀಜ ಬಿತ್ತಿದ್ದಾರೆ, ಮತ್ತು ರಾಷ್ಟ್ರಕ್ಕೆ ಒಂದು ಅಮೂಲ್ಯ ಕಾಣಿಕೆಯನ್ನಿತ್ತಿದ್ದಾರೆ ಅವರ ಈ ಅಮೂಲ್ಯ ಸೇವೆಯನ್ನು ಸ್ಮರಿಸಿ ಅವರ ಷಷ್ಠ್ಯಬ್ದಿ — ಪೂರ್ತಿಯನ್ನು ಸಾರ್ವಜನಿಕವಾಗಿ ಆಚರಿಸಬೇಕೆಂದು ಅವರ ಮಿತ್ರರೂ, ಶಿಷ್ಯರೂ ಸಹಕಾರಿಗಳೂ ನಿಶ್ಚಯಿಸಿ, ಅದರಂತೆ ಕಳೆದ ತಾ ೭ ನೇ ರವಿವಾರ ಮುಂಬಯಿಯಲ್ಲಿ ಡಾಕ್ಟರರನ್ನು ಬರಮಾಡಿಕೊಂಡು, ಯಥೋಚಿತವಾಗಿ ಗೌರವಿಸಿದರು ಸರ್ ಕಾವಸಜಿ ಜಹಾಂಗೀರ ಸಭಾಗೃಹದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಮುಂಬಯಿಯ ನಗರಾಧ್ಯಕ್ಷ ಶ್ರೀ|| ಸ ಕಾ ಪಾಟೀಲರು ಡಾ|| ಹರ್ಡೀಕರರಿಗೆ ೬೧೦೦೦ ರೂ ಗಳದೊಂದು ಹಮ್ಮಿಣಿಯನ್ನೂ, ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದ, ಭಾರತದ ಮಹಾಮಂತ್ರಿ ಪಂ|| ಜವಾಹರಲಾಲ, ಭಾರತದ ಕೊನೆಯ ಸರ್ವಾಧಿಕಾರಿಗಳಾಗಿದ್ದ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯ ಮೊದಲಾದ ಭಾರತದ ಪ್ರಮುಖರಿಂದಲೂ ಡಾಕ್ಟರರ ಗೆಳೆಯ-ಅನುಯಾಯಿ-ಪ್ರಶಂಸಕರಿಂದಲೂ ಬಂದ ಪ್ರಶಂಸಾಪರ ಲೇಖಗಳಿಂದ ಒಡಗೂಡಿದ ಒಂದು ಅಭಿನಂದನ ಗ್ರಂಥವನ್ನೂ ಅರ್ಪಿಸಿದರು. ಶ್ರೀ|| ಪಾಟೀಲರು ತಮ್ಮ ಭಾಷಣದಲ್ಲಿ ನಾಡಿನ ತರುಣ-ತರುಣಿಯರಿಗೆ ಶಿಸ್ತು—ಸಂಘಟನೆಗಳ ತರಬೇತಿಯನ್ನು ಕೊಟ್ಟು, ಸೇವಾದಲದ್ವಾರಾ ಡಾಕ್ಟರರು ಭಾರತೀಯ ಸ್ವಾತಂತ್ರ್ಯ-ಸಂಪಾದನೆಯ ಕಾರ್ಯಕ್ಕೆ ಮಾಡಿದ ಉಪಕಾರವನ್ನು ಕೊಂಡಾಡಿ, ಸ್ವತಂತ್ರ ಭಾರತದ ಬಲ-ಶೀಲಗಳ ಸಂವರ್ಧನೆಯ ಬಗ್ಗೆಗಿ ಹೊಸ ಸ್ವಯಂಸೇವಕ ಪಡೆಯನ್ನು ಸಂಘಟಿಸಬೇಕೆಂದೂ, ದಯಘನ ದೇವರು ಆ ಕಾರ್ಯವನ್ನು ನೆರವೇರಿಸಲು ಡಾಕ್ಟರರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ ಹಾರೈಸಿದರು ಡಾಕ್ಟರರು ಉತ್ತರ ಕೊಡುತ್ತ, ಸ್ವತಂತ್ರ ಭಾರತದ ಸೇವೆಗೂ ಸಂಘಟಿತ ಸ್ವಯಂಸೇವಕರ ದಲದ ಅವಶ್ಯಕತೆಯುಂಟೆಂಬುದನ್ನು ಒಪ್ಪಿಕೊಂಡು, ಮುಂಬಾಪುರಸ್ಥ ಪ್ರಶಂಸಕರ ತಮಗರ್ಪಿಸಿದ ಹಮ್ಮಿಣಿಯ ಹಣದಲ್ಲಿ ಕೆಲವು ಭಾಗವನ್ನು ತಮ್ಮ ನೇತೃತ್ವದಲ್ಲಿ ದುಡಿಯುತ್ತಿರುವ ಸಾರ್ವಜನಿಕ ಸಂಸ್ಥೆಗಳಿಗೆ ಕೊಟ್ಟು, ಉಳಿದ ಹಣವನ್ನು ಭಾರತದ ದಂಡ-ನಾಯಕರಿಗೆ ಒಪ್ಪಿಸಿ, ಅವರ ಬಡ್ಡಿಯಿಂದ ಪ್ರತಿವರ್ಷ ಭಾರತದ ಉತ್ತಮ ಯೋಧನೊಬ್ಬನಿಗೆ ಪಂ|| ಜವಾಹರಲಾಲರ ಹೆಸರಿನದೊಂದು ಪಾರಿತೋಷಿಕ ಕೊಡುವಂತೆ ವ್ಯವಸ್ಥೆ ಮಾಡಲಿಚ್ಛೆಯಿದೆಂದು ನುಡಿದರು

ಡಾ|| ಹರ್ಡೀಕರರಿಗೆ ಮುಂಬಯಿಯಲ್ಲಿ ಒಪ್ಪಿಸಿದ ವಜ್ರಮಹೋತ್ಸವದ ಅಭಿನಂದನ ಗ್ರಂಥದ ಕನ್ನಡ ಆವೃತ್ತಿಯೊಂದನ್ನು, “ ಡಾಕ್ಟರ ಹರ್ಡೀಕರರೊಂದಿಗೆ— ” ಎಂಬ ಹೆಸರಿನಿಂದ, ಡಾ|| ಹರ್ಡೀಕರ ವಜ್ರಮಹೋತ್ಸವ ಸಮಿತಿಯ ಕರ್ನಾಟಕ ಶಾಖೆಯವರು ಪ್ರಕಟಿಸಿರುತ್ತಾರೆ ೧೩೦ ಪುಟಗಳ ಈ ಗ್ರಂಥದಲ್ಲಿ ಹಲವಾರು ಛಾಯಾಚಿತ್ರಗಳಿವೆ ಗ್ರಂಥದ ಬೆಲೆ ರೂ. ೧ ಇಡಲಾಗಿದೆ ಗ್ರಂಥವು ಸಂಗ್ರಾಹ್ಯವಿದೆ

ಬಂಗಾಲದಲ್ಲಿ ಕಳೆದ ಫೆಬ್ರುವರಿ ತಿಂಗಳಲ್ಲಿ ನಡೆದ ಜಾತೀಯ ಅತ್ಯಾಚಾರಗಳ ಸಂಬಂಧದಲ್ಲಿ ಭಾರತ ಸರಕಾರವು ಸ್ವೀಕರಿಸಿದ ಧೋರಣ ಮತ್ತು ಕೈಕೊಂಡ ಕ್ರಮಗಳು ಸರಿದೋರದ್ದರಿಂದ ಡಾ|| ಶ್ಯಾಮಾಪ್ರಸಾದ ಮುಕರ್ಜಿಯವರೂ ಶ್ರೀ|| ಕ್ಷಿತೀಶ ಚಂದ್ರ ನಿಯೋಗಿಯವರೂ ಕಳೆದ ತಿಂಗಳಲ್ಲಿ ತಮ್ಮ ಮಂತ್ರಿಪದಗಳಿಗೆ ರಾಜೀನಾಮೆ ಕೊಟ್ಟದ್ದರಿಂದ ಇವರ ಬದಲು ಹೊಸಬರನ್ನು ನೇಮಿಸಿಕೊಳ್ಳಬೇಕಾಯಿತು ಬಂಗಾಲದ ಸಂಬಂಧದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳ ಮುಖ್ಯ ಮಂತ್ರಿಗಳ ನಡುವೆ ಆದ ಒಪ್ಪಂದದಂತೆ ಆ ಒಪ್ಪಂದದ ಆಚರಣೆಯ ಕಾರ್ಯ ನಿರ್ವಹಿಸಲು ಒಬ್ಬ ಪ್ರತ್ಯೇಕ ಮಂತ್ರಿಯನ್ನು ನೇಮಿಸಿಕೊಳ್ಳುವದೂ ಅವಶ್ಯವಾಯಿತು. ಆಹಾರ ಇಲಾಖೆಯ ಮಂತ್ರಿಗಳಾಗಿರುವ ಶ್ರೀ|| ಜಯರಾಮದಾಸ ದೌಲತರಾಮರ ಕಾರ್ಯ-ನಿರ್ವಹಣೆಯ ಬಗ್ಗೆ ಲೋಕದಲ್ಲಿ ಅತೃಪ್ತಿಯುಂಟಾಗಿದ್ದರಿಂದ ಅವರೂ ಈಗ ರಾಜೀನಾಮೆಯನ್ನಿತ್ತಿದ್ದಾರೆ ಅರ್ಥ ಮಂತ್ರಿ ಡಾ|| ಜೋನ ಮಥಾಯಿಯವರೂ ತಮ್ಮನ್ನು ಅಧಿಕಾರದಿಂದ ಬೇಗನೇ ಬಿಡುಗಡೆ ಮಾಡಬೇಕಾಗಿ ಒತ್ತಾಯ ಮಾಡುತ್ತಿದ್ದಾರೆ ಅದರಿಂದ ಮಹಾಮಂತ್ರಿ ಪಂ|| ಜವಾಹರಲಾಲರು ಇದೀಗ ಕೇಂದ್ರದೊಳಗಿನ ಮಂತ್ರಿ-ಮಂಡಳದ ಪುನರ್ಘಟನೆ ಮಾಡತೊಡಗಿದ್ದಾರೆ. ಬಂಗಾಲ ಪ್ರಶ್ನೆಯ ಮೇಲ್ವಿಚಾರಣೆ ನಡಿಸಲು ಕಲಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಶ್ರೀ|| ಚಾರುಚಂದ್ರ ವಿಶ್ವಾಸರನ್ನು ಮಂತ್ರಿ ಮಂಡಳದಲ್ಲಿ ಸೇರಿಸಿಕೊಳ್ಳಲಾಗಿದೆ ಡಾ|| ಮುಕರ್ಜಿ ರಾಜೀ ಮತ್ತು ನಿಯೋಗಿಯವರ ಸ್ಥಳಗಳಲ್ಲಿ ಮುಂಬಯಿಯ ಶ್ರೀ|| ಕನ್ಹಯ್ಯಾಲಾಲ ಮುನಶಿ ಮತ್ತು ಒಡಿಸಾ ಪ್ರಾಂತದ ಮುಖ್ಯ ಪ್ರಧಾನರಾಗಿದ್ದ ಶ್ರೀ|| ಹರೇಕೃಷ್ಣ ಮೆಹತಾಬ ಇವರಿಬ್ಬರನ್ನು ನೇಮಿಸಿ ಕೊಳ್ಳಲಾಗಿದೆ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರನ್ನೂ, ಆಸಾಮದ ಪ್ರಾಂತಾಧಿಪರಾಗಿರುವ ಶ್ರೀ|| ಶ್ರೀಪ್ರಕಾಶರನ್ನೂ, ಉತ್ತರ ಪ್ರದೇಶ (ಹಿಂದಿನ ಸಂಯುಕ್ತ ಪ್ರಾಂತ) ದ ಮುಖ್ಯ ಮಂತ್ರಿಗಳಾಗಿರುವ ಶ್ರೀ|| ಗೋವಿಂದ ವಲ್ಲಭ ಪಂತರನ್ನೂ ಬೇಗನೇ ಮಂತ್ರಿ ಮಂಡಳದಲ್ಲಿ ಸೇರಿಸಿಕೊಳ್ಳಲಾಗುವದಂತೆ. ಶ್ರೀ|| ಪಂತರನ್ನು ತಮ್ಮಿಂದ ಅಗಲಿಸಬೇಡಿರೆಂದು ಉತ್ತರ ಪ್ರದೇಶದ ಇತರ ಮಂತ್ರಿಗಳೂ ಲೋಕಪ್ರಮುಖರೂ ಪಂ|| ಜವಾಹರಲಾಲರಿಗೆ ಆಗ್ರಹ ಪಡಿಸುತ್ತಿದ್ದ ವರ್ತಮಾನವುಂಟು ಆದರೂ ಡಾ|| ಮಥಾಯಿಯವರು ಬಿಟ್ಟುಹೋಗುವ ಹೆಚ್ಚಿನ ಹೊಣೆಗಾರಿಕೆಯ ಅರ್ಥ ಮಂತ್ರಿಯ ಪದವನ್ನು ನಿರ್ವಹಿಸುವದಕ್ಕಾಗಿ ಶ್ರೀ|| ಪಂತರು ಬೇಕಾಗಿರುವದರಿಂದ ಶ್ರೀ|| ಪಂತರು ಉತ್ತರ ಪ್ರದೇಶದ ಮುಖ್ಯ ಮಂತ್ರಿಪದವನ್ನು ಬಿಟ್ಟುಕೊಟ್ಟು ಕೇಂದ್ರ ಸರಕಾರದಲ್ಲಿ ಸೇರಬೇಕಾದ ಪ್ರಸಂಗವಿದೆ ರಾಜಾಜಿಯವರಿಗೆ ವಿದೇಶ ರಾಜಕಾರಣದ ಮಂತ್ರಿಗಳನ್ನಾಗಿ ಮಾಡುವರಂತೆ ಈ ಇಲಾಖ

ಪಯನ್ನು ರಾಜಾಜಿಯವರಿಗೊಪ್ಪಿಸಿ ತಮ್ಮ ಭಾರವನ್ನು ಹಗುರಗೊಳಿಸಿಕೊಳ್ಳಲು ಮತ್ತು ದೇಶದ ಆರ್ಥಿಕ ಯೋಜನೆಯಂತಹ ಕಾರ್ಯಗಳ ಕಡೆ ವಿಶೇಷ ಲಕ್ಷ್ಯ ಪೂರೈಸುವದಕ್ಕಾಗಿ ಸ್ವತಂತ್ರರಾಗಲು ಆತುರಪಡುತ್ತಾರಂತ ಶ್ರೀ|| ಜಯರಾಮದಾಸರು ಬಿಟ್ಟು ಹೋಗಿರುವ ಆಹಾರ ಇಲಾಖೆಯು ಶ್ರೀ ಶ್ರೀಪ್ರಕಾಶರ ಕೊರಳಿಗೆ ಬೀಳುತ್ತದೋ ಏನೋ ಜೂನ ಪ್ರಾರಂಭಕ್ಕೆ ಮಂತ್ರಿಮಂಡಳದ ಈ ಪುನರ್ಘಟನೆ ಪೂರ್ಣವಾಗುವದೆಂದು ಹೇಳುತ್ತಾರೆ

.

ಕಳೆದ ವಿಶ್ವಯುದ್ಧದ ಕಾಲದಲ್ಲಿ ಬ್ರಿಟಿಶ ಸರಕಾರವು ಅನುಸರಿಸಿದ ಆರ್ಥಿಕ ಧೋರಣದಿಂದ ಇಂಗ್ಲಂಡದಲ್ಲಿ ಸಂಪತ್ತಿಯು ಸಮಾಜದಲ್ಲಿ ಹಂಚಿಹೋಗಿ ಒಂದು ಬಗೆಯ ಆರ್ಥಿಕ ಕ್ರಾಂತಿಯಾಗಿದೆ ೧೯೩೯ ಮತ್ತು ೧೯೪೮ನೇ ಇಸವಿಗಳ ನಡುವಿನ ದಶವಾರ್ಷಿಕ ಅವಧಿಯಲ್ಲುಂಟಾದ ಈ ಕ್ರಾಂತಿಯ ಕೆಲವು ಅಂಕಿಸಂಖ್ಯೆಗಳನ್ನು ಒಕಾರ್ಲೇಸ ಬೇಂಕಿನವರು ಕಲಹಾಕಿ ಪ್ರಕಟಗೊಳಿಸಿರುತ್ತಾರೆ ಯುದ್ಧ ಪೂರ್ವಕಾಲದಲ್ಲಿ ಇಂಗ್ಲಂಡದೊಳಗೆ ೬೦೦೦ ಪೌಂಡು (= ರೂ ೮೦೦೦೦) ಯಾ ಹೆಚ್ಚಿಗೆ ನಿವ್ವಳ ವಾರ್ಷಿಕ ಉತ್ಪನ್ನ (ಆದಾಯ ತೆರಿಗೆ, ಮೇಲ್ತೆರಿಗೆ ಮೊದಲ ದವುಗಳನ್ನು ತೆತ್ತು) ವುಳ್ಳವರು ೭೦೦೦ ಮಂದಿ ಇದ್ದರಂತೆ ೧೯೪೭—೪೮ನೇ ಸಾಲಿನಲ್ಲಿ ಇಂತಹ ಜನರು ಒಟ್ಟೆ ೭ ಮಂದಿ ಉಳಿದರಂತೆ ಕೆಲವೊಂದು ಮಿತಿಯನ್ನು ದಾಟಿದ ಉತ್ಪನ್ನದಲ್ಲಿ ಈಗ ಪ್ರತಿ ಪೌಂಡಿಗೆ ೧೯ ೧೯॥ ಶಿಲಿಂಗುಗಳಷ್ಟು ತೆರಿಗೆಗಳನ್ನು ತೆರಬೇಕಾಗುತ್ತಿರುವದರಿಂದ ಈ ಸ್ಥಿತಿಯಾಗಿದೆ ಈ ಕರಗಳನ್ನು ತೆರಬೇಕಾಗುತ್ತಿರುವದರಿಂದ ೪ ಸಾವಿರ ಪೌಂಡುಗಳಷ್ಟು ನಿವ್ವಳ ಉಳಿತಾಯ ಮಾಡಬೇಕಾದರೆ ಯಾರಿಗೂ ಶಂಕು ಬೇಕಾಗಿ ಹೋಗುತ್ತಿದೆ ಇನ್ನೊಂದು ಒದಿಯಲ್ಲಿ, ಯುದ್ಧ-ಪೂರ್ವ ಕಾಲದಲ್ಲಿ ೨೦೦೦ ಪೌಂಡು (= ರೂ ೩೩೩೩) ಯಾ ಹೆಚ್ಚಿಗೆ ನಿವ್ವಳ ವಾರ್ಷಿಕ ಉತ್ಪನ್ನವುಳ್ಳವರು ೧೦ ಲಕ್ಷ ಜನರಿದ್ದರು ೧೯೪೮ರಲ್ಲಿ ಇಂತಹ ಜನರ ಸಂಖ್ಯೆ ೧ ಕೋಟಿಗೆ ಏರಿದೆ! ನಮ್ಮಲ್ಲೂ ಇತ್ತಲಾಗಿ ೨ ಲಕ್ಷ ರೂಗಳಿಗೂ ಹೆಚ್ಚಿಗೆ ಉತ್ಪನ್ನವುಳ್ಳವರು ಆ ಹೆಚ್ಚಿನ ಉತ್ಪನ್ನದಲ್ಲಿ ಆದಾಯ-ತೆರಿಗೆ ಮತ್ತು ಮೇಲ್ತೆರಿಗೆಗಳಿಗಾಗಿ ಪ್ರತಿ ರೂಪಾಯಿಯಲ್ಲಿ ೧೪—೧೫ (ಆರು ವರ್ಷಗಳ ಹಿಂದೆ ೧೫॥ ಆಣೆಯಿತ್ತು) ತೆರಿಗೆ ತೆರಬೇಕಾಗುತ್ತಿದೆ ಈ ಕರ-ತೆರಿಗೆಗಳನ್ನು ತಪ್ಪಿಸಿಕೊಳ್ಳುವ ಮೋಸಗಾರರಷ್ಟೇ ಈಗ ಲಕ್ಷಾಧೀಶ, ಕೋಟ್ಯಾಧೀಶರಾಗಬಲ್ಲರು! ಯಾರೊಬ್ಬರು ಹೊಸದಾಗಿ ನಮ್ಮಲ್ಲಿ ಕೋಟ್ಯಾಧೀಶ, ಲಕ್ಷಾಧೀಶರಾಗಿರುತ್ತಿದ್ದರೆ ಅವರು ವಾಮ ಮಾರ್ಗದಿಂದ ಹಣ ಗಳಿಸಿದವರಿರಬೇಕೆಂದು ಧೈರ್ಯದಿಂದ ಹೇಳಬಹುದು ೨ ವರ್ಷಗಳ ಹಿಂದೆ ಕೇಂದ್ರ ಕಾನೂನ-ಮಂಡಳದಲ್ಲಿ ಶ್ರೀ|| ಷಣ್ಮುಖಂ ಚೆಟ್ಟಿಯವರು ವಾದವಿವಾದದ ಭರದಲ್ಲಿ, "No honest man who honestly pays his taxes can hope to be become a millionaire in these days" (ಸರಕಾರಕ್ಕೆ ಸಲ್ಲಬೇಕಾದ ಎಲ್ಲ ತೆರಿಗೆಗಳನ್ನು ಪ್ರಾಮಾಣಿಕತನದಿಂದ ತೆರುವ ಯಾವ ಪ್ರಾಮಾಣಿಕ ವ್ಯಕ್ತಿಯೂ ಈ ದಿನಮಾನದಲ್ಲಿ ಲಕ್ಷಾಧೀಶ-ಕೋಟ್ಯಾಧೀಶನಾಗಲಾರನು) ಎಂದು ಹೇಳಿದ ಮಾತು ನೆನಸಿನಲ್ಲಿಡತಕ್ಕಂತಹುದಿದೆ

.

ಸರಕಾರಕ್ಕೆ ಸಲ್ಲಬೇಕಾದ ಆದಾಯ-ತೆರಿಗೆ ಮೇಲ್ತೆರಿಗೆಗಳನ್ನು ಸಲ್ಲಿಸದೆ, ಸುಳ್ಳು ಲೆಕ್ಕ ತೋರಿಸಿ ಸರಕಾರಕ್ಕೆ ಮೋಸ ಮಾಡಿದ ಎಷ್ಟೋ ಮೋಸಗಾರ ಶ್ರೀಮಂತರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ದೊಡ್ಡ ದೊಡ್ಡ ಕಾಣಿಕೆಗಳನ್ನಿತ್ತು, ತಮ್ಮ ವಂಚನೆಯ ಪ್ರಕರಣಗಳನ್ನು ಬೈಲಿಗೆಳೆಯದಂತೆ ಸರಕಾರದಿಂದ ಆಶ್ವಾಸನೆಗಳನ್ನು ಪಡೆದಿರುವರೆಂದು ಇತ್ತೀಚಿಗೆ ಕೋಟ್ಯಾಧೀಶ ಕುಬೇರರಾಗಿರುವ ಶೇಟ ರಾಮಕೃಷ್ಣ ಡಾಲ್ಮಿಯಾರವರು ಟೈಮ್ಸ ಒಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಪತ್ರ ಬರೆದು ಭಾರತ ಸರಕಾರದ ಮೇಲೆ ಒಂದ ವ್ಯಂಗ್ಯ ಆರೋಪ ಮಾಡಿರುತ್ತಾರೆ ಭಾರತ ಸರಕಾರದ ಗೃಹ ಮಂತ್ರಿಗಳಾಗಿರುವ ಸರದಾರ ವಲ್ಲಭಭಾಯಿ ಪಟೇಲರು ಈ ಆರೋಪವನ್ನು ಸ್ಪಷ್ಟವಾಗಿ ಅಲ್ಲಗಳೆದು, ವಂಚಕರ ವಂಚನೆಯ ಅಪವಿತ್ರ ಹಣ "ಗಾಂಧಿ ನಿಧಿ"ಗೆ ಬೇಕಾಗಿಲ್ಲೆಂದೂ, ಸರಕಾರಕ್ಕೆ ಸಲ್ಲಬೇಕಾದ ತೆರಿಗೆಗಳನ್ನು ತಪ್ಪಿಸಿದ ದರಾತ್ಮರಾರಾದರೂ ತಮ್ಮ ಪಾಪ ಮುಚ್ಚಿಕೊಳ್ಳುವದಕ್ಕೆಂದು ಆ ನಿಧಿಗೆ ಹಣ ಕೊಟ್ಟಿದ್ದಿದ್ದರೆ ಅದನ್ನು ಡಾಲ್ಮಿಯಾರವರು ತಮಗ ತೋರಿಸಿಕೊಡಬೇಕೆಂದೂ ತಾವು ಕೂಡಲೇ ಅವರ ಹಣ ತಿರುಗಿ ಕೊಡಿಸುವೆವೆಂದೂ ಜಾಹೀರ ಮಾಡಿರುತ್ತಾರೆ ಶೇಟ ಡಾಲ್ಮಿಯಾರವರು ಸ್ವತಃ ತಮ್ಮ ಪಾಪಗಳನ್ನು ಬಾಹೀರ ರೀತಿಯಿಂದ ಒಪ್ಪಿಕೊಂಡು ತಾವು ಹೇಗ ಕುಬೇರರಾದೆವೆಂಬುದನ್ನು ಸ್ಪಷ್ಟಗೊಳಿಸಬೇಕಾಗಿಯೂ ಸರದಾರರು ಪರ್ಯಾಯದಿಂದ ಅವರಿಗ ಅಹ್ವಾನ ಕೊಟ್ಟಿರುತ್ತಾರೆ ಡಾಲ್ಮಿಯಾ ಶೇಟರು ಈ ಆಹ್ವಾನವನ್ನು ಸ್ವೀಕರಿಸಲಿ ಯಾ ಬಿಡಲಿ, ಶ್ರೀ|| ಚೆಟ್ಟಿಯವರು ಹೇಳಿದ ಮಾತನ್ನು ನೆನಪಿನಲ್ಲಿಟ್ಟರೆ, ನಮ್ಮಲ್ಲಿಯ ಶ್ರೀಮಂತರು ಹೇಗ ಶ್ರೀಮಂತರಾಗಿದ್ದಾರೆ ಇಲ್ಲವೆ ಆಗುತ್ತಿದ್ದಾರೆ ಎಂಬುದು ಸರದಾರ-ಡಾಲ್ಮಿಯಾರವರ ನಡುವಿನ ಈ ವಾದದಲ್ಲಿ ಒಳ್ಳೆ ಪ್ರಕಾಶಕ್ಕೆ ಬಂದಿದೆ

.

ಕಳೆದ ವರ್ಷ ಜುಲಾಯಿ-ಆಗೋಸ್ಟ ತಿಂಗಳಲ್ಲಿ ದೇಶದೊಳಗೆ ಸಕ್ಕರೆಯ ಕೊರತೆಯನ್ನುಂಟು ಮಾಡಿ, ಸಕ್ಕರೆಯ ದರವನ್ನು ತಿಟಿಂಕ್ಕೇರಿಸಿ ಸಕ್ಕರೆಯ ನಿಯಂತ್ರಣ ಪುನಃ ಹೇರುವ ಪ್ರಸಂಗ ತಂದ ಸಕ್ಕರೆಯ ಕಾರಖಾನೆದಾರರ ಶರಕರ ಮತ್ತು ಅವರಿಗೆ ಪ್ರತ್ಯಕ್ಷಾಪ್ರತ್ಯಕ್ಷವಾಗಿ ನೆರವನ್ನಿತ್ತ ಅಧಿಕಾರಿಗಳ ನಡತೆಯ ಚೌಕಶಿ ಮಾಡಬೇಕಾಗಿ ಲೋಕಪ್ರತಿನಿಧಿಗಳು ಎಂದಿನಿಂದಲೂ ಆಗ್ರಹ ಮಾಡುತ್ತಿದ್ದಾರೆ ಆದರೂ ಸರಕಾರದವರು ಆ ಚೌಕಶಿಯನ್ನು ಮಾಡಲು ಯಾಕೋ ಇವರೆಗೆ ನೇಮಿಸಿಲ್ಲ ನಡುವೆ ಸಕ್ಕರೆಯ ಉದ್ದಿಮೆಗೆ ಸಂರಕ್ಷಣೆ (ಪರದೇಶಗಳಿಂದ ಬರುವ ಅಗ್ಗ ಸಕ್ಕರೆಯ ಮೇಲೆ ಭಾರಿ ಸುಂಕವನ್ನು ಹೇರಿ ಅದು ದೇಶಿ ಸಕ್ಕರೆಯೊಡನೆ ಸ್ಪರ್ಧಿಸದಂತೆ ಮಾಡುವರು) ಕೊಡುವ ಪ್ರಶ್ನೆ ಸುಂಕದ ಚೌಕಶಿ ಮಂಡಳದ ಮುಂದೆ ಬಂತು ೧೯೩೨ರಿಂದಲೂ ಭಾರತ ಸರಕಾರವು ಹಿಂದೀ ಸಕ್ಕರೆ ಉದ್ದಿಮೆಗೆ ಸಂರಕ್ಷಣೆ ಕೊಡುತ್ತ ಬಂದಿತ್ತು ವರ್ಷಗಳ ಈ ಸಂರಕ್ಷಣೆಯಿಂದಲೂ ಕೂಡ ದೇಶಿ ಸಕ್ಕರೆಯ ಕಾರಖಾನೆಗಳು ಪರಕೀಯರ ಮೇಲಾಟವನ್ನು ಸ್ವಸಾಮರ್ಥ್ಯದಿಂದ ಎದುರಿಸಲು ಸಮರ್ಥವಾಗಿಲ್ಲವಾದರೆ ಅವುಗಳಿಗೆ ಸಂರಕ್ಷಣ ಕೊಡುವದಾದರೂ ಏಕೆಂಬ ಪ್ರಶ್ನೆಯುದ್ಭವಿಸಿತು ಅದರ ಚೌಕಶಿ ಮಾಡಿ ಸುಂಕದ ಮಂಡಳವು ಒಪ್ಪಿಸಿರುವ ತನ್ನ ವರದಿಯಲ್ಲಿ ಸಕ್ಕರೆ ವ್ಯಾಪಾರದ ಮಹಾಮಂಡಳದವರ ಹಾಗೂ ಸಕ್ಕರೆ ಕಾರಖಾನೆದಾರ ವ್ಯಾಪಾರಿಗಳ ಮೇಲೆ ಕೃಷ್ಣ-ಕಾರಸ್ಥಾನಿತ್ವದ ಹಲವಾರು ಆರೋಪಗಳನ್ನು ಮಾಡಿದೆ! ಈ ಆರೋಪಗಳ ಕೂಲಂಕಷ ಚೌಕಶಿಯಾಗುವದಗತ್ಯವೆಂತಲೂ ಅಭಿಪ್ರಾಯ ವ್ಯಕ್ತಗೊಳಿಸಿದೆ ಆದರಿಂದ ಭಾರತ ಸರಕಾರವು ಈಗ ಪ್ರಯಾಗದೊಳಗಿನ ವರಿಷ್ಠ ನ್ಯಾಯಾಲಯದ ಸೇವಾನಿವೃತ್ತ ನ್ಯಾಯಾಧೀಶ ರಾವಬಹಾದ್ದೂರ ಗಂಗಾರಾಮ ಇವರನ್ನು ಈ ಚೌಕಶಿ ನಡಿಸಲು ನೇಮಿಸಿದ್ದಾರೆ ಈ ಚೌಕಶಿಯು ಸರಿಯಾಗಿ ನಡೆದರೆ ಸಕ್ಕರೆಯ ವ್ಯಾಪಾರಿಗಳಂತೆ ಪೂರೈಕೆ ಇಲಾಖೆಯ ಎಷ್ಟೋ ಅಧಿಕಾರಿಗಳ ಕೃಷ್ಣ ಕೃತ್ಯಗಳೂ ಬಯಲಿಗೆ ಬರುವಂತಿವೆಯೆಂದು ಬಲ್ಲವರು ಹೇಳುತ್ತಾರೆ.

.

ಇತ್ತೀಚೆಗೆ ಭಾರತದಲ್ಲಿ ಕಿಡಿಗೇಡಿತನ ಹೆಚ್ಚಾಗಿದೆ ರೇಲ್ವೆ ಕಂಬಿಗಳನ್ನು ಕಿತ್ತಿಟ್ಟು ಇಲ್ಲವೆ ಹಳಿಗಳನ್ನು ಒಂದಕ್ಕೊಂದು ಜೋಡಿಸುವ ಜೋಡಣೆಗಳನ್ನು ಕಿತ್ತಿ ತೆಗದು ರೇಲ್ವೆ ಬಂಡಿಗಳನ್ನು ಅಪಘಾತಕ್ಕೀಡು ಮಾಡುವ ನೀಚ ರಾಕ್ಷಸೀ ಪ್ರವೃತ್ತಿಯೊಂದು ಅಲ್ಲಲ್ಲಿ ತಲೆದೋರಿದೆ ಅದು ಕಮ್ಯುನಿಸ್ಟರು ಬಿತ್ತಿಟ್ಟ ಬೀಜದ ಪರಿಪ್ರೇಯಾ ಸ್ವತಃ ಉದ್ಭವಿಸಿದ ಬೆಳೆಯೋ ಎಂಬುದು ನಿರ್ವಿವಾದವಾಗಿ ಹೇಳಬರುವಂತಿಲ್ಲ ೨ ತಿಂಗಳ ಹಿಂದೆ ಮದ್ರಾಸದಿಂದ ಕಲಕತ್ತೆಗೆ ಹೋಗುತ್ತಿದ್ದ ರೇಲ್ವೇ ಬಂಡಿಗೆ ಅಪಘಾತವಾಯಿತು. ಕಳೆದ ಏಪ್ರಿಲ ತಾ. ೧೩ಕ್ಕೆ ಬರೇಲಿ ರೇಲ್ವೆಮಾರ್ಗದಲ್ಲಿ ಒಂದು ಅಪಘಾತವಾಯಿತು ಆದರೆ ಆಚೆಯ ರವಿವಾರ ಕಲಕತ್ತೆಯಿಂದ ಅಂಬಾಲಾಕ್ಕೆ ಹೋಗಲ ಹೊರಟ ಪಂಜಾಬ ಮೇಲ ಗಾಡಿಗೆ ಆದ ಅಪಘಾತವೂ ಅನಾಹುತವೂ ತೀರ ಭಯಂಕರವಾದುದು! ಕಲಕತ್ತೆಯಿಂದ ೨೦೬ ಮೈಲು ಅಂತರದಲ್ಲಿ, ಚಾಸದಿಹ ಮತ್ತು ಸಿಮುಲತಾಲಾ ರೇಲ್ವೆ ನಿಲ್ದಾಣಗಳ ನಡುವೆ, ಉಪಕಾಲದಲ್ಲಿ ಈ ಅಪಘಾತವಾಯಿತು ಬಂಡಿಯು ಆಗ ಒಂದು ಸೇತುವೆಯನ್ನು ದಾಟುತ್ತಿತ್ತು ಯಾರೋ ಕಿಡಿಗೇಡಿಗಳು ಸಂಕದ ಹತ್ತಿರವಿದ್ದ "ಹಳಿಗಳ ಜೋಡಣೆ" (ಫಿಶ್-ಪ್ಲೇಟ್ಸ) ಗಳನ್ನು ತೆಗೆದಿಟ್ಟದ್ದರಿಂದ ಬಂಡಿಯ ಎರಡು ಡಬ್ಬಿಗಳು ೩೦-೪೦ ಅಡಿ ಕೆಳಗೆ ಉರುಳಿ ಬಿದ್ದು ಪುಡಿಪುಡಿಯಾದವು ಇನ್ನೆರಡು ಡಬ್ಬಿಗಳೂ ಧಕ್ಕೆಗೊಂಡವು! ಈ ಅಪಘಾತದಲ್ಲಿ ನೂರಕ್ಕೂ ಮೇಲ್ಪಟ್ಟು ಜನರು (ಉರುಳಿದ ಡಬ್ಬಿಯೊಂದು ಹೆಂಗಸರ ಡಬ್ಬಿಯಾಗಿತ್ತಾದ್ದರಿಂದ ವಿಶೇಷವಾಗಿ ಹೆಂಗಸರು ಮಕ್ಕಳು!) ಸತ್ತಿದ್ದಾರೆ! ೧೦೦ಕ್ಕೂ ಹೆಚ್ಚಿಗೆ ಮಂದಿ ಗಾಯಗೊಂಡಿದ್ದಾರೆ! ಇಷ್ಟು ದೊಡ್ಡ ಪ್ರಮಾಣದ ರೇಲ್ವೆ ಅನಾಹುತ ನಮ್ಮ ದೇಶದೊಳಗೆ ಹಿಂದೆಂದೂ ಸಂಭವಿಸಿದ್ದಿಲ್ಲ ಈ ಅಪಘಾತ ವಾದ ಸ್ಥಳದಲ್ಲಿ ಕೆಲವು ಜನರು ಅಪಘಾತದ ಬಗ್ಗೆ ಸಂಶಯ ಪಡ ವದರ ಬದಲು, ಲೂಟಿಯನ್ನು ನಡಿಸಿದ್ದು ತಪ

ದೃಷ್ಟಿಗೆ ಬಿದ್ದಿತಾಗಿ, ಅಪಘಾತವಟ್ಟ ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಅದರೆ ಸುದೈವದಿಂದ ಸುರಕ್ಷಿತವುಳಿದ ಬಿಹಾರ ಸರಕಾರದ ಓರ್ವ ಮಂತ್ರಿಗಳು ಪ್ರಕಟಪಡಿಸಿದ್ದಾರೆ. ಇನ್ನೂ ೨—೩ ಕಡೆ (ಬೇರೆ ರೇಲ್ವೆ ಮಾರ್ಗಗಳಲ್ಲಿ) ಕಿಡಿಗೇಡಿಗಳು ಫಿಶ್-ಪ್ಲೇಟುಗಳನ್ನು ಕಿತ್ತಿಟ್ಟಿದ್ದರೆಂಬ ಸುದ್ದಿಗಳು ಇತ್ತೀಚೆಗೆ ಪ್ರಕಟವಾಗಿವೆ. ಕಾವಲುಗಾರರು ಸುದೈವದಿಂದ ಇದನ್ನು ನೋಡಿ ಕೂಡಲೆ ಬರುತ್ತಿರುವ ಬಂಡಿಗಳಿಗೆ ಸೂಚನೆ ಕೊಟ್ಟಿದ್ದರಿಂದ ಅಪಘಾತಗಳು ತಪ್ಪಿದವಂತೆ. ರೇಲ್ವೆ ಹಳಿಗಳನ್ನು ಕಿತ್ತುವ ಅಥವಾ ಜೋಡಣೆಗಳನ್ನು ತಪ್ಪಿಸಿಡುವ ಈ ದುಷ್ಟ ರಾಕ್ಷಸೀ ಪ್ರವೃತ್ತಿಯನ್ನು ಸರಕಾರವು ನಿರ್ದಯತನದಿಂದ — ಅವಶ್ಯ ಕಂಡರೆ ದಂಡಿನ ಕಾಯದೆಯ ಉಗ್ರ ಉಪಾಯಗಳನ್ನು ಯೋಜಿಸಿ — ನಿರ್ಮೂಲಿಸುವದು ಒಳಿತು.

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible]

[illegible]

[illegible]

[illegible]

ಅದರಿಂದ ಈ ಐದಿನಲ್ಲಿ ಅಥವಾ ಈ ಹಳ್ಳಿಯಲ್ಲಿ [illegible]

ಕಳೆದ ಮಂಗಳವಾರ ಹಳಿಯಾಳದಲ್ಲಿ [illegible] ಧಟ್ಟದ ಅಧ್ಯಕ್ಷತೆಯಲ್ಲಿ ಜರುಗಿತು.

ಹೊನ್ನಾವರ— (ತಾ ೧೨-೫-೫೦) [illegible] ನಗರದಿಂದ ಹೊರ ಹೋಗುವಾಗ [illegible]

[illegible]

ಶಿರಸಿ— (ತಾ ೮-೫-೫೦) [illegible]

[illegible]

ಕಾರವಾರ— [illegible]

[illegible]

ಅಂಕೋಲಾ— (ತಾ. ೧೨) [illegible]

WANTED

A MANAGER FOR
THE SCHOOL PRESS LTD

Please apply, stating qualifications experience if any, age and salary required, to—

The Chairman
School Press Ltd
Ganguli (South Kanara)

WANTED

A mathematics or science Graduate trained or otherwise to serve in
THE S. V. HIGH SCHOOL,
GANGULI

Government scale of pay will be given. State qualifications, experience, age etc.

The manager
S V HIGH SCHOOL,
GANGULI (S Kanara)

ಈ ಪ್ರಶ್ನೆಗಳಲ್ಲಿ ಬರೆದಿರುವ ಎರಡು ಜಿಲ್ಲೆ ... ದಿನ ಪಾಠಗಳನ್ನು ... (ಅದರ ಹಿಂದೆ ... ಇಲ್ಲದ) ಪುಸ್ತಕದಲ್ಲಿ ಬರೆದಿರುವ ಜೀ... ಕ್ಕಾರೆ! ಗುಂಡಿ-ಶಿಗ್ಗಾವಿಯವರ ಹತ್ತಿರ ಗುಂಡ ... ವ್ಯವಸ್ಥೆಯನ್ನು ಅಧಿಕಾರಿಗಳ ಮಾಡಬಾರದೇ? ಎಂದು ... ಗುಂಡಿಯವರೊಬ್ಬರು ಬರೆಯುತ್ತಾರೆ

ಕಾರವಾರ—(ತಾ ೧೧-೫-೫೦) ಇಲ್ಲಿಯ ... ಅವಧಿ ಇದೇ ... ಸದ್ಯ ... ಮುಗಿದಿತ್ತು. ಅದರಿಂದ ಇದೇ ... ತಿಂಗಳಲ್ಲಿ ... ಸಾರ್ವತ್ರಿಕ ಚುನಾವಣೆಗಳು ಜರುಗಬೇಕಾಗಿದ್ದವು. ಆದರೆ ... ಚುನಾವಣೆಯನ್ನು ಎಲ್ಲ ... ನಡೆಸಬೇಕೆಂದು ಸರಕಾರವು ನಿಶ್ಚಯಿಸಿರುವುದು, ಅದರ ವ್ಯವಸ್ಥೆಗೆ ಕೆಲವು ... ಬೇಕಾಗಿರುವದರಿಂದ ಸಧ್ಯದ ... ಅಧಿಕಾರಾವಧಿಯನ್ನು ... ತಿಂಗಳಿಂದ ಬೆಳೆಸಲು ನಿರ್ಧರಿಸಲಾಗಿದ್ದು ... ಸಾರ್ವತ್ರಿಕ ಚುನಾವಣೆಗಳು ಬಹುಶಃ ಮುಂದಿನ ಸೆಪ್ಟೆಂಬರದಲ್ಲಿ ಇಲ್ಲವೆ ಮಾರ್ಚ ದಲ್ಲಿ ಜರುಗಬಹುದಂತೆ

ಮೊನ್ನೆ ಸಂಜೆ ಇಲ್ಲಿ ೧—೧ ... ಮಳೆಗಳಿಂದ ... ಬಿರುಗಾಳಿ ಬೀಸಿದ ಸುದ್ದಿಯುಂಟು

ಕಳೆದ ... ದಿನಗಳಿಂದ ಇಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಕರ ಹಾಗೂ ವಿದ್ಯಾರ್ಥಿಗಳದೊಂದು ... ಶಿಬಿರ ನಡೆಯುತ್ತಿತ್ತು. ಇಂದು ಅದರ ಮುಕ್ತಾಯವಾಯಿತು. ಈ ... ದಿನಗಳಲ್ಲಿ ... ಮಾಸ್ತರರು, ವಿಮಾನುಗಾರಿಕೆ ಇಲಾಖೆಯ ... ಕಲ್ಯಾಣ, ಇಲ್ಲಿಯ ರೆಸಿಡೆಂಟ ಮ್ಯಾಜಿಸ್ಟ್ರೇಟ ... ನಾಗವೇಕರ, ಜಿಲ್ಲಾ ಗ್ರಾಮೋದ್ಧಾರ ಮಂಡಳದ ... ಕಮಲಾಪುರ, ... ಅವರು ಶಿಬಿರದಲ್ಲಿ ಪ್ರವಚನಗಳನ್ನು ಕೊಟ್ಟು ತಮ್ಮ ತಮ್ಮ ಕಾರ್ಯಕ್ಷೇತ್ರಗಳ ವಿಷಯಗಳ ಮಾಹಿತಿಯನ್ನು ಕೊಟ್ಟರು. ಶಿಬಿರಕ್ಕೆ ಸೇರಿದ ಶಿಕ್ಷಕ-ವಿದ್ಯಾರ್ಥಿಗಳು ನಡುನಡುವೆ ಪ್ರೇಕ್ಷಣೀಯ ಸ್ಥಳಗಳಿಗೆ ಭೆಟ್ಟಿ ಕೊಟ್ಟರು. ಕಳೆದ ಮಂಗಳವಾರ ಸರಕಾರಿ ಹಾಯಸ್ಕೂಲಿನ ... ಅವರ ಹಿರಿಯ ... ಶಿಬಿರಾಗ್ನಿಯ ಸಮಾರಂಭ ನಡೆದು, ಬಗೆಬಗೆಯ ವಿನೋದಾವಳಿಗಳು ನಡೆದವು. ಇಂದು ಸರಕಾರಿ ಹಾಯಸ್ಕೂಲಿನ ಇನ್ಸ್ಪೆಕ್ಟರ ... ಮುಖ್ಯಾಧ್ಯಾಪಕ ... ವಿವೇಕರರ ಅಧ್ಯಕ್ಷತೆಯಲ್ಲಿ ಶಿಬಿರದ ಮುಕ್ತಾಯ ಸಮಾರಂಭ ನಡೆಯಿತು. ... ದಿವೇಕರರು ತಮ್ಮ ಸಮಾರೋಪದ ಭಾಷಣದಲ್ಲಿ, ಶಾಲೆಯಲ್ಲಿ ಕಲಿಸಲ್ಪಡುವದಷ್ಟೇ ಶಿಕ್ಷಣವಲ್ಲೆಂದೂ, ವಿದ್ಯಾರ್ಥಿಗಳು ಶಾಲೆಯ ಹೊರಗೆ ತಮ್ಮ ಪಂಚ ಜ್ಞಾನೇಂದ್ರಿಯಗಳನ್ನು ತೆರೆದಿಟ್ಟು ಕಲಿಯುತ್ತಿರುವ ವ್ಯಾವಹಾರಿಕ ಜ್ಞಾನವೇ ನಿಜವಾದ ಶಿಕ್ಷಣವೆಂದೂ, ಈಗ ದೇಶವು ಸ್ವತಂತ್ರವಾಗಿರುವದರಿಂದ ವಿದ್ಯಾರ್ಥಿಗಳು ಈ ಸ್ವಾತಂತ್ರ್ಯದ ಹೊಣೆಯನ್ನು ಸರಿಯಾಗಿ ನಿರ್ವಹಿಸಲು ತಮ್ಮನ್ನು ತರಬೇತಿಗೊಳಿಸುವಂಥ ಹೊಸ ದೃಷ್ಟಿಕೋನದ ಶಿಕ್ಷಣವನ್ನು ಪಡೆಯುವದಗತ್ಯವಿರುವದೆಂದೂ ಬೋಧಿಸಿದರು

... ಶಿಬಿರದೊಳಗೆ ವಿಮಾನುಗಾರಿಕೆ ಇಲಾಖೆಯ ಸುಪರಿಂಟೆಂಡೆಂಟ ... ಕಲ್ಯಾಣಪುರರು ಕಳೆದ ಶನಿವಾರ ಕೊಟ್ಟ ತಮ್ಮ ಪ್ರವಚನದಲ್ಲಿ, ಈ ಜಿಲ್ಲೆಯಲ್ಲಿ ಈಗ ನಡೆದಿರುವ ವಿಮಾನುಗಾರಿಕೆಯ ಸಂಘಟನೆಯ ಮಹತ್ವವನ್ನು ... ವಿಮಾನುಗಾರರಿಗೆ ಶಿಕ್ಷಣ ಕೊಟ್ಟು ವಿಮಾನುಗಾರಿಕೆಯನ್ನು ಸುಧಾರಿಸುವದಕ್ಕಾಗಿ ಈ ಜಿಲ್ಲೆಯಲ್ಲಿ ಈಗ ೩ ಶಾಲೆಗಳನ್ನು (... ಕುಮಟಾ, ಹೊನ್ನಾವರ, ... ಈ ಊರು ಗಳಲ್ಲಿ) ತೆರೆದಿದ್ದು ... ವಿಮಾನ ನಡೆಸುವ ... ಸಂಸ್ಥೆಗಳನ್ನು ... ವಿಮಾನುಗಾರರು ... ಬರಗಾಲ ೧೯೦೦ರಿಂದ ... ವರೆಗೆ ... ಅದರ ಮಾಸಿಕ ಸಮಾಜದ ... ಪರಿಸ್ಥಿತಿ ... ಸುಧಾರಿಸಿದೆ ... ಕರ್ನಾಟಕದ ... ವಿಮಾನು ... ಆದರೆ ಈಗ ... ಈ ದೆಸೆಯಲ್ಲಿ ... ಆದರಿಂದ ಹೊರ ... ಮಾಡಬೇಕು (... ಹೊರಗೆ ಹೋಗಿ) ವಿಮಾನು ಹಿಡಿಯುವ ಕಲೆಯನ್ನು ವಿಮಾನುಗಾರ ಮಕ್ಕಳಿಗೆ ಕಲಿಸಲು ... ಸಂಕಲ್ಪಿಸಿದೆ. ಈ ಬಗ್ಗೆ ಬೋಧಕರನ್ನು ನೀಡುವ ಶಿಕ್ಷಣವನ್ನು ಕೊಡಲಾಗುವದು. ಜಿಲ್ಲೆಯಲ್ಲಿ ಈಗ ... ವಿಮಾನ ... ಸಹಕಾರಿ ಸಂಘಗಳಿವೆ. ಈ ಸಂಘಗಳಲ್ಲಿ ಸೇರಿ ಮತ್ತು ಉದ್ದೇಶಗಳನ್ನು ... ಸಂಘಟಿಸಿ ವಿಮಾನುಗಾರರು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಏಳಿಗೆಯನ್ನು ಸಾಧಿಸಬೇಕಾಗಿ ... ಕಲ್ಯಾಣಪುರರು ಕರೆಕೊಟ್ಟರು

ಇದೇ ಕಳೆದ ತಾ ... ಪ್ರಕಟವಾದ, ... ಕೇಂದ್ರದ ... ಪರೀಕ್ಷೆಯ ಫಲ ... ನಮ್ಮ ... ಪತ್ರಿಕೆ ... ಸಂಚಿಕೆಯಲ್ಲಿ ನಮ್ಮ ಕೈ ಸೇರಿದ ... ಪ್ರತಿಯ ... ದಿಂದ) ಉತ್ತೀರ್ಣರಾದ ಕೆಲವು ವಿದ್ಯಾರ್ಥಿಗಳ ಹೆಸರುಗಳು ತಪ್ಪಾಗಿ ... ಅವರ ... ಕೊಡಲಾಗಿದೆ. ಅಂಥವರ ಹೊರಗಿದ್ದವು ಪ್ರಕಟವಾದ ತಪ್ಪು ಹೆಸರುಗಳು, ನಿಜವಾದ ಹೆಸರುಗಳು ಕೊಡಲ್ಪಟ್ಟಿವೆ (ಸರಿ) ವ ನಾ ಡೊಂಬೇಕರ (ವೊಡ್ಡೇಕರ) ಮಾ ಬಾ ಹರಬಿರಕರ (ಹರಟಿರಕರ) (ವ ದಿ ಮುಲ್ಕಿ) ದೇ ಕ ಮುಗವಳ್ಳಿ (ಮುನವಳ್ಳಿ) (ಲ ವೀ ಹುವಳೇಕರ) ಶಾರದಾ ರಾಮ ಶೆಟ್ಟಿ (ಶಾರದಾ ರಾಯ ಶೆಟ್ಟಿ) (ಕನ್ನಡ — ಸಾದಾ), ಗ ಮ ಬಾಡಕಟ್ಟಿ (ಬಂಡೀಕಟ್ಟಿ), ರಾಮಚಂದ್ರ ನಾಗಪ್ಪಾ ನಾಯ್ಕ ಶಂ. ಗೋ (ರಾಮಚಂದ್ರ ನಾಗಪ್ಪಾ), ನೇವರೇಕರ (ನಿವರ್ಕರ), ಶ ನಾ ಪೆಡ್ನೇಕರ (ಪೆಡ್ಣೇಕರ), ಹ ಬಾ, ವೆಂಡೆಕರ (ಚೆಂಡೆಕರ), ಲೀ ನಾ ಪೆಡ್ನೇಕರ (ವೆರ್ಣೇಕರ) ಉ. ನಾ ಭಿಕಾರ (ಬಾಡಿ), ಸ ಮ ಬೋರಗಳೇಕರ (ಬೊಂಗಳೇಕರ), ವೀ ಗ ವೆಣೇಕರ (ಹೆರ್ಣೇಕರ), ವೀ ಗೋ ಅವರ್ಸೆ (ಅವರ್ಸಕರ).

ಕಳೆದ ತಾ ... ರಂದು ಮಧ್ಯರಾತ್ರಿಯ ಸುಮಾರಿಗೆ ... ಕೆಲವರು ಕಡಲ್ತಂಡಿಯ ಮೇಲೆ ಗಾಳಿ-ಸೇವನೆ ಮಾಡುತ್ತ ಕುಳಿತಾಗ, ತೆರೆಗಳೊಳಗಿಂದ ಬಂದು ಕಟ್ಟೆಗಳ ಮೂರ್ತಿಯು ತೇಲಿ ಬಂದುದು ಅವರ ದೃಷ್ಟಿಗೆ ಬಿತ್ತು. ಅದು ... ದುರ್ಗಾದೇವಿಯ ಮೂರ್ತಿಯಾಗಿತ್ತು ... ಮೂರ್ತಿಯು ಬಹಳ ಇದ್ದಕ್ಕಿದ್ದಂತೆ ಇದೆ ಭಾವಿಕರು ಈ ಮೂರ್ತಿಯು ಆಗಮಿಸಿದದೆಂದು ದೈವಿ ಚಮತ್ಕಾರವೆಂದು ಭಾವಿಸುತ್ತಾರೆ. ನೂರಾರು ಜನರು ಈ ಮೂರ್ತಿ ನೋಡಲು ಬರುತ್ತಾರೆ. ಈ ಮೂರ್ತಿಗಾಗಿ ಒಂದು ಗುಡಿ ಕಟ್ಟಿಸುವ ವಿಚಾರವೂ ಕೆಲವರ ತಲೆಯಲ್ಲಿ ಹೊಳೆದಿದೆ

(ತಾ ೧೭-೫-೫೦) ಶ್ರೀ ಗೋಕರ್ಣ ಮಠದ ಶ್ರೀಮದ್ ದ್ವಾರಕಾನಾಥತೀರ್ಥ ಸ್ವಾಮಿಗಳು ನಿನ್ನೆ ... ದಲ್ಲಿ ಮುರಗಾಂವದಲ್ಲಿ ಉಗಿಹಡಗವನ್ನು ಹತ್ತಿ ಇಂದು ಬೆಳಗ್ಗೆ ಸುಖರೂಪವಾಗಿ ಮುಂಬಯಿಗೆ ತಲ್ಪಿದ ಸುದ್ದಿಯುಂಟು. ಶ್ರೀ ಗುರುಗಳು ಈ ವರ್ಷದ ಚಾತುರ್ಮಾಸ್ಯವನ್ನು ಮುಂಬಯಿಯಲ್ಲೇ ಕಳೆಯಬೇಕಾಗಿ ಮುಂಬಯಿಪುರಸ್ಥ ಶಿಷ್ಯವರ್ಗದ ಆಗ್ರಹದ ... ಯಾಗಿದೆಯಂತೆ

ಸಾಮಾಜಿಕ ಶಿಕ್ಷಣ-ದಿನಾಚರಣೆ.

ಕಳೆದ ಏಪ್ರಿಲ ತಿಂಗಳ ತಾ. ೬, ೯, ೧೦ಕ್ಕೆ ಜಿಲ್ಲೆಯ ಬಹುತೇಕ ಪ್ರಾಥಮಿಕ ಹಾಗೂ ಸಾಮಾಜಿಕ (ಪ್ರೌಢ) ಶಿಕ್ಷಣ ಶಾಲೆಗಳಲ್ಲಿ ಸಾಮಾಜಿಕ ಶಿಕ್ಷಣದ ದಿನಗಳ ಆಚರಣೆಯಾಯಿತು. ಧ್ವಜವಂದನೆ, ಮೆರವಣಿಗೆ, ಆರೋಗ್ಯರಕ್ಷಣೆ ಮುಂತಾದ ವಿಷಯಗಳ ಮೇಲೆ ವ್ಯಾಖ್ಯಾನಗಳು, ಯಕ್ಷಗಾನ ನೊದಲಾದ ಮನರಂಜನೆಯ ಕಾರ್ಯಕ್ರಮ ಮತ್ತಿರ ಚಟುವಟಿಕೆಗಳನ್ನು (ತಮ್ಮ ತಮ್ಮ ಅನುಕೂಲತೆಯಂತೆ) ಶಾಲಾ-ಶಿಕ್ಷಕರೂ ವಿದ್ಯಾರ್ಥಿಗಳೂ ಆಚರಿಸಿದರು. ಈ ಆಚರಣೆಯು ಈ ಕೆಳಗಿನ ಶಾಲೆಗಳಲ್ಲಿ ನಡೆದ ವರದಿಗಳು ಬಂದಿವೆ:— ದೇವಗಿ, ವ ಘರೂರ, ಹರಕೀರ, ಹೊಳೆಗದ್ದೆ (ಗುಡಬ್ಬ್ಯ ಪ್ರಾಥಮಿಕ), ಸಾಂತಗಲ್ಲ, ಇಡಗುಂಜಿ, ಕಬಾಡಕೇರಿ ... (ಪ್ರೌಢ), ಕೆಕ್ಕಾರ (ಪ್ರೌಢ), ಗುಣವಂತೆ, ಶಿರ್ಶಿ (ಗಂ ಮಾ. ಶಾ.), ಬನವಾಸಿ (ಎಲ್ಲ ಶಾಲೆಗಳು ಕೂಡಿ), ದಾಸನಕೊಪ್ಪ, ಮಧುರವಳ್ಳಿ, ಓಣಿಕೇರಿ, ಸಿದ್ದಾಪುರ (ಗಂ ಮ ಶಾ.), ಬೆಳ್ಕೋಡ (ಮುಂಡಗೋಡ ತಾ), ವ ದಿವಗೀ (ಅಂಕೋಲಾ ತಾ.) ಗೋಟೆಗಾಳಿ (ಕಾರವಾರ ತಾ.)

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೋಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.

ವಿ ಸೂಚನೆ.— ... ದಿಂದ (ಯು ... ಟಿ, ಬಿ ಕೆ, ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮ ... ಬರುವ ಯಾವತ್ತು ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ... ಟಿಕೀಟುಗಳ ... ಮಾಡಲಾಗುವದು ಇದಲ್ಲದೆ ಪುಣೆ, ಬೆಂಗಳೂರ ... ಪ್ರಯಾಣಿಕರಿಗೆ ... ವ್ಯವಸ್ಥೆ ಇಡಲಾಗಿದೆ

ಮಾಲಕ:— ಮಾಳಪ್ಪಾ ಶ್ಯೆ.

ಜಿಲ್ಲಾ ಸಮಾಚಾರ

ಹಳಿಯಾಳ—([illegible]) [illegible]

[illegible]

ಯೆಲ್ಲಾಪುರ— [illegible]

ಪ್ರತಿ	೧ನೇ ವರ್ಗ	೨ನೇ ವರ್ಗ	೩ನೇ ವರ್ಗ	೪ನೇ ವರ್ಗ
೧	೨೪	೩೦	೧೪	೧೫
೨	೩೦	೩೦	೨೪	೧೧
೩	೨೦	೧೬	ಸಾಗಿಲ್ಲ	—
೪	೨೮	೨೯	೨೫	—
೫	೨೬	೨೩	ಸಾಗಿಲ್ಲ	—
೬	೧೬	೨೬	೨೪	—
೭	ಅಂಥ ಶಾಲೆಯಲ್ಲಿ	೩೪	೧೯	—

[illegible]

ಮುಂಡಗೋಡ—([illegible])

[illegible]

ಶಿರಸಿ—([illegible])

[illegible]

ಸಿದ್ದಾಪುರ— [illegible]

ಭಟಕಳ—([illegible]) [illegible]

[illegible]

ಹೊನ್ನಾವರ—

[illegible]

ಗೋಕರ್ಣ—

[illegible]

ಅಂಕೋಲ—

[illegible]

([illegible] ಪುಟದ ಮೇಲೆ ಮುಂದುವರಿದಿದೆ)

ಮುಕ್ಕಾಲು ಶತಮಾನದಿಂದಲೂ ಕರ್ನಾಟಕದಲ್ಲೆಲ್ಲ
ಹೆಸರುವಾಸಿಯಾಗಿರುವ
— ಇದೀಗ ಎಂದಿಗಿಂತಲೂ ಉತ್ತಮ !!
(ಮಂಗಳೂರಿ) ಕುಮಟಾ ನಸ್ಯ
ವ್ಯಾಪಾರ ಸಂಬಂಧ ಮಾಹಿತಿಗಾಗಿ ಬರೆಯಿರಿ:—
ದಿ ಮಂಗಳೂರು ಸ್ನಫ್ ವರ್ಕ್ಸ್, ಕುಮಟಾ.
ಪ್ರೊಪ್ರೈಟರ — ಟಿ ಎಮ್. ಎಸ್. ಎಂಡ್ ಸನ್

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ [illegible] ಮುದ್ರಿಸಿ ಪ್ರಕಟಿಸಿದರು

Reg. No. B 1270 Monday, 22-5-1950

ಕಾನಡಾವೃತ್ತ

ವರ್ಷ ೩೨ | THE KANARA NEWS | ಸಂಚಿಕೆ ೪೭

ಕುಮಟಾ. — ಸೋಮವಾರ, ತಾ ೨೨—೫—೧೯೫೦

ವರ್ಗಣಿಯ ದರ
[illegible]

ಜಾಹೀರಾತುಗಳ ದರ
[illegible] ಬಗ್ಗೆ [illegible]
ಆಫೀಸ ಪತ್ರವ್ಯವ[illegible]
[illegible]

ಜಂಗಲ ಕಟ್ಟಿಯ ನಿಯಮಗಳ ಪುನರ್ವಿಚಾರ

[illegible]

ಈ ಮೊದಲು ಪ್ರಕಟವಾದಂತೆ ಮುಂಬಯಿಯ [illegible] ಬೇಸಾಯ ಮತ್ತು ಅರಣ್ಯದ [illegible] ಮಂತ್ರಿ [illegible] ವರ್ಗದ ವನಮಹೋತ್ಸವದ [illegible] ಸಂಜೆ [illegible] ಮುದ್ರೆಯಿಗೆ [illegible] ನೀರೀಕ್ಷಿಸಿ ರಾತ್ರಿ [illegible] ಬಂದ [illegible] ಬಂದು [illegible] ಅವರು [illegible] ಎಲ್ಲ [illegible] ಇತರ ಅಧಿಕಾರಿಗಳನ್ನು ಬರಮಾಡಿಕೊಂಡು, ಆಹಾರೋತ್ಪಾದನೆಯನ್ನು ಹೆಚ್ಚಿಸುವ ಮಾರ್ಗದಲ್ಲಿ ಒದಗುವ ಅಡ್ಡಿ ಅಡಚಣೆಗಳನ್ನು ಅವರಿಂದ ಕೇಳಿಕೊಂಡು, ಅವುಗಳ ನಿವಾರಣೆಯ ಮಾರ್ಗವನ್ನು ಹೇಳಿಕೊಟ್ಟರು. [illegible] ಗೊಬ್ಬರ-ಕುಣಿಗಳನ್ನು ಅಗಿಸುವಾಗ ಅಲ್ಲಿಯ ಪರಿಸ್ಥಿತಿ ಮತ್ತು ಅವಶ್ಯಕತೆ ನೋಡಿಕೊಂಡು ಅಗಿಸಬೇಕು, ವಿನಹ ಕುಣಿಗಳ ಸಂಖ್ಯೆ ಹೆಚ್ಚಿಸುವದಕ್ಕೆ ಆಗ್ರಹಪಡಬಾರದು ಎಂದು ಅವರು ಸಲಹೆಕೊಟ್ಟರು.

ಅಧಿಕಾರಿಗಳ ಸಭೆಯಾದ ನಂತರ ಗ್ರಾಮೋದ್ಧಾರ ಮಂಡಳದ ಸಭೆಯಾಯಿತು. ಜಂಗಲ ಪಟ್ಟಿಗಳ ವಿಷಯದ ವಿಚಾರಕ್ಕಾಗಿಯೇ ಈ ಸಭೆಯು ಏರ್ಪಟ್ಟಿತ್ತು. ಜಂಗಲ ಪಟ್ಟಿಗಳ ಸಂಬಂಧದ ಈವರೆಗಿನ ಎಲ್ಲ ನಿಯಮ ನಿರ್ಬಂಧಗಳ ವಿಮರ್ಶೆ ಮಾಡಿ ಕೊನೆಯ ನಿರ್ಣಯ ಕೈಕೊಳ್ಳುವದಗತ್ಯವಿದೆಂದು ರಾ|| [illegible] ಶಾಸ್ತ್ರಿಯವರು ಮುಂಬಯಿಯಲ್ಲಿ ಮಂತ್ರಿಗಳಿಗೆ ಹೇಳಿಕೊಂಡಿದ್ದರಂತೆ. ಜಿಲ್ಲೆಯ ಪ್ರವಾಸ ಬರೊಡನೆ ವಿಚಾರ ವಿನಿಮಯ ಮಾಡಿ ಈ ನಿರ್ಣಯ ಮಾಡಬೇಕೆಂದೂ, ಈ ವಿಚಾರ ವಿನಿಮಯ ಮುಗಿಸಲು ಅವಶ್ಯ ಬಿದ್ದರೆ ಮಂತ್ರಿಗಳು [illegible] ದಿನ ಈ ಜಿಲ್ಲೆಯಲ್ಲಿ ಮುಕ್ಕಾಮ ಮಾಡಬೇಕೆಂದೂ ಶಾಸ್ತ್ರಿಗಳು ತಿಳಿಸಿದ್ದರಂತೆ. ಆದ್ದರಿಂದ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಜಂಗಲ ಪಟ್ಟಿಗಳ ವಿಚಾರವೇ ಪ್ರಾಮುಖ್ಯವಾಗಿ ನಡೆಯಿತು. ರಾ|| [illegible] ಪಂಡಿತರು ಮೊದಲು ವಿಷಯವನ್ನು ಪ್ರಸ್ತಾಪಿಸಿ, [illegible]ರಲ್ಲಿ ಸುಪೆಯಲ್ಲದ ನಿರ್ಣಯಗಳನ್ನು ಬೆಟ್ಟದ [illegible] ಅಧಿಕಾರಿಗಳು ಬಂದಿಲ್ಲೊಂದು ರೀತಿಯಿಂದ ಕಡೆಗಣಿಸುತ್ತ ಬಂದಿರುತ್ತಾರೆಂದೂ, ತಾ [illegible] ಕ್ಕೆ ಸರಕಾರವು ಮಾಡಿದ [illegible]ದಂತೆ ರೈತರಿಗೆ ಜಂಗಲ-ಪಟ್ಟಿಯ ಸೌಕರ್ಯಗಳನ್ನು ಉಪಭೋಗಿಸಕೊಡುವದಿಲ್ಲೆಂದೂ ಕಮೀಶನರರು ಇದೇ ಕಳೆದ ಅಕ್ಟೋಬರ ತಿಂಗಳ ತಾ [illegible]ಕ್ಕೆ ಒಂದು ಅನಧಿಕೃತ ಹುಕುಮು ಹೊರಡಿಸಿ ಜಂಗಲಪಟ್ಟಿಯ ಅಗಲಕತ್ತೆ [illegible] ಗಳನ್ನೂ ವಿಕ್ಕಕೊಡದೆಂದು ವಿಧಿಸಿರುತ್ತಾರೆಂದೂ, ತಾ [illegible] ರಂದೇಗೆ ಸಭೆಗೂಡಿದ ಜಿಲ್ಲಾ ಗ್ರಾಮೋದ್ಧಾರ ಮಂಡಳವು ಈ ಹುಕುಮನ್ನು ನಿರ್ಬಂಧಿಸುವ ಠರಾವು, ಯಾರೋ ಕೆಲವರು ಜಂಗಲ ಪಟ್ಟಿಯ ಸವಲತ್ತುಗಳ ದುರುಪಯೋಗ ಮಾಡಿದ್ದರ [illegible] ಕಾರಣದಿಂದ ಆ ಸವಲತ್ತುಗಳನ್ನು [illegible] ಸಕೊಳ್ಳುವದು ಅನುಚಿತವೆಂದೂ ವಿವರಿಸಿದರು. ಮಂತ್ರಿಗಳು [illegible] ಜಂಗಲ ಸವಲತ್ತುಗಳ ದುರು[illegible] ಮಾಡಿದ [illegible] ಕ್ರಮಗಳನ್ನು [illegible] ಮಂಡಳಕ್ಕೆ [illegible] ಸಾರಿ ತಿಳಿಸಿದ್ದನ್ನೂ [illegible] ಪತ್ರಗಳ[illegible] ದ್ದ [illegible] ಮಾಡಿದೆಂದೂ ದೂರಿದರು. [illegible] ಕಮೀಶನರು ಮಂತ್ರಿಗಳ [illegible] ಪತ್ರಗಳು ಬಂದಿದ್ದನ್ನು ಒಪ್ಪಿಕೊಂಡರು. ಆ ಪತ್ರಗಳು ಬಂದ ನಂತರ ಮುಂದಿನ [illegible] ಸಭೆಗಳ ದಿನಾಂಕದನ್ನು ಒಪ್ಪಿಕೊಂಡರು. ಆ ಸಭೆಗಳಲ್ಲಿ ಆ ಪತ್ರಗಳನ್ನು ಯಾಕೆ ಮಂಡಿಸಲಿಲ್ಲ ಎಂಬ ಪ್ರಶ್ನೆಗೆ ಅವರು ಸಮರ್ಪಕ ಉತ್ತರ ಕೊಡಲಿಲ್ಲ! ಸವಲತ್ತುಗಳ ದುರುಪಯೋಗ ಮಾಡಿದವರು ಹಳಿಯಾಳ ಮತ್ತು ಯಲ್ಲಾಪುರ ತಾಲೂಕಿನವರು ಇರುತ್ತಾರಂತೆ. ಅವರ ಅಪರಾಧಕ್ಕಾಗಿ ಶಿರ್ಸಿ ಸಿದ್ದಾಪುರ ತಾಲೂಕಿನವರಿಗೂ ದಂಡವೇ ಎಂದು ಸಿದ್ದಾಪುರದ ರಾ|| [illegible] ಅವರು ಕೇಳಿದರು. ಜಂಗಲ ಪಟ್ಟಿಯೊಳಗಿನ ಎಲ್ಲ ಜಾತಿಯ ಗಿಡ ಮರಗಳನ್ನು ಪಟ್ಟಿ ಪಡೆದ ಒಕ್ಕಲಿಗರಿಗೆ ಬಿಟ್ಟುಕೊಡಬೇಕೆಂದು [illegible] ಸರಕಾರದ ರೆವಿನ್ಯೂದಲ್ಲಿದೆ. ಆ ಸವಲತ್ತನ್ನು ಸರಕಾರವು ಗ್ರಾಮೋದ್ಧಾರ ಮಂಡಳಕ್ಕೆ ತಿಳಿಸದೆ, ತಾ [illegible] ಕ್ಕೆ ರದ್ದುಗೊಳಿಸಿದ್ದು ನಿಷೇಧಾರ್ಹ ಎಂದು ರಾ|| ಶಾಸ್ತ್ರಿಯವರು ಕಟುವಾಗಿ ಟೀಕಿಸಿದರು. ಯಾವಾದರೂ ಜಂಗಲ ಸವಲತ್ತುಗಳ ದುರುಪಯೋಗ ಮಾಡಿ [illegible] ಉಲ್ಲಂಘಿಸಿದ್ದು ಇದ್ದರೆ ಆ ಬಗ್ಗೆ ಸಂಬಂಧಿ ಜನರಿಂದಲೂ ಆಯಾ [illegible] ಯಿಂದಲೂ ಸರಕಾರವು ನಷ್ಟ ವಸೂಲು ಮಾಡಬೇಕಿತ್ತೇ ವಿನಹ ಸಮಸ್ತ ಜನರ ಸವಲತ್ತುಗಳನ್ನು ಕಸಕೊಳ್ಳುವದು ದುಷ್ಟತನವಾಗುತ್ತದೆಂದು ರಾ|| ಪಂಡಿತರು ಉದ್ಗರಿಸಿದರು. ಜಂಗಲ-ಪಟ್ಟಿ ಪಡೆದವರಿಂದ ಕೆಲವರು ಬರಿಸಿಕೊಳ್ಳಲಾಗುತ್ತದೆಂದು [illegible] ಕೊಳ್ಳಲಾಗುತ್ತದೆಂದು ಮಂತ್ರಿಗಳಿಗೆ ಗೊತ್ತಿದ್ದಿಲ್ಲವಂತೆ. ಈ ಸಭೆಯಲ್ಲೇ ಅವರಿಗೆ ಅದು ತಿಳಿಯಿತು! ಇಷ್ಟೆಲ್ಲ ಚರ್ಚೆಯಾದ ಬಳಿಕ ಕಮೀಶನರರ ಅನಧಿಕೃತ ಹುಕುಮು ಕೂಡಲೇ ರದ್ದುಗೊಳಿಸಬೇಕೆಂದು ಸಭೆಯು ಅಭಿಪ್ರಾಯಪಟ್ಟರು. ಆದರೆ ಮಂತ್ರಿಗಳು ಒಪ್ಪಲಿಲ್ಲ. ಅಧಿಕಾರಿ ವರ್ಗದ ವರದಿಯನ್ನು ಬರಮಾಡಿಕೊಂಡು ಅದರ ನಿರ್ಣಯ ಮಾಡಲಾಗುವದೆಂದು ಹೇಳಿದರು. ಜಂಗಲ-ಪಂಚಾಯತಗಳ ಸ್ಥಾಪನೆಯ ಸೂಚನೆಯನ್ನು ಕುಮಟೆಯ ರಾ|| [illegible] ಹೊರಡೆಯವರು ಮುಂದೆ ತಂದರು. ಅಷ್ಟರಲ್ಲಿ ಮಧ್ಯಾಹ್ನದ [illegible] ಘಂಟೆಯಾಯಿತು. ಆದರೂ ಮಾನ್ಯ ಮಂತ್ರಿಗಳು ಚರ್ಚೆಯನ್ನು ಮುಕ್ತಾಯಗೊಳಿಸಲು ಉದ್ಯುಕ್ತರಾದರು, ಮತ್ತು ಸಮಾರೋಪದ ತಮ್ಮ ಭಾಷಣದಲ್ಲಿ, ಜಂಗಲ-ಪಟ್ಟಿಗಳನ್ನು ಕೊಡುವ ಅಧಿಕಾರಿಯನ್ನು [illegible] ಜಂಗಲ [illegible] ಬಿಟ್ಟುಕೊಡಬೇಕೆಂದೂ, [illegible]ಗಳೊಳಗಿನ ಎಲ್ಲ ಗಿಡಮರಗಳನ್ನು ಕಡಿದೊಗೆಯಬಾರದೆಂದೂ, [illegible] ಗಿಡಗಂಟಿಗಳು ಬೆಳೆಯುವದಿಲ್ಲೆಂದೂ ಅವರ ಹೇಳಿ ಜಂಗಲ ಪಟ್ಟಿಯ ನಿಯಮಗಳ ಪರಿಶೀಲ[illegible]

THE BANK OF RURAL INDIA LTD.

(Incorporated in India. The Liability of Members Limited)

HEAD OFFICE — "Satyabhama Bhuvanam", KARWAR N. K.

Offices at — KARWAR KUMTA SIRSI HONAVAR YELLAPUR BHATKAL SIDDAPUR ANKOLA HUBLI & DHARWAR

Authorised Capital	, Rs	10 00 000,
Subscribed Capital	, Rs	5 00 000
Paid-up Capital & Reserves	, Rs	5 08 502 8 0

Rates of Interest on Deposits

Current a/c @ 1% p a *Savings Bank a/c @ 2½%*

Fixed Deposits for 3 months @ 3% per annum

" " for 6 months @ 3½% "

" " for 12 months or more @ 4% "

All kinds of modern Banking business transacted.

Karwar
1st Jan., 1950

P X GRACIOUS
MANAGING DIRECTOR

ಮಾಡಲಿಕ್ಕೆ ಒಂದು ಸಣ್ಣ ಸಮಿತಿಯನ್ನು ನೇಮಿಸಲು ಸೂಚನೆ ಮಾಡಿದರು ಅದರಂತೆ ಎಸೆಂಬ್ಲಿ-ಕೌನ್ಸಿಲುಗಳ ಸದಸ್ಯರಾಗಿರುವ ಡಾ|| ಗೋಪಿ, ಶಾಸ್ತ್ರಿ ಗಾಂವಕರ, ಪಮುಸುದ್ದೀನ ಹಾಗೂ ರಾ|| ಸುಂದರರಾವ ಪಂಡಿತ, ಗೋಪಾಲರಾವ ದೇವ ಮತ್ತು ಕುಮಟೆಯ ವಕೀಲ ವಿಶ್ವೇಶ್ವರ ಹೆಗಡೆ ಈ ೭ ಜನರ ಸಮಿತಿಯು ನೇಮಿಸಲ್ಪಟ್ಟಿತು ಈ ಸಮಿತಿಯವರು ಇಂದೇ ಮಧ್ಯಾಹ್ನದಲ್ಲಿ ಸಭೆಗೂಡಿ ತಮ್ಮ ವರದಿಯನ್ನು ಒಪ್ಪಿಸತಕ್ಕದೆಂದು ಮಾ. ಸಭಿಕರು ಅಂದರು ಆದರೆ ಮಂತ್ರಿಗಳು ತಮಗೆ ಇಂದು ಳಿಯಲು ಅವಕಾಶವಿಲ್ಲೆಂದೂ, ಸಮಿತಿಯು ಪರಿಶೀಲಿಸಬೇಕಾದ ಕೆಲವು ಮಹತ್ವದ ಕಾಗದ ಪತ್ರಗಳು ಮುಂಬಯಿಯಲ್ಲಿವೆಯೆಂದೂ ಸಮಿತಿಯು ಪುಣೆಯಲ್ಲಿ ಇಲ್ಲವೆ ಮುಂಬಯಿಯಲ್ಲಿ ಸಭೆಗೂಡಿದರೆ ಅನುಕೂಲವಾಗುವದೆಂದೂ ಹೇಳಿ, ಸಭೆಯು ತರ್ಕ ಲಗುಬಗೆಯಿಂದ ಮುಕ್ತಾಯಗೊಳಿಸಿದರು, ಮತ್ತು ತಮ್ಮ ಒಟ್ಟು ವಿಶ್ರಾಂತಿಗಳನ್ನು ಇಲ್ಲಿ ಮುಗಿಸಿ, ಕಳೆದ ವರ್ಷ ೧೦೦ ಗಾಳಿಗಳ ಕುಡಿಗಳನ್ನು ತೋಡಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದ ಬಡಸಗೋಡ ಗ್ರಾಮಕ್ಕೆ ಬೆಟ್ಟಿ ಕೊಟ್ಟು ದಾಂಡೇಲಿಕ್ಕೆ ಮರಳಿ ಹೋದರು.

ಇಂದು ಮಾನ್ಯ ಹಾಲೇರಿರ ಭೆಟ್ಟಿಯ ಪ್ರೀತ್ಯರ್ಥ ಕೂಡಿದ ಜಿಲ್ಲಾ ಗ್ರಾಮೋದ್ಧಾರ ಮಂಡಲದ ಸಭೆ ಈ ತಿಂಗಳಲ್ಲಿ ಕೂಡಿದ ಮೂರನೇ ಸಭೆಯಾಗಿ ರುತ್ತದಂತೆ. ೧ನೇ ಸಭೆ ತಾ ೬ಕ್ಕೆ ಕಾರವಾರದಲ್ಲಿ ಕೂಡಿತ್ತು. ೨ನೇ ಸಭೆ ತಾ ೪ಕ್ಕೆ ಇದೇ ಊರಲ್ಲಿ ಮಾನ್ಯ ಮಂತ್ರಿ ಡಾ| ಜೀವರಾಜ ಆಳ್ವಾ ರವರನ್ನು ಸತ್ಕರಿಸಲು ಸೇರಿತ್ತು, ಇಂದಿನದು ೩ನೇ ಸಭೆ ಆಡಂಬರದಿಂದ ಕಾರವಾರದಲ್ಲಿ ಪುನಃ ಮಂಡಳದ ಸಭೆ ಕರೆಯಲಾಗಿದೆ ಮಂಡಳದ ಒಂದೊಂದು ಸಭೆಗೆ ಸರಾಸರಿ ೨೦೦ ರೂ ಖರ್ಚು ಬರುತ್ತದೆಂದು ಹೇಳುತ್ತಾರೆ ಈ ಸಭೆಗಳು ಪುನಃ ೧-೨ ತಾಸುಗಳಲ್ಲಿ ಮುಗಿಯುತ್ತಿವೆ! ಸಭೆಯಲ್ಲಿ ಮಹತ್ವದ ಯಾವದೊಂದು ವಿಷಯ ಬಂದರೆ ಅದರ ಕೂಲಂಕಷ ವಿಚಾರ ಮಾಡಲೆಂದು ಒಳಸಮಿತಿಗಳು ನೇಮಿಸಲ್ಪಡುತ್ತಿವೆ! ಆ ಸಮಿತಿಯ ವರದಿಗಳನ್ನು ಆಲೋಚಿಸಲು ಪುನಃ ಮಂಡಳದ ಸಭೆಗಳಾಗುತ್ತಿವೆ! ಈ ಆಡಂಬರದೊಳಗಿಂದ ಆಗುವ ಕಾರ್ಯನಿಷ್ಪತ್ತಿ ಮಾತ್ರ ಅಷ್ಟಕ್ಕಷ್ಟೇ! ಹಣದ ಕೊರತೆಯಾಗುತ್ತಿದೆಂದೂ ರಾಜ್ಯದಂಡಳಿತದ ಖರ್ಚು ಕಡಿಮೆ ಮಾಡತಬೇಕೆಂದೂ ಎಲ್ಲೆಲ್ಲೂ ಪ್ರಯತ್ನ ನಡೆಯುತ್ತಿರಲು, ವಾಗ ಗ್ರಾಮೋದ್ಧಾರ ಮಂಡಳದ ಈ ನಾಟಕಗಳಿಗಾಗಿ ಅನಾವಶ್ಯಕ ವೆಚ್ಚ ಮಾಡುವದು ಯಾಕೋ ತಿಳಿಯದು!

—ಭಾರತದ ಅರ್ಥಮಂತ್ರಿಗಳಾದ ಡಾ|| ಚಿಂತಾಮಣ ದೇಶಮುಖರು ಈ ತಿಂಗಳ ಅಂತ್ಯಕ್ಕೆ ತಮ್ಮ ಅಧಿಕಾರಪದ ಬಿಟ್ಟು ಹೋಗುತ್ತಾರೆ ಅವರ ಜಾಗಕ್ಕೂ ಶ್ರೀ|| ಜಯರಾಮದಾಸರ ರಾಜೀನಾಮೆಗಳಿಂದ ತೆರವಾಗುವ ಮಂತ್ರಿಪದಗಳಿಗೆ ಪಂ ನೆಹರೂರವರು ಶ್ರೀ| ರಾಜಾಜಿಯವರನ್ನೂ ಶ್ರೀ| ಶ್ರೀ ಪ್ರಕಾಶರನ್ನೂ ನೇಮಿಸಿಕೊಂಡಿದ್ದಾರೆ ಜಯರಾಮದಾಸರು ಆಸಾಮದ ಪ್ರಾಂತಾಧಿಪರನ್ನಾಗಿ ನೇಮಿಸಲ್ಪಟ್ಟಿರತ್ತಾರೆ.

ಮುಂಬಯಿಯಲ್ಲಿ
ಗೋಕರ್ಣ ಮಠಾಧೀಶರು
(ನಮ್ಮ ಪ್ರತಿನಿಧಿ ಕಳಿಸಿದ್ದು)



ಶ್ರೀಮದ್ ದ್ವಾರಕಾನಾಥತೀರ್ಥ ಸ್ವಾಮಿಗಳು

ಮುಂಬಯಿ— (ತಾ ೯—೩—೫೪) ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶರು ಇದೇ ಕಳೆದ ವೈಶಾಖ ಮಾಸದ ಪ್ರಾರಂಭಕ್ಕೆ ಪರ್ತಗಾಳಿಯಿಂದ ಹೊರಟು ರಾಮನವಮಿ ಚಿತ್ರಾಪುರದ ಶ್ರೀ ರಾಮನಾಥ ಸಂಸ್ಥಾನದಲ್ಲಿ ನಡೆದ ಸುದರ್ಶನ-ಹವನ ಮುಂತಾದ್ದನ್ನು ನೋಡಲು ಹೋದ ಕಲವು ಪ್ರಸ್ತುತ. ಶ್ರೀಗಳು ಮುಂಬಯಿನ ಚಾತುರ್ಮಾಸ್ಯದೊಳಗೆ ಮುಂಬಯಿಯಲ್ಲಿ ಮುಕ್ಕಾಮ ಮಾಡಿ, ಮುಂಬಾಪುರಸ್ಥ ತಮ್ಮ ಸಮಾಜವನ್ನು ತಮ್ಮ ದರ್ಶನ-ಬೋಧಾಮೃತಗಳಿಂದ ಅನುಗ್ರಹಿಸಬೇಕಾಗಿ ಬಿನ್ನವಿಸಿಕೊಂಡಿದ್ದರು ಬೇರೆ ಕೆಲವು ಕಡೆಯಿಂದಲೂ ಶ್ರೀಗಳಿಗೆ ಆಗ ಚಾತುರ್ಮಾಸ್ಯದ ನಿಮಂತ್ರಣಗಳು ಬಂದಿದ್ದವು ಆದರೆ ಮುಂಬಯಿಯವರ ಆಗ್ರಹ ಹೆಚ್ಚಿದ್ದರಿಂದ ಶ್ರೀ ಗುರುಗಳು ಮುಂಬಯಿಯ ನಿಮಂತ್ರಣವನ್ನು ಸ್ವೀಕರಿಸಿದರು ಅದರಂತೆ ಶ್ರೀ ಗುರುಗಳು ಕಳೆದ ವಾರ ಮುರಗಾಂವಿಗೆ ಬಂದು, ಗುರುವಾರ ಮುರಗಾಂವಿಯಲ್ಲಿ ‘ಸಾಬರಮತಿ’ ಹಡಗವನ್ನು ಹತ್ತಿ, ಶುಕ್ರವಾರ ಮುಂಜಾನೆ ಸಪರಿವಾರ ಇಲ್ಲಿಗೆ ಬಂದು ತಲ್ಪಿದರು ಶ್ರೀಗಳನ್ನು ಕರೆತರಲು ಗೋವೆಯಿಂದ ರಾ|| ದೇಸಾಯಿ, ರಾಣೆ, ನಾಯಕ ಮೊದಲಾದ ಪ್ರಮುಖರು ಬಂದಿದ್ದರು. ಸಾಬರಮತಿ ಹಡಗವು ಬೆಳಗಿನ ೭|| ಗಂಟೆಗೆ ಇಲ್ಲಿ ಬಂದು ಮುಟ್ಟಿತು ಶ್ರೀ ಗುರುಗಳನ್ನು ‘ಭಾರತದ ಮಹಾದ್ವಾರ’ದಲ್ಲಿ ಸ್ವಾಗತಿಸುವ ಏರ್ಪಾಟಾಗಿತ್ತು ಅದರಂತೆ ಅವರನ್ನು ಹಡಗದಿಂದ ಈ ಮಹಾದ್ವಾರದವರೆಗೆ ಕರೆಕೊಂಡು ಬರಲು ಮಹಾ ಶ್ರೀಗಳ ಸ್ವಾಗತಾರ್ಥ ಅಲ್ಲಿ ಮುಂಜಾನೆಯಿಂದಲೂ ಸಾವಿರಾರು ಜನರು ಕೂಡಿದ್ದರು ಶ್ರೀಗಳು ಮಹಾದ್ವಾರದ ಬಳಿ [illegible] ಯಾರಲ್ಲಿ ಕಾಲಿಡುತ್ತಲೇ ಜನಸಮೂಹವು ಶ್ರೀ ಗುರುಗಳನ್ನು ಸ್ವಾಗತಿಸಿ ಶ್ರೀ ಗುರುಗಳ ಸ್ವಾಗತಕ್ಕಾಗಿ [illegible] ಪುಷ್ಪಮಾಲೆಗಳಿಂದ ಸಿಂಗರಿಸಿದ ಮಂಟಪಕ್ಕೆ ಕರೆದೊಯ್ದರು ಎಲ್ಲಿ [illegible] ಸಮಾಜದ ಧುರೀಣರು ಸ್ವಾಗತಪರ ಭಾಷಣ ಮಾಡಿ, ಶ್ರೀ ಗುರುಗಳ ಪಾದಪ್ರಕ್ಷಾಲನ ಮಾಡಿ ಅನುಗ್ರಹಿಸಿದ ಬಗ್ಗೆ ಎಲ್ಲರ ಪರವಾಗಿ ಭಕ್ತಿಯಿಂದ ನಮಸ್ಕಾರ ಸಲ್ಲಿಸಿದರು.

ಶ್ರೀ ಸ್ವಾಮಿಗಳು ಅವರಿಗೆ ಉತ್ತರ ಕೊಡುತ್ತ ಆಪ್ಪಣೆ ದಯಪಾಲಿಸಿದರೇನೆಂದರೆ — ನಮ್ಮ ಸ್ವಾಗತಕ್ಕಾಗಿ ಕೂಡಿದ ಈ ಜನ ಸಮುದಾಯವನ್ನು ನೋಡಿ ನಮಗೆ ಪರಮ ಹರುಷವಾಗುತ್ತಿದೆ ಈ ಆನಂದದ ಸಮಯದಲ್ಲಿ ತಮಗೆ ಎರಡು ಶಬ್ದಗಳನ್ನು ಹೇಳಬಯಸುತ್ತೇವೆ. ನಮ್ಮ ಪ್ರತಿಯೊಬ್ಬರ ಶರೀರದಲ್ಲಿ ಜ್ಞಾನತಂತುಗಳಿಂದ ಕೂಡಿದ ಮಿದುಳು ಮಸ್ತಕದಲ್ಲುಳಿದು, ಇನ್ನಿತರ ಅವಯವಗಳೊಳಗಿನ ರಕ್ತವಾಹಿನಿಗಳನ್ನೆಲ್ಲ ಹೃದಯದಲ್ಲಿ ಒಂದುಗೂಡಿಸಿ ಹೇಗೆ ಶರೀರ-ಧಾರಣೆಯನ್ನು ಮಾಡುತ್ತಿದೆಯೋ ಹಾಗೆಯೇ ಭಾರತದ ದಿಗ್ದೇಶಗಳಿಂದ ನೀವೆಲ್ಲರೂ ಬಗಬಗೆಯ ವ್ಯವಸಾಯಗಳ ದೆಸೆಯಿಂದ ಇಲ್ಲಿ ಒಟ್ಟುಗೂಡಿ, ತಮ್ಮ ತಮ್ಮ ಕೆಲಸ-ಬೊಗಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಆತ್ಮೋನ್ನತಿಯನ್ನೂ ದೇಶದ ಉನ್ನತಿಯನ್ನೂ ಸಾಧಿಸುತ್ತಿದ್ದೀರಿ ನೀವು ದೇಶದ ಮಿದುಳಿನಂತೆ, ಹೃದಯದಂತೆ ಇರುತ್ತೀರಿ ಆದರಿಂದ ನೀವು ಶ್ರೀ ಸಂಸ್ಥಾನದ ಬಗ್ಗೆ ತೋರಿಸುತ್ತಿರುವ ಅಭಿಮಾನ, ಆತ್ಮೀಯತೆ, ಮತ್ತು ಭಕ್ತಿಗಳನ್ನು ಕಂಡು ಯಾರಿಗೆ ತಾನೇ ಎದೆ ಉಬ್ಬುವಂತಿಲ್ಲ! ನಿಮ್ಮೊಳಗಿನ ಸಹಕಾರ-ಸಂಘಟನೆಗಳನ್ನು ಕಂಡು ನಮಗೆ ಆನಂದವೆನಿಸುತ್ತಿದೆ ಸಂಘಟನೆ, ಸಹಕಾರಗಳಿಲ್ಲದೆ ಸಮಾಜದ ಪ್ರಗತಿಯಾಗುವಂತಿಲ್ಲ, ಉನ್ನತಿಯಾಗುವಂತಿಲ್ಲ ಸಂಘಶಕ್ತಿಯನ್ನು ಬೆಳಸಿಕೊಳ್ಳದ ಯಾವದೇ ಸಮಾಜವು ಯಾ ದೇಶವು ಉನ್ನತಿಯನ್ನು ಸಾಧಿಸಿದ ಉದಾಹರಣೆ ಇತಿಹಾಸದಲ್ಲಿ ತಮಗೆ ಕಂಡುಬರುವದಿಲ್ಲ ನಮ್ಮ ವೇದದಲ್ಲಿ ಕೂಡ “ಸಂಗಚ್ಛಧ್ವಂ ಸಂವದಧ್ವಂ” ಎಂದು ಮುಂತಾಗಿ ಬೋಧಿಸಲಾಗಿದೆ ಆದರಿಂದ ನಿಮ್ಮಲ್ಲಿ ಕಂಡುಬರುವ ಇಂದಿನ ಸಂಘ-ಶಕ್ತಿಯೂ ಸಹಕಾರದ ಪ್ರವೃತ್ತಿಯೂ ದಿನೇ ದಿನೇ ಬೆಳೆಯುತ್ತ ಹೋಗಲೆಂದೂ, ಮಹತ್ವದ ಕಾರ್ಯಗಳನ್ನು ನೆರವೇರಿಸಲು ನಿಮಗೆ ಶಕ್ತಿ ಸ್ಫೂರ್ತಿಗಳನ್ನು ಕೊಡಲೆಂದೂ ನಾವು ಹೃತ್ಪೂರ್ವಕ ಹಾರೈಸುವೆವಲ್ಲದೆ ನಿಮಗೆಲ್ಲರಿಗೂ ಆಯುರಾರೋಗ್ಯ-ಐಶ್ವರ್ಯಾಭಿವೃದ್ಧಿಗಳನ್ನು ದಯಪಾಲಿಸಲು ಶ್ರೀ ರಾಮದೇವ-ಶ್ರೀ ವೀರವಿಟ್ಠಲನ ಚರಣಾರವಿಂದಗಳಲ್ಲಿ ಪುನಃ ಪುನಃ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

ಶ್ರೀಗಳ ಭಾಷಣ ಮುಗಿದ ನಂತರ ರಾ|| ಕೃಷ್ಣರಾವ ನಾಯಕ ಮತ್ತು ಮಡಗಾಂವದ ರಾ|| ನರಸಿಂಹ ನಾಯಕ ಇವರು ಚಿಕ್ಕ ಚಿಕ್ಕ ಭಾಷಣಗಳನ್ನು ಮಾಡಿ ಶ್ರೀಗಳ ಹಾಗೂ ಕೂಡಿದ ಸಭಿಕರ ಆಭಾರ ಮನ್ನಿಸಿದರು. ಬಳಿಕ ಶ್ರೀಗುರುಗಳನ್ನು ಅಲಂಕೃತ ಮೋಟಾರು ಬಂಡಿಯಲ್ಲಿ ಕೂಡ್ರಿಸಿ ಮೆರವಣಿಗೆಯಿಂದ ವಾಲುಕೇಶ್ವರ ಕೆರೆಯ ಅಂಚಿಗಿರುವ ಶ್ರೀ ಕಾಶೀಮಠಾಧೀಶರ ಮಠಕ್ಕೆ ಕರೆದೊಯ್ಯಲಾಯಿತು ಶ್ರೀ ಸ್ವಾಮಿಗಳಿಗೆ ಈ ಮಠದಲ್ಲೇ ಇಳಿಸಿಕೊಂಡು ಎಲ್ಲ ವ್ಯವಸ್ಥೆ ಮಾಡಿಕೊಡಬೇಕೆಂದು ಶ್ರೀ ಮಠದ ವ್ಯವಸ್ಥಾಪಕರಿಗೆ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳು ಮುಂದಾಗಿಯೇ ತಿಳಿಸಿದ್ದರು ಶ್ರೀ ಗುರುಗಳು ಈ ವರ್ಷದ ಚಾತುರ್ಮಾಸ್ಯವನ್ನು ಈ ಮಠದಲ್ಲೇ ಕಳೆಯುವಂತೆ ಏರ್ಪಾಟು ಮಾಡಲಾಗುತ್ತಿದೆ ಎಲ್ಲಾ ನಗರವಾಸಿಗಳು ಮಠಕ್ಕೆ ಬಂದು ಶ್ರೀಗಳ ದರ್ಶನಾನುಗ್ರಹ ಪಡೆಯುತ್ತಿದ್ದಾರೆ

ಉತ್ತರ ಕಾನಡಾ ಜಿಲ್ಲೆಗೆ ಸಂಬಂಧಪಟ್ಟ

ಗವರ್ನಮೆಂಟ ಮಾಹಿತಿ.

ಇದೇ ಕಳೆದ ಫೇಬ್ರುವರಿಯಿಂದ ಏಪ್ರಿಲ ತಾರವರೆಗೆ ನಡೆದ ಮುಂಬಯಿಯ ಎಸೆಂಬ್ಲಿ-ಕೌನ್ಸಿಲುಗಳ ಅಧಿವೇಶನದೊಳಗೆ ಆದ ಪ್ರಶ್ನೋತ್ತರಗಳಿಂದ ಹೊರಬಿದ್ದ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಕೆಲವು ಮಾಹಿತಿಯನ್ನೂ ಬೇರೆ ಕೆಲವು ಉಪಯುಕ್ತ ಮಾಹಿತಿಯನ್ನೂ ಸಂಗ್ರಹಿಸಿ ಈಗ ಕೊಡಲಾಗಿದೆ

ಜಂಗಲ ಸವಲತ್ತುಗಳ ಸಂಕೋಚ

ಕಾನಡಾ ಜಿಲ್ಲೆಯವರ ಜಂಗಲ ಕಷ್ಟಗಳ ನಿವಾರಣೆಗಾಗಿ ಸರಕಾರವು ತಾ. ೭—೪—೪೮ಕ್ಕೆ ಮೊದಲ ಸರಕಾರಿ ಠರಾವಿನಿಂದ ಕೊಡಲಾದ ಸವಲತ್ತುಗಳನ್ನು ಜಂಗಲ ನಿಯಮಗಳಿಗೂ ಹೊಂದಿಸುವದಕ್ಕಾಗಿ, ತಾ ೨೩—೪—೧೯೪೯ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ ಈ ತಿದ್ದುಪಡಿಗಳನ್ನು ಮಾಡುವಾಗ ಸರಕಾರವು ಜಿಲ್ಲೆಯ ಹೊಣೆಗಾರ ಸಂಸ್ಥೆಗಳ ಅಭಿಪ್ರಾಯವನ್ನಾಗಲಿ, ಲೋಕಪ್ರತಿನಿಧಿಗಳ ಅಭಿಪ್ರಾಯವನ್ನಾಗಲಿ ಕೇಳಿಕೊಂಡದ್ದು ಇದ್ದಂತಿಲ್ಲ ತೋಟಗಾರ ರೈತರಿಗೆ ನೇಮಿಸಿಕೊಟ್ಟ ಬೆಟ್ಟಭೂಮಿಗಳೊಳಗಿನ ಎಲ್ಲ ಜಾತಿಯ ಮರಗಳನ್ನು ಆ ರೈತರು ಸರಕಾರಕ್ಕೆ ಏನೂ ಮುಯ್ಯಾದೆ(royalty) ಸಲ್ಲಿಸದೆ ತಮ್ಮ ತೋಟಗಳ ಸಾಗುವಳಿಯ ಬಳಕೆಗಾಗಿ ಉಪಯೋಗಿಸಿಕೊಳ್ಳಬಹುದೆಂದು ೧೯೪೭ರ ಸರಕಾರಿ ಠರಾವಿನಲ್ಲುಂಟು ಪ್ರಸ್ತುತ ತಿದ್ದುಪಡಿಯು ಈ ಸವಲತ್ತನ್ನು ಸಂಕೋಚಗೊಳಿಸಿ ಕಾದಿಟ್ಟ ಜಾತಿಗಳ ಮರಗಳನ್ನು ಬಿಟ್ಟು ಉಳಿದ ಮರಗಳನ್ನಷ್ಟೇ ತೋಟಗಾರರು ಉಪಯೋಗಿಸಿಕೊಳ್ಳಬಹುದೆಂದು ಕಟ್ಟು ಮಾಡಿದೆ. ಜಿಲ್ಲಾ ಪ್ರಜೋದ್ಧಾರ ಮಂಡಳವು ಈ ತಿದ್ದುಪಡಿಯನ್ನು ಬಲವಾಗಿ ನಿಷೇಧಿಸಿ ಅದರಿಂದ ಸಾಗುವಳಿಯ ಕೆಲವಾಗಿ ಹೊಡೆತಾಗ ಅಡ್ಡಬರುವ ಕಾದಿಟ್ಟ ಜಾತಿಯ ಮರಗಳನ್ನು ಕೂಡ ತಮ್ಮ ಸ್ವಂತ ಪ್ರಾಮಾಣಿಕ ಉಪಯೋಗಕ್ಕಾಗಿ, ಸರಕಾರವು ಮರ್ಯಾದೆಯನ್ನು ತೆರದೆ, ಬೆಟ್ಟ ಪಡೆದ ತೋಟಗಾರರು ಉಪಯೋಗಿಸಿಕೊಳ್ಳಬಹುದೆಂದು ಸರಕಾರವು ಹೊಸ ಹುಕುಮು ಹೊರಡಿಸಲು ನಿಶ್ಚಯಿಸಿದೆ ಈ ಸೌಕರ್ಯವಾದರೂ ಸಧ್ಯದ ಆಹಾರ ಧಾನ್ಯಗಳ ಕೊರತೆ ಇರುವ ವರೆಗಷ್ಟೇ ಕೊಡಲ್ಪಡುವದು

ಗೊಬ್ಬರ-ಕುಣಿಗಳ ಪ್ರಚಾರ

ಹೊಸ ಗೊಬ್ಬರ-ಕುಣಿಗಳ ಪ್ರಚಾರಕ್ಕಾಗಿ ನಮ್ಮ ಜಿಲ್ಲೆಯಲ್ಲಿ ೧೯೪೭-೪೮ರಲ್ಲಿ ರೂ. [illegible] ಮತ್ತು ೧೯೪೮-೪೯ರಲ್ಲಿ ರೂ [illegible] ಖರ್ಚು ಬಂತು ಇದೇ ಜಿಲ್ಲೆಯಲ್ಲಿ ೧೯೪೭-೪೮ರಲ್ಲಿ [illegible] ಕುಣಿಗಳೂ, ೧೯೪೮-೪೯ರಲ್ಲಿ [illegible] ಕುಣಿಗಳೂ, ೧೯೪೯-೫೦ರ ನವಂಬರ ವರೆಗಿನ ೮ ತಿಂಗಳಲ್ಲಿ [illegible] ಕುಣಿಗಳೂ ತೆಗೆಯಲ್ಪಟ್ಟಿದ್ದವು ಗೊಬ್ಬರ ತಯಾರಿಸಿದ ರೈತರಿಗೆ ಈ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ರೂ [illegible], ರೂ [illegible] ಮತ್ತು ರೂ [illegible] ಧನಸಹಾಯ ಮಾಡಲಾಗಿದೆ

ತಗಾವಿ ಸಾಲ

ಕಾನಡಾ ಜಿಲ್ಲೆಯಲ್ಲಿ ರೈತರಿಗೆ ತಗಾವಿ ಸಾಲ ಕೊಡುವ ಬಗ್ಗೆ ೧೯೪೭-೪೮ರಲ್ಲಿ ರೂ [illegible] ಮತ್ತು ೧೯೪೮-೪೯ರಲ್ಲಿ ರೂ [illegible] ಮಂಜೂರ ಮಾಡಲಾಗಿತ್ತು. ಅದರ ೧೯೪೭-೪೮ರಲ್ಲಿ ಹೊಸ ಬಾವಿಗಳ ಸಲುವಾಗಿ ರೂ [illegible] ಇದ್ದ ಬಾವಿಗಳ ದುರುಸ್ತಿಗಾಗಿ ರೂ [illegible], ಭೂಮಿಯ ಸುಧಾರಣೆಗಾಗಿ ರೂ [illegible], ಎತ್ತು ಮತ್ತು ಬೇಸಾಯದ ಸಾಹಿತ್ಯಗಳನ್ನು ಕೊಂಡುಕೊಳ್ಳಲು ರೂ [illegible] ಹೀಗೆ ಒಟ್ಟು ರೂ [illegible] ಮತ್ತು ೧೯೪೮-೪೯ರಲ್ಲಿ ಹೊಸ ಬಾವಿಗಳಿಗಾಗಿ ರೂ [illegible], ಇದ್ದ ಬಾವಿಗಳ ದುರುಸ್ತಿಗಾಗಿ ರೂ [illegible], ಸಾಗುವಳಿಯ ಭೂಮಿಗಾಗಿ ರೂ [illegible] ಮತ್ತು ಎತ್ತು ಮುಂತಾದವುಗಳ ಖರೀದಿಗಾಗಿ ರೂ [illegible] ಹೀಗೆ ಒಟ್ಟು ರೂ. [illegible] ಪ್ರತ್ಯಕ್ಷ ಸಾಲ ಕೊಡಲಾಗಿದೆ

ಮೀನುಗಾರರ ಸಹಕಾರಿ ಸಂಘಗಳು

ನಮ್ಮ ಜಿಲ್ಲೆಯಲ್ಲಿ ಸಧ್ಯಕ್ಕೆ ಮಾಜಾಳಿ, ನಂದನಗದ್ದಾ- ಕೋಡಿಬಾಗ, ಹಾರವಾಡಾ, ಕೇಣಿ, ಬಿಣಗಾ, ಹೊನ್ನಾವರ, ಗಂಗಾವಳಿ ಸೀಮಾ, ಕುಮಟಾ ಮತ್ತು ಶಿರಾಲಿ ಹೀಗೆ ೯ ಸ್ಥಳಗಳಲ್ಲಿ ಮೀನುಗಾರರ ಸಹಕಾರಿ ಸಂಘಗಳು ಇವೆ. ನಮ್ಮಲ್ಲಿ ಮೀನುಗಾರಿಕೆಯ ವ್ಯವಸಾಯ ಮಾಡುತ್ತಿರುವ ಹರಿಕಂತ್ರ, ಖಾರ್ವಿ, ಅಂಬೇರ ಮುಂತಾದ ಜನರು ಮಧ್ಯಮ (intermediate) ವರ್ಗಗಳಲ್ಲಿ ಬರುತ್ತಾರೆ ಗಾಬಿತರು ಇತರ ಹಿಂದುಳಿದ" ವರ್ಗಗಳಲ್ಲಿ ಸೇರ್ಪಡೆಯಾಗುತ್ತಾರೆ

ದಿ ಮುಕುಂದ ಪ್ರೊವಿಡೆಂಟ

ಇನ್ಸೂರನ್ಸ ಕಂಪನಿ ಲಿಮಿಟೆಡ್, ಬೆಳಗಾಂವ.

(ಸ್ಥಾಪನೆ: ೧೯೩೮)

ಧಾರಾಳವಾದ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರನ್ನು ನೇಮಿಸುವದಿದೆ

ವ್ಹಿ. ಬಿ. ಏವಟ ದೇಸಾಯಿ,

ಮ್ಯಾನೇಜಿಂಗ ಡೈರೆಕ್ಟರ

PUBLIC NOTICE.

In the Court of the District Judge, at Karwar

Miscellaneous No 11 of 1950

1 Ambu Thomas, 35 years

2 Vithal Rayappa Raikar 40 years

3 Ganapathi Gopal Kamath, 40 years

All of Ankola — Petitioners

Whereas, Shri S Silva, Pleader for the petitioners has filed a petition in this court praying for an order under section 123 of the Indian Companies Act that the Kanara Fisheries and Idustrial Corporation Ltd, whose registered office is at Ankola be wound up as the business of the said Company has been practically suspended for the past $1\frac{1}{2}$ years and is at present practically at a stand still

Now, therefore all the persons concerned are hereby requested to take note that this court has fixed 7th day of June 1950 at 11 A. M. for receipt of objections thereto if any in this court on or before the said date, and they are further informed that in the absence of any objections this court will hear the petition and pass such orders as are deemed necessary

Given under my hand and the seal of this Court this 17th day of May 1950

Seal of the Court

B G SHIRODKAR,
for Clerk of the Court
District Court, Kanara, Karwar

ಜಾಹೀರ ನೋಟೀಸಿಗೆ ಉತ್ತರ

ತಾ ೧೦ ಏಪ್ರಿಲ ೧೯೫೦ನೇ "ಕಾನಡಾವೃತ್ತ" ದಲ್ಲಿ ಪ್ರಕಟವಾದ ನೋಟೀಸ ನೋಡಿ ಬಹಳ ಆಶ್ಚರ್ಯವಾಗುತ್ತದೆ [illegible] ನಾನು [illegible] ಪಡೆದ ಆಸ್ತಿಗಳ [illegible] ನನಗೆ [illegible] ಇಲ್ಲ ನಾನು ಯಾರಿಗೂ [illegible] ಮಾಡಿಕೊಟ್ಟಿದ್ದಿಲ್ಲ [illegible] ಬಗ್ಗೆ ನಾನು ಯಾವದೇ ವಾಚನ [illegible] ಇಲ್ಲ [illegible] ನನ್ನ ಸ್ವಂತ [illegible] ಆಸ್ತಿಗಳ [illegible] ನನಗೆ ಇನ್ನು [illegible] ನನ್ನ ಅನುಮತಿ ಇಲ್ಲ

[illegible], ತಾ ೧೮ ಮೇ ೧೯೫೦

ತಿಮ್ಮಣ್ಣ ಗಣಪ ಭಟ್ಟ ಒಡೆ

ಜಿಲ್ಲೆಯಲ್ಲಿ ಈಗ ವಿಜ್ಞಾನ[illegible]ಕೆಯ ಶಿಕ್ಷಣ ಕೊಡಲು (ಕಾರವಾರ [illegible] ಮತ್ತು ಮಾಜಾಳಿಗಳಲ್ಲಿ) ೩ ಶಾಲೆಗಳನ್ನು ತೆರೆಯಲಾಗಿದೆ ಕೇಣಿಯಲ್ಲಿ ಸಾರ್ಕರಲಿವ್ವರಿವಿಸ್ಣ (ಕೊಡ[illegible]ವ್ವರಿವಿಸ್ಣ ಯಂತೆಯೇ ಉಪಯೋಗಕ್ಕೆ ಬರುವ) ತೆಗೆಯುವ ಉದ್ಯೋಗ ನಡೆಯುತ್ತಿದೆ [illegible] ಅಲ್ಲಿ ರೂ [illegible] ಜೆಲಿಯ ಎಣ್ಣೆ ತಯಾರಾಗಿತ್ತು

ವೈದ್ಯಕೀಯ ಉಪಚಾರದ ಕೇಂದ್ರಗಳು

ಸದ್ಯಕ್ಕೆ ಕಾನಡಾ ಜಿಲ್ಲೆಯಲ್ಲಿ ಆಯುರ್ವೇದಿಕ ಉಪಚಾರ ಮಾಡುವ [illegible] ಮತ್ತು ಎಲೋಪಥಿ ಪದ್ಧತಿಯ ಉಪಚಾರ ಮಾಡುವ [illegible] ಅಂತು [illegible] ಸರಕಾರಿ ಬಿನಾ ಸರಕಾರಿ ಸಹಾಯದಿಂದ ನಡೆಯುವ [illegible] ದವಾಖಾನೆಗಳಿಂದ [illegible] ಗ್ರಾಮಗಳ [illegible] ಪ್ರಯೋಜನ ಸಿಗುತ್ತಿದೆ

ಪ್ರೌರ್ಯಕೆ ಮತ್ತು ನಿಯಂತ್ರಣ ಶಿಬಂದಿ

ಇಡೀ ಮುಂಬಯಿ [illegible] ಪ್ರೌರ್ಯಕೆ ಮತ್ತು ನಿಯಂತ್ರಣ ಇಲಾಖೆಯ ಕೆಲಸ [illegible] [illegible] ನೇ ವರ್ಷದಲ್ಲಿ [illegible] ಮುಂದುವರಿಯುತ್ತಿದ್ದರು ಇದಕ್ಕೆ [illegible] ಶಿಬಂದಿಗಾಗಿ ರೂ [illegible] ಮತ್ತು ಇನ್ನಿತರ ಶಿಬಂದಿಗಾಗಿ ರೂ [illegible] (ಅಂತು [illegible]) ಖರ್ಚ ಬಂತು ನಮ್ಮ ಜಿಲ್ಲೆಯ ಶಿಬಂದಿಯಲ್ಲಿ [illegible] ಜನರಿದ್ದಾರೆ ಈ ಶಿಬಂದಿಯನ್ನು ಕಡಿಮೆ ಮಾಡಿಕರುವ ವಿಚಾರ ನಡೆದಿದೆ

ಚಾಲು ವರ್ಷದ ಅಕ್ಕಿಯ ಖರೇದಿ

ಕೊಂಕಣ ದೇಶಕ್ಕೊಪ್ಪಿದ ಮುಂಬಯಿ ಜೋಡಿಸಲಾಯದ [illegible] ಕುಲಾಬಾ, ರತ್ನಾಗಿರಿ ಮತ್ತು ಕಾನಡಾ ಜಿಲ್ಲೆಗಳಲ್ಲಿ ಸರಕಾರವು ಅಕ್ಕಿ ಭತ್ತಗಳನ್ನಷ್ಟೇ ಖರೀದಿಸುತ್ತಿದೆ ಕಳೆದ ನವೆಂಬರ [illegible] ರಿಂದ ಮಾರ್ಚ [illegible] ತನಕ ಈ ಜಿಲ್ಲೆಗಳಲ್ಲಿ ಅನುಕ್ರಮವಾಗಿ [illegible], [illegible], [illegible] ಟನ್ನ ಅಕ್ಕಿ ಖರೀದಿಸಲಾಗಿತ್ತೆಂದು ಮಾನ್ಯ ದಿನಕರರಾವ ದೇಸಾಯಿಯವರು ತಿಳಿಸಿದರು [illegible] [illegible] ನೇ ವರ್ಷಗಳ ಇದೇ ಪ್ರಾಯದಲ್ಲಿ (ನವೆಂಬರದಿಂದ ಮಾರ್ಚ ತಾ [illegible] ರವರೆಗಿನ) ನಮ್ಮ ಜಿಲ್ಲೆಯಲ್ಲಿ ಅನುಕ್ರಮವಾಗಿ [illegible] [illegible] [illegible] ಮತ್ತು [illegible] ಟನ್ನ ಧಾನ್ಯ ಖರೀದಿಯಾಗಿತ್ತು ಈ ವರ್ಷದ ಧಾನ್ಯ-ಖರೀದಿಗಾಗಿ ನಮ್ಮ ಜಿಲ್ಲಾಧಿಕಾರ [illegible] ರವರೆಗೆ ಸರಕಾರಿ ಬೊಕ್ಕಸದೊಳಗಿಂದ ರೂ [illegible] ತೆಗೆದುಕೊಂಡಿರುತ್ತಾರೆ

ನಮ್ಮ ಜಿಲ್ಲೆಗೆ ಸಿಕ್ಕ ತಗಡುಗಳೆಷ್ಟು?

[illegible] ರಲ್ಲಿ ನಮ್ಮ ಕಾನಡಾ ಜಿಲ್ಲೆಗೆ ಸರಕಾರದಿಂದ [illegible] ಟನ್ನ ಕೆರೋಗೇಟ ತಗಡುಗಳೂ [illegible] ಟನ್ನ ಸಾದಾ ತಗಡುಗಳೂ [illegible] ಟನ್ನ ಕಬ್ಬಿಣದ (ಶೀಟ) ತಗಡುಗಳೂ ದೊರೆತಿದ್ದವು [illegible] ರಲ್ಲಿ (ಅಕ್ಟೋಬರ ವರೆಗೆ ಮಾತ್ರ) [illegible] ಟನ್ನ ಕೆರೋಗೇಟ ತಗಡುಗಳು ಮತ್ತು [illegible] ಟನ್ನ ಸಾದಾ ತಗಡುಗಳು ಸಿಕ್ಕವೆ

ಟೆನನ್ಸಿ ಕಾಯಿದೆಯನ್ವಯ [illegible] ದಿವಾಣಿ ಕೈಸಲೆಗಳು

ಟೆನನ್ಸಿ ಕಾನೂನಿನ ಕಲಮ [illegible] ಕೋಡಿಸಿ [illegible] ರ ದಿವಾಣಿ ನ್ಯಾಯಾಲಯವು [illegible] ರಲ್ಲಿ [illegible] ಮತ್ತು [illegible] ಲ್ಲಿ ಡಿಕ್ರಿಗಳನ್ನು ಮಾಡಿತು ಕುಮಟಾ ದಿವಾಣಿ ನ್ಯಾಯಾಧೀಶರು ಸದರಿ ಅವಧಿಯಲ್ಲಿ ([illegible]) [illegible] ಫೈಸಲೆಗಳನ್ನು ಮಾಡಿದರು ಹೊನ್ನಾವರ ಕೋರ್ಟಿನವರು [illegible] ಹುಕುಮುನಾಮೆಗಳನ್ನು ಮಾಡಿದ್ದರು ಕುಮಟಾ ಕಾರವಾರ ಕೋರ್ಟಿನ ಡಿಕ್ರಿಗಳ ಅಮಲಬಜಾವಣೆಯಾಗಲಿಲ್ಲ ಹೊನ್ನಾವರ ಕೋರ್ಟಿನ ಡಿಕ್ರಿಗಳಲ್ಲಿ [illegible] ಡಿಕ್ರಿಗಳ ಅಮಲಬಜಾವಣೆ ನಡೆದಿರುತ್ತಿದ್ದು [illegible] ಅಮಲಜಾರಿ ಪ್ರಕರಣಗಳಲ್ಲಿ (ಓನನ್ಸಿ ಕೋರ್ಟಿನವರು) [illegible] ಕೊಡಿಸಿದ್ದಾರೆ [illegible] ಪ್ರಕರಣಗಳಲ್ಲಿ ಕಬಜೆ ಕೊಡಿಸುವ ಒಪ್ಪಿಗೆಯಿಂದ [illegible] ರಿಗೆ ಒರೆದು ಹೋಗಿದೆ

ಜಿಲ್ಲೆಯಲ್ಲಿ ಹಿಂದುಳಿದ ವರ್ಗದವರೆಷ್ಟಿದ್ದಾರೆ?

ಮುಂಬಯಿ ರಾಜ್ಯಾಂಗದಲ್ಲಿ ([illegible]ಯಾದ ಸಂಸ್ಥಾನಗಳನ್ನು ಬಿಟ್ಟು) [illegible] ಲಕ್ಷ [illegible] ಸಾವಿರ ಪರಿಶಿಷ್ಟ ವರ್ಗದವರು [illegible] ಲಕ್ಷ [illegible] ಸಾವಿರ "[illegible]ಮೂಲನಿವಾಸಿ" ಮತ್ತು ಗುಡ್ಡ ಜನರು [illegible] ಲಕ್ಷ [illegible] ಸಾವಿರ ಇನ್ನಿತರ ಹಿಂದುಳಿದ ವರ್ಗದವರು ಇರುತ್ತಾರೆ ನಮ್ಮ ಜಿಲ್ಲೆಯಲ್ಲಿ ಈ ವರ್ಗಗಳ ಜನರು ಅನುಕ್ರಮವಾಗಿ [illegible] [illegible] ಮತ್ತು [illegible] (ಅಂತ [illegible]) ಇರುತ್ತಾರೆ

ಹಳ್ಳಿಯ ವಾಚನಾಲಯಗಳು

ನಮ್ಮ ಜಿಲ್ಲೆಯಲ್ಲಿ [illegible] ರಲ್ಲಿ [illegible], [illegible] ರಲ್ಲಿ [illegible] ಮತ್ತು [illegible] ರಲ್ಲಿ [illegible] ಹಳ್ಳಿಯ ವಾಚನಾಲಯಗಳಿಗೆ ಸರಕಾರದಿಂದ ಧನಸಹಾಯ ಸಿಕ್ಕಿದೆ ಇಡೀ ಮುಂಬಯಿ ಪ್ರಾಂತದೊಳಗೆ [illegible] ರಲ್ಲಿ ಸರಕಾರಿ ಧನಸಹಾಯ ಪಡೆದ ಹಳ್ಳಿಯ ವಾಚನಾಲಯಗಳು [illegible]

ಸ್ಥಾನಿಕ ವೃತ್ತಾಂತ

ಕುಮಟಾ— [illegible] ಆಗಿದ ಅಗಾಗ ನೋಡಗಳ [illegible] ಅದರಿಂದ [illegible] ಮೊದಲು [illegible] ಯಾಗದೆಂದು [illegible] ಸುದ್ದಿ [illegible]

ಕೆನರಾ [illegible] ಇಂಟರ [illegible] ಸರ್ಟಿಫಿಕೇಟ [illegible] ಬಂದಿ [illegible] ದಿನ [illegible] ಬಂದಿದ್ದಾನೆ

ಕುಮಟಾ ತಾಲೂಕಿನ [illegible] ಕಾಂಗ್ರೆಸ [illegible] ನದಿ [illegible]

ಗೆ [illegible] ಅರ್ಜಿಗಳಿದ್ದುದರಿಂದ ಅರ್ಜಿದಾರರೆಲ್ಲರೂ ಅನಿರೋಧ [illegible] ಚುನಾವಣೆ ಅಧಿಕಾರಿಗಳಾದ [illegible] ನಾಯಕರು [illegible] ಯಿಸಿದ್ದಾರೆ ಆರಿಸಿ ಬಂದವರಲ್ಲಿ [illegible] ಭಟ್ಟ, ಸದಾಶಿವ [illegible] ಶ್ರೀಧರ [illegible], ಗಣಪತಿ [illegible], ಗಣಪತಿ ಭಾಗವತ ಮೊದಲಾದವರಿದ್ದಾರೆ

[illegible] ಮುನಿಸಿಪಾಲಿಟಿಯು ಮನೆ-ಕರಗ [illegible] ಬಹಳಷ್ಟು ವಂಚನೆಯೂ ಪಕ್ಷಪಾತವೂ ಆಗಿರುತ್ತದೆಂದೂ [illegible] ಮ್ಯುನಿಸಿಪಾಲಿಟಿಯ [illegible] ಅಧ್ಯಕ್ಷರಾಗಿರುವ [illegible] ಮ್ಯುನಿಸಿಪಾಲಿಟಿಯ ಕಾರಭಾರದಲ್ಲಿ [illegible] [illegible] ಬರುವುದು [illegible] ಹುಟ್ಟಿದ [illegible] ಇಲಾಖೆಗಳಲ್ಲಿ ಒಂದು ಭಾಗ [illegible] ರೂ [illegible] ಅನೇಕ ಭಾಗ [illegible] ರೂ [illegible] ಮತ್ತೊಂದು ಭಾಗ [illegible] ರೂ [illegible], ಮಗದೊಂದು ಭಾಗ [illegible] ರೂ [illegible], ಅನೇಕ [illegible] ರೂ [illegible] ಬೇರೊಂದು ಭಾಗ [illegible] ರೂ [illegible], ಮತ್ತೊಂದು ಭಾಗ [illegible] ರೂ [illegible] ಭಾಗಗಳ [illegible] ರೂ [illegible] ಮನೆ [illegible] ರೂ [illegible], [illegible], [illegible], [illegible], [illegible], [illegible] [illegible] ಮನೆಗಳಿಗೂ ಹೀಗೆಯೇ [illegible] ಭಾವನೆಯಾಗಿದೆ [illegible] ಮನೆಗಳ [illegible] ಕಡಿಮೆ ಮಾಡಿಕೊಳ್ಳದ [illegible] ಎಲ್ಲಿ ಇವರ [illegible] ಮನೆಗಳಿಗೆ [illegible] ಅನ್ಯಾಯವಾಗಿದ್ದರಿಂದ [illegible] ಎಷ್ಟೆಷ್ಟು ವಂಚನೆ [illegible] ಜಿಲ್ಲಾಧಿಕಾರಿಗಳು ಈ ವಂಚನೆಯನ್ನು [illegible] ಬೇಕೆಂದು ಅವರು ಕೇಳುತ್ತಾರೆ

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ-ಸ್ಟಾಂಡ, ಹುಬ್ಬಳ್ಳಿ

ವಿ ಸೂಚನೆ [illegible] ದಿಂದ [illegible]

[illegible]

ಮಾಲಕ:— ಮಾಧವನ್ನ ಸೈ.

ಜಿಲ್ಲಾ ಸಮಾಚಾರ.

ಕಾರವಾರ— (ತಾ. (೭–೫–೩೦)) [illegible]

[illegible]

(೬ ನೇ ಪುಟದ ೧ ನೇ ಕಾಲಂ ನೋಡಿರಿ)

ಆಜ್ಞೆ.

ಕಾನಡಾ ಜಿಲ್ಲೆಯ ಮ್ಯಾಜಿಸ್ಟ್ರೇಟರ ಕಚೇರಿ

ಕಾರವಾರ, ತಾ ೧೦ ಮೇ, ೧೯೩೦

ನಂ ೫೯— [illegible] (೨)ನೇ [illegible]

[illegible]

(೧) [illegible]

(೨) [illegible]

(೩) [illegible]

ಪರಿಶಿಷ್ಟ ೧

([illegible])

ತಾಲೂಕ, ಪೇಟೆ ಯಾ ಸ್ಥಳ	[illegible]	೧ನೇ ಸ್ತಂಭದಲ್ಲಿ [illegible]	೩ನೇ ಸ್ತಂಭದಲ್ಲಿ [illegible]
(೧)	(೨)	(೩)	(೪)
೧ ಕಾರವಾರ	೬–೦–೦	೦–೫–೯	೦–೬–೩
೨ ಕೋಡಿಬಾಗ, ಕುಮಟಾ, ಹೊನ್ನಾವರ	೫–೧೫–೯	೦–೫–೯	೦–೬–೩
೩ ಸದಾಶಿವಗಡ, [illegible] ವೆಂಕಟಪುರ, ಶಿರಾಲಿ	೫–೧೫–೦	೦–೪–೯	೦–೬–೩
೪ ಉಪ್ಪಿನಪಟ್ಟಣ	೬–೧–೩	೦–೬–೦	೦–೬–೬
೫ ಭಟಕಳ	೬–೨–೩	೦–೬–೦	೦–೬–೬
೬ ಅಂಕೋಲಾ	೫–೧೫–೬	೦–೫–೯	೦–೬–೩
೭ ಸಿದ್ದಾಪುರ, ಯಲ್ಲಾಪುರ	೭–೦–೩	೦–೭–೦	೦–೭–೬
೮ ಶಿರ್ಸಿ	೬–೭–೩	೦–೬–೨	೦–೬–೯
೯ ಹಳಿಯಾಳ	೬–೭–೬	೦–೬–೩	೦–೬–೯
೧೦ ಸುಪಾ	೭–೭–೯	೦–೭–೩	೦–೭–೯
೧೧ ಮುಂಡಗೋಡ	೭–೧–೦	೦–೭–೦	೦–೭–೬

ಪರಿಶಿಷ್ಟ ೨

([illegible])

ತಾಲೂಕ	೪ ಆಂ ಗೆಲನು ಎಣ್ಣೆಯ ಕೋಠಿ ಬೆಲೆ	೧ನೇ ಸ್ತಂಭದಲ್ಲಿ [illegible]	೩ನೇ ಸ್ತಂಭದಲ್ಲಿ [illegible]
(೧)	(೨)	(೩)	(೪)
ಮುಂಡಗೋಡ	೬–೨–೩	೦–೬–೦	೦–೬–೬

M. K JADHAV,
ಜಿಲ್ಲಾ ಮ್ಯಾಜಿಸ್ಟ್ರೇಟ, ಕಾನಡಾ.

(ಈವಾಗ ಕರ್ನಾಟಕದ ಜಾತ್ರೆ ಜೊತೆಯನ್ನು ಆಕಸ್ಮಿಕ ದಿಂದಲೂ ಸರ್ದಾರರು ಹಿಂದಿನಿಂದ ಹೇಳ ಕಳುಹಿಸಿದ ರಿಂದಲೇ ತೊಂದರೆಯು ಒಗ್ಗೆ ಅನುಮಾನಪಟ್ಟರಂತೆ) ಆದರಿಂದ ಸಹಾ ದೊಡ್ಡವರುಗಳಲ್ಲಿ ಕೆಲವು ಕರ್ನಾಟಕದ ಪ್ರಮುಖರು "ದಿಲ್ಲಿ"ಯ ಪ್ರದ್ವಾರಿಗೆ ಹೋಗುತ್ತೀವೆಂದು ಕಾಲ್ನಡಿಗೆ ಪ್ರಧಾನಿ ನೆಹರುರವರ ಪ್ರತ್ಯೇಕ ದೇವಳ ಮಾಡಿಕೊಂಡು ಪರಿಗಣಿತ ಹೋದರು ಪಟ್ಟಾಭಿಯ ಹರಿಹರ ಬಾಲಿಕಾಶ್ರಮದ ಕೆಲವು ಬಲಿಯಾಗಿ ಸಿರ ದಾರರನ್ನು ಕಾಣಲು ಬಂದಿದ್ದರು ಇಲ್ಲಿಗೆ ಬಂದ ರೆದು ನಿಶ್ಚಯ ಜೀವ ಬಂದಾಗ ಅವರೆಲ್ಲರೂ ದಿಲ್ಲಿಯನ್ನು ಸೇರಿದರು ಗಾಂಧಿಯವರು ದೇಶದ ಮೋಟ ಕಾಟು ಇವ ರೆಲ್ಲರನ್ನು ನಗುಮೊಗದಿಂದ ಬರಮಾಡಿಕೊಂಡ ಕನ್ನ ಡಕ್ಕೆ ಸಹಾಯಕರಿಂದ, ಕರ್ನಾಟಕ ಪ್ರಾಂತ ರಚ ನೆಯ ಸಂಬಂಧದಲ್ಲಿ ಮೈಸೂರಿಗೆ ಪ್ರತ್ಯೇಕ ಪ್ರಾಂತೀಕ ಕಾಂಗ್ರೆಸ ಸಮಿತಿಯು ಸ್ಥಾಪನೆಯಾದ ಕೆಲವೆ ದ್ದರ ಸಂಬಂಧದಲ್ಲಿ ಇಲ್ಲವೆ ಏಕೀಕರಣದ ಸಂಬಂಧದಲ್ಲಿ ಕನ್ನಡಿಗರು ಕನಸ ಇಲ್ಲವೆ ನನಸಿನಲ್ಲಿ ದೇಶ ಮಂದಿ ಅನುಕೂಲ ಕಾಲ ಬಂದ ವೇಳೆ ಎ ದೇ ಅನುಕೂಲವಾಗಿ ಕಾಣುವ ಸಮಯದಲ್ಲಿ ಆದರೆ ದಿಂದ ಮುಂದಿನವರೆ ಅವರ ಪರಿಗಣಿಸುವಾಗ್ಯೇದ್ರೆ ಅವಸರದಿಂದ ಮಾಡಿದ ದೇಶ-ವಿಭಜನೆಯ ಪರಿ ಣಾಮಗಳನ್ನು ನೋಡಿ, ನೋಡಿ ತಿದ್ದೇವೆ ನಾವು ಕಾಂಗ್ರೆಸ್ಸಿನ ಬಲ-ಸಂವರ್ಧನೆ ಮಾಡಿ ಕಟ್ಟಿ ದೊರೆಸಿದ ಸ್ವಾತಂತ್ರ್ಯವನ್ನ ಭದ್ರಪಡಿಸಿಕೊಳ್ಳ ಬೇಕೆಂದೂ, ರಾಷ್ಟ್ರದ ಉತ್ಪನ್ನವನ್ನು ಹೆಚ್ಚಿಸಿ ಜನ ಸಾಮಾನ್ಯರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಸ್ವಾತಂತ್ರ್ಯ-ರಕ್ಷಣೆಯ ಮಾರ್ಗವಿರುವುದೆಂದೂ, ಅನ್ನಕ್ಕೆ ದಿಂದ ಬಂದ ನಮ್ಮ ದೇಶವು ಅನಂತ ಕಷ್ಟಗಳನ್ನು ಅನುಭವಿಸಬೇಕಾದ ದೆಂದೂ ಇದ್ದ ದಿನದಲ್ಲಿ ಪ್ರಾಂತ ಅನ್ನಕ್ಕಾಗಿ ಪ್ರಜ್ಞೆ-ಹೀನರಿಗೆ ಎಡೆಗೊಡದೆ ರಾಷ್ಟ್ರದ ಏಳಿಗೆಯನ್ನು ಸಾಧಿಸಲು ನೆರವಾಗಬೇಕೆಂದೂ ಮೈಸೂರಿಗೆ ಪ್ರತ್ಯೇಕ ಕಾಂಗ್ರೆಸ ಸಮಿತಿಯನ್ನ ಕೊಟ್ಟದ್ದರಿಂದ ಏಕೀ ಮೈಸೂರ ಪ್ರದೇಶ ಸಮರ್ಥನ ಮಾಡಿದ್ದರಿಂದ ಅವರು ಕರ್ನಾಟಕ ಏಕೀಕರಣಕ್ಕೆ ಅನುಕೂಲಗಾಗುವರಿಂ ದೂ (ಒಂದು ತಿಂಗಿನ ಹಿಂದೆ, ಎಪ್ರಿಲ್ ಕಟ್ಟಿ ಕನ್ನಡನ್ನು ಕಾಣಬಂದ ಬಗ್ಗೆ ಎಲ್ಲರನ್ನೂ ಅಭಿನಂದಿಸಿ ರು ೧೧ ಘಂಟೆಗಾ ಸುಮಾರಿಗೆ ಎಲ್ಲ ಸಂದರ್ಶಕರು ಸರದಾರರನ್ನು ಬೀಳ್ಕೊಟ್ಟು ದೊಡ್ಡವರಲ್ಲಿ ಇಳಿದ ಮೇಲೆ "ಬಿಲ್ಲ"ಯ ಮುಂಬಯಿಗೆ ಹೋಗಲು ಹೊರಟುಹೋ ಯಿತು ಸರದಾರರ ಪ್ರಕೃತಿ ಈಗ ಸರಿಯಾಗಿಲ್ಲ ಪ್ರಕೃತಿ ಸರಿಯಿದ್ದಿದ್ದರೆ ಅವರು ಒಂದೆರಡು ಮೇಲೆ ಇಳಿದು ಕಾರವಾ ನಗರದ ಪ್ರಾಕೃತಿಕ ಸೌಂದರ್ಯವನ್ನು ಕಣ್ಣಾರೆ ನೋಡಿಕೊಂಡು, ಇಲ್ಲಿಯ ನಾಗರಿಕರಿಗೆ ನಾಲ್ಕು ಉಪದೇಶದ ಮಾತುಗಳನ್ನ ಹೇಳುತ್ತಿದ್ದರು ಸರದಾರ ಪಟೇಲರು ಈ ಮಾತನ್ನು ಆಡಿ ತೋರಿಸಿದರು.

ಕಳೆದ ಐವ್ವತ್ತು ಸಂಗಳಲ್ಲಿ ಜಿಲ್ಹೆ-ಟೆನಲ್ಲಿ ಕೆಲವೇ ಗಳಲ್ಲಿ ಇದ್ದ ಹೊಸ ದಾರಿಗಳು ದಾರಿಯಾಗಿರುವುದು ೧೦ ಮೈಲುಗಳ ದಾರಿಗಳು ೨೬ ಟೆನ್ಲಿನ ದಾರಿಗಳು ಸಿದ್ಧ ಯಾಗಿದ್ದ ಬಂದಿವೆ, ಮತ್ತು ಮೀ ಟಾ ಗಳಲ್ಲಿ ೩೦ ಜಮಾ ಕೆ ದಾರಿಗಳು ೨೪ನ ಟೆನ್ಲಿನ ದಾರಿಗಳು (೩೦ನ ಕೆಲವು ಉಳಿದವೆ ದೊರಕಿದಾಗ ಗಡುವಿನವರ ಕೊಟ್ಟಿದೆ ರಾ ಈ ಕೆಲಸ ಆಗಿರುವುದೆಂದು ಜಿಲ್ಹಾಧಿಕಾರಿ ಅಂಬೋಣ.

ಮಹಾಜನೀಯರ ದರ್ಶನಕ್ಕೆ ನಾಗರಿಕರು ರ ರಾ ಕೃಷ್ಣಾಜಿ ಕಿವರಾವ ಎ ನಗರೇ ಇವರು ಕಳೆದ ಒಂದು ವಾರ ಕಾ ಗಣಿಗವೆ, ನಮ್ಮ ಪ್ರಾಂತದ ೭೦ ನೇ,

ವರ್ಷದಲ್ಲಿ, ಪ್ರಾಮಾಣಿಕತೆಗೆ ಹೆಸರಾದ ಈ ವ್ಯಕ್ತಿಯು ನಿಸ್ವಾರ್ಥ ಸೇವಾಕ್ಕರು ಈ ವರ್ಷಗಳಲ್ಲ ಕಾಲ ಲೆಕ್ಕ ಪ ಹೆಸರ ಸದ್ಗುಣಗಳನ್ನು ಇನ್ನಿತರ ಕ್ಷೇತ್ರಗ ಳಲ್ಲೂ ಕೆಲವು ಮನೆಗ ದೊರೆತೀಸವ ಮಾಡಿದ್ದರು ಇದ್ದರೂ ಪ ಯೆಸನ್ನ ಒಳ ಕಟ್ಟಿದವನ್ನು ಕಟ್ಟಿಸಿಕೊಟ್ಟ ಧರ್ಮಾತ್ಮರು ಇವರೇ ಕೈಲಾಸವಾಸಿಗಳು ಅವರಿಗೆ ಸದ್ಗತಿ ಸಿಗಲಿ.

ಎಲ್ಲ ಜಾತಿಯ ನಗರ ವಾಚನಾಲಯಕ್ಕೆ ಗೋಟ ಗಾವಕರ ರಿಂದ ಕೆ ರಾ ಆರ್ ಎ ನಾಯ್ಕ ರು ರಾ ಇ ನಾಜ ಕೊಟ್ಟಿದ್ದಾರೆಂದು ವಾಚನಾಲಯದ ವರು ಕೃತಜ್ಞತೆಯಿಂದ ತಿಳಿಸುತ್ತಾರೆ.

ಅಂಕೋಲಾ—

(ಈ ಮ ೧೦ ರಂದು) ಇಲ್ಲಿಯ ಗಣ್ಯ ವ್ಯಾಪಾರಸ್ಥರಾದ ಶ್ರೀ ... ಇವರ ಮನೆಯಲ್ಲಿ ಒಂದು ಗಾಳಿ ... ಬೀಳುವ ... ಮುಂದಿನ ... ಈ ... ಬಿದ್ದು ... ಗ್ರಾಮದವರ ಸಹಾಯದಿಂದ ಬೆ ...

ಹಳಿಯಾಳ—

(೬ ನೇ ಮೇ ೫೦) ಹಳಿಯಾಳ ತಾಲೂಕಿನಲ್ಲಿ ಗಳಿಗೆಯ ಮಳೆ ಧೀನ್ಸಗಳ ಹಾನಿ ಅತ್ಯಂತದ ಆಪತ್ತಿನ ಆ ರೋಗವನ್ನು ನ್ಯಾಯ ಅ ಬಂದ ಹಾನಿ ಒ ದಿ ಪಂಚಾಯಿತಿಯ ವೈದ್ಯ ಅಧಿಕಾರಿಗಳು ಪ್ರಕರಣ ಗಳನ್ನು ಸಮೀಪದಿಂದಲೂ ಅವ್ರುಗಳಲ್ಲಿ ಉರ್ದು ಶಾಲೆಗಳ ಬಿಟ್ಟುಕೊಟ್ಟು ಇದ್ದ ಮೇಲ ಮಾಡಿ ಬಿಟ್ಟ ನಡಿಸಿದ ರೆಂದೂ, ಎಲ್ಲ ಪ್ರಕರಣಗಳು ಒಂದೇ ವಿಧದವುಗಳು ರುವಾಗ ೩೦ ಜನರು ಪ್ರಕರಣಗಳನ್ನು ಬಿಟ್ಟುಕೊಟ್ಟು ಇಬ್ಬರ ಮೇಲೆ ಮಾತ್ರ ಬಿಟ್ಟ ಮಾಡಿಕೊಟ್ಟದ್ದು ನ್ಯಾಯವಾದುದು ಅವರಲ್ಲೊಂದೂ ಸಾ ಗಳ ಇರ ನ್ಯಾಯ ದಲ್ಲಿ ಬಂದ ಟೀಕೆಯನ್ನ ಅನುಲಕ್ಷಿಸಿ ಜಿಲ್ಹಾಧಿಕಾರಿ ಬಗ್ಗೆ ಕ್ರಮ — ಗ ವರ ಜನಪ್ರತಿನಿಧಿಗಳ ನಿವೇದನೆಗಳು ಲ್ಲಿಯ ಹಾಗೂ ಗಳವರ ಕಿವಿಕೊಟ್ಟ ನ್ಯಾಯವಾದ ದರ್ಶನ ಕೊಡುವ ಸಂಬಂಧದ ಅಲ್ಲಿಯ ಅಂಕ ರನ್ನು ಉಲ್ಲಂಘಿಸಿದ ಬಗ್ಗೆ ಇಬ್ಬ ಜನಿಯಲ್ಲಿ ಇದ್ದ ಸುಮಾರು ೨೦೦ ಜನರ ವಿರುದ್ಧ ಬಿಟ್ಟಗಳನ್ನು ಮಾಡಿಕೊಂಡಿದ್ದ ಅವರ ಅನೇಕ ಆರೋಪಿಗಳು ಕ್ಷಮೆ ಬೇಡಿ ತಮ್ಮ ಮೇಲಿನ ಬಿಟ್ಟಗಳನ್ನು ಹಿಂತೆಗೆದುಕೊಳ್ಳ ಬೇಕೆಂದು ಬಿನ್ನವಿಸಿದ್ದರಿಂದ, ಜಿಲ್ಹಾ ಬಿಟ್ಟು ಹೋಗ ಕೆ ಸಲಹೆಗಾರ ಸಮಿತಿಯು ಅವರ ಈ ಅರ್ಜಿಯಿಂದು ತಮ್ಮ ಪ್ರಯೋಜನದು ಪ್ರಕರಣದ ಗುಣ-ದೋಷಗಳನ್ನು

ಸಂಬಂಧಿಸಿ ತಾಂತ್ರಿಕ (technical) ಆಕ್ಷೇಪಗಳನ್ನು ಮಾಡಿದ ೧೨೫ ಜನರ ಮೇಲಿನ ಬಿಟ್ಟಗಳನ್ನು ಬಿಟ್ಟುಕೊಡಲಾಯಿತು ಮತ್ತು ಉಳಿದ ಬಿಟ್ಟಗಳನ್ನು ಮುಂದುವರಿಸಲಾಯಿತು ಅವುಗಳಲ್ಲಿ ಆಪ ಜನರಿಗೆ ಶಿಕ್ಷೆಯಾಗಿದ್ದು, ಪ್ರಕರಣಗಳ ವಿಚಾರವಿನ್ನೂ ಮುಗಿಯಬೇಕಿದೆ. ಇತ್ಯಾದಿ [ಜಿಲ್ಹಾಧಿಪರ ಈ ಖುಲಾಸೆಯು ಮೇಲಿಂದ "ವೃತ್ತ"ದಲ್ಲಿ ಪ್ರಕಟವಾದ ವರದಿಗಾರರು — ಕೆಲವಾರು ಬಿಟ್ಟ ಗಳನ್ನು ಬಿಟ್ಟುಕೊಟ್ಟು ಕೆಲವೇ ಬಿಟ್ಟಗಳನ್ನು ಮುಂ ದುವರಿಸುವ ವಿಧಾನ — ಸಂಪೂರ್ಣವಾಗಿ ನ್ಯಾಯವಾದುದ್ದೆಂಬುದು ಸ್ಪಷ್ಟವಾಗುತ್ತದೆ ಕೆಲವರ ಬಿಟ್ಟಗಳನ್ನು ಬಿಟ್ಟುಕೊಟ್ಟು ಉಳಿದವರ ಬಿಟ್ಟಗಳನ್ನು ನಡೆಸ್ತಾ ವುದರಿಂದಲೆಂಬುದು "ವೃತ್ತ"ದ ಸುದ್ದಿಗಾರರ ಪ್ರಶ್ನೆಯಾಗಿತ್ತು ಅದಕ್ಕೆ ಜಿಲ್ಹಾಧಿಪರು ಉತ್ತರ ಕೊಟ್ಟಿ ರಾರು ಅಷ್ಟನ್ನೇ ಮಾಡದೆ ಜಿಲ್ಹಾಧಿಪರು "ವೃತ್ತ" ದೊಳಗಿನ ಸಕಲ ವಿಧಾನವು "ನಿರಾಧಾರ" (baseless and unfounded) ವೆನ್ನುವುದು ನಮ್ಮ ದೃಷ್ಟಿಯಲ್ಲಿ ಬರೆದದ್ದು ಇಂದು ನಗು ಬರುತ್ತದೆ! ನಮ್ಮ ದ " ಬಟ್ಟದ ಅರ್ಥವನ್ನು ಜಿಲ್ಹಾಧಿಪರ ಕಚೇರಿಯವರು ಅರಿಯರೇ? —ಸಂಪಾದಕ]

ಇಲ್ಲಿಯ ತಾಲೂಕ ವಾಚನಾಲಯದಲ್ಲಿ ಇತ್ತೀಚೆಗೆ ಕೆಲವು ವ್ಯವಸ್ಥೆ ನೆಟ್ಟಗಿಲ್ಲ ವಾಚನಾಲಯದಲ್ಲಿ ಸಂಜೆಯ ಟಪಾಲು ಬಂದ ಪತ್ರಿಕೆಗಳು ವಾಚಕರಿಗೆ ವಾಚನಾಲಯದ ಬಾಗಿಲು ತೆರೆಯುವುದಿಲ್ಲ! ಸಂಜೆಯ ಹೊತ್ತು ದೀಪವು ಕಾಲದಲ್ಲಿ ಬಂದು ವ್ಯವಸ್ಥೆಯಿಲ್ಲ! ಇದು ಸರಿಯಾದ ಉಪಯೋಗವು ಇಲ್ಲ ವಾಚನಾಲಯಕ್ಕೆ ಬರುವ ಕೆಲವು ನಿಯತಕಾಲಿಕಗಳು ಮಾಯವಾಗುತ್ತವೆ ಮೋಹನ ಕನಸ ಬರುವುದೇ ಇಲ್ಲ! ಅವು ಯಾರ ಮನೆಗೆ ಹೋಗುತ್ತವೋ ಏನೋ! ವ್ಯಾಪಾರಸ್ಥರು ಆಗಾಗ ವಾಚನಾಲಯಕ್ಕೆ ಭೆಟ್ಟಿ ಕೊಡುತ್ತ ವಾಚನಾಲಯದ ವ್ಯವಸ್ಥೆ ಸರಿಯಾಗಿ ನಡೆಯುತ್ತದೋ ಇಲ್ಲವೋ ಎಂಬುವನ್ನು ನೋಡುತ್ತ ಉಳಿಯಬೇಕಾಗಿ ಕೇಳಿ ಕೊಂಡಿದೆ.

ಮುಲ್ಕಿ ಪಾಟೀಲರ ಜಾಗವು ಬೇಕು!

ಹೊನ್ನಾವರ ತಾಲೂಕ ಹೊನ್ನಾವರದಲ್ಲಿ ಅರ್ಹ ಯೋಗ್ಯ ದರದ ಅಂಗಡಿಯ ಹತ್ತಿರದಲ್ಲಿ ಕೆಲಸ ಮಾಡ ಲು ಮುಲ್ಕಿ ಪಾಟೀಲ ಒಂದು ಜಾಗವು ಬೇಕು! ಅಪೇಕ್ಷೆಯುಳ್ಳವರು ತಾ ೧—೬—೧೯೫೦ ರೊಳಗೆ ಸನ ಕ್ಷ ಬಂದು ಭೆಟ್ಟಿಯಾಗಬೇಕು

ಚೆಅರಮನ್,

ಗ್ರಾಮ ಸುಧಾರಣ ಕಮಿಟಿ ಹೊಸಾಡ.

PUBLIC WORKS DEPARTMENT

Separate sealed tenders in schedule 'B to be issued by this office are invited for the following work —

S No	Name of work	Estimated Amount	Earnest Money	Security Deposit
1	S R to Kumta Hubli road miles 36 37 38 & 48 (Metal collection)	Rs 27193/-	Rs 272 -	Rs 1300 -

Application for forms will be entertained upto *-6-50 and schedule B" form will be issued upto 9- - 0 during office hours The last date for receiving the sealed schedule is upto 4 P M on 10-6-50

Schedule for the work can be obtained on payment of Rs 3 - which will not be refunded Other particulars are given in the regular notice issued separately copy of which can be obtained if desired

No A 31 C B

Office of the Ex Engr Kar Dn
Karwar 19th May 1950

G N Gouse,
Executive Engineer
Kanara Division

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯ ಪ್ರಭುವ ತನ್ನ ನ್ಯಾಶ ಆರ್ಟ ಕಾರವಾರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದ

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ರೂ. ೬
ಅಂಚೆಯಿಂದ ವರ್ಷಕ್ಕೆ ರೂ. ೭-೦-೦
೬ ತಿಂಗಳಿಗೆ ರೂ. ೩-೮-೦
ಬಿಡಿ ಸಂಚಿಕೆಗೆ ೦-೧-೬
ವ್ಹಿ. ಪಿ. ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B 1270 Monday, 29-5-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ. ೪೮

ಕುಮಟಾ — ಸೋಮವಾರ, ತಾ ೨೯—೫—೧೯೫೦

ಜಾಹೀರಾತುಗಳ ದರ
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ನಿಶ್ಚಯಿಸಬೇಕು.

ವಿವಿಧ ವಿಷಯಗಳು.

ಭಾರತ ಸರಕಾರದ ಮಂತ್ರಿಮಂಡಳದ ಪುನರ್ಘಟನೆ ಈಗಾಗ ಮುಗಿದಂತೆಯೇ ಸರಿ. ಹಿಂದೆ ರಾಜೀನಾಮೆಯನ್ನಿತ್ತ ಡಾ|| ಶಾಮಪ್ರಸಾದ ಮುಕರ್ಜಿ ಮತ್ತು ಶ್ರೀ|| ಕ್ಷಿತೀಶಚಂದ್ರ ನಿಯೋಗಿ ಇವರ ಸ್ಥಳದಲ್ಲಿ ಶ್ರೀ|| ಮುನಶಿ ಮಾತ್ರ ಶ್ರೀ|| ಹರೇಕೃಷ್ಣ ಮಹತಾಬ ಇವರಿಬ್ಬರನ್ನೂ ಆಹಾರ ಮಂತ್ರಿಗಳಾದ ಶ್ರೀ|| ಜಯರಾಮದಾಸ ದೌಲತರಾಮರ ಬದಲು ಆಸಾಮದ ಪ್ರಾಂತಾಧಿಪರಾಗಿದ್ದ ಶ್ರೀ|| ಶ್ರೀಪ್ರಕಾಶರನ್ನೂ ಮುಖ್ಯ ಮಂತ್ರಿಗಳ ಸಲಹೆಯಂತೆ ರಾಷ್ಟ್ರಪತಿ ರಾಜೇಂದ್ರರು ನೇಮಿಸಿಕೊಂಡ ಸುದ್ದಿಯನ್ನು "ವೃತ್ತ" ದಲ್ಲಿ ಈ ಹಿಂದೆಯೇ ಕೊಟ್ಟಿದ್ದುಂಟು. ಅರ್ಥಮಂತ್ರಿಗಳಾಗಿದ್ದ ಡಾ|| ಜಾನ ಮಥಾಯರು ತಮ್ಮ ಬಿಡುಗಡೆ ಮಾಡಬೇಕಾಗಿ ಈ ಹಿಂದೆಯೇ ಪಂಡಿತ ನೆಹರೂರವರಿಗೆ ಬಿನ್ನವಿಸಿದ್ದರು. ಅವರನ್ನು ಈ ತಿಂಗಳ ಕೊನೆಗೆ ಬಿಡುಗಡೆ ಮಾಡುತ್ತೇವೆಂದು ಪಂಡಿತರೂ ವಚನವನ್ನಿತ್ತಿದ್ದರು. ಅರ್ಥ ಮಂತ್ರಿಗಳ ಈ ಪದವನ್ನು ಉತ್ತರ ಪ್ರದೇಶದ ಧೀರವೀರ ಬಹುಶ್ರುತ ಪ್ರಧಾನ ಮಂತ್ರಿಗಳಾಗಿರುವ ಪಂ|| ಗೋವಿಂದ ವಲ್ಲಭ ಪಂತರಿಗೆ ಒಪ್ಪಿಸಲಾಗುವದೆಂಬ ದಟ್ಟ ವಾರ್ತೆ ಹಬ್ಬಿತ್ತು. ಆದರೆ ಪಂತರನ್ನು ಬಿಟ್ಟುಕೊಡಲು ಉತ್ತರ ಪ್ರದೇಶದವರೂ ಒಪ್ಪಲಿಲ್ಲ, ಪಂತರೂ ಅರ್ಥಮಂತ್ರಿ ಪದವನ್ನು ಸ್ವೀಕರಿಸಲು ಒಪ್ಪಲಿಲ್ಲೆಂಬಂತೆ ತೋರುತ್ತಿದೆ. ಈ ಅರ್ಥಮಂತ್ರಿ ಪದವು ಬಹಳ ಹೊಣೆಗಾರಿಕೆಯದಿರುತ್ತದೆ. ರಾಷ್ಟ್ರದ ಸಾಂಪತ್ತಿಕ ಸ್ಥಿತಿಯನ್ನು ಸಮತೂಕದಲ್ಲಿಟ್ಟುಕೊಂಡು ಹೋಗುವ ಸೂಕ್ಷ್ಮ ಹೊಣೆಗಾರಿಕೆಯು ಅರ್ಥಮಂತ್ರಿಗಳ ಮೇಲಿರುತ್ತದೆ. ಪಂ|| ಪಂತರ ಅಭಾವದಲ್ಲಿ ಶ್ರೀ|| ರಾಜಾಜಿಯವರು ಅದನ್ನು, ಅನಿವಾರ್ಯ ಪಕ್ಷವೆಂದು, ಒಪ್ಪಿಸಿಕೊಳ್ಳುವ ಪ್ರಸಂಗ ಒದಗುತ್ತದೋ ಏನೋ ಎಂಬ ಊಹಾಪೋಹಗಳು ನಡೆದಿದ್ದವು. ಆದರೆ ರಾಜಾಜಿಯವರಿಗೆ ತಾವು ಯಾವದೊಂದು ಜವಾಬದಾರಿಯ ಖಾತೆಯನ್ನು ವಹಿಸಿಕೊಳ್ಳುವದಕ್ಕಾಗಿ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡಿಲ್ಲೆಂದೂ, ಮಂತ್ರಿಮಂಡಳದಲ್ಲಿ ಹಿರಿಯ, ಅನುಭವಿ, ಮಾರ್ಗದರ್ಶಕ ಸಲಹೆಗಾರರಾಗಿ (ಬ್ರಿಟನ್ನಿನಲ್ಲಿ ಲೊರ್ಡ ಪ್ರೆಸಿಡೆಂಟ ಒಫ್ ದಿ ಕೌನ್ಸಿಲ ಎಂಬ ಅಧಿಕಾರಿಯು ಇರುವಂತೆ) ಉಳಿಯಲು ತಾವು ಅವರನ್ನು ನೇಮಿಸಿಕೊಂಡಿರುತ್ತೇನೆಂದೂ ಪಂ|| ನೆಹರೂರವರು ಪತ್ರಿಕಾಪ್ರತಿನಿಧಿಗಳ ಸಭೆಯಲ್ಲಿ ಸಾರಿ ಈ ಊಹಾಪೋಹಗಳನ್ನೆಲ್ಲ ಗಾಳಿಯಲ್ಲಿ ತೂರಿಬಿಟ್ಟರು. ಆದರಿಂದ ಡಾ|| ಮಥಾಯರ ಸ್ಥಳದಲ್ಲಿ ಯಾರು ಬರುವರೆಂಬ ಪ್ರಶ್ನೆ ಪುನಃ ಉದ್ಭವಿಸಿತು. ಕೊಂಗ್ರೆಸ್ಸಿಗ ಪ್ರಮುಖರಲ್ಲಿ ಆ ಪದವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಯಾರೂ ಕಂಡುಬರಲಿಲ್ಲ. ಆದರಿಂದ ಬ್ರಿಟಿಶರ ಆಳಿಕೆಯಲ್ಲಿ ಅದೇ ಖಾತೆಯೊಳಗೆ ದೀರ್ಘ ಕಾಲ ದುಡಿದು ಅದರ ಪೂರ್ಣ ಪರಿಚಯ ಮಾಡಿಕೊಂಡ ಮತ್ತು ಇತ್ತ ಕೆಲವು ವರ್ಷಗಳಿಂದ ರಿಝರ್ವ ಬೇಂಕಿನ ಅಧ್ಯಕ್ಷರುಗಳಲ್ಲಿ ಓರ್ವರಾಗಿದ್ದ, ಶ್ರೀ|| ಚಿಂತಾಮಣರಾವ ದ್ವಾರಕಾನಾಥ ದೇಶಮುಖ ಇವರಿಗೆ ಆ ಪದವನ್ನು ಒಪ್ಪಿಸಲಾಗಿದೆ. ಶ್ರೀ|| ದೇಶಮುಖರ ಈ ನೇಮಣೂಕಿ ಅರ್ಥಕಾರಣದ ಸಂಬಂಧವಿದ್ದ ಸಕಲರಿಗೂ ಸಂತೋಷ-ಸಮಾಧಾನವನ್ನುಂಟು ಮಾಡಿದೆ. "ಒಂದಲ್ಲೊಂದು ದಿನ ನೀವು ಈ ಕೆಲಸ ನಿರ್ವಹಿಸಿಕೊಳ್ಳಬೇಕಾಗುವದು. ಅದಕ್ಕಾಗಿಯೇ ನಾನು ನನ್ನ ಕೆಲಸವನ್ನು ನಿಮಗೊಪ್ಪಿಸಿ ನಿಮ್ಮಿಂದ ಮಾಡಿಸುತ್ತಿದ್ದೇನೆ" ಎಂದು ಕೆಲವು ವರ್ಷಗಳ ಹಿಂದೆ ಅರ್ಥಖಾತೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ|| ಜೇ. ಬಿ. ಟೇಲರರು ನುಡಿದ ಭವಿಷ್ಯವು ಇಂದು ಸತ್ಯವಾಗಿದೆ. ನಿರಾಶ್ರಿತರ ಪುನರ್ನಿವೇಶನದ ಕಾರಭಾರವನ್ನು ನಿರ್ವಹಿಸುತ್ತಿದ್ದ ಶ್ರೀ|| ಮೋಹನಲಾಲ ಸಕ್ಸೆನಾ ಇವರೂ ತಮ್ಮ ಮಂತ್ರಿಪದವನ್ನು ಬಿಟ್ಟುಕೊಟ್ಟಿದ್ದಾರೆ. ಅವರ ಸ್ಥಳದಲ್ಲಿ ಶ್ರೀ|| ಅಜಿತ ಪ್ರಸಾದ ಜೈನರ ನೇಮಣೂಕಿಯಾಗಿದೆ. ಶ್ರೀ|| ಕನ್ಹಯ್ಯಾಲಾಲ ಮುನಶಿಯವರು ಆಹಾರ ಇಲಾಖೆಯನ್ನು ತಮ್ಮ ಕಡೆ ಒಪ್ಪಿಸಿಕೊಂಡಿದ್ದು, ಆಹಾರೋತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನವನ್ನು ಒಳ್ಳೇ ಹುರುಪಿನಿಂದ ನಡಿಸಲಾರಂಭಿಸಿದ್ದಾರೆ. ಆದರೆ ಈ ಪ್ರಯತ್ನಗಳು ಯಶಸ್ವಿಯಾಗುವಂತೆ ಮಾಡುವ ಹೊಣೆಯು ಬೇರೆ ಬೇರೆ ರಾಜ್ಯಾಂಗಗಳ ಸರಕಾರಗಳ ಮೇಲೂ ಜನತೆಯ ಮೇಲೂ ಉಂಟು.

* * *

ಇದೇ ಫೆಬ್ರುವರಿ ತಿಂಗಳ ಪ್ರಾರಂಭಕ್ಕೆ ಭಾರತ ಸರಕಾರದ ಗೃಹ ಮಂತ್ರಿ ಸರದಾರ ಪಟೇಲರು ಕೇಂದ್ರ ಕಾನೂನ ಮಂಡಳದಲ್ಲಿ, ಭಾರತದ ಸುರಕ್ಷಿತತೆಗೆ ಬಾಧಕವಾಗುವಂತಹ ಚಟುವಟಿಕೆಗಳನ್ನು ನಡಿಸುವ ಜನರನ್ನು ನಿರ್ಬಂಧಿಸಿಡಲಿಕ್ಕೆ ಸರಕಾರಗಳಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ, ಪ್ರತಿಬಂಧಾತ್ಮಕ ಸ್ಥಾನಬದ್ಧತೆಯ ಕಾಯದೆಯ ಮಸೂದೆಯೊಂದನ್ನು ಮಂಡಿಸಿ, ಲಗುಬಗೆಯಿಂದ ಅದನ್ನು ಮನ್ನಿಸಿಕೊಂಡಿದ್ದರಷ್ಟೇ. ಪ್ರಾಂತಿಕ ಸಂರಕ್ಷಣೆಯ ಕಾನೂನುಗಳು ಇಷ್ಟಸಿದ್ಧಿಯನ್ನು ಮಾಡಿಕೊಡಲು ಅಸಮರ್ಥವಾದಾಗ ಈ ಕಾಯದೆಯ ಬಲದಿಂದ ಹಲವಾರು ರಾಜ್ಯಾಂಗ ಸರಕಾರಗಳೂ ಕೇಂದ್ರಸರಕಾರವೂ ಹಿಂದು ಮಹಾಸಭೆಯ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಇಲ್ಲವೆ ಕಮ್ಯೂನಿಸ್ಟ ಪಕ್ಷದ ಹಲವಾರು ಜನರನ್ನು, ಅವರು ರಾಷ್ಟ್ರವಿಘಾತಕ ಚಟುವಟಿಕೆಗಳಲ್ಲಿ ತೊಡಗಿ ರಾಷ್ಟ್ರದ ಸುಭದ್ರತೆಗೆ ವಿಘ್ನಗಳನ್ನುಂಟು ಮಾಡುತ್ತಿರುವರೆಂಬ ಕಾರಣದಿಂದ, ನಿರ್ಬಂಧಿಸಿಟ್ಟಿದ್ದರು. ಈ ನಿರ್ಬಂಧಿತ ಜನರ ಪೈಕಿ ಹಲವಾರು ಜನರು ಬೇರೆ ಬೇರೆ ಹಾಯಕೋರ್ಟುಗಳಲ್ಲಿ ತಮ್ಮ ಸ್ಥಾನಬದ್ಧತೆಯು ಹೊಸ ಭಾರತೀಯ ಪ್ರಜಾರಾಜ್ಯ ಘಟನೆಯೊಳಗೆ ಹೇಳಿರುವ ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ವಿಸಂಗತವಿದ್ದುದರಿಂದ, ಅದು ಕಾನೂನ ವಿರುದ್ಧವಿರುತ್ತದಾಗಿಯೂ, ತಮ್ಮ ಬಿಡುಗಡೆಯನ್ನು ಮಾಡಿಸಬೇಕಾಗಿಯೂ ಅರ್ಜಿಗಳನ್ನು ಮಾಡಿದ್ದರು. ಈ ಅರ್ಜಿಗಳ ವಿಚಾರದ ಕಾಲಕ್ಕೆ ಪ್ರತಿಬಂಧಾತ್ಮಕ ಸ್ಥಾನಬದ್ಧತೆಯ ಕಾನೂನಿನ ೧೩, ೧೪ ನೇ ಕಲಮುಗಳು ಪ್ರಜಾರಾಜ್ಯದ ಘಟನೆಯೊಳಗಿನ ೧೯, ೨೨ನೇ ಕಲಮುಗಳಲ್ಲಿ ಹೇಳಿರುವ ಮೂಲಭೂತ ಹಕ್ಕುಗಳಿಗೆ ವಿರೋಧವಿರುತ್ತವಾದ್ದರಿಂದ ಆ ಇಡಿಯ ಕಾನೂನೇ ಅಸಿಂಧು ಮತ್ತು ಅನಧಿಕೃತವಿರುತ್ತವೆಂಬ ವಾದವೂ ಮುಂದೆ ಬಂದಿತ್ತು. ಹಾಯಕೋರ್ಟುಗಳ ಕೆಲವು ನ್ಯಾಯಾಧೀಶರು ಈ ವಾದವನ್ನು ತಿರಸ್ಕರಿಸಿದರೆ ಬೇರೆ ಕೆಲವು ನ್ಯಾಯಾಧೀಶರು ಎತ್ತಿ ಹಿಡಿದಿದ್ದರು. ಈ ನಡುವೆ ಮದ್ರಾಸಿನ ಶ್ರೀ|| ಗೋಪಾಲನ್ ಎಂಬ ಕಮ್ಯೂನಿಸ್ಟ ಕಾರ್ಯಕರ್ತರು ನೇರವಾಗಿ ದಿಲ್ಲಿಯೊಳಗಿನ ವರಿಷ್ಠ ನ್ಯಾಯಾಲಯದಲ್ಲಿ ತಮ್ಮ ಅರ್ಜಿ ದಾಖಲಪಡಿಸಿ, ಸದರಿ ಕಾನೂನಿನನ್ವಯ ಆದ ತಮ್ಮ ಸ್ಥಾನಬದ್ಧತೆಯನ್ನು ರದ್ದುಗೊಳಿಸಿ ತಮ್ಮ ಬಿಡುಗಡೆ ಮಾಡಬೇಕಾಗಿ ಬಿನ್ನವಿಸಿದ್ದರು. ಕಳೆದ ತಿಂಗಳಲ್ಲಿ ಈ ಅರ್ಜಿಯ ವಿಚಾರ ಬಹಳ ದಿನಗಳ ವರೆಗೆ ನಡೆದಿತ್ತು. ಆ ಚರ್ಚೆಯಲ್ಲಿ ಸರಕಾರಿ ತರ್ಫಿನ ವಕೀಲರಾದ ಶ್ರೀ|| ಮೋತಿಲಾಲ ಸೆಟಲವಾಡ ಇವರಿಗೆ ನ್ಯಾಯಮೂರ್ತಿಗಳು ಪದೇ ಪದೇ ಅಡ್ಡ ಸವಾಲು ಮಾಡಿ, ಮೂಲಭೂತ ಹಕ್ಕುಗಳಿಗೆ ಸಂಬಂಧಪಟ್ಟ ಕಲಮುಗಳೊಳಗಿನ ಹಲವಾರು ಶಬ್ದಗಳ ಅರ್ಥ ವಿವರಣೆಯನ್ನು ಮಾಡಿಸಿ ಕೊಂಡಿದ್ದರು. ನ್ಯಾಯ ಮಂಡಳದ ಮುಂದಿರುವ ಪ್ರಶ್ನೆಯಲ್ಲಿ ಕೇಂದ್ರ ಕಾನೂನ

The Agricultural & Industrial Bank, Ltd.

"SHRI—NIVAS"
West Coast Road,
COONDAPOOR.

We beg to inform all our Shareholders, Well Wishers, and Customers, that the Registered Head Office of the Bank has been shifted from the rented "Laxmi-Nivas" Buildings to our newly constructed premises styled "SHRI-NIVAS" on 26th May 1950

A. MADHAVA PAI,
General Manager

Dated 25—5—1950

ಮಂಡಳದ ಕಾನೂನುಗಳನ್ನು ಮಾಡುವ ಅಧಿಕಾರದ ವ್ಯಾಪ್ತಿಯ ಹೊರಗೆ ಇದೆ [illegible] ಈ ಪ್ರಕರಣದಲ್ಲಿ [illegible] ನಡೆದ ಚರ್ಚೆಯನ್ನು ಕೇಳಿದ [illegible] ಈ ಪ್ರಕರಣದಲ್ಲಿ [illegible] [illegible] ಕೆಲವು [illegible] ಪ್ರಕರಣಗಳನ್ನು [illegible] ನ್ಯಾಯಮೂರ್ತಿಗಳು [illegible] ಹೀಗೆ [illegible] ನ್ಯಾಯಾಧೀಶರು [illegible] ಪ್ರತಿಪ್ರತ್ಯೇಕ [illegible] ಪ್ರತಿಗಳನ್ನು [illegible] ನ್ಯಾಯಾಧೀಶರು [illegible] ಹಕ್ಕುಗಳ [illegible] ವಿವರಿಸಿ [illegible] ಹಕ್ಕುಗಳ ವ್ಯಾಪ್ತಿಯನ್ನು ಮರ್ಯಾದೆಯ [illegible] ನಿರ್ಣಯಿಸುವಂತೆ ಎಲ್ಲ ನ್ಯಾಯಾಧೀಶರು [illegible] ಕಾನೂನಿನ [illegible] ಕಲಮು [illegible] ಅಧಿಕಾರಬಾಹ್ಯವಿರುತ್ತದೆಂದು ನಿರ್ಣಯಿಸಿರುತ್ತಾರೆ. ಆ ಕಲಮು ಕಾನೂನಿನಿಂದ ಬೇರ್ಪಡಿಸಲು ಬರುತ್ತಿರುವದರಿಂದ [illegible] ಅಸಿಂಧವಾಗದೆಂದೂ ಅವರು [illegible] [illegible] ನೇ ಕಲಮಿನ ಬಗ್ಗೆ ಮಾತ್ರ ನ್ಯಾಯಮೂರ್ತಿಗಳಲ್ಲಿ ಒಮ್ಮತವಾಗಿಲ್ಲ. ಅದು ಅಧಿಕೃತವಿರುತ್ತದೆಂದು ನ್ಯಾ|| ಮೂ ಕಾನಿಯಾ ಪ್ರಭೃತಿ ನಾಲ್ವರು ನಿರ್ಣಯ ಮಾಡಿರುತ್ತಾರೆ [illegible] ಅಸಿಂಧುವಿರುತ್ತದೆಂದೂ, ಅದನ್ನು ಕಾನೂನಿನಿಂದ ಬೇರ್ಪಡಿಸಲು ಬರುವಂತಿಲ್ಲವಾದ್ದರಿಂದ ಇಡೀ ಕಾನೂನು ಅಸಿಂಧವಾಗುತ್ತದೆಂದೂ ಉಳಿದ ಇಬ್ಬರು ನ್ಯಾಯಾಧೀಶರು— ನ್ಯಾ| ಮೂ| ಮಹಾಜನ ಮತ್ತು ಫಾಜಲ ಅಲಿ—ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಈ ರೀತಿ ನ್ಯಾಯಾಲಯದ ಬಹುಮತದಂತೆ ಪ್ರತಿಬಂಧಾತ್ಮಕ ಸ್ಥಾನಬದ್ಧತೆಯ ಕಾನೂನು ([illegible] ಕಲಮು ಬಿಟ್ಟು) ಸಿಂಧುವಿರುತ್ತದಾಗಿ ನಿಕಾಲೆಯಾಗಿರುವದರಿಂದ ಶ್ರೀ|| ಗೋಪಾಲನ್ ಇವರ ಅರ್ಜಿಯು ತಿರಸ್ಕರಿಸಲ್ಪಟ್ಟಿದೆ. ಈ ನಿರ್ಣಯವು ಇನ್ನಿತರ ನ್ಯಾಯಾಲಯಗಳಿಗೆ ಬಂಧನಕಾರಕವಿರುತ್ತದಾದ್ದರಿಂದ, ಸರಕಾರವು ಸ್ಥಾನಬದ್ಧತೆಯ ಕಾರಣಗಳನ್ನು [illegible] [illegible] ನ್ಯಾಯಾಲಯದಲ್ಲಿ [illegible] ತಿರಸ್ಕರಿಸಲ್ಪಡುವವು [illegible] [illegible] ಅರ್ಜಿಗಳ ವಿಚಾರ ಮಾತ್ರ [illegible].

* *

ಹಿಂದೀ ರಾಷ್ಟ್ರೀಯ [illegible] ಮುಂದಿನ ಅಧಿವೇಶನವನ್ನು ಇದೇ ಜೂನ ತಿಂಗಳಲ್ಲಿ ಬೆಂಗಳೂರಿನಲ್ಲಿ ಸೇರಿಸಬೇಕೆಂದು ಒಂದು ನಿರ್ಣಯವಾಗಿತ್ತಷ್ಟೇ! ಆದರೆ ಜೂನ ತಿಂಗಳಲ್ಲಿ ಬೆಂಗಳೂರಿನಲ್ಲಿ [illegible] ಕಾಂಗ್ರೆಸ [illegible] ಕಾಂಗ್ರೆಸಿಗರು ಕಾಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ತಿಳಿಸಿದರು. ಕಾಂಗ್ರೆಸ ಕಾರ್ಯಕಾರಿ ಮಂಡಳವು ಈಗ ನಾಸಿಕದಲ್ಲಿ ಈ ಅಧಿವೇಶನವನ್ನು ಬರುವ ಜುಲಾಯಿ ತಿಂಗಳಲ್ಲಿ [illegible] ಎಂದು ನಿಶ್ಚಯಿಸಿ ಅದರ ಸಿದ್ಧತೆಯ [illegible] ಪ್ರಾಂತಿಕ ಕಾಂಗ್ರೆಸ್ಸಿಗೆ [illegible] ತಿಂಗಳಲ್ಲಿ ನಾಸಿಕದ [illegible] [illegible] ತಿಂಗಳಲ್ಲಿ ಅಧಿವೇಶನವನ್ನು ಜರುಗಿಸತಕ್ಕದ್ದೆಂದು ನಿರ್ಣಯಿಸಿ, ಪ್ರಾಂತ [illegible] ಶ್ರೀ|| [illegible] ಇವರ ಅಧ್ಯಕ್ಷತೆಯಲ್ಲಿ, ಧನಸಂಗ್ರಹ ಮುಂತಾದ ತಯಾರಿಯ ಕೆಲಸ ನಿರ್ವಹಿಸಲಿಕ್ಕೆ ಒಂದು ತಾತ್ಪೂರ್ತಿಕ ಸಮಿತಿಯನ್ನು ನಿಯಮಿಸಿರುತ್ತಾರೆ. ಅಧಿವೇಶನದ ಖರ್ಚಿಗಾಗಿ [illegible] ಲಕ್ಷ ರೂ ಬೇಕಾಗುವವೆಂದು [illegible] ಸಮಿತಿಯವರು ಧನ-ಸಂಗ್ರಹ ಮಾಡಲು ಹೊರಟಿದ್ದಾರೆ. ನಾಸಿಕ ಜಿಲ್ಲೆಯಲ್ಲಿ ಈ ವರೆಗೆ [illegible] ಲಕ್ಷ ರೂ ಕೂಡಿವೆಯಂತೆ.

ಈ ಅಧಿವೇಶನದ ಅಧ್ಯಕ್ಷಸದಕ್ಕೆ ಮುಂಬಯಿಯ ಪ್ರಾಂತಾಧ್ಯಕ್ಷ ಮತ್ತು ಮುಂಬಯಿ ಮಹಾನಗರಿಯ ನಗರಾಧ್ಯಕ್ಷರಾಗಿರುವ ಶ್ರೀ|| ಸ. ಕಾ. ಪಾಟೀಲ ಇವರನ್ನು ಆರಿಸಬೇಕೆಂಬ ಸೂಚನೆಯೊಂದು ಮುಂಬಯಿಯ ಕಾಂಗ್ರೆಸ್ಸಿಗರಿಂದ ಮುಂದೆ ಬಂದಿದೆ-ಸರದಾರ ಪಟೇಲರು ಮೊನ್ನೆ ಮುಂಬಯಿಗೆ ಬಂದಾಗ ಅವರ ಮುಂದೆ [illegible] ಈ ಸೂಚನೆ ಇಡಲ್ಪಟ್ಟಿತ್ತೆಂದು ಸುದ್ದಿಯುಂಟು.

* *

ದಿಲ್ಲಿಯಲ್ಲಿ ಕಳೆದ ಏಪ್ರಿಲ ತಿಂಗಳ ಪ್ರಾರಂಭದಲ್ಲಿ [illegible] ಪಾಕಿಸ್ತಾನ ಮಂತ್ರಿಗಳು ಪೂರ್ವ ಪಾಕಿಸ್ತಾನದ ಸಂಬಂಧವಲ್ಲಿ ಮಾಡಿಕೊಂಡ ಒಪ್ಪಂದವನ್ನು ಭಾರತ ಸರಕಾರವು ಪ್ರಾಮಾಣಿಕತನದಿಂದ ಕಾರ್ಯಾಚರಣೆಯಲ್ಲಿ ತರಲು ಯತ್ನಿಸುತ್ತಿದೆ. ಪಾಕಿಸ್ತಾನದ ಅಧಿಕಾರಿಗಳು ಕೂಡ ಅದನ್ನು ಕಾರ್ಯಾಚರಣೆಯಲ್ಲಿ ತರುವ ಮಾತನ್ನಾಡುತ್ತಿದ್ದು, ಮತ್ತು ಆ ದಿಸೆಯಿಂದ ಕೆಲವೊಂದು ಕಾರ್ಯವನ್ನೂ ಮಾಡುತ್ತಿದ್ದಾರೆ. ಆದರೆ ಪೂರ್ವ ಬಂಗಾಲದಿಂದ ಓಡಿಬಂದ ಹಿಂದುಗಳಿಗೆ ಪಾಕಿಸ್ತಾನದಲ್ಲಿ ತಮಗೆ ಮರ್ಯಾದೆಯಿಂದ ಸುರಕ್ಷಿತತೆಯ [illegible] ಜೀವನ ಸಾಗಿಸಲು ಶಕ್ಯವಾದೀತೆಂಬ ಭಾವನೆ ಇನ್ನೂ ಹುಟ್ಟುವದಿಲ್ಲ! ಪಾಕಿಸ್ತಾನದ ಅಧಿಕಾರಿಗಳ [illegible] ಇದಕ್ಕೆ ಮುಖ್ಯ ಕಾರಣ. ಪಾಕಿಸ್ತಾನದ ಮುಖ್ಯ ಪ್ರಧಾನರು [illegible] ಈಗ [illegible] ಅಲ್ಲಿ ತಮ್ಮ ಪಾಕಿಸ್ತಾನದ [illegible] ಪ್ರಚಾರ ಮಾಡುತ್ತಿದ್ದಾರೆ. ಅಮೇರಿಕೆಯಲ್ಲಿ ದಿಲ್ಲಿ ಒಪ್ಪಂದದ ಬಗ್ಗೆ [illegible] ಅವರು ಆ ಒಪ್ಪಂದವನ್ನು ಪಾಕಿಸ್ತಾನ [illegible] ಯಿಂದ ಆಚರಣೆಯಲ್ಲಿ ತರಲು [illegible] ಹೇಳುತ್ತಿದ್ದಾರೆ [illegible] ಆದರೆ ಆ [illegible] ಕಾರಣವಾದ ಘಟನೆಗಳನ್ನು ಅವರು [illegible] ವಾಗಿ ಮರೆಮಾಡುತ್ತಿದ್ದಾರೆ. [illegible] ಪಾಕಿಸ್ತಾನದ ಅಲ್ಪಸಂಖ್ಯಾಕ [illegible] ಯಾವದೇ ಬಗೆಯ ಅತ್ಯಾಚಾರ [illegible] ಹೇಳುತ್ತಿದ್ದಾರೆ! ತಪ್ಪನ್ನು ಒಪ್ಪಿಕೊಂಡು ಅದಕ್ಕೆ ಪಶ್ಚಾತ್ತಾಪ ವ್ಯಕ್ತಗೊಳಿಸುವದರಲ್ಲೇ ನಿಜವಾದ ದೊಡ್ಡಸ್ತಿಕೆಯುಂಟೆಂಬ ತತ್ವ ಅವರಿಗೆ ಗೊತ್ತಿಲ್ಲವೇನೋ! ದಿಲ್ಲಿಯ ಒಪ್ಪಂದವು ಪೂರ್ವ ಪಾಕಿಸ್ತಾನಕ್ಕೇ ಸಂಬಂಧಿಸಿರುತ್ತಿದ್ದರೂ ಅದರೊಳಗೆ ವ್ಯಕ್ತವಾದ ಔದಾರ್ಯ, ಸೌಹಾರ್ದಗಳನ್ನು ಪಶ್ಚಿಮ ಪಾಕಿಸ್ತಾನದ ಸಂಬಂಧದಲ್ಲೂ ಆಚರಣೆಯಲ್ಲಿ ತರಬಹುದಾಗಿತ್ತು. ತಂದಿದ್ದರೆ ಹಿಂದುಸ್ಥಾನ-ಪಾಕಿಸ್ತಾನ ಸೌಹಾರ್ದವು ಬೆಳೆಯುತ್ತಿತ್ತು, ಇನ್ನಷ್ಟು ಕ್ಷೇಮವಾಗುತ್ತಿತ್ತು. ಆದರೆ ಪಾಕಿಸ್ತಾನ ಸರಕಾರವು ಮೊನ್ನೆಯಿಂದ ಪಶ್ಚಿಮ ಪಾಕಿಸ್ತಾನದ ಪೂರ್ವ ಗಡಿಯಾಗಿರುವ ಜೋಧಪುರ, ಪಂಜಾಬ ಗಡಿಗಳನ್ನು ಮುಚ್ಚಿ ಬಿಟ್ಟಿದೆ! ಹಿಂದ ಸ್ಥಾನದಿಂದ ಪಾಕಿಸ್ತಾನಕ್ಕೆ ಹೋಗಬಯಸುವ ಮುಸಲ್ಮಾನರು ಕೂಡ ಈ ಗಡಿ ದಾಟಿ ಪಾಕಿಸ್ತಾನಕ್ಕೆ ಬರಕೂಡದೆಂದು ಅದರ ಅಪ್ಪಣೆ! ಪಶ್ಚಿಮ ಪಾಕಿಸ್ತಾನದಲ್ಲಿ ಈಗ ಹಿಂದು-ಶೀಖರು ಇಲ್ಲವೆಂದರೂ ಸಲ್ಲುವದು. ಎಂದೋ ಅವರು ಹಿಂದುಸ್ಥಾನಕ್ಕೆ ಬಂದು ಬಿಟ್ಟಿದ್ದಾರೆ. ತಮ್ಮ ತಮ್ಮ ಸ್ವಸ್ಥಾನಗಳಿಗೆ ಮರಳುವಾ ಎಂದು ಅವರು ಈಗ ಹೊರಟರೆ, ಹಿಂದೀ-ಮುಸಲ್ಮಾನರಿಗೂ ಪ್ರವೇಶ ಕೊಡದ ಪಾಕಿಸ್ಥಾನ ಸರಕಾರವು ಆ ಜನರಿಗೆ ಎಂಥ ಸ್ವಾಗತವನ್ನೀಯುವದೆಂದು ಬೇರೆ ಹೇಳಬೇಕೇ? ಪಾಕಿಸ್ತಾನಿಗಳಲ್ಲಿ ಇನ್ನೂ ಹೃದಯಪರಿವರ್ತನೆಯಾ [illegible] ಗಿಲ್ಲೆಂದೂ ಧಾರಾಳವಾಗಿ ಹೇಳಬಹುದು.

ಸ್ಥಾನಿಕ ವೃತ್ತಾಂತ.

ಕುಮಠಾ— [illegible] ಮಳೆ [illegible] ಶನಿವಾರ, ರವಿವಾರ [illegible] [illegible] ಮಳೆಯಾಗಿರಬಹುದು.

ಇಂದಿನಿಂದ [illegible] ಶಾಲೆಗಳು ತೆರೆಯುವವು. [illegible] ಮುಂದಿನ [illegible] ಯುವವು.

ಕುಮಠಾ [illegible] ವಿದ್ಯಾವರ್ಧಕ ಸಂಘದ ವಾರ್ಷಿಕ ಮಹಾಸಭೆ [illegible] ರವಿವಾರ ಮೂರೂರ ಶ್ರೀ [illegible] ಲಿಂಗೇಶ್ವರ ದೇವಸ್ಥಾನದಲ್ಲಿ [illegible] ಶಾಸ್ತ್ರಿಯವರ ಅಧ್ಯಕ್ಷತೆಯೊಳಗೆ ಕೂಡಿತ್ತು. [illegible] ಕಾರ್ಯಕರ್ತರ ಆಯ್ಕೆ ವಗೈರೆ [illegible] ಕೆಲಸಗಳು ನಡೆದವು (೧) ಇಂಜಿನಿಯರಿಂಗ ಕಾಲೇಜಿಗೆ ಸೇರಬಯಸುವ ಪಾತ್ರ ವಿದ್ಯಾರ್ಥಿಗೆ [illegible] ವೈದ್ಯಕೀಯ ಕಾಲೇಜಿಗೆ ಹೋಗಬಯಸುವ ವಿದ್ಯಾರ್ಥಿಗೆ, [illegible] ಸಾಯನ್ಸ ಕಾಲೇಜಿಗೆ ಹೋಗಬಯಸುವ ವಿದ್ಯಾರ್ಥಿಗೆ [illegible] ಶಿಷ್ಯವೃತ್ತಿ ಕೊಡಲು [illegible] (೨) [illegible] ಶಿಷ್ಯವೃತ್ತಿ ಇಂಜಿನಿಯರಿಂಗ, ವೈದ್ಯಕೀಯ ವಿದ್ಯಾರ್ಥಿಗೆ [illegible] ಸಾಯನ್ಸ ಕಾಲೇಜನ್ನು ಸೇರಬಯಸುವ [illegible] ಶಿಷ್ಯವೃತ್ತಿ ಕೊಡಲು [illegible] ಶಿಷ್ಯವೃತ್ತಿ ಸಾಯನ್ಸ ವಿದ್ಯಾರ್ಥಿಗೆ [illegible] ಆ ಶಿಷ್ಯವೃತ್ತಿಯನ್ನು ಆರ್ಟ್ಸ ವಿದ್ಯಾರ್ಥಿಗೆ ಕೊಡಲಾಗುವದು), (೩) ಕನ್ನಡ ಟ್ರೇನಿಂಗ ಕಾಲೇಜಿನ [illegible] ವಿದ್ಯಾರ್ಥಿಗೆ ಶಿಷ್ಯವೃತ್ತಿ ಕೊಡಲು [illegible] (೪) ಇಂಗ್ಲಿಷ ಶಾಲೆಯ [illegible] ನೇ ವರೆಗಿನ ಇಯತ್ತೆಗಳಲ್ಲಿನ [illegible] ವಿದ್ಯಾರ್ಥಿಗೆ ಫೀ [illegible] ಅರ್ಧವನ್ನು [illegible] ಕೊಡಲು ರೂ [illegible] (೫) ವೈದಿಕ ವಿದ್ಯಾರ್ಥಿಯೊಬ್ಬನಿಗೆ ಶಿಷ್ಯವೃತ್ತಿ ಕೊಡಲು ರೂ [illegible]

ಗೋಕರ್ಣ ನರಮೇಧದ ಕಥೆ.

(೪ನೇ ಪಾನದಿಂದ ಮುಂದರಿಸಿದ್ದು.)

ಶ್ರೀ ಮಹಾಬಲೇಶ್ವರನ ಗುಡಿಯ ಮುಂದಿನ ದಂಡೆಗೆ ಬಂದು, ಕ್ಷೇತ್ರವಾಸಿಗಳ ಈ ಪಾಪ ಕಣ್ಣಾರೆ ನೋಡಿಕೊಂಡಾನಿವನ್ನು ಬಿಚ್ಚಿಡಲಾರೆ!" ಎಂದು ಘಂಟಾಘೋಷವಾಗಿ ಸಾರಿದನು! ತಾ. ೨೧ನೇಗೆ ಜಟಾಯು ತೀರ್ಥದಲ್ಲಿ ಶಾಂತಪ್ಪನ ಮಗು ಕಮಲಾಕರನ ಶವ ಸಿಕ್ಕಿತು. ಅದರ ಮರುದಿನ ಮಣಿಗಾರ ಕೊಳ್ಳದ ಶಿವಶಾಂತ ಗುರುಸ್ವಾಮಿಯ ಪ್ರೇತ ತೇಲಿ ಬಂತು! ಮತ್ತು ಗಂಗಾವಳಿಯ ಸಮುದ್ರದೊಳಗೆ ರುಂಡವಿಲ್ಲದ ಒಂದು ಮುಂಡ ತೇಲುತ್ತಿದ್ದುದು ಕಂಡು ಬಂತು! ಹೀಗೆ ೫ ಹೆಣಗಳು ಮಾತ್ರ ದೊರೆತವು. ಪ್ರೇಮಾ ಮತ್ತು ಕಮಲಾಕರ ಎಂಬಿಬ್ಬ ಹುಡುಗಿಯರ ಶವಗಳು ಮಾತ್ರ ಸಿಗಲಿಲ್ಲ. ಅವುಗಳ ಗತಿಯೇನಾಯಿತೆಂದು ದೇವರೇ ಬಲ್ಲನು. ತಾ ೧೦ನೇ ದಿನ ಸಂಜೆ ಗೋಕರ್ಣದ ದಂಡೆಯ ಮೇಲೆ ಬಂದು ಬಿದ್ದಿದ್ದ ಶವಗಳ ಹಾಗೂ ಗಂಗಾವಳಿಯಲ್ಲಿ ಸಿಕ್ಕ ಮುಂಡದ ಸೊಂಟಗಳಿಗೆ ಕಲ್ಲು-ಗುಂಡುಗಳು ಕಟ್ಟಲ್ಪಟ್ಟಿದ್ದವು. ಗೋ [illegible] ಆಸ್ಪತ್ರೆಯ ವೈದ್ಯರಾದ ಡಾ|| ಭಟ್ಟರ ಕಡೆಯಿಂದ ಎಲ್ಲ ಶವಗಳ ತಪಾಸಣೆ ಮಾಡಿಸಲಾಯಿತು. ಆದರೆ ಶವಗಳು ಆಗ ಬಹಳಷ್ಟು ಕೊಳೆತು ಹೋಗಿದ್ದವಾದ್ದರಿಂದ ಮರಣ-ಕಾರಣವನ್ನು ನಾವು ನಿಶ್ಚಿತವಾಗಿ ಹೇಳಲಾರೆವೆಂದು ಡಾ|| ಭಟ್ಟರು ಹೇಳಿದರು. ತಾ. ೨೦ನೇಗೆ ಗೋಕರ್ಣದ ದಂಡೆಯ ಮೇಲೆ ತೇಲಿಬಂದಿದ್ದ ಶವಗಳ ಹಾಗೂ ತಾ. ೨೨ಕ್ಕೆ ಗಂಗಾವಳಿಯಲ್ಲಿ ಸಿಕ್ಕಿದ ೧ ಮುಂಡದ ಸೊಂಟಗಳಿಗೆ ಕಲ್ಲು ಗುಂಡುಗಳು ಕಟ್ಟಲ್ಪಟ್ಟವು ಕಂಡು ಬಂದಿದ್ದವು. ಅವನ್ನು ಕಂಡಮೇಲಾದರೂ ಇದೊಂದು ಘೋರ ಕೊಲೆಯಾಗಿರಬೇಕೆಂದು ತಿಳಿದೇ ಕರ್ತವ್ಯ ಮಾಡಿದ್ದರು. ಅವರೂ ಗೋಕರ್ಣದೊಳಗೆ ಆಗ ಪೋಲೀಸರಾಗಿದ್ದ ರಾ|| ಪೇಟಕರ ಫೌಜದಾರರು ಅದೊಂದು ಆಕಸ್ಮಿಕ ಅಪಘಾತ (accident) ದಿಂದ ಸಂಭವಿಸಿದ ಅನಾಹುತವಾಗಿರಬೇಕೆಂದು ಸಿದ್ಧಾಂತ ಮಾಡಿ, ಆ ದೃಷ್ಟಿಯಿಂದ ವಿಚಾರಣೆ ನಡಿಸಿದರು. ತಾ. ೨೧ನೇಗೆ ಗೋಕರ್ಣಕ್ಕೆ ಬಂದು ತಲ್ಪಿದ ಇನ್ಸಪೆಕ್ಟರ ರಾ|| ಮುಕಶೆರ ಅವರು ಕೂಡ ಮೊದಮೊದಲು ಅದೇ ಸಿದ್ಧಾಂತವನ್ನು ಎತ್ತಿಹಿಡಿದಬೇಕು. ಲೋಕದಲ್ಲಿ ಗಲಭೆಯಾದ ಮೇಲೆ, ಶವಗಳು ಸಿಕ್ಕ ೩ ವಾರಗಳ ನಂತರ, ಅವರು ಕೊಲೆಪಾತಕದ ಸಿದ್ಧಾಂತಕ್ಕೆ ಬಂದರು! ಅದರೂ ತಾ. ೧೪-೪-೧೯೪೯ನೇಗೆ ರಾ|| ದಳವಿ ಇನ್ಸಪೆಕ್ಟರರು ಬಂದು ಆದೀ ಪ್ರಕರಣವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವವರೆಗೆ ಅವರು ಕೊಲೆಪಾತಕದ ದೃಷ್ಟಿಯಿಂದ ಯಾವ ಪುರಾವೆಯನ್ನೂ ಸಂಗ್ರಹಿಸಲಿಲ್ಲ! ನಡುವೆ ಸತ್ತವರ ಕರುಳುಗಳನ್ನು ಅವರು ಮುಂಬಯಿಯ ರಾಸಾಯನಿಕ ಪರೀಕ್ಷಕರ ಕಡೆಗೆ ಕಳಿಸಿಕೊಟ್ಟು ವಿಷ-ಪ್ರಯೋಗದ ಲಕ್ಷಣಗಳೇನಾದರೂ ಕಂಡುಬರುತ್ತವೋ ಎಂದು ಕೇಳಿದ್ದರು. ಅದಕ್ಕೆ ನಕಾರಾತ್ಮಕ ಉತ್ತರ ಬಂತು. ರಾ|| ಮುಕಶೆರರು ಮಾಡಿದ ಇನ್ನೊಂದು ಕೆಲಸವೆಂದರೆ ಧಾರವಾಡಕ್ಕೆ ಕಡೆಗೆ ಸಂಚಾರ ಮಾಡಿ ಸತ್ತ ಕೆಲವರ ಅಪ್ಪೇಶ್ವರ ಪತ್ರ ಮಾಡಿ, ಅವರಿಗೆ ಗೋಕರ್ಣಕ್ಕೆ ಕರೆದು, ಸತ್ತವರ ವೈನೋಲಿನ ಅಥರ ರಾದಿಗಳ ಗುರುತನ್ನು ಅವರ ಕಡೆಯಿಂದ ಹಿಡಿಸಿದ್ದು ಆಗಿರುತ್ತದೆ. ಆದರಿಂದ ಗುನ್ಹೆಯ ಬೆಳಕಿನ ಪೂರ್ಣ ಭಾರವು ಇನ್ಸಪೆಕ್ಟರ ರಾ|| ದಳವಿ ಮತ್ತು ಅವರ ಕರುಹಾಯ ಬಂದ ರಾ|| ಧವಳೇ ಇವರ ಮೇಲೆ ಬಿದ್ದಿತು. ರಾ|| ಧವಳೇ ಇವರಿಗೆ ತಾವು ಸಂಗ್ರಹಿಸಿದ ಪುರಾವೆ ಆರೋಪಿತರ ಅಪರಾಧಿತನವನ್ನು ನಿರ್ವಿವಾದವಾಗಿ ಸಿದ್ಧಗೊಳಿಸುವಷ್ಟು ಇಲ್ಲೆಂದು ಗೊತ್ತಿತ್ತು. ಆದರೆ ಸಿಕ್ಕ ಪುರಾವೆಯನ್ನು ನ್ಯಾಯಾಲಯದ ಮುಂದಿಟ್ಟು ಕೊನೆಯ ನಿರ್ಣಯ ಮಾಡುವ ಅಧಿಕಾರಿಯನ್ನು ಅದಕ್ಕೇ ಬಿಟ್ಟು ಬಿಡುವದು ತಮ್ಮ ಕರ್ತವ್ಯ ಮಾರ್ಗವೆಂದು ಭಾವಿಸಿ ಅವರು ಖಟ್ಲೆ ಮಾಡಿ ಕೊಟ್ಟರು. ಅದರ ಗತಿ ಏನಾಯಿತೆಂದು ಓದುಗರಿಗೆ ಗೊತ್ತೇ ಇದೆ.

ನ್ಯಾಯಾಧೀಶರು ಆರೋಪಿಗಳನ್ನು ಬಿಟ್ಟುಕೊಟ್ಟದ್ದೇಕೆ?

ಮೇಲೆ ಕೊಟ್ಟ ವಿವರಗಳ ಮೇಲಿಂದ ಸತ್ಯ ಲಿಂಗಾಯತರಿಗೆ ವಿಷದೋಷಿತ ಲಡ್ಡುಗಳನ್ನು ಹಂಚಿದಾಗ ಇಲ್ಲವೆ ಕೊಂಗಿದ ಹುಡುಗಿಯ ಕೊರಳು ಹಿಸುಕಿದಾಗ ಮತ್ತು ಸ್ವಾಮಿಯು ಓಡಿಬಂದಾಗ ಅವನನ್ನು ಹಿಡಿದಂಗ ಚಪ್ಪರದಲ್ಲಿ ಹಾಕಿದ್ದು ಒಂದೇ ಒಂದು ಸಾಕ್ಷಿ ಅಂದರೆ ಚಟ್ಟಿಯು ಅಪ್ರೂವ್ ಕೊಲೆಪಾತಕದ ಪ್ರತ್ಯಕ್ಷದರ್ಶಿ ಸಾಕ್ಷಿ ಚಟ್ಟಿಯೊಬ್ಬನೇ ಇರುತ್ತಾನೆ. ಅವನು ಆರೋಪಿಗಳ ನಡತೆಯನ್ನು ನಿಷೇಧಿಸದ್ದರಿಂದಲೂ, ಅವರ ಕೆಲಸದಲ್ಲಿ ಅತ್ತ ಬರದಿದ್ದುದರಿಂದಲೂ ಅವನು ಆರೋಪಿಗಳ ಸಹಕಾರಿ (accomplice) ಯಾಗುತ್ತಾನೆಂದೂ ಅವನ ಪುರಾವೆ ಬೇರೆ ಸಮರ್ಥಕ ಪುರಾವೆಯಿಲ್ಲದೆ ನಂಬಬಾರದದ್ದೆಂದೂ ನ್ಯಾಯಾಧೀಶ ಶ್ರೀ ಶ್ರೀಖಂಡೇಯವರು ತೀರ್ಮಾನಿಸಿರುತ್ತಾರೆ. ಚಟ್ಟಿಯು ಸಹಕಾರಿಯಾಗುವದಿಲ್ಲೆಂದು ಒಂದೂವೇಳೆ ಒಪ್ಪಿಕೊಂಡರೂ ಅವನು ಬೇರೆ ಬೇರೆ ಸ್ಥಾನಗಳಲ್ಲಿ ಪರಸ್ಪರ ವಿಸಂಗತ ವಿವರಗಳನ್ನು ಇತ್ತಿರುವದರಿಂದ ಅವನ ಸಾಕ್ಷಿಗೆ ಬೆಲೆ ಕೊಡಲು ಬರುವದಿಲ್ಲೆಂದೂ ಅವರು ನಿರ್ಣಯ ಕೊಟ್ಟಿದ್ದಾರೆ. ಹೀಗಾಗಿ ಕೊಲೆ ಪಾತಕದ ಆರೋಪ ಕುಸಿದು ಬಿತ್ತು. ಇನ್ನು ಸತ್ತವರ ಶವಗಳನ್ನು ಅಡಗಿಸುವ ಅಪರಾಧದಲ್ಲಿ ಚಟ್ಟಿ ಸಗ್ರೆರೂ ಆರೋಪಿತರು ಸಹಕಾರಿಗಳಾಗುತ್ತಾರೆ. ಆದರಿಂದ ಅವರ ಸಾಕ್ಷಿ ಅನ್ಯ ಪುರಾವೆಯ ಅಭಾವದಲ್ಲಿ ನಂಬಲಾಗುವದಿಲ್ಲೆಂದೂ ನ್ಯಾಯಾಧೀಶರ ಮತ. ಒಂದೊವೇಳೆ ಅವರು ಸಹಕಾರಿಗಳಾಗುವದಿಲ್ಲೆಂದು ಭಾವಿಸಿದರೂ ಅವರ ನಡತೆ ಅಸ್ವಾಭಾವಿಕ ಮತ್ತು ಅಸಂಭಾವ್ಯ ತೋರುತ್ತದೆಂದೂ, ಅವರ ಹೇಳಿಕೆಗಳು ವಿಸಂಗತ ವಿರುದ್ಧವೆಂದೂ ಅವರು ಅಭಿಪ್ರಾಯ ವ್ಯಕ್ತಗೊಳಿಸಿರುತ್ತಾರೆ. ೧೧ ಲಿಂಗಾಯತರು ಸತ್ತರೆಂಬುದು ನಿಜ. ಅವರ ಕೊಲೆಯಾಯಿತೆಂಬುದೂ ನಿಜ. ಕಾರಣ ಯಾರಾದರೂ ಅವರ ಕೊಲೆ ಮಾಡಿರಬೇಕೆಂಬುದೂ ನಂಬಬಹುದಾದ ಮಾತು. ಆದರೆ ಯಾರ್ಯಾರಿಗೆ ಆರೋಪಿಸಿದರು ನೇರವಾಗಿದ್ದರೆಂಬುದು ಪುರಾವೆಯಿಂದ ಸಿದ್ಧವಾಗಿಲ್ಲ. ಹೀಗೆ ನ್ಯಾಯಾಧೀಶರು ತೀರ್ಮಾನ ಮಾಡಿ, ಸಂಶಯ ಸರ್ಕಾರಿ ಸುಮಾರಿಗೆ ನಿರ್ದಯಕ್ತ ತಪ್ಪು ಒಪ್ಪಿಗೆಯನ್ನು ಕೊಟ್ಟು ಆರೂ ಆರೋಪಿತರು ನಿರ್ದೋಷಿಗಳೆಂದು ತೀರ್ಪು ಕೊಟ್ಟಿರುತ್ತಾರೆ.

ಕೆನರಾ ಕೊಲೇಜ ಕೆಂಟಿನ

ಕೊಲೇಜ ಜಾಗದಲ್ಲಿ ಕೆಂಟಿನ ಯಾನೆ ಚಹಾ ದುಕಾನ ಇಡುವ ಬಗ್ಗೆ ವಿಚಾರ ಮಾಡಲು ಕೊಲೇಜ ಸಮಿತಿಯ ಸಭೆ ತಾ. ೨-೬-೧೯೫೦ನೇ ಶುಕ್ರವಾರ ಸಂಜೆ ೪ ಘಂಟೆಗೆ ಕೊಲೇಜ ಲೈಬ್ರರಿ ಹೊಲಿನಲ್ಲಿ ಕೂಡ ಮಡಿದೆ. ಕೆಂಟಿನ ಯಾನೆ ಚಹಾದುಕಾನವನ್ನು ಚಾಲು (೧೯೫೦-೫೧) ಸಾಲಿನಲ್ಲಿ ನಡಿಸಲು ಅಪೇಕ್ಷಿಸುವವರು ಸದರಿ ವೇಳೆಗ ಹಾಜರಿರಬಹುದು.

L. S. Kamat,
ಕಾರ್ಯದರ್ಶಿ,
ಕೆನರಾ ಕೊಲೇಜ ಸಮಿತಿ.

ಕುಮಟಾ,
೨೬.೫.೧೯೫೦.

ಈ ವರ್ಷದ ಮಳೆಯ ಭವಿಷ್ಯ

ಪುಣೆಯ "ಕೇಸರಿ" ಪತ್ರದ ಹಲವಾರು ವರ್ಷ ಉಪ-ಸಂಪಾದಕರೂ ಹಲವಾರು ವರ್ಷ ಸಂಪಾದಕರೂ ಆಗಿದ್ದ ಶ್ರೀ|| ಜನಾರ್ದನ ಶಂಕರ ಕರಂದೀಕರ ಇವರು ಮಳೆಯು ಯೋಗಗಳು ಆಕಾಶಸ್ಥ ಗ್ರಹಗಳಯುತಿ—ಪ್ರತಿಯುತಿಗಳ ಮೇಲೆ ಅವಲಂಬಿಸಿರುತ್ತವೆಂದು ಸಿದ್ಧಾಂತ ಮಾಡಿ, ಆ ಯುತಿ-ಪ್ರತಿಯುತಿಗಳ ಆಧಾರದಿಂದ ಪ್ರತಿ ವರ್ಷ ಮಳೆಯ ಭವಿಷ್ಯವನ್ನು ವರ್ತಿಸಿ, ಅದನ್ನು "ಕೇಸರಿ" ಯಲ್ಲಿ ಪ್ರಕಟಿಸುತ್ತ ಬಂದಿರುತ್ತಾರೆ. ಈ ವರ್ಷದ ಭವಿಷ್ಯವನ್ನೂ ಅವರು ವರ್ತಿಸಿ ಪ್ರಕಟಿಸಿದ್ದಾರೆ ಅದರ ಸಾರಾಂಶ ಈ ಕೆಳಗೆ ಕೊಡಲಾಗಿದೆ.

ಚಾಲು ವಿಕೃತಿ ಸಂವತ್ಸರದ ಪ್ರಥಮ ರವಿ-ಬುಧ ಯುತಿ (ಯೋಗ=ಕೂಡುವಿಕೆ) ಚೈತ್ರದಲ್ಲಿ ಆಯಿತು. ಅದರ ಪರಿಣಾಮವಾಗಿ ಕೆಲವು ಕಡೆ ಅಲ್ಪ ಸ್ವಲ್ಪ ವೃಷ್ಟಿಯಾಗಿದೆ ೨ ನೇ ರವಿ-ಬುಧ ಯುತಿ ಇದೇ ಮೇ ತಾ ೧೫ಕ್ಕೆ ಆಯಿತು ಹವೆಯಲ್ಲಿ ಇತ್ತ ೧೦-೧೨ ದಿನಗಳಿಂದ ಆಗಿರುವ ಬದಲಾವಣೆಗೆ ಈ ಯುತಿಯೇ ಕಾರಣ ಯುತಿಯ ಪ್ರಭಾವದಿಂದ ಈ ತಿಂಗಳ ಕೊನೆಯಲ್ಲಿ ಹಲವು ಕಡೆ ಮಳೆಯಾಗುವದಾಗಿ ಶ್ರೀ|| ಕರಂದೀಕರರು ಮಾಡಿದ ಭವಿಷ್ಯ ನಿಜವಾಗುತ್ತಿದ್ದುದನ್ನು ನಾವು ನೋಡುತ್ತೇವೆ.

ಇನ್ನು ಮುಂದಿನ ರವಿ-ಬುಧ ಯುತಿ ಜುಲಾಯಿ ತಾ ೧೨ಕ್ಕ ಆಗುವದು. ಜೂನ ತಿಂಗಳಲ್ಲಿ ಬಲವತ್ತರ ಮಳೆಯಯೋಗಗಳಿಲ್ಲ ಆದರೂ ತಾ. ೧೨ಕ್ಕೆ ಶುಕ್ರ-ಚಂದ್ರರ ಯೋಗ ಮತ್ತು ತಾ. ೧೫ಕ್ಕೆ ಬುಧ-ಚಂದ್ರರ ಯೋಗ ಕೂಡಿಬರುವದರಿಂದ ಜೂನ ತಿಂಗಳ ಮಧ್ಯದಲ್ಲಿ ಸಾಧಾರಣ ಮಳೆಯಾಗುವದು.

ಜುಲಾಯಿ ತಿಂಗಳ ಪ್ರಾರಂಭಕ್ಕೆ ಬುಧನು ಅಸ್ತನಾಗುತ್ತಾನೆ ಆಗ ಮಳೆಗೆ ಕಳೆಯೇರುವದು. ಜುಲಾಯಿ ತಾ ೧೨ಕ್ಕೆ ಮಳೆಯ ಪ್ರಭಾವ ಹೆಚ್ಚಾಗುವದು

ಆಗೋಸ್ತ ತಿಂಗಳಲ್ಲಿ ಮಳೆಯ ಮಾನ ಕಡಿಮೆಯಾಗುವದು. ಆದರೆ ಸಪ್ಟಂಬರ ತಿಂಗಳಲ್ಲಿ ಅ ಕೊರತೆ ತುಂಬಿಬರುವದು ಆ ತಿಂಗಳಲ್ಲಿ ತಾ ೧೦ ಕ್ಕೆ ಬುಧಾಸ್ತವಿದೆ, ತಾ. ೧೮ಕ್ಕೆ ರವಿ-ಬುಧ ಯೋಗವಿದೆ ರವಿ-ಶನಿಗಳ ಯೋಗವೂ ಉಂಟು. ತಾ. ೨೪ ಮತ್ತು ೩೦ಕ್ಕೆ ಪುನಃ ಅನುಕ್ರಮವಾಗಿ ಬುಧ-ಶನಿ ಮತ್ತು ಶುಕ್ರ-ಶನಿಗಳಯೋಗಗಳು ಕೂಡಿಬರುವವು

ಅಕ್ಟೋಬರ ತಿಂಗಳಲ್ಲಿ ತಾ. ೧೦ಕ್ಕೆ ರವಿ-ನೆಪಚ್ಯೂನ ಯುತಿಯುಂಟು; ಅದೇ ಕೆಲವು ದಿನಗಳಲ್ಲಿ ನೆಪಚ್ಯೂನ ಗ್ರಹವು ಶುಕ್ರ ಮತ್ತು ಬುಧ ಗ್ರಹಗಳೊಡನೆ ಯುಕ್ತವಾಗುವದು. ಅದೇ ಸಮಯದಲ್ಲಿ ರವಿ ಮತ್ತು ಶುಕ್ರ ಗ್ರಹಗಳ ಅಸ್ತವಾಗುತ್ತದೆ. ಆದರಿಂದ ಅಕ್ಟೋಬರ ತಿಂಗಳಲ್ಲಿ ಸಹ ಒಳ್ಳೇ ಮಳೆಯಾಗುವದು ನವಂಬರದಲ್ಲಿ ವಿಶೇಷ ಮಳೆಯಾಗುವಂತಿಲ್ಲ

— ೧೯೪೩ ರ ನವಂಬರದಿಂದ ೧೯೪೭ ನೇ ಇಸವಿಯ ಮಾರ್ಚ ತನಕ ಭಾರತದ ಸರ್ವಾಧಿಪತಿಗಳಾಗಿದ್ದ ವೆವೆಲ್ಲ ದೊರೆಗಳು ಕಳೆದ ಬುಧವಾರ ಕ್ರಿಸ್ತವಾಸಿಗಳಾದರೆಂದು ನಮೂದಿಸಲು ವ್ಯಸನವಾಗುತ್ತದೆ. ಭಾರತದ ವಿಭಜನೆಗಾಗಿ ಅವರು ವಿರುದ್ಧರಿದ್ದರೆಂದೂ ವಿಭಜನೆಯ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಅವರು ಸರ್ವಾಧಿಪತ್ಯ ಬಿಟ್ಟರೆಂದೂ ಶ್ರೀ ಅಬುಲ ಕಲಂ ಆಝಾದರು ಹೇಳುತ್ತಾರೆ.

ಸ್ಥಾನಿಕ ಪ್ರತಿಷ್ಠಿತರು (೫ನೇ ಪ್ರಬಂಧದ ಮೇರೆಗೆ) (೬) ಇಂಗ್ಲಿಷ ಓದುವ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಪೂರೈಸಲು ರೂ. ೮೦. (೭) ಕನ್ನಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಪೂರೈಸಲು ರೂ. ೧೦೦ ಗೆ ಅಂತು ರೂ. ೮೩೪ ವಿನಿಯೋಗಿಸಲು ಸಮಿತಿಯು ಮಂಜೂರು ಕೊಟ್ಟಿದೆ. ಎಸ್. ಎಲ್. ಸಿ. ವಗೈರೆ ಪರೀಕ್ಷೆಗಳಲ್ಲಿ ಕೆಳವೊಂದು ವಿಷಯಗಳಲ್ಲಿ ಪಾಸು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡಲು ಕೆಲವೊಂದು ದಾನವು ಸಂಗ್ರಹ ಆಗಿ ಬಿದ್ದಿದೆ. ಮೇಲ್ಕಂಡ ವಿದ್ಯಾರ್ಥಿ ಯಾ ಧನಸಹಾಯ ಪಡೆಯಬೇಕೆನ್ನುವವರು ೫ ೧೯೪೯-೫೦ರೊಳಗಾಗಿ (ಮುದ್ರಿತ ಅರ್ಜಿಯ ಮಾದರಿಗಳನ್ನು ಪಡೆದು) ಸಂಘದ ಅಧ್ಯಕ್ಷರಿಗೆ ಅರ್ಜಿಗಳನ್ನು ಒಪ್ಪಿಸಬೇಕು, ಬಹುಮಾನಗಳಿಗಾಗಿ ಬರುವ ಅರ್ಜಿಗಳನ್ನು ತಾ. ೩೦-೪-೫೦ ರೊಳಗಾಗಿ ಮಾಡಬೇಕು, ಎಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಮುಂಬಯಿಯ ಜನತಾ ಪಕ್ಷವಾದಿ ಪತ್ರದ ಓರ್ವ ಪ್ರಮುಖ ಕಾರ್ಯಕರ್ತರಾಗಿರುವ ಶ್ರೀ ಅಶೋಕ ಮೆಹತಾ ಇವರು ಕಳೆದ ವಾರ ಇಲ್ಲಿಗೆ ಬಂದಿದ್ದರು. ಗು.ರು. ವಾರ ಸಂಜೆ ಶ್ಯಾಮಲ ಥಿಯೇಟರ ಬಯಲು ಪ್ರದೇಶದಲ್ಲಿ ಅವರದೊಂದು ಜಾಹೀರ ವ್ಯಾಖ್ಯಾನವಾಯಿತು. ಅವರು ತಮ್ಮ ಭಾಷಣದಲ್ಲಿ, ದೇಶದೊಳಗೆ ಈಗ ೬ ವರ್ಷಗಳಿಂದ ಕಾಂಗ್ರೆಸ್ಸಿಗರು ರಾಜ್ಯಮಾಡುತ್ತಿದ್ದರೂ, ಅವರು ಜನಸ್ಥರಿಗೆ ಸುಖವಾಗಿಲ್ಲೆಂದೂ, ಕಾಂಗ್ರೆಸ್ಸು ಕೊಟ್ಟ ವಚನಗಳನ್ನು ಪೂರೈಸಲು ಇಲ್ಲವೆ ಹುಟ್ಟಿಸಿದ ಆಶೆಗಳನ್ನು ಪೂರ್ಣಗೊಳಿಸಲು ಅದು ಶಕ್ತವಾಗಿಲ್ಲೆಂದೂ ಪ್ರತಿಪಾದಿಸಿ, ಮುಂಬರುವ ಚುನಾವಣೆಗಳಲ್ಲಿ ಸಮಾಜವಾದಿ ಲೋಕಸೇವಕರನ್ನೇ ಜನರು ಆರಿಸಿ ಕೊಡಬೇಕೆಂದು ಬೋಧಿಸಿದರು.

ದ. ಭಾ. ಹಿಂದೀ ಪ್ರಚಾರ ಸಂಘದವರು ಇದೇ ಬರುವ ಸೆಪ್ಟಂಬರ ತಿಂಗಳಲ್ಲಾಗುವ ಹಿಂದೀ ಪರೀಕ್ಷೆಗಳ ಕಾರ್ಯಕ್ಕೆ ಕುಮಟೆಯು ಕೇಂದ್ರದಲ್ಲಿ ಪ್ರವೇಶಿಕಾ ಮತ್ತು ವಿಶಾರದ ಪರೀಕ್ಷೆಗಳನ್ನು ಕೊಡುವವರಿಗೆ ಒಪ್ಪಿಗೆಯನ್ನಿತ್ತಿದ್ದಾರೆಂದು ತಿಳಿಯುತ್ತದೆ. ಹಿಂದೀ ವಿದ್ಯಾರ್ಥಿಗಳು ಅದರ ಲಾಭ ಪಡೆಯಬಹುದು.

ಗಿಬ್ಬ ಹಾಯಸ್ಕೂಲಿನಿಂದ ಈ ವರ್ಷ ಎಸ್. ಎಲ್. ಸಿ. ಪರೀಕ್ಷೆಗೆ ೧೧೩ ಮಂದಿ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೪೮ ಮಂದಿ (೧೦೦ಕ್ಕೆ ೪೨ ಜನರಷ್ಟು) ಉತ್ತೀರ್ಣರಾಗಿದ್ದಾರೆ. (ಇಡೀ ಪ್ರಾಂತದಲ್ಲಿ ೧೦೦ಕ್ಕೆ ೩೮.೯೬ ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ.) ಯಶಸ್ವಿ ವಿದ್ಯಾರ್ಥಿಗಳಲ್ಲಿ ಕು॥ ಸಿ. ವ್ಹಿ. ಘಾಟುವೇ ೫೦೭, ಕು॥ ಎಸ್. ಜಿ. ಪ್ರಭು ೪೮೪, ಕು॥ ವಿ. ಆರ್. ಮಾಟಿಬಂದರ ೪೭೯, ಕು॥ ಎ. ಎಸ್. ಜಾನಭಾಗ ೪೬೩, ಕು॥ ಪಿ. ಕೆ. ಭಾಟಿಯಾ ೪೪೯, ಕು॥ ಎಸ್. ವಿ. ಜಾನಭಾಗ ೪೪೧, ಕು॥ ಎಸ್. ಎಸ್. ಜಾನಭಾಗ ೪೨೭ ಮತ್ತು ಎನ್. ವಿ. ಪೈ ೪೩೩ ಗುಣಗಳನ್ನು ದೊರಕಿಸಿ ೧ನೇ ವರ್ಗದಲ್ಲಿ ಬಂದಿದ್ದಾರೆ. ಈ ಶಾಲೆಯ ಮುಸಲ್ಮಾನರ ಕುಳಿತ ಹೊರಗಿನ ೨೬ ವಿದ್ಯಾರ್ಥಿಗಳಲ್ಲಿ ೭ ಮಂದಿ ಯಶಸ್ವಿಯಾಗಿರುವರು.

ಕಳೆದ ಕೊನೆಯಿಂದ ಈ ವರ್ಷ ಇಂಟರ-ಆರ್ಟ್ಸ ಪರೀಕ್ಷೆಗೆ ಕುಳಿತ ೪ ಮಂದಿಯಲ್ಲಿ ಕು॥ ಸಿ. ಕೆ. ಭಾಟಿಯಾ ಇವನೊಬ್ಬನೇ ಉತ್ತೀರ್ಣನಾಗಿದ್ದಾನೆ.

ಈ ಜಿಲ್ಲೆಯ ಪ್ರಾಥಮಿಕ-ಮಾಧ್ಯಮಿಕ ಮುದ್ರಣದ ಕೆಲಸವನ್ನು ಈ ಜಿಲ್ಲೆಯವರಿಗೇ ಕೊಡದೆ ಸರಕಾರವು ಧಾರವಾಡದ ಮುದ್ರಣಾಲಯಗಳಿಗೆ ಕೊಟ್ಟ ಸಂಬಂಧದಲ್ಲಿ ತಾ. ೧೬-೩-೫೦ರ [" ವೃತ್ತ " ದಲ್ಲಿ ಬಂದ ಟೀಕೆಯನ್ನು ಅನುಲಕ್ಷಿಸಿ ಜಿಲ್ಹಾಧಿಪರು ಬರೆಯುತ್ತಾರೆ:— "ಈ ಜಿಲ್ಲೆಯ ಮುದ್ರಣಾಲಯಗಳ ಒಡೆಯರಿಂದ ಮುದ್ರಣದ ದರಗಳನ್ನು ತರಿಸಲಾಗಿತ್ತು. ಟೆಂಡರಗಳನ್ನು ಬರಮಾಡಿಕೊಂಡಿದ್ದಿಲ್ಲ. ಮುಂದೆ ಸರಕಾರವು ಇಡೀ ಮುಂಬಯಿ ರಾಜ್ಯಾಂಗದೊಳಗಿನ ಮುದ್ರಣಾಲಯಗಳಿಂದ ಟೆಂಡರಗಳನ್ನು ಕರೆದಿತ್ತು. ಆಗ ಈ ಜಿಲ್ಲೆಯಿಂದ ಯಾರೂ ಟೆಂಡರ ಕೊಡಲಿಲ್ಲ. ಆದರಿಂದ ಈ ಜಿಲ್ಲೆಯ ಪ್ರಾಥಮಿಕ-ಮಾಧ್ಯಮಿಕಗಳ ಮುದ್ರಣದ ಕೆಲಸವನ್ನು ಸರಕಾರವು ಧಾರವಾಡದ ಮುದ್ರಣಾಲಯಗಳ ಒಡೆಯರ ಸಂಘಕ್ಕೆ ಒಪ್ಪಿಸಿತು. ಇತ್ಯಾದಿ. [ದರಗಳನ್ನು ಕೇಳಿ ಕೊಳ್ಳುವುದಕ್ಕೂ ಟೆಂಡರ ಕೇಳುವುದಕ್ಕೂ ವ್ಯತ್ಯಾಸವೇನೆಂಬುದನ್ನು ಜಿಲ್ಹಾಧಿಪರು ತಿಳಿಸಬೇಕಿತ್ತು. ದರಗಳನ್ನು ತರಿಸಿ ಅವರಲ್ಲಿ ಹೆಚ್ಚು ಕಡಿಮೆ ನೋಡಲಿಲ್ಲ! ಸರಕಾರದವರು ಇಡೀ ರಾಜ್ಯಾಂಗದೊಳಗಿನ ಮುದ್ರಣಾಲಯಗಳಿಂದ ಟೆಂಡರಗಳನ್ನು ಬೇಡಿದ್ದೊಂದು ದೊಡ್ಡ ಸುದ್ದಿ ! ಎಂದು ಮತ್ತು ಯಾವ ರೀತಿಯಿಂದ ಸರಕಾರವು ಟೆಂಡರಗಳನ್ನು ಬೇಡಿತ್ತೆಂಬುದನ್ನು ಜಿಲ್ಹಾಧಿಪರು ಸ್ಪಷ್ಟಪಡಿಸಬೇಕು. ಸರಕಾರದವರು ಮುದ್ರಣದ ಕೆಲಸವನ್ನು ಒಪ್ಪಿಸಿದ್ದು ಧಾರವಾಡದವರಿಗೆ, ಹುಬ್ಬಳ್ಳಿಯವರಿಗಲ್ಲ ! ಹುಬ್ಬಳ್ಳಿಯವರಿಗೆ ಏನೊಂದೂ ಇಲ್ಲ. ಇದರ ಎಲ್ಲ ಮುದ್ರಣದ ಕೆಲಸವನ್ನು ಧಾರವಾಡದವರಿಗೇ ಒಪ್ಪಿಸಿದ ಬಗ್ಗೆ "ಸಂಯುಕ್ತ ಕರ್ನಾಟಕ"ದ ಸಂಪಾದಕ ಶ್ರೀ ರೋಣದರೇಯವರು ತಮ್ಮ ಪತ್ರಿಕೆಯಲ್ಲಿ ಮಾಡಿದ ಟೀಕೆಯು ಜಿಲ್ಹಾಧಿಪರಿಗೆ ಗೊತ್ತಿಲ್ಲವೇನೋ! ಮುಂಬಯಿಯ ಸರಕಾರೀ ಕಚೇರಿಯೊಳಗಿನ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಧಾರವಾಡದವರಿಗೆ ಅನುಗ್ರಹ ತೋರಿಸುತ್ತಾರೆಂದು ಶ್ರೀ ರೋಣದರೇಯವರು ಆರೋಪ ಮಾಡಿದ್ದಾರೆ. ಆ ಅಧಿಕಾರಿಗಳ ಕೃಷ್ಣ-ಕೃತ್ಯಗಳಿಗೆ "ಸರ್ಟಿಫಿಕೇಟ" ಕೊಡಲು ನಮ್ಮ ಜಿಲ್ಹಾಧಿಪರು ಹಾಗೆ ಮುಂದೆ ಬರಬೇಕು ? —ಸಂಪಾದಕ.]

ಕಾರವಾರ— (ತಾ. ೨೨-೩-೫೦) ಈ ತಿಂಗಳಲ್ಲಿ ಇಲ್ಲಿ ನಡೆಸಬೇಕೆಂದು ಮಾಡಿದ ಮಾತ್ತು ಕೇಳವೊಂದು ಅನಿವಾರ್ಯಗಳ ದೆಸೆಯಿಂದ ಮುಂದಿನ ತಿಂಗಳವರೆಗೆ ಮುಂದೂಡಲ್ಪಟ್ಟಿರುವ ನೇತ್ರ-ಚಿಕಿತ್ಸಾ ಶಿಬಿರದ ಖರ್ಚಿಗೆ ನಿಧಿಯನ್ನು ಎತ್ತುವ ಮಾಡುವದಕ್ಕಾಗಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ನಿಧಿ-ಸಂಗ್ರಹ ಮಂಡಳಿಗಳು ನೇಮಿಸಲ್ಪಟ್ಟಿವೆಯಾದ್ದರೂ ಅನ್ಯಕಾರಣಗಳಿಂದ ತಾಲೂಕುಗಳಲ್ಲಿ ಎಷ್ಟು ನಿಧಿಯು ಸಂಗ್ರಹವಾಗಿದೆಯೆಂಬುದು ತಿಳಿದಿಲ್ಲ. ಇಲ್ಲಿಯ ಮಂಡಳಿಯು ತಾ. ೫-೩-೫೦ರ ವರೆಗೆ ರೂ. ೪೧೬ ಸಂಗ್ರಹಿಸಿದೆ. ಶಿಬಿರದ ವೆಚ್ಚ ಬಹಳ ಬರುವದು. ಅದ್ದರಿಂದ ಜಿಲ್ಲೆಯ ಉದಾರ ಮನಸ್ಕರು ಕೂಡಲೇ ಈ ನಿಧಿಗೆ ವಂತಿಗೆಗಳನ್ನು ಕೊಟ್ಟು ಬಡವರ ಸೇವೆ ಮಾಡಿದ ಶ್ರೇಯ ಪಡೆಯಬೇಕೆಂದು ಜಿಲ್ಹಾಧಿಪರ ಕಚೇರಿಯವರ ವಿನಂತಿ.

ಪುಣೆ ಮತ್ತು ಹುಬ್ಬಳ್ಳಿಯಲ್ಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿ-ನಿಲಯಗಳಲ್ಲಿ ಕೆಲವು ಮಂದಿ ಕೊಳೆಯ ವಿದ್ಯಾರ್ಥಿಗಳಿಗೆ ಸೇರಿಸಿಕೊಳ್ಳುವದುಂಟು. ಈ ನಿಲಯಗಳಲ್ಲಿ ಅಭ್ಯಾಸ ಪಡೆಯಬೇಕೆನ್ನುವ ವಿದ್ಯಾರ್ಥಿಗಳು ತಾ. ೧೦-೬-೫೦ರೊಳಗಾಗಿ ಪುಣೆಯ ಇಲ್ಲವೆ ಹುಬ್ಬಳ್ಳಿಯ ಹಿಂದುಳಿದ ವರ್ಗಗಳ ವಿದ್ಯಾರ್ಥಿ-ನಿಲಯದ

ಸೂಪರಿಂಟೆಂಡೆಂಟರಿಗೆ ಅರ್ಜಿ ಮಾಡಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದವರು ಕಾರವಾರದೊಳಗಿನ "ಬಹಿಷ್ಕೃತ ಕ್ಲಾಸ ವೆಲ್ಫೇರ ಆಫೀಸರ"ರಿಂದ ಪಡೆಕೊಳ್ಳಬೇಕಾಗಿ ಸೂಚನೆಯಿದೆ.

೧೯೪೯—೫೦ನೇ ವರ್ಷದಲ್ಲಿ ಇಲ್ಲಿಯ ಟ್ರೇನಿಂಗ ಕಾಲೇಜಿನಲ್ಲಿ ಕಲಿಯುತ್ತಿದ್ದ ಶಿಕ್ಷಕರು ತಾವು ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ನೀಡಿದ್ದ ಬಟ್ಟೆಯನ್ನು ತಾ. ೩೦-೬-೧೯೫೦ರೊಳಗಾಗಿ ರಿಯಾಯತಿಯ ದರದಿಂದ ಕೊಂಡುಕೊಳ್ಳಬಹುದಾಗಿ ನಮ್ಮ ಕಾಲೇಜಿನ ಆಚಾರ್ಯರು ತಿಳಿಸುತ್ತಾರೆ.

ಪತ್ರಿಕಾಗಳ ಮೇಲಿನ ನಿರ್ಬಂಧಗಳನ್ನು ಈಗ ಸರಕಾರದವರು ಸಡಲಿಸಿದ್ದಾರೆ. ಬೆಳಗಾಂವ, ವಿಜಾಪುರ, ಧಾರವಾಡ ವಗೈರೆ ಪತ್ರಿಕಾಗಳ ಸಮೃದ್ಧಿಯುಳ್ಳ ಜಿಲ್ಹೆಗಳಿಂದ, ಆ ಆ ಜಿಲ್ಲೆಗಳ ಜಿಲ್ಹಾಧಿಪರ ಅಪ್ಪಣೆ-ಚೀಟಿ ಪಡೆದುಕೊಂಡು ಬೇಕಾದವರು ಪತ್ರಿಕಾಗಳು ತರಬಹುದು. ದಕ್ಷಿಣ ಭಾಗದಲ್ಲಿ ಪತ್ರಿಕಾಗಳ ಸರಕಾರ-ನಿರ್ದಿಷ್ಟ ರೊಕ್ಕ ದರ ಬಂಗಾರಿ ಮಣಕ್ಕೆ ರೂ. ೧೦॥ ಇರುತ್ತದೆ. ಸರಕಾರದವರು ಗುಜರಾಥದಲ್ಲಿ ಕೆಲವು ಪತ್ರಿಕಾಗಳನ್ನು ಖರೀದಿಸಿಟ್ಟಿದ್ದಾರೆ. ಅದನ್ನು ಪತ್ರಿಕಾಗಳು ಮಾರಲಿಚ್ಛಿಸುವ ಸಹಕಾರಿ ಸಂಘಗಳಿಗೆ ಕೊಡಲಾಗುತ್ತಿದೆ. ಸಮೃದ್ಧಿಯುಳ್ಳ ಜಿಲ್ಹೆಗಳೊಳಗಿನ ಖಾಸಗಿ ಸಂಗ್ರಹಕಾರರಿಂದ ಪತ್ರಿಕಾಗಳು ಗಳಿಸಿ ಬಯಸುವ ಸಂಘಗಳು ತಮ್ಮ ಜಿಲ್ಹಾ ಮೆಜಿಸ್ಟ್ರೇಟರ ಮುಖಾಂತರ ಸರಕಾರಕ್ಕೆ ಅರ್ಜಿ ಮಾಡಿದಲ್ಲಿ, ಅಂಥ ಪತ್ರಿಕಾಗಳು ಸಹ ರೂ. ೧೦ಕ್ಕೆ ಒಂದು ಬಂ. ಮಣದಂತೆ ಸಿಗಬಲ್ಲವು.

ಕಾರವಾರದಲ್ಲಿ ನಾಯಿಗಳ ಕಾಟ ಬಹಳವಾಗಿದೆಂದು ಓದುಗರು ದೂರುತ್ತಾರೆ. ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಇತ್ತ ಗಮನವೀಯಬೇಕು.

ಹಳಿಯಾಳ— ಹಳಿಯಾಳದಲ್ಲಿ ಸರಕಾರಿ ಭತ್ತ ಕೆಟ್ಟಹೋದ ಸ್ಥಳದಲ್ಲಿ ಬಿದ್ದುಕೊಂಡಿದೆ ಎಂದು ಮುಂಚೆ ತಾ. ೧೬-೪-೫೦ರ "ವೃತ್ತ" ದಲ್ಲಿ ಬಂದ ಸುದ್ದಿ ನಿರಾಧಾರವಿರುವದಾಗಿ ಜಿಲ್ಹಾಧಿಪರು ತಿಳಿಸುತ್ತಾರೆ ["ವೃತ್ತ" ದ ಪ್ರತಿನಿಧಿಗಳು ತೆರವಾದ ಬೈಲು ಸ್ಥಳದಲ್ಲಿ ಬಿದ್ದ ಭತ್ತದ ಚೀಲಗಳನ್ನು ಸ್ವತಃ ನೋಡಿ ನಮಗೆ ವರದಿ ಕಳಿಸಿದ್ದುಂಟು. ಪ್ರತಿನಿಧಿಗಳು ನೋಡಿದ ಭತ್ತ ಸರಕಾರದ್ದು ಇದ್ದಿಲ್ಲೆಂದು ಜಿಲ್ಹಾಧಿಪರ ಅಂಬೋಣವೇ?

— ಸಂಪಾದಕ.

ಭಕ್ತರಲ್ಲಿ ವಿಜ್ಞಾಪನೆ.

ಉಂಚಗೇರಿ ಶ್ರೀ ಗಣಪತಿ ದೇವಸ್ಥಾನ

ಜೀರ್ಣೋದ್ಧಾರ ಸಮಿತಿಯ ಕಡೆಯಿಂದ ಸಮಸ್ತ ಭಕ್ತರಲ್ಲಿ ವಿನಂತಿ:—

ಸೋಮವಾರ ತಾ. ೨೭-೩-೫೦ನೇಗೆ ಜೊನ್ನಾವ ಕಾಲದಲ್ಲಿ ಉಂಚಗೇರಿಯಲ್ಲಿ ಶ್ರೀ ಗಣಪತಿ ಮೂರ್ತಿ ಪ್ರತಿಷ್ಠೆ ಮಾಡ ಬೇಕೆಂದು ನಿಶ್ಚಯಿಸಿತ್ತು. ಆದರೆ ದಾವಳ ಪ್ರಾರಂಭವಾದ್ದರಿಂದ ಮತ್ತು ಇನ್ನಿತರ ಅನಾನುಕೂಲತೆಗಳೂ ಉಂಟಾಗಿರುವದರಿಂದ ಸದರ ದೇವ ಕಾರ್ಯವನ್ನು ಮುಂದೆ ಅನುಕೂಲವಾದಾಗ ನೆರವೇರಿಸಬೇಕೆಂದು ನಿಶ್ಚಯಿಸಿದೆ. ಆ ದಿವಸವನ್ನು ನಿಶ್ಚಯಿಸಿದ ಬಳಿಕ ತಿಳಿಸಲಾಗುವದು.

ಉಂಚಗೇರಿ, ತಾ. ೨೬-೫-೧೯೫೦

ಸುಬ್ರಾಯ ಶಿವರಾಮ ಶಾಸ್ತ್ರಿ ಉಂಚಗೇರಿ

ಕಾರ್ಯದರ್ಶಿ

ಇದನ್ನು ಹಾರಂಬೋರಂಗ ಕೃಷ್ಣ ಜಂತಭಾಗ (ಸಂಪಾದಕ) ಇವರು ಕಾವ.ಪೆಂಪ.ಸ್ಟೇ.ನ ತಗ್ಗು "ಸ್ಟಾರ ಆಫ್ ಕರ್ನಾಟಕ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ಗೋಕರ್ಣದೊಳಗಿನ ನರಮೇಧದ ವಿಸ್ತೃತ ವೃತ್ತಾಂತ.

೧೯೪೯ನೇ ಇಸವಿಯ ಮಾರ್ಚ ತಿಂಗಳಲ್ಲಿ ಶ್ರೀ ಕ್ಷೇತ್ರ ಗೋಕರ್ಣದೊಳಗೆ ೧೧ ಮಂದಿ ಲಿಂಗಾಯತ ಸ್ತ್ರೀ-ಪುರುಷ-ಮಕ್ಕಳ ಕೊಲೆಯಾಯಿತು. ಈ ಭಯಾನಕ ಕೊಲೆಯಿಂದ ಜಿಲ್ಲೆಯವರಿಗೆಲ್ಲ ಗೋಕರ್ಣ ಕ್ಷೇತ್ರದ ಬಗ್ಗೆ ಅದರೊಳಗಿನ ಕ್ಷೇತ್ರ-ಪುರೋಹಿತರ ಬಗ್ಗೆ ತಿರಸ್ಕಾರ-ತಿರಸ್ಕಾರಗಳುಂಟಾದವು. ಗೋಕರ್ಣದ ವೈದಿಕರನ್ನು ಜನರು ತುಚ್ಛತೆಯಿಂದ ನೋಡಹತ್ತಿದರು. ಆದರೆ ಜಿಲ್ಲೆಯ ಜನರಿಗೆ ಈ ಭಯಾನಕ ಕೊಲೆ ಹೇಗಾಯಿತು, ಯಾಕಾಯಿತು ಎಂಬುದರ ವಿವರಗಳಾಗಲಿ ಕಥೆಯಾಗಲಿ ಇನ್ನೂ ಸಾಧಾರಣವಾಗಿ ತಿಳಿದಿರುವದಿಲ್ಲ. ಈ ಘೋರ ನರಮೇಧದ ಸಂಬಂಧದಲ್ಲಿ ಸರಕಾರದವರು ೧ ಶಂಕರ ಸುಬ್ಬಾ ಭಟ್ಟ ಗೋಟಿ, ೨ ಮಹಾದೇವ ಅನಂತ ಭಟ್ಟ ಅಡಿ, ೩ ಪರಮೇಶ್ವರ ಶ್ರೀನಿವಾಸ ಭಟ್ಟ ಧಾರೇಶ್ವರ, ೪ ಗಣಪತಿ ಸುಬ್ರಾಯ ಭಟ್ಟ, ೫ ಲಕ್ಷ್ಮೀನಾರಾಯಣ ಸುಬ್ರಾಯ ಭಟ್ಟ ಮತ್ತು ೬ ಸುಬ್ರಾಯ ಶೇಷಭಟ್ಟ ಅಡಿ ಮುಳೇ ಈ ೬ ಜನರ ಮೇಲೆ ಖಟ್ಲೆ ಮಾಡಿ ಕೊಟ್ಟಿದ್ದರು. ಆರೂ ಮಂದಿ ಆರೋಪಿತರು ಯಲ್ಲಪ್ಪಾ ಎಂಬ ವರನ ಸಹಾಯ-ಸಹಕಾರದಿಂದ ಲಿಂಗಾಯತರ ಕೊಲೆ ಮಾಡಿದರೆಂದೂ ೧, ೩, ೫, ೬ ನೇ ಆರೋಪಿತರು ಮುಂದೆ ಕೊಲೆ ಪಾತಕದ ಅಪರಾಧವನ್ನು ಅಡಗಿಸುವದಕ್ಕಾಗಿ ಕೊಲೆ ಪಾತಕದಿಂದ ಸತ್ತ ಲಿಂಗಾಯತ ಸ್ತ್ರೀ-ಪುರುಷರ ಹೆಣಗಳನ್ನು ಸದ್ದಿಲ್ಲದೆ ಸಮುದ್ರಪಾಲು ಮಾಡಿಸಿದರೆಂದೂ ಪೋಲೀಸರು ಆರೋಪ ಹೊರಿಸಿ ಖಟ್ಲೆ ಮಾಡಿಕೊಟ್ಟಿದ್ದರು. ಈ ಖಟ್ಲೆಯ ಪ್ರಾಥಮಿಕ ವಿಚಾರ ಕಾರವಾರದ ನಗರ-ಪ್ರಥಮವರ್ಗ ನ್ಯಾಯಾಲಯದಲ್ಲಿ ನಡೆಯಿತು. ಅವರು ಪೋಲೀಸರ ಆಪಾದನೆಯಂತೆ ಆರೋಪಿತರ ವಿರುದ್ಧ ಆರೋಪಗಳನ್ನಿಟ್ಟು, ವಿಚಾರಣೆಗಾಗಿ ಅವರನ್ನು ಕಾರವಾರದ ಜಿಲ್ಹಾ ನ್ಯಾಯಾಧೀಶರ ಮುಂದೆ ಕಳಿಸಿಕೊಟ್ಟಿದ್ದರು. ಅಲ್ಲಿ ೩ ವಾರಗಳ ತನಕ ವಿಚಾರಣೆ ನಡೆದು, ನ್ಯಾಯಾಧೀಶ ಶ್ರೀ ಶ್ರೀಖಂಡೆಯವರು ತಾ. ೨೭-೩-೧೯೫೦ನೇ ದಿನ ಅವರನ್ನು ನಿರಪರಾಧಿಗಳೆಂದು ಬಿಟ್ಟು ಕೊಟ್ಟರು. ಈ ನಿರ್ಣಯದ ಸುದ್ದಿ "ವೃತ್ತ"ದಲ್ಲಿ ಆಗಲೇ ಪ್ರಕಟವಾಗಿದೆ. ಆದರೆ ಖಟ್ಲೆಯ ವಿವರಗಳು ಪ್ರಕಟವಾಗಿದ್ದಿಲ್ಲ. ಅವನ್ನು ಈಗ ಸಂಗ್ರಹಿಸಿ (ನ್ಯಾಯಾಧೀಶರ ತೀರ್ಮಾನದ ಆಧಾರದಿಂದ), ಕೆಳಗೆ ಕೊಡಲಾಗಿದೆ.

ಕೊಲೆಯಾದವರು ಯಾರು ?

ಪ್ರಸ್ತುತ ನರಮೇಧದಲ್ಲಿ ಆಹುತಿ ಬಿದ್ದ ೧೧ ಜನರು ಈ ಕೆಳಗಿನಂತಿರುವರು :—

೧. ಹುಬ್ಬಳ್ಳಿಯ ಗುರುಪಾದಯ್ಯಾ ಸ್ವಾಮಿ.

೨. ಗದಗಿನ ಗುರುಸಿದ್ದಪ್ಪಾ ಸಿದ್ದಲಿಂಗಪ್ಪಾ.

೩. ಯಾವಗಲ್ಲ ಗ್ರಾಮದ ನೀಲವ್ವಾ.

೪. ನೀಲವ್ವನ ಅವಿವಾಹಿತ ಮಗಳಾದ ಚಂಪವ್ವಾ.

೫. ನೀಲವ್ವನ ವಿವಾಹಿತ ಮಗಳಾದ ಶಾಂತವ್ವಾ. (ಚನ್ನವೀರ ಗೌಡನ ಹೆಂಡತಿ)

೬ರಿಂದ ೯. ಮೇಲ್ಕಂಡಂತೆ ಶಾಂತವ್ವನ ಮಕ್ಕಳಾದ ದಾಕ್ಷಾಯಣೀ (ವಯ ೧೦), ಶಿವಲಿಂಗ (ವಯ ೭), ಚಂದ್ರಶೇಖರ (ವಯ ೪) ಮತ್ತು ಪ್ರೇಮಾ (ವಯ ೧॥).

೧೦. ಚಂದ್ರವ್ವಾ (ಶೀಗನಹಳ್ಳಿಯ ಪಾಟೀಲರಾಗಿರುವ ರಾ॥ ರಾಚನಗೌಡರ ಸಹೋದರಿ).

೧೧. ಅಕ್ಕವ್ವಾ (ರಾಚನಗೌಡರ ಚಿಕ್ಕ ಮಗಳು)

ಕೊಲೆಯಾದವರ ಪೂರ್ವೇತಿಹಾಸ.

ಹುಬ್ಬಳ್ಳಿಯ ಗುರುಪಾದಯ್ಯನು ಹುಬ್ಬಳ್ಳಿಯ ರಾ॥ ಹಿರೇಮಠ ವಕೀಲರಲ್ಲೊಬ್ಬರು ಶಿಕ್ಷಣ ಪಡೆಯುತ್ತಿದ್ದಾಗ ೮-೯ ವರ್ಷಗಳ ಹಿಂದೆ ತನ್ನ ತಂದೆಯನ್ನು ಕಳೆದುಕೊಂಡನು. ಅದೇ ಕೆಲವು ದಿನಗಳಲ್ಲಿ ಅವನು ಗಾಯನ ವಿದ್ಯೆ ಕಲಿಯಲೆಂದು ಮನೆಯಿಂದ ಹೊರಬಿದ್ದು ಹೋದನು. ೩ ವರ್ಷಗಳ ವರೆಗೆ ಮನೆಯವರಿಗೆ ಅವನ ಪತ್ತೆಯೇ ಹತ್ತಲಿಲ್ಲ. ಮೂರು ವರ್ಷಗಳ ತರುವಾಯ ಅವನು ಗದಗಕ್ಕೆ ಬಂದು ಪ್ರಕಟವಾದನು. ಆದರೆ ಅವನು ಆಗ ಕಾಷಾಯವಸ್ತ್ರಧಾರಿ ಸ್ವಾಮಿಯಾಗಿದ್ದನು ! ಜಡೆಯನ್ನೂ ಗಡ್ಡವನ್ನೂ ಬೆಳಸಿದ್ದನು ! ಮೃತ ಗುರುಸಿದ್ದಪ್ಪನು ಶಾಲೆ ಬಿಟ್ಟು ಅವನ ಶಿಷ್ಯನಾದನು. ಗುರುಪಾದಯ್ಯಾ ಸ್ವಾಮಿಯು ಮುಂದೆ ತನ್ನ ಮಾವನ ಮಾತು ಕೇಳಿ ಹುಬ್ಬಳ್ಳಿಗೆ ಬಂದು ಉಳಿದನು. ಅಲ್ಲಿ ಕೆಲವರು— ವಿಶೇಷವಾಗಿ ಹೆಣ್ಣುಮಕ್ಕಳು— ಅವನ ಭಕ್ತರಾದರು. ಸೇವಾನಿವೃತ್ತ ಜಿಲ್ಹಾ ನ್ಯಾಯಾಧೀಶ ಶ್ರೀ ಮುಳಕೋಟೆಯವರ ಅಳಿಯಂದಿರಾಗಿರುವ ಶೀಗನಹಳ್ಳಿಯ ಪಾಟೀಲ ರಾ॥ ರಾಚನಗೌಡರ ತಾಯಿ ನೀಲವ್ವಾ ಇವಳು ತನ್ನ ಮಗಳಾದ ಚಂದ್ರವ್ವಾ ಮತ್ತು ತನ್ನ ಸಹೋದರಿಯ ಮಗಳಾದ ಅಕ್ಕವ್ವಾ ಇವರ ಸಹಿತ ಗುರುಪಾದಯ್ಯಾ ಸ್ವಾಮಿಯ ಶಿಷ್ಯಪರಿವಾರವನ್ನು ಸೇರಿದಳು. ಚಂದ್ರವ್ವಾ ಮತ್ತು ಅಕ್ಕವ್ವಾ ಇವರಿಬ್ಬರೂ ಆಗ ಸುಮಾರು ೨೦-೨೧ ವರ್ಷಗಳ ತರುಣಿಯರಾಗಿದ್ದರು. ಇಬ್ಬರಿಗೂ ಅವರ ಗಂಡಂದಿರು ಬಿಟ್ಟಿದ್ದರು. ಅದೇ ರೀತಿ ಶ್ರೀ ಮುಳಕೋಟೆ ಇವರ ಸಹೋದರಿಯಾದ (ಯಾವಗಲ್ಲದ) ನೀಲವ್ವಳು ತನ್ನ ಅವಿವಾಹಿತ ಮಗಳಾದ ಚಂಪವ್ವಾ ಮತ್ತು ವಿವಾಹಿತ ಮಗಳಾದ ಶಾಂತವ್ವಾ ಇವರನ್ನೊಡಗೂಡಿ ಹುಬ್ಬಳ್ಳಿ ಸ್ವಾಮಿಯ ಶಿಷ್ಯರಾದರು. ಈ ರೀತಿ ಹೆಸರುವಾಸಿ ಮನೆತನಗಳ ಹೆಂಗಸರು ತರುಣನಾದ ಮತ್ತು ಸಂಶಯಾತ್ಮಕ ಚಾರಿತ್ರ್ಯದ ಗುರುಪಾದಯ್ಯಾ ಸ್ವಾಮಿಯ ಶಿಷ್ಯೆಯರ ಪರಿವಾರದೊಳಗೆ ಇರುವದು ಈ ಹೆಣ್ಣುಮಕ್ಕಳ ಆಪ್ತೇಷ್ಟರಿಗೆ ಸರಿಗಾಣಲಿಲ್ಲ. ಸ್ವಾಮಿಯದ್ದು ಢೋಂಗಿತನವೆಂದು ಆ ಆಪ್ತೇಷ್ಟರು ತಮ್ಮ ಅಕ್ಕ-ತಂಗಿ-ತಾಯಿಯಂದಿರಿಗೆ ಪುನಃ ಪುನಃ ಹೇಳಿದರೂ ಈ ಹೆಣ್ಣುಮಕ್ಕಳು, ತಮ್ಮ ಜನರಿಗೆ ಏನಾದರೊಂದು ಸುಳ್ಳು ನೆವ ಹೇಳಿ, ಅಂತರಂಗದಿಂದ ಗುರುಪಾದಯ್ಯಾ ಸ್ವಾಮಿಯ ಹತ್ತಿರ ಹೋಗಿ ಅವನ ಪರಿಚರ್ಯೆ ಮಾಡುತ್ತಿದ್ದರೆಂದು ತಿಳಿಯುತ್ತದೆ. ಹೀಗಿರುವಾಗ ಯಾವಗಲ್ಲಿನ ಓರಿಗಪ್ಪನ ಯಲ್ಲಪ್ಪಾ (ಇವನೇ ಗೋಕರ್ಣದೊಳಗಿನ ನರಮೇಧದ ಅಧ್ವರ್ಯುವೂ ಯಜಮಾನನೂ ಇರುತ್ತಾನೆಂದು ನ್ಯಾಯಾಧೀಶರು ಬಣ್ಣಿಸಿರುತ್ತಾರೆ.) ಅವನು ೧೯೪೯ನೇ ಇಸವಿಯ ಜನವರಿಯಲ್ಲಿ ಗುರುಪಾದಯ್ಯಾ ಸ್ವಾಮಿಯ ಪರಿವಾರದಲ್ಲಿ ಸೇರಿದನು. ಗುರುಪಾದಯ್ಯನ ಮೇಲೆ ಯಲ್ಲಪ್ಪನ ಭಕ್ತಿ ಇಲ್ಲವೆ ಪೂಜ್ಯಭಾವವಿದ್ದುದು ತೋರಿಬರಲಿಲ್ಲ. ಆದ್ದರಿಂದ ಅವನು ಕಾರಣಾಂತರಗಳಿಂದ ಸ್ವಾರ್ಥಾಪೇಕ್ಷೆಯಿಂದ ಗುರುಪಾದಯ್ಯನ ಹಾಗೂ ಅವನ ಜೊತೆಗಾರ್ತಿಯರ ಆಶ್ರಯ ಪಡೆಯಲು ಸ್ವಾಮಿಯ ಪರಿವಾರದಲ್ಲಿ ಸೇರಿದ್ದಿರಬೇಕೆಂದು ಊಹಿಸಬೇಕಾಗುತ್ತದೆ. ಯಲ್ಲಪ್ಪನು ಈ ಸಾಹಸವನ್ನು ಸ್ವಯಂಪ್ರೇರಣೆಯಿಂದ ಮಾಡಿದನೋ ಯಾ ಸ್ವಾಮಿಯ ಸಹವಾಸದಿಂದ ಅವಿವೇಕಿಗಳಾದ ಹೆಣ್ಣುಮಕ್ಕಳ ಸಂಬಂಧಿಕರ ಪ್ರೇರಣೆಯಿಂದ ಮಾಡಿದನೋ ಎಂಬುದು ಸ್ಪಷ್ಟವಾಗಿ ತಿಳಿಯುವದಿಲ್ಲ. ೧೯೪೮ರ ಡಿಸೆಂಬರ ತಿಂಗಳಲ್ಲೂ ೧೯೪೯ರ ಪ್ರಾರಂಭದಲ್ಲೂ ಮೃತ ಚಂದ್ರವ್ವನ ಅಣ್ಣಂದಿರಾಗಿರುವ ಶೀಗನಹಳ್ಳಿಯ ರಾ॥ ರಾಚನಗೌಡರು ೨೫—೩೦ ಸಾವಿರ ರೂ. ಗಳ ಹೊಲಭೂಮಿಗಳನ್ನು ಮಾರಾಟ ಮಾಡಿದ್ದರೆಂದು ತಿಳಿಯುತ್ತದೆ. ಈ ರಾಚನಗೌಡರಾಗಲಿ, ಮೃತ ಚಂಪವ್ವಾ ಮತ್ತು ಶಾಂತವ್ವಾ ಇವರ ಸಹೋದರರಾಗಿರುವ ಯಾವಗಲ್ಲಿನ ಮಹಾಬಲೇಶ್ವರಪ್ಪರಾಗಲಿ ಯಲ್ಲಪ್ಪನನ್ನು ಗುರುಪಾದಯ್ಯನ ಸವಾಲದಾರ ಕೆಲಸಕ್ಕೆಲ್ಲು ಹೊಂದಿಸಿರಬೇಕೆಂದು ಖಟ್ಲೆಯ ವಿಚಾರ ನಡೆದಾಗ ಆರೋಪಿತರ ವಕೀಲರು ಧ್ವನಿಸಿದ್ದರು. ಆದರೆ ನ್ಯಾಯಾಧೀಶರು ಈ ಸೂಚನೆಯನ್ನು ತಿರಸ್ಕರಿಸಿ ಓರಿಗಪ್ಪನ ಯಲ್ಲಪ್ಪನೇ ಸ್ವಯಂಪ್ರೇರಣೆಯಿಂದ ನರಮೇಧದ ದುಷ್ಕೃತ್ಯವನ್ನು ಮಾಡಿರಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಮೃತ ಗುರುಸಿದ್ದಪ್ಪನ ಸಹೋದರರಾಗಿರುವ ಕೋಟೆಪ್ಪಾ ಮತ್ತು ನಾಗೇಶಪ್ಪಾ ಇವರದೇನಾದರೂ ಯಲ್ಲಪ್ಪನಿಗೆ ಸಹಾಯವಿದ್ದಿರಬಹುದೆಂದಷ್ಟೇ ಅವರ ಮತ.

ಸ್ವಾಮಿಯೂ ಅವನ ಪರಿವಾರದವರೂ ಗೋಕರ್ಣಕ್ಕೆ ಹೇಗೆ ಬಂದರು ?

ಗುರುಪಾದಯ್ಯಾ ಸ್ವಾಮಿಗೂ, ಅವನ ಶಿಷ್ಯನಾದ ಗುರುಸಿದ್ದಪ್ಪನಿಗೂ ಗೋಕರ್ಣ-ಯಾತ್ರೆ ಮಾಡಬೇಕೆಂಬ ಇಚ್ಛೆಯಿತ್ತು. ಈ ಯಾತ್ರೆಗೆ ತಮ್ಮ ಹೆಣ್ಣು ಪರಿವಾರದವರಿಗೂ ಕರಕೊಂಡು ಬರಬೇಕೆಂದು ಅವರ ಸಂಕಲ್ಪವಾಯಿತು. ಯಲ್ಲಪ್ಪನು ಅವರ ಈ ಸಂಕಲ್ಪವನ್ನು ಕೈಗೂಡಿಸಿ

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ !! ಸೌಕರ್ಯ !!!

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊಂಬೇ)

ಮೋಟರ–ಸ್ಟ್ಯಾಂಡ, ಹುಬ್ಬಳ್ಳಿ.

ವಿ. **ಸೂಚನೆ:—** ಕೆನರಾದಿಂದ (ಡೊ. ಕೇ. ಟಿ., ಡಿ. ಕೆ., ಕಲಬುರ್ಗಿ ಹಾಗೂ ಲಕ್ಷ್ಮೀ ಮೋಟಾರ ಸರ್ವಿಸ್ಸುಗಳಿಂದ) ನಮ್ಮಲ್ಲಿ ಬರುವ ಯಾವತ್ತೂ ಪ್ರಯಾಣಿಕರ ಸಲುವಾಗಿ ಮುಂಬಯಿ, ಪುಣೆ, ಬೆಂಗಳೂರ ಮೊದಲಾದ ಊರುಗಳಿಗೆ ರೇಲ್ವೆ ತಿಕೀಟುಗಳ ಏರ್ಪಾಡು ಮಾಡಲಾಗುವದು. ಇದಲ್ಲದೆ ಪುಣೆ, ಬೆಂಗಳೂರ ಮೇಲ ಗಾಡಿಗಳ ಪ್ರಯಾಣಿಕರಿಗೆ ತತ್ಕಾಲ ಊಟದ ವ್ಯವಸ್ಥೆ ಇಡಲಾಗಿದೆ.

ಮಾಲಕ:— ಮ್ಹಾಳಪ್ಪಾ ಪೈ.

ಕೊಡಲು ಮುಂದಾದನು! ಮತ್ತು ಯಾವಗಲ್ಲಿನ ನೀಲವ್ವಾ, ಪಂಪವ್ವಾ, ಶಾಂತವ್ವಾ, ಚಂದ್ರವ್ವಾ, ಅಕ್ಕವ್ವಾ ಇವರನ್ನೂ ಶಾಂತಪ್ಪನ ಮಕ್ಕಳನ್ನೂ ಅವರ ಮನೆಯವರಿಗೆ, ಒಂದೆರಡು ತುಳ್ಳು ನಂಬಿಗೆ ಕೊಟ್ಟು, ಮುದ್ದಿಗೆ, ಸ್ವಾಮಿಯಾದ್ದಲ್ಲಿ ಕರೆತಂದನು ಚಂದ್ರಪ್ಪನ ತಾಯಿಯಾದ ಶೀಗಾಣಿಬಿಯು ನೀಲವ್ವಳ ಮಾತ್ರ ಈ ಯಾತ್ರೆಯನ್ನು ಕೈಕೊಳ್ಳಲು, ಏನೋ ಅಡಚಣೆಯಾಗಿ, ಶಕ್ಯವಾಗಲಿಲ್ಲ. ಈ ಪರಿವಾರವನ್ನೆಲ್ಲ ಗೋಕರ್ಣಕ್ಕೆ ಒಯ್ಯಲು ಯಲ್ಲಪ್ಪನು ಒಂದು ಭಾಡಿಗೆಯ ಮೋಟಾರ ಬಂಡಿಯನ್ನು ದೊರಕಿಸಲು ಪ್ರಯತ್ನಿಸಿದನು ಆದರೆ ಅದು ಸಾಧ್ಯವಾಗಲಿಲ್ಲ ಆದರಿಂದ ಅವನು ತಾ. ೧೫—೩—೪೯ಕ್ಕೆ ಹುಬ್ಬಳ್ಳಿಗೆ ಹೋಗಿ ಹುಬ್ಬಳ್ಳಿಯಿಂದ ಶಿರಸಿಯ ಮೇಲಿಂದ ಗೋಕರ್ಣಕ್ಕೆ ಬರಲು ೮ ಮೋಟಾರ–ಟಿಕೇಟುಗಳನ್ನು ಕೊಂಡು–ಕೊಂಡನು. ಅದರಂತೆ ಗುರುಶಿದ್ದಪ್ಪನು ಹುಬ್ಬಳ್ಳಿಯಿಂದ ಮೋಟಾರ ಬಂಡಿಯಲ್ಲಿ ಕುಳಿತು ಬಂದನು, ಮತ್ತು ಯಲ್ಲಪ್ಪನೂ ಸ್ವಾಮಿ ಯಸ್ವೀ–ಪರಿವಾರವೂ ಮಾಡ್ಗಿಯಿಂದ ಚಕ್ಕಡಿ ಯೊಳಗೆ ಕೂತು ಶಿರಸಿಗೆ ಬಂದು, ಅಲ್ಲಿ ಮೋಟಾರ ಹತ್ತಿದರು, ಮತ್ತು ಎಲ್ಲರೂ ತಾ. ೧೬–೩–೪೯ ನೇ ರಾತ್ರಿ ಗೋಕರ್ಣಕ್ಕೆ ಬಂದು ತಲ್ಪಿದರು. ಸ್ವಾಮಿಯು ಇವರ ಸಂಗಡ ಬಂದಿದ್ದಿಲ್ಲ. ಅವನು ಕಾಮರಿಯ ಮೇಲೆ ತನ್ನ ಸೇವಕ ದ್ಯಾಮನೊಂದಿಗೆ ತಾ. ೧೬ನೇ ದಿನ ಮುಂಡಗೋಡಿಗೆ ಬಂದನು, ಮತ್ತು ಗೋಕರ್ಣಕ್ಕೆ ಬರಲು ಮೋಟಾರ ಹಿಡಿಯುವ ಪ್ರಯತ್ನ ಮಾಡಿದನು, ಆದರೆ ಅವನಿಗೆ ಮೋಟಾರ ಸಿಗಲಿಲ್ಲ ಆದರಿಂದ ಅವನು ಆ ರಾತ್ರಿ ಮುಂಡಗೋಡಿನ ಪಟೇಲರಲ್ಲಿ ಉಳಿದನು. ಮರುದಿನ ಅವನು, ಗೋಕರ್ಣವನ್ನು ತಾನು ಹಿಂದೆ ಎಂದೂ ನೋಡಿದ್ದಿಲ್ಲವಾದ್ದರಿಂದ, ಸಂಗತಿಗೆ ಮುಂಡಗೋಡ ಪಟೇಲರು ಕೊಟ್ಟ ಮಲ್ಲಪ್ಪಾ ಮತ್ತು ಮೋಹಿದ್ದಿನ ಸಾಬ ಇವರನ್ನೂ ಒಡಗೂಡಿ ಅಂಕೋಲೆಯ ಮಾರ್ಗವಾಗಿ ಗೋಕರ್ಣಕ್ಕೆ ಬರಲು ಹೊರಟನು. ಅಂಕೋಲೆಯಲ್ಲಿ ಅವನಿಗೆ ಗೋಕರ್ಣ ಗಾಡಿಯು ತಪ್ಪಿತು. ಆದರಿಂದ ಅಂಕೋಲೆಯಲ್ಲೇ ಭೆಟ್ಟಿಯಾದ ಗೋಕರ್ಣದ ಪಾಂಡುರಂಗ ಭಟ್ಟರೊಂದಿಗೆ ಅವರೆಲ್ಲರೂ (ಸ್ವಾಮಿ, ದ್ಯಾಮಾ, ಮಲ್ಲಪ್ಪಾ ಮತ್ತು ಮೋಹಿದ್ದಿನ ಸಾಬ) ಗಂಗಾವಳಿಯ ಮಾರ್ಗವಾಗಿ (ತಾ. ೧೭ನೇ) ರಾತ್ರಿ ಗೋಕರ್ಣಕ್ಕೆ ತಲ್ಪಿದರು. ಗೋಕರ್ಣಕ್ಕೆ ಬಂದು ಚೌಕಶಿ ಮಾಡಲಾಗಿ, ಮುನ್ನಿನ ದಿನ ಬಂದ ಯಲ್ಲಪ್ಪಾ ವಗೈರೆ ೧೧ ಮಂದಿ ಬಾವಾಜಿ–ಕಾಸದಲ್ಲಿ(?) ಇಳಿದುಕೊಂಡಿರುವರೆಂದು ತಿಳಿಯಿತು. ಸ್ವಾಮಿಯು ತನ್ನ ಸಂಗಡಿಗರನ್ನು ಊರೊಳಗೆ ಬಿಟ್ಟು ತಾನೊಬ್ಬನೇ ೮ ಮಂದಿಯನ್ನು ಕೂಡಿಕೊಂಡನು. ಮರುದಿನ (ಅಂದರೆ ತಾ. ೧೮ನೇ ದಿನ) ಮುಂಜಾನೆ ಈ ಸಂಗಡಿಗರು ಜಟಾಯು ತೀರ್ಥದ ಮೇಲ್ಗಡೆ ಇರುವ ಲಕ್ಷ್ಮೀ–ನಾರಾಯಣ ಗುಡಿಯಲ್ಲಿ ಸ್ವಾಮಿಯನ್ನು ಭೆಟ್ಟಿಯಾಗಿ, ತಮ್ಮ ಸಂಬಳ ಪಡೆದುಕೊಂಡು, ಊರಿಗೆ ಮರಳಿ ಹೋದರು.

ಗೋಕರ್ಣದಲ್ಲಿ ಏನು ನಡೆಯಿತು ?

ಮೇಲೆ ವಿವರಿಸಿದ ಕಥೆ ವಿವಾದಾಸ್ಪದವಿರುವದಿಲ್ಲ ತಾ. ೧೮ಕ್ಕೆ ಗೋಕರ್ಣದಲ್ಲಿ ಏನು ನಡೆಯಿತೆಂಬುದನ್ನು ಬಟ್ಟಿ ಕೃಷ್ಣ ಅಂಬೇರ ಸಾಕ್ಷಿದಾರರು ವಿವರಿಸಿರುತ್ತಾರೆ ಅವರು ಹೇಳಿದ ಕಥೆ ಮುಂದಿನಂತಿದೆ — ತಾ. ೧೮ ನೇ ಅಪರಾಹ್ಣದಲ್ಲಿ ಸ್ವಾಮಿಯು ಅಂಬೇರ ಪರಮೇಶ್ವರ ಮತ್ತು ಸುಬ್ರಾಯ ಇವರನ್ನು ಲಕ್ಷ್ಮೀನಾರಾಯಣ ಗುಡಿ ಕರೆಯಿಸಿಕೊಂಡು, ತನ್ನ ಪರಿವಾರದವರಿಗೆಲ್ಲ ಸಮುದ್ರದಲ್ಲಿ ನೌಕಾ ವಿಹಾರ ಮಾಡಬೇಕೆಂಬ ಇಚ್ಛೆಯುಂಟೆಂದು ಹೇಳಿ, ಆ ಇಚ್ಛೆ ಪೂರೈಸಗೊಳಿಸಲು ಸಾಧ್ಯವಾಗುವದೇನೆಂದು ಅವರಿಗೆ ಪ್ರಶ್ನೆ ಮಾಡಿದನಂತೆ ತಮ್ಮ ದೋಣಿಗಳು ತೀರ ಸಣ್ಣವಿರುವದರಿಂದ ೧೦–೧೨ ಮಂದಿಗೆ ಕುಳ್ಳಿರಿಸಿಕೊಂಡು ಸಮುದ್ರಕ್ಕೆ ಹೋಗಲು ಸಾಧ್ಯವಾಗದೆಂದು ಅವರು ಪ್ರತ್ಯುತ್ತರ ಕೊಟ್ಟು ಹೋದರಂತೆ.

ಆ ದಿನ ಇಲ್ಲವೆ ಮುನ್ನಿನ ದಿನ ಯಲ್ಲಪ್ಪನು ಗೋಕರ್ಣದಲ್ಲಿ ಯಾರನ್ನು ಕಂಡನು, ಯಾರೊಡನೆ ಸಂಭಾಷಣೆ ಮಾಡಿದನು, ಏನೇನು ವ್ಯೂಹ ರಚಿಸಿದನು ಎಂಬುದು ತಿಳಿದಿಲ್ಲ ಆರೋಪಿತರಿಗೂ ಯಲ್ಲಪ್ಪನಿಗೂ ಅಥವ ಆರೋಪಿತರಿಗೂ ಸ್ವಾಮಿಯ ಪರಿವಾರದವರಿಗೂ ಹೇಗೆ ಸಂಬಂಧ ಮತ್ತು ಪರಿಚಯವುಂಟಾಯಿತೆಂಬುದು ಇನ್ನೂ ನಿಗೂಢವಿದೆ. ಈ ವಿಷಯ ಪರಿಶೋಧಿಸಲು ಪೋಲೀಸರಿಗೆ ಸಾಧ್ಯವಾಗಿಲ್ಲ ಅಂಬೇರ ಬಟ್ಟಿಯು ಆರೋಪಿಗಳಿಗೂ ಸ್ವಾಮಿಯ ಪರಿವಾರದವರಿಗೂ ಪಟ್ಟ ಪರಿಚಯವಾದ ಮೇಲಿನ ಕಥೆಯನ್ನಷ್ಟೇ ಹೇಳುತ್ತಾನೆ

ತಾ. ೧೮ನೆ ದಿನ ರಾತ್ರಿ ಆರೋಪಿ ಶಂಕರ ಭಟ್ಟ ಗೋಪಿ ಇವರು ಬಟ್ಟಿಗೆ ತಮ್ಮ ಮನೆಯಲ್ಲಿ ಕರೆದೊಯ್ದು ತಮ್ಮ ಸಂಗಡ (ಜಟಾಯು ತೀರ್ಥದ ಹತ್ತಿರ ಇರುವ) ಲಕ್ಷ್ಮೀನಾರಾಯಣ ಗುಡಿಯ ಬಳಿಯಲ್ಲಿರುವ ಚಪ್ಪರದ ತನಕ ಬರಬೇಕೆಂದು ಹೇಳಿದರೆಂದೂ, ಐನೇ ಆರೋಪಿ ಲಕ್ಷ್ಮೀನಾರಾಯಣ ಭಟ್ಟರು ಆಗ ಶಂಕರ ಭಟ್ಟರ ಜೊತೆಯಲ್ಲಿದ್ದರೆಂದೂ ಹೋಗುವಾಗ ದಾರಿಯಲ್ಲಿ ಶಂಕರ ಭಟ್ಟರು ತಾವು ಚಪ್ಪರದೊಳಗಿನ ಜನರಿಗೆ ಲಡ್ಡುಗಳನ್ನು ಹಂಚುವೆವು, ಲಡ್ಡುಗಳನ್ನು ನಿನಗೆ ಕೊಟ್ಟರೆ ಅವನ್ನು ತಿನ್ನಬೇಡ ಎಂದು ಮುಂಜಾಗ್ರತೆ ಕೊಟ್ಟರೆಂದೂ ಬಟ್ಟಿಯು ಹೇಳುತ್ತಾನೆ. ಬಟ್ಟಿಯು ಲಕ್ಷ್ಮೀನಾರಾಯಣ ಗುಡಿಗೆ ಹೋಗಿ ಚಪ್ಪರದ ಹೊರಗಡೆಯೇ ಕುಳಿತುಕೊಂಡನು. ಸ್ವಾಮಿಯು ಆಗ ಗುಡಿಯ ಹಿಂಬದಿಯಲ್ಲಿದ್ದನು. ಉಳಿದವರು ಚಪ್ಪರದಲ್ಲಿದ್ದರು. ಮುಳೀ ಸುಬ್ರಾಯ ಭಟ್ಟರ ವಿನಹ ಇನ್ನುಳಿದ ಆರೋಪಿಗಳೂ ಅಲ್ಲಿದ್ದರು. ಅವರಲ್ಲಿ ಗಜಾನನ ಭಟ್ಟನು ಬೆಂಕಿ ಹೊತ್ತಿಸಿ ಚಹಾ ತಯಾರಿಸುತ್ತಿದ್ದನು, ಚಹಾ ತಯಾರಾದ ಮೇಲೆ ಗೋಪಿ ಶಂಕರ ಭಟ್ಟರು ಚಪ್ಪರದಲ್ಲಿದ್ದ ಲಿಂಗಾಯತ ಜನರಿಗೆ ಲಡ್ಡುಗಳನ್ನು ಹಂಚಿದರು. ಬಟ್ಟಿಗೂ ಒಂದೆರಡು ಲಡ್ಡುಗಳನ್ನು ಕೊಟ್ಟಿದ್ದರು ಬಟ್ಟಿಯು ಅವನ್ನು (ಗೋಪಿ ಭಟ್ಟರು ಮೊದಲೇ ಅವನಿಗೆ ತಿನ್ನಕೂಡದೆಂದು ಹೇಳಿಟ್ಟಿದ್ದರಿಂದ) ತಿನ್ನಲಿಲ್ಲ ಸ್ವಾಮಿಯು ಪರಿವಾರದೊಳಗಿನ ಓರ್ವ ಹುಡುಗಿಯೂ ಅವನ್ನು ತಿನ್ನಲಿಲ್ಲ ಈ ಲಡ್ಡುಗಳನ್ನು ತಿಂದ ಜನರು ಒಂದು ಗಳಿಗೆಯೊಳಗೆ ಒದರಾಡಹತ್ತಿದರು ಮತ್ತು ನಿತ್ರಾಣರಾಗಿ ಬಿದ್ದುಕೊಂಡರು. ಅವನ್ನು ಕಂಡು ಲಡ್ಡು ತಿನ್ನದೆ ಇದ್ದ ಹುಡುಗಿಯು ಹಾಹಾಕಾರ ಆಕ್ರೋಶ ಮಾಡಹತ್ತಿದಳು. ಆರೋಪಿ ಶಂಕರ ಭಟ್ಟ ಮತ್ತು ಲಕ್ಷ್ಮೀನಾರಾಯಣ ಭಟ್ಟರು ಆಗ ಅವಳ ಕೊರಳನ್ನು ಹಿಚುಕಿದರೆಂದು ಬಟ್ಟಿಯು ಹೇಳುತ್ತಾನೆ. ಹುಡುಗಿಯು ಕೂಗು ಕೇಳಿ ಗುಡಿಯ ಹಿಂಬದಿಗಿದ್ದ ಸ್ವಾಮಿಯು ಓಡಿ ಬಂದನಂತೆ ಅವನನ್ನು ಮಹಾದೇವ ಅಡಿ ಮತ್ತು ಪರಮೇಶ್ವರ ಭಟ್ಟ ಇವರಿಬ್ಬರು ಗಟ್ಟಿಯಾಗಿ ಹಿಡಿದರಂತೆ. ಮುಂದೇನಾಯಿತೆಂದು ಬಟ್ಟಿಗೆ ಗೊತ್ತಿಲ್ಲ ಸ್ವಾಮಿಗೆ ಹಿಡಿದ ಮೇಲೆ ಆರೋಪಿ ಗೋಪಿ ಶಂಕರ ಭಟ್ಟರು ಜಟಾಯು ತೀರ್ಥದ […] ಬಳಿಗೆ ಕರೆದೊಯ್ದು ಒಂದು ದೋಣಿಯನ್ನು […]ಕೊಂಡೂ ಕೆಲವು ಅಂಬಿಗರನ್ನು ಕರೆತರಬೇಕೆಂದೂ […] ಹೇಳಿದರಂತೆ ಅದರಂತೆ ಬಟ್ಟಿಯು ಜಟಾಯು ತೀರ್ಥ ಗುಡ್ಡದ ಆಚೆಯ ಅಡಿಗಿರುವ ಅಂಬೇರ ಕೇರಿಗೆ ಹೋಗಿ ನಾಗಪ್ಪಾ, ನಾರಾ…, ಗಣಪ… ವಗೈರೆ ಐ ಮಂದಿ ಅಂಬಿಗರನ್ನು ಒಟ್ಟುಗೂಡಿಸಿ, ನಾಗಪ್ಪನ ದೋಣಿಯನ್ನು ತಕ್ಕೊಂಡು ನಾಗಪ್ಪಾ–ನಾರಾಯಣರ ಜಟಾಯು ತೀರ್ಥದ ಕೆಳಗಡೆ ಸಮುದ್ರದೊಳಗೆ ಇರಿಸಿ ಬರುವಂತೆ ವ್ಯವಸ್ಥೆ ಮಾಡಿ, ಇನ್ನುಳಿದ ಮೂವರು ಅಂಬಿಗರ ಸಹಿತ ತಾನು ಸ್ವತಃ ಕಾಲು ಹಾದಿಯಿಂದ ಲಕ್ಷ್ಮೀನಾರಾಯಣ ಗುಡಿಗೆ ಬಂದನು. ಅಲ್ಲಿ ಅವರು ಯಾರನ್ನೂ ಕಾಣಲಿಲ್ಲ, ಆದರಿಂದ ಅವರು ಕೆಳಗಿಂದ ಜಟಾಯುತೀರ್ಥಕ್ಕೆ ಹೋದರು. ಅಲ್ಲಿ ಶಂಕರ ಭಟ್ಟ ಗೋಪಿ, ಪರಮೇಶ್ವರ ಭಟ್ಟ ಧಾರೇಶ್ವರ ಮತ್ತು ಲಕ್ಷ್ಮೀನಾರಾಯಣ ಭಟ್ಟ ಇವರು ಹೆಣಗಳ ೩ ಕಟ್ಟುಗಳನ್ನು ಒಂದು ಬಂಡೆಯ ಮೇಲೆ ಇಟ್ಟುಕೊಂಡು ನಿಂತಿದ್ದರಂತೆ. ಬಟ್ಟಿಯು ಆ ಬಂಡೆಗೆ ಮುಟ್ಟುವಷ್ಟರಲ್ಲಿ ನಾಗಪ್ಪಾ–ನಾರಾಯಣರ ದೋಣಿಯೂ ಅಲ್ಲಿ ಬಂದು ತಲ್ಪಿತು ಗೋಪಿ ಶಂಕರ ಭಟ್ಟ ಮತ್ತು ಬಟ್ಟಿ ಇವರು ಅವರ ದೋಣಿಯನ್ನು ಬಂಡೆಯ ಹತ್ತಿರ ತಂದು ಹೆಣಗಳ ಕಟ್ಟುಗಳಿಗೆ ಹಗ್ಗ ಕಟ್ಟಿ, ಒಂದೊಂದೇ ಕಟ್ಟನ್ನು ನೀರೊಳಗೆ ಬಿಟ್ಟು ಮತ್ತು ಹಗ್ಗದ ಇನ್ನೊಂದು ತುದಿಯನ್ನು ದೋಣಿಯವರ ಕಡೆಗೆ ಕೊಟ್ಟು ಆ ದೋಣಿಗೆ ಕಟ್ಟಿಕೊಂಡು ಹೊರಗೆ ಹೋಗಿ ಸಮುದ್ರದಲ್ಲಿ ಬಿಡ ಹೇಳಿದರು. ಹೆಣಗಳ ಈ ಕಟ್ಟುಗಳ ಪೈಕಿ ೧ ರಲ್ಲಿ ೪ ಹೆಣಗಳಿದ್ದವು ಇನ್ನುಳಿದ ೨ ರಲ್ಲಿ ೩–೩ ಹೆಣಗಳಿದ್ದವು. ನಾಗಪ್ಪಾ ನಾರಾಯಣರು ಶಂಕರ ಭಟ್ಟರ ಅಪ್ಪಣೆಯಂತೆ ಆ ಕಟ್ಟುಗಳನ್ನು ಅರ್ಧ ಮೈಲು ಹೊರಗೆ ಒಯ್ದು ಸಮುದ್ರದಲ್ಲಿ ಬಿಟ್ಟುಬಂದರು ೩ನೇ ಕಟ್ಟನ್ನು ಒಯ್ಯುವಾಗ "ಈ ಕಟ್ಟನ್ನು ಸಮುದ್ರದಲ್ಲಿ ಬಿಟ್ಟು ನೀವು ನೆಟ್ಟ ಮನೆಗೆ ಹೋಗಿರಿ. ಇಂದು ಇಲ್ಲಿ ನಡೆದ ವೃತ್ತಾಂತವನು ಯಾರಿಗೂ ಹೇಳಬೇಡಿರಿ ನಿಮ್ಮ ಹಾಗು ವಿನಹ ಇದನು ನೀವು ಹೊರಗೆ ಹಾಕಿದರೆ ನಿಮ್ಮ ಅಸ್ತಿ–ಪಾಸ್ತಿ ಹೋಗುವದಲ್ಲದವನ್ನು ಸುಟ್ಟು ಬೂದಿ ಮಾಡಿ; ನಿಮಗೆ ಈ ೧೦ ಮಂದಿ ಹೋದ ದಾರಿಯಿಂದಲೇ ಕಳಿಸಲಾಗುವದು, ನೆನಪಿನಲ್ಲಿಡಿರಿ!" ಎಂದು ಗೋಪಿ ಶಂಕರ ಭಟ್ಟರು ಬೆದರಿಸಿದರಂತೆ. ದೋಣಿಯು ಶವಗಳ ಕೊನೆಯ ಕಟ್ಟನ್ನು ಎಳಕೊಂಡು ಹೋದ ಮೇಲೆ ಬಟ್ಟಿಯೂ ಅವನ ಸಂಗಡಿಗರೂ ತಮ್ಮ ಮನೆ ಹೊರಟು ಹೋದರು ಅವರಿಗೂ ಶಂಕರ ಭಟ್ಟರ ಮೇಲಿನಂತೆಯೇ ಎಚ್ಚರಿಕೆ–ಬೆದರಿಕೆಗಳನ್ನು ಕೊಟ್ಟರಂತೆ ಮತ್ತು ಬಟ್ಟಿಯ ಕೈಯಲ್ಲಿ ರೂ. ೧೦ರ ಒಂದು ನೋಟನ್ನು ಇಟ್ಟು, ಹಿಂದಿನಿಂದ ಅವನು ಬೇಡಿದಷ್ಟು ಹಣವನ್ನು ಕೊಡಲಾಗುವದೆಂಬ ವಚನ ಕೊಟ್ಟು ಕಳ ಕೊಟ್ಟರಂತೆ. ತಾ. ೧೮ ನೇ ದಿನ ರಾತ್ರಿ ನಡೆದ ಈ ಕಥೆ ಬಟ್ಟಿಯೂ ಲಿಂಗಾಯತರ ಹೆಣಗಳ ವ್ಯವಸ್ಥೆ ಮಾಡಲು ಆರೋಪಿತರಿಗೆ ನೆರವಾದ ನಾಗಪ್ಪಾ–ನಾರಾಯಣ ಅಂಬಿಗರೂ ಹೇಳಿದ ಕಥೆಯಾಗಿರುತ್ತದೆ.

ವರುಣದೇವನು ಪಾಪವನ್ನು ಬೈಲಿಗೆಳೆದನು

ಈ ನರಮೇಧದ ಯಜಮಾನನಾದ ಯಲ್ಲಪ್ಪನು ತಾ. ೧೯ ನೇ ದಿನ ಗೋಕರ್ಣದಲ್ಲಿ ಏನು ಮಾಡಿದನು ತಿಳಿಯದು. ಕೌಟುಂಬಿಕ(?) ಅವನು ಆ ದಿನವನ್ನು ತಾನು ಮಾಡಿದ ಮಹಾಯಾಗದ ಅವಭೃಥ ಮಾಡುವದರಲ್ಲಿ ಮತ್ತು ಕೋಟ್ಯಪ್ರೋತ್ಸಾಹಿ(?) ಮತ್ತ್ವಿಜರಿಗೆ ಯೋಗ್ಯ ಸಂಭಾವನೆ ಕೊಡುವದರಲ್ಲಿ ಕಳೆದಿರಬೇಕು, ಅವನು ಗೋಕರ್ಣವನ್ನು ಬಿಟ್ಟು ಹೋದದ್ದು ತಾ. ೨೦ನೇ ದಿನ ಮುಂಜಾನೆಯ ಮೋಟಾರ ಗಾಡಿಯಿಂದ ಎಂದು ಪೋಲೀಸರು ಪ್ರಮಾಣ ಮಾಡುತ್ತಾರೆ. ೨೦ನೇ ದಿನ ಸಂಜೆ ಸಮುದ್ರ–ದೇವತೆಯಾದ ವರುಣ ಮಹಾರಾಯನು ೬ ಹೆಣಗಳನ್ನು ತೀರಕ್ಕೆ(?)

(ಮುಂದೆ ೫ನೇ ಪುಟ ನೋಡಿರಿ)

ಇದನ್ನು ಪಾಂಡುರಂಗ ಕೃಷ್ಣ ಗಾಂವಕರ(?) (ಸಂಪಾದಕ) ಇವರು ಕಾರವಾರದ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Regd. No. B 1270.　　　　Monday, 5-5-1930.

ಕಾನಡಾವೃತ್ತ.

ವರ್ಷ ೩೨]　THE KANARA NEWS.　[ಸಂಚಿಕೆ ೪೯.

ಕುಮಟಾ:— ಸೋಮವಾರ, ತಾ. ೫—೬—೧೯೩೦

ವರ್ಗಣಿಯ ದರ:
ಸ್ಥಳೀಯರಿಗೆ ವರ್ಷಕ್ಕೆ ರೂ. ೩
ಅಂಚೆಯಿಂದ ವರ್ಷಕ್ಕೆ ೪—೦—೦
೬ ತಿಂಗಳಿಗೆ ೨—೪—೦
ಬಿಡಿ ಸಂಚಿಕೆಗೆ ೦—೧—೦
ಪ್ರತಿ ಒಂದು ಸಂಚಿಕೆ
ಬೇಕಾದವರು ಬರೆಯಬೇಕು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

ಜಾಹೀರಾತುಗಳ ದರ:
೧೫ ಸಾಲಿನ ಒಂದು ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ಹೆಚ್ಚು ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಮಾಡಬೇಕು
ವ್ಯವಸ್ಥಾಪಕರು.

ಸ್ಥಳಿಕ ವಿಷಯಗಳು.

(ಲೇಖಕ:— ಸ್ವದೇಶಿಕ)

ಸಾಂಸ್ಕೃತಿಕ ದೃಷ್ಟಿಯಿಂದ, ಉದ್ಯೋಗ-ವ್ಯವಹಾರಗಳ ದೃಷ್ಟಿಯಿಂದ ಮತ್ತು ಸಾರಿಗೆ-ಸಂಪರ್ಕ ಮೊದಲಾದ ಸೌಕರ್ಯದ ದೃಷ್ಟಿಯಿಂದ ನಮ್ಮ ಕಾರವಾರ ಜಿಲ್ಲೆ ಬಡವಾಗಿದ್ದರೂ ದೇವರ ದಯೆಯಿಂದ ಬುದ್ಧಿ ಶಕ್ತಿ, ಸಾಮರ್ಥ್ಯ-ಶಕ್ತಿಗಳ ದೃಷ್ಟಿಯಿಂದ ಸರ್ವಥಾ ಬಡವಾಗಿಲ್ಲ. ಕಳೆದ ವರ್ಷ ಕೆನರಾ ಕಾಲೇಜಿನ ಉದ್ಘಾಟನೆಯ ಕಾಲಕ್ಕೆ ನ್ಯಾ|| ವಾ|| ಹಳದೀಪುರ ಕೃಷ್ಣರಾಯರೂ, ಕಳೆದ ಜನವರಿಯಲ್ಲಾದ ಕೆನರಾ ಕಾಲೇಜಿನ ಸಮ್ಮೇಲನದ ಕಾಲಕ್ಕೆ ಮಾನ್ಯ ಬಾಳಾಸಾಹೇಬ ಖೇರರೂ ಹೇಳಿರುವಂತೆ ನಮ್ಮ ಜನರು ಕುಶಾಗ್ರ ಬುದ್ಧಿಯವರಿರುತ್ತಾರೆಂದು ನೋಡಿದಷ್ಟು ಸತ್ಯವಿದೆ. ಕಳೆದ ವರ್ಷದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯ ಕಾರವಾರ ಮತ್ತು ಕುಮಟಾ ಕೇಂದ್ರಗಳಿಂದ ಉತ್ತೀರ್ಣರಾದವರ ಶೇಕಡಾವಾರದ ಪ್ರಮಾಣ ಬೇರೆ ಎಲ್ಲ ಕೇಂದ್ರಗಳಿಗಿಂತ ಹೆಚ್ಚಿಗೆ ಇತ್ತೆಂಬುದನ್ನು ಓದುಗರು ಮರೆತಿರಲಿಕ್ಕಿಲ್ಲ. ಈ ವರ್ಷದ ಎಸ್. ಎಸ್. ಸಿ. ಪರೀಕ್ಷೆಯಲ್ಲೂ ನಮ್ಮ ಜಿಲ್ಲೆಯ ತರುಣರು ತಮ್ಮ ಬುದ್ಧಿ—ಪ್ರಭಾವವನ್ನು ಒಳ್ಳೆಯಾಗಿ ಪ್ರಕಟಿಸಿದ್ದಾರೆ. ಈ ಪರೀಕ್ಷೆಯಲ್ಲಿ ಮೊದಲನೇ ೧೦ ಸ್ಥಳಗಳನ್ನು ಆಕ್ರಮಿಸಿದವರೊಳಗೆ ನಮ್ಮ ಜಿಲ್ಲೆಯವರು ೩ ಮಂದಿ ಇದ್ದಾರೆ. ೩ನೇ ಸ್ಥಾನ ಪಡೆದ ಕು|| ರಮೇಶ ಆನಂದ ಗಂಗೊಳ್ಳಿ ಇವನು ಕಾರವಾರದ ಹಿರಿಯ ವಕೀಲ ರಾ|| ಗಂಗೊಳ್ಳಿ ರಾಘವೇಂದ್ರರಾಯರ ಮೊಮ್ಮಗನಿರುತ್ತಾನೆ. ೪ನೇ ಸ್ಥಾನ ಪಡೆದ ಕು|| ಶಿವಶಂಕರ ಚಿಕ್ಕೆರೆಮನೆಯು ಕಾರವಾರ ಕೋರ್ಟಿನ ರಾ|| ಮಂಗೇಶ ಕಾಳಪ್ಪಾ ಚಿಕ್ಕೆರೆಮನೆಯವರ ಕುಮಾರನಿರುತ್ತಾನೆ. ೧೦ನೇ ಸ್ಥಾನ ಪಡೆದ ಕು|| ಸುರೇಶ ನಾಡಕರ್ಣಿಯು ಬಂಕಿಕೊಡ್ಲದ ಶ್ರೀ|| ಮಾ|| ಶಂಕರ ನಾಡಕರ್ಣಿಯವರ ಮಗನಿರುತ್ತಾನೆ. ಧಾರವಾಡ ಕೇಂದ್ರದಲ್ಲಿ ಪ್ರಥಮ ಸ್ಥಾನ ನಮ್ಮ ಹೊನ್ನಾವರ ತಾಲೂಕಿನ ಕು|| ಮೋಹನ ರಾಮಚಂದ್ರ ಭಾಗವತ ಇವನಿಗೆ ದೊರೆತಿದೆ. ನಮ್ಮ ಜಿಲ್ಲೆಗೆ ಕೀರ್ತಿ ತಂದ ಈ ನಾಲ್ಕು ಯುವಕರು ಅಭಿನಂದನಾರ್ಹರಿರುತ್ತಾರೆ. ದುರ್ದೈವದಿಂದ ನಮ್ಮ ಜಿಲ್ಲೆಯ ಬಡವರಿಗೆ ಇಷ್ಟು ದಿನ ಉಚ್ಚ ವಿಶ್ವ-ವಿದ್ಯಾಲಯೀನ ಶಿಕ್ಷಣದ ಸೌಕರ್ಯ ಇದ್ದಿಲ್ಲ. ಆದರೆ ಡಾ|| ಬಾಳಿಗಾರವರಂತಹ ಪುಣ್ಯಾತ್ಮರ ದಯೆಯಿಂದಲೂ ಜಿಲ್ಲೆಯ ಪ್ರಮುಖರ ಸತತ ಪ್ರಯತ್ನಗಳ ಫಲದಿಂದಲೂ ಈಗ ನಮ್ಮಲ್ಲಿ ಕೆನರಾ ಕಾಲೇಜು ಸ್ಥಾಪಿತವಾಗಿದೆ. ಈ ಕಾಲೇಜಿನಲ್ಲಿ ಶಿಕ್ಷಣದ ಸಕಲ ಸೌಕರ್ಯಗಳು ಒದಗಿಸಲ್ಪಟ್ಟಿವೆ. ಈ ಕಾಲೇಜಿನಲ್ಲಿರುವಂತಹ ಶಾಸ್ತ್ರೀಯ ವಿಷಯಗಳ ಶಿಕ್ಷಣದ ಸೌಕರ್ಯ—ಪ್ರಯೋಗ ಶಾಲೆಯ ಸೌಕರ್ಯಗಳು — ಕರ್ನಾಟಕದ ಇಲ್ಲವೆ ದಕ್ಷಿಣ ಮಹಾರಾಷ್ಟ್ರದ ಇನ್ನಾವ ಕಾಲೇಜಿನಲ್ಲೂ ಇರುವದಿಲ್ಲೆಂದು ಹೇಳುತ್ತಾರೆ. ದೇವರ ಕೃಪೆಯಿಂದ ದೊರೆತ ಈ ಉಚ್ಚ-ಶಿಕ್ಷಣದ ಸೌಕರ್ಯದ ಪೂರ್ಣ ಲಾಭವನ್ನು ನಮ್ಮ ಜಿಲ್ಲೆಯ ವಿದ್ಯಾರ್ಥಿವರ್ಗವು ಪಡೆಕೊಂಡು, ವಿಶ್ವವಿದ್ಯಾಲಯೀನ ಶಿಕ್ಷಣ ಕ್ಷೇತ್ರದಲ್ಲೂ ತಮ್ಮ ಬುದ್ಧಿಮತ್ತೆಯ ಪ್ರಭಾವವನ್ನು ತೋರಿಸುವರೆಂಬ ಆಶೆಯಿದೆ.

* *

ಕೆಲವು ದಿನಗಳಿಂದ ಮುಂಬಯಿಯ ಪೇಟೆಯಲ್ಲಿ "ಪೆನ್ಸಿಲಿನ" ಔಷಧ (ಇದೊಂದು ದಿವ್ಯ ಔಷಧಿಯಾಗಿರುತ್ತದೆ.) ದುರ್ಮಿಳವಾದ್ದರಿಂದಲೂ ಇದ್ದ ಸಂಗ್ರಹವು ಕಪ್ಪ ಪೇಟೆಯಲ್ಲಿ ಸೇರಿದ್ದರಿಂದಲೂ ಸರಕಾರದವರು ಸ್ವತಃ ಇಂಗ್ಲಂಡದಿಂದ ಈ ಔಷಧಿಯನ್ನು ತರಿಸಿ, ತಮ್ಮ ಅಧಿಕಾರಿಗಳ ಮುಖಾಂತರ ಅದನ್ನು ಬೇಕಾದವರಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ ಕಾರವಾರದ ಸಿವ್ಹಿಲ್ ಸರ್ಜನರು ಈ ಔಷಧಿಯ ಸಂಗ್ರಹವನ್ನಿಟ್ಟುಕೊಂಡು ಅವಶ್ಯವಿದ್ದವರಿಗೆ ಅವಶ್ಯವಿದ್ದಷ್ಟು ಮಾರಾಟ ಮಾಡಬೇಕೆಂಬ ವ್ಯವಸ್ಥೆಯಾಗಿದೆ. ಸ್ಥಾಯುಘುರ ಪೆನ್ಸಿಲಿನಿನ ೩ ಲಕ್ಷ ಯುನಿಟ್ಟುಗಳ ಬಾಟಲಿ (vial) ೧೮ ಪಂ ರೂ. ೩-೦-೩, ಗ್ಲೂಕೋಸ್ ಪೆನ್ಸಿಲಿನಿನ ೧ ಲಕ್ಷ ಯುನಿಟ್ಟಿನ ಬಾಟಲಿಗೆ ರೂ ೧-೩-೦, ೨ ಲಕ್ಷ ಯುನಿಟ್ಟಿನ ಬಾಟಲಿಗೆ ರೂ. ೧-೯-೦, ೫ ಲಕ್ಷ ಯುನಿಟ್ಟಿನ ಬಾಟಲಿಗೆ ರೂ. ೨-೧೨-೦, ೧೦ ಲಕ್ಷ ಯುನಿಟ್ಟಿನ ಬಾಟಲಿಗೆ ರೂ ೪-೧೨-೦ ಎಂದು ಮಾರಾಟದ ದರಗಳೂ ನಿಶ್ಚಿತವಾಗಿವೆ. ಜಿಲ್ಲೆಯೊಳಗಿನ ಸರಕಾರಮಾನ್ಯ ವೈದ್ಯೋಪಾಧಿ ಡಾಕ್ಟರರು ಯಾರೊಬ್ಬರಿಗೆ ಈ ಔಷಧಿ ಇಂಜೆಕ್ಷನ್ ಬೇಕೆಂದು ಶಿಫಾರಸ-ಪತ್ರ ಕೊಟ್ಟಲ್ಲಿ, ಆ ಪತ್ರ ತೋರಿಸಿದವರಿಗೆ ಸರ್ಜನರು ಮೇಲಿನಂತೆ ಬೆಲೆ ತಕ್ಕೊಂಡು ಶಿಫಾರಸ-ಪತ್ರದಲ್ಲಿ ಕಾಣಿಸಿದಷ್ಟು ಔಷಧಿಯನ್ನು ಕೊಡುವರು.

* *

ನಮ್ಮ ಸರ್ಜನರು ಇರುವದು ಕಾರವಾರದಲ್ಲಿ. ಆ ಕಾರವಾರವು ಜಿಲ್ಲೆಯ ಒಂದು ತುದಿಯಲ್ಲಿದ್ದಂತೆ ಇದೆ. ಸಿರ್ಸಿ, ಸಿದ್ದಾಪುರ, ಭಟಕಳ, ಹೊನ್ನಾವರ ಮೊದಲಾದ ಇನ್ನೊಂದು ಬದಿಯ ಊರುಗಳ ಇಲ್ಲವೆ ತಾಲೂಕ-ಪೇಟೆಗಳ ಜನರಿಗೆ ಆ ಕಾರವಾರ ಪಟ್ಟಣಕ್ಕೆ ಹೋಗಿ ಬರಲು ಎಷ್ಟು ಕಷ್ಟವಾಗುತ್ತಿದೆ, ಎಷ್ಟು ಕಾಲ ಬೇಕಾಗುತ್ತಿದೆಂಬುದನ್ನು ಎಲ್ಲರೂ ಬಲ್ಲರು. ಮುಂಬಯಿ ಸರಕಾರದ ಮುಖ್ಯ ಮುಖ್ಯ ಮಂತ್ರಿಗಳೂ ಈ ಮಾತನ್ನು ಸ್ವತಃ ನೋಡಿದ್ದಾರೆ ಸಹ. ಹಾದಿಯಲ್ಲಿ ೨-೩ ಘಾಟಿಗಳನ್ನು ದಾಟಬೇಕು. ಆದರಲ್ಲೂ ಮಳೆಗಾಲದಲ್ಲಿ ಹೊಳೆಗಳು ತುಂಬಿದರೆ ಕೇಳಿಕು. ನೇರಾಗಿ ಪೆನ್ಸಿಲಿನ ಔಷಧಿ ಬೇಕಾಗುತ್ತಿರುವದು ರೋಗಿಯ ಪ್ರಕೃತಿ ವಿಕೋಪಕ್ಕೆ ಹೋದಾಗ, ಜೀವಾಂತಕ ಸ್ಥಿತಿಗೆ ಮುಟ್ಟಿದಾಗ. ಯಾವನೊಬ್ಬ ರೋಗಿಗೆ ಪೆನ್ಸಿಲಿನ್ ಇಂಜೆಕ್ಷನ್ ಕೊಡುವದು ಅವಶ್ಯವೆಂದು ಡಾಕ್ಟರರು ಅಭಿಪ್ರಾಯ ಪಟ್ಟು ಶಿಫಾರಸ-ಪತ್ರ ಕೊಟ್ಟಾಗ, ಆ ಪತ್ರವನ್ನು ಕಾರವಾರದಲ್ಲಿರುವ ಸರ್ಜನರಿಗೆ ಮುಟ್ಟಿಸಿ, ಅವರಿಂದ ಪೆನ್ಸಿಲಿನ ಪಡೆಕೊಂಡು ರೋಗಿಯ ಆಪ್ತನು ರೋಗಿಯಿದ್ದಲ್ಲಿ ತಿರುಗಿ ಬಂದು ಮುಟ್ಟುವಷ್ಟರಲ್ಲಿ ಆ ರೋಗಿಯು ಬದುಕಿ ಉಳಿಯುವನೆಂಬ ಭರವಸೆ ಹಿಡಿಯಲಾಗುತ್ತಿದೆಯೋ! ಜಿಲ್ಲೆಯ ಈ ಪರಿಸ್ಥಿತಿಯನ್ನು ಪರಾಂಬರಿಸಿ ಸರಕಾರದವರು ನಮ್ಮ ಜಿಲ್ಲೆಯ ಮಟ್ಟಿಗಾದರೂ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ, ಕನಿಷ್ಟ ಪಕ್ಷಕ್ಕೆ ೪-೫ ಕೇಂದ್ರಗಳಲ್ಲಾದರೂ — ಉದಾಹರಣಾರ್ಥ ಮ್ಯುನಿಸಿಪಾಲಿಟಿಗಳಿದ್ದ ಊರುಗಳಲ್ಲಿ — ಅಸಿಸ್ಟಂಟ್ ಸಿವ್ಹಿಲ ಸರ್ಜನರಲ್ಲಿ ಜೋಪಾನಿಕೆಯನ್ನಿಟ್ಟು ಅಧಿಕಾರಿಗಳ ಇಲ್ಲವೆ ಪ್ರತಿಷ್ಠಿತ ಲೋಕ-ಸೇವಕರ ಮುಖಾಂತರ ಈ ದಿವ್ಯೌಷಧಿಯನ್ನು ಪೂರೈಸುವ ವ್ಯವಸ್ಥೆ ಮಾಡಬಹುದಿತ್ತಲ್ಲವೇ? ಇನ್ನಾದರೂ ಅದನ್ನು ಮಾಡಬಹುದಲ್ಲವೇ?

* *

ಎರಡು ವರ್ಷ ಯಾ ಹೆಚ್ಚಿಗೆ ಕಾಲ ಸಾಗುವಳಿ ಮಾಡದೆ ಬಂಜರಬಿಟ್ಟ ಖಾಸಗಿ ಮಾಲ್ಕಿಯ ಹೊಲ-ಭೂಮಿಗಳನ್ನು ಸರಕಾರವು ವಶಪಡಿಸಿಕೊಂಡು ಅವುಗಳ ಸಾಗುವಳಿಯ ವ್ಯವಸ್ಥೆ ಮತ್ತು ವಹಿವಾಟು ಮಾಡಬಹುದೆಂಬುದಾಗಿ ೧೯೪೬ನೇ ಇಸವಿಯ ಹೊಲ-ಸಾಗುವಳಿ ಮತ್ತು ಬೇಸಾಯ ಭೂಮಿಗಳ ಕಾನೂನಿನಲ್ಲಿ ವಿಧಿಸಲಾಗಿದೆ. ನಾಡಿನ ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಇಂತಹ ವ್ಯವಸ್ಥೆ ಅವಶ್ಯವಿರುತ್ತದೆಂದು ಹೇಳಲಾಗುತ್ತಿದೆ, ಮತ್ತು ಕಟ್ಟಳೆಗನುಸಾರವಾಗಿ ಈ ಮುಲ್ಕೀ ಅಧಿಕಾರಿಗಳು ಬಂಜರ ಬಿದ್ದಿರುವ ಖಾಸಗಿ ಒಡೆತನದ ಭೂಮಿಗಳ ಒಡೆಯರಿಗೆ "ನಿಮ್ಮ ಬಾಬ್ತು ಸಾಗುವಳಿಯಾಗದೆ ಇರುವ ಹೊಲದ ವಹಿವಾಟನ್ನು ಸರಕಾರವು ಯಾಕೆ ವಹಿಸಿಕೊಳ್ಳಬಾರದೆಂಬುದಕ್ಕೆ ೧೫ ದಿನಗಳ ಕಾರಣ ತೋರಿಸಿರಿ" ಎಂಬರ್ಥದ ನೋಟೀಸುಗಳನ್ನು ತೆಗೆಯಲಾರಂಭಿಸಿದ್ದಾರೆ. ನಮ್ಮ ಜಿಲ್ಲೆಯ ಈ ವರ್ಷ ಇಂತಹ ಸಾವಿರಾರು ನೋಟೀಸುಗಳು ಹೊರಟಿವೆಂದು ತಿಳಿಯುತ್ತದೆ. ಆದರೆ ಒಡೆಯರು ಕಿಸ್ತ ದಂಡ ತೆತ್ತು ತಮ್ಮ ಭೂಮಿಗಳನ್ನು ಬೇಕೆಂದೇ ಅಥವಾ ಸೋಮಾರಿತನದಿಂದ ಪಡವಿಟ್ಟಿರೆಂದು ಯಾರೂ ನಂಬುವಂತಿಲ್ಲ. ಭೂಮಿಗೆ ಪಡಬೀಳಲು ಅಂತಹ ಅನಿವಾರ್ಯ ಅಡಚಣಿಗಳಾವುವಾದರೂ ಉಪಸ್ಥಿತವಾಗಿರಬೇಕೆಂದು ವಿಚಾರ-ಶಕ್ತಿಯುಳ್ಳ ಯಾವಾತನೂ ಕೂಡಲೇ ಗ್ರಹಿಸುವ. ಸರಕಾರಕ್ಕೆ ಆಹಾರ—ಸಮೃದ್ಧಿಯನ್ನು ಪಡೆಯಬೇಕೆಂಬುದಿಷ್ಟೇ ಇದ್ದರೆ ಮತ್ತು ವಿಚಾರವಿರುತ್ತಿದ್ದರೆ ಸಹೃದಯ ಬುದ್ಧಿಯಿಂದ ಈ ಅಡಚಣೆಗಳನ್ನು ತಿಳಕೊಂಡು ಅವನ್ನು ಪರಿಹರಿಸುವ ಕಾರ್ಯವನ್ನು ಹುಡುಕಲು ಮೊದಲು ಮಾಡಬೇಕು. ಅದರ ಪರಿಹಾರವಾದ ಮೇಲೂ ಯಾರೊಬ್ಬರು ಮಂ

ಕ್ಷ ಇಲ್ಲವೆ ನಿರ್ಲಕ್ಷ್ಯತನದಿಂದ ಭೂಮಿಗಳನ್ನು ಬಂಜರ ಇಟ್ಟರೆ ಆಗ ಸರಕಾರವು ಅವನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮ ಕೈಕೊಳ್ಳುವದು ಯುಕ್ತವಾದೀತು. ಉದಾಹರಣಾರ್ಥ ಹಣದ ಅಡಚಣೆಯಿಂದಾಗಿ ಕಟ್ಟುಗಳ ದುರುಸ್ತಿ ಮಾಡಲಾಗದೆ ಹಾಗೆಯೇ ಬಿಟ್ಟು ಬಿಡಬೇಕಾದ ಗಜನಿಗಳಿವೆ. ಅವುಗಳ ಒಡೆಯರಿಗೆ ಸರಕಾರವು ಸಾಲ ಕೊಟ್ಟು ಹಣದ ಅಡಚಣಿ ದೂರ ಮಾಡಲು ಸಹಾಯ ಮಾಡಬೇಕು. ಹಾಗೇನೂ ಮಾಡದೆ ಖಾಸಗಿ ಭೂಮಿಗಳನ್ನು ಸರಕಾರವು ವಶ ಪಡಿಸಿಕೊಳ್ಳುವದು ಅನ್ಯಾಯವಾಗುವದು, ಅಕ್ರಮತನವಾಗುವದು.

***

ನಾಡಿನ ಆಹಾರೋತ್ಪತ್ತಿಯನ್ನು ಹೆಚ್ಚಿಸುವದೇ ಸರಕಾರದವರ ಪ್ರಧಾನ ಉದ್ದೇಶವಾಗಿದ್ದರೆ ಅವರು ಖಾಸಗಿ ಒಡೆತನದ ಭೂಮಿಗಳನ್ನು ವಶಪಡಿಸಿಕೊಳ್ಳುವ ಮೊದಲು ತನ್ನ ವಶಕ್ಕಿದ್ದ ಪಡ ಭೂಮಿಗಳನ್ನು ಸಾಗುವಳಿಯಲ್ಲಿ ತರಬೇಕಲ್ಲವೇ! ಒಡೆಯರ ಪಡ ಭೂಮಿಗಳನ್ನು ಸಾಗವಳಿಯಲ್ಲಿ ತರಲು ಮುಂದಾಗುವ ಸರಕಾರಕ್ಕೆ ತನ್ನ ಪಡ ಭೂಮಿಗಳನ್ನು ಸಾಗುವಳಿಯಲ್ಲಿ ತರುವ ಸಾಮರ್ಥ್ಯವಿಲ್ಲವೇ? ನಮ್ಮ ಜಿಲ್ಹೆಯಲ್ಲಿ ಈಗ ಸರಕಾರಿ ಪಡ ಭೂಮಿಗಳಿಗೇನೂ ಕೊರತೆಯಿಲ್ಲ! ಆ ಪಡಭೂಮಿಗಳೆಲ್ಲ ಸಾಗುವಳಿಯಲ್ಲಿ ಬಂದರೆ ಅವುಗಳ ಉತ್ಪನ್ನದಿಂದ ಲಕ್ಷಾವಧಿ ಜನರ ಜೀವನ ಸಾಗುವಂತಿದೆ. ಆದರೆ ಅವುಗಳನ್ನು ಕೂಡಲೇ ಸಾಗುವಳಿಯಲ್ಲಿ ತಂದು ನಾಡಿನ ಆಹಾರ ಸಮಸ್ಯೆಯನ್ನು ಬಿಡಿಸಲು ನಿಜವಾಗಿಯೂ ನೆರವಾಗಬೇಕೆಂಬ ಉತ್ಕಂಠೆ ನಮ್ಮ ಸರಕಾರಕ್ಕೆ ಇಲ್ಲವೇ? ಪಡ ಬಿದ್ದಿರುವ ಈ ಭೂಮಿಗಳನ್ನು ಯಾರಾದರೂ ಹಂಗಾಮಿ ಲಾಗಣಿಗೆ ಬೇಡಿದರೆ, ಅವರ ಅರ್ಜಿಗಳ ವಿಚಾರ ಕೂಡಲೇ ಆಗುವದಿಲ್ಲ! ಅರ್ಜಿಗಳ ವಿಚಾರವಾದರೂ ಅವು ಮಂಜೂರ ಆಗುವದು ಕಷ್ಟ! ಸ್ವಂತ ಕಬಜೆಯಲ್ಲಿದ್ದ ಈ ಭೂಮಿಗಳನ್ನು ಸಾಗುವಳಿಯಲ್ಲಿ ತರಲಾಗದ ಸರಕಾರವು ಖಾಸಗಿ ಒಡೆತನದ ಬಂಜರ ಭೂಮಿಗಳನ್ನು ಸಾಗುವಳಿಯಲ್ಲಿ ತರುವ ಕಾರ್ಯಕ್ಕೆ ಯಾಕೆ ಕೈಹಾಕಬೇಕು? ಮನೆಯ ಮಕ್ಕಳಿಗೆ ಹೊಟ್ಟೆಗೆ ಹಾಕಲಾರದ ಗೃಹಸ್ಥನು ಊರ ಮಕ್ಕಳ ಪಾಲನ-ಪೋಷಣೆ ಎಂತು ಮಾಡಬಲ್ಲನು?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಸೋಮ-ಮಂಗಳವಾರ ಮಳೆ ಬಿದ್ದಿತ್ತು. ಆದರೆ ಬುಧವಾರದಿಂದ ಪುನಃ ದಿನಾಲು ಬಿಸಿಲಾಗುತ್ತಿವೆ. ಬಾವಿಗಳಿಗೆ ಝರಿಗಳು ಬಿಟ್ಟವೆ. ಕಳೆದ ವಾರ [illegible] ಇಂಚು ಮಳೆಯಾಗಿದೆ.

ನಿನ್ನೆ ಸಂಜೆ ಇಲ್ಲಿಯ ಕಾಲೇಜ ಸಮಿತಿಯು ಕಾಲೇಜ ಸಭಾಮಂದಿರದಲ್ಲಿ ಕೂಡಿತ್ತು. ಸಮಿತಿಯ ಅಧ್ಯಕ್ಷ ... ಶ್ರೀ ಗೋಪಾಳ ಮಾಸ್ತರರು ... ಈ ಸಭೆಗಾಗಿ ಮುಂಬಯಿಯಿಂದ ಬಂದಿದ್ದರು. ಕಾಲೇಜಿನ ... ಪತ್ರಕ ... ಯಾವನೂ ಒಂದು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ... ಎಂಬವರ ನಿಯುಕ್ತಿಯಾಯಿತೆಂದು ತಿಳಿಯುತ್ತದೆ ... ಜೊತೆಗೆ ಮುಂಬಯಿಯ ... ಮಂತ್ರಿ ... ದಿನಾಂಕ ... ಕಾಲೇಜಿನ ... ತೆರೆದರು. ಹಿಂದೆ ಪ್ರಕಟವಾಗಿದ್ದಂತೆ ಆದರೆ ...

ಬಾಲಿಶ ಆಹಾರ ಇಲಾಖೆಯ ಸಂಬಂಧದ ವಿಷಯದ ಪೇರಿ ಕೆಲಸ ನಡೆದು ಬಂದದ್ದರಿಂದ ಮಂತ್ರಿಗಳು ತಮ್ಮ ಸಂಕಲ್ಪಿತ ಕಾರ್ಯಕ್ರಮವನ್ನು ರದ್ದುಗೊಳಿಸಿದರೆಂದು ತಿಳಿಯುತ್ತದೆ.

ಮೇ ತಿಂಗಳ ಸಕ್ಕರೆ ಹಂಚಿಕೆ ಆರಂಭವಾಗಲಿಲ್ಲ ಅದು ಎಂದು ಸಿಗುವದೋ ತಿಳಿಯದು!

ಜಿಲ್ಹಾ ಸಮಾಚಾರ (೪ನೇ ಪುಟದಿಂದ ಮುಂದೆ)

... ಎಷ್ಟು ಕಾಲ ಹಾಗೆ ಮಾಡುವಲ್ಲರು? ಅದರಿಂದ ಚಿಕ್ಕನಕೋಡಿನ ರೈತ ಕೂಟವು ಬಂದಿಲ್ಲೆಂದು ದಿನ ಸಹರ ... ಒಕ್ಕಲಿಗರಿಗೆ, ತಾವು ಪಿರೋಟಿ ಸಿಗ ಕೊಟ್ಟು ... ಬಾವಿಯಲ್ಲಿ ... ಮುಚ್ಚಿಬಿಟ್ಟರೆಂಬ ಭೀತಿ ಇನ್ನೂ ಉಂಟು. ಅಂತಹ ... ಘಟಿಸದಂತೆ ಜಿಲ್ಹಾಧಿಕಾರಿಗಳು ಮುಂಜಾಗ್ರತೆಯನ್ನು ... ಆತಕಮಾಡಿ ... ಜನಾಬಾದ ಪಗ್ಗಿರಿ ... ರಿಗೆಳಿಗೆ ಈ ಕೆಲಸ ಒಪ್ಪಿಸಿದರೆ ಕೆಲಸವಾಗುವಂತಿಲ್ಲ, ರೈತ ಕೂಟವು ಅವರಿಗೆ ಸೊಪ್ಪು ಹಾಕುವಂತಿಲ್ಲ, ಎಂದು ಸ್ಥಾನಿಕ ಮಾಹಿತಿಯುಳ್ಳ ಜನರು ಹೇಳುತ್ತಾರೆ.

ಕಾರವಾರ— (ತಾ. ೩-೬ ೫೦) ಮೊನ್ನೆ ಇಲ್ಲಿ ನೆರೆದ ಜಿಲ್ಲಾ ಲೋಕಲ್ ಬೋರ್ಡಿನ ಸಭೆಯಲ್ಲಿ ಕನ್ನಡ ಕೊಡೇಜಿನ ಬೂ. ೧೦೦೧ ಮಂತಿಗೆ ಕೊಡಬೇಕೆಂಬ ನಿರ್ಣಯ ಪಾಸಾಯಿತು.

ಕನ್ನಡ ಜಿಲ್ಹಾ ಲೋಕಲ್ ಬೋರ್ಡಿನ ರಚನೆಯಲ್ಲಿ ಕೆಲವೊಂದು ಮಹತ್ವದ ತಿದ್ದುಪಾಟುಗಳನ್ನು ಮುಂಬಯಿ ಸರಕಾರವು ಸೂಚಿಸಿದೆಂದು ತಿಳಿಯುತ್ತದೆ. ಈ ಪ್ರಕಾರ ಬೋರ್ಡಿನ ೩೦ ಸದಸ್ಯ ಸ್ಥಾನಗಳಲ್ಲಿ ೧ ಸ್ತ್ರೀಯರಿಗಾಗಿ, ... ಮುಸಲ್ಮಾನರಿಗಾಗಿ, ೧ ಹರಿಜನರಿಗಾಗಿ ಮತ್ತು ೧ ... ಸ್ಥಾನಗಳು ಮೀಸಲಾಗಿರುತ್ತವೆ ... ಸ್ತ್ರೀಯರಿಗಾಗಿ ೩ ಮತ್ತು ಪರಿಶಿಷ್ಟ ವರ್ಗದವರಿಗಾಗಿ ೩ ಹೀಗೆ ೬ ಸ್ಥಾನಗಳು ಕಾದಿಸಲ್ಪಡುವ ... ಬಗ್ಗೆ ಯೋಜನೆ ಇರುವದಂತೆ.

ಜಿಲ್ಹಾ ಲೋ. ಬೋರ್ಡಿನವರು ೧೯೫೦-೫೧ನೇ ಸಾಲಿಗಾಗಿ ರೂ ೧೬,೫೬,೮೭೭ ರ ವೆಚ್ಚದ ಅಂದಾಜಪತ್ರಿಕೆಯನ್ನು ತಯಾರಿಸಿ ಮಂಜೂರಿಗಾಗಿ ಮೇಲಧಿಕಾರಿಗಳಿಗೆ ಕಳಿಸಿದ್ದರು. ಆ ಅಧಿಕಾರಿಗಳು ವೆಚ್ಚದಲ್ಲಿ ರೂ. ೧,೫೭,೪೭೭ದಷ್ಟು ಕಡಿತ ಮಾಡಲು ಆಜ್ಞೆ ಕೊಡುತ್ತಾರೆಂತ ಹೀಗೆ ವೆಚ್ಚದಲ್ಲಿ ಕಡಿತ ಮಾಡಿದರೆ ಒತ್ತಾಯದ ಶಿಕ್ಷಣದ ಯೋಜನೆಯ ಪ್ರಗತಿ ಕುಗ್ಗುವ ಬಗೆಯೇನೆಂದು ಬೋರ್ಡಿನ ಪ್ರಮುಖರು ಚಿಂತೆ ಮಾಡುತ್ತಾರೆ.

ಕಾರವಾರ, ಹಳಿಯಾಳ ತಾಲೂಕುಗಳ ಮರಾಠೀಭಾಷಾ-ಪ್ರದೇಶವೆಂದು ಕರೆಯಲ್ಪಡುತ್ತಿರುವ ಪ್ರದೇಶದ ... ಕನ್ನಡ ಶಾಲೆಗಳನ್ನು ... ಪ್ರಕಟಗೊಳಿಸಿದ್ದರೆ ಈ ದ್ವಿಭಾಷಾ-ಪ್ರದೇಶಗಳ ಶಾಲೆಗಳ ... ಹಿಂದಿನಂತೆ ಕನ್ನಡವಲ್ಲದೆ ಇತರ ... ಆದರೆ ಕನ್ನಡದವರಿಗೆ ... ಬರೆದ ... ಮುಂತಾದವುಗಳನ್ನು ... ಅಂತಹ ಅರ್ಜಿಗಳ ... ಹೊರಟಿವೆ ... ಕನ್ನಡಿಗರ ಜನರಿಗೆ ... ಶಾಲೆಗಳ ... ಮುಂತಾದವುಗಳು ... ಹೀಗಾಗಿ ... ಕನ್ನಡ ... ಜಿಲ್ಹಾ ... ಪ್ರಕಟ ...

ಇಲ್ಲಿಯ ಕೊಂಕಣಿ ಮತ್ತು ಮರಾಠಿ ಕಾರ್ಯಕರ್ತರು ಜನರ ಪರವಾಗಿ ಹಲವಾರು ವಕೀಲರೂ ವ್ಯಾಪಾರಸ್ಥರೂ ಹಿಂದೆ ಸರಕಾರದ ಉಪ-ಮುಖ್ಯ-ಪ್ರಧಾನ ಸರದಾರ ವಲ್ಲಭಭಾಯಿ ಪಟೇಲರಿಗೆ ಒಂದು ಮನವಿ ಕಳಿಸಿ, ಕನ್ನಡಿಗರಿಂದ ಕಾರವಾರ ತಾಲೂಕಿನ ರಕ್ಷಣೆ ಮಾಡಬೇಕು, ಕಾರವಾರ ಬಂದರದ ಅಭಿವೃದ್ಧಿ ಮಾಡಬೇಕು, ಕೊಂಕಣಿ-ಮರಾಠಿ ಮಾತಾಡುವ ಜನರ ಭಾಷೆ-ಸಂಸ್ಕೃತಿ ... ರಕ್ಷಣೆ ಮಾಡಬೇಕು, ಕಾರವಾರದ ಅಭಿವೃದ್ಧಿಯಾದಲ್ಲಿ ತಮ್ಮ ಧಾರವಾಡ-ಹುಬ್ಬಳ್ಳಿಗಳ ಮಹತ್ವ ಕಡಿಮೆಯಾಗುವದೆಂಬ ಭೀತಿಯಿಂದ ಕರ್ನಾಟಕದ ಧುರೀಣರೆನಿಸಿಕೊಳ್ಳುವ ಪ್ರಾಂತಿಕ ಕಾಂಗ್ರೆಸ್ಸಿಗರು ಕಾರವಾರದ ಅಭ್ಯುದಯವನ್ನು ವಿರೋಧಿಸುತ್ತಿದ್ದಾರೆ, ಅವರ ಸ್ವಾರ್ಥ ಮತ್ತು ಅನಾಥ ... ಬಲಿ ಕೊಡಬಾರದು ಎಂದು ಮುಂತಾಗಿ ಬೇಡಿಕೊಂಡಿದ್ದಾರೆ. ಈ ಮನವಿಯ ಪ್ರತಿ ಕರ್ನಾಟಕದ ಕೆಲವು ಮುಖಂಡರ ಕೈಗೂ ತಲುಪಿ ಹೋಗಿದೆ!

ಕಡವಾಡ ಕನ್ನಡ ಶಾಲೆಗೆ ಅಲ್ಲಿಯ ನಾಗರಿಕರಿಂದ ಅನಂತ ನಾಯಕರು ಶಾಲೆಯ ಮಕ್ಕಳಿಗೆ ನೀರು ಕುಡಿಯಲು ಅನುಕೂಲವಾಗಲೆಂದು ೧ ತಾಂಬ್ರದ ಹಂಡೆಯು ಮತ್ತು ೨ ಪೇಲೆಗಳನ್ನು (ಅಂದಾಜ ಕಿಮ್ಮತ್ತು ೩೧-೧೦-೦) ಧರ್ಮಾರ್ಥ ಕೊಟ್ಟಿರುತ್ತಾರೆ. ೧ ಪಾಂಗಟ ತಂಗಿಕೊಳ್ಳುವ ಆಸ್ವಾಸನ ಕೊಟ್ಟಿದ್ದಾರೆಂದೂ ಆ ಶಾಲೆಯ ಮುಖ್ಯಾಧ್ಯಾಪಕರು ತಿಳಿಸುತ್ತಾರೆ.

ಕಾರವಾರದಲ್ಲಿ ಇಷ್ಟರಲ್ಲಿಯೇ ತಾಲೂಕು ಪಂಚಾಯತ ಕಚೇರಿಯೊಂದು ತೆರೆಯಲ್ಪಟ್ಟಿದೆ. ರೈತರಿಗೆ ಬೇಕಾಗುವ ಗೊಬ್ಬರ ಪೂರೈಸುವದು, ಅವರ ದನಗಳಿಗೆ ಬೇಕಾಗುವ ಹಿಂಡಿ ಮುಂತಾದವುಗಳನ್ನು ಪೂರೈಸುವದು ಇವೇ ಈ ಕಚೇರಿಯ ಅಧಿಕಾರಿಯ ಕೆಲಸ. ಆದರೆ ಈ ಅಧಿಕಾರಿಯು ಕಡವಾಡದಲ್ಲಿರುವನಲ್ಲ! ತಿಂಗಳಿಗೆ ೨ ಯಾ ೩ ಸಾರೆ ಇಲ್ಲಿಗೆ ಬಂದು ದರ್ಶನ ಕೊಟ್ಟು ಹೋಗುತ್ತಾನೆ! ಆದರಿಂದ ಈ ಕಚೇರಿಯ ಪ್ರಯೋಜನ ಜನರಿಗೆ ಸಿಗುವದು ಅಷ್ಟಕ್ಕಷ್ಟೇ! ಈ ಕಚೇರಿಯಲ್ಲಿ ಕೆಲವು ದಿನಗಳ ಹಿಂದೆ ಶೇಂಗಾ-ಹಿಂಡಿ ಬಂದಿತ್ತು. ಅದನ್ನು ಜನರಿಗೆ ಹಂಚಿರುವದಿಲ್ಲ! ಹಿಂಡಿಗಾಗಿ ಬಂದ ಜನರು ಕಚೇರಿ ಮುಚ್ಚಿದ್ದು ನೋಡಿ ಬರಿಗೈಯಿಂದ ತಿರುಗಿ ಹೋಗುತ್ತಾರೆ! ಅವರೂ ಹಿಂಡಿಯು ಕೆಲವು ಚೀಲಗಳು ಇಷ್ಟರಲ್ಲೇ ಹಾಳಾಯಿತಾಗಿ ಮೆಯುಂಚ! ಈ ಅವ್ಯವಸ್ಥೆ ಯಾತಕ್ಕಾಗಿದೆಂದು ಮೇಲಧಿಕಾರಿಗಳು ಚೌಕಶಿ ಮಾಡಬೇಕು.

ಜಾಹೀರ ಪ್ರಕಟನೆ.

ನಮ್ಮಲ್ಲಿ ಗಳ್ಳನ್ನಾಳ್ಳ ಕರೋಗೇಟ ತಗಡು, ಗಾಡಿ ... ಕಾಂಕ್ರೀಟ ಕಬ್ಬಿಣ, ಅರ್ಥ ಇಂಚಿನ ಗೋಲ ಸರಳುಗಳು ಬಂದಿರುತ್ತವೆ. ಕುಮಟಾ, ಹೊನ್ನಾವರ, ಅಂಕೋಲಾ, ಕಲಭಾಗ, ಕತಗಾಲ, ಹೊಳೆಗದ್ದೆ, ಊರಕೇರಿ, ಕೋಡ್ಕಣಿ, ಮಿರ್ಜಾನ, ಹೊಸ ಹೆರವಟ್ಟಾ, ಮಾಸೂರು, ದೀವಗಿ, ಕಲವೆ ಮುಂತಾದ ಊರಿನವರೂ ಸುತ್ತಲಿನ ಜನರು ಮೇಲಿನ ಸಾಮಾನುಗಳ ... ಬೇಕಾದರೆ ಬಗ್ಗೆ ... ಮುಂತಾದ ... ತಾರೀಖು ... ಅದರ ... ಮಾಡಿಕೊಳ್ಳಬೇಕು ... ಬಂದು ... ವಿನಂತಿ ಇದೆ

ತಾ. ೪ ೬-೧೯೫೦ ಮೆನೇಜಿಂಗ ಡಿರೆಕ್ಟರ,

ಅಡಕೆ ಮಾರಾಟದ ಸೊಸೈಟಿ, ಕುಮಟಾ

ಜಿಲ್ಲಾ ಸಮಾಚಾರ.

ಸಿದ್ದಾಪುರ— [illegible]

[illegible]

ಶಿರ್ಶಿ— [illegible]

[illegible]

ಹೊನ್ನಾವರ— [illegible]

[illegible]

[illegible] (casting) [illegible]

[illegible]

(೨ ನೇ ಪುಟದ ಮೇಲೆ ಮುಂದರಿಕೆ.)

ಪ್ರಕಟನೆ.

ಧಾರವಾಡ [illegible]

[illegible]

ಧಾರವಾಡ, [illegible}

ಜಿ. ಆರ್. ನಲವಡಿ, ಚೇರಮನ್.

ಪ್ರಯಾಣಿಕರ ಇಂದಿನ ಅವಶ್ಯಕತೆ ?

ಸ್ವಚ್ಛತೆ ! ವೇಳೆ ! ! ಸೌಕರ್ಯ ! ! !

ಹಾಗಾದರೆ—ಸದಾ ಸಂದರ್ಶಿಸಿರಿ

ದಿ ಕೆನರಾ ಲೊಜ

[ಊಟ ಹಾಗೂ ವಸತಿಯ ನಡುಕೇಂದ್ರ]

(ಕೆನರಾ—ಬೊರ್ಡಿಂಗ)

ಮೋಟರ-ಸ್ಟೆಂಡ, ಹುಬ್ಬಳ್ಳಿ

[illegible]

ಮಾಲಕ:— ವ್ಹಾಳಪ್ಪಾ ಶೈ.

ಇದನ್ನು [illegible] ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270. Monday, 12-6-1950.

ವರ್ಗಣಿಯ ದರ.
ಕುಮಟೆಯಲ್ಲಿ ವರ್ಷಕ್ಕೆ ರೂ ೩.
ಅಂಚೆಯಿಂದ ವರ್ಷಕ್ಕೆ ೩-೮-೦
೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ,, ೦-೧-೬
ವ್ಹಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೫೦.

ಕುಮಟಾ:— ಸೋಮವಾರ, ತಾ ೧೨—೬—೧೯೫೦

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ಬಿಡಿಸ್ತ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಹಜ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ವಿವಿಧ ವಿಷಯಗಳು.

ಭಾರತ ಸರಕಾರದ ಹೊಸ ಆಹಾರ ಮಂತ್ರಿಗಳಾಗಿರುವ ಶ್ರೀ|| ಕನ್ಹಯ್ಯಲಾಲ ಮುನಶಿಯವರು ಹುರುಪಿನಿಂದ ತಮ್ಮ ಕಾರ್ಯ ಸಾಗಿಸಲಾರಂಭಿಸಿದ್ದಾರೆ ದೇಶದೊಳಗಿನ ಆಹಾರ-ಸಂಪತ್ತು ಕಡಿಮೆಯಾಗಲು ದೇಶದೊಳಗಿನ ವೃಕ್ಷ-ಸಂಪತ್ತಿನ ಹ್ರಾಸವು ಒಂದು ಪ್ರಮುಖ ಕಾರಣವಾಗಿರುವದಾಗಿ ಅವರು ಕಂಡು ಹಿಡಿದ, ಆ ಸಂಪತ್ತನ್ನು ಸಮೃದ್ಧಗೊಳಿಸುವ ಕಾರ್ಯವನ್ನು ಅವರು ಒಳ್ಳೇ ಆಸ್ಥೆಯಿಂದ ಕೈಕೊಂಡಿರುತ್ತಾರೆ. ಬರುವ ಜುಲೈಯ ತಿಂಗಳಲ್ಲಿ ದೇಶದೊಳಗಿನ ಎಲ್ಲ ಸರಕಾರಗಳೂ ಸಂಸ್ಥೆಗಳೂ ವೃಕ್ಷಾರೋಪಣದ ಮಾಸವನ್ನು ಆಚರಿಸಿ ಶಕ್ಯವಿದ್ದಲ್ಲಿ ಎಲ್ಲ ಗಿಡಗಳನ್ನು ನೆಡುವ ಯಾ ನೆಡಿಸುವ ಕೆಲಸ ಮಾಡಬೇಕಾಗಿ ಅವರು ಆದೇಶ ಕೊಟ್ಟಿರುತ್ತಾರೆ. ಶ್ರೀ ಕೃಷ್ಣನ ಜನ್ಮಭೂಮಿಯೂ, ಬಾಲ್ಯದ ಕ್ರೀಡಾರಂಗವೂ ಆದ ವೃಂದಾವನವು ಇಂದು ನಿರ್ವೃಕ್ಷ ಬಯಲುಭೂಮಿಯಾಗಿರುವದನ್ನು ನೋಡಿ ಶ್ರೀ|| ಮುನಶಿಯವರು ಮರುಗುತ್ತಾರೆ ಆ ಪುಣ್ಯಭೂಮಿಯಲ್ಲೂ ಗಿಡಗಳನ್ನು ರಾಜಘಾಟದಲ್ಲಿರುವ ಪುಣ್ಯಶ್ಲೋಕ ಮಹಾತ್ಮಾ ಗಾಂಧಿಯವರ ಸಮಾಧಿಯ ಸುತ್ತಲಿನ ಬಯಲು ಪ್ರದೇಶದಲ್ಲೂ ಈ ವರ್ಷ ೨—೨ ಸಾವಿರ ಗಿಡಗಳನ್ನು ನೆಡಬೇಕೆಂದು ಅವರು ನಿರ್ಧರಿಸಿದ್ದಾರೆ ದಿಲ್ಲಿ ನಗರ ಸುತ್ತು-ಮುತ್ತು ಕನಿಷ್ಠ ಪಕ್ಷಕ್ಕೆ ೧೦೦೦೦ ಗಿಡಗಳನ್ನು ಹಚ್ಚಬೇಕೆಂದು ಅವರ ನಿರ್ಧಾರವಾಗಿದೆ. ಈ ಬಗ್ಗೆ ದಿಲ್ಲಿಯಲ್ಲಿ ಜುಲಾಯಿ ತಾ. ೧ರಿಂದ ತಾ. ೮ರವರೆಗೆ ವೃಕ್ಷಾರೋಪಣ ಸಪ್ತಾಹವನ್ನು ಆಚರಿಸಬೇಕೆಂದು ಅವರು ಗೊತ್ತುಪಡಿಸಿ, ಆ ಕಾರ್ಯವನ್ನು ನೆರವೇರಿಸಲು ಉತ್ಸಾಹಿ ಕಾರ್ಯಕರ್ತರಿಂದೊಡಗೂಡಿದ ೨ ಸಮಿತಿಗಳನ್ನು ಸಹ ನೇಮಿಸಿರುತ್ತಾರೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ರಾಜಘಾಟದಲ್ಲಿ ಮಹಾತ್ಮರ ಸಮಾಧಿಯ ಸನ್ನಿಧಾನದಲ್ಲಿ ಮೊದಲನೇ ಗಿಡವನ್ನು ಸ್ವತಃ ತಮ್ಮ ಪವಿತ್ರ ಕರಕಮಲದಿಂದ ನೆಟ್ಟು ಈ ಸಪ್ತಾಹದ ಗಣಪತಿ-ಪೂಜೆ ಮಾಡಿಕೊಡುವರೆಂದು ತಿಳಿಯುತ್ತದೆ. ಭಾರತದಲ್ಲಿರುವ ವಿದೇಶಗಳ ರಾಯಭಾರಿಗಳೂ ಈ ಕಾರ್ಯದಲ್ಲಿ ಭಾಗ ವಹಿಸಲು ಒಪ್ಪಿದ್ದಾರಂತೆ. ರಾಷ್ಟ್ರಪತಿ ರಾಜೇಂದ್ರರಿಗೆ ತೋಟಗಾರಿಕೆಯಲ್ಲಿ ಬಹಳ ಆಸಕ್ತಿಯುಂಟು ಈಗ ತಾವು ಉಳಕೊಳ್ಳುತ್ತಿರುವ ರಾಜ--ಭವನದ ಆವಾರದಲ್ಲಿ ಒಳ್ಳೊಳ್ಳೇ ಹಣ್ಣು ಹೂಫಲಗಳ ಗಿಡಗಳನ್ನು ನೆಟ್ಟು ಅದನ್ನು ಅಂದ-ಚಂದವಾದ ಉದ್ಯಾನವನ್ನಾಗಿ ಮಾರ್ಪಡಿಸಬೇಕೆಂದು ಅವರು ನಿಶ್ಚಯಿಸಿರುತ್ತಿದ್ದು, ಈಗಾಗಲೇ ಬೇರೆ ಬೇರೆ ಜಾತಿಯ ಉತ್ಕೃಷ್ಟ ಹಣ್ಣಿನ ಗಿಡಗಳನ್ನು ಅಲ್ಲಿ ನೆಡಿಸಿರುತ್ತಾರೆ. ಇದೀಗ ಅವರು ಅಲ್ಲಿ ನೆಡುವದಕ್ಕೆಂದು ೫೦ ಉತ್ತಮೋತ್ತಮ ಮಾವಿನ ಗಿಡಗಳನ್ನು ಸಂಗ್ರಹಿಸಿಟ್ಟಿದ್ದಾರಂತೆ ಮಳೆ ಬೀಳಲು ಪ್ರಾರಂಭವಾಗುತ್ತಲೇ ಅವನ್ನು ನೆಡಲಾಗುವದು. ರಾಷ್ಟ್ರನಾಯಕರು ಪ್ರಚುರಗೊಳಿಸುತ್ತಿರುವ ಈ ವೃಕ್ಷ-ಸಂಪತ್ತಿನ ಬೆಳವಣಿಗೆಯು ರಾಷ್ಟ್ರಕ್ಕೆ ಹಿತಕಾರಿಯಾಗಿರುತ್ತದೆಂಬದಕ್ಕೆ ಸಂದೇಹವಿಲ್ಲ. ವೃಕ್ಷಸಂಪತ್ತು ವಿಪುಲವಿದ್ದಲ್ಲಿ ಮಳೆ ಸರಿಯಾಗಿ ಬೀಳುತ್ತದೆ, ಭೂಮಿಯಲ್ಲಿ ತಂಪು ಉಂಟಾಗುತ್ತದೆ, ಕೃಷಿಕರ್ಮವೂ ಸುಧಾರಿಸುತ್ತದೆ. ವೃಕ್ಷಗಳಿಂದ ಫಲ--ಪುಷ್ಪಗಳು, ಹಸಿ ಗೊಬ್ಬರ, ಉರುವಲು, ಇಮಾರತಿನ ಕಟ್ಟಿಗೆ ಮುಂತಾದವುಗಳಂತೂ ಸಿಕ್ಕೇ ಸಿಗುತ್ತವೆ. ಆದರಿಂದ ಸರಕಾರವು ಕೈಕೊಂಡ ಈ ವೃಕ್ಷಾರೋಪಣ ಕಾರ್ಯವು ನಿರುಪಯೋಗಿ ಇಲ್ಲವೆ ಅಲ್ಪಫಲದಾಯಿ ಇರುತ್ತದೆಂದು ಭಾವಿಸುವದಾಗಲಿ, ಇದೆಂತಹ ಹುಚ್ಚು, ಬಂಕಸ್ಸ್ ಎಂದ ಉಪಹಾಸ ಮಾಡುವದಾಗಲಿ ಸರ್ವಥಾ ಜಾಣತನದ್ದಾಗಲಾರದು. ಸರಕಾರವು ಕೈಕೊಂಡ ಈ ಕಾರ್ಯದ ಫಲವು ಇದೀಗಲೇ ಇಲ್ಲವೆ ಸಧ್ಯದಲ್ಲೇ ನಮಗೆ ಸಿಗದಿದ್ದರೂ ಕಾಲಾಂತರದಲ್ಲಿ ಸಿಗುವದೆಂಬ ವಿಶ್ವಾಸದಿಂದ ಸಮಸ್ತ ಜನರೂ ಸರಕಾರದ ಈ ಕಾರ್ಯದಲ್ಲಿ ಮನಸಾ ಸಹಕರಿಸಬೇಕಾಗಿ ವಿನಂತಿಯಿದೆ.

* *

ಭಾರತದ ಅರ್ಥ-ಸಚಿವರಾಗಿದ್ದ ಡಾ|| ಜ್ಹಾನ ಮಥಾಯಿಯವರ ಅಧಿಕಾರ-ಸನ್ಯಾಸವು ಅದೊಂದು ಖಾಸಗಿ ವಿಷಯ ಅಥವಾ ಉಪೇಕ್ಷಣೀಯ ಸಂಗತಿಯಾಗಿರದೆ ಸಧ್ಯದ ರಾಜ್ಯಾಡಳಿತದ ಧೋರಣೆಯ ಮತ್ತು ಕ್ರಮದ ಮಹತ್ವದ ವಿಷಯ ಆದರಲ್ಲಿ ಅಡಕವಾಗಿದೆ. ಡಾ|| ಮಥಾಯಿಯವರು ತಮ್ಮ ಅಧಿಕಾರ-ಸನ್ಯಾಸದ ತರುವಾಯ ದಿಲ್ಲಿಯೊಳಗೆ ಮಾಡಿದ ಒಂದು ಭಾಷಣದಲ್ಲಿ, ತಮಗೂ ಪ್ರಧಾನ ಮಂತ್ರಿಗಳಿಗೂ ಕೆಲವೊಂದು ವಿಷಯಗಳಲ್ಲಿ ಮಹತ್ವದ ಮತಭೇದಗಳುಂಟಾದುದರಿಂದ ತಾವು ರಾಜೀನಾಮೆ ಕೊಟ್ಟಿರುವದು ಉದ್ಗರಿಸಿದ್ದರು. ಆದರೆ ಆ ಮತಭೇದಗಳು ಯಾವ್ಯಾವ ವಿಷಯಗಳಲ್ಲಿ ಉಂಟಾದವು ಇಲ್ಲವೆ ಅವುಗಳ ಸ್ವರೂಪವೇನು ಎಂಬುದನ್ನು ಸಧ್ಯಕ್ಕೆ ಬಹಿರಂಗ ಪಡಿಸಿ ಸರಕಾರವನ್ನು ಕಷ್ಟದಲ್ಲಿ ಹಾಕುವ ಮನಸ್ಸಿಲ್ಲೆಂದು ಹೇಳಿ ಅವರು ಅವನ್ನು ಬಿಚ್ಚಿ ಹೇಳಿದ್ದಿಲ್ಲ. ಆದರೆ ಇಂಡೋನೇಶಿಯಾಕ್ಕೆ ಭೆಟ್ಟಿ ಕೊಡಲು ಹೊರಟ ಪಂ|| ಜವಾಹರಲಾಲ ನೆಹರುರವರು ಹಾದಿಯಲ್ಲಿ ಜೂನ ತಾ. ೧ಕ್ಕೆ ಶ್ರೀವೇಂದ್ರದ ವಿಶ್ವವಿದ್ಯಾಪೀಠಕ್ಕೆ ಭೆಟ್ಟಿ ಕೊಟ್ಟಾಗ ಮಾಡಿದ ತಮ್ಮ ಭಾಷಣದಲ್ಲಿ, ಮುನ್ನಾ ದಿನವೇ ಡಾ|| ಮಥಾಯಿಯವರು ದಿಲ್ಲಿಯಲ್ಲಿ ಮಾಡಿದ ಭಾಷಣಕ್ಕೆ ಉತ್ತರ ಕೊಡುತ್ತ, ತಮಗೂ ಡಾ|| ಮಥಾಯಿಯವರಿಗೂ ಎಲ್ಲಿ ಮತಭೇದಗಳುಂಟಾದವೆಂಬುದರ ಸ್ಫೋಟಕ ದಿಗ್ದರ್ಶನ ಮಾಡಿ, ಡಾ|| ಮಥಾಯಿಯವರ ಮತಗಳು ತಪ್ಪು ದಾರಿ ಹಿಡಿದವೆಂಬರ್ಥದ ಮಾತುಗಳನ್ನಾಡಿದರು ಆಗ ಡಾ|| ಜ್ಹಾನ ಮಥಾಯಿಯವರು ಬಾಯಿ ಬಿಚ್ಚಿ ತಮ್ಮ ಮತಗಳನ್ನು ಲೋಕಕ್ಕೆ ಸಾರಬೇಕಾಯಿತು. ಡಾ|| ಮಥಾಯಿಯವರೂ ತಡ ಮಾಡಲಿಲ್ಲ ಪಂ|| ನೆಹರೂರವರ ಶ್ರೀವೇಂದ್ರ ಭಾಷಣದ ಮೂರನೇ ದಿನವೇ ಒಂದು ಪತ್ರಿಕೆಯನ್ನು ಹೊರಡಿಸಿ, ತಮಗೂ ಪಂ|| ನೆಹರೂರವರಿಗೂ, ತಮಗೂ ಇನ್ನಿತರ ಮಂತ್ರಿಗಳಿಗೂ ಉಂಟಾದ ಮತಭೇದಗಳ ಮೇಲೆ ಸಂಪೂರ್ಣ ಪ್ರಕಾಶ ಬೀರುತ್ತಾರೆ. ಪಂ|| ನೆಹರೂರವರು ನಿರ್ಮಿಸಿಕೊಂಡಿರುವ ರಾಷ್ಟ್ರೀಯ ಯೋಜನಾ ಸಮಿತಿಯು ಸಧ್ಯಕ್ಕಾದರೂ ಅನವಶ್ಯಕವಿರುತ್ತದೆಂದು ಡಾ|| ಮಥಾಯಿಯವರ ಮೊದಲನೇ ಆರೋಪವಿದೆ. ಈಗಾಗಲೇ ಹಲವಾರು ಯೋಜನೆಗಳು ಸಿದ್ಧವಾಗಿ ಕೂತಿವೆ, ಅವುಗಳನ್ನು ಕಾರ್ಯಗತಗೊಳಿಸಲಿಕ್ಕೆ ೩೦ ಅಬ್ಜ ರೂ. ಬೇಕು; ಆ ಹಣವನ್ನು ತರುವದು ಎಲ್ಲಿಂದ ಎಂಬ ಪ್ರಶ್ನೆಯುಂಟಾಗಿದೆ, ಆದರಿಂದ ಸಿದ್ಧವಾಗಿ ಕೂತ ಆ ಯೋಜನೆಗಳೆಲ್ಲ ಮೂಲೆಗುಂಪಾಗಿವೆ; ಇಂತಹ ಸ್ಥಿತಿಯಲ್ಲಿ ಹೊಸ ಹೊಸ ಯೋಜನೆಗಳನ್ನು ತಯಾರಿಸುವದಾದರೂ ಯಾಕೆ? ಎಂದು ಡಾ|| ಮಥಾಯಿಯವರು ಕೇಳುತ್ತಾರೆ. ಈಗ ರಾಷ್ಟ್ರಕ್ಕೆ ಅವಶ್ಯವಿದ್ದದ್ದು ಉತ್ಪಾದನೆಯನ್ನು ಹೆಚ್ಚಿಸುವದು. ಆ ಉತ್ಪಾದನೆಯು ಹೆಚ್ಚಾಗಿ, ಹೊಸ ಹೊಸ ಯೋಜನೆಗಳಿಗೆ ಹಣ ಪೂರೈಸುವಷ್ಟು ರಾಷ್ಟ್ರವು ಮೊದಲು ಸಂಪನ್ನವಾಗಲಿ; ಆ ಮೇಲೆ ಯೋಜನಾ ಸಮಿತಿಯ ನಿರ್ಮಾಣ ಮಾಡುವಾ ಎಂದು ಡಾ|| ಮಥಾಯಿಯವರ ಹೇಳಿಕೆಯಿದೆ. ಮೇಲಾಗಿ ಒಂದು ಸರಕಾರಿ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಕೆಲಸ ಮಾಡುವ ಈ ಸಮಿತಿಯೊಳಗೆ ಅರ್ಥಮಂತ್ರಿಯು ಒಬ್ಬ ಸಾಮಾನ್ಯ ಸದಸ್ಯನಾಗಿರುವದು ಅರ್ಥ-ಮಂತ್ರಿಯ ಪದಕ್ಕೂ ಅಧಿಕಾರಕ್ಕೂ ಗೌಣತ್ವ ತರುತ್ತದೆಂದು ಮಥಾಯಿಯವರ ೨ನೇ ಆರೋಪ. ಸಮಿತಿಯ ಯೋಜನೆಗಳಿಗೆ ಬೇಕಾಗುವ ಹಣವನ್ನು ಒದಗಿಸಿಕೊಡುವ ಅರ್ಥಮಂತ್ರಿಯು ನಿಜವಾಗಿಯೂ ಆ ಸಮಿತಿಯ ನಾಯಕನಾಗಿರಬೇಕೆಂದು ಅವರ ಮತ. ಮತ್ತು ಮಂತ್ರಿಮಂಡಳದವರು ಆರ್ಥಿಕ ಪ್ರಶ್ನೆಗಳ ಚರ್ಚೆ ನಡೆದ ಕಾಲಕ್ಕೆ ಈ ಸಮಿತಿಯವರು ಹಾಜರಿದ್ದು ಚರ್ಚೆಯಲ್ಲಿ ಭಾಗ ವಹಿಸಬಹುದೆಂದು ಹಾಕಿ ಕೊಟ್ಟ ಪ್ರಥೆಯೂ ಅನಿಷ್ಟವಿರುತ್ತದಾಗಿ ಮಥಾಯಿಯವರ ೩ನೇ ಆರೋಪ ಈ ಪ್ರಥೆಯು ಮುಂದರಿದಲ್ಲಿ ಸಮಿತಿಯು ಮಂತ್ರಿಮಂಡಳದ ಅಧಿಕಾರವನ್ನು ಕಸಿದುಕೊಂಡು ಅದಕ್ಕೆ ಗೌಣತ್ವ ತರುವದೆಂದು ಮಥಾಯಿಯವರು ಅಂಜುತ್ತಾರೆ. ಈ ಮೂರೂ ಆರೋಪಗಳಿಗಿಂತ ಡಾ|| ಮಥಾಯಿಯವರು ಮುಂದೊಡ್ಡಿದ ೪ನೇ ಆರೋಪ ತೀಕ್ಷ್ಣ ಮತ್ತು ಪ್ರಕ್ಷೋಭಕಾರಕವಿದೆ. ಅರ್ಥ ಮಂತ್ರಿಗಳು ಆಯ-ವ್ಯಯಗಳ ಅಂದಾಜ ಪತ್ರಿಯಲ್ಲಿ ಆಯಾ ಖಾತೆಯ ಖರ್ಚಿಗಾಗಿ ತೆಗೆದಿಟ್ಟ ಹಣದ ಹೊರಗೆ, ರೀತಿಯಂತೆ ಅರ್ಥ ಮಂತ್ರಿಗಳ ಇಲ್ಲವೆ ಸ್ಥಾಯಿ ಅರ್ಥ-ಸಮಿತಿಯ ಮುನ್ನೊಪ್ಪಿಗೆಯನ್ನು ಪಡೆಯದೆ ಖರ್ಚ ಮಾಡುವ

ಚಟ ಸರಕಾರದ ಹಲವಾರು ಶಾಖೆಗಳಿಗೆ [illegible] ಕೊಂಡಿರುತ್ತದೆಂದು ಡಾ|| ಮಥಾಯಿಯವರು ಉಗ್ರ ಆರೋಪ ಮಾಡಿದ್ದಾರೆ. ಅವರು ಒಂದು ಉದಾಹರಣೆಯನ್ನೂ ಕೊಟ್ಟಿರುತ್ತಾರೆ. ಬ್ರಿಟನ್ನಿನಲ್ಲಿರುವ ಹಿಂದುಸ್ಥಾನ ಸರಕಾರದ ಪ್ರತಿನಿಧಿಯು (ಇವನಿಗೆ ಹಾಯ್ ಕಮಿಶನರನೆಂದು ಸಂಬೋಧಿಸುತ್ತಾರೆ.) ಆಯರ್ಲಂಡದಲ್ಲಿ ಹಿಂದೀ ರಾಯಭಾರಿಯಾಗಿ ಕೆಲಸ ಮಾಡಬೇಕೆಂಬ ಸೂಚನೆ ಬಂದಾಗ, ಈ ಪ್ರತಿನಿಧಿಯು ಆಯರ್ಲಂಡಕ್ಕೆ ಕಾಲಕಾಲಕ್ಕೆ ಹೋಗಿ ಬರುವ ವೆಚ್ಚವನ್ನಷ್ಟೇ ಪಡೆಯಬೇಕು, ಆಯರ್ಲಂಡದೊಳಗಿನ ಕೆಲಸಕ್ಕಾಗಿ ಪ್ರತ್ಯೇಕ ಕಚೇರಿಯನ್ನಾಗಲಿ ಸಿಬಂದಿಯನ್ನಾಗಲಿ ಇಡುವದು ಬೇಡ ಎಂದು ಸ್ಥಾಯಿ ಅರ್ಥ-ಸಮಿತಿಯು ಸ್ಪಷ್ಟ ಕರಾರು ಹಾಕಿ ಆ ಸೂಚನೆಗೆ ಒಪ್ಪಿಗೆ ಕೊಟ್ಟಿತ್ತು. ಆದರೆ ಬ್ರಿಟನ್ನಿನಲ್ಲಿ ನಮ್ಮ ಪ್ರತಿನಿಧಿಯಾಗಿರುವ ಶ್ರೀ|| ಕೃಷ್ಣ ಮೆನನ್ನರಿಗೆ ಮೇಲ್ಕಾಣಿಸಿದ ಕರಾರು ಒಪ್ಪಿಗೆಯಾಗಲಿಲ್ಲ! ಡಬ್ಲಿನದಲ್ಲಿ ರಾಯಭಾರಿಯ ಕಚೇರಿಯನ್ನು ಇಟ್ಟು, ಅಲ್ಲಿ ಕೆಲವು ಸಿಬಂದಿಗಳನ್ನು ನೇಮಿಸಬೇಕೆಂದು ಅವರು ಆಗ್ರಹಪಟ್ಟರು. ರಾಯಭಾರಿಯ ನೇಮಕದ ಈ ವಿಷಯ ಪಂ|| ಜವಾಹರಲಾಲರ ವಿದೇಶ ಇಲಾಖೆಗೆ ಸಂಬಂಧಪಟ್ಟದ್ದು. ಪಂಡಿತಜಿಯವರು ಶ್ರೀ|| ಮೆನನ್ನ ಪಕ್ಷವನ್ನೆತ್ತಿ ಹಿಡಿದು, ಅವರ ಬೇಡಿಕೆಗೆ ಮಂತ್ರಿಮಂಡಳದ ಒಪ್ಪಿಗೆಯನ್ನು ಪಡಕೊಂಡಿರುತ್ತಾರಂತೆ! ಬೇರೆ ಬೇರೆ ಮಂತ್ರಿಗಳೂ ಅವರ ಖಾತೆಯವರೂ ಈ ರೀತಿ ಮನಸ್ಸಿಗೆ ಬಂದಂತೆ ವೆಚ್ಚ ಮಾಡುತ್ತ ಹೋದರೆ ಅರ್ಥ-ಮಂತ್ರಿಯು ಎಲ್ಲಿಂದ ಹಣ ತರಬೇಕು ಮತ್ತು ಖರ್ಚಿನ ಅಂದಾಜ ಪತ್ರಿಕೆಯನ್ನು ತಯಾರಿಸುವದಾದರೂ ಹೇಗೆ ಎಂದು ಮಥಾಯಿಯವರು ಕೇಳುತ್ತಾರೆ. ಸರಕಾರದ ಆಪತ್ತೆಯ ವೆಚ್ಚ ಕಡಿಮೆ ಮಾಡಬೇಕು, ಮಿತವ್ಯಯ ಮಾಡಬೇಕು ಎಂದು ಸರಕಾರವು ಇಟ್ಟುಕೊಂಡಿರುವ ಗುರಿಯು ಇಂತಹ ಮನಸ್ವಿ ಕಾರಭಾರದಲ್ಲಿ ಹೇಗೆ ಸಾಧ್ಯವಾಗುವೆಂದೂ ಅವರು ಪ್ರಶ್ನೆ ಮಾಡುತ್ತಾರೆ. ನೆಹರು-ಲಿಯಾಕತರೊಳಗೆ ಮೊನ್ನೆ ಆದ ಒಪ್ಪಂದವೂ ಡಾ|| ಮಥಾಯಿಯವರಿಗೆ ಮಾನ್ಯವಾಗಿರುವದಿಲ್ಲ. ಪಾಕಿಸ್ತಾನಿಗಳ ಪೂರ್ವಾಪರ ನಡತೆಯನ್ನು ಗಮನಿಸದೆ, "ಅವರ ಅನುನಯಕ್ಕಾಗಿ ರಾಷ್ಟ್ರದ ಮಹತ್ವಪೂರ್ಣ ಹಿತಸಂಬಂಧಗಳನ್ನು ಮಾರಾಟಕ್ಕೆ ತೆಗೆಯುವದು ಕ್ಷೇಮಕರವಲ್ಲ" ಎಂದು ಅವರು ಎಚ್ಚರಿಕೆ ಕೊಟ್ಟಿರುತ್ತಾರೆ. ಡಾ|| ಮಥಾಯಿಯವರ ಈ ರಾಜೀನಾಮೆಯಿಂದಲೂ ಅವರು ಪ್ರಕಟಪಡಿಸಿದ ಆರೋಪ ಪತ್ರಿಕೆಯ ಮೇಲಿಂದಲೂ ಕೇಂದ್ರ ಮಂತ್ರಿ-ಮಂಡಳದಲ್ಲಿ ಎಲ್ಲವೂ ನೆಟ್ಟಗಿಲ್ಲೆಂಬ ಅನುಮಾನ ಹೊಂದಿಸಬೇಕಾಗುತ್ತದೆ.

* *

ದಿಲ್ಲಿ ಒಪ್ಪಂದದ ಪರಿಣಾಮವಾಗಿ ಪೂರ್ವ, ಪಶ್ಚಿಮ ಬಂಗಾಲಗಳೊಳಗಿನ ಜನರೊಳಗೆ ಈಗ ಸುರಕ್ಷಿತತೆಯೆನಿಸಹತ್ತಿದೆಂದು ಹೇಳುತ್ತಾರೆ. ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ಪ್ರತಿ ದಿನ ಸರಾಸರಿ ೪೦೦೦ ಹಿಂದುಗಳು ಪಶ್ಚಿಮ ಬಂಗಾಲದಿಂದ ಪೂರ್ವ ಬಂಗಾಲಕ್ಕೆ ಹೋದರೆಂದೂ, ೨೫೦೦ಕ್ಕೂ ಹೆಚ್ಚಿಗೆ ಮುಸಲ್ಮಾನರು ಪೂರ್ವ ಬಂಗಾಲದಿಂದ ಹಿಂದುಸ್ಥಾನಕ್ಕೆ ಬಂದರೆಂದೂ ಸರಕಾರಿ ಅಂಕಿ ಸಂಖ್ಯೆಗಳು ಹೇಳುತ್ತವೆ. ಆ ವಾರದಲ್ಲಿ ಅಂತು ೨೦೬೪೯ ಹಿಂದುಗಳು ಪೂರ್ವ ಬಂಗಾಲಕ್ಕೆ ಹೋದರೆ ೧೮೬೦೭ ಮುಸಲ್ಮಾನರು ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಬಂದರು. ಆದರೆ ಪಾಕಿಸ್ತಾನ ಬಿಟ್ಟು ಬಂದ ಹಿಂದುಗಳ ಸಂಖ್ಯೆಯನ್ನೂ ನಾವು ಗಮನಿಸಬೇಕು. ಸದರಿ ವಾರದಲ್ಲಿ ೫೪೫೬೭ ಹಿಂದುಗಳು ಪೂರ್ವ ಬಂಗಾಲ ಬಿಟ್ಟು ಭಾರತಕ್ಕೆ ಬಂದಿರುತ್ತಾರೆ. ಅದೇ ಮೇರೆಗೆ ೩೫೭೮೩ ಮುಸಲ್ಮಾನರು ಭಾರತವನ್ನು ಬಿಟ್ಟು ಪೂರ್ವ ಬಂಗಾಲಕ್ಕೆ ಹೋಗಿರುತ್ತಾರೆ. ಇದರ ಮೇಲಿಂದ ಪಾಕಿಸ್ತಾನಕ್ಕೆ ಹೋಗುವ ಹಿಂದುಗಳಿಗಿಂತ ಅಲ್ಲಿಂದ ಬರುವ ಹಿಂದುಗಳ ಸಂಖ್ಯೆಯೂ, ಪಾಕಿಸ್ತಾನದಿಂದ ಇಲ್ಲಿಗೆ ಬರುವ ಮುಸಲ್ಮಾನರಿಗಿಂತ ಇಲ್ಲಿಂದ ಕಾಲು ಕಿತ್ತಿ ಹೋಗುವ ಮುಸಲ್ಮಾನರ ಸಂಖ್ಯೆಯೂ ಹೆಚ್ಚಿಗೆ ಇರುತ್ತದೆಂಬುದು ಸ್ಪಷ್ಟವಾಗುತ್ತದೆ. ಕಳೆದ ಫೆಬ್ರುವರಿಯಲ್ಲಿ ಬಂಗಾಲದಲ್ಲಿ ಜಾತೀಯ ಉದ್ರೇಕವಾಗಹತ್ತಿದಂದಿನಿಂದ ಜೂನ ತಿಂಗಳ ಪ್ರಾರಂಭದ ವರೆಗೆ ಪಾಕಿಸ್ತಾನ ಬಿಟ್ಟು ಪಶ್ಚಿಮ ಬಂಗಾಲ, ಆಸಾಮ ಮತ್ತು ತ್ರಿಪುರಾ ಸಂಸ್ಥಾನಗಳಿಗೆ ಓಡಿಬಂದ ಹಿಂದುಗಳ ಸಂಖ್ಯೆ ೧೯,೬೭,೩೯೯ ರಷ್ಟುಂಟು. ಇದೇ ಅವಧಿಯಲ್ಲಿ ೬ ಲಕ್ಷ ಮುಸಲ್ಮಾನರು ಪಾಕಿಸ್ತಾನಕ್ಕೆ ಹೊರಟು ಹೋದರು, ಅವರಲ್ಲಿ [illegible] ಸಾವಿರ ಜನ ತಿರುಗಿ ಬಂದಿದ್ದಾರೆ. ಈ ಅಂಕಿ ಸಂಖ್ಯೆಗಳ ಮೇಲಿಂದ ಪಾಕಿಸ್ತಾನದಲ್ಲಿ ಹಿಂದುಗಳಿಗೆ ಇನ್ನೂ ಸುರಕ್ಷಿತತೆಯೆನಿಸುವದಿಲ್ಲೆಂಬ ಅನುಮಾನ ಹೊರಡುತ್ತದಲ್ಲವೇ?

* *

ಇದೇ ಕಳೆದ ನವಂಬರ ತಿಂಗಳಿಂದ ಮುಂಬಯಿಯ ಪ್ರಾಂತಾಧಿಪರಾದ ರಾಜಾ ಸರ್ ಮಹಾರಾಜಸಿಂಗರು ಸ್ವಯಂಪ್ರೇರಣೆಯಿಂದ ತಮ್ಮ ವೇತನದಲ್ಲಿ ನೂರಕ್ಕೆ ೧೫ ರಷ್ಟು ಕಡಿತ ಮಾಡಿಕೊಂಡಿದ್ದಾರೆ. ಮುಂದಿನ ಜುಲಯಿ ತಿಂಗಳಿಂದ ಅವರು ನೂರಕ್ಕೆ ೩೦ ರಷ್ಟು ಕಡಿತ ಮಾಡಿಕೊಳ್ಳಲೊಪ್ಪಿ, ತಮ್ಮ ಈ ಸೂಚನೆಗೆ ರಾಷ್ಟ್ರಪತಿಗಳ ಅನುಮತಿಯನ್ನೂ ಪಡಕೊಂಡಿರುತ್ತಾರೆ.

* *

ಹಿರೇಗುತ್ತಿ, ಮಾದನಗೇರಿ ಒಡಿಯಿಂದ ಬಹಳಷ್ಟು ಬೆಲ್ಲದ ಕಾಕಂಬಿಯೂ ಕೆಲ ಬೆಲ್ಲವೂ ಇದೀಗ ಘಟ್ಟಕ್ಕೆ ರವಾನೆಯಾಗಹತ್ತಿದೆಂಬ ವರ್ತಮಾನ ಕೇಳಿ ಬರುತ್ತಿದೆ. ಆದರಿಂದ ಬೆಲ್ಲದ ಧಾರಣೆಯು ಈಗ ಆ ಭಾಗದಲ್ಲಿ ಭರದಿಂದ ಏರಹತ್ತಿದೆಯಂತೆ. ಬೆಲ್ಲ-ಕಾಕಂಬಿಗಳ ಈ ನಿರ್ಯಾತವು ಕಳ್ಳ-ಸರಾಯಿಯ ವ್ಯಾಪಾರಕ್ಕಾಗಿರುತ್ತದೆಂಬ ಸಂಶಯವೂ ಜನರಿಗೆ ಬರಹತ್ತಿದೆ. ಸರಾಯಿಯ ತಯಾರಿಕೆಗೆ ಚಲೋ ಬೆಲ್ಲಕ್ಕಿಂತ ಹಳಸಿದ ಹಾಳು ಬೆಲ್ಲವೇ ಜಾಯಸ ಆಗುತ್ತದೆಂದು ಹೇಳುತ್ತಾರೆ. ಸಿನ್ನಲು ಒಳದಂತಹ ಬೆಲ್ಲವನ್ನ ಸಹ ಚಲೋ ಬೆಲ್ಲದ ಧಾರಣೆಗಿಂತ ಹೆಚ್ಚಿನ ದರವನ್ನು ಕೊಟ್ಟು ಸರಾಯಿಯ ವ್ಯಾಪಾರಿಗಳು ಕೊಂಡುಕೊಳ್ಳುತ್ತಾರಂತೆ! ಘಟ್ಟದ ಮೇಲಿನ ಹಳ್ಳಿಗಳಲ್ಲಿ ಬೆಲ್ಲದಿಂದ ಸರಾಯಿ ತಯಾರಿಸುವ ಉದ್ಯೋಗ ಇತ್ತೀತ್ತಲಾಗಿ ದೊಡ್ಡ ಪ್ರಮಾಣದಿಂದ ನಡೆಯುತ್ತದೆಂಬ ನಂಬಿಗಸ್ತ ವಾರ್ತೆಯುಂಟು. ಘಟ್ಟದ ಮೇಲಿನ ಕೆಲವು ಹಳ್ಳಿಗಳಲ್ಲಿ ಕೆಲವು ಕಾಲದ ಹಿಂದೆ ನಡೆದ ಅಗ್ನಿ-ಪ್ರಕೋಪಕ್ಕೆ ಬೆಲ್ಲದ ಸರಾಯಿ ಇಲ್ಲವೆ ಅದಕ್ಕಾಗಿ ತಯಾರಿಸಿಟ್ಟ ರಸಾಯನ ಕಾರಣವಾಗಿರಬೇಕೆಂದು ಸೂಕ್ಷ್ಮದರ್ಶಿಗಳು ಆದಾಗಲೇ ತರ್ಕ ಮಾಡಿದ್ದುಂಟು. ಹಿರೇಗುತ್ತಿ, ಮಾದನಗೇರಿಯಿಂದ ಹೊರಡುವ ಬೆಲ್ಲ-ಕಾಕಂಬಿಗಳು ಎಲ್ಲಿ ಮುಟ್ಟುತ್ತಿವೆ, ಯಾರಲ್ಲಿ ಮುಟ್ಟುತ್ತಿವೆ, ಯಾಕೆ ಮುಟ್ಟುತ್ತಿವೆ ಎಂಬುದರ ಸೂಕ್ಷ್ಮ ಮತ್ತು ಒಳ ಚೌಕಶಿಯನ್ನು ಅಧಿಕಾರಿಗಳು ಮಾಡಬೇಕು; ಮತ್ತು ಅದು ಸರಾಯಿಯ ತಯಾರಿಕೆಗೆ ಹೋಗುತ್ತದೆಂದು ತಿಳಿದು ಬಂದರೆ ಅದನ್ನು ನಿರ್ಬಂಧಿಸಬೇಕು. ಇಲ್ಲದಿದ್ದರೆ ಸರಕಾರವು ಕೈಕೊಂಡ ಮದ್ಯ-ನಿರೋಧನದ ಕಾರ್ಯವು ಈ ಜಿಲ್ಲೆಯಲ್ಲಿ ಯಶಸ್ವಿಯಾಗುವದು ಕಠಿಣ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಗುರುವಾರ ಉಷಃ ಕಾಲದಲ್ಲಿ ರವಿಯು ಮೃಗಶಿರಾಪ್ರವೇಶವಾಯಿತು. ಅಂದಿನಿಂದ ಮಳೆ ಕಡಿಮೆಯಾಗಿದೆ. ರೋಹಿಣಿ ನಕ್ಷತ್ರದ ಅಂದರೆ ಕಳೆದ ಬುಧವಾರ ರಾತ್ರಿ ವರೆಗಿನ ಮಳೆ ೧೬.೦೯ ಇಂಚು ಆಗಿತ್ತು; ಗುರುವಾರದಿಂದ ಈ ವರೆಗಿನ ಮಳೆ ೬.೯೧ ಇಂಚು ಆಗಿರುತ್ತದೆ. ಅಂತು ಶ್ರೀ ಕರಂದೀಕರರು ಭವಿಷ್ಯ ನುಡಿದಂತೆ ಈ ಜೂನ ತಿಂಗಳಲ್ಲಿ ವಿಶೇಷ ಮಳೆಯಾಗಲಿಕ್ಕಿಲ್ಲೆಂಬಂತೆ ತೋರುತ್ತದೆ. ಜೂನರಿತ್ತ ಮಳೆಗಳು ಜೂನ ಕೊನೆಯ ವಾರದ ಮೊದಲು ಮಳೆಗಾಲದ ಪ್ರಾರಂಭವಾಗಲಿಕ್ಕಿಲ್ಲೆಂದೂ ಭವಿಷ್ಯ ಹೇಳುತ್ತಾರೆ.

ಕನ್ನಡ ಕಾಲೇಜಿನ ಹೊಸ ಆಚಾರ್ಯರಾಗಿ ನೇಮಕಪಟ್ಟ ಡಾ|| ಬಿ. ಎನ್. ಕೃಷ್ಣಮೂರ್ತಿ ಶರ್ಮಾ ಇವರು ಮದ್ರಾಸ ವಿಶ್ವವಿದ್ಯಾಲಯದ ಎಮ್. ಎ. ಪಿ. ಎಚ್. ಡಿ. ಆಗಿರುತ್ತಾರೆ. ೧೧ ವರ್ಷಗಳ ಕಾಲ ಇವರು ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದರು. ೬ ವರ್ಷ ತಿರುಪತಿ ಸಂಸ್ಕೃತ ಕಾಲೇಜಿನ ಆಚಾರ್ಯರಾಗಿದ್ದರು. ಇತ್ತ [illegible] ತಿಂಗಳಿಂದ ಮುಂಬಯಿ. ಸಂಸ್ಕೃತ ಕಾಲೇಜಿನ ಆಚಾರ್ಯರಿದ್ದರು. ಅವರು ಹಲವಾರು ಗ್ರಂಥಗಳನ್ನು ಪ್ರಕಟಿಸಿರುತ್ತಾರೆ. ಶ್ರೀ|| ಶರ್ಮಾ ಇವರು ಮಾಧ್ವ ಸಂಪ್ರದಾಯದ ದೇಶಸ್ಥ ಬ್ರಾಹ್ಮಣರಿರುತ್ತಾರೆ. ಅವರ ಪ್ರಾಯವೀಗ ೪೦ ವರುಷ. ಮಾತೃಭಾಷೆ ಕನ್ನಡವಿರುತ್ತದೆ.

ಇದೇ ಕಳೆದ ಬೇಸಿಗೆಯಲ್ಲಾದ ಇಲ್ಲಿಯ ಬೇಸಿಕ ಶಾಲೆಯ ಕೊನೆಯ ಪರೀಕ್ಷೆಯಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ — ೧ ಆರ್. ಜಿ. ಭಟ್ಟ, ೨ ಎಸ್. ಎಸ್. ಭಂಡಾರಕರ, ೩ ಪಿ. ಎಮ್. ಗಾಂವಕಾರ, ೪ ಎಸ್. ಬಿ. ಗಾಂವಕಾರ, ೫ ಜಿ. ಎಮ್. ಗಾವಡಿ, ೬ ಆರ್. ಎಸ್. ಹೆಗ್ಡೆ, ೭ ಎಲ್. ಕೆ. ಹೆಗ್ಡೆ, ೮ ಡಿ. ಪಿ. ಶೇಟ, ೯ ಡಿ. ಎಮ್. ನಾಡಕರ್ಣಿ, ೧೦ ಸಿ. ಬಿ. ನಾಯ್ಕ, ೧೧ ಡಿ. ಬಿ. ನಾಯ್ಕ, ೧೨ ಜಿ. ಎಸ್. ನಾಯ್ಕ, ೧೩ ಕೆ. ಪಿ. ನಾಯ್ಕ, ೧೪ ಎಸ್. ಜಿ. ನಾಯ್ಕ, ೧೫ ಸಿ. ವಿ. ನಾಯ್ಕ, ೧೬ ಎಮ್. ಜಿ. ಸಂಗಮರವಾರೆ, ೧೭ ಎಮ್. ಎಲ್. ಶೇಣ್ವಿ, ೧೮ ಎಮ್. ಬಿ. ಉಪಾಧ್ಯಾಯ, ೧೯ ಎಸ್. ಆರ್. ಉಪಾಧ್ಯ.

ಪ್ರತಿ ಪಾಲಕರನ್ನು ಈಗ ಹೆಚ್ಚಿನ [illegible] ಪಟ್ಟದ [illegible] ಬೇಸಿಗೆಯಲ್ಲಿ [illegible] [illegible] [illegible] [illegible] ೧೦ ದಿವಸಗಳ [illegible]

[illegible]

[illegible]

[illegible]

ಜಾಹೀರ ನೋಟೀಸು.

[illegible]

Wanted a trained History graduate preferably with Diploma in Phy Edn Salary and D A according to Govt scales. Apply with testimonials to the Hon. Secretary.

Anjuman Hami-e- Muslimeen,
Bhatkal (N. K.)

Notice to Motor Owners in the Karnatak Region.

Owners of Motor Vehicles residing in the Karnatak Region are informed that the tax for one or more quarters in the current financial year 1950-51 has to be paid so as to reach this office on or before 15-7-50 in respect of motor vehicles bearing regional registration marks, and on or before 30-6-50 in respect of vehicles registered elsewhere Tax can be paid in cash, by **crossed cheques drawn on the Imperial Bank of India, Belgaum only**, by Challans and by Money Orders at the Regional Transport Office, Belgaum, between 11 A M and 3 P M on week days and 9 to 11 A M on Saturdays

2 Payment of tax should be accompanied by Registration Certificate of the vehicle, Certificate of Valid Insurance and a declaration in form "AT" or "FT" as the case may be **No tax token or disc will be issued nor the Registration Certificate endorsed unless the above requirements are duly complied with**

3 Non-use intimation of vehicles which are kept idle should be submitted before the date on which the tax tokens or discs already issued for such vehicles expire, **stating clearly the place (name of garage) where the vehicle is kept idle, under nonuse and shall not remove it from SUCH place without the prior permission of the Registering Authority** failing which the owners will be liable for payment of tax and penalty until the date they notify the nonuse of their vehicles as stated above

No. 5448/3-F/KR, of 50
Regional Transport Office,
Belgaum, 9-6-1950

D. K. SUKHTANKAR,
Regional Transport Officer
K R, Belgaum

ಜಿಲ್ಲಾ ಸಮಾಚಾರ.

(೬ನೇ ಪುಟದಿಂದ ಮುಂದುವರಿದ್ದು)

ಹೊನ್ನಾವರ— [illegible]

[illegible]

ಕಾರವಾರ— [illegible]

[illegible]

ಜಾಹೀರು

[illegible]

M. K. JADHAV,

[illegible]

ಜಿಲ್ಲಾ ಸಮಾಚಾರ.

[illegible]

ಪತ್ರಿಕಾ-ಪ್ರಕಟನೆ

[illegible]

(ಜಿಲ್ಲಾಧಿಕರ ಅಪೇಕ್ಷೆಯಂತೆ ಪ್ರಕಟಿಸಿದ್ದು)

ಪತ್ರಿಕಾ-ಪ್ರಕಟನೆ.

[illegible]

ಎಚ್. ಬಿ. ವಿಚಾರೇ.

THE BANK OF RURAL INDIA LTD.

(Incorporated in India. Liability of Members Limited)

HEAD OFFICE — "Satvabhama Bhuvanam", KARWAR. N. K

Offices at — KARWAR, KUMTA, SIRSI, HONAVAR, YELLAPUR BHATKAL, SIDDAPUR, ANKOLA, HUBLI & DHARWAR

Authorised Capital	,,	Rs 10,00,000.
Subscribed Capital	,,	Rs 5,00,000.
Paid-up Capital & Reserves	,,	Rs 5 08502-8-0

Rates of Interest on Deposits:

Current a/c @ 1 % p.a — *Savings Bank a/c @ 2½ %*

Fixed Deposits for 3 months @ 3% per annum

,, ,, for 6 months @ 3½% ,, ,,

,, ,, for 12 months or more @ 4% ,,

All kinds of modern Banking business transacted.

Karwar, 1st Jan. 1950

P X GRACIOUS
MANAGING DIRECTOR

[illegible]

ಆಜ್ಞೆ.

[illegible]

M. K. JADHAV.

ಜಿಲ್ಲಾ ಮೆಜಿಸ್ಟ್ರೇಟ ಧಾರವಾಡ.

ಇದನ್ನು ಪಾಂಡುರಂಗ ಕೃಷ್ಣ ಕಿನಭಾಗ (ಸಂಪಾದಕ) ಇವರು [illegible] ತಮ್ಮ [illegible] ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ರೂ. ೩।
ಅಂಚೆಯಿಂದ ವರ್ಷಕ್ಕೆ ೪-೧೦
೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ೦-೧-೬
ವ್ಹಿ. ಪಿ. ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg No. B 1270. Monday, 19-6-1950.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೫೧.

ಕುಮಟಾ — ಸೋಮವಾರ, ತಾ ೧೯—೬—೧೯೫೦

ಜಾಹೀರಾತುಗಳ ದರ:
೧೮ ಎಚ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಜಾಗದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವಿವಿಧ ವಿಷಯಗಳು.

ಜವಳಿಯ ಉದ್ಯೋಗದಲ್ಲೀಗ ಬಹಳಷ್ಟು ಅವ್ಯವಸ್ಥೆಯಾದುದು ಕಂಡು ಬರುತ್ತಿದೆ. ಭಾರತದ ಬಟ್ಟೆಯ ಉತ್ಪಾದನೆಯಲ್ಲಿ ಗಿರಣಿಗಳಷ್ಟೇ ಯಾಂತ್ರಿಕ ಮಗ್ಗ, ಕೈಮಗ್ಗಗಳು ಕೂಡ ಮಹತ್ವದ ಪಾತ್ರವನ್ನು ವಹಿಸುತ್ತಿವೆ ಆದರೆ ಇತ್ತೀಚೆಗೆ ಗಿರಣಿಗಳು ಮಗ್ಗಗಳೊಡನೆ ಸ್ಪರ್ಧೆ ನಡಿಸಿರುವದರಿಂದಲೂ, ಮಗ್ಗಗಳಿಗೆ ಬೇಕಾದ ನೂಲನ್ನು ಪೂರೈಸಲು ಒಪ್ಪದಿರುವದರಿಂದಲೂ ಕೈಮಗ್ಗಗಳ ವ್ಯವಸಾಯ ಕಷ್ಟದಲ್ಲಿ ಬಿದ್ದಿದೆ ಮುಂಬಯಿ ರಾಜ್ಯಾಂಗವೊಂದರಲ್ಲೇ ಸದ್ಯಕ್ಕೆ ೭೫೦೦೦ ಕೈಮಗ್ಗದ ನೇಕಾರ ಕುಟುಂಬಗಳು ದುರ್ದಸೆಗೀಡಾಗಿವೆ ಸೊಲ್ಲಾಪುರದೊಳಗಿನ ಕೈಮಗ್ಗಗಳು ತಯಾರಿಸಿದ ೨೫ ಲಕ್ಷ ಬೆಲೆ ಬಾಳುವ ಸೀರೆಗಳು ಮಾರಾಟವಾಗದೆ ಬಿದ್ದುಕೊಂಡಿವೆಯಂತೆ. ಕೈಮಗ್ಗಗಳ ಉದ್ದಿಮೆ ಅದೊಂದು ಗೃಹ-ಉದ್ದಿಮೆ, ಗ್ರಾಮೀಣ ಉದ್ದಿಮೆ ಈ ಉದ್ದಿಮೆಗೆ ಪ್ರೋತ್ಸಾಹ ಕೊಡಲು ಸರಕಾರವು ಬದ್ಧವಿದೆ. ಗೃಹೋದ್ಯೋಗ, ಗ್ರಾಮೋದ್ಯೋಗಗಳ ಬೆಳವಣಿಗೆಯಿಂದಲೇ ನಮ್ಮ ರಾಷ್ಟ್ರದ ಉದ್ಧಾರವಾಗಬಲ್ಲುದೆಂದು ಮಹಾತ್ಮರು ನಮಗೆ ತಮ್ಮ ಜೀವಮಾನವಿರುವವರೆಗೂ ಹೇಳುತ್ತಿದ್ದರು. ಭಾರತ ಸರಕಾರದ ಹೊಸ ಉದ್ದಿಮೆ ಮತ್ತು ಪೂರೈಕೆ ಮಂತ್ರಿಗಳಾಗಿರುವ ಮಾನ್ಯ ಹರೇಕೃಷ್ಣ ಮಹತಾಬರಾದರೂ ಅದೇ ವಿಚಾರ ಹಿಡಿದು ಕೈಮಗ್ಗದ ಉದ್ದಿಮೆಗೆ ಭಾರತದ ಆರ್ಥಿಕ ಯೋಜನೆಯಲ್ಲಿ ಪ್ರಥಮ ಸ್ಥಾನ ಕೊಡಲು ನಿರ್ಧರಿಸಿರುತ್ತಾರೆ. ಬಟ್ಟೆಯ ನಿಯಂತ್ರಣದ ಸಂಬಂಧವಷ್ಟೆ ಬಟ್ಟೆಯ ಉದ್ಯೋಗಸ್ಥರೊಡನೆ ವಿಚಾರ-ವಿನಿಮಯ ಮಾಡಲು ಅವರು ಮೊನ್ನೆ ಮುಂಬಯಿಗೆ ಬಂದಾಗ ಇದೇ ಮಾತನ್ನು ಹೇಳಿ, ನಾವು ನೇಕಾರರು ಕೈಮಗ್ಗಗಳಲ್ಲಿ ತಯಾರಾದ ಬಟ್ಟೆಗಳನ್ನೇ ಶಕ್ಯವಿದ್ದಷ್ಟು ಉಪಯೋಗಿಸಿ, ಗಿರಣಿಯ ಬಟ್ಟೆಯನ್ನು ವಿದೇಶಗಳಿಗೆ ಕಳಿಸಿಕೊಡುವ ಧೋರಣೆಯನ್ನು ಇಟ್ಟುಕೊಳ್ಳಬೇಕಾಗಿ ಪತ್ರಿಕಾ-ಪ್ರತಿನಿಧಿಗಳ ಸಭೆಯಲ್ಲಿ ಹೇಳಿದ್ದುಂಟು. ಗಿರಣಿಗಳ ನೂಲು ಕೈಮಗ್ಗದವರಿಗೆ ವಿಪುಲವಾಗಿ ಸಿಗುವಂತೆ ನೂಲಿನ ನಿರ್ಯಾತಕ್ಕೆ ತಾವು ಪ್ರತಿಬಂಧ ಹಾಕಬಯಸುತ್ತೇವೆಂದೂ ಅವರು ಹೇಳಿರುತ್ತಾರೆ. ಭಾರತದ ಗಿರಣಿಗಳ ಬಟ್ಟೆಗೆ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆಯುಂಟು ಆದರಿಂದ ಗಿರಣಿಗಳು ತಮ್ಮ ಗತಿಯೇನೆಂದು ಚಿಂತಿಸುವ ಕಾರಣವಿಲ್ಲ. ಗಿರಣಿಗಳೊಡೆಯರೂ ಕೈಮಗ್ಗ, ಯಾಂತ್ರಿಕ ಮಗ್ಗಗಳ ಉದ್ಯೋಗಸ್ಥರೂ ಒಂದು ಮಾತನ್ನು ಮಾತ್ರ ಒಳ್ಳೆತಾಗಿ ಲಕ್ಷದಲ್ಲಿಡಬೇಕು ವಿದೇಶಿ ಗಿರಣಿಗಳ ರುಚಿಗಳನ್ನು ತಿಳಕೊಂಡು ಅವರಿಗೆ ಮೆಚ್ಚಿಗೆಯಾಗುವಂತಹ ಉತ್ತಮ ಬಟ್ಟೆಯನ್ನೇ ಗಿರಣಿಗಳೊಡೆಯರು ತಯಾರಿಸಿ ಕಳಿಸಬೇಕು ಹಾಳು ಬಟ್ಟೆಯ [illegible] ನ್ನಾಗಲಿ ವಿದೇಶಗಳಿಗೆ ಕಳಿಸಿ ತಮ್ಮ ಹೆಸರನ್ನೂ, ತಮ್ಮ ಮಾತೃಭೂಮಿಯ ಹೆಸರನ್ನೂ ಕೆಡಿಸಿಕೊಳ್ಳಬಾರದು. ಅದೇ ರೀತಿ ಕೈಮಗ್ಗ, ಯಾಂತ್ರಿಕ ಮಗ್ಗಗಳ ಜನರು ನಮ್ಮಲ್ಲಿಯ ಜನರ ಹೊಸ ಹೊಸ ಅಭಿರುಚಿಗಳನ್ನು ಅರಿತುಕೊಂಡು, ಅವರಿಗೆ ಒಪ್ಪುವಂತಹ, ಸೇರುವಂತಹ ಬಟ್ಟೆಗಳನ್ನೇ ಸಿದ್ಧಗೊಳಿಸಬೇಕು ಶ್ರೀ|| ಮಹತಾಬರ ಯೋಜನೆ ಕಾರ್ಯರೂಪಕ್ಕಿಳಿದರೆ ಗಿರಣಿಗಳ ಉದ್ಯೋಗವೂ ಕೈಮಗ್ಗಗಳ ಉದ್ಯೋಗವೂ ಒಡನೆಯೇ ಪ್ರಗತಿ ಹೊಂದಿ ದೇಶವನ್ನು ಸಂಪನ್ನಗೊಳಿಸುವವೆಂದು ಹೇಳಲಡ್ಡಿಯಿಲ್ಲ.

•.•

ಆಹಾರ-ದೃಷ್ಟಿಯಿಂದ ದೇಶವನ್ನು ಸ್ವಾವಲಂಬಿ ಮಾಡುವ ಪ್ರಯತ್ನದಷ್ಟೇ ಬಟ್ಟೆಯ ದೃಷ್ಟಿಯಿಂದಲೂ, ಬಟ್ಟೆಯ ತಯಾರಿಕೆ ಬೇಕಾಗುವ ಹತ್ತಿಯ ದೃಷ್ಟಿಯಿಂದಲೂ ದೇಶವನ್ನು ಸ್ವಾವಲಂಬಿ ಮಾಡುವ ಪ್ರಯತ್ನ ನಡೆಯಬೇಕಾಗಿದೆ. ದೇಶವಿಭಜನೆಯ ಪರಿಣಾಮವಾಗಿ ಅರಳೆ ಬೆಳೆಯುವ ಬಹಳಷ್ಟು ಪ್ರದೇಶ — ಸಿಂಧ — ಪಾಕಿಸ್ತಾನದ ಪಾಲಿಗೆ ಹೋಯಿತು ಆದರಿಂದ ನಮಗೆ ಈಗ ಅರಳೆಯ ಕೊರತೆಯಾಗುತ್ತದೆ. ನಮಗೆ ವರ್ಷಕ್ಕೆ ಸರಾಸರಿ ೪೦ ಲಕ್ಷ ಗಂಟೆ ಅರಳೆ ಬೇಕು. ಅದರಲ್ಲಿ ೨೭ ಲಕ್ಷ ಗಂಟೆ ಅರಳೆ ಮಾತ್ರ ನಮ್ಮಲ್ಲಿ ಬೆಳೆಯುತ್ತಿದೆ. ಇನ್ನುಳಿದ ೧೩ ಲಕ್ಷ ಗಂಟೆ ಅರಳೆಯನ್ನು ನಾವು ಹೊರಗಿಂದ ತರಿಸಿಕೊಳ್ಳಬೇಕಾದ ಪ್ರಸಂಗ ಬಂದಿದೆ, ಆ ಬಗ್ಗೆ ನಾವು ಸರಾಸರಿ ೯೦ ಕೋಟಿ ರೂ. ತೆರುವ ಪ್ರಸಂಗವಿದೆ ಆದರಿಂದ ದೇಶದೊಳಗಿನ ಅರಳೆಯ ಬೆಳೆಯನ್ನು ಹೆಚ್ಚಿಸುವ ಪ್ರಯತ್ನವನ್ನು ಸರಕಾರವು ಮಾಡತೊಡಗಿದೆ. ೬-೭ ವರ್ಷಗಳ ಹಿಂದೆ ಆಹಾರದ ಕೊರತೆಯಾದಾಗ ಸರಕಾರವು ಒಂದು ಕಾಯದೆ ಮಾಡಿ, ಆಹಾರ-ಧಾನ್ಯಗಳನ್ನು ಬೆಳಸುವ ಕ್ಷೇತ್ರವು ಕಡಿಮೆಯಾಗಬಾರದೆಂದು ಹತ್ತಿ ಬೆಳೆಯುವ ಕ್ಷೇತ್ರವನ್ನು ಪರಿಮಿತಗೊಳಿಸಿತ್ತು ಮುಂಬಯಿ ಸರಕಾರವು ಈಗ ಈ ನಿರ್ಬಂಧವನ್ನು ರದ್ದುಗೊಳಿಸಿ, ಯಾರು ಬೇಕಾದವರು ಎಲ್ಲಿ ಬೇಕಾದಲ್ಲಿ ಹತ್ತಿ ಬೆಳಸಬಹುದೆಂದು ಪ್ರಕಟಗೊಳಿಸಿದೆ. ಆದರೆ ಇಂತಹ ನಿರ್ಬಂಧನೆಗಳು ದೂರವಾದ ಮಾತ್ರಕ್ಕೆ ಅರಳೆಯ ಉತ್ಪಾದನೆ ಹೆಚ್ಚುವಂತಿಲ್ಲ ಇಂದು ಅರಳೆ ಬೆಳೆಯುವದಕ್ಕಿಂತ ಆಹಾರ ಧಾನ್ಯಗಳನ್ನು ಬೆಳಸುವದೇ ರೈತರಿಗೆ ಲಾಭದಾಯಕವಾಗಿದೆ. ಆದರಿಂದ ಅರಳೆ ಬೆಳೆಯುವವರಿಗೆ ಹೆಚ್ಚಿನ ದರ ಕೊಡುವದವಶ್ಯವಾಗಿದೆ. ಈ ವಿಚಾರವನ್ನು ಹಿಡಿದು ಹಿಂದೂಸ್ಥಾನ ಸರಕಾರವು ಹತ್ತಿ ಬೆಳೆಯುವವರಿಗೆ ಈಗಿನ ಧಾರಣೆಗಿಂತ ೨೫ ಮಣಗಳ ಪ್ರತಿ ಖಂಡಿಗೆ ರೂ ೧೫೦ರಷ್ಟು ಹೆಚ್ಚಿಗೆ ದರ ಕೊಡಿಸುವ ಯೋಜನೆಯನ್ನು ಹೊತ್ತಿದೆ. ಈಗ ಜರಿ[illegible] ಖಂಡಿ ೧ಕೆ ರೂ ೬೩೦ ದರವುಂಟು. ಈ ವರ್ಷ ಬೆಳೆಯುವ ಜರಿಲಾ ಹತ್ತಿಗೆ ಮುಂದಿನ ಹಂಗಾಮಿನಲ್ಲಿ ಖಂಡಿ ೧ಕ್ಕೆ ರೂ. ೭೭೦ ವರೆಗೆ ಸಿಗುವದು. ಹತ್ತಿಯ ಉತ್ಪಾದಕರಿಗೆ ಅವಶ್ಯವುಳ್ಳ ಬೀಜ, ಗೊಬ್ಬರ ಮುಂತಾದ ಸಲಕರಣೆಗಳನ್ನೂ ಸರಕಾರವು ಪೂರೈಸುವದು. ಹತ್ತಿಯ ಉತ್ಪಾದಕರಿಗೆ ಹೀಗೆ ಹೆಚ್ಚಿಗೆ ದರ ದೊರಕಿದರೆ ಆಹಾರ ಧಾನ್ಯಗಳ ಉತ್ಪತ್ತಿಗೆ ಮಾರಕವಾಗಲಿಕ್ಕಿಲ್ಲವೇ ಎಂಬದೊಂದು ಸಂಶಯವುಂಟು ಈ ಸಂಶಯ ಪಡುವದು ಅವಶ್ಯವಿಲ್ಲೆಂದು ಭಾರತದ ಆಹಾರ-ಮಂತ್ರಿ ಶ್ರೀ|| ಮುನಶಿಯವರು ಹೇಳುತ್ತಾರೆ ದೇಶದೊಳಗಿನ ಪಡಬಿದ್ದಿರುವ ಹೊಲಗಳನ್ನೆಲ್ಲ ಸಾಗುವಳಿಯಲ್ಲಿ ತರುವ ಪ್ರಯತ್ನ ಮಾಡಲಾಗುತ್ತಿದೆಂದೂ, ಒಳ್ಳೇ ಬೀಜ, ಉತ್ತಮ ಗೊಬ್ಬರ ಮುಂತಾದವುಗಳ ಸಹಾಯದಿಂದ ಈಗ ಸಾಗುವಳಿಯ ಭೂಮಿಗಳ ಬೆಳೆಯನ್ನು ಹೆಚ್ಚಿಸುವ ಪ್ರಯತ್ನ ನಡೆದದೆಂದೂ ಆಹಾರ-ಸ್ವಾವಲಂಬನದ ಆಂದೋಲನವು ಯಥಾಪ್ರಕಾರ ನಡೆಯುವದೆಂದೂ ಮಾನ್ಯ ಮುನಶಿಯವರು ಆಶ್ವಾಸನೆ ಕೊಟ್ಟಿರುತ್ತಾರೆ.

•.•

ದೇಶದಲ್ಲೀಗ ನಿಯಂತ್ರಣಗಳ ಉಚ್ಚಾಟನೆಯ ಬಗ್ಗೆ ದೊಡ್ಡದೊಂದು ಆಂದೋಲನ ನಡೆದಿದೆ. ಆಹಾರ ನಿಯಂತ್ರಣವಾಗಲಿ ಬಟ್ಟೆಯ ನಿಯಂತ್ರಣವಾಗಲಿ ಈಗ ಅನವಶ್ಯಕವೆಂದು ಅನೇಕ ತಜ್ಞರು ವಾದಿಸುತ್ತಾರೆ ದೇಶದಲ್ಲಿ ಕೆಲಮಟ್ಟಿಗೆ ಆಹಾರ ಧಾನ್ಯಗಳ ಕೊರತೆಯಿರುತ್ತಿದ್ದರೂ ನಿಯಂತ್ರಣಗಳಿಂದ ವ್ಯವಸ್ಥಿತಗೊಳಿಸಬೇಕಾದಷ್ಟು ಆ ಕೊರತೆ ಉಗ್ರ ಇಲ್ಲವೆ ದೊಡ್ಡದಿರುವದಿಲ್ಲೆಂದು ಅವರ ಪ್ರತಿಪಾದನೆ ಮೇಲಾಗಿ ಸರಕಾರದವರ ನಿಯಂತ್ರಣ ಪದ್ಧತಿಯು ಸದೋಷವಿರುತ್ತದೆ ಅವರು ನೇಮಿಸಿಕೊಟ್ಟ ಸೀಧಾ-ಪ್ರಮಾಣದಿಂದ ಜನರ ಉಪಜೀವನ-ನಿರ್ವಾಹವಾಗುವದಿಲ್ಲ! ಆದರಿಂದ ಸೀಧಾ-ಧಾನ್ಯದ ಹೊರಗೆ ಎಷ್ಟೋ ಜನರು ಕಳ್ಳಪೇಟೆಯಲ್ಲಿ ಕಾಳು ಕೊಂಡುಕೊಂಡು ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಿದ್ದಾರೆ! ಕಳ್ಳಪೇಟೆಯ ಅಗತ್ಯವಿಲ್ಲದ ಅಥವಾ ಕಳ್ಳಪೇಟೆಯ ದರಗಳನ್ನು ಕೊಡಲಾಗದ ಜನರು ಸೀಧಾಧಿಕಾರಿಗಳಿಗೆ ಮೋಸ ಮಾಡಿ ಸೀಧಾ ಸಾಮಗ್ರಿ ದೊರಕಿಸಿಕೊಳ್ಳುತ್ತಾರೆ ದಿಲ್ಲಿಯಲ್ಲಿ ೪ ತಿಂಗಳು ಹಿಂದೆ ೧೮ ಲಕ್ಷ ಜನರು ಸರಕಾರದಿಂದ ಸೀಧಾ ಪಡೆಯುತ್ತಿದ್ದರು. ಈಗ ಈ ಸಂಖ್ಯೆ ೧೪ ಲಕ್ಷಕ್ಕೆ ಇಳಿದಿದೆ! ಇದರ ಅರ್ಥ ೪ ಲಕ್ಷ ಜನರು ದಿಲ್ಲಿಯನ್ನು ಬಿಟ್ಟು ಹೊರಟು ಹೋದರೆಂದಾಗಲಿ, ಸತ್ತು ಹೋದರೆಂದಾಗಲಿ ಮಾಡತಕ್ಕದ್ದಲ್ಲ ದಿಲ್ಲಿಯ. ಬಹಳಷ್ಟು ಜನರು ಕೃತಕ ಹೆಸರುಗಳನ್ನು ಹೇಳಿ ಹೆಚ್ಚಿನ ಸೀಧಾ ಪಡೆಯುತ್ತಿರುವರೆಂಬದೊಂದು ಸಂಶಯ ದಿಲ್ಲಿಯ ಅಧಿಕಾರಿಗಳಿಗೆ ಬಂದು. ಆಗ ಅವರು ಪುನಃ ಪಕ್ಕಾ ಜನಗಣತಿಯನ್ನು ಮಾಡಿ ಹೊಸ ಸೀಧಾ-ಪತ್ರಗಳನ್ನೆಲ್ಲ

ರದ್ದುಗೊಳಿಸುವ ಕಠೋರ ಕ್ರಮ ಕೈಕೊಂಡರು. ಈ ಜನಗಣತಿಯಲ್ಲಿ ೪ ಲಕ್ಷ ಖೊಟ್ಟಿ ಸೀಧಾ ಚೀಟಿಗಳು ರದ್ದಾದವು ಮತ್ತು ಸೀಧಾ-ಚೀಟಿಗಳ ಸಂಖ್ಯೆ ೫೦ ಲಕ್ಷದಿಂದ ೪೬ ಲಕ್ಷಕ್ಕೆ ಇಳಿಯಿತು. ಈ ೪ ಲಕ್ಷ ಖೊಟ್ಟಿ ಸೀಧಾ-ಚೀಟಿಗಳನ್ನು ಪಡಕೊಂಡು, ಅವುಗಳ ಆಧಾರದಿಂದ ಸೀಧಾ-ಕಾಳು ಪಡೆಯುತ್ತಿದ್ದ ಜನರು, ಕಾಯಿದೆಯ ಕಠೋರ ನಿರ್ಬಂಧನೆಗಳು ಇರುತ್ತಿದ್ದಾಗ್ಯೂ, ಹ್ಯಾಂಗೆ ಮಾಡುತ್ತಿದ್ದರೆಂಬುದನ್ನು ನಾವು ಆಲೋಚಿಸಬೇಕು. ತಮ್ಮ ಸ್ವಂತ ಸೀಧಾ-ಚೀಟಿಗಳ ಪ್ರಕಾರ ಸಿಗುತ್ತಿದ್ದ ಕಾಳುಕಡಿಗಳು ಹೊಟ್ಟೆಗೆ ಸಾಕಷ್ಟು ಇರುತ್ತಿದ್ದಿಲ್ಲವಾದ್ದರಿಂದಲೇ ಅವರು ಈ ವಂಚನೆಯ ವಾಮ-ಮಾರ್ಗವನ್ನು ಹಿಡಿದಿರಬೇಕೆಂಬ ತರ್ಕ ಹೊರಡುತ್ತಿದೆ. ದಿಲ್ಲಿಯ ಮಾತು ಮುಂಬಯಿ, ಕಲಕತ್ತಾ, ಮದ್ರಾಸ ಮೊದಲಾದ ಮಹಾನಗರಗಳಿಗೆ ಅನ್ವಯಿಸುತ್ತಿದೆ. ಈ ರೀತಿ ನಿಯಂತ್ರಣವು ಜನರಿಗೆ ಬಾಧಕವಾಗಿರುವದರಿಂದಲೇ ಇದು ಜನಸಾಮಾನ್ಯರಿಗೆ ಅಪ್ರಿಯವಾಗಿದೆ. ನಿಯಂತ್ರಣಗಳ ಜೊತೆಗೆ ಕಳ್ಳಪೇಟೆ, ಕಲ್ಲಾಟಿಕೆ, ಭ್ರಷ್ಟಾಚಾರಗಳೂ ಬರುತ್ತವೆಂಬ ವಿಚಾರ ಸಹ ಉಂಟು. ಆದದರಿಂದಲೇ ಈ ನಿಯಂತ್ರಣಗಳು ಬೇಡವೆಂದು ವಿಚಾರವಂತರನೇಕರ ಅಭಿಪ್ರಾಯವುಂಟು. ಕೇಂದ್ರ ಕಾನೂನ-ಮಂಡಳದ ಬಹಳಷ್ಟು ಸದಸ್ಯರು ಇದೇ ಅಭಿಪ್ರಾಯದವರಿರುತ್ತಾರೆ. ಈ

ಸದಸ್ಯರ ಮಾತಿಗೆ ಬೆಲೆ ಕೊಟ್ಟು ಕೊಂಗ್ರೆಸ ಪಾರ್ಲಿಮೆಂಟರಿ ಪಕ್ಷದ ಕಾರ್ಯಕಾರಿ ಮಂಡಳಿಯವರು ನಿಯಂತ್ರಣಗಳ ವಿಚಾರ ಮಾಡಲು ಕೆಲವು ಕಾಲದ ಹಿಂದೆ ಒಂದು ಉಪಸಮಿತಿಯನ್ನು ನೇಮಿಸಿದ್ದರು. ಈ ಉಪಸಮಿತಿಯು ಲೋಕ-ಮತ ತಿಳಕೊಳ್ಳುವದಕ್ಕಾಗಿ, ನಿಯಂತ್ರಣಗಳು ಬೇಕೋ ಬೇಡವೋ, ಕೆಲವೊಂದು ನಿಯಂತ್ರಣಗಳು ಬೇಕಾಗಿರುತ್ತಿದ್ದರೆ ಅವು ಯಾವವು, ಮಾರ್ಪಾಟುಗಳಾದ ನಿಯಂತ್ರಣಗಳು ಬೇಕೆಂದು ಅನಿಸುತ್ತಿದ್ದರೆ ಆ ಮಾರ್ಪಾಟುಗಳು ಯಾವವು ಎಂದು ಮುಂತಾಗಿ ಪ್ರಶ್ನೆಗಳನ್ನು ಹಾಕಿ ಒಂದು ಪ್ರಶ್ನಾವಳಿಯನ್ನು ತಯಾರಿಸಿ, ಅದನ್ನು ದೇಶದೊಳಗಿನ ಕಾನೂನ ಮಂಡಳಗಳ ೧೫೦೦ ಸದಸ್ಯರಿಗೂ, ಸಾರ್ವಜನಿಕ ಸಂಸ್ಥೆಗಳಿಗೂ, ಕೆಲವೊಂದು ತಜ್ಞರಿಗೂ, ಕೇಂದ್ರ ಕಾನೂನ ಮಂಡಳದ ಎಲ್ಲ ಸದಸ್ಯರಿಗೂ, ಎಲ್ಲ ರಾಜ್ಯಾಂಗಗಳ ಮಂತ್ರಿಗಳಿಗೂ ಕಳಿಸಿಕೊಟ್ಟಿತ್ತು. ಸುಮಾರು ೨೦೦೦ ಜನರಿಗೆ ಈ ಪ್ರಶ್ನಾವಳಿ ಕಳಿಸಲ್ಪಟ್ಟಿತ್ತಂತೆ. ಅವರಲ್ಲಿ ೬೦೦ ಜನರಿಂದ ಸಮಿತಿಗೆ ಉತ್ತರಗಳು ಬಂದವಂತೆ. ಅವರಲ್ಲಿ ಬಹುಸಂಖ್ಯಾಕರು ನಿಯಂತ್ರಣಗಳನ್ನು ರದ್ದುಗೊಳಿಸುವದೇ ಉತ್ತಮ ಪಕ್ಷವೆಂದು ಉತ್ತರ ಕೊಟ್ಟಿರುವರಂತೆ. ಉತ್ತರ ಕಳಿಸಿದ ಸಾರ್ವಜನಿಕ ಸಂಸ್ಥೆಗಳಲ್ಲಿ ೧೦೦ಕ್ಕೆ ೯೫ರಷ್ಟು ಸಂಸ್ಥೆಗಳು ವಿನಿಯಂತ್ರಣ ಮಾಡಬೇಕೆಂಬ ಪಕ್ಷದವರಿದ್ದರಂತೆ. ಸಮಿತಿಯು ಈ ಉತ್ತರಗಳನ್ನು ಕ್ರೋಡೀಕರಿಸಿ ತನ್ನ ವರದಿಯನ್ನು ಮುಂದಿನ ತಿಂಗಳಲ್ಲಿ ಸರಕಾರಕ್ಕೆ ಒಪ್ಪಿಸುವದು. ಸೀಧಾ ಪ್ರಮಾಣ, ಸೀಧಾ-ಧಾನ್ಯಗಳ ಗುಣಪರಿಶೀಲನೆ ಮೊದಲಾದವುಗಳ ವಿಚಾರ ಮಾಡಲು ಹಿಂದುಸ್ಥಾನ ಸರಕಾರವು ನೇಮಿಸಿದ ಉಪಸಮಿತಿಯವರಾದರೂ ನಿಯಂತ್ರಣದ ದೋಷಗಳನ್ನು ಬಹಿರಂಗಪಡಿಸಿ, ಕ್ರಮೇಣ ವಿನಿಯಂತ್ರಣ ಮಾಡುವದೇ ಒಳಿತೆಂದು ಅಭಿಪ್ರಾಯಪಟ್ಟಿರುತ್ತಾರೆ. ಸಾರಾಂಶ, ದೇಶಕ್ಕೀಗ ನಿಯಂತ್ರಣಗಳ ಬೇಸರ ಬಂದಿದೆ. ಅಧಿಕಾರಿಗಳು ಮಾತ್ರ — ವಿಶೇಷವಾಗಿ ನಮ್ಮ ಮುಂಬಯಿ ಸರಕಾರದ ಆಹಾರ ಮತ್ತು ಪೂರೈಕೆ ಇಲಾಖೆಗಳ ಮಂತ್ರಿಗಳಾಗಿರುವ ಶ್ರೀ|| ದಿನಕರರಾವ ದೇಸಾಯರು — ನಿಯಂತ್ರಣಗಳು ಬೇಕೆಂದು ವಾದಿಸುತ್ತಿದ್ದಾರೆ!

*

ಕೊಂಗ್ರೆಸ್ಸಿನ ಪ್ರತಿಷ್ಠೆ ಈವಾಗ ಕುಗ್ಗಹತ್ತಿದೆ. ಬೇರೆ ಬೇರೆ ರಾಜ್ಯಾಂಗಗಳಲ್ಲಿ ಅಧಿಕಾರ-ಪದಾಧಿಷ್ಠಿತ ಕೊಂಗ್ರೆಸ್ಸಿಗರ ನಡಾವಳಿಯನ್ನು ಕಂಡು ಕೆಲವರು ಅಸಮಾಧಾನಪಟ್ಟು ಕೊಂಗ್ರೆಸ್ಸಿನಿಂದ ಅಲಿಪ್ತರಾಗುತ್ತಿದ್ದರೆ, ಕೊಂಗ್ರೆಸ ಸರಕಾರಗಳಲ್ಲಿ ತಮಗೇನೂ ಅಧಿಕಾರ ಸಿಕ್ಕಿಲ್ಲೆಂಬ ಕಾರಣದಿಂದ ಅನೇಕರು ಪ್ರತ್ಯೇಕ ಪಕ್ಷ ಕಟ್ಟಲಾರಂಭಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾನೂನ-ಮಂಡಳದೊಳಗಿನ ಹಲವಾರು ಕೊಂಗ್ರೆಸ ಪಕ್ಷದ ಸದಸ್ಯರನ್ನು ಕೊಂಗ್ರೆಸ್ಸಿನಿಂದಲೂ ಪಕ್ಷದಿಂದಲೂ ಹೊರದಬ್ಬಿರುತ್ತಾರೆ. ಮಹಾರಾಷ್ಟ್ರದಲ್ಲಿ ಒಂದಾನೊಂದು ಕಾಲದಲ್ಲಿ ಕೊಂಗ್ರೆಸ್ಸಿನ ನಾಯಕರಾಗಿದ್ದ ಮತ್ತು ಕೆಲವು ಕಾಲ ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ|| ಜೇಧೆಯವರು ಈಗ ಕೊಂಗ್ರೆಸ್ಸಿನಿಂದ ಹೊರಬಿದ್ದು ಪ್ರತ್ಯೇಕ ಪಕ್ಷವನ್ನೊಂದು ಕಟ್ಟಲು ಹೆಣಗಾಡುತ್ತಿದ್ದಾರೆ. ಕೊಂಗ್ರೆಸ್ಸಿಗರಲ್ಲಿ ಸಾಮಾನ್ಯವಾಗಿ ಈವಾಗ ಶುದ್ಧ ರಾಷ್ಟ್ರೀಯತೆ, ರಾಷ್ಟ್ರಪ್ರೇಮ, ತ್ಯಾಗಬುದ್ಧಿ, ನಿಃಸ್ವಾರ್ಥ ಸೇವಾಬುದ್ಧಿ ಮೊದಲಾದ ಉಜ್ವಲ ಗುಣಗಳ ಲೋಪವಾಗಿ, ಅವುಗಳ ಸ್ಥಳದಲ್ಲಿ ಜಾತೀಯತೆ, ಜಾತಿ ಪ್ರೇಮ, ಸ್ವಾರ್ಥಪರಾಯಣತೆ, ಅಧಿಕಾರಲೋಲುಪತೆ ಮುಂತಾದ ದುರ್ಗುಣಗಳು ಮನೆ ಮಾಡಹತ್ತಿವೆ! ಈವಾಗ ಕಟುತರ ಲೋಕನಿಂದೆಗೆ ಪಾತ್ರವಾಗಿರುವ ಕಳ್ಳಪೇಟೆ-ಭ್ರಷ್ಟಾಚಾರಗಳು ಸಹ ಕೊಂಗ್ರೆಸ್ಸಿಗರನ್ನು ಬಿಟ್ಟಿಲ್ಲ. ಅಷ್ಟೇ ಅಲ್ಲ, ತಮ್ಮ ಬಿಳೇಟೋಪಿಗೆಯ ಕೊಂಗ್ರೆಸ ವೇಷದ ಮರೆಯಲ್ಲಿ ತಾವು ಮಾಡಿದ ಪಾಪಾಚಾರಗಳೆಲ್ಲ ಅಡಗಿಹೋದಾವೆಂಬ ವಿಶ್ವಾಸದಿಂದಲೂ, ಒಂದೊಮ್ಮೆ ತಮ್ಮ ಶತ್ರುಗಳು ತಮ್ಮ ಪಾಪಗಳನ್ನು ಬಯಲಿಗೆ ಎಳೆದರೆ ಕೊಂಗ್ರೆಸ-ಸರಕಾರದಲ್ಲಿ ಅಧಿಕಾರಾರೂಢರಾಗಿರುವ, ಒಂದು ಕಾಲದ ತಮ್ಮ ಸಹವಾಸಿಗಳು ತಮ್ಮನ್ನು ಕಾಯುವರೆಂಬ ನಂಬಿಕೆಯಿಂದಲೂ ಕೊಂಗ್ರೆಸ್ಸಿಗರೇ ಅಧಿಕ ಪ್ರಮಾಣದಲ್ಲಿ ಕಳ್ಳಪೇಟೆ, ಭ್ರಷ್ಟಾಚಾರಗಳನ್ನು ಮಾಡುತ್ತಿದ್ದಾರೆಂದು ಹೇಳುವದು ಸರ್ವಥಾ ತಪ್ಪಾಗುವಂತಿಲ್ಲ. ಈ ಪರಿಸ್ಥಿತಿಯನ್ನು ಪ್ರತ್ಯಕ್ಷ ಕಂಡ ಜನರು ಕೊಂಗ್ರೆಸ್ಸಿಗರ ಬಗ್ಗೆ ಮೊದಲಿನಷ್ಟು ಆದರವನ್ನೂ ತಳೆಯುವದಿಲ್ಲ, ಪ್ರೇಮವನ್ನೂ ತೋರುವದಿಲ್ಲ. ಕೊಂಗ್ರೆಸ ಸರಕಾರಗಳು ಭರಭರನೆ ಮಾಡಿದ ವಿವೇಕ-ಶೂನ್ಯ ಕಾನೂನ-ಕಟ್ಟಳೆಗಳಿಂದಲೂ ಕೊಂಗ್ರೆಸ್ಸಿಗರ ಬಗ್ಗೆ ಜನರಲ್ಲಿ ಬಹಳಷ್ಟು ಅಪ್ರೀತಿಯುಂಟಾಗಿದೆ. ಆದರಿಂದ ಮುಂಬರುವ ಚುನಾವಣೆಯಲ್ಲಿ ಕೊಂಗ್ರೆಸ್ಸು ೧೦೦ಕ್ಕೆ ೯೦ರಷ್ಟು ಕಾನೂನ-ಮಂಡಳಗಳೊಳಗಿನ ಸ್ಥಳಗಳನ್ನು ಗೆಲ್ಲುವದೆಂದು ಅ|| ಭಾ|| ಕೊಂಗ್ರೆಸ್ಸಿನ ಕಾರ್ಯದರ್ಶಿಗಳಾಗಿರುವ ಶ್ರೀ|| ಕಲಾ ವೆಂಕಟರಾಯರು ಹೇಳಿದ ಮಾತನ್ನು ನಂಬುವದು ಕಷ್ಟವಾಗಿದೆ. 'ಕೊಂಗ್ರೆಸ್ಸಿನ ಪುಣ್ಯ ದೊಡ್ಡದಿದೆ. ಕೊಂಗ್ರೆಸ್ಸಿನಷ್ಟು ಸುಸಂಘಟಿತ ಪಕ್ಷ ದೇಶದಲ್ಲಿ ಬೇರೊಂದಿಲ್ಲ' ಎಂಬ ಮಾತುಗಳು ನಿಜವಿರುತ್ತಿದ್ದರೂ, ಕೊಂಗ್ರೆಸ್ಸನ್ನು ನೂಕಿ ಹಿಂದೆ ಹಾಕುವಷ್ಟು ಬಲಶಾಲಿ ವಿರೋಧಿ ಪಕ್ಷವು ಸದ್ಯಕ್ಕೆ ದೇಶದಲ್ಲಿ ಇರದಿದ್ದರೂ ಬರುವ ಚುನಾವಣೆಯಲ್ಲಿ ಕೊಂಗ್ರೆ
ಸ್ಸಿಗಿನ್ನೆಂದು ಪ್ರಚಂಡ ಬಹುಮತ ಎಂದೂ ಸಿಗ
ಲ್ಲೆಂದು ಈಗಲೇ ಒಂದು ಭವಿಷ್ಯ ಹೇಳಬೇ
ದಾಗಿದೆ. ನಮ್ಮ ಜಿಲ್ಲೆಯಲ್ಲಂತೂ ಕೊಂಗ್ರೆಸ್ಸಿನ
ಅನಾಸ್ಥೆಯೇ ಹೆಚ್ಚಿಗೆ ಕಂಡುಬರುತ್ತಿದೆ. ಬಹು
ಪ್ರತಿಷ್ಠಿತರೂ, ವಿಚಾರವಂತರೂ, ಮಾನವಂ
ಕೊಂಗ್ರೆಸ ಸಂಸ್ಥೆಯಿಂದ ೪ ಮಾರು ದೂರ
ಯುವದೇ ಒಳಿತೆಂದು ಭಾವಿಸುತ್ತಿದ್ದಾರೆ.
ರೀತಿಯಿಂದ ಸಮಾಜದಲ್ಲಿ ಮಾನ-ಮರ್ಯಾದೆ
ನ್ನಾಗಲಿ, ಪ್ರತಿಷ್ಠೆಯನ್ನಾಗಲಿ ದೊರಕಿಸಲಾ
ಜನರೇ ಹೆಚ್ಚಾಗಿ, ಕೊಂಗ್ರೆಸ ಸಂಸ್ಥೆಯ
ಲ್ಲಾದರೂ ಒಂದಿಷ್ಟು ಪ್ರತಿಷ್ಠೆಯನ್ನು ಗಳಿಸ
ಎಂಬ ವಿಚಾರದಿಂದ, ಆ ಸಂಸ್ಥೆಯಲ್ಲಿ ಸು
ತ್ತುತ್ತಿದ್ದಾರೆ! ಸ್ವಾತಂತ್ರ್ಯ ಸೂರ್ಯನ ಉದ
ಸಮಾಪಿಸಿದ್ದು ನೋಡಿ ಮತ್ತು ಕೊಂಗ್ರೆಸ್ಸಿನ ಕೈ
ಲ್ಲಿ ಅಧಿಕಾರ-ಸೂತ್ರಗಳು ಬರುವದು ಖಂಡಿತ
ದು ಭಾವಿಸಿ ಇತ್ತೀಚಿಗೆ ಕೊಂಗ್ರೆಸ್ಸಿನಲ್ಲಿ ಬಂ
ಸೇರಿದ ಮತ್ತು ಕೊಂಗ್ರೆಸು ಜಯಶಾಲಿಯಾಗ
ಲಕ್ಷಣಗಳು ಕಂಡುಬಂದ ಮೇಲೆ ಅದರ ಸ
ಯಲ್ಲಿ ದಾಖಲ ಆದ ಅರಾಷ್ಟ್ರೀಯ ಜನ
ಕೊಂಗ್ರೆಸ್ಸಿನ ಪ್ರತಿಷ್ಠೆ ಕುಗ್ಗಿಸಲು ಮುಖ್ಯ ಕಾ
ರೆಂದು ಹೇಳಿದರೂ ಹೇಳಬಹುದು. ಇಂತಹ
ರನ್ನು ಹೊರದಬ್ಬಿ ಕೊಂಗ್ರೆಸ್ಸು ತನ್ನ ಹಿಂ
ಶುದ್ಧ, ಸಾತ್ವಿಕ, ಮತ್ತು ಜನಾದರಣೀಯ ರೂ
ವನ್ನು ತಳೆದನಕ ಅದರ ಪ್ರತಿಷ್ಠೆಯಾಗಲಿ ವ
ಸ್ಸಾಗಲಿ ಪುನಃ ಬೆಳೆಯುವಂತಿಲ್ಲ.

*

ಕೊಂಗ್ರೆಸ್ಸಿಗರು ಈಗ ಸ್ವಾರ್ಥ ಜಾತೀಯತೆ
ನ್ನು ತೋರುತ್ತಿದ್ದಾರೆಂಬ ವಕ್ಕೆ ಮದ್ರಾಸ ಸರ
ರದ್ದೇ ಒಂದು ಉದಾಹರಣೆ ಸಾ
ಮದ್ರಾಸ ಪ್ರಾಂತದಲ್ಲಿ ಬ್ರಾಹ್ಮಣ-ವರ್ಗ ಪುರೋ
ಗಾಮಿ ವರ್ಗ. ವಿದ್ಯಾ-ಬುದ್ಧಿಗಳಲ್ಲಿ ಅವರ ಕೈಹಿ
ಯುವದು ಅನ್ಯರಿಗೆ ಸಾಧ್ಯವಿಲ್ಲ. ಆದರಿಂದ ಹಿಂ
ನ್ನು ಸರಕಾರಿ ನೌಕರಿಯಲ್ಲಿ ಅವರದೇ ಪ್ರಾಬ
ವಿತ್ತು. ವಿದ್ಯೆಯ ಕ್ಷೇತ್ರದಲ್ಲಂತೂ ಅವರ ಸಾಮ್ರಾ
ಜ್ಯವಾಗಿತ್ತು. ಇದನ್ನು ನೋಡಿ ಬ್ರಾಹ್ಮಣೇತ
ರಲ್ಲಿ ಅಸೂಯೆಯುಂಟಾಯಿತು. ಅವರು ಬ್ರಾ
ಣೇತರ ಪಕ್ಷವನ್ನು ಕಟ್ಟಿಕೊಂಡು, ಕೊಂಗ್ರೆಸ್ಸಿ
ರಾಜಕಾರಣವನ್ನು ಪ್ರತಿಭಟಿಸುವ ನೋಗು ಹಾ
ಬ್ರಿಟಿಶ ಅರಸರನ್ನು ಒಲಿಸಿಕೊಂಡು, ಬುದ್ಧಿಬಲ
ದಿಂದಲ್ಲದಿದ್ದರೂ ಸಂಖ್ಯಾಬಲದಿಂದ ಮದ್ರಾಸ ಇಲಾ
ಖೆಯಲ್ಲಿ ತನ್ನದೇ ಮೇಲುಗೈ ಮಾಡಿಕೊಂಡಿದ್ದರು.
ಆದರೆ ಇತ್ತ ೧೦-೨೦ ವರ್ಷಗಳಿಂದ ಈ ಬ್ರಾ
ಣ-ಬ್ರಾಹ್ಮಣೇತರ ವಾದದ ಸದ್ದು ಅಡಗಿತ್ತು.
ಈಗ ಪುನಃ ಅದು ತಲೆಯೆತ್ತಿದೆ! ಸರಕಾರಿ ನೌ
ರಿಗಳಲ್ಲಿ ಜಾತಿ-ಧರ್ಮಗಳನ್ನು ಲೆಕ್ಕಿಸತಕ್ಕದ್ದಲ್ಲೆ
ದೂ, ಸರಕಾರವು ಜಾತಿ-ಮತ-ಪಂಥ-ನಿರಪೇಕ್ಷ
ವ ಗಿರತಕ್ಕದ್ದೆಂದೂ ಹೊಸ ಪ್ರಜಾರಾಜ್ಯ ಘಟನೆ
ಯಲ್ಲಿ ಸುಸ್ಪಷ್ಟವಾಗಿ ಹೇಳಿರುತ್ತಿದ್ದರೂ, ಹಿಂದು
ದವರ ಹಿತರಕ್ಷಣೆಯ ನೆವ ಮಾಡಿ ಮದ್ರಾಸಿ
"ಕೊಂಗ್ರೆಸ" ಸರಕಾರವು ಈಗ, ಸರಕಾರಿ ನೌಕ
ರಲ್ಲಿ ಬ್ರಾಹ್ಮಣರ ಪ್ರಮಾಣ ಹೆಚ್ಚಾಗಿದೆಂಬ ಕಾರ
ಹೇಳಿ, ಬ್ರಾಹ್ಮಣೇತರರ ಸಂಖ್ಯೆ ಅವರ ಸಂಖ್ಯಾ
ಪ್ರಮಾಣದಷ್ಟು ಆಗುವವರೆಗೆ ಬ್ರಾಹ್ಮಣರಿಗೆ ಸರಕಾ
ರಿ ನೌಕರಿಗಳನ್ನು ಕೊಡಕೂಡದೆಂದು ಕಟ್ಟಳೆ
ಮಾಡಿದೆ! ಸರಕಾರಿ ಶಾಲೆ-ಕಾಲೇಜುಗಳಲ್ಲಿ ಪ್ರವೇ

...ತ್ರ ಕೊಡುವಾಗಲೂ ಜಾತೀಯ ಪ್ರಮಾಣಪತ್ರವನ್ನು ಕಾಪಾಡಿಕೊಳ್ಳಬೇಕೆಂದು ಆಜ್ಞೆ ವಿಧಿಸಿದೆ! ಕೊರ್ಟುಗಳಂತಹ ವಿದ್ಯಾ ದೇವಿಯ ಮಂದಿರದಲ್ಲಿ ವಿದ್ಯೆ-ವಿದ್ವತ್ತಿಗಳಿಗೆ ಮಾನ ಮತ್ತು ಪ್ರಾಶಸ್ತ್ಯ ಕೊಡುವದನ್ನು ಬಿಟ್ಟು ಜಾತಿಗೆ ಪ್ರಾಧಾನ್ಯ ಕೊಡುವ ಮದ್ರಾಸ ಸರಕಾರದ ಬುದ್ಧಿಗೆ ಏನೆನ್ನಬೇಕೋ ತಿಳಿಯದು!! ಮದ್ರಾಸ ಸರಕಾರದ ಈ ನಾಟಕೀಗೇಡಿ ಆಜ್ಞೆಯು ಹೊಸ ಪ್ರಜಾರಾಜ್ಯದ ಘಟನೆಯೊಳಗಿನ ತತ್ವಗಳಿಗೂ ಮೂಲಭೂತ ಹಕ್ಕುಗಳಿಗೂ ವಿಸಂಗತವಿರುತ್ತದ ದ್ದರಿಂದ ಅದು ನಿರರ್ಥಕವಿರುತ್ತದೆಂದೂ, ಅದನ್ನು ಅಮಲಿನಲ್ಲಿ ತರಲು ಪ್ರತಿಬಂಧ ಮಾಡಬೇಕೆಂದೂ ಮದ್ರಾಸ ಹಾಯ ಕೋರ್ಟಿನಲ್ಲಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರವೇಶ ದೊರೆಯದಿರುವ ಒರ್ವ ವಿದ್ಯಾರ್ಥಿನಿಯೂ, ಸ್ಥಾಪತ್ಯ ಮಹಾವಿದ್ಯಾಲಯದಲ್ಲಿ ಸೇರಬಯಸುವ ಓರ್ವ ವಿದ್ಯಾರ್ಥಿಯೂ ಅರ್ಜಿಗಳನ್ನು ಮಾಡಿರುತ್ತಾರೆ. ನ್ಯಾಯಮೂರ್ತಿಗಳು ಇವೆರಡೂ ಅರ್ಜಿಗಳನ್ನು ಸ್ವೀಕರಿಸಿ, ಅವುಗಳಂತೆ ಅರ್ಜದಾರರಿಗೆ ಪರಿಹಾರಯಾಕೆ ಕೊಡಬಾರದೆಂಬುದರ ಕಾರಣಗಳನ್ನು ತೋರಿಸಲು ಮದ್ರಾಸ ಸರಕಾರಕ್ಕೆ ನೋಟೀಸು ಹೊರಡಿಸಿರುತ್ತಾರೆ. ಈ ಅರ್ಜಿಯ ನಿರ್ಣಯನನ್ನು ಕೇಳಲು ಜನರು ಆತುರಗೊಂಡಿರುವದು ಸ್ವಾಭಾವಿಕ.

* *

ಇದೇ ಜುಲಾಯಿ ತಿಂಗಳಲ್ಲಿ ದೇಶದೊಳಗೆಲ್ಲ ಗಿಡ-ಮರಗಳನ್ನು ನೆಡುವ ಕಾರ್ಯಕ್ರಮವನ್ನು ನಡಿಸಬೇಕೆಂದು ಹಿಂದುಸ್ಥಾನ ಸರಕಾರವು ಹೊರಡಿಸಿದ ಆದೇಶದ ಮತ್ತು ಆ ಆದೇಶವು ಕಾರ್ಯರೂಪಕ್ಕೆ ಬರುವಂತೆ ಮಾಡಿದ ಯೋಜನೆಯ ವೃತ್ತವು ಕಳೆದ ವಾರದ "ವೃತ್ತ'ದಲ್ಲಿ ಪ್ರಕಟವಾಗಿದ್ದದಷ್ಟೇ. ನಾಡಿನೊಳಗಿನ ವೃಕ್ಷ ಸಂಪತ್ತು ಬೆಳೆಸುವ ಈ ವಿಚಾರ ನಮ್ಮ ನಾಡಿಗೆ ಹೊಸದಲ್ಲ. ಪುರಾಣ ಕಾಲದಿಂದ ನಮ್ಮ ಪೂರ್ವಜರು ವೃಕ್ಷ ಸಂಪತ್ತಿನ ಜೋಪಾಸನೆಯ ಮಹತ್ವವನ್ನು ಅರಿತುಕೊಂಡು ಬೋಧಿಸುತ್ತ ಬಂದಿರುತ್ತಾರೆ ಮಾರ್ಗದ ಪಕ್ಕಗಳಲ್ಲಿ ಮರಗಳನ್ನು ನೆಡುವವನು ಆ ಮರಗಳು ಎಲೆ-ಹೂಗಳನ್ನು ಧರಿಸುವಷ್ಟುಕಾಲ ಸ್ವರ್ಗ-ಸುಖ ಪಡೆಯುತ್ತಾನೆಂದು ಪದ್ಮ ಪುರಾಣವೂ, ಸಂತತಿ-ಸಂಪತ್ತಿಗಳನ್ನು ಬಯಸುವವರು ಹೂ-ಹಣ್ಣುಗಳನ್ನು ಕೊಡುವ ಮರಗಳನ್ನು ಎಂದೂ ಕಡಿಯಬಾರದೆಂದೂ ಅಗ್ನಿ ಪುರಾಣವೂ, ಹೇಳುತ್ತವೆ. ಹೊಸ ಮನೆ ಕಟ್ಟುವವನು ಮನೆಯ ಉತ್ತರಕ್ಕೆ ಪ್ಲಕ್ಷ ಗಿಡ, ಪೂರ್ವಕ್ಕೆ ಆಲದ ಗಿಡ, ದಕ್ಷಿಣಕ್ಕೆ ಮಾವಿನ ಗಿಡ, ಮತ್ತು ಪಶ್ಚಿಮಕ್ಕೆ ಅಶ್ವತ್ಥಗಿಡ ನೆಡಬೇಕೆಂದೂ, ಮನೆಗೆ ಹೊಂದಿ ಹೂದೋಟ ಮಾಡಬೇಕೆಂದೂ ಅಗ್ನಿ-ಪುರಾಣದಲ್ಲಿ ಹೇಳಲಾಗಿದೆ. ಪರೋಪಕಾರಕ್ಕಾಗಿ ಮರ ನೆಡುವವನಿಗೆ ಬಹಳ ಪುಣ್ಯ ಸಿಗುತ್ತದೆಂದೂ ಆ ಪುರಾಣದಲ್ಲುಂಟು ೧೦ ಬಾವಿಗಳನ್ನು ತೋಡಿದ ಪುಣ್ಯ, ೧ ಕೆರೆ ಕಟ್ಟಿಸಿದವನಿಗೆ, ೧೦ ಕೆರೆಗಳನ್ನು ಕಟ್ಟಿದ ಪುಣ್ಯ, ೧ ಸರೋವರ ನಿರ್ಮಿಸಿದವನಿಗೆ, ೧೦ ಸರೋವರ ನಿರ್ಮಿಸಿದ ಪುಣ್ಯ ೧ ಮಗನನ್ನು ಪಡೆದಾತನಿಗೆ ಹತ್ತು ೧೦ ಪುತ್ರರನ್ನು ಪಡೆದ ಪುಣ್ಯ ೧ ವೃಕ್ಷ ನೆಡುವಾತನಿಗೆ ಪ್ರಾಪ್ತವಾಗುತ್ತದೆಂದು ಮತ್ಸ್ಯಪುರಾಣ ಹೇಳುತ್ತಿದೆ ತಾನು ತನ್ನ ರಾಜ್ಯದೊಳಗಿನ ಮಾರ್ಗಗಳ ಪಕ್ಕಗಳಲ್ಲಿ ಬಾವಿಗಳನ್ನು ತೋಡಿಸಿರುವೆನೆಂದೂ, ಮರಗಳನ್ನು ಬೆಳೆಸಿರುವೆನೆಂದೂ, ಜೀವ ಭೂತಜಾತಕ್ಕೆ ಉಪಕಾರಿಯಾಗಲೆಂದು ಬಯಸುತ್ತೇನೆಂದೂ ಅಶೋಕ ಚಕ್ರವರ್ತಿಯು ತನ್ನದೊಂದು ಶಿಲಾಲೇಖದಲ್ಲಿ ಬರೆಸಿಟ್ಟಿದ್ದಾನೆ. ಮೊಗಲರ ಆಳಿಕೆಯ ನಡುವೆಯೇ ಕೆಲವು ಕಾಲ ದಿಲ್ಲಿಯ ರಾಜ್ಯವನ್ನು ಆಳಿದ ಶೇರಶಹನು ತನ್ನ ರಾಜ್ಯದ ಮಾರ್ಗಗಳಲ್ಲೆಲ್ಲ ವೃಕ್ಷಗಳನ್ನು ನೆಡಿಸುವ ವ್ಯವಸ್ಥೆ ಮಾಡಿದ್ದನೆಂದು ಇತಿಹಾಸವು ಹೇಳುತ್ತಿದೆ. ಗಿಡಮರಗ ಕಡಿಯುವದು ಅದೊಂದು ಪಾಪ, ಹಿಂಸೆ ಎಂದು ನಮ್ಮ ಹಿರಿಯರು ಳನ್ನು ಹೇಳುತ್ತಿದ್ದರು. ಅನವಶ್ಯಕವಾಗಿ ಗಿಡಮರಗಳನ್ನು ಎಂದೂ ಕಡಿಯಬಾರದೆಂದು ಅವರು ಬೋಧಿಸುತ್ತಿದ್ದರು. ಮನೆ-ಮುಂಬಾದವುಗಳಿಗಾಗಿ ಮರಗಳನ್ನು ಕಡಿವಾಗ ಸಹ ಪಾಪ ಬರುತ್ತದೆಂಬ ಭಾವನೆ ನಮ್ಮ ಹಳೆಯ ಸಂಪ್ರದಾಯದ ಜನರಲ್ಲಿ ರೂಢವುಂಟು ಆ ಪಾಪನಿವೃತ್ತಿಗಾಗಿಯೇ ಹೊಸ ಮನೆಗಳ ಪ್ರವೇಶದ ಕಾಲಕ್ಕೆ ವಾಸ್ತುಶಾಂತಿ ವೆಂಬ ಹೋಮವನ್ನು ಮಾಡುತ್ತಾರೆ. ಹಿರಿಯರಂತೆ ನಾವೂ ವೃಕ್ಷ ಸಂಪತ್ತನ್ನು ಬೆಳೆಸಬೇಕು, ಜತನ ಮಾಡಬೇಕು. ಹಾಗೆ ಮಾಡಿದರೇನೇ ನಮ್ಮ ನಾಡು ತಿರುಗಿ ಸುವರ್ಣಭೂಮಿಯಾಗಲು ಅನುಕೂಲವಾಗುವದು.

— ಪಟ್ಟಿಯ ಬೆಲೆಗಳನ್ನು [illegible] ನಾಗರಿಕ [illegible] ದೇಶಾಯಿ [illegible]

— ಬ್ರಿಟಿಶ ಪಾರ್ಲಮೆಂಟಿನ [illegible] ಭವನವು [illegible] ಬ್ರಿಟಿಶ [illegible] ಭವನವನ್ನು ಕಟ್ಟಿಸಿದ [illegible] ಬ್ರಿಟಿಶ ಸರಕಾರವು [illegible] ಪಾರ್ಲಮೆಂಟಿನ (ಕೇಂದ್ರ ಶಾಸನ-ಮಂಡಳ) ಅಧ್ಯಕ್ಷ [illegible] ಶ್ರೀ [illegible]

— ಮದ್ರಾಸ ರಾಜ್ಯಾಂಗದಲ್ಲಿ ಆಹಾರ ಧಾನ್ಯ [illegible] ಭಾರತ ಸರಕಾರವು [illegible] ರಾಜ್ಯಾಂಗಕ್ಕೆ [illegible] ಲಕ್ಷ ಟನ್ನ ಅಕ್ಕಿ ಕೊಟ್ಟಿತ್ತು [illegible] ಲಕ್ಷ ಟನ್ನ [illegible] ಮದ್ರಾಸ ಸರಕಾರವು ಅಕ್ಕಿಯ [illegible] ಪ್ರಮಾಣವನ್ನು [illegible]

— [illegible] ಸಮ್ಮೇಳನದಲ್ಲಿ [illegible]

— [illegible] ಜನರಿಗೆ [illegible]

— ಬಂಗಾಲದಲ್ಲಿ [illegible] ಭಯಂಕರ [illegible] ದಿನ [illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

[illegible]

[illegible]

[illegible]

ದಿವಸಗಳ ಹಿಂದೆ [illegible] ವಿದ್ಯಾರ್ಥಿಯು [illegible]

[illegible]

[illegible] ಆದುದರಿಂದ [illegible]

ದೆಯನ್ನು ಬಯಸಬೇಕು

[illegible]

ಮುಂದಾಗಿ [illegible] — ಸಂಪಾದಕ]

ಹೊನ್ನಾವರ— (೧೪–೬–೫೦) [illegible]

[illegible]

ಎಂಬವರು ಬಂದಿದ್ದಾರೆ

[illegible] ಎಂಬವರು ಇಲ್ಲಿ ರೆಸಿಡೆಂಟ ಮೆಜಿಸ್ಟ್ರೇಟರಾಗಿ ಬಂದಿದ್ದಾರೆ

೨–೩ ದಿನಗಳ ಹಿಂದೆ [illegible] ಇಲ್ಲಿ ಬಂದ [illegible]

[illegible]

೩–೪ ದಿನಗಳ ಹಿಂದೆ [illegible]

[illegible]

ಭಟಕಳ— [illegible]

ಶಿರಸಿ— [illegible]

[illegible]

ಸಿದ್ದಾಪುರ— [illegible]

ಕರ್ನಾಟಕ [illegible] ವಿದ್ಯಾಲಯ

ಕಳೆದ ೬ ವರ್ಷಗಳಿಂದ ಈ ವಿದ್ಯಾಲಯ ನಡೆದಿದೆ. [illegible]

[illegible]

ಪತ್ರಿಕಾ–ಪ್ರಕಟಣೆ.

ಜವಳಿ ಎಣ್ಣೆಯ ಗಂಡಿಣೆ ನಿಯಂತ್ರಣ

[illegible] ಪತ್ರಿಕೆಗಳಿಂದಲೂ, ಸಾಕಷ್ಟು ಎಣ್ಣೆಯನ್ನು [illegible] ಜವಳಿ ಎಣ್ಣೆಯ ಕಂಪನಿಗಳು ಕೊಟ್ಟಿರುವುದರಿಂದಲೂ ಮುಂಬಯಿ ಸರಕಾರವು ತನ್ನ ರಾಜ್ಯಾಂಗದ ಬೇರೆ ಬೇರೆ ಜಿಲ್ಲೆಗಳಲ್ಲಿ [illegible] ಜವಳಿ ಎಣ್ಣೆಯ ವಿತರಣದ ಮೇಲಿನ [illegible] ನಿರ್ಬಂಧಗಳನ್ನು ಶಿಥಿಲಗೊಳಿಸಲು ನಿರ್ಧರಿಸಿದೆ [illegible] ಸರಕಾರವು ಎಣ್ಣೆಯ ವಿತರಣದ ಮೇಲಿನ ನಿಯಂತ್ರಣವನ್ನು ಸಡಲಿಸಲು [illegible] ಬೇಕಾದಷ್ಟು ಜವಳಿ ಎಣ್ಣೆ [illegible] ಕಾರವಾರ ಜಿಲ್ಲೆಯೊಳಗೆ ಹಾಕಲಾಗಿದ್ದ ನಿರ್ಬಂಧಗಳು ಇದೇ ಕಳೆದ ಜೂನ ೩ರಿಂದ ರದ್ದುಗೊಳಿಸಲ್ಪಟ್ಟಿವೆ [illegible] ಈ ನಿರ್ಬಂಧಗಳು ರದ್ದಾಗಿರುವದರಿಂದ [illegible] ತಮಗೆ ಬೇಕಷ್ಟು ಎಣ್ಣೆಯನ್ನು [illegible] ಎಣ್ಣೆಯ ಚೀಟಿಗಳನ್ನು ತೋರಿಸಿ ಕೊಂಡು [illegible] ಎಣ್ಣೆ ಕೊಳ್ಳುವ [illegible] ಇಂಪೀರಿಯಲ್ ಗೆಲನ್ನು (= ೧ ಡಬ್ಬಿ) [illegible] ಇಂಪೀರಿಯಲ್ [illegible] ಜವಳಿ ಎಣ್ಣೆಯ [illegible] ಮುಂದುವರಿಯುವವು

(ಜಿಲ್ಲಾಧಿಪರ ಕಚೇರಿಯ ಪ್ರಕಟಣೆ)

ಗೋವೆಯ ಶ್ರೀ ರಾಮನಾಥ ದೇವಸ್ಥಾನದಲ್ಲಿ ಸುದರ್ಶನ ಮತ್ತು ನವಚಂಡೀ ಹವನಗಳು.

(ಇದೇ ಕಳೆದ ಮೈಮಾಸ ತಾರೀಕಿನ ಪ್ರಾರಂಭಕ್ಕೆ ಶ್ರೀ ರಾಮನಾಥರೊಳಗಿನ ಶ್ರೀ ರಾಮನಾಥ ದೇವಸ್ಥಾನದಲ್ಲಿ ಕಲಾಭಿವೃದ್ಧ್ಯರ್ಥ ಮಹಾಸುದರ್ಶನ-ಹವನವೂ ನವಚಂಡೀ-ಹವನವೂ, ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್-ದ್ವಾರಕಾನಾಥತೀರ್ಥ ಗುರುಗಳ ನೇತೃತ್ವದಲ್ಲಿ, ನಡೆದಿದ್ದವು. ಮೇ ೧ ದಿನಾಂಕ ೫ ನೆಯ ವರೆಗೆ ಈ ಮಹೋತ್ಸವ ನಡೆಯಿತು. ಸಾವಿರಾರು ಭಕ್ತರೂ ಭಾವಿಕರೂ ಈ ಉತ್ಸವಕ್ಕೆ ಕೂಡಿದ್ದರು. ಈ ಉತ್ಸವದ ವಿಸ್ತೃತ ವರದಿಯನ್ನು ಪಾಠಕರಿಗಾಗಿ ಗೋವೆಯ ಶ್ರೀ ಮಾರ್ಗದರ್ಶಕ-ಕಾರ್ಯಾಲಯದ ರಾ|| ರಾಮಚಂದ್ರ ಕೃಷ್ಣ ಕಾಮತ ಇವರು ಬರೆದು ಕಳಿಸಿದ್ದಾರೆ. ಅದರ ಸಾರಾಂಶವನ್ನು " ವೃತ್ತ " ದ ಓದುಗರ ಮಾಹಿತಿಗಾಗಿ ಇದರಲ್ಲಿ ಕೊಡಲಾಗಿದೆ)

ರಾ|| ಕಾಮತರು ತಮ್ಮ ವರದಿಯ ಪ್ರಸ್ತಾವನೆಯಲ್ಲಿ ದೇವತಾ-ಪ್ರತಿಷ್ಠೆ ಎಂದರೇನು, ಕಲಾಭಿವೃದ್ಧಿಯೆಂದರೇನು ಎಂಬುದನ್ನು ವಿವರಿಸಿದ್ದಾರೆ. ಅವರು ಬರೆಯುತ್ತಾರೇನೆಂದರೆ —

ವಿದ್ಯುದ್ದೀಪಗಳಿಗಾಗಿ ತಾಂಬ್ರದ ತಂತಿಯ ಉಪಯೋಗ ಮಾಡುತ್ತಿದ್ದುದನ್ನು ನಾವು ನೋಡುತ್ತೇವೆ. ಆದರೆ ಆ ತಾಂಬ್ರದ ತಂತಿಯೇ ವಿದ್ಯುತ್ತು ಅಲ್ಲ. ಆ ತಂತಿಯಲ್ಲಿ ವಿದ್ಯುತ್ತಿನ ಪ್ರವಾಹವಿರುತ್ತದೆ. ಅದೇ ರೀತಿ ಮಂದಿರಗಳಲ್ಲಿ ನಮ್ಮ ಕಣ್ಣಿಗೆ ಬೀಳುವ ದೇವತಾ-ಪ್ರತಿಮೆಗಳೇ ದೇವರಲ್ಲ. ಆ ಪ್ರತಿಮೆಗಳಲ್ಲಿ ದೇವರಿರುತ್ತಾನೆ. (ಅಂದರೆ ಅಭಿವ್ಯಕ್ತನಾಗಿರುತ್ತಾನೆ.) ಪ್ರತಿಮೆಯೊಳಗಿನ ಈ ದೇವತಾ-ಸಾನ್ನಿಧ್ಯವು ಮಂದಿರದೊಳಗಿನ ಪಾವಿತ್ರ್ಯ, ವಿಧ್ಯುಕ್ತ ಮಂತ್ರತಂತ್ರಗಳಿಂದೊಡಗೂಡಿದ ಅರ್ಚನೆಯ ಮೇಲೆ ಮತ್ತು ಸ್ವತಃ ಅರ್ಚಕರ ತಪೋಬಲ ಇವುಗಳ ಮೇಲೆ ಅವಲಂಬಿಸಿರುತ್ತದೆ. " ಅಭಿರೂಪತ್ವಾಚ್ಚ ಬಿಂಬಸ್ಯ ಪೂಜನಾದರ್ಚಕಸ್ಯ ತಪೋಬಲಾತ್ ! ಅರ್ಚಕಸ್ಯ ತಪೋಯೋಗಾದ್ದೇವಃ ಸಾನ್ನಿಧ್ಯಮೃಚ್ಛತಿ ! " ಎಂದು ನಮ್ಮ ಶಾಸ್ತ್ರಗಳಲ್ಲೇ ಹೇಳಿದೆ. ಸಾಮಾನ್ಯವಾಗಿ ನೋಡಿದರೆ ವಿದ್ಯುಚ್ಛಕ್ತಿಯು ನಮ್ಮ ಸುತ್ತುಮುತ್ತಲಿನ ವಾತಾವರಣದಲ್ಲೆಲ್ಲಾ ತುಂಬಿದೆ. ಅದನ್ನು ನಾವು ಒಟ್ಟುಗೂಡಿಸಿ, ತಾಂಬ್ರದ ತಂತಿಯಿಂದ ಬೇಕಾದಲ್ಲಿಗೆ ಒಯ್ಯುತ್ತೇವೆ. ದೇವತಾ-ಪ್ರತಿಷ್ಠೆಯ ಪ್ರಕಾರವೂ ಅದೇ ಸ್ವರೂಪದ್ದು. ವಿಶ್ವವನ್ನೆಲ್ಲ ವ್ಯಾಪಿಸಿರುವ ಪರಮಾತ್ಮನನ್ನು ಸಂಗ್ರಹಿಸಿ ಆವಾಹಿಸಿಕೊಂಡು ಮಂದಿರಗಳಲ್ಲಿ, ಲಿಂಗದಲ್ಲಿ ಇಲ್ಲವೆ ವಿಗ್ರಹದಲ್ಲಿ ಅವನ ಸಾನ್ನಿಧ್ಯವನ್ನು ಕಲ್ಪಿಸುವುದೇ ದೇವತಾ-ಪ್ರತಿಷ್ಠೆ. ಆಗ ಬರುತ್ತದೆ ನಮ್ಮ ವಿಜ್ಞಾನ ಶಾಸ್ತ್ರಗಳು ಕಂಡು ಹಿಡಿದ ವಿದ್ಯುತ್ತಿನ ಉತ್ಪತ್ತಿ, ಪ್ರವಹನ ಮತ್ತು ಪ್ರಯೋಜನಗಳ ಪ್ರಯೋಗಗಳು ಎಷ್ಟು ನಿಜವಿರುತ್ತವೋ, ನಮ್ಮ ಪ್ರಾಚೀನ ಅತೀಂದ್ರಿಯದರ್ಶಿ ಮಹರ್ಷಿಗಳು ಕಲಾ-ನ್ಯಾಸಾದಿ ವಿಗ್ರಹಗಳಲ್ಲಿ ದೇವತ್ವದ ನಿರ್ಮಾಣ, ಕ್ರಿಯೆಗಳ ಬಗ್ಗೆ ಕಂಡುಹಿಡಿದ ಮತ್ತು ಬರೆದಿಟ್ಟ ಪ್ರಯೋಗಗಳು ಅಷ್ಟೇ ನಿಜವಿರುತ್ತವೆಂದು ನಾವು ಒಪ್ಪಬೇಕು.

ದೇವತಾ-ಪ್ರತಿಷ್ಠೆಯಲ್ಲಿ ಪುನಃ ಹಲವಾರು ಪ್ರಕಾರಗಳಿವೆ. ಗೋಕರ್ಣದೊಳಗಿನ ಶ್ರೀ ಮಹಾಬಲೇಶ್ವರನ ಅಂಗಕ್ಕೆ ಇಲ್ಲವೆ ಕಾಶಿಯೊಳಗಿನ ಶ್ರೀ ವಿಶ್ವೇಶ್ವರನಿಗೆ ನಾಲ್ಕು ವರ್ಣಗಳ ಜನರು ಪೂಜೆ ಮಾಡಬಹುದು. ಪಂಢರಪುರದೊಳಗಿನ ಶ್ರೀ ಪಾಂಡುರಂಗನ ಚರಣಗಳಲ್ಲಿ ನಾಲ್ಕು ವರ್ಣಗಳ ಜನರು ತಮ್ಮ ತಲೆಯನ್ನಿಟ್ಟು, ದೇವರಿಗೆ ಮುಟ್ಟಿ, ದರುಶನ ತಕ್ಕೊಳ್ಳಬಹುದು. ಆದರೆ ಈ ಪ್ರಕಾರ ಎಲ್ಲ ಕಡೆಯ ಎಲ್ಲ ಲಿಂಗಗಳಿಗೂ ಪ್ರತಿಮೆಗಳಿಗೂ ಅನ್ವಯಿಸಲಾಗದು. ಪ್ರತಿಷ್ಠೆಯ ಪ್ರಕಾರಗಳೊಳಗಿನ ಭೇದವೇ ಈ ಭೇದಕ್ಕೆ ಕಾರಣ. ಆ ಪ್ರಕಾರ-ಭೇದವಂತ ಅಲ್ಲದೆಯು ಹಾಗಿದ್ದರೆ ಮತ್ತು ರೂಢಿಗಳುಂಟಾಗಿವೆ. ಈ ತಂಗತಿ ನಮ್ಮಲ್ಲಿಯ ಬಹಳ ಜನರಿಗೆ ಗೊತ್ತಿಲ್ಲ! ಆದುದರಿಂದಲೇ ಇತ್ತೀಚಿಗೆ ನಮ್ಮ ದೇಶದಲ್ಲಿ ವಿಚಾರಗಳ ಗೊಂದಲವುಂಟಾಗಿದೆ !

ಇನ್ನು ಕಲಾವೃದ್ಧಿಯೆಂದರೇನು ಎಂಬುದನ್ನು ನೋಡುವಾ. ಮೇಲೆ ಹೇಳಿದ ವಿದ್ಯುತ್ತಂತಿಯ ಉದಾಹರಣೆಯನ್ನೇ ತಕ್ಕೊಳ್ಳಿರಿ. ಎಷ್ಟೋ ವರ್ಷಗಳ ಕಾಲದಿಂದ ತಾಂಬ್ರದ ತಂತಿಯೊಳಗಿನ ವಿದ್ಯುತ್ತಿನ ಪ್ರವಾಹ ನಿಲ್ಲುತ್ತದೆ; ಪ್ರವಾಹದ ಜೋಡಣೆಯನ್ನು (ಸ್ವಿಚ್) ಒತ್ತಿ ತಂತಿಗೆ ತಂತಿ ಜೋಡಿಸಿದರೂ ವಿದ್ಯುದ್ದೀಪ ಬೆಳಗುವದಿಲ್ಲ. ಆಗ ನಾವೇನು ಮಾಡುತ್ತೇವೆ? ತಂತಿಯೊಳಗಿನ ದೋಷಗಳನ್ನು ತೆಗೆದೊಗೆದು ಅವನ್ನು ಸರಿಪಡಿಸುತ್ತೇವೆ. ಅದೇ ಮೇರೆಗೆ ದೇವತಾ-ಪ್ರತಿಮೆಯೊಳಗಿನ ದೇವ-ಕಲೆಯೂ ಕಡಿಮೆಯಾದಾಗ, ಅದರೊಳಗಿನ ದೇವತಾ-ಸಾನ್ನಿಧ್ಯದ ಪ್ರತೀತಿಯು ನಮಗೆ ಬರದಿದ್ದಾಗ ನಾವು ಶಾಸ್ತ್ರೋಕ್ತ ವಿಧಿ, ಕಲಾಭಿವೃದ್ಧಿ ಹವನ ಮುಂತಾದ ಪ್ರಮಾಣಗಳ ಪ್ರತಿಮೆಯೊಳಗಿನ ದೇವತ್ವವನ್ನು ಜಾಗೃತಗೊಳಿಸಬೇಕಾಗುತ್ತದೆ, ಅದರ ಕಲೆಯ ಅಭಿವೃದ್ಧಿ ಮಾಡಬೇಕಾಗುತ್ತದೆ. ಅದಕ್ಕೇ ಕಲಾಭಿವೃದ್ಧಿಯ ಪ್ರಕಾರಗಳನ್ನು ಹಿರಿಯ ವಿಜ್ಞಾನ ಶಾಸ್ತ್ರದಲ್ಲೂ ರಸಾಯನ ಶಾಸ್ತ್ರದಲ್ಲೂ ನಮ್ಮಗಳಿಗೆ ಪುಟ ಕೊಡುವ ಪ್ರಕಾರಗಳಂತೆಯೇ ಈ ಪ್ರಕಾರಗಳಿರುತ್ತವೆ ಎನ್ನುವುದನ್ನು ನೆನಪಿಡಬೇಕು. ಪೂರ್ವಜರು ಇವನ್ನು ಕಂಡು ಹಿಡಿದರು. ಈ ಪ್ರಕಾರಗಳು ಸಂಪೂರ್ಣವಿಜ್ಞಾನವೆಂದು ತಿಳಿಯದ ಜನರು ಮೂಢರೆನಿಸುತ್ತಾರೆ ಎನ್ನಬೇಕು.

ಗೋವೆಯಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ ಹಲವಾರು ದೇವಾಲಯಗಳಿವೆ. ಅವುಗಳಲ್ಲಿ ರಾಮನಾಥ ಸಂಸ್ಥಾನದೊಳಗಿನ ಶ್ರೀ ರಾಮನಾಥನ ಮಂದಿರವು ಒಂದು ಪ್ರಸಿದ್ಧ ದೇವಾಲಯವು. ಈ ದೇವಾಲಯದಲ್ಲಿ ಕಳೆದ ಮೈ ಮಾಸ ೧ ದಿನಾಂಕದಿಂದ ೫ ನೆಯ ವರೆಗೆ ಶ್ರೀ ದೇವರ ಕಲಾಭಿವೃದ್ಧಿಗಾಗಿ, ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶ ಶ್ರೀಮದ್-ದ್ವಾರಕಾನಾಥ ತೀರ್ಥರ ನಾಯಕತ್ವದಲ್ಲಿ, ಮಹಾಸುದರ್ಶನ ಹವನ, ನವಚಂಡೀ ಹವನ, ಕಲಶಾಭಿಷೇಕ ಮುಂತಾದ ಪ್ರಕಾರಗಳು ನಡೆದವು. ಈ ಉತ್ಸವದ ಜೊತೆಗೆ ದೇವಸ್ಥಾನದಲ್ಲಿ, ಮಂಟಪದಲ್ಲಿ, ಧಾರ್ಮಿಕ ವಿಷಯಗಳ ಮೇಲೆ ಪ್ರವಚನಗಳೂ, ಭಜನ-ಕೀರ್ತನಾದಿಗಳೂ, ಬೇರೆ ಬೇರೆ ಉತ್ಸವಗಳೂ ನಡೆಯುತ್ತಿದ್ದವು. ದಿನಾಲೂ ಸಂತರ್ಪಣೆಗಳಾಗುತ್ತಿದ್ದವು. ಪ್ರತಿ ದಿನ ೩೦ ಯಿಂದ ೪ ಸಾವಿರ ಜನ ಜನರು ಊಟಕ್ಕಿರುತ್ತಿದ್ದರು. ಅದೇ ಮಾದರಿ ಕೊನೆ ದಿನ ಸುಮಾರು ೮-೧೦ ಸಾವಿರ ಅನ್ನ-ಸಂತರ್ಪಣೆಯಾಯಿತು. ಸಣ್ಣೆಯ ಶ್ರೀಮಂತ ಗೃಹಸ್ಥರಾದ ಶ್ರೀ ಅನಂತ ವಿಶ್ವನಾಥ ಶೆಣಯಿ ಮತ್ತು ಅವರ ಬಂಧುಗಳೂ ಸ್ವಯಂಸೇವಕ-ಸೇವಿಕೆಯರ ಸಹಾಯದಿಂದ ವ್ಯವಸ್ಥೆ ಮಾಡಿದ್ದುದರಿಂದ ಈ ಮಹಾಯಾಗ್ನೆಯ ಕಾರ್ಯಕ್ರಮಗಳು ನಿರ್ವಿಘ್ನವಾಗಿಯೂ ಸುವ್ಯವಸ್ಥಿತವಾಗಿಯೂ ಕೊನೆಗೊಂಡವು. ೫ ನೆಯ ದಿನ ಪೂರ್ಣಾಹುತಿ, ಅವಭೃಥಗಳಾದ ಮೇಲೆ ಯಜಮಾನರು ಬ್ರಾಹ್ಮಣರಿಗೆ ಸಂಭಾವನೆ ಕೊಟ್ಟು, ಶ್ರೀಗುರುಗಳ ಕೈಯಿಂದಲೂ ಆ ಬ್ರಾಹ್ಮಣರಿಂದಲೂ ಆಶೀರ್ವಾದ ಪಡೆದುಕೊಂಡರು, ಮತ್ತು ಉತ್ಸವದ ಸಮಾಪ್ತಿಯಾಯಿತು.

ಈ ಉತ್ಸವದ ಕಾಲಕ್ಕೆ ನಡೆದ ೫-೬ ದಿನ ಶ್ರೀಮದ್ಭಾಗವತ ಸಪ್ತಾಹ ನಡೆಯಿತು. ನಾ ದಿನಾಂಕ, ೫ ನೇ ಮೇಂದ ಎಂದು ಸಾಯಂಕಾಲ ಜನರು ಮುದ್ರಾಧಾರಣೆ ಮಾಡಿಕೊಂಡರು. ಮಾಧ್ವರೂ ಅಗ್ನಿಹೋತ್ರಿಗಳೂ, ಗಂಡಸರೂ ಹೆಂಗಸರೂ, ದೊಡ್ಡವರೂ ಚಿಕ್ಕವರೂ ಬಹು ಉತ್ಸಾಹದಿಂದ ಮುದ್ರೆಗಳನ್ನು ತಕ್ಕೊಂಡರು. ಈ ದೃಶ್ಯ ನೋಡಿದವರು ಈಗ ದೇಶದಲ್ಲಿ ಧರ್ಮಬುದ್ಧಿಯು ಜಾಗೃತವಾಗುತ್ತದೆಂದು ಎಂದೂ ಒಪ್ಪಬೇಕಿಲ್ಲ. ಧರ್ಮಕಾರ್ಯಗಳನ್ನು ಸರಿಯಾಗಿ ತಿಳಿಸಿಹೇಳಿ, ತಮ್ಮ ಆಚರಣೆಯಿಂದ ಅದನ್ನು ಜನರ ಮನಸ್ಸಿನ ಮೇಲೆ ಬಿಂಬಿಸುವವರು ಬೇಕು. ಶ್ರೀ ಸ್ವಾಮಿಗಳಂಥ ಧರ್ಮಗುರುಗಳು ಮೇಲಿಂದ ಮೇಲೆ ದಿಗ್ವಿಜಯ ಬೆಳಸುತ್ತ ಉಪದೇಶ ಕಾರ್ಯದಲ್ಲಿ ಧರ್ಮದ ವಿಷಯದಲ್ಲಿ ಕಂಡು ಬರುವ ಔದಾಸೀನ್ಯವೂ ಅಜ್ಞಾನವೂ ಬೇಗ ದೂರವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ಗೋಕರ್ಣ ಮಠಾಧೀಶರಿಗೂ ಶ್ರೀ ಕೈವಲ್ಯ ಮಠಾಧೀಶರಿಗೂ ಪರಸ್ಪರ ಭೆಟ್ಟಿಯಾದುದು ಮತ್ತು ಇಬ್ಬರಲ್ಲೂ ಸ್ನೇಹಸಂಬಂಧವುಂಟಾದದ್ದು ನೋಡಿ ಬಹಳ ಜನರ ಮನಸ್ಸಿಗೆ ಆನಂದವಾಯಿತು. ಆದರೆ ಆ ಯೋಗ ಈ ಸಾರೆ ಕೂಡಿ ಬರಲಿಲ್ಲ, ಅದಾದರೂ ಬೇಗನೇ ಅದು ಕೂಡಿ ಬರುವದೆಂಬ ಆಶೆಯುಂಟು.

ಮೇಲಿನ ಉತ್ಸವವನ್ನು ಕಂಡು ಹಾಗೂ ಉತ್ಸವದ ಕಾಲಕ್ಕೆ ನಡೆದ ಪ್ರವಚನಾದಿಗಳನ್ನು ಕೇಳಿ ಮನಸ್ಸಿನಲ್ಲಿ ಬಂದ ಒಂದೆರಡು ವಿಚಾರಗಳನ್ನು ಇಲ್ಲಿ ನಮೂದಿಸಬಯಸುತ್ತೇನೆ. ಈಗ ನಮ್ಮ ದೇಶದಲ್ಲಿ ಜಾತಿಗಳು ನಷ್ಟವಾಗಬೇಕು, ಜಾತಿಭೇದ ನಿರ್ಮೂಲವಾಗಬೇಕೆಂದು ಕೂಗುವರು. ಆದರೆ ನಮ್ಮ ಮುಂದಾಳುಗಳೇ ಕೆಲವರು ಜಾತೀಯತೆಯ ಪ್ರಚಾರಕ್ಕೆ ಟೊಂಕ ಕಟ್ಟಿದ್ದಾರೆ! ಈ ಅಭಾವವನ್ನು ನೀಗಿಸಲು ನಾವು, ಬ್ರಾಹ್ಮಣ-ವೈಶ್ಯರೆಂಬ ಭೇದವನ್ನು ಗೌಡ-ದ್ರಾವಿ

ಪತ್ರಿಕಾ-ಪ್ರಕಟನೆ.

ವಸ್ತುಗಳನ್ನು ಬಳಸುವವರಿಗೆ (consumers) ಹಾಗೂ ನೌಕರ ವ್ಯಾಪಾರಿಗಳು ಕೊಡಬೇಕಾಗುವ ಒಟ್ಟಿಯ ಸುಂಕವೂ ಬೇರೆ ಬಗೆಯ ತೆರಿಗೆಗಳೂ ವ್ಯಾಪಾರ ವೆಚ್ಚದ ಅಂಗವಿರುತ್ತದೆಂದು ತಿಳಿಯಬೇಕೆಂದೂ, ವ್ಯಾಪಾರಿಗಳಿಗೆ ಕೊಡುವ ಮುನಾಫೆಯು ಅಂತರಿಕ್ಷ ಅವು ಅಧಿಕವಾಗುತ್ತವೆಂದು ತಿಳಿಯುತ್ತದೆಂದೂ, ಆದ್ದರಿಂದ ವ್ಯಾಪಾರಿಗಳು ಒಟ್ಟಿಯ ಸುಂಕವನ್ನು ಪ್ರಮಾಣಬದ್ಧ ಕಿರಕೋಳ ಬೆಲೆಗೆ ಕೂಡಿಸಕೂಡದೆಂದೂ ಭಾರತ ಸರಕಾರವು ತಿಳಿಸಿದೆ.

ಇದೇ ೧೯೫೦ ನೇ ಇಸವಿಯ ಜುಲಾಯಿ ತಾ. ೧ರಿಂದ ಮುಂದೆ ಕಿರಕೋಳ ಒಟ್ಟಿಯ ಮಾರಾಟಗಾರರು — ಅವರು ಸರಕಾರಿ ಸಂಸ್ಥೆಗಳಾಗಿರಲಿ ಯಾ ವ್ಯಾಪಾರಿ ಸಂಸ್ಥೆಗಳಾಗಿರಲಿ — ಹಾಗೂ ವಿಶೇಷ ಕಿರಕೋಳ ಒಟ್ಟಿಯ ಮಾರಾಟಗಾರರೂ ತಾವು ಕೊಳ್ಳುವ ವ್ಯಾಪಾರಿಗಳಿಗೆ ಇಲ್ಲವೆ ನೇರವಾಗಿ ಉಪಯೋಗಿಸುವವರಿಗೆ ಕೊಟ್ಟದ್ದರ ಒಟ್ಟಿಯ ಸುಂಕವನ್ನು ಗಿರಾಕಿಗಳಿಂದ ವಸೂಲು ಮಾಡದಂತೆ ನೋಡಿಕೊಳ್ಳಬೇಕಾಗಿ ನಿಶ್ಚಯಿಸಲಾಗಿದೆ. ಈ ಸುಂಕವು ತಮ್ಮ ಸಂತೀರ್ಣ ವೆಚ್ಚದ ಭಾಗವೆಂದು ಭಾವಿಸಿ ಮಾರಾಟಗಾರರು ಅದನ್ನು ಸಹಿಸಬೇಕು ಮತ್ತು ತಮ್ಮ ಮುನಾಫೆಯ ಅಂತರದೊಳಗಿಂದ ತೆರಬೇಕು.

(ಆಲ್ಪಾಧಿಕ ಆವರೇತ್ತೆಯಿಂದ ಪ್ರಕಟಿಸಿದ್ದು)

ರವೆಂಬ ಭೇದಭಾವನ್ನು ಮರೆತು ಸಂಘಟಿತರಾಗಬೇಕು; ಹಾಗು ಧರ್ಮರಕ್ಷಕರು ಕಾರ್ಯವನ್ನು ಕೈಕೊಳ್ಳಬೇಕು. ಹಿಂದೆ ನಮ್ಮ ವೈದಿಕ ಧರ್ಮದ ಮೇಲೆ ಪರಕೀಯರ ದಾಳಿಗಳಾಗಿದ್ದವು. ಈಗ [illegible] ಜಾತಿ, ಧರ್ಮ, ವರ್ಣ, ಅಸ್ಪೃಶ್ಯರು ಮುಂತಾದ ಸಂಸ್ಥೆಗಳಿಗೆ ನಾವು ಅಂಟಿಕೊಂಡು ಕೂಡದೆ ನಮ್ಮ ಸ್ವರಾಜ್ಯ ಬಾಹಿರರಾಗಿಕೊಳ್ಳಲಿಕ್ಕೆ ಬಂದೊದಗಿದ ಆಧುನಿಕ ಕಲ್ಪನೆಯನ್ನು ಮಾಡಿಕೊಂಡು ಈ ಜನರು ಧರ್ಮದ ಬುಡಬೇರುಗಳನ್ನು ಅಗಿದುಗೆಯಲು ಟೊಂಕ ಕಟ್ಟಿದ್ದಾರೆ! ಜನತೆಯ ಕಣ್ಣನ್ನು ಎಬ್ಬಿಸಿರುತ್ತಾರೆ! ಆದರ ಜಗತ್ತು ಮತ್ತು ಸೃಷ್ಟಿಯು ವಿಷಮತೆಯಿಂದಲೂ ವೈಚಿತ್ರ್ಯದಿಂದಲೂ ತುಂಬಿರುತ್ತದೆಂಬುದನ್ನು ನಾವು ಮರೆಯಬಾರದು. ಈ ವೈಷಮ್ಯ ವೈಚಿತ್ರ್ಯಗಳು ಎಂದೂ ನಾಶವಾಗಲಾರವು. ಅವು ಸೃಷ್ಟಿಯ ಸಹಜಸಿದ್ಧ ಗುಣಗಳಾಗಿರುತ್ತವೆ. ಈ ವಿಷಮತೆಯಲ್ಲಿ ಸಮಾನತೆಯನ್ನು ಕಲ್ಪಿಸಿ ಆಚರಿಸುವದೇ ನಮ್ಮ ಕರ್ತವ್ಯವಾಗಿರುತ್ತದೆ. ಇದನ್ನು ಹೇಗೆ ಸಾಧಿಸಬಹುದೆಂಬುದನ್ನು ಜ್ಞಾನೇಶ್ವರ-ತುಕಾರಾಮ-ರಾಮದಾಸ ಮುಂತಾದ ಸಂತರು ತಮ್ಮ ಅನುಭವ ಗ್ರಂಥಗಳಲ್ಲಿ ಬರೆದಿಟ್ಟಿರುತ್ತಾರೆ.

ರಾಷ್ಟ್ರದ ಉತ್ಕರ್ಷ ನಾಗರಿಕನಾಗಬೇಕಾದರೆ ಮನುಷ್ಯನು ತನ್ನ ಮನೆಗೆ ಕೊಳ್ಳಿ ಇಡಬೇಕೆಂದಿಲ್ಲ. ತನ್ನ ಮನೆ-ಮನೆತನಗಳ ರಕ್ಷಣೆಯನ್ನು ಮಾಡಿ ಪ್ರಾಂತೀಯನಾಗಬಲ್ಲನು, ರಾಷ್ಟ್ರೀಯ ನಾಗರಿಕನಾಗಬಲ್ಲನು. ಅದೇ ರೀತಿಯಾಗಿ ಧರ್ಮಗಳ ರಕ್ಷಣೆ ಮಾಡುವದರಿಂದ ಸ್ವರಾಜ್ಯಕ್ಕೆ ಅಡ್ಡಿಗಳಾಗಲಾರವು. ಪ್ರಾಂತೀಯತೆಗಳಿಂದ ಈ ಭಾವನೆಯನ್ನು ತಂದುಕೊಳ್ಳಬಹುದಾಗಿದೆ. ನಮ್ಮ ದೇಶಕ್ಕೆ ಕಷ್ಟಗಳು ಬಂದದ್ದು ಜಾತಿಭೇದಗಳ ಮೂಲಕವಲ್ಲ. ಜಾತಿದ್ವೇಷದಿಂದ ಆ ಕಷ್ಟಗಳು ಒದಗಿದವು. ಜಾತಿಭೇದ ಬೇರೆ, ಜಾತಿದ್ವೇಷ ಬೇರೆ. ಜಾತಿಭೇದದ ನಿರ್ಮೂಲನೆಯಾಗಲಾರದು. ಜಾತಿದ್ವೇಷ ದೂರಮಾಡಿ ಪರಸ್ಪರ ಪ್ರೇಮ ಮತ್ತು ಪರಸ್ಪರ ಸಹಾಯ ವಿಸ್ತರಿಸುವದರಿಂದ ನಮ್ಮ ಉದ್ಧಾರವಾಗುವದು. ಪ್ರಾಚೀನ ಕಾಲದಲ್ಲಿ ಕೌರವ-ಪಾಂಡವರು ಒಂದೇ ಜಾತಿಯವರು, ಒಂದೇ ಕುಲದವರು ಆಗಿದ್ದರೂ, ಅವರು ಐಕ್ಯದಿಂದಿರಲಿಲ್ಲ! ಅರ್ವಾಚೀನ ಇತಿಹಾಸ ಕಾಲದಲ್ಲಿ ಒಂದೇ ಧರ್ಮಕ್ಕೆ ಸೇರಿದ ಮೊಗಲರೂ ವಿಜಾಪುರ, ಗೋವಳಕೊಂಡೆಗಳ ಸುಲ್ತಾನರೂ ಕಾದಾಡಿದರು! ನಮ್ಮ ಈ ಕಾಲದಲ್ಲಿ ಸಹ ಒಂದೇ ಧರ್ಮದ ಎರಡು ಮತ್ತು ಒಂದೇ ವರ್ಣದ ಮೇಲೆ ಬಾಳುವ ಇಂಗ್ಲಿಶ-ಫ್ರೆಂಚರೂ ಜರ್ಮನರೂ ಹೋರಾಡಿ ಹಾಳಾಗಿರುತ್ತಾರೆ! ಚೀನ-ಜಪಾನಿಯರೂ ತಮ್ಮೊಳಗೆ ಬಡಿದಾಡಿಕೊಂಡರು! ಈ ವಿವರಣೆಯ ಮೇಲಿಂದ ಒಂದೇ ಜಾತಿಯಾದ ಮಾತ್ರಕ್ಕೆ ಐಕ್ಯವು ಸಾಧ್ಯವಾಗಲಾರದೆಂಬುದು ಕಂಡುಬರುವದಿಲ್ಲವೇ? ಈ ನಮ್ಮ ದಿಗ್ವಿಜಯ ಗ್ರಂಥದಲ್ಲಿ ಪೀಠದ ಭಾಗವತ ಧರ್ಮ ಮೂಲವಿಶ್ವಬಂಧುತ್ವ. ಈ ಧರ್ಮವು ಸ್ಪಷ್ಟವಾಗಿ ಅದು ಪ್ರತಿಯೊಬ್ಬನ ಹೃದಯದಲ್ಲಿ ಬೇರೂರಿದರೆ ಮಾತ್ರ ಭಾರತದಲ್ಲಿ ವಿಶ್ವದಲ್ಲಿ ಶಾಂತಿ ನೆಲೆ ನಿಲ್ಲುವದು. ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿದಂತೆ, "ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್... ಮಾಂ ಏಕಂ ಶರಣಂ ವ್ರಜ" ಎಂಬ ಭಾಗವತ ಧರ್ಮದಂತೆ ಎಲ್ಲ ವರ್ಣಗಳ ಜನರು ಆರ್ಯ, ಸ್ತ್ರೀ, ಶೂದ್ರರೂ ಸಹ ಪರಮಪದಕ್ಕೆ ಅರ್ಹರಾಗಿರುವರು, ಹೀಗೆ ಸರ್ವರಿಗೂ ಸಮಾನ ಆದರ್ಶವನ್ನು ಭಾಗವತ ಧರ್ಮವು

ಆ ಬಯಸುವದು. ಈ ಪವನೋಚ್ಚ ಧರ್ಮತತ್ವಗಳನ್ನು ಕಣ್ಮುಂದೆ ಇಟ್ಟು ಆಚರಿಸಿಕೊಳ್ಳಬೇಕು. ಅಂದರೆ ಮಾತ್ರ ಸರ್ವತ ನಮ್ಮ ಉದ್ಧಾರವಾಗಬಲ್ಲದು, ಸರ್ವತ್ರ ಶಾಂತಿ, ಸುಖ ಸಮಾಧಾನಗಳು ನೆಲಸಬಲ್ಲವು.

ಶ್ರೀ ರಾಮನಾಮ ನವಮಿಯ ಉತ್ಸವವನ್ನು ತೀರಿಸಿಕೊಂಡು ಶ್ರೀ ದ್ವಾರಕಾನಾಥ ಗುರುಗಳು ಶ್ರೀ ರಾಮನವಮಿಯ ಸಮಾಪನದ ಶ್ರೀ ಮಹಾಲಕ್ಷ್ಮಿಯ ಹಾಗೂ ಶ್ರೀ ನಾಗೇಶ ದೇವಸ್ಥಾನಗಳಿಗೆ ಭೆಟ್ಟಿ ಕೊಟ್ಟು, ಸೋಂದೆ ಅರಸರ ಆದಿಮನೆಯಲ್ಲಿ ಪಾದ್ಯ ಪೂಜೆಯ ಸತ್ಕಾರ ಸ್ವೀಕರಿಸಿ ಸಜ್ಜನರ ಹೃದಯದ ಶ್ರೀಮಂತ ಸೇವೆಯ ವರ ಶ್ರೀವರ್ಧನ ಬಾಗಲಿನ ಕಿರೀಟದ ಆಶ್ರ ಗುರುಗಳು ೧೩ದಿನ ಮುಕ್ಕಾಮು ಮಾಡಿ, ಮುಂದ ಮೇ ತಾ. ೧೧ಕ್ಕೆ ಮುಂಬಯಿಗೆ ಪಯಣ ಬೆಳಸಿದರು.

ಸಿದ್ಧೇಶ್ವರ ಗಜನಿಯ ದುರವಸ್ಥೆಗೆ ಕಾರಣವೇನು?

ಸಿದ್ಧೇಶ್ವರ ಗಜನಿಯ ಕಟ್ಟು ಜಂತ್ರಿಗಳ ದುರುಸ್ತಿಗಾಗಿ ಜಿಲ್ಹಾಧಿಕಾರಿ ತಗಾವಿ ಸಾಲ ಕೊಟ್ಟದ್ದರ ಸಂಬಂಧದಲ್ಲಿ ಕಳೆದ ವಾರದ 'ವೃತ್ತ'ದಲ್ಲಿ ಬಂದ ಟೀಕೆಯನ್ನು ಅನುಲಕ್ಷಿಸಿ ಈ ಗಜನಿಯ ಮಾಹಿತಿಯುಳ್ಳ ಗೃಹಸ್ಥರೊಬ್ಬರು ಬರೆಯುತ್ತಾರೆ—

ಗಜನಿ ಭೂಮಿಗಳ ಸುಧಾರಣೆಯ ಯೋಜನೆಗಳನ್ನು ತಯಾರಿಸಲು ಸರಕಾರವು ಒಬ್ಬ ಅಧಿಕಾರಿಯನ್ನು ನೇಮಿಸಿದೆ. ೨-೩ ವರ್ಷಗಳ ಹಿಂದೆ ಈ ಅಧಿಕಾರಿಯು ಯೋಜನೆಗಳ ಸಲುವಾಗಿ ಪ್ರತ್ಯಕ್ಷ ಪರಿಸ್ಥಿತಿಗಳ ತಪಾಸಣೆ ಮಾಡಿ ಬರೆದಿದ್ದ ಮೇರೆಗೆ ಆವರ ಯೋಜನೆಯಾದಾಗ ಸಿದ್ಧೇಶ್ವರ ಗಜನಿಯ ಫಲಭೂಮಿಗೆ ಉದ್ದ ಕಟ್ಟು ಮಾತ್ರ ಹಾಕಲಾಗಿತ್ತು. ಗಜನಿ ಭೂಮಿಯ ಸುಧಾರಣೆಯ ಕಾನೂನ ಬಾಬಿಯಲ್ಲಿ ಬರುವಷ್ಟರೊಳಗೆ ೨-೩ ವರ್ಷ ಕಟ್ಟು ಹಾಳಾಯಿತು! ಇದರ ದುರುಸ್ತಿಯ ಯೋಜನೆ ಮತ್ತು ಖರ್ಚಿನ ಅಂದಾಜು ಮಾಡಲು ಬೇಕಾದ ಅಧಿಕಾರಿಯ ನೇಮಕ ಇದುವರೆಗೂ ಆಗಲಿಲ್ಲ, ಇಂತಿ ನಿಯತ [illegible] ಆಗಲಿಲ್ಲ!

ಇನ್ನು ಗಜನಿ ಭೂಮಿಗಳ ಸುಧಾರಣೆಯ ಕಾನೂನಿನ ಕ್ರಮವು ಎಷ್ಟು ದೀರ್ಘ ಸೂತ್ರಿಯಾದ್ದು ಕಂಟಕಮಯವು ಎಂಬುದನ್ನು "ವೃತ್ತ"ವೇ ಹಿಂದೊಮ್ಮೆ ಟೀಕಿಸಿದ್ದುಂಟು. ಗಜನಿ ಭೂಮಿಯ ಸುಧಾರಣಾ ಮಂಡಳದವರು ಕೆಲ ತಮ್ಮ ಯೋಜನೆ ಪ್ರಾರಂಭಿಸಲು ಹಣವಿಲ್ಲದೆ ತಕರಾರು ಮಾಡಿದ್ದರಿಂದ ತಗಾವಿ ಸಾಲ ಕೊಡಬೇಕೆಂದು ಗಜನಿಯ ದುರುಸ್ತಿ ಮಾಡಿದರಿಂದು ಗಜನಿಯ ಮಾಲೀಕರಿಗೆ ತಿಳಿಸಿದ್ದರು. ಆದರಿಂದಲೇ ಜಿಲ್ಹಾಧಿಕಾರಿ ತಗಾವಿ ಮಂಜೂರ ಮಾಡಿದರು. ಹೊರತು ದಾನಧರ್ಮದ ಮಾತಲ್ಲ. ಮುಂದೆ ರಾಜಕೀಯ ಯೋಜನೆಯನ್ನೂ ಕಡೆಗಣಿಸಲಿಲ್ಲ. ಯೋಜನೆಯು ಕೈಗೂಡುವುದು ಇನ್ನೂ ಎಷ್ಟು ಕಾಲ ಕಳೆಯುತ್ತದೋ ತಿಳಿಯದೆಂದು ಹೇಳಿ, ತಗಾವಿ ಸಾಲ ಕೊಡಬೇಕೆಂದು ತುರ್ತಾಗಿ ಗಜನಿಯ ದುರುಸ್ತಿ ಮಾಡಿರೆಂದು ಅವರು ಸಲಹೆ ಕೊಟ್ಟಿದ್ದರು.

ಗಜನಿಯ ದುರುಸ್ತಿಗಾಗಿ ಜಿಲ್ಹಾಧಿಕಾರಿ ಬರೇ ೧೦೦೦ ರೂ. ತಗಾವಿ ಕೊಟ್ಟರು. ಆದರೆ ಜನಿಯ ಕಟ್ಟು-ಜಂತ್ರಿಗಳು ಭಗ್ನವಾಗಿ, ಸರಿಪಡಿಸುವ ದುರುಸ್ತಿಯು ಬರಿ ಸ್ವಾಯತ್ತವಾಗಿಲ್ಲವಾದರೂ ೧೫೦೦೦ ವಾರದ ಬೇಕು. ಆ ಹಣ ಒದಗಿಸಲು ತಗಾವಿ ಪಡೆಕೊಂಡ ವ್ಯಕ್ತಿಗಳಿಗೆ ಸಾಧ್ಯವಾಗಲಿಲ್ಲ. ಆದರು ತಮ್ಮ ಕೈಯಿಂದ ೯-೯ ಸಾವಿರ ಮತ್ತು ಸರಕಾರದಿಂದ ಸಿಕ್ಕ ೧೦ ಸಾವಿರ ಹೀಗೆ [illegible] ಸಾವಿರ ರೂ. ಖರ್ಚು ಮಾಡಿ ಕಟ್ಟು ಹಾ[illegible] ಆದ ಕಟ್ಟು [illegible] ಯಾದ [illegible] ಯನ್ನು ತುಂಬಿದರು. ಆದರೂ ಭದ್ರವಾಗಲಿಲ್ಲ. ಮೇಲಿಂದ ಈ ಗಜನಿಯ ಕಟ್ಟಿಗೆ ಬಲ ಬರಲಿಕ್ಕಾದರೆ ಸರಿಯೋಜನೆಯ ಪ್ರಕಾರ ಕೆಲಸವು ನಡೆಯಬೇಕು.

ಕಟ್ಟುಗಳೂ ಭದ್ರವಾಗಬೇಕು. ಹೊಳೆಕೆ ಗಜನಿಯವರೂ ತಮ್ಮ ಕಟ್ಟಿನ ದುರುಸ್ತಿಗಾಗಿ ತಗಾವಿ ಬೇಡಿದ್ದರಂತೆ. ಆದರೆ ಅವರಿಗೆ ಇನ್ನೂ ತಗಾವಿ ಸಿಕ್ಕಿಲ್ಲ! ತಗಾವಿ ಸಿಗುವದೆಂಬ ನಿರೀಕ್ಷಣೆಯಿಂದ ಅವರು ಕಟ್ಟು ದುರುಸ್ತಿ ಮಾಡಿದ್ದರು. ಆದರೆ ಕೆಲಸವೂ ಆಗಬೇಕಾದಷ್ಟು ಸಮಾಧಾನಕರವಾಗಲಿಲ್ಲ. ಬೇಗನೆ ಕಟ್ಟುಗಳಿಗೆ ಗಂಡಿಗಳಾದವು. ಸರಕಾರದವರು ತಂಜೂರಿತನ ಮಾಡದೆ ಸಕಾಲದಲ್ಲಿ ಬೇಕಷ್ಟು ಹಣದ ಸಹಾಯ ಮಾಡಿದ್ದರೆ ಈ ಗತಿಯಾಗುತ್ತಿದ್ದಿಲ್ಲ. ಇನ್ನಾದರೂ ಅಧಿಕಾರಿಗಳು ಸಹೃದಯರಾಗಿ, ಸ್ವಯಂಪ್ರಾಂತಕರಾಗಿ ಸಹಾಯ ಮಾಡಿದರೆ ಮುಂದಿನ ವರ್ಷ ಬೆಳೆ ಬಂದೀತೆಂಬ ಆಶೆಯುಂಟು ಇತ್ಯಾದಿ.

ವಾರ್ತೆಗಳು

— ಮುಂಬಯಿಯ ಜನತೆಯು ಈಗ ೩೦ ಲಕ್ಷಕ್ಕೂ ಮಿಕ್ಕಿದೆ. ಆದ್ದರಿಂದ ಸರಕಾರದವರು ಮುಂಬಯಿ ನಗರ ಸಭೆಯ ಕ್ಷೇತ್ರವನ್ನು ಹೆಚ್ಚಿಸಿದ್ದಾರೆ. ಈ ಎಲ್ಲ ಕ್ಷೇತ್ರಕ್ಕೆ ಜನತೆಗಾಗಿ ನೀರು ಪೂರೈಸುವದು ನಗರ ಸಭೆಯವರಿಗೆ ಕಷ್ಟವಾಗಿದೆ. ಆದರಿಂದ ನಗರಸಭೆಯವರು ೧೫ ಕೋಟಿ ರೂಪಾಯಿ ಖರ್ಚು ಮಾಡಿ, ನಾಸಿಕ ಬಳಿಯ ತ್ರ್ಯಂಬಕೇಶ್ವರ ಪರ್ವತದೊಳಗೆ ಉಗಮ ಹೊಂದಿ ಪಶ್ಚಿಮಕ್ಕೆ ಅರಬೀ ಸಮುದ್ರವನ್ನು ಸೇರುತ್ತಿರುವ ವೈತರಣಿ ನದಿಗೆ ಸಹ್ಯಾದ್ರಿಯ ಒಡ. ಹಾಕಿ ೧೦ ಚದುರ ಮೈಲ ಗಳಷ್ಟು ವಿಸ್ತೀರ್ಣವಾದ ಕೆರೆಯನ್ನು ಕಟ್ಟಲು ನಿರ್ಧರಿಸಿದ್ದಾರೆ. ಕೆರೆಯ ನೀರನ್ನು ಅಡ್ಡಗಟ್ಟಲು ಒಡ್ಡು ೧೭೦ ಅಡಿ (ಸುಮಾರು ೫೧ ಫೂಟು) ಉದ್ದ ಮತ್ತು ೨೪೦ ಅಡಿ (೭೩ ಅಡಿ) ಎತ್ತರವಾಗುವದು. ಈ ಒಡ್ಡಿಗೆ ೧ ಲಕ್ಷ ೮೦ ಸಾವಿರ ಟನ್ ಸಿಮೆಂಟ ತಗಲುವದೆಂತೆ. ಸಂಕಲ್ಪಿತ ಕೆರೆಯ ನೀರು ಎಳೆಯಲು ಕೊಳವಾದ ಜನರ ನಿವಾಸಕ್ಕಾಗಿ ನಗರಸಭೆಯವರು. ಒಡ್ಡು ಹಾಕುವ ಸ್ಥಳದ ಸಮೀಪವೇ ಬೆಟ್ಟದಲ್ಲಿ ಒಂದು ಸಣ್ಣ ಬೆಟ್ಟವನ್ನು ಬಳಸಿರುತ್ತಾರೆ. ಅಲ್ಲಿಗೆ ನೀರು ಪೂರೈಸಲು ೫ ಲಕ್ಷ ರೂ. ಖರ್ಚು ಮಾಡಿ ಕೆರೆ ಕಟ್ಟಿಸಿದ್ದಾರೆ. ಒಡ್ಡಿನ ಕೆಲಸಕ್ಕೆ ಸಹಾ ಕಟ್ಟಿಸಿದ ಬಳಿಕ ಜೀವನಕ್ಕೆ ಬೇಕಾಗುವ ಸಾಮಾನು-ಸಾಮಗ್ರಿಗಳನ್ನು ಸಾಗಿಸಲು ದೊಡ್ಡ ಮತ್ತು ರಸ್ತೆ ಹಾಕಿದ್ದಾರೆ. ೧೯೩೧ರೊಳಗೆ ಈ ಕೆರೆ ಕಟ್ಟಿಸಿ ಮುಗಿಸಿ ಅದರಲ್ಲಿ ಹಿಡಿಯುವ ೧೫೦ ಕೋಟಿ ಗೆಲನ್ ನೀರು ನಿತ್ಯವಾಗಿ ದೊರೆವದು. ಇದರಿಂದ ಮುಂಬಯಿಗೆ ದಿನಾಲು ೩೦ ೩೦ ೧೮ ಕೋಟಿ ಗೆಲನ ನೀರು ಪೂರೈಸಲು ಶಕ್ಯವಾಗುವದಕ್ಕೆ ಅಗತ್ಯವು ಇಂಜಿನಿಯರರೆಂದು ವ್ಯಕ್ತಪಡಿಸಿ, ಎಸ್. ವಿ. ಬೆಂಡರೆಕರರು ಈ ಕೆರೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

— ಸುಪ್ರಸಿದ್ಧ ಮಾಜಿರಾಷ್ಟ್ರೀಯ ಸನಾತನ-ಸಂಘ ಮಾದಿಗಳಾದ ಶ್ರೀ ನಾನೇ ಗುಂಡಾಕಿ ಯವರು ಕಳೆದ ತಾ. ೧೧ಕ್ಕೆ ಮುಂಬಯಿಯಲ್ಲಿ ಅಕಸ್ಮಾತ್ತಾಗಿ ತೀರಿಕೊಂಡರು. ಶ್ರೀ ಗುಂಡೇಕರರು "ಬಂಗಾಲದ ಕ್ಷಾತ್ರ ವೀರ" ಆಗಿದ್ದರು, ಆಯುರ್ವೇದದ ನಿಷ್ಣಾತರು ಆಧಿಪತ್ಯನಾಗಿದ್ದರು, ಸುಧಾರಣೆಗಾಗಿ ಸತ್ಯಾಗ್ರಹಿ ಎಂದು ಅವರ ಉದ್ಧಾರ ಅವರ ಸ್ವಭಾವ ಬಂಗ್ಲೆಗೆ ೧ ವರ್ಷಕ್ಕೂ ಶಿಕ್ಷೆ ಆಗಿತ್ತು.

— ಮುಂಬಯಿಯ ಗೃಹಮಂತ್ರಿ ಮಾನ್ಯ ಮುನ್ಷಿಯವರು ಮುಂಬಯಿ ಹೊಸ ಬಡಾವಣೆಗೆ ಬಂದಾಗ ಲೆವಿನಾದವರ ಬಂಗಲೆಯಲ್ಲಿ ಸ್ವಾಗತ ಪತ್ರಕ್ಕಾಗಿ ಸಮ್ಮೇಳನವನ್ನು ಕರೆದು, ಕಾಣಿಕೆ ಸಂಬಂಧದಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿದರು. ಈಗ ಅವರು ತಮ್ಮ ಸ್ವತಃ ವ್ಯಕ್ತಿಗಳ ಭಾಷಾಭಿಮಾನ ಸಂಭಂದಗಳು ಮತ್ತು ಪರಿಶೀಲನೆ ತೊಡಗಿದರು. ಕೇಳುವದು

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ೨-೮-೦
ಅಂಚೆಯಿಂದ ವರ್ಷಕ್ಕೆ ೪-೧-೦
೬ ತಿಂಗಳಿಗೆ ೨-೪-೦
ಬಿಡಿ ಸಂಚಿಕೆಗೆ ೦-೧-೬
ವಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg. No. B 1270. Monday, 26-6-1950.

ಕಾನಡಾವೃತ್ತ

ವರ್ಷ ೬೨] THE KANARA NEWS. [ಸಂಚಿಕೆ ೫೨.

ಕುಮಟಾ:— ಸೋಮವಾರ, ತಾ ೨೬—೬—೧೯೫೦

ಜಾಹೀರಾತುಗಳ ದರ:
೧ ಇಂಚು ಉದ್ದ ಕಾಲಂದ
ಪ್ರತಿ ಸಾರಿಗೆ ೮ ಆಣೆಯಂತೆ.
ಹೆಚ್ಚಿನವುಗಳ ದರ ...
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಮಾಡಿರಿ
ವ್ಯವಸ್ಥಾಪಕ.

ಸ್ಥಳಿಕ ವಿಷಯಗಳು.

(ಲೇಖಕ:— ಭಗವಂತಿಕ)

ನಾಡಿನೊಳಗಿನ ಪಡ ಭೂಮಿಗಳನ್ನೆಲ್ಲ ಸಾಗುವಳಿಯಲ್ಲಿ ತಂದು, ಹೆಚ್ಚೆಚ್ಚು ಆಹಾರ ಸಾಮಗ್ರಿಗಳನ್ನು ಬೆಳಸಿ, ಆಹಾರದ ದೃಷ್ಟಿಯಿಂದ ನಾಡನ್ನು ಬೇಗನೆ ಸ್ವಸ್ಥ ಮತ್ತು ಸ್ವಾವಲಂಬಪೂರ್ಣಗೊಳಿಸಬೇಕೆಂಬ ಉದ್ದೇಶದ, ಕರ್ಣ-ಮಧುರ ಮಾತುಗಳು ಕೇಂದ್ರ ಸರಕಾರದ ಹಾಗೂ ಪ್ರಾಂತಿಕ ಸರಕಾರಗಳ ಬಾಯಿಯಿಂದ ದಿನಾಲೂ ಹೊರಬೀಳುತ್ತವೆ. ಈ ಧೋರಣೆಯನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಳೂ ಆಗುತ್ತಿವೆ, ಚಿಕ್ಕ ಪುಟ್ಟ ಯೋಜನೆಗಳೂ ಆಗುತ್ತಿವೆ. ಚಿಕ್ಕ ನೀರಾವರಿಗಳ ಸುಧಾರಣೆ ಮಾಡಿ, ಬಂಜರ ಬಿದ್ದಿರುವ ಇಲ್ಲವೆ ಉತ್ಪತ್ತಿ ಕಡಿಮೆಯಾಗಿರುವ ಹೊಲಗಳಲ್ಲಿ ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸಲೆಂದು ಭಾರತ ಸರಕಾರವು ಮುಂಬಯಿ ಸರಕಾರಕ್ಕೆ ೧ ಕೋಟಿ ರೂ. ಕೊಟ್ಟ ವೃತ್ತವನ್ನು ಓದುಗರು ಮರೆತಿರಲಿಕ್ಕಿಲ್ಲ. ಆದರೆ ಈ ಮಾತುಗಳಿಗೆ ಅನುಗುಣವಾಗಿ ಅಧಿಕಾರಿಗಳು ನಡೆಯುವದಿಲ್ಲೆಂದು ನಮೂದಿಸಬೇಕಾಗಿದೆ. ಮೇಲಧಿಕಾರಿಗಳ ಮಾತುಗಳನ್ನು ಅವರು ಧ್ವನಿವಾಹಕ ಯಂತ್ರಗಳಿಂದ ಹಳ್ಳಿಗಳೊಳಗಿನ ಅಜ್ಞ ಜನರ ಮುಂದೆ ಪುನರುಚ್ಚರಿಸಿ ಪ್ರಚಾರವನ್ನಷ್ಟು ಮಾಡುತ್ತಾರೆಯೇ ವಿನಃ ಆ ಮಾತುಗಳನ್ನು ಹ್ಯಾಗೆ ಕೃತಿಯಲ್ಲಿಳಿಸಬೇಕೆಂಬ ವಿಚಾರವನ್ನು ಮಾಡುವದಿಲ್ಲ! ಕೃತಿಯಲ್ಲಿ ಇಳಿಸುವ ಪ್ರಯತ್ನವನ್ನೂ ಮಾಡುವದಿಲ್ಲ! ಅಷ್ಟೇ ಅಲ್ಲ, ಬಂಜರ ಭೂಮಿಗಳನ್ನು ಸಾಗುವಳಿಯಲ್ಲಿ ತರಬೇಕು, ಹಾಳಾದ ಹೊಲ-ಭೂಮಿಗಳನ್ನು ದುರಸ್ತಗೊಳಿಸಿ ಸುಧಾರಿಸಬೇಕು, ಆಹಾರ-ಧಾನ್ಯಗಳ ಬೆಳೆಯನ್ನು ಹೆಚ್ಚಿಸಬೇಕು ಮತ್ತು ಜನತಾ ಸರಕಾರದ ಉದ್ದೇಶ ಕೈಗೂಡುವಂತೆ ಯಥಾಶಕ್ತಿ ನೆರವಾಗಬೇಕು ಎಂಬ ಧ್ಯೇಯ-ಧೋರಣೆಯನ್ನಿಟ್ಟುಕೊಂಡು ಮತ್ತು ಆ ಸಾಹಸಕ್ಕೆ ಕೈಹಾಕಲು ಮುಂದಾದ ಜನರಿಗೆ ಸಹ ಈ ಅಧಿಕಾರಿಗಳು ತಮ್ಮ ಕೃತಿಗಳಿಂದಲೂ ಮಾತುಗಳಿಂದಲೂ ನಿರುತ್ಸಾಹಗೊಳಿಸುತ್ತಿದ್ದಾರೆ, ನಿರಾಶಗೊಳಿಸುತ್ತಿದ್ದಾರೆ! ಸರಕಾರದ ಉದ್ದೇಶ ಸಫಲವಾಗಿ ನಾಡಿನ ಆಹಾರ-ಸಂಪತ್ತು ಸಮೃದ್ಧವಾದರೆ, ಮತ್ತು ತತ್ಪರಿಣಾಮವಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಇಳಿದರೆ ತಮಗೆ ಈಗ ಸಿಗುತ್ತಿರುವ ವೇತನ-ಭತ್ತೆಗಳಿಗೆ ಕತ್ತರಿ ಬರುವದೆಂಬ ಭೀತಿಯು ಈ ಅಧಿಕಾರಿಗಳನ್ನು ಬಾಧಿಸುತ್ತಿರುವದೋ ಏನೋ! ಅಲ್ಲವಿದ್ದರೆ ಅವರ ನೀತಿಯ ಮತ್ತು ಕೃತಿಗಳ ಸಮರ್ಥನೆ ಮಾಡುವದು ಬೇರಾವ ಮಾರ್ಗದಿಂದಲೂ ಸಾಧ್ಯವಿಲ್ಲ

ಮೇಲಿನ ಮಾತಿಗೆ ಹಲವಾರು ದೃಷ್ಟಾಂತಗಳನ್ನು ಕೊಡಬಹುದು. ಕುಮಟಾ ತಾಲೂಕಿನ ಶಿರಗುಂಜಿ ಗ್ರಾಮದ ಸ| ನಂಬರ ೬೯ರಿಂದ ೪೭ರ ವರೆಗಿನ ಸುಮಾರು ೫೦-೬೦ ಎಕರೆ ಭೂಮಿಯು ಈಗ ೨೦-೨೫ ವರ್ಷಗಳಿಂದ ಪಡ ಬಿದ್ದಿದೆ. ಈ ಭೂಮಿಯ ನೆರೆಹೊರೆಯಲ್ಲಿ ಜನರಿಲ್ಲ, ಜನವಸತಿಯಿಲ್ಲ. ಶಿರಗುಂಜಿ ಗ್ರಾಮದಲ್ಲಿ ಈ ಭೂಮಿಯನ್ನು ಲಾಗಣಿಗೆ ಪಡಕೊಂಡು ಸಾಗುವಳಿ ಮಾಡುವಂತಹ ಸಾಹುಕಾರರ್ಯಾರೂ ಇಲ್ಲ. ಭೂಮಿಯು ಎಷ್ಟೋ ಕಾಲದಿಂದ ಪಡ ಬಿದ್ದಿರುವದರಿಂದ ಅದರಲ್ಲಿ ಗಿಡ-ಗಂಟಿಗಳು ತುಂಬಿವೆ, ಕೆಲವು ಮರಗಳೂ ಬೆಳೆದಿವೆ. ನೀರು-ದಾರಿಗಳೆಲ್ಲ ಹಾಳಾಗಿ ಹೋಗಿವೆ. ಕಳೆದ ವರ್ಷ ಉಪ್ಪಿನಪಟ್ಟಣದಲ್ಲಿ ವಾಸ್ತವ್ಯ ಮಾಡಿಕೊಂಡಿದ್ದ ಕುಮಟೆಯ ಗೃಹಸ್ಥರೊಬ್ಬರು ಈ ಭೂಮಿಯನ್ನು ಸಾಗುವಳಿಯಲ್ಲಿ ತರುವ ಪ್ರಯತ್ನ ಮಾಡಬೇಕೆಂಬ ಹಂಬಲ ಹಿಡಿದು, ಮಾಲಿಗ ಭೂಮಿಯೆಂದು ಕರೆಯಲ್ಪಡುತ್ತಿರುವ ಕೆಲವು ಸ್ಥಳಗಳನ್ನು ತಮಗೆ ೧೦ ವರ್ಷಗಳ ಲಾಗಣಿಗೆ ಕೊಡಬೇಕೆಂದು ಕಳೆದ ಮಳೆಗಾಲದಲ್ಲಿ ರೀತಿ ವಿಧಿಗನುಸಾರ ಪ್ರಾಂತ ಸಾಹೇಬರಿಗೆ ಅರ್ಜಿ ಮಾಡಿದ್ದರು. ಅದೇ ಮೇರೆಗೆ ಅಳಕೋಡ ಗ್ರಾಮದ ಪಟೇಲರು ಬೆಳ್ಳಂಗಿಯ ೬-೭ ಎಕರೆ ಸ.೬೦೦ ಪಡ ಭೂಮಿಯನ್ನು ಲಾವಣಿಗೆ ಬೇಡಿದ್ದರು. ೨೦-೨೫ ವರ್ಷಗಳಿಂದ ಹಾಳುಬಿದ್ದ ಮತ್ತು ಸಾಹುಕಾರರ್ಯಾರೂ ಮುಂದಾಗದಿದ್ದಲ್ಲಿ ಇನ್ನೂ ೧೦-೧೫ ವರ್ಷ ಹಾಳುಬೀಳುತ್ತಿದ್ದ ಈ ಭೂಮಿಗಳನ್ನು, ಬಂಜರ ಭೂಮಿಗಳನ್ನು ಸಾಗುವಳಿಯಲ್ಲಿ ತಂದು ಆಹಾರ-ಸಂಪತ್ತಿಯನ್ನು ಬೆಳೆಸಬೇಕೆಂಬ ಹಂಬಲವಿರುತ್ತಿದ್ದ ಸರಕಾರವು ವಿಶೇಷ ವಿಚಾರ ಇಲ್ಲವೆ ಚೌಕಶಿ ಮಾಡದೆ ಅಥವಾ ವಿಶೇಷ ಕರಾರು-ನಿರ್ಬಂಧಗಳನ್ನು ಹಾಕದೆ ಕೂಡಲೆ ಲಾಗಣಿಗೆ ಕೊಡುತ್ತಿತ್ತು. ಆದರೆ ನಮ್ಮಲ್ಲಿಯ ಅಧಿಕಾರಿಗಳು, ಸದರಿ ಅರ್ಜಿಗಳಾಗಿ ಈಗ ಸರಾಸರಿ ಒಂದು ವರುಷವಾಗುತ್ತ ಬಂದರೂ ಅರ್ಜಿಗಳನ್ನು ಮಂಜೂರ ಮಾಡದೆ ಬಂಜರ ಬಿದ್ದ ಸದರಿ ಸ್ಥಳಗಳ ಬಗ್ಗೆ ಏನೇನೋ ಚೌಕಶಿ ಮಾಡಿ, ಈಗ ಅವನ್ನು ಲಿಲಾಂವಿಗೆ ಇಟ್ಟಿರುತ್ತಾರಂತೆ! ಅರ್ಜಿದಾರರಿಗೆ ಅವರ ಅರ್ಜಿಗಳಂತೆ ಕಳೆದ ಡಿಸೆಂಬರ-ಜನವರಿಯಲ್ಲಾಗಲಿ, ಫೇಬ್ರುವರಿ-ಮಾರ್ಚದಲ್ಲಾಗಲಿ ಸದರಿ ಸ್ಥಳಗಳನ್ನು ಲಾಗಣಿಗೆ ಕೊಟ್ಟಿರುತ್ತಿದ್ದರೆ ಈ ಮಳೆಗಾಲದೊಳಗೆ ಅವುಗಳಲ್ಲಿ ಕೆಲವೊಂದು ಭಾಗವಾದರೂ ಸಾಗುವಳಿಯಲ್ಲಿ ಬರುತ್ತಿತ್ತು. ಅಧಿಕಾರಿಗಳ ದೀರ್ಘಸೂತ್ರ ಕ್ರಮದಿಂದ ಈ ವರ್ಷ ಅವು ಬಂಜರವಾಗಿಯೇ ಉಳಿಯಬೇಕಾಗಿದೆ! ಮುಂದಿನ ವರ್ಷ ಸಹ ಅವು ಸಾಗುವಳಿಯಲ್ಲಿ ಬರುವವೆಂತು, ಪ್ರಾಂತ ಸಾಹೇಬರ ಲಿಲಾಂವಿನ ಶರ್ತುಗಳನ್ನು ಪರಾಂಬರಿಸಿದರೆ, ಹೇಳುವ ಹಾಗಿಲ್ಲ! ಲಿಲಾಂವಿಗಿಟ್ಟ ಸ್ಥಳಗಳ ತರಿಕಾಂ ಸವಾಲು ತೀರ್ಪೆಯ ಮುನ್ನಾದಿ ನಿಶ್ಚಯಿಸಲ್ಪಟ್ಟಿದೆ! ಸ್ಥಳಗಳನ್ನು ಪಡೆದವರು, ಸ್ಥಳದಲ್ಲಿರುವ ಜಂಗಲ ಮರಗಳನ್ನು, ಜಂಗಲ ಇಲಾಖೆಯವರು ಆ ಮರಗಳ ವ್ಯವಸ್ಥೆ ಮಾಡುವ ತನಕ, ಹಾಗೆಯೇ ಕಾಪಾಡಬೇಕೆಂಬದೊಂದು ಶರತ್ತು ಹಾಕಲಾಗಿದೆ! ಮೇಲಾಗಿ ಸವಾಲುದಾರರು ಆ ಆ ಗ್ರಾಮದವರೇ ಇರಬೇಕಂತೆ! ಶಿರಗುಂಜಿಯಲ್ಲಿ ಮಾಲಿಗ ಭೂಮಿಯನ್ನು ಲಾವಣಿಗೆ ಪಡಕೊಳ್ಳುವ ಸಾಹುಕಾರನು ಯಾರೂ ಇಲ್ಲ. ಯಾರಾದರೂ ಇದ್ದಿದ್ದರೆ ಈ ಭೂಮಿ ೨೦-೨೫ ವರ್ಷಗಳಿಂದ ಮತ್ತೆ ಪಡ ಬೀಳುತ್ತಿದ್ದಿಲ್ಲ ಎಂಬುದು ಅಧಿಕಾರಿಗಳಿಗೆ ತಿಳಿಯಬೇಕಿತ್ತು. ಬೆಳ್ಳಂಗಿಯಲ್ಲೂ ಜನರಿಲ್ಲ. ಆದ್ದರಿಂದ ಪ್ರಾಂತ ಸಾಹೇಬರ ಈ ಲಿಲಾಂವು ನೆರವೇರದಿದ್ದರೆ ನಿಷ್ಪ್ರಯೋಜಕವಾಗುವದು ಖಂಡಿತ. ಆ ಮೇಲೆ ಪುನಃ ಚೌಕಶಿ ನಡೆಯುವದು! ಆಗಿದ್ದ ಕೆಲವು ಕರಾರುಗಳನ್ನು ಕಡಿಮೆ ಮಾಡಿ ಪುನಃ ಲಿಲಾಂವಿನ ಕ್ರಮ ನಡೆಯುವದು! ಅಲ್ಲಿಯವರೆಗೆ ಈ ಭೂಮಿಗಳನ್ನು ಸಾಗು. ಮಾಡಬೇಕೆಂಬ ಹಂಬಲ. ಈರ್ಷೆ ಯಾ ಉತ್ಸಾಹವುಳ್ಳ ಗೃಹಸ್ಥರು ನಿರುತ್ಸಾಹಗೊಂಡು

THE BANK OF RURAL INDIA LTD.

(Incorporated in Indian State Liability of Members Limited)

HEAD OFFICE — 'Sarvabhauma Bhuvanam', **KARWAR.** N. K.

Offices at — KARWAR, KUMTA, SIRSI, HONAVAR, YELLAPUR BHATKAL, SIDDAPUR, ANKOLA, HUBLI & DHARWAR

Authorised Capital	„ Rs. 10,00,000.
Subscribed Capital	„ Rs. 5,00,000.
Paid-up Capital & Reserves	„ Rs 5 08502-8-0

Rates of Interest on Deposits:

Current a/c @ 1 % p a. *Savings Bank a/c @ 2½ %*

Fixed Deposits for 3 months @ 3% per annum
„ „ for 6 months @ 3½% „ „
„ „ for 12 months or more @ 4% „

All kinds of modern Banking business transacted.

Karwar, } P X GRACIOUS
1st Jun : 1950 } MANAGING DIRECTOR

ಜನ್ಮಗಳ ವೃದ್ಧಿಯನ್ನೇ ಬಿಟ್ಟುಬಿಟ್ಟಿದೆ—ಹಾಗಾಗುವದು ಸ್ವಾಭಾವಿಕ! ಆ ಫಲವೂ ಕೂಡ ವಿಫಲವಾಗಿ ಹೋಗುವದು. ಇಲ್ಲಿಯೂ ಅಧಿಕಾರಿಗಳ ವರ್ತನೆಯು ಕಾರಣವಾಯಿತು.

ಹಣದ ಅಡಚಣೆಯಾಗಿ ಅರೂಪ ಬಿದ್ದ ಭೂಮಿಗಳನ್ನು ಸುಧಾರಿಸಿಕೊಳ್ಳಲಿಕ್ಕೆ ತಗಾವಿ ಸಾಲ ಬೇಡಿದಾಗಲೂ ಅಧಿಕಾರಿಗಳು ಸಾಲ ಕೊಡಲು ಬುದ್ಧ್ಯಾ ವಿಳಂಬ ಮಾಡುತ್ತಾರೆ. ಕುಮಟಾ ತಾಲೂಕಿನ ಮೊರಬಾ ಗ್ರಾಮದ ಗಜನಿಯು ೧೪೦ ಎಕರೆಗಳಷ್ಟು ವಿಸ್ತೀರ್ಣವಿದೆ. ೧೯೪೭-೪೮ರ ವರ್ಷದ ಆ ಗಜನಿಯ ಸಂರಕ್ಷಣ ಅರ್ಧದಷ್ಟು ಕ್ಷೇತ್ರ ಸಾಗಾಗುತ್ತಿತ್ತು. ಇತ್ತ ತೀವ್ರ ಅವರ್ಷಗಳಿಂದ ಈ ಗಜನಿಯ ರೈತರು ಬಿಟ್ಟುಹೋಗಿರುತ್ತಾರೆ. ಆದರಿಂದ ಗಜನಿಯ ಕಟ್ಟು-ಯಂತ್ರಗಳು ಹಾಳಾದವು. ಅವನ್ನು ದುರುಸ್ತಿಗೊಳಿಸಲು ಸದರಿ ಗಜನಿಯ ಮಾಲಿಗೇಣಿದಾರರು (ಕೀರ್ತಿಶೇಷ ಪ್ರೋತರ ಮಾಲಿಗೇಣಿಗಿರುವದರಿಂದ ಈ ಮಾಲಿಗೇಣಿದಾರರು ವಸ್ತುತಃ ಮಾಲಕರೇ ಇತ್ಯಾದಿ) ಕಳೆದ ಡಿಸೆಂಬರ ತಿಂಗಳಲ್ಲಿ ರೂ ೫೦೦೦ ತಗಾವಿ ಬೇಡಿ ಅರ್ಜಿ ಮಾಡಿದ್ದರು. ಈ ಅರ್ಜಿ ಮಂಜೂರಾಗಲು ೬ ತಿಂಗಳು ಕಳೆಯಿತು! ಈ ಸಾಲ ಇದು ಈಗ ಸಿಗಲಾರದು. ಈಗ ಮಳೆಗೆ ಪ್ರಾರಂಭವಾಗಿರುವದರಿಂದಲೂ ಮಳೆಯಲ್ಲಿ ಕಟ್ಟಿನ ಕೆಲಸ ಆಗುವಂತಿಲ್ಲವಾದ್ದರಿಂದಲೂ ಮಳೆಗಾಲ ತೀರಿದ ಮೇಲೆ ಸಾಲದ ೧ ನೇ ಕಂತು ಕೊಡಲಾಗುವದಂತೆ! ಶಿರ್ಸಿ ತಾಲೂಕಿನ ಹಕ್ಕಿ ಹುಲಗೋಳ ಗ್ರಾಮದ ಹೆಗಡೆಯವರೊಬ್ಬರು ತಮ್ಮ ಒಡೆತನದ ಯಲ್ಲಾಪುರ ತಾಲೂಕಿನ ತೋಟದಕಲ್ಲಳ್ಳಿ ಗ್ರಾಮದ ಹೊಲ ತೋಟಗಳಿಗೆ ಹೊಳೆಯ ನೀರಿನಿಂದ ಆಗುವ ಬಾಧೆಯನ್ನು ತಪ್ಪಿಸಿ ಭೂಮಿಗಳ ಸುಧಾರಿಸಲು ರೂ. ೩೦೦೦ ತಗಾವಿ ಬೇಡಿ ೧೯೪೯ರ ಫೆಬ್ರುವರಿಯ ಕೊನೆಗೆ ಅರ್ಜಿ ಮಾಡಿದ್ದರಂತೆ. ಈ ಬಗ್ಗೆ ರೂ. 2,000 ಬೆಲೆ ಬಾಳುವ ಆಸ್ತಿಯ ಭದ್ರತೆಯನ್ನೂ ಅವರು ಕೊಡಲೊಪ್ಪಿದ್ದರೂ ಅವರಿಗೆ ಇನ್ನೂ ಸಾಲ ಸಿಕ್ಕಿಲ್ಲ! ಯೋಗ್ಯ ಭದ್ರತೆಯ ಮೇಲೆ ಕೆಲವೊಂದು ತಗಾವಿ ಸಾಲ ಕೊಟ್ಟಲ್ಲಿ ಸಧ್ಯ ಇಲ್ಲವೆ ಅರೂಪ ಬಿದ್ದಿರುವ ನೂರಾರು ಎಕರೆ ವಿಸ್ತೀರ್ಣ ಮತ್ತು ಫಲಪ್ರದ ಭೂಮಿಗಳು ಕೂಡಲೆ ಸಾಗಾಗಿ ಆಹಾರೋತ್ಪಾದನೆ ನಿಶ್ಚಿತವಾಗಿಯೂ ಹೆಚ್ಚಾಗುವಂತಿರುವಾಗ, ಆ ಮಾರ್ಗವನ್ನು ಬಿಟ್ಟು ಸಂಶಾ. ಕೊಳ್ಳಕದಿಂದ ಸಾವಿರಗಟ್ಟಲೆ ರೂಪಾಯಿ ಖರ್ಚು ಮಾಡಿ, ಶಕ್ತಿಯಿಲ್ಲದ ಜನರಿಗೆ ಸಾವಿರಗಟ್ಟಲೆ ರೂಪಾಯಿ ಸಾಲ ಕೊಟ್ಟು, ನಿರ್ಜನ ವನಕಡಗಳಲ್ಲಿರುವ ಬಂಜರ ಭೂಮಿಗಳನ್ನು ಸಾಗುವಳಿಯಲ್ಲಿ ತಂದು ಆಹಾರೋತ್ಪತ್ತಿ ಹೆಚ್ಚಿಸಬಯಸುವ ಸರಕಾರಕ್ಕೂ, ಅದರ ಕೈಕೆಳಗಿನ ಮ್ಯಾಗಳ ಅಧಿಕಾರಿಗಳಿಗೂ ಏನೆನ್ನಬೇಕೋ ತಿಳಿಯದು!

***

ಆಹಾರೋತ್ಪಾದನೆಯನ್ನು ಹೆಚ್ಚಿಸಲು ಟೊಂಕ ಕಟ್ಟಿರುವ ಮುಂಬಯಿ ಸರಕಾರದ ಜಂಗಲ ಇಲಾಖೆಯವರು ಈ ಕಾರ್ಯದಲ್ಲಿ ಎಷ್ಟು ಆಸ್ಥೆಯುಳ್ಳವರಿದ್ದಾರೆಂಬುದನ್ನು ನೋಡಿರಿ. ಹೊನ್ನಾವರ ತಾಲೂಕಿನ ಗುಂಡಬಾಳ ಗ್ರಾಮದ ರಾ|| ರೇವಣಕರ ಎಂಬವರು ಬೆಟ್ಟದೊಳಗಿನ ಕೆಲವು ಕ್ಷೇತ್ರವನ್ನು ಆಹಾರಧಾನ್ಯ ಬೆಳಸುವದಕ್ಕಾಗಿ ಹಂಗಾಮಿ ಲಾಗಣಿ ಬೇಡಿ ಕಳೆದ ಅಕ್ಟೋಬರದಲ್ಲಿ ಒಂದು ಅರ್ಜಿ ಮಾಡಿದ್ದರು. ಈ ಅರ್ಜಿಗೆ ಜಂಗಲ ಖಾತೆಯವರು ತಾ. ೨೬-೨-೫೦ಕ್ಕೆ ಉತ್ತರ ಕೊಟ್ಟು ಅರ್ಜಿದಾರರು ಬೇಡಿದ ಸ್ಥಳ ಲಾಗಣಿಗೆ ಕೊಡಬರುವದಿಲ್ಲೆಂದು ತಿಳಿಸಿದ್ದಾರೆ! ಜಂಗಲ ಖಾತೆಯವರ ಈ ಉತ್ತರ ನೋಡತಕ್ಕಂಥದಾಗಿದೆ. ಅದು ಕೆಳಗಿನಂತಿರುತ್ತದೆ:—

ಮಹಾಶಯರೇ,

ನೀವು ಹಂಗಾಮಿ ಲಾಗಣಿ ಜಾಗೆಯ ಬಗ್ಗೆ ತಾ. ೨೭-೧೦-೧೯೪೯ನೇಗೆ ಮಿ॥ ಡಿವ್ಹಿಜನಲ್ ಫಾರೆಸ್ಟ ಆಫೀಸರ ಸಾಹೇಬರವರ ಕಡೆಗೆ ಅರ್ಜಿ ಮಾಡಿಕೊಂಡಂತೆ ನೀವು ಬೇಡಿದ ಜಾಗೆಯು ತಟ್ಟಿನಲ್ಲಿ ಫಾರೆಸ್ಟ ಬೊಂಡ್ರಿ ಅಂತ ಡೋಂಗ ಆಗುವದರಿಂದ ನಿಮ್ಮ ಬೇಡಿಕೆಯಂತೆ ಸದರಿ ಜಾಗೆಯನ್ನು ಕೊಡಲಿಕ್ಕೆ ಬರುವದಿಲ್ಲವೆಂತ ಪು. ಹು. $\frac{G\ 11/14510}{12-2-50}$ ನೇದು ಸಾದರವಾಗಿದೆ. ತಿಳಿಯುವದು.

ಈ ಹುಕುಮಿನ ಮೂಲಕ ಜಂಗಲ ಇಲಾಖೆಯವರಿಗೆ ಆಹಾರೋತ್ಪತ್ತಿಯನ್ನು ಬೆಳಸಬೇಕೆಂಬ ಆಸ್ಥೆಗಿಂತ ಬೆಟ್ಟದ "ಬೊಂಡ್ರಿಯು ಅಂತ ಡೋಂಗು" ಆಗದಂತೆ (ಅಂದರೆ ಗಡಿ-ರೇಷೆಯು ಸರಳವಾಗಿರುವಂತೆ) ನೋಡಿಕೊಳ್ಳುವ ಕಾಳಜಿಯೇ ಹೆಚ್ಚಿಗೆ ಇರುತ್ತದೆಂದ ಸ್ಫುಟವಾಗುವದಿಲ್ಲವೇ? ಇಂತಹ ಅಧಿಕಾರಿಗಳು ಅಧಿಕಾರ-ಪದದಲ್ಲಿರುವ ರಾಜ್ಯದಲ್ಲಿ ಆಹಾರೋತ್ಪತ್ತಿ ಬೆಳೆಯುವದೆಂತು? ಲೋಕ-ಕ್ಷೇಮ ವಾಗುವದೆಂತು?

***

ಟೆನನ್ಸಿ ಕಾಯದೆಯ ಅಂಶಗಳು ನಾಡಿನ ಆಹಾರೋತ್ಪತ್ತಿಯನ್ನು ಬೆಳಸಲು ಸಹಾಯಕವಾಗಿರುವದಿಲ್ಲೆಂಬುದು ಈವಾಗ ಜನ-ಜನಿತ ಮಾತಾಗಿದೆ. ಟೆನನ್ಸಿ ಕಾಯದೆ ಅಮಲಿನಲ್ಲಿ ಬಂದಂದಿನಿಂದ ಬೆಳೆಯ ಮಾನ ಕಡಿಮೆಯಾಗಿರುತ್ತದೆಂಬುದು ಸರಕಾರದವರ ಬೆಳೆಯ ಪ್ರಕಟನೆಗಳ ಮೇಲಿಂದಲೇ ಸಿದ್ಧವಾಗಿದೆ. ಬೆಳೆಯನ್ನು ತಾವು ಸರಿಯಾಗಿ ಬೆಳಸದಿದ್ದರೂ ತಮ್ಮನ್ನು ಹೊರತಳ್ಳಲು ಒಡೆಯರಿಗೆ ಬರುವದಿಲ್ಲೆಂಬ ನಂಬಿಗೆ ಕೃಷಿಕ ಜನರಲ್ಲಿ ಮನೆ ಮಾಡಿಕೊಂಡಿರುವದರಿಂದ ಅವರಲ್ಲಿ ಬಹಳ ಮಂದಿ ಈಗ ವ್ಯಾಗಳಾಗಿದ್ದಾರೆ. ಹಿಂದೆ ಸಿಗುತ್ತಿದ್ದಕ್ಕಿಂತ ಹುಟ್ಟುವಳಿಯ ಹೆಚ್ಚಿನ

ಜಾಹೀರನಾಮೆ.

ಕುಮಟಾ ಮ್ಯುನಿಸಿಪಾಲಿಟಿಯಿಂದ ಇದರ ಮೂಲಕ

ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ:—

ಸದರ ಮ್ಯುನಿಸಿಪಾಲಿಟಿಯಿಂದ ಈ ಕೆಳಗೆ ಕಾಣಿಸಿದ ಕಾಮಗಾರಿ ಆಗತಕ್ಕದ್ದಿದ್ದು, ಅದನ್ನು form as approved in G B. resolution No. 91 Dated 12—8—1937 ನೇದರಂತೆ ಇರುವ ಕರಾರು ಪತ್ರದಲ್ಲಿ ಮ ಈ ಜಾಹೀರನಾಮೆಯಲ್ಲಿ ನಮೂದಿಸಿದ ಉಕ್ತ ಶರ್ತುಗಳನ್ನು ಸಹಾ ಒಪ್ಪಿ ಮಾಡಿಕೊಡುವರೆ ಮುಕಿಯಲ್ಲ ಜನರು ಸದರ ಕಾಮಗಾರಿಯ ಬಗ್ಗೆ ಕೆಳಗಾಣಿಸಿದ ಎಸ್ಟಿಮೇಟ ರಕಮಿಗೆ ಎಷ್ಟು ಪರ್ಸೆಂಟೇಜ ಕಡಿಮೆಯಿಂದ ಮಾಡಿಕೊಡಲು ಇಚ್ಛಿಸುತ್ತಾರೆಂಬ ಬಗ್ಗೆ ಬರವಣಿ ನಮೂದಿಸಿದ ಸೀಲ್ಡ ಟೆಂಡರನ್ನು ಇದೇ ಬರುವ ತಾರೀಖ ೪—೭—೧೯೫೦ ನೇ ಮಂಗಳವಾರ ದಿವಸ ಮ್ಯಾಪು ಫಂಟಿ ಸಹ್ರ ರಾ॥ ಸಾ॥ ರಾಮಚಂದ್ರ ... ಕುಮಟಾದ ಸ್ಪೆಶಲ್ ಜನರಲ್ ಮೀಟಿಂಗಿನಲ್ಲಿ ತಂದು ಕೊಡತಕ್ಕದ್ದು. ೯ ಬಾಟಲು ಬಂದ ಟೆಂಡರುಗಳ ವಿಚಾರವಾಗಿ ಕೆಳಕಂಡ ಕಾಂಟ್ರಾಕ್ಟ ಕೊಡುವಲ್ಲಿ ಬರುವದು. ಮೇಲೆ ನಮೂದಿಸಿದ ತಾರೀಖಿನ ದಿವಸ ೩ P. M. ದ ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಿಕ್ಕಿಲ್ಲ. ಯಾವದೇ ಟೆಂಡರು ಪಾಸ ಮಾಡುವದು ಯಾ ಬಿಡುವದು ಜ. ಕ. ಯವರ ಅಧಿಕಾರಕ್ಕೆ ಒಳಪಟ್ಟಿದ್ದಿರುವದು, ತಿಳಿದಿರಿ.

ಕಾಮಗಾರಿಯ ಹೆಸರು.

"ಕುಮಟಾ ಮ್ಯುನಿಸಿಪಲ್ ಹರಿಜನ ನೌಕರರ ಬಗ್ಗೆ ಕಾಟೇಜುಗಳನ್ನು ಕಟ್ಟಿಸುವದು."

ಎಸ್ಟಿಮೇಟ ರಕ್ಕಂ.	ಕಾಮಗಾರಿ ಕಾಂಟ್ರಾಕ್ಟ ಡಿಪೋಝಿಟ ರಕಂ.	ಕಾಂಟ್ರಾಕ್ಟ ಬಗ್ಗೆ ಟೆಂಡರ ಕೊಡುವ ಕಾಲಕ್ಕೆ ಕಟ್ಟಬೇಕಾದ ಡಿಪೋಝಿಟ ರಕ್ಕಂ
೨೪೯೧೧ / —	೧೨೫೦ / —	೨೫೦ / —

ಶರ್ತುಗಳು

(೧) ಸದರ ಕಾಮಗಾರಿಯನ್ನು ೧—೬—೧೯೫೧ರ ಒಳಗೆ ಮಾಡಿ ಪೂರ್ತಿಮಾಡಿ ಮ್ಯುನಿಸಿಪಾಲಿಟಿಗೆ ಒಪ್ಪಿಸಿ ಕೊಡತಕ್ಕದ್ದು. ಹಾಗೂ ಕಾಮಗಾರಿಯಲ್ಲಿಯ ಆವಶ್ಯಕ ನಂಬರ ೧೦ರಿಂದ ೪೮ ವರೆಗಿನ ಕಾಮಗಾರಿಗಳನ್ನು ಬರುವ ಅಕ್ಟೋಬರ ತಿಂಗಳ ಅಖೈರಕ್ಕೆ ಮಾಡಿ ಪೂರ್ತಿಗೊಳಿಸಬೇಕು.

(೨) ಕಾಂಟ್ರಾಕ್ಟ "ಬಿ" ಫಾರ್ಮನ್ನು ಕಾಂಟ್ರಾಕ್ಟ ಪಡೆದವರು ತಮ್ಮದೇ ಖರ್ಚಿನಿಂದ ಮಾಡತಕ್ಕದ್ದು. ಟೆಂಡರ ಸಂಗಡ ಹಾಜರ ಪಡಿಸಿದ ಎಸ್ಟಿಮೇಟ ರಕಂ ಕಾಂಟ್ರಾಕ್ಟ ಮಂಜೂರಾಗದವರಿಗೆ ಕೂಡಲೆ ತಿರುಗಿ ಕೊಡುವಲ್ಲಿ ಬರುವದು

(೩) ಕಾಮಗಾರಿ ಮಂಜೂರಾದ ಕಾಂಟ್ರಾಕ್ಟರರು ತಮ್ಮ ಸ್ವಂತ ಖರ್ಚಿನಿಂದ ಸ್ಟಾಂಪ ಕಾಗದದ ಮೇಲೆ ಕಾಂಟ್ರಾಕ್ಟ ಕರಾರನ್ನು ಕಾಮಗಾರಿ ಕೈಕೊಳ್ಳುವ ಮೊದಲೇ ಬರಕೊಡತಕ್ಕದ್ದು.

ಕಾಮಗಾರಿಯ ಪ್ಲಾನ ಎಸ್ಟಿಮೇಟ ಅವಶ್ಯವಿದ್ದ ದಾಖಲೆಯನ್ನು ಆಫೀಸಿನಲ್ಲಿ, ಆಫೀಸ ವೇಳೆಯಲ್ಲಿ ಬಂದು ನೋಡಿಕೊಳ್ಳಬಹುದು

ಕುಮಟಾ, ತಾ. ೨೪—೬—೧೯೫೦.

B. M. PAI.
President,
Municipality, Kumta.

... ಸಿಗುತ್ತಿರುವದರಿಂದಲೂ, ಆದರಿಂದ ಸಂಸಾರ ನಡೆಯುವದರಿಂದಲೂ ಅನೇಕ ರೈತರಿಗೆ ಈಗ ಅರಿವು ದುಡಿಯುವ ಅವಶ್ಯಕತೆ ತೋರುವ ಭೂಮಿಯ ಹುಟ್ಟುವಳಿ ಈಗ ಕಡಿಮೆಯಾಗಿ ಇದೇ ಮುಖ್ಯ ಕಾರಣವಾಗಿದೆ. ರೈತರಿಗೆ ನ ಪಾಲು ಕೊಟ್ಟಲ್ಲಿ ಅವರು ಪ್ರಯತ್ನಿಸು ಯುವರು, ಭೂಮಿಗಳನ್ನು ಸುಧಾರಿಸುವರು, ತ್ತಿಯನ್ನು ಹೆಚ್ಚಿಸುವರು, ನಾಡನ್ನು ಸಮೃದ್ಧ ಸುವರು, ಎಂದು ಮುಂತಾಗಿ ವಾದಿಸುವ ಜನ ಮನುಷ್ಯ ಸ್ವಭಾವದ ಜ್ಞಾನವಿಲ್ಲೆಂದು ಹೇಳ ವು. ಇಂಗ್ಲಿಶ ಭಾಷೆಯಲ್ಲಿ Necessity the mother of invnetion ತ್ಯಕತೆಯು ಹೊಸ ಹೊಸ ಶೋಧಗಳನ್ನು ಲು ಪ್ರೇರೇಪಿಸುತ್ತದೆ) ಎಂಬುದಾಗಿ ಒಂದು ಷಿತವುಂಟು. ನಮ್ಮದಲ್ಲಿ ಸಿಲುಕಿದ ವ್ಯಕ್ತಿಯು ಕಷ್ಟನಿವಾರಣೆಗಾಗಿ ಹೊಸ ಹೊಸ ಶೋಧ ಮಾಡುತ್ತಾನೆಂದೂ, ಕಷ್ಟದಲ್ಲಿ ಬಿದ್ದ ತನ್ನ ಬುದ್ಧಿಗೆ ಆಯಾಸ ಕೊಡುವನೆಂದೂ ಈ ಸುಭಾಷಿತದ ಗಭಿತಾರ್ಥವಿರುತ್ತದೆ. ಕೊರತೆಗಳ ತಾಪವಿಲ್ಲದಿದ್ದರೆ ಸಾಮಾನ್ಯ ಮನಿಗೆ ಕಷ್ಟ ತಿಳಿಯದೆ ಶ್ರಮವು ಮಾಡಬೇಕೆಂಬ ಬುದ್ಧಿ ಬರುವದಿಲ್ಲ. ನಮ್ಮಲ್ಲಿಯ ರೈತರಿಗೆ ಮಾತು ಅನ್ವಯಿಸುತ್ತದೆ. ಹಿಂದೆ ಅವರಿಗೆ ವಳಿಯ ಕಡಿಮೆ ಪಾಲು ಸಿಗುತ್ತಿತ್ತು. ಸಿಕ ಡಿಂದ ಸಂಸಾರದ ಕೊರತೆ ನೀಗುತ್ತಿದ್ದಿಲ್ಲ ದ ಹೆಚ್ಚು ಪರಿಶ್ರಮ ಮಾಡಿ ಹುಟುವಳಿ ಹೆಚ್ಚಿಸುವದು ಅವರಿಗೆ ಅವಶ್ಯ ಬೀಳು ಈಗ ಅವರಿಗೆ ಅಷ್ಟು ಕೊರತೆ ಬೀಳುವ ಆದರಿಂದ ಹೆಚ್ಚು ಪರಿಶ್ರಮ ಮಾಡುವ ಅವಶ್ಯ ಬೀಳುವದಿಲ್ಲ! ಟೆನನ್ಸಿ ಕಾಯದೆಯನು ಸುವವರು ಈ ದೃಷ್ಟಿಯಿಂದ ಎಚ್ಚರ ಡಿರುತ್ತಿದ್ದರೆ ನಾಡಿನಲ್ಲಿ ಈಗ ಬರುತ್ತಿರುವ ದುರ್ದೆಸೆ ಕಂಡುಬರುತ್ತಿರಲಿಲ್ಲ.

.

ಟೆನನ್ಸಿ ಕಾಯದೆಯ ಗುಣದೋಷಗಳು ಏನೇ ತ್ತಿದ್ದಾಗ್ಯೂ ಅದರ ಅಮಲಬಜಾವಣೆಯು ಸಾಗಿ ಆಗುತ್ತಿದ್ದರೆ ಜನರಿಗೆ ಅಷ್ಟು ಕಷ್ಟವಾ ಗುತ್ತಿದ್ದಿಲ್ಲ. ಆದರೆ ಸರಕಾರದವರು ಒಳ-ಹೊರವು ಸಂಸ್ಥಾನವಾಗಲಿಯೋ ಅಥವಾ ಟೆನನ್ಸಿ ಕಾಯ ಅಮಲಬಜಾವಣಿಯನ್ನು ... ಶಕ್ಯವಿದ್ದಷ್ಟು ಗೆ ರೈತರ ಪಕ್ಷ ಹಿಡಿದು, ಮಾಡಿದರೆ ಸರ್ಕಾರ ಅನುಗ್ರಹ ತಮ್ಮ ಮೇಲೆ ಹೆಚ್ಚಿಗೆಯಾಗುವ ತಿಳುವಳಿಕೆಯಿಂದಲೋ? ತಿಳಿಯದು, ಮುಲ್ಕಿ ಕಾರಿಗಳು ಎಷ್ಟೋ ಕಡೆ ಒಕ್ಕಲಿಗರ ಹಿತಕ್ಕಾಗಿ ಫೈಸಲೆಗಳ ಅಮಲಬಜಾವಣಿಯನ್ನು ಏನಾದ ... ಸಬಬು ಹೇಳಿ, ಮುಂದೂಡುತ್ತಿರುವರು. ಅನೇಕ ತಸನಿಯಲ್ಲಿ ಹೊನ್ನಾವರ ದಿವಾಣಿ ನ್ಯಾಯಾಲಯದೊಳಗೆ ಸ್ವಂತ ಸಾಗುವಳಿಗಾಗಿ ಲಗಳ ಕಬಜೆ ಬೇಡಿ ಹಲ್ಲವೆ ಸಕಾಲದಲ್ಲಿ ರೈತ ಗೇಣಿಯನ್ನು ಸಲ್ಲಿಸಲಿಲ್ಲೆಂಬ ಕಾರಣದಿಂದ ಜೆ ಬೇಡಿ ಒಡೆಯರು ಮಾಡಿದ ಎಷ್ಟೋ ದಾವೆ ಳೆ, ಒಡೆಯರ ಪರವಾಗಿ ಫೈಸಲೆಗಳಾಗಿದ್ದವು. ಫೈಸಲೆಗಳಂತೆ ಹೊಲಗಳ ಕಬಜೆ ಕೊಡಿಸುವ ವಾರ್ರ, ಹಳೆಯ ಹೊಲ ಹಾಗುವಳಿ ದಾನೂಸಿನ

ತಿಳಿಸಿ ಕಲಮಿನಂತೆ, ಮಾಮಲೇದಾರರಿಗಿರು ತ್ತದೆ. ಆದರಿಂದ ದಿವಾಣಿ ನ್ಯಾಯಾಲಯದಲ್ಲಿ ಫೈಸಲೆ ಪಡಕೊಂಡ ಒಡೆಯರು, ಫೈಸಲೆಗಳನ್ನು ಲಗತ್ತು ಇಟ್ಟು, ಅವುಗಳಂತೆ ತಮಗೆ ಹೊಲಗಳ ಕಬ ಜೆ ಕೊಡಿಸಬೇಕಾಗಿ ಹೋದ ವರುಷದ ದೀಪಿಗೆ ಯಲ್ಲಿ ಮಾಮಲೇದಾರರ ಕಡೆ ಅರ್ಜಿ ಮಾಡಿದ್ದರು ವಹಿವಾಟ ದಾವೆ ಮಾಡಿ ಕಬಜೆಯ ಹಕ್ಕು ಪಡಕೊಂಡು ಕೆಲವು ಒಡೆಯರೂ ತಮಗೆ ಕಬಜೆ ಕೊಡಿಸಬೇಕಾಗಿ ಅರ್ಜಿಗಳನ್ನು ಮಾಡಿದ್ದುಂಟು. ಈ ಅರ್ಜಿಗಳು ಕಚೇರಿಯಲ್ಲಿ ಧೂಳು ತಿನ್ನುತ್ತ ಇನ್ನೂ ಬಿದ್ದುಕೊಂಡಿವೆಯಂತೆ! ಒಕ್ಕಲಿಗರು ಆಕ್ಷೇಪ ... ಮಾಡುವದರಿಂದು ಹೇಳಿ ಕೆಲವು ಅರ್ಜಿಗಳನ್ನು ಮಾಮಲೇದಾರರು ಬದಿಗಿಟ್ಟರೆ, ಹೊಲ ದಲ್ಲಿ ಈಗ ಬೆಳೆಯುಂಟು, ಬೆಳೆಯಿರುವ ಹೊಲದ ಕಬಜೆ ಕೊಡಿಸ ಬರುವದಿಲ್ಲೆಂದು ಹೇಳಿ ಬೇರೆ ಕೆಲವು ಅರ್ಜಿಗಳನ್ನು ಬದಿಗೊತ್ತಿಟ್ಟರು! ಬೇಗನೆ ... ಒಕ್ಕಲಿಗರಿಗೆ ... ಬೆಳೆಯನ್ನು ತೆಗೆಯಲಿಕ್ಕೆ ಅನುಕೂಲವಾಯಿತು! ಈ ಮಳೆಗಾಲದ ಬೆಳೆ ತೆಗೆಯಲಿಕ್ಕೆ ಅನುಕೂಲ ವಾಗುತ್ತದೆ! ಫೈಸಲೆ ಪಡೆಕೊಂಡ ಒಡೆಯರು ತನ್ನ ಜೀವನಕ್ಕಾಗಿ ಬೆಳೆ ಬೆಳೆಸುವ ಹಲವು ಸಾಲ ಮಾಡುವ ಪ್ರಸಂಗ ಬಂದಿದೆ ಅಥವಾ ಬರುತ್ತದೆ! ... ಗರಿ ಅವರು ಉಪವಾಸ ಸಾಯಬೇಕು. ... ಬೇಕು! ಕಡತೋಕೆಯ ... ವಿನಾಯಕ ಮುಂಡ ಭಟ್ಟರ ಮನೆತನದ ಕಥೆ ಕೇಳಿ. ಅವರ ಮನೆಯಲ್ಲಿ ... ಮಂದಿಯ ದೊಡ್ಡ ಸಂಸಾರವುಂಟು. ಟೆನನ್ಸಿ ಕಾಯದೆಯಿಂದ ಮತ್ತರಾದ ರೈತರು ಅವರಿಗೆ ಗೇಣಿ ಕೊಡು ವದಿಲ್ಲ! ಹೊಲಗಳ ಕಬಜೆ ಪಡಕೊಂಡು ಸಂಸಾರ ಸಾಗಿಸುವಾ ಎಂದರೆ ಅವರು ಪಡೆದಿರುವ ... ಕಬಜೆಯ ಡಿಕ್ರಿಗಳು ಅಮಲಬಜಾವಣೆಯಾಗದೆ ಹಾಗೆಯೇ ಬಿದ್ದುಕೊಂಡಿವೆಯಂತೆ! ಬೇಗನೆ ... ಭಟ್ಟರ ಮನೆಯವರು ಈಗ ಹೊಟ್ಟೆ ... ಎಂಬಲ್ಲಿ ಹೋಗಿ ... ಭೂಮಿಗಳನ್ನು ಗೇಣಿಗೆ ಪಡಕೊಂಡು ಹೊಟ್ಟೆ ಹೊರೆಕೊಳ್ಳುತ್ತಿದ್ದಾರೆ! ಮಾನ್ಯ ... ಸಾಧಿಸುತ್ತಿರುವ ಸರ್ವೋದಯವಿದು!

.

ಕಬಜೆಯ ಡಿಕ್ರಿಗಳ ಅಮಲಬಜಾವಣೆಯು ಮುಂದೆ ಬೀಳುತ್ತಿರುವದರಿಂದ ಆಹಾರೋತ್ಪತ್ತಿಯ ಮೇಲೆ ಅನಿಷ್ಟ ಪರಿಣಾಮವಾಗುತ್ತದೆಂಬ ವಿಚಾರ ವು ಅಧಿಕಾರಿಗಳಿಗೆ ಬರುವದಿಲ್ಲ. ಕಬಜೆ ಬಿಡಬೇ ಕಾದ ಡಿಕ್ರಿಯಾಗಿ ಹೋದಾಗ, ಒಂದಿಲ್ಲೊಂದು ದಿನ ತನ್ನ ಕಬಜೆಯಿಂದ ತಪ್ಪಿ ಹೋಗುವ ಹೊಲದಲ್ಲಿ ರೈತರು ಮನಮುಟ್ಟಿ ದುಡಿದು ಒಳ್ಳೇ ಬೆಳೆ ಎಂದಾ ದರೂ ಬೆಳಸ್ಯಾರೇನು? ಕಬಜೆಯ ಬಗ್ಗೆ ಡಿಕ್ರಿ ಯಾದ ಎಷ್ಟೋ ಒಕ್ಕಲಿಗರು, ಒಡೆಯರು ತಮ್ಮ ಮೇಲೆ ದಾವೆ ಮಾಡಿ ಡಿಕ್ರಿ ಪಡಕೊಂಡರಲ್ಲೆಂಬ ... ಹಿಡಿದು, ವಿವಾದಾ-ಭೂಮಿಗಳನ್ನು ಬಂಜರು ಕೆಡವುತ್ತಾರಂತೆ! ಕಬಜೆ ಎಂದು ಬಿಟ್ಟುಕೊಡ ಬೇಕಾಗುವದೋ ಎಂಬ ಅಂಜಿಕೆಯಿಂದ ಹೊಲ ಗಳಲ್ಲಿ ಬಿತ್ತಿಗೆ ಮಾಡದ ಒಕ್ಕಲಿಗರೂ ಇದ್ದಾರೆ! ಹೊನ್ನಾವರ ಮಾಮಲೇದಾರರ ರೈತ-ಪಕ್ಷಪಾತ ವರ್ತನೆಯ ಪರಿಣಾಮವಾಗಿ ಈ ವರ್ಷ ಎಷ್ಟೋ

ಭೂಮಿಗಳು ಸಾಗಾಗದೆ ಇರುವ ಹಲ್ಲವೆ ಅರೆಮನಸ್ಸಿ ನಿಂದ ಸಾಗುವಳಿ ಮಾಡಲ್ಪಡುವ ಸಂಭವವುಂ ಟಂತೆ.

.

ದೇಶದೊಳಗಿನ ವೃಕ್ಷ-ಸಂಪತ್ತನ್ನು ಬೆಳೆಸುವ ಗುರಿ ಯನ್ನಿಟ್ಟುಕೊಂಡ ಸರಕಾರವು ನಮ್ಮ ಇಂಜನೀರ ಇಲಾಖೆಯವರಿಗೆ ಒಂದು ಬುದ್ಧಿ ಮಾತು ಹೇಳು ವದವಶ್ಯ ಕಾಣುತ್ತದೆ. ಈ ಇಲಾಖೆಯವರು ತಮ್ಮ ಮಾರ್ಗಗಳ ಪಕ್ಕಗಳಲ್ಲಿ ಸಾಲಮರಗಳನ್ನು ನೆಡುವ ಪರಿಪಾಠವನ್ನಿಟ್ಟುಕೊಂಡಿಲ್ಲ. ಮಾರ್ಗಗಳ ಪಕ್ಕಗ ಳಲ್ಲಿ ಇರುವ ಮರಗಳ ಟೊಂಗೆಗಳು ಮಾರ್ಗಗಳ ಮೇಲ್ಗಡೆ ಹಬ್ಬಿ, ಮಾರ್ಗಗಳನ್ನು ಕೆಡಿಸುತ್ತವೆಯೆಂದು ಹೇಳಿ ಕೆಲವಡೆ ಅವರು ಮರಗಳನ್ನು ಕಡಿಸಿದ ಉದಾಹರಣೆಗಳುಂಟು. ಎರ ಹಸಿ ಕೆಡವದ ಮರಗಳು ಸಹ ಇವರ ಕಾಲುವೆಯ ದುರುಸ್ತಿಯ ಕ್ರಮದಿಂದ ಕ್ರಮೇಣ ನಾಶವಾಗುತ್ತ ವೆ. ಕಾಲುವೆಯ ದುರುಸ್ತಿ ಮಾಡುವಾಗ ಈ ಇಲಾ ಖೆಯವರ ಆಳುಮಕ್ಕಳು ಸಾಲಮರಗಳ ಬೇರುಗ ಳಿಗೆ ಪೆಟ್ಟುಗುವಂತೆ ಕೆಲಸ ಮಾಡುತ್ತಾರೆ! ಅದ ರಿಂದ ಮರಗಳು ತಾವಾಗಿ ಸಾಯುತ್ತವೆ; ಇಲ್ಲವೆ ಬೇರುಗಳ ಆಧಾರ ತಪ್ಪಿ ಹೋದ್ದರಿಂದ ಉರುಳಿ ಬೀಳುತ್ತವೆ! ಆದ್ದರಿಂದ ಸರಕಾರವು ಈ ಇಂಜ ನೀರ ಇಲಾಖೆಯವರಿಗೆ ಎಲ್ಲ ಮಾರ್ಗಗಳಲ್ಲಿ ಸಾಲ ಮರಗಳನ್ನು ನೆಡುವಂತೆ ಮತ್ತು ಅವನ್ನು ಕಾಪಾ ಡಿಕೊಂಡು ಹೋಗುವಂತೆ ಬುದ್ಧಿ ಕಲಿಸಬೇಕೆಂಬ ಸೂಚನೆಯುಂಟು.

.

ಈಗ ಆರ್ದ್ರಾ ನಕ್ಷತ್ರವಲ್ಲ ಧಾರಾಕಾರವಾಗಿ ಮಳೆ ಸುರಿಯುತ್ತಿರುವದರ ಬದಲು ಪ್ರಖರ ಬಿ ಸಿಲು ಬೀಳುತ್ತಿರುವದನ್ನು, ಪೇಟೆಯಲ್ಲಿ ಜೀವ ನಾವಶ್ಯಕ ವಸ್ತುಗಳ ಬೆಲೆಗಳು ಇನ್ನೂ ಏರಿಕೆ ಯಲ್ಲಿರುವದನ್ನು ಕಂಡು ಬೇಸರಗೊಂಡ ಜನ ರಿಗೆ ಮುಂಬಯಿಯ ಸಾವಂತವಾಡಿ ಜ್ಯೋತಿಷಿಗ ಳಾಗಿರುವ ಶ್ರೀ|| ಬಾಬ ಸಾಹೇಬ ... ಇವರು ವರ್ತಿಸಿರುವ ಭವಿಷ್ಯವು ಕೆಲ ಮಟ್ಟಿಗೆ ಆಶೆಯನ್ನುಂಟು ಮಾಡಿ ಧೈರ್ಯ ಕೊಡುವಂತಿದೆ. ಅವರು ಮೊನ್ನೆಯೇ ಬಂದ ಭವಿಷ್ಯ ವರ್ತಿಸಿ ಮುಂಬಯಿಯ 'ಭಾರತ' ಪತ್ರಿಕೆಯನ್ನು ಪ್ರಸಿ ಗೊಳಿಸಿದ್ದಾರೆ ಅದರ ಸಾರಾಂಶವು:— (೧) ಈ ವರ್ಷ ಮಳೆ ಚನ್ನಾಗಿ ಸುರಿಯುವದು. ಎಲ್ಲೂ ನೀರಿನ ಕೊರತೆಯಾಗದು. ಬೆಳೆಗಳೂ ಉತ್ಕೃಷ್ಟ ವಾಗುವವು (೨) ಧಾನ್ಯಗಳ ಇಳಿಯುವವು, ಚಿನ್ನ-ಬೆಳ್ಳಿ ಮೊದಲಾದ ಧಾತುಗಳ ಬೆಲೆಗಳಲ್ಲಿ ಹಠಾತ ಏರುಪೇರಾಗಿ ಕಂಡು ಬರುವದು (೩) ಬೇಗನೆ ... ಸ್ಥಿರಸ್ವರೂಪವಾಗುಳ್ಳವದು, ಸರಕಾರದ ಉದ್ಯೋಗಿತನವೂ ಹುಟ್ಟುವದು. (೪) ಈ ವರ್ಷ ಯುದ್ಧವಾಗುವ ಭಯವಿಲ್ಲ ... ಮೊದಲು ... ಯುದ್ಧವಾಗುವ ಸಂಭವವಿಲ್ಲ. (೫) ಕಾಶ್ಮೀರ ಸಮಸ್ಯೆ ... ಬಿಡುವದು, ಈ ... ಭಾರತಕ್ಕೆ ಪೂರ್ಣ ಸಮಾಧಾನವಾಗುವದಿಲ್ಲ. (೬) ದಕ್ಷಿಣ ಆಫ್ರಿಕ ನಿಗ್ರೋ ... ಗಳಲ್ಲಿ ತಮ್ಮ ಹಕ್ಕು ಗಳನ್ನು ... ಅವರ ತಮ್ಮ ... ಸಂಘಕ್ಕೆ ... ಕಟ್ಟಿಬಿದ್ದರು. (೭) ಇದೇ ಬರುವ ಸಪ್ಟೆಂಬರ ತಿಂಗಳ ಮಧ್ಯದಲ್ಲಿ ಭಾರತ ಸರ ಕಾರದ ಮಂತ್ರಿಮಂಡಳದಲ್ಲಿ ಬಿಕ್ಕಟ್ಟುಂಟಾಗಿ ಮಂ ಡಳದಲ್ಲಿ ಬದಲಾವಣೆಗಳಾಗುವ ಲಕ್ಷಣಗಳುಂಟು ಮಂ ತ್ರಿಮಂಡಳದ ಪ್ರಮುಖರೊಬ್ಬರು ರಾಜೀನಾಮೆಯನ್ನು ಕೊಡಬೇಕಾಗುವದು

ಶ್ರೀ ಕೈವಲ್ಯ ಮಠದ
ಶ್ರೀ ರಾಮಾನಂದ ಸರಸ್ವತೀ ಸ್ವಾಮಿಗಳ ಮಹಾ-ಸಮಾಧಿ.

ಶ್ರೀ ಕೈವಲ್ಯ ([illegible]) ಮಠದ ಶಿಷ್ಯಸ್ವಾಮಿಗಳಾದ ಶ್ರೀಮದ್ ರಾಮಾನಂದ ಸರಸ್ವತೀ ಸ್ವಾಮಿಗಳು [illegible] ದಿನ ರಾತ್ರಿ ([illegible]) [illegible] ಶ್ರೀ ಮಠದಲ್ಲಿ [illegible] ಸ್ವಾಮಿಗಳು [illegible] ಶ್ರೀ [illegible]

[illegible]

ಶ್ರೀ ರಾಮಾನಂದ ಸರಸ್ವತೀ ಸ್ವಾಮಿಗಳ [illegible] ದಿನ [illegible] ಶ್ರೀ ರಾಮಾನಂದ ಸರಸ್ವತೀ [illegible]

[illegible] ಶ್ರೀ ಗುರುಗಳಿಗೆ [illegible]

ಶ್ರೀ ಗೋಕರ್ಣ ಮಠಾಧೀಶರ ಯೋಗಕ್ಷೇಮ-ವಾರ್ತೆ

ಶ್ರೀ ಗೋಕರ್ಣ ಮಠಾಧೀಶರ ಶ್ರೀಮದ್ [illegible] ಶ್ರೀ ಗುರುಗಳು [illegible]

[illegible] ಶ್ರೀ ಗುರುಗಳ ಆರೋಗ್ಯ [illegible]

ಕರ್ನಾಟಕದ ಕಂಪನಿಯ

ಕಬ್ಬಿಣ ಕರಾವತ

ಗಾಣಗಳಿಗೆ

[illegible]

[illegible]

ಡಬೀರ & ಸನ್ಸ್,

[illegible] ಗಲ್ಲಿ, ಹುಬ್ಬಳ್ಳಿ.

ರೂ. ೨೫ ಇನಾಮು!!

ನಮ್ಮ [illegible]

ಕೃಷ್ಣ ವೆಂಕಟ್ರಮಣ ಭಟ್ಟ, (ಕಡವು.)
[illegible]—ಕುಮಟಾ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಬುಧವಾರ [illegible] [illegible] ಕಳೆದ ಬುಧವಾರ ದಿನ [illegible]

[illegible]

ಜಾಹೀರ ನೋಟೀಸು

ಸಿದ್ದಾಪುರ ತಾಲೂಕ ಶಿರಳಗಿಯಲ್ಲಿರುವ ಕೆರಿಯಾ ಅಡವಿ ನಾಯ್ಕ [illegible] ಈ ಮೂಲಕ [illegible] ಜನರಿಗೆ ತಿಳಿಸುವದೇನಂದರೆ— ಕಳೆದ ತಾ. ೨೭-೧೧-[illegible]ನೇ ದಿನ ನಾನು ನನ್ನ ಹೆಂಡತಿ [illegible] ಇವಳ ಹೆಸರಿನ್ನಿ ಬರೆಕೊಟ್ಟ ರಿಜಿಸ್ಟ್ರಿ ಸ್ವತಂತ್ರ ಮುಖತ್ಯಾರನಾಮೆಯಂತೆ ಅವಳು ಆಸ್ತಿ ವ್ಯಾಪಾರ ವಗೈರೆ ಸರಿಯಾಗಿ ನಡಿಸದೆ ಕುಟುಂಬಕ್ಕೆ ಲುಕ್ಸಾನ ಪಡಿಸಹತ್ತಿದ್ದರಿಂದ ವ್ಯಾಪಾರ ಮೊದಲಿನಂತೆ ನಾನೇ ನಡಿಸುತ್ತಿದ್ದೇನೆ ಮತ್ತು ಗ್ರಾಮ ರೆಕಾರ್ಡಿನಲ್ಲಿಯೂ [illegible] ಅವಳ ಹೆಸರು ದಾಖಲ ಮಾಡದೆ ಮೊದಲಿದ್ದಂತೆ ನನ್ನ ಹೆಸರೇ ದಾಖಲ ಇಡುವಂತೆ ತಿಳಿಸಿರುತ್ತೇನೆ. ಕಾರಣ ನನ್ನ ಕುಟುಂಬದ ಯಾವತ್ತೂ ಆಸ್ತಿಯ [illegible] ನಮಗೆ ಕೊಡತಕ್ಕ ಗೇಣಿ ವಗೈರೆ ಮೊದಲಿನಂತೆ ನನ್ನ ಕಡೆಗೇ ಕೊಟ್ಟು ಪಾವ್ತಿ ಪಡೆಯಬೇಕು ಹಾಗೆ ಮಾಡದೆ ಬೇರೆಯವರ ಕಡೆಗೆ ಕೊಟ್ಟಲ್ಲಿ ವೃಥಾ ಲುಕ್ಸಾನಿಗೆ ಗುರಿಯಾಗಬೇಕಾದೀತು, ಸದ್ರಿ ನನ್ನ ಹೆಂಡತಿ [illegible] ಬೇರೆ [illegible] ಸಹವಾಸದಿಂದ ದುಷ್ಟ ಚಾಳಿಗೆ ಬಿದ್ದು ನನ್ನ ದಾಂಪತ್ಯವನ್ನು ಕಡಿದುಕೊಂಡಿರುತ್ತಾಳೆ. ಆದರಿಂದ ನಾನು ಅವಳ ವಿವಾಹ ವಿಚ್ಛೇದನ ಮಾಡಿಕೊಂಡಿರುತ್ತೇನೆ. ಈಗ ಅವಳು ಗರ್ಭಿಣಿ ಇರುವದರಿಂದ ಇನ್ನುಮುಂದೆ ಅವಳು [illegible] ಅವಳಲ್ಲಿ ಹುಟ್ಟುವ ಸಂತತಿಗೂ, ಅವರಿಗೂ ನನ್ನ ಯಾ ನನ್ನ ಕುಟುಂಬದ ಆಸ್ತಿ ವಗೈರೆಗಳ ಮೇಲೆ ಏನು ಹಕ್ಕು-ಸಂಬಂಧವಿರುವದಿಲ್ಲ. ತಾ. [illegible]

ಕೆರಿಯಾ ಅಡವಿ ನಾಯ್ಕ [illegible]

ಜಿಲ್ಲಾ ಸಮಾಚಾರ

[illegible]

[illegible]

[illegible]

BY THE REGIONAL TRANSPORT AUTHORITY, K R BELGAUM

NOTICE.

Applications are invited for grant of permits to operate stage carriage services on the routes mentioned below.—

S. No.	Name of the routes.
1	Sangli—Vayafaie.
2	Kirloskarwadi—Kadopur.
3	Honavar—Kumta via Nilkode
4	Bhatkal—Haduvalli frontier
5	Indi—Chichmannur.
6	Hubli—Kundgol
7	Hubli—Laxmeshwar via Kundgol

Applications should be made in the prescribed forms which can be had, free of charge, from this office, clearly stating the time-table and fare table proposed to be charged.

Applications should be sent so as to reach this office on or before 13th July 1950 and those received thereafter will not be entertained. The application should be complete in all respects and those which will be incomplete, will be treated as invalid.

Permits will be granted on purely temporary basis and issued as and when the petrol quota allotted to this Region permits.

No. 3975/4-B/RR of 50
Regional Transport Office,
Belgaum 22—6—1950

D. K. SUKHTANKAR
Secretary,
Regional Transport Authority,
K. R., Belgaum.

[illegible]

ಹಳಿಯಾಳ— [illegible]

ನಂಜಿಕೇರಿ— [illegible]

ಶಿರಸಿ— [illegible] (effective member) [illegible]

[illegible]

ಸಿದ್ದಾಪುರ— [illegible]

The Area Rationing Authority, Karnatak Region,

BELGAUM

NOTICE

All Motor—Vehicle—owners in the Karnatak Region are hereby informed that the issue of basic petrol ration for motor vehicles for July-August-September 1950 quarter will be issued at the following centres on the dates and places shown against each centre:—

Dist.	Centre.	Location.	Dates.	Time.
(1) Belgaum.	Belgaum.	Office o' the A.R.A., Belgaum.	From 26th June '50 and onwards	11-30 a.m to 4-30 p.m
2) Dharwar.	Hubli.	Traveller's Bungalow.	29th June to 2nd July, '50.	—do—
(3) Karwar.	Karwar.	District Bungalow.	26th and 27th June, '50.	—do—
(4) Bijapur.	Bijapur.	Traveller's Bungalow.	30th June and 1st July, '50.	—do—
(5) S. Satara.	Sangli.	Traveller's Bungalow.	26th to 28th June, '50.	—do—

2. Conditions of issue of petrol ration will be the same as in the past.

No. P. R. O – 7711 of 1950.
Area Rationing Office,
Belgaum, 20th June 1950.

D. K. SUKHTANKAR (Capt.)
Area Rationing Authority,
Karnatak Region, Belgaum.

[illegible]